# ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯಮಾಲೆ - ೮

## ಹೊನ್ನುಡಿ

**ಹೆಚ್.ಡಿ. ಕುಮಾರಸ್ವಾಮಿ**

ಮುಖ್ಯಮಂತ್ರಿ

ವಿಧಾನಸೌಧ

ಬೆಂಗಳೂರು ೫೬೦ ೦೦೧

ದಿನಾಂಕ ೦೩-೧೦-೨೦೦೬

ಕನ್ನಡ ನಾಡಿನ ಜಾನಪದ ಜಗತ್ತು ಅತ್ಯಂತ ವಿಸ್ತಾರವಾದುದು, ಸಮೃದ್ಧವಾದುದು ಮತ್ತು ವೈವಿಧ್ಯಮಯವಾದುದು. ಜನಪದ ಗೀತ ಸಂಗೀತ, ನೃತ್ಯ, ನಾಟಕ, ಚಿತ್ರಕಲೆ ಶಿಲ್ಪಕಲೆಗಳಿಂದ ಕಿಕ್ಕಿರಿದಿರುವ ಜಾನಪದವು ಜಗತ್ತಿನ ಮನುಕುಲದ ಸಂಸ್ಕೃತಿಯ ಹಾಗೂ ಎಲ್ಲಾ ಜ್ಞಾನ – ವಿಜ್ಞಾನಗಳ ಮೂಲ ನಡವಳಿಕೆ.

ಯಾವುದೇ ದೇಶದ ಜಾನಪದ ಸಂಪತ್ತು ಆ ದೇಶದ ಸಾಂಸ್ಕೃತಿಯ ತೋರುದೀವಿಗೆ, ಪಾರಂಪರಿಕವಾಗಿ ಶತಶತಮಾನಗಳಿಂದ ಉಳಿದು ಬೆಳೆದುಕೊಂಡು ಬಂದ ಈ ಸಂಪತ್ತು ದೇಶದ ಅಮೂಲ್ಯ ಆಸ್ತಿ. ನಮ್ಮ ಹಿರಿಯರ ಜ್ಞಾನ ವಿವೇಕ ಸಾಹಿತ್ಯಕ ಸಾಧನೆಗಳನ್ನು ಪರಿಚಯಿಸುವ ತಿಳವಳಿಕೆಯನ್ನು ಹೊರಹೊಮ್ಮಿಸುವ ಮಣ್ಣಿನ ಮಕ್ಕಳ ಸಾಹಿತ್ಯವಾದ ಜಾನಪದವನ್ನು ಒಂದು ನಿಧಿಯಂತೆ ಕಾಪಾಡಿಕೊಂಡು ಬರದಿದ್ದರೆ ಅದು ದೇಶಕ್ಕಾಗುವ ದೊಡ್ಡ ನಷ್ಟವೇ ಸರಿ.

ಕನ್ನಡ ನಾಡಿನ ಜಾನಪದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಕ್ರಿ.ಶ. ೯ನೇ ಶತಮಾನದ ಗದ್ಯ ಗ್ರಂಥವಾದ ವಡ್ಡಾರಾಧನೆಯು ಕನ್ನಡದ ಪ್ರಪ್ರಥಮ ಜನಪದ ಕಥಾ ಸಂಕಲನವೆನಿಸುತ್ತದೆ. ಇದುವರೆಗೂ ಅಸಂಖ್ಯಾತ ವಿದ್ವಾಂಸರು ಈ ಸಾಹಿತ್ಯವನ್ನು ಹೊರತರಲು ಶ್ರಮಿಸಿರುತ್ತಾರೆ. ಆದರೂ ಕರ್ನಾಟಕ ಜನಪದ ಸಾಹಿತ್ಯ ಪರಂಪರೆಯ ಹಿರಿಮೆಯನ್ನು ಒಟ್ಟಾಗಿ ಕೂಡಿಸಿ ಜಗತ್ತಿಗೆ ಪರಿಚಯಿಸುವ ಸದ್ದುದೇಶದಿಂದ ಕರ್ನಾಟಕ ಸರ್ಕಾರವು ತನ್ನ ಆದ್ಯ ಕರ್ತವ್ಯವೆಂದು ತಿಳಿದು, ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣೆ ಯೋಜನೆಯನ್ನು ಹಮ್ಮಿಕೊಂಡು ಈ ಸಮೃದ್ಧ ಸಾಹಿತ್ಯ ರಾಶಿಯನ್ನು ಕನ್ನಡ ಜನತೆಗೆ ಅರ್ಪಿಸುತ್ತಿದೆ. ಈ ಯೋಜನೆಯಲ್ಲಿ ಜನಪದ ಪದ್ಯ, ಗದ್ಯ ರಂಗಭೂಮಿ ಮತ್ತು ಭಾಷಿಕ ಪ್ರಕಾರಗಳಿಗೆ ಸಂಬಂಧಿಸಿದಂತೆ ಹಲವು ಸಂಪುಟಗಳಲ್ಲಿ ಹೊರತರಲಾಗುತ್ತಿದೆ. ಈ ಸಾಹಿತ್ಯಮಾಲೆಯ ಕೃತಿ ಸಂಪುಟಗಳನ್ನು ಸಹೃದಯ ಓದುಗರು ಆಸ್ವಾದಿಸಿದರೆ ಕರ್ನಾಟಕ ಪ್ರಜಾ ಸರ್ಕಾರದ ಶ್ರಮ ಸಾರ್ಥಕವಾಗುತ್ತದೆ.

ಈ ಯೋಜನೆಯ ನೇತೃತ್ವ ವಹಿಸಿ ದುಡಿದ ಪ್ರೊ. ಹಿ.ಶಿ. ರಾಮಚಂದ್ರೇಗೌಡರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಂಪಾದಕ ಮಂಡಳಿಯ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ಜಾನಪದ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಸ್ಮರಿಸುತ್ತಾ ಸಮಗ್ರ ಕರ್ನಾಟಕದ ಪ್ರಾತಿನಿಧಿಕ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟಗಳನ್ನು ಸುವರ್ಣ ಕರ್ನಾಟಕ ವರ್ಷದ ಈ ಸುಸಂದರ್ಭದಲ್ಲಿ ಅತ್ಯಂತ ಸಂತೋಷದಿಂದ ಕನ್ನಡ ಜನತೆಗೆ ಸಮರ್ಪಿಸುತ್ತಿದ್ದೇನೆ.

**(ಹೆಚ್.ಡಿ. ಕುಮಾರಸ್ವಾಮಿ)**

# ಪ್ರಕಾಶಕರ ಮಾತು

ಜಾಗತೀಕರಣದ ಪರಿಣಾಮಗಳು ಎಂದಿಗಿಂತಲೂ ತ್ವರಿತವಾಗಿ ಇಂದು ಮೂಲ ಸಂಸ್ಕೃತಿಯ ಮೇಲೆ ಧಾಳಿ ಮಾಡುತ್ತಿವೆ. ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆಗಳಂತಹ ಸೃಜನಶೀಲತೆಗೆ ಧಕ್ಕೆ ಉಂಟಾಗಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ವಿಸ್ಮೃತಿಗೆ ಒಳಗಾಗುತ್ತಿರುವ ಸಮುದಾಯಕ್ಕೆ ಸ್ಥಳೀಯ ಜ್ಞಾನ ಸಂಪತ್ತಿನ ಮಹತ್ವವನ್ನು ಮನವರಿಕೆ ಮಾಡಿಕೊಡಲು ಜಾನಪದವೇ ಮೂಲ ಆಕರವಾಗಿದೆ. ಈ ದಿಸೆಯಲ್ಲಿ ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣೆಯು ಅತ್ಯಂತ ಮಹತ್ವದ ಯೋಜನೆಯಾಗಿದೆ.

ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ಅನೇಕ ಪ್ರಾತಃಸ್ಮರಣೀಯರು ಜನಪದ ಮತ್ತು ಯಕ್ಷಗಾನ ಸಾಹಿತ್ಯದ ಪ್ರಕಟಣೆಗಳನ್ನು ಹೊರತಂದಿದ್ದಾರೆ. ವಿಶ್ವವಿದ್ಯಾಲಯಗಳು, ಖಾಸಗಿ ಸಂಸ್ಥೆಗಳು, ಖಾಸಗಿ ಪ್ರಕಾಶಕರು, ಆಸಕ್ತ ಜಾನಪದ ವಿದ್ವಾಂಸರು ಬಿಡಿಬಿಡಿಯಾಗಿ ಪ್ರಕಟಿಸಿರುತ್ತಾರೆ. ಇವರನ್ನೆಲ್ಲಾ ಈ ಹೊತ್ತಿನಲ್ಲಿ ನೆನೆಯುತ್ತಾ, ಸಮೃದ್ಧ ಜನಪದ ಸಾಹಿತ್ಯವನ್ನು ಕ್ರೋಢೀಕರಿಸಿ, ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣೆಯು ಬೃಹತ್ ಯೋಜನೆಯನ್ನು ಹಮ್ಮಿಕೊಂಡಿತು. ಈ ಯೋಜನೆಯನ್ನು ಕಾರ್ಯರೂಪಕ್ಕಿಳಿಸಲು ಜಾನಪದ ವಿದ್ವಾಂಸರಾದ ಪ್ರೊ. ಹಿ.ಶಿ. ರಾಮಚಂದ್ರೇಗೌಡನವರ ಅಧ್ಯಕ್ಷತೆಯಲ್ಲಿ ಡಾ. ಸೋಮಶೇಖರ ಇಮ್ರಾಪುರ, ಡಾ. ಎಂ. ಎಸ್. ಲಠ್ಠೆ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ವಿವೇಕ ರೈ, ಡಾ. ತೀ. ನಂ. ಶಂಕರನಾರಾಯಣ, ಡಾ. ಸಿದ್ಧಲಿಂಗಯ್ಯ, ಶ್ರೀ ಕೆರೆಮನೆ ಶಂಭು ಹೆಗಡೆ, ಡಾ. ಕೆ. ಚಿನ್ನಪ್ಪಗೌಡ, ಶ್ರೀಮತಿ ಶಾಂತಿನಾಯಕ ಮತ್ತು ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಈ ಯೋಜನೆಯ ಕಾರ್ಯ ನಿರ್ವಹಣೆಯ ಮೇಲ್ವಿಚಾರಣೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಲೆಕ್ಕಪತ್ರಾಧಿಕಾರಿಗಳು ಸದಸ್ಯರಾಗಿಯೂ, ಜಂಟಿ ನಿರ್ದೇಶಕರಾದ ಶ್ರೀ ಕಾ.ತ. ಚಿಕ್ಕಣ್ಣ ಅವರನ್ನು ಸಂಚಾಲಕರಾಗಿರುವಂತೆ ಸಮಿತಿಯನ್ನು ರಚಿಸಲಾಯಿತು.

ಈ ಬೃಹತ್ ಯೋಜನೆ ಕಾರ್ಯರೂಪಕ್ಕಿಳಿಸಲು ಸಂಪಾದಕ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷರ ಶ್ರಮ ಮತ್ತು ಸಹಕಾರ ಹೆಚ್ಚಿನದು. ಆಯಾ ಸಂಪುಟಗಳ ಸಂಪಾದಕರು, ಪರಿಶೀಲಕರು ಮತ್ತು ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸಿದ ಯೋಜನೆಯ ಸಂಯೋಜಕರಾದ ಡಾ. ಚಕ್ಕರೆ ಶಿವಶಂಕರ್ ಹಾಗೂ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ ಅವರ ಶ್ರದ್ಧೆ ಸಹಕಾರಗಳು ಅಮೂಲ್ಯವಾದುವು. ಈ ಎಲ್ಲ ಮಹನೀಯರಿಗೆ ಇಲಾಖೆಯ ಕೃತಜ್ಞತೆಗಳು ಸಲ್ಲುತ್ತವೆ. ಹಾಗೆಯೇ ಈ ಸಂಪುಟಗಳ ಮುಖಪುಟ ವಿನ್ಯಾಸ ರೂಪಿಸಿಕೊಟ್ಟ ಕಲಾವಿದ ಶ್ರೀ ಪ.ಸ. ಕುಮಾರ್ ಮತ್ತು ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಎಂ. ಮುನಿರಾಜು ಹಾಗೂ ಸಿಬ್ಬಂದಿಗೆ ನನ್ನ ನೆನಕೆಗಳು.

ಈ ಯೋಜನೆಯನ್ನು ಆಗುಮಾಡಿದ ಇಲಾಖಾ ಹಿಂದಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಉಷಾ ಗಣೇಶ್ ಮತ್ತು ಈಗಿನ ಇಲಾಖಾ ಕಾರ್ಯದರ್ಶಿಗಳಾದ ಶ್ರೀ ಐ.ಎಂ. ವಿಠ್ಠಲಮೂರ್ತಿ ಅವರಿಗೆ ಇಲಾಖೆಯ ವಂದನೆಗಳು. ಈ ಸಂಪುಟಗಳನ್ನು ಮುದ್ರಿಸಿಕೊಟ್ಟ ರಾಜಾ ಪ್ರಿಂಟರ್ಸ್‌ರವರಿಗೆ ನಮ್ಮ ಧನ್ಯವಾದ.

ಸುವರ್ಣ ಕರ್ನಾಟಕದ ವರ್ಷದ ಸಂದರ್ಭದಲ್ಲಿ ನಿರ್ದೇಶನಾಲಯ ಹೊರತರುತ್ತಿರುವ ಈ ಸಂಪುಟಗಳನ್ನು ಕನ್ನಡ ಜನತೆ ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಾನು ನಂಬಿದ್ದೇನೆ.

**(ಕೆ.ಆರ್. ನಿರಂಜನ್)**

ಆಯುಕ್ತರು

# ಪ್ರಸ್ತಾವನೆ

ಇಸ್ಲಾಂ ಧರ್ಮದ ಐತಿಹಾಸಿಕ ಘಟನೆ ಹಾಗೂ ಆ ಧರ್ಮದ ಸಾಧು ಸಂತರ ಚರಿತ್ರೆಗಳನ್ನು ನಿರೂಪಿಸುವ ಜೊತೆಗೆ ಹಿಂದು ಮುಸ್ಲಿಂ ಬಾಂಧವ್ಯದ ಕೊಂಡಿಗಳಂತಿರುವ ಮೊಹರಂ ಪದಗಳನ್ನು ಹಾಡುವ ಪದ್ಧತಿ ಉತ್ತರ ಕರ್ನಾಟಕದಲ್ಲಿಯೇ ವಿಶೇಷವಾಗಿ ರೂಢಿಯಲ್ಲಿದ್ದು ಅವುಗಳನ್ನು 'ಮೊಹರಂ' ಸಂದರ್ಭದಲ್ಲಿ ಮಾತ್ರ ಹಾಡಲಾಗುತ್ತದೆ. ಹಿಜರಿ ಶಕೆಯ ಮೊಹರಂ ತಿಂಗಳಿನಲ್ಲಿ ಮುಸ್ಲಿಂ ಜನಾಂಗದವರು ಆಚರಿಸುವ ಒಂದು ವಿಶೇಷ ಆಚರಣೆ 'ಮೊಹರಂ'.

*ಧರಮಕ ಸತ್ತವರು ಸಿಗತಾರ ಕೋಟಿಗೊಬ್ಬ ಜನರಾ*
*ಮುಸಲ್ಮಾನ ಮಂದ್ಯಾಗ ದೊರಿತಾರ ಹುಸೇನ ಸಾಹೇಬರಾ* ||

ಎಂದು ಪ್ರಾರಂಭವಾಗುವ ಒಂದು ಜನಪದ ಹಾಡು, ಮುಂದುವರಿದು,

*ಜಂಗ ಎದರ ಬದರಾ ವೈರಿಯ ಮೋಸಕ ಜಯಕಾರಾ*
*ಶರಣು ಹೋಗದವರಾ ಸ್ವರ್ಗಕ ಹೋದರಾ ಹಜರತರಾ* ||

ಎಂಬ ವಿಷಯವನ್ನು ಹೇಳಿ ಮೊಹರಂ ಆಚರಣೆಗೆ ಮೂಲ ಕಾರಣವಾದ ಘಟನೆಯತ್ತ ನಮ್ಮ ಲಕ್ಷ್ಯವನ್ನು ಸೆಳೆದು ಮುಕ್ತಾಯಗೊಳ್ಳುತ್ತದೆ.

ಸುಮಾರು ಹದಿಮೂರು ನೂರು ವರ್ಷಗಳ ಹಿಂದೆ ಇಮಾಮ ಹುಸೇನರು ಧರ್ಮರಕ್ಷಣೆಗಾಗಿ ಸತ್ಯಕ್ಕಾಗಿ, ಅರಬಸ್ತಾನದ ಕರ್ಬಲಾ ಮರುಭೂಮಿಯಲ್ಲಿ ಪ್ರಾಣ ನೀಡಿದ ಕಥೆಯನ್ನು ಈ ಹಾಡು ತಿಳಿಸುತ್ತದೆ. ಅಂದು ಅವರು ಕರ್ಬಲಾ ಕಾಳಗದಲ್ಲಿ ಸತ್ಯವನ್ನು ಎತ್ತಿ ಹಿಡಿಯಲು ಸುರಿಸಿದ ರಕ್ತ, ಶಾಂತಿ ಪ್ರೀಯರಿಗೆ, ಧರ್ಮ ರಕ್ಷಕರಿಗೆ, ನ್ಯಾಯಪರರಿಗೆ ಸ್ಫೂರ್ತಿಯ ಸೆಲೆಯಾಗಿದೆ. ಸತ್ಯ, ಧರ್ಮ, ನ್ಯಾಯಗಳ ಉಳಿವಿಗಾಗಿ ತಮ್ಮ ಪ್ರಾಣವನ್ನು ಬಲಿದಾನ ಮಾಡಿದ ಐತಿಹಾಸಿಕ ಸತ್ಯವನ್ನು, ಒಮ್ಮೆ ಅಭಿಮಾನದಿಂದ, ಮತ್ತೊಮ್ಮೆ ಭಾರವಾದ ಹೃದಯದಿಂದ ನಮ್ಮ ಜಾನಪದ ಕವಿಗಳು ಹಾಡಿದ ಹಾಡುಗಳೇ ಮೊಹರಂ ಪದಗಳು.

ಇವುಗಳನ್ನು ಕರ್ಬಲಾ ಪದಗಳೆಂದು, ರಿವಾಯಿತ ಪದಗಳೆಂದು ಉತ್ತರ ಕರ್ನಾಟಕಟದಲ್ಲಿ ಕರೆಯುತ್ತಾರೆ. ದಕ್ಷಿಣ ಕರ್ನಾಟಕದಲ್ಲಿ ಇವುಗಳನ್ನು ಹಾಡುವ ರೀತಿಯ ಬಗೆಗೆ ಹೆಚ್ಚು ವಿವರ ದೊರೆಯುವುದಿಲ್ಲ. ಉತ್ತರ ಕನ್ನಡದಲ್ಲಿ ಕರ್ಬಲಾ ಪದಗಳನ್ನೇ ಅಲಾವಿ ಪದಗಳೆಂದು ಹೇಳುತ್ತಾರೆ. ಉತ್ತರ ಪ್ರದೇಶದ ಲಖನೌ, ರಾಜಸ್ತಾನದ ಜಯಪುರ, ಮಹಾರಾಷ್ಟ್ರದ ಫತೇಹಪುರ, ಆಂಧ್ರಪ್ರದೇಶದ ಹೈದರಾಬಾದ್ ನಗರಗಳಲ್ಲಿ ಮರ್ಶಿಯಾ ಗೀತೆ ಹೇಳುತ್ತಾರೆ. ಇವು ಉರ್ದುವಿನಲ್ಲಿದ್ದು ಕರ್ಬಲಾ ಕಾಳಗದ ವಸ್ತುವಿವರಣೆಗಳನ್ನು ಒಳಗೊಂಡಿರುತ್ತವೆ.

ಮುಸ್ಲೀಮರ ಹಿಜರಿ ಶಕವರ್ಷದಲ್ಲಿ ೧೨ ತಿಂಗಳುಗಳಿದ್ದು ಅವುಗಳಲ್ಲಿ ಮೊಹರಂ ತಿಂಗಳು ಒಂದು ಹಿಜರಿ ಸನ್ ೬೧ನೆಯ ಮೊಹರಂ ತಿಂಗಳು ೧೦ನೆಯ ದಿನಾಂಕ ಹ | ಇ | ಹುಸೇನ ಮತ್ತು ಅವರ ಅನುಯಾಯಿಗಳು ಕರ್ಬಲಾ ಮರಭೂಮಿಯಲ್ಲಿ ಹುತಾತ್ಮರಾದರು. ಇದರ ನೆನಪಿಗಾಗಿ ಶೋಕಗೀತೆಗಳನ್ನು ಮೊಹರಂ ತಿಂಗಳಿನಲ್ಲಿ ಹಾಡುವುದರಿಂದ ಇವುಗಳನ್ನು ಮೊಹರಂ ಪದಗಳೆಂದು ಕರೆಯಲಾಗುತ್ತದೆ. ಕರ್ಬಲಾದಲ್ಲಿ ಹುಸೇನರು ಮತ್ತು ಅವರ ಅನುಯಾಯಿಗಳು ಯಜೀದನ ಸೈನಿಕರೊಂದಿಗೆ ಹೋರಾಡಿ ವೀರಸ್ವರ್ಗ ಪಡೆದರು. ಆ ಯುದ್ಧ ಘಟನೆಯನ್ನು ನೆನಪಿಸಿ ಹೇಳುವ ಪದಗಳನ್ನು 'ಜಂಗಿನ ಪದಗಳೆಂದು, ಕರ್ಬಲಾ ಪದಗಳೆಂದು ಗುರುತಿಸುತ್ತಾರೆ. ಮೊಹರಂ ಆಚರಣೆಯ ಸಂದರ್ಭದಲ್ಲಿ ಅಲಂ ಇಡುವ ಕೋಣೆಯ ಎದುರು ಅಲಾವಿ ತೋಡಿ, ಅಲಾವಿ ಸುತ್ತ ಪ್ರದಕ್ಷಿಣೆ ಹಾಕುತ್ತ ಹಾಡುವ ಹಾಡುಗಳಿಗೆ ಉತ್ತರ ಕನ್ನಡದಲ್ಲಿ ಅಲಾವಿ ಹಬ್ಬದ ಪದಗಳು ಎನ್ನುವರು. ರಿವಾಯಿತ್ ಎಂದರೆ ಪರ್ಶಿಯನ್ ಭಾಷೆಯಲ್ಲಿ ರೂಢಿ, ಸಂಪ್ರದಾಯ ಎಂದರ್ಥ. ಹ | ಇ | ಹುಸೇನರ ಕತೆಗೆ ಸಂಬಂಧಿಸಿದ ಶೋಕಗೀತೆಗಳನ್ನು ಮೊಹರಂ ಆಚರನೆಯ ಸಂದರ್ಭದಲ್ಲಿ ವರ್ಷ ವರ್ಷವೂ ಸಾಂಪ್ರದಾಯಕವಾಗಿ ಹಾಡುತ್ತ ಬಂದಿರುವುದರಿಂದ ಇವುಗಳಿಗೆ ರಿವಾಯಿತ್ ಪದಗಳೆಂದು ಹೇಳುವರು. ಇಂದಿಗೂ ಗ್ರಾಮೀಣ ಭಾಗಗಳಲ್ಲಿ ಹಾಡುವ

ಹಸ್ತಪ್ರತಿಗಳ ಹಳೆಯ ಹೊತ್ತಿಗೆಗಳ ಮೇಲೆ ರಿವಾಯಿತ ಪದಗಳೆಂದೆ ಬರೆದಿರುವುದನ್ನು ಕಾಣಬಹುದು. ಆದರೆ ಈ ರಿವಾಯಿತ ಪದಗಳಲ್ಲಿ ಶೋಕಗೀತೆಗಳ ಜೊತೆಗೆ ಮೊಹರಂ ಘಟನೆಗೆ ಸಂಬಂಧಿಸಿದ ಲಾವಣಿಪದಗಳು ದೊರೆಯುತ್ತವೆ. ಆದುದರಿಂದ ಒಟ್ಟು ಪದಗಳನ್ನು ಗಮನಿಸಿ 'ಮೊಹರಂ ಪದಗಳು' ಎಂದು ಕರೆಯುವಲ್ಲಿ ತಪ್ಪೇನಿಲ್ಲವೆನಿಸುತ್ತದೆ.

ಮೊಹರಂ ಪದಗಳನ್ನು ಮೊಹರಂ ಆಚರಣೆಯ ಸಂದರ್ಭದಲ್ಲಿ ಹಾಡುತ್ತಿರುವುದು ಸರ್ವವಿಧಿತ. ಮೊಹರಂ ಪದಗಳಿಗೆ ಮತ್ತು ಮೊಹರಂ ಆಚರಣೆಗೆ ತನ್ನದೇ ಆದ ಐತಿಹಾಸಿಕ ಹಿನ್ನೆಲೆಯಿದ್ದು. ಈ ಸಂದರ್ಭದಲ್ಲಿ ಸಮಗ್ರವಾಗಿ ಅಲ್ಲದಿದ್ದರೂ ಸಂಕ್ಷಿಪ್ತವಾಗಿ ಅವಲೋಕಿಸುವುದು ಅವಶ್ಯ.

**ಹಿನ್ನೆಲೆ**

ಹ|ಮುಹ್ಮದ ಪೈಗಂಬರರು ಮಾನವ ಕಲ್ಯಾಣಕ್ಕಾಗಿ ಬಹು ಕಷ್ಟ-ನಷ್ಟ ಅನುಭವಿಸಿ ಇಸ್ಲಾಂ ಪ್ರಜಾಪ್ರಭುತ್ವದ ಸ್ಥಾಪನೆ ಮಾಡಿದರು. ಅವರ ಮರಣದ ಕೆಲ ವರ್ಷಗಳಲ್ಲಿ ಖಲೀಫರಾಗಿ ಹ| ಅಬೂಬಕ್ರ ಸಿದ್ದೀಕ್ (ಕ್ರಿ.ಶ. ೬೩೨-೬೩೪) ಹ| ಉಮರ ಫಾರೋಖ್ (ಕ್ರಿ.ಶ. ೬೩೪-೬೪೪) ಹ|ಉಸ್ಮಾನ ಗನಿ (ಕ್ರಿ. ೬೪೪-೬೫೬) ಪ್ರಜಾಪ್ರಭುತ್ವ ನಡೆಸಿದರು. ನಾಲ್ಕನೆಯ ಖಲೀಫರಾಗಿ ಬನೀ ಹಾಷೀಮ್ ಪಂಗಡದವರು ಹ| ಆಲಿ ಅವರನ್ನು ಚುನಾಯಿಸಲು ಸಿರಿಯಾದ ಪ್ರಾಂತಾಧಿಕಾರಿಯಾದ ಹ| ಮುಆವಿಯಾ ವಿರೋಧಿಸಿದನು. ಎರಡು ಪಂಗಡಗಳ ನಡುವೆ ಘರ್ಷಣೆ ನಡೆದು ಒಪ್ಪಂದವಾಯಿತು. ಆದರೆ ಕ್ರಿ.ಶ. ೬೬೧ರಲ್ಲಿ ಹ| ಮುಆವಿಯಾನ ಕುತಂತ್ರಕ್ಕೆ ಹ| ಅಲಿ ಅವರು ಬಲಿಯಾಗಲು ಅವರ ಜೇಷ್ಠ ಸುಪುತ್ರ ಹ|ಇಮಾಮ ಹಸನ್ ಪ್ರಜಾಭಿಪ್ರಾಯ ಮನ್ನಿಸಿ ಖಲೀಫರಾದರು. ಮುಆವಿಯಾ ಸಾಯುವ ಮುನ್ನ ತನ್ನ ಮಗನಾದ ಯಜೀದನನ್ನು ಖಲೀಫ್‌ನೆಂದು ಘೋಷಿಸಿ ಕೊನೆಯುಸಿರೆಳೆದನು. ತಂದೆಯ ಮರಣಾನಂತರ ಯಜೀದ್, ಇಮಾಮ ಹಸನರನ್ನು ಮೋಸದಿಂದ ವಿಷಪ್ರಾಶನ ಮಾಡಿಸಿ ಕೊಲ್ಲಿಸಿದನು. ಮತ್ತು ನಿಜವಾದ ಖಲೀಫನಾದ ತನಗೆ ಮುಸ್ಲಿಂ ಮುಖಂಡರು 'ಬಯ್ಯತ್' ಕೈಗೊಳ್ಳಬೇಕೆಂದು ಆಜ್ಞೆ ಹೊರಡಿಸಿದನು. ಖಲೀಫನಾಗಲು ಅನರ್ಹನಾದ ಯಜೀದನನ್ನು ದಿಕ್ಕರಿಸಿ ಅರೇಬಿಯಾ, ಇರಾಣ್, ಇರಾಕ್, ಕೂಫಾ ಜನರು ಹ| ಇ| ಹುಸೇನರಿಗೆ ಬೆಂಬಲ ನೀಡಿದರು. ಕೂಫೇದ ಜನ ದೌರ್ಜನ್ಯದಿಂದ ತಮ್ಮನ್ನು ಕಾಪಾಡಬೇಕೆಂದು ವಿನಂತಿಸಿ ಪತ್ರ ಬರೆದರು. ಧರ್ಮ ರಕ್ಷಣೆಗಾಗಿ, ಮಾನವ ಕಲ್ಯಾಣಕ್ಕಾಗಿ ಹ| ಇಮಾಮ ಹುಸೇನರು ಯಜೀದನ ಕ್ರೌರ್ಯವನ್ನು ದುರಾಡಳಿತವನ್ನು ಪ್ರತಿಭಟಿಸಿದರು. ಹೆಂಡತಿ ಮಕ್ಕಳು ಹತ್ತಿರದ ಬಂಧು-ಬಳಗ ಮೊದಲಾಗ ೭೨ ಜನರೊಂದಿಗೆ ಕೂಫೆಗೆ ಪ್ರಯಾಣ ಬೆಳೆಸಿದರು.

ಹಿಜರಿ ಸನ್ ೬೧ರ ಮೊಹರಂ ತಿಂಗಳು (ಕ್ರಿ.ಶ. ೬೮೦) ಒಂದನೆಯ ದಿನಾಂಕದಂದು ಇರಾಕ್ ಪ್ರಾಂತ ಪ್ರವೇಶಿಸಿದರು. ಐದನೆಯ ದಿನ ಕರ್ಬಲಾ ಭೂಮಿಗೆ ಬಂದಿಳಿದರು. ವೈರಿ ಸೈನಿಕರು ಜಲಾಶಯಗಳಿಗೆ ವಿಷಬೆರಸಿ ಅನ್ನ ನೀರಿಗೆ ತೊಂದರೆಯಾಗುವಂತೆ ವ್ಯವಸ್ಥೆ ಮಾಡಿದರು. ಹತ್ತು ದಿನಗಳವರೆಗೆ ಅನ್ನ ನೀರಿಲ್ಲದೆ ಹುಸೇನರ ಪರಿವಾರ ತತ್ತರಿಸಿತು. ಮೊಹರಂ ಅಂಗಳ ಒಂಬತ್ತನೆಯ ದಿನ ಯಜೀದನ ಅಸಂಖ್ಯಾತ ಸೈನಿಕರಿಗೂ ಹುಸೇನರ ಅನುಯಾಯಿಗಳಿಗೂ ಘನಘೋರ ಯುದ್ಧ ನಡೆಯಿತು. ಕಾಸೀಮಧೂಲಾ, ಅಬ್ದುಲ್ಲಾ, ಅಬ್ಬಾಸ ಅಲಿ, ಹುಸೇನ ಅವರ ವೀರಾವೇಶದ ಹೋರಾಟಕ್ಕೆ ವೈರಿ ಸೈನಿಕರು ತತ್ತರಿಸಿದರು. ಯುದ್ಧ ನೀತಿ ಗಾಳಿಗೆ ತೂರಿದರು. ಮೋಸದಿಂದ ಹುಸೇನರ ಅನುಯಾಯಿಗಳ ರುಂಡ ಚಂಡಾಡುತ್ತ ನಡೆದರು. ಕೊನೆಗುಳಿದ ಹ| ಇಮಾಮ ಹುಸೇನರನ್ನು ಎದುರಿಸಿ ಯುದ್ಧಮಾಡಲು ಯಾರೊಬ್ಬರಿಗೂ ಧೈರ್ಯವಾಗಲಿಲ್ಲ. ಆಗ ವೈರಿ ಪಡೆಯನಾಯಕನಾದ 'ಶುಮರ' ಘಾತುಕ ರೀತಿಯಲ್ಲಿ ಆಕ್ರಮಣ ಮಾಡಲು ಆಜ್ಞೆ ಮಾಡಿದನು. 'ಜರಿವೀನ್ ಶರೀಕ್' ಎಂಬ ಕ್ರೂರಿಯೊಬ್ಬ ಹುಸೇನರ ಎಡಗೈಯನ್ನು ಖಡ್ಗದಿಂದ ಕತ್ತರಿಸಿ ಹಾಕಿದನು.೨

[1]"ಸಿನಾನ್ ಬಿನ್ ಅನಾಸ್ ಬಿನ ಅಮ್ರ ಅಲ್ ನಾಖಿಯಾ' ಎಂಬುವನು ಹುಸೇನರನ್ನು ನೆಲಕ್ಕೆ ಕೆಡವಿದನು. ಆಗ 'ಖವಾಲಿ ಬಿನ್ ಯಜೀದ್ ಅಲ್ ಅಸ್ಬಾಹಿ' ಅವರ ತಲೆಯನ್ನು ಕತ್ತರಿಸಿ ಹಾಕಿದನು. ಮೋಸಕ್ಕೆ ಜಯವಾಯಿತು. ಧರ್ಮಕ್ಕೆ ಸೋಲಾಯಿತು. ಹ| ಇಮಾಮ ಹುಸೇನರು ವೀರಮರಣ ಹೊಂದಿದರು.
ಈ ಘೋರ ದುರಂತ ಕೇಳಿದ ಮಕ್ಕಾ ಮದೀನಾ, ಜನ, ಯಜೀದನ ಗುಂಪಿನ ಮೇಲೆ ದಂಗೆಯೆದ್ದು ಸೇಡು ತೀರಿಸಿಕೊಂಡರು. ಯಜೀದನ ಮರಣದ ಅನಂತರ ಬನೀ ಉಮ್ಮೆಯರು, ಬನೀ ಹಾಷೀಮರು ಖಲೀಫರಾಗಿ ಆಳಿದರು. ಇದು ಕರ್ಬಲಾ ದುರಂತದ ಭೀಕರ ಕಥೆ.೩[2]

ಹ | ಅಲಿ ಅವರ ಅನುಯಾಯಿಗಳಾದ ಷಿಯಾ ಮುಸ್ಲೀಮರು, ಹ | ಇಮಾಮ ಹುಸೇನರ ವೀರ ಮರಣದ ಕೆಲವರ್ಷಗಳ ಅನಂತರ ಅವರ ಗೌರವಾರ್ಥ ಸಭೆ ಸೇರಿ ಶೋಕ ವ್ಯಕ್ತಪಡಿಸಿದರು. ಕ್ರಿ.ಶ. ೯೬೨ರಲ್ಲಿ 'ಬುವಯಿಹಿ' ಸಂತತಿಯ ಷಿಯಾ ಮುಸ್ಲೀಮರು ಹ | ಅಲಿ ಅವರ ಸಂತತಿಗೆ ಭಕ್ತಿಗೌರವ, ಆದರಗಳಿಂದ ನಡೆದುಕೊಂಡು ಕರ್ಬಲಾ ಕಾಳಗದ ನೆನಪಿಗಾಗಿ ಕೂಟ ಕೂಡುವುದಕ್ಕೆ ಪ್ರೋತ್ಸಾಹಕೊಟ್ಟರು.೪[3] ಹುಸೇನರ ಆತ್ಮಕ್ಕೆ ಶಾಂತಿಸಿಗಲೆಂದು ಮೊಹರಂ ತಿಂಗಳಿನಲ್ಲಿ ಮುಸ್ಲೀಮರು ಉಪವಾಸ ವೃತ, ಕುರಾನ್ ಪಠಣ, ದಾನ-ಧರ್ಮ ಇತ್ಯಾದಿಗಳನ್ನು ಮಾಡುತ್ತಿದ್ದರು. ದುಃಖ ಮೂಲವಾದ ಇಂತಹ ಮೊಹರಂ ಆಚರಣೆ ಸುಪ್ರಸಿದ್ಧ ಬಾದಶಹಾ ಅಮೀರ ತೈಮೂರಲಂಗ (ಕ್ರಿ.ಶ. ೧೩೩೬-೧೪೦೫)ನ ಕಾಲದಲ್ಲಿ ಭಾರತವನ್ನು ಪ್ರವೇಶಿಸಿತು. 'ತಾಜಿಯಾ' ತಯಾರಿಸುವ ಪದ್ಧತಿಯನ್ನು ಭಾರತದಲ್ಲಿ ಆರಂಭಿಸಿದವನು ಇವನೇ.೫[4] ಮೊಗಲರ ಆಳ್ವಿಕೆಯಲ್ಲಿ ಇದೇ ಪದ್ಧತಿ ಮುಂದುವರಿದು ಕಾಲಕಳೆದಂತೆ ಮೊಹರಂ ಆಚರಣೆಯಲ್ಲಿ ಭಾಗವಹಿಸುವ ಹಿಂದುಗಳು ಕೂಡ ತಾಜಿಯಾ ತಯಾರಿಸಿ ಮೆರವಣಿಗೆ ಮಾಡಲಾರಂಭಿಸಿದರು. ಶೇರಖಿ ರಾಜ ಸಂತತಿಯ ಸುಲ್ತಾನರು (ಕ್ರಿ.ಶ. ೧೩೯೮-೧೪೮೬) ಮೊಹರಂ ಆಚರಣೆಯಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿದ್ದರು ಮತ್ತು ಸಕಲ ಮತಪಂಥಗಳಿಗೆ, ಮೊಹರಂ ಆಚರಣೆಗೆ ಧನ ಸಹಾಯ ನೀಡುತ್ತಿದ್ದರು.೬[5]

***ಮೊಹರಂ ಆಚರಣೆಗೆ ಪ್ರೋತ್ಸಾಹ***

ಔಧ ಪ್ರಾಂತವನ್ನಾಳಿದ ಮೊಗಲ್ ಸಾಮ್ರಾಜ್ಯದ ನವಾಬ ಶುಜಾ ಉದ್ದೌಲನ ಹೆಂಡತಿ ಮೊಹರಂ ಆಚರಣೆಗೆ ಸಾಕಷ್ಟು ಹಣ ಖರ್ಚು ಮಾಡುತ್ತಿದ್ದಳು ಮತ್ತು ಸ್ವತಃ ಭಾಗವಹಿಸುತ್ತಿದ್ದಳು. ಕ್ರಿ.ಶ. ೧೮೧೪ರಲ್ಲಿ ಔಧ ಸಿಂಹಾಸನವೇರಿದ ಗಾಜಿ ಉದ್ದೀನ ಹೈದರ ಲಖನೌದಲ್ಲಿ 'ಶಹಾ ನಜಫ್' ಎಂಬ ಇಮಾಮಬಾಡಾ ಕಟ್ಟಿಸಿದ್ದನು ಮತ್ತು ಹಿಂದೂ-ಮುಸ್ಲೀಮರಿಗೆ ಹಣ ನೀಡಿ ಮೊಹರಂ ಆಚರಿಸಲು ಪ್ರೋತ್ಸಾಹ ನೀಡುತ್ತಿದ್ದನು.

ದಕ್ಷಿಣ ಭಾರತದಲ್ಲಿ ಕಲಬುರ್ಗಿ ಮತ್ತು ಬೀದರದಿಂದ ಆಳಿದ ಬಹಮನಿ ಸುಲ್ತಾನರು (ಕ್ರಿ.ಶ. ೧೩೪೭-೧೫೩೮). ಬಿಜಾಪುರದ ಆದಿಲ್ ಷಾಹಿಗಳು (ಕ್ರಿ.ಶ ೧೪೮೯-೧೬೮೯) ಸಂಭ್ರಮ ಹಾಗೂ ಸಡಗರದಿಂದ ಮೊಹರಂ ಆಚರಿಸುತ್ತಿದ್ದರು. ಗೋಲ್ಕೊಂಡಾದ ಕುತುಬ್ ಷಾಹಿಗಳು (ಕ್ರಿ.ಶ. ೧೫೫೦-೧೬೭೨) ಹೈದರಾಬಾದ್ ನಗರದಲ್ಲಿ ಅಲಂ ಇಡುವ ಪದ್ಧತಿ ಆರಂಭಿಸಿ ಮುಂದುವರಿಸಿಕೊಂಡು ಬಂದರು. ಅಲಮ್‌ಗಳ ಮುಂದೆ ಮಜಲಿಸ್ ಏರ್ಪಡಿಸಿ ಉದಾರ ಮನಸ್ಸಿನಿಂದ ತಮ್ಮ ಬೊಕ್ಕಸದಿಂದ ಧನ ಸಹಾಯ ಮಾಡುತ್ತಿದ್ದರು. 'ಅಬ್ದುಲ್ ಕುತುಬ್ ಷಾ' ಮೊಹರಂ ತಿಂಗಳ ಮೊದಲನೆಯ ದಿನದಿಂದ ಸಫರ ತಿಂಗಳ ೨೦ನೆಯ ದಿನಗಳವರೆಗೆ ಹೆಂಡ ಕುಡಿಯುವುದನ್ನು ಕ್ಷೌರ ಮಾಡಿಸಿಕೊಳ್ಳುವುದನ್ನು, ತಾಂಬೂಲ ಸೇವಿಸುವುದನ್ನು ಅಪರಾಧವೆಂದು ಸಾರಿದ್ದನು. ಅಲಂ ಇಡುವುದಕ್ಕಾಗಿ ಕಟ್ಟಿಸಿದ ಆಶೂರಖಾನೆಗಳು ಇಂದಿಗೂ ಸುಸ್ಥಿತಿಯಲ್ಲಿದ್ದು ಹೈದರಾಬಾದ್ ನಗರದ ಸಾಂಸ್ಕೃತಿಕ ಮಹತ್ವವನ್ನು ಸಾರಿ ಹೇಳುತ್ತವೆ.

ಸಾಮ್ರಾಟ ಅಕ್ಬರ (ಕ್ರಿ.ಶ. ೧೫೪೨-೧೬೦೫) ದೀನ್-ಎ-ಇಲಾಹಿ ಸ್ಥಾಪಿಸಿದ ಅನಂತರ ಮೊಹರಂ ಹಬ್ಬ ರಾಷ್ಟ್ರೀಯ ಹಬ್ಬವಾಗಿ ಮಾರ್ಪಾಡಾಯಿತು. ೧೮ನೆಯ ಶತಮಾನದಲ್ಲಿ ಮೈಸೂರು ಸಂಸ್ಥಾನವನ್ನಾಳಿದ ಮೈಸೂರು ಹುಲಿ ಟಿಪ್ಪೂ ಸುಲ್ತಾನನು 'ಮೊಹರಂ ಒಂದು ಹಬ್ಬವಲ್ಲ ಅದು ಹ | ಮಹ್ಮದ ಪೈಗಂಬರರ ಮೊಮ್ಮಕ್ಕಳು ಹೋರಾಡಿ ಹುತಾತ್ಮರಾದ ಪುಣ್ಯದ ದಿನ ಅದನ್ನು ಸೂತಕದಂತೆ ಆಚರಿಸಬೇಕು' ಎಂದು ಹೇಳುತ್ತಿದ್ದನು. ಆದರೆ ಕುತಂತ್ರಿ ಬ್ರಿಟೀಶರು ತಮಗೆ ಸಿಂಹಸ್ವಪ್ನವಾಗಿದ್ದ ಟಿಪ್ಪೂವನ್ನು ಮುಸ್ಲೀಮರಿಂದ ಬೇರ್ಪಡಿಸಲು ಮೊಹರಂ ಪ್ರಸಂಗವನ್ನು ಉಪಯೋಗಿಸಿಕೊಂಡರು. ಕಂಪನಿ ಅಧಿಕಾರಿಗಳಿಗೆ ಮುಸ್ಲೀಮರ ಗೆಳೆತನ ಮಾಡಿಸಿ ಮುಸ್ಲಿಂ ಮುಜಾವರರಿಗೆ ಸಾಕಷ್ಟು ಹಣನೀಡಿ 'ಮೊಹರಂ' ಅನ್ನು ಅದ್ದೂರಿಯಿಂದ ಆಚರಿಸಲು ವ್ಯವಸ್ಥೆ ಮಾಡಿದರು೭[6] ಅಂದು ಬ್ರಿಟಿಷ ಅಧಿಕಾರಿಗಳು ಹಣದಾಸೆ, ಅಧಿಕಾರದಾಸೆ ತೋರಿಸಿ ಪ್ರಾರಂಭಮಾಡಿದ ಮೊಹರಂ ವಿಕಾರ ರೂಪ ಹೊಂದಿ ಬಳಕೆಯಲ್ಲಿ ಬಂದಿತು. ಇಂದಿಗೂ ಕೆಲ ಹಳ್ಳಿಗಳಲ್ಲಿ ಸರಕಾರಿ ಕಾಮಣ್ಣನಿಡುವಂತೆ, ಸರಕಾರಿ ಡೋಲಿ, ಸರಕಾರಿ ಅಲಂ ಇಡುವುದನ್ನು ನಾವು ಕಾಣುತ್ತೇವೆ.

ಹೀಗೆ ಹಿಂದೂಗಳ ಪ್ರಭಾವದಿಂದ ಬ್ರಿಟಿಷರ ಪ್ರೈಪೋಟಿತನದಿಂದ ಶೋಕಮೂಲ ಮೊಹರಂ ಆಚರಣೆ ಮರೆಯಾಗಿ ಸಂತೋಷ ಮತ್ತು ಸಂಭ್ರಮದ ಹಬ್ಬವಾಗಿ ವಿಶೇಷವಾಗಿ ಕರ್ನಾಟಕದಲ್ಲಿ ಮಾರ್ಪಾಟಾಯಿತು. ತತ್ಫಲವಾಗಿ ಹಿಂದೂ-ಮುಸ್ಲೀಮರಲ್ಲಿ ಹೊಂದಾಣಿಕೆ ಗಟ್ಟಿಗೊಂಡು ಭಾವೈಕ್ಯ ಸಾಧನೆಗೆ ಹಾದಿಯಾಯಿತು.

***ಹಿಂದೂ-ಮುಸ್ಲಿಂ ಮೈತ್ರಿ***

ಭಾರತೀಯರು ವಿವಿಧ ಹಬ್ಬಗಳನ್ನು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಆಚರಿಸುವಂತೆ ಮೊಹರಂ ಹಬ್ಬವನ್ನು ಆಚರಿಸುತ್ತಾರೆ. ಮೊಹರಂ ಹಬ್ಬದ ಮೇಲೆ ಹಿಂದು ಸಂಸ್ಕೃತಿಯ ಗಾಢ ಪ್ರಭಾವವಾಗಿದೆ. ಪ್ರಾದೇಶಿಕವಾಗಿ ರೂಢಿಯಲ್ಲಿರುವ ಮೊಹರಂ ಆಚರಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಹಿಂದೂ-ಮುಸ್ಲಿ ಮೈತ್ರಿಯ ಕುರುಹುಗಳು ಸ್ಪಷ್ಟವಾಗಿ ಗೋಚರಿಸುತ್ತವೆ.

ಉತ್ತರ ಪ್ರದೇಶದ ಲಖನೌ ನಗರದಲ್ಲಿ ಷಿಯಾ-ಸುನ್ನಿ ಮುಸ್ಲೀಮರ ಜೊತೆಗೆ ಹಿಂದುಗಳು ಸೇರಿ ತಾಜಿಯಾ ಕಟ್ಟುತ್ತಾರೆ. ಮೊಹರಂ ತಿಂಗಳ ಆರನೆಯ ದಿನ 'ಆಸಫಿ ಇಮಾಮ ಬಾಡಾದಲ್ಲಿ ಬರಿಗಾಲಿನಿಂದ ಬೆಂಕಿಯ ಮೇಲೆ ನಡೆದು ಹೋಗುವ ದೃಶ್ಯ, ಮೆಹಂದಿ ಜುಲೂಸನಲ್ಲಿ ಪಾಲಕಿ ಪಾಲ್ಗೊಳ್ಳುವುದು ಹಿಂದೂ ಸಂಸ್ಕೃತಿಯಿಂದ ಪ್ರಭಾವಗೊಂಡ ಅಂಶಗಳು. ಚನೋರಬಾ ಗ್ರಾಮದಲ್ಲಿ ಮೊಹರಂ ಮೆರವಣಿಗೆ ಹೊರಟಾಗ ಹಿಂದೂ-ಮುಸ್ಲಿಂಮರು ರೋಗಪೀಡಿತ ಮಕ್ಕಳನ್ನು ತಾಜಿಯಾಗಳ ಕೆಳಗೆ ಹಾಯಿಸುತ್ತಾರೆ. ಈ ಪದ್ಧತಿ ಹಿಂದುಗಳ ರಥೋತ್ಸವವನ್ನು ನೆನಪಿಸುತ್ತದೆ.

ಆಂಧ್ರಪ್ರದೇಶದ ಹೈದರಾಬಾದ್ ಮತ್ತು ಗೋಲ್ಕೊಂಡ ನಗರಗಳ ಮೊಹರಂ ಆಚರಣೆಯಲ್ಲಿ ಹಿಂದುಗಳು ಪಾಲ್ಗೊಂಡು 'ಅಲ್ಮೆ ಮುಬಾರಕ್'ಗಳಿಗೆ ಎಡೆ ಉಡಿ ಕಾಣಿಕೆ ನೀಡುತ್ತಾರೆ. ಹತ್ತನೆಯ ದಿನ ಮಾತಂ ನಡೆಯುವಾಗ ನಿಂತು ಕಣ್ಣೀರು ಸುರಿಸುತ್ತಾರೆ. ಪಶ್ಚಿಮ ಬಂಗಾಲದ ವಿಷ್ಣುಪುರ ನಗರದ ಮೊಹರಂ ಜುಲೂಸನಲ್ಲಿ ಪಾಲ್ಗೊಳ್ಳುವ 'ಧುಲ್‌ಧುಲ್' ಎಂಬ ಮಣ್ಣಿನ ಕುದುರೆಯನ್ನು ಪೋತದಾರರು ತಯಾರಿಸುತ್ತಾರೆ. ಇದರಲ್ಲಿ ಹಿಂದು ದೇವ-ದೇವತೆಗಳ ಮಣ್ಣಿನ ಮಾದರಿಯ ಛಾಯೆ ಕಂಡುಬರುತ್ತದೆ.

ಮಹಾರಾಷ್ಟ್ರ ರಾಜ್ಯದ ಅಕ್ಕಲಕೋಟೆ ನಗರದಲ್ಲಿ ಹಿಂದು-ಮುಸ್ಲೀಮರು ಸೇರಿ ತಾಜಯಾ ತಯಾರಿಸುತ್ತಾರೆ. ಗ್ರಾಮದೇವತೆಗಳಿಗೆ ಹಿಂದುಗಳು ತೆಂಗಿನಕಾಯಿ ಒಡೆಯುವಂತೆ ತಾಜಿಯಾಗಳಿಗೆ ಹಿಂದು-ಮುಸ್ಲೀಮರು ತೆಂಗಿನಕಾಯಿಗಳನ್ನು ಒಡೆಸುತ್ತಾರೆ. ಮತ್ತು ಹಿಂದೂ ದೇವರಿಗೆ ಎಲೆ ಬಳ್ಳಿ ಪೂಜೆ ಮಾಡುವಂತೆ ಹಿಂದು-ಮುಸ್ಲೀಮರು ತಾಜಿಯಾಗಳಿಗೆ ವೀಳ್ಯೆದೆಲೆಯ ಹಾರ ಹಾಕುತ್ತಾರೆ. ರತ್ನಾಗಿರಿ ಜಿಲ್ಲೆಯ ಫತ್ತೇಹ ಪುರದಲ್ಲಿ ಮೊಹರಂ ಆಚರಣೆಯು ಸಂದರ್ಭದಲ್ಲಿ ತಮಾಷೆ ಮದ್ದುಗಳನ್ನು ಸುಡುತ್ತಾರೆ. ಹಾಗು ಹೊಸಬಟ್ಟೆ ತೊಟ್ಟು ಮುಖಕ್ಕೆ ಸುಗಂಧ ದ್ರವ್ಯಗಳನ್ನು ಲೇಪಿಸಿಕೊಳ್ಳುತ್ತಾರೆ. ಈ ಸಂಭ್ರಮ ಹಿಂದುಗಳ ದೀಪಾವಳಿ ಹಬ್ಬವನ್ನು ನೆನಪಿಸುತ್ತದೆ.

ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯ ಮುದಗಲ್ಲ ಗ್ರಾಮದ ಮೊಹರಂ ಆಚರಣೆಯಲ್ಲಿ ಮುಸ್ಲೀಮೇತರರೇ ಹೆಚ್ಚಾಗಿ ಭಾಗವಹಿಸುತ್ತಾರೆ. ಹರಕೆ ಹೊತ್ತ ಹಿಂದೂ-ಮುಸ್ಲೀಮರು ಹುಲಿವೇಷ, ಅಳ್ಳಳ್ಳಿ ಬವ್ವಾವೇಷ ಹಾಕಿ ಕುಣಿದು ಕುಪ್ಪಳಿಸುತ್ತಾರೆ. ಕಂದೂರಿ ಮಾಡಿ ಎಡೆ ನೀಡಿ ಮನಸ್ಸಿಗೆ ನೆಮ್ಮದಿ ತಂದುಕೊಳ್ಳುತ್ತಾರೆ. ದೀರ್ಘದಂಡ ನಮಸ್ಕಾರ ಹಾಕಿ ಧನ್ಯರಾಗುತ್ತಾರೆ. ಹತ್ತನೆಯ ದಿನ ಹೊರಡುವ ಕಾಸೀಮ ಅಲಂ ಮತ್ತು ಹಸನ ಅಲಂ ಒಂದಕ್ಕೊಂದು ಭೆಟ್ಟಿಯಾದಾಗ ನೆರೆದು ಜನ ಸಮೂಹ ತೇರಿನಮೇಲೆ ಹಣ್ಣುಕಾಯಿ ಎಸೆಯುವಂತೆ ಸೂರೆ ಮಾಡಿ ಭಯಭಕ್ತಿಯಿಂದ ಕೈಮುಗಿದು ತೃಪ್ತರಾಗುತ್ತಾರೆ. ಹಿಂದುಗಳ ಜಾತ್ರೆಯ ಸಂಭ್ರಮವನ್ನು ನೆನಪಿಸುವ ಮುದಗಲ್ಲ ಮೊಹರಂ ಇಂದಿಗೂ ಸರ್ವರ ಇಷ್ಟಾರ್ಥಗಳನ್ನು ಪೂರೈಸುವ ಪುಣ್ಯಕ್ಷೇತ್ರೋತ್ಸವವೆಂದೇ ಪ್ರಚಲಿತವಾಗಿದೆ.

ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಕೂಡಿಸುವ ಮೌಲಾಲಿ ಅಲಮ್‌ಗಳಿಗೆ ಹಿಂದೂ-ಮುಸ್ಲೀಮರು ರಾಮುಲಸ್ವಾಮಿ ಎಂದೇ ಕರೆಯುತ್ತಾರೆ. ಒಂಬತ್ತನೆಯ ದಿನ ರಾತ್ರಿ ಎಡೆ ಕೊಡುವಾಗ ಉಪ್ಪನ್ನು ಒಯ್ದು ಅಲಾವಿಯಲ್ಲಿ ಚೆಲ್ಲಿ ಹುರುಕು ಕಜ್ಜಿಗಳನ್ನು ವಾಸಿಮಾಡಿಕೊಳ್ಳುತ್ತಾರೆ. ಕೋಲಾರ ಜಿಲ್ಲೆಯ ನಾಗಸಂದ್ರದ ಮೊಹರಂ ಬಾಬಯ್ಯನ ಹಬ್ಬವೆಂದೇ ಪ್ರಸಿದ್ಧಿ ಪಡೆದಿದೆ.

ಧಾರವಾಡ ಜಿಲ್ಲೆಯ ಯರಗುಪ್ಪಿ ಗ್ರಾಮದ ಮೊಹರಂ ಸುತ್ತ ಹತ್ತು ಹಳ್ಳಿಗಳಲ್ಲಿ ಮೊಹರಂ ಜಾತ್ರೆಯೆಂದೇ ಹೆಸರಾಗಿದೆ. ಊರಿನ ಹಿಂದೂ-ಮುಸ್ಲೀಮರು ವಿಶೇಷವಾಗಿ ಬ್ರಾಹ್ಮಣರು ತಮ್ಮ ಶಕ್ತ್ಯಾನುಸಾರ ದೇವರ ಚಾಕರಿ ಮಾಡುತ್ತಾರೆ. ಹರಕೆ ತೀರಿಸುತ್ತಾರೆ. ಗದಗ-ಬೆಟಗೇರಿಯಲ್ಲಿ ನಡೆಯುವ ಮೊಹರಂ ಮೆರವಣಿಗೆಯಲ್ಲಿ ಹಿಂದೂ-ಮುಸ್ಲಿಂ ಭಕ್ತರು ಪಾಲ್ಗೊಂಡು ಮೈತುಂಬಿದ ದೇವರಿಂದ ಮಳೆ-ಬೆಳೆ ಕುರಿತು ಹೇಳಿಕೆ-ಕೇಳಿಕೆ ಮಾಡುತ್ತಾರೆ. ಸೊಟಕನಹಾಳದ ಡೋಲಿ ಮತ್ತು ಕೈ-ದೇವರು ದ್ಯಾಮವ್ವನ ಗುಡಿಗೆ ಭೆಟ್ಟಿಯಿತ್ತಾಗ ಊರಜನ ಇಮಾಮ ಹುಸೇನರು ತಂಗಿ ದ್ಯಾಮವ್ವನ ದರ್ಶನಕ್ಕೆ ಬಂದಿದ್ದಾರೆಂದೇ ತಿಳಿಯುತ್ತಾರೆ.

ಹೀಗೆ ಮೊಹರಂ ಆಚರಣೆ ಶೋಕಮೂಲವಾಗಿದ್ದರೂ ಮೂಲತಃ ಮುಸ್ಲೀಮರಿಗೆ ಸಂಬಂಧಪಟ್ಟಿದ್ದರೂ ಅದು ಹಿಂದುಗಳ ಸ್ನಿಗ್ಧ ಸ್ನೇಹದಿಂದ ಭಾವೈಕ್ಯದ ಪ್ರತೀಕವಾಗಿ ಎಲ್ಲರ ಹಬ್ಬವಾಗಿ ಬಳಕೆಯಲ್ಲಿದೆ. ಹಿಂದು-ಮುಸ್ಲೀಮರನ್ನು ಒಂದುಗೂಡಿಸುವ ಧಾರ್ಮಿಕ ಸೌಹಾರ್ದವನ್ನು ಹುಟ್ಟು ಹಾಕುವ 'ಮೊಹರಂ' ಭಾವೈಕ್ಯದ ಬೆಸುಗೆಗೆ ಮತೀಯ ಸಾಮರಸ್ಯಕ್ಕೆ ಬಹುದೊಡ್ಡ ಕಾಣಿಕೆಯಾಗಿದೆ.

ಕರ್ನಾಟಕದಲ್ಲಿ ಮೊಹರಂ ಆಚರಣೆಯ ಸಮಯದಲ್ಲಿ – ಹಾಡಲಾಗುವ ಮೊಹರಂ ಪದಗಳು ಇಸ್ಲಾಂ ಧರ್ಮಕ್ಕೆ ಮತ್ತು ಇಸ್ಲಾಮೇತರ ಧರ್ಮಕ್ಕೆ ಸಂಬಂಧಿಸಿದವುಗಳಾಗಿದ್ದು ಹಾಡುವಾಗ ಹಿಂದೂ-ಮುಸ್ಲಿಂಮರು ಒಟ್ಟಾಗಿ ಮರ್ಸಿಯಾ (ಶೋಕಪೂರ್ಣ) ದಾಟಿಯಲ್ಲಿ ಹೇಳುವುದು ಕಂಡುಬರುತ್ತದೆ.

***ಮೊಹರಂ ಪದಗಳ ವರ್ಗೀಕರಣ ಮತ್ತು ವಿವರಣ***

ಮೊಹರಂ ಪದಗಳನ್ನು ಅವು ಒಳಗೊಂಡಿರುವ ಕಥಾವಸ್ತು, ಭಾವ, ಭಾಷೆ ಇತ್ಯಾದಿಗಳನ್ನು ಆಧರಿಸಿ ೧) ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ ಪದಗಳು, ೨) ಇಸ್ಲಾಮೇತರ ಧರ್ಮಕ್ಕೆ ಸಂಬಂಧಿಸಿದ ಪದಗಳು ಎಂದು ಸ್ಥೂಲವಾಗಿ ವಿಂಗಡಿಸಬಹುದು.

ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ ಪದಗಳನ್ನು ಪುನಃ ೧) ಕರ್ಬಲಾ ಪದಗಳು ೨) ಖಲೀಫರಿಗೆ ಸಂಬಂಧಿಸಿದ ಪದಗಳು, ೩) ಹ | ಮುಹ್ಮದ ಪೈಗಂಬರರಿಗೆ ಸಂಬಂಧಿಸಿದ ಪದಗಳು, ೪) ಪೂರ್ವದ ಪೈಗಂಬರರಿಗೆ ಸಂಬಂಧಿಸಿದ ಪದಗಳು, ೫) ಸೂಫಿ ಸಂತರಿಗೆ ಸಂಬಂಧಿಸಿದ ಪದಗಳು೬) ಇಸ್ಲಾಂ ಧರ್ಮ ತತ್ವ ಮಹಿಮಾ ಸಾರುವ ಪದಗಳು, ೭) ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ ಸವಾಲ್-ಜವಾಲ್ ಪದಗಳು – ಎಂದು ಮುಂತಾಗಿ ವರ್ಗೀಕರಿಸಬಹುದು.

ಇಸ್ಲಾಮೇತರ ಪದಗಳನ್ನು ೧) ಐತಿಹಾಸಿಕ ಪದಗಳು, ೨) ಸಾಮಾಜಿಕ ಪದಗಳು, ೩) ಇಸ್ಲಾಮೇತರ ಸವಾಲ್-ಜವಾಬ್ ಪದಗಳು ಎಂದು ವಿಭಾಗಿಸಬಹುದು.

***ಕರ್ಬಲಾ ಪದಗಳು***

ಮೊಹರಂ ಆಚರಣೆಯ ಹಿನ್ನೆಲೆಯಲ್ಲಿ ಪರಶೀಲಿಸಿದಾಗ ಕರ್ಬಲಾ ಪದಗಳೇ ನಿಜವಾದ ಅರ್ಥದಲ್ಲಿ ಮೊಹರಂ ಪದಗಳೆನಿಸುತ್ತವೆ. ಆದುದರಿಂದ ಒಟ್ಟು ಮೊಹರಂ ಪದಗಳಲ್ಲಿ ಅವುಗಳಿಗೆ ಅಗ್ರಸ್ಥಾನ ಸಲ್ಲುತ್ತದೆ. ಸಲ್ಲಬೇಕು.

ಮೊಹರಂ ತಿಂಗಳ ಆರಂಭದ ಹತ್ತು ದಿನ ಇರಾಕ್ ದೇಶದ ಕರ್ಬಲಾ ಮರುಭೂಮಿಯಲ್ಲಿ ನಡೆದ ಘಟನೆಗಳನ್ನು ಈ ಪದಗಳು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತವೆ. ಅವುಗಳ ರೂಪ ಮತ್ತು ಲಕ್ಷಣ ಲಾವಣಿಯಂತಿದ್ದರೂ ಹಾಡುವ ದಾಟಿ ಧರ್ತಿ ಮಾತ್ರ – ಮರ್ಶಿಯಾದಂತಿರುತ್ತದೆ. ಉರ್ದು ಪಾರ್ಶಿ ಶಬ್ದಗಳು ಈ ಪದಗಳಲ್ಲಿ ಸಾಕಷ್ಟು ಬಳಕೆಗೊಂಡಿವೆ. ಕರ್ಬಲಾ ಪದಗಳಲ್ಲಿ – ಮುಸ್ಲೀಮರು ಹುತಾತ್ಮರಾದ ಪದಾ, ವೀರಕಾಸೀಮನ ಲಢಾಯಿ, ಅಸ್ಗರ ಅಲಿ ಪದ, ಅಬ್ದುಲ್ಲಾನ ಜಂಗಿನ ಪದಾ, ಅಬ್ಬಾಸ ಅಲಿ, ಜಂಗಿನ ಪದಾ, ಹುಸೇನರು ಹುತಾತ್ಮರಾದ ಪದಾ, ಕರ್ಬಲಾದ ರಕ್ತದ ಮಹತ್ವ – ಮುಂತಾದ ಪದಗಳು ಪ್ರಮುಖವಾಗಿವೆ.

ಇವುಗಳಲ್ಲಿ ಅಬ್ಬಾಸ ಅಲಿ ಜಂಗಿನ ಪದವೊಂದು, ಹೀಗಿದೆ. ಹಿಜರಿ ಸನ್ ೬೦ರ ಜಿಲ್‌ಹಜ್ ತಿಂಗಳ ೮ನೆಯ ದಿನಾಂಕ ಇಮಾಮ ಹುಸೇನರು ಹೆಂಡತಿ ಮಕ್ಕಳು ಸಂಬಂಧಿಕರೊಂದಿಗೆ ಕೂಫೆಗೆ ಪ್ರಯಾಣ ಬೆಳಸಿ ಮೊಹರಂ ತಿಂಗಳ ಮೊದಲನೆಯ ದಿನ ಇರಾಕ್ ಪ್ರಾಂತ ಪ್ರವೇಶಿಸಿದರು. ಮುಂದೆ ಹಲವಾರು ಘಟನೆಗಳು ನಡೆದವು.

ವೈರಿ ಸೈನಿಕರು ಬಿಟ್ಟ ಬಾಣಗಳನ್ನು ಹುಸೇನರು ಅನುಯಾಯಿಗಳು ಒಂದೊಂದಾಗಿ ಕತ್ತರಿಸಿ ಭೂಮಿಗೆ ಚೆಲ್ಲುತ್ತಿದ್ದರು. ಹುಸೇನರ ಸಣ್ಣ ಸೈನ್ಯ ೫೦೦ ಜನ ಬಿಲ್ಲುಗಾರರನ್ನು ಸೋಲಿಸಿ ಹಿಂದಕ್ಕಟ್ಟಿತು ಮಧ್ಯಾಹ್ನದ ಹೊತ್ತಿನವರೆಗೆ ಜಯದ ಸೂಚನೆ ಯಾವೊಂದು ಪಡೆಗೂ ಕಾಣಲಿಲ್ಲ. ಆಗ ಇಬ್ನೆಸಾದ್ ಹಿಂದಿನಿಂದ ಮುತ್ತಿಗೆ ಹಾಕಲು ಆಜ್ಞೆಮಾಡಿದನು. ಇದರಿಂದ ಹುಸೇನರ ಅನುಯಾಯಿಗಳು ಹುತಾತ್ಮರಾದರು. ಕೊನೆಗೆ ಹ | ಅಬ್ಬಾಸ ಅಲಿ ಮತ್ತು ಹ | ಇ | ಹುಸೇನರು ಉಳಿದರು ಯುದ್ಧಮಾಡುತ್ತ ಮಾಡುತ್ತ ನಿತ್ರಾಣರಾದರು. ಕುಡಿಯಲು ಹನಿ ನೀರಿಲ್ಲದೆ ತುಟಿಗಳು ಒಣಗಿದವು ಪಕ್ಕದಲ್ಲಿ ಹರಿಯುತ್ತಿದ್ದ ಯುಪ್ರಟೀಸ ನದಿಗೆ ವೈರಿಗಳು ಸರ್ಪಕಾವಲಿದ್ದರು. ಅಬ್ಬಾಸಲಿ ಮತ್ತು ಹುಸೇನರು ದಾರಿಯುದ್ದಕ್ಕೂ ಯುದ್ಧಮಾಡುತ್ತ ನದಿ ದಂಡೆ ತಲುಪಿದರು. ಬೊಗಸೆಯಲ್ಲಿ ನೀರು ತುಂಬಿಕೊಂಡು ಕುಡಿಯಬೇಕೆನ್ನುವಷ್ಟರಲ್ಲಿ ಎಲ್ಲಿಂದಲೋ ಬಂದ ಬಾಣಗಳು ಅವರ ಗಂಟಲು ಸೇರಿದವು. ಇಬ್ಬರೂ ಗಾಯಗೊಂಡು ತೀರದ ದಾಹದಿಂದ ಮರಳಿದರು. ಗುಟಿಸಲು ಇನ್ನೂ ಮುಟ್ಟಿರಲಿಲ್ಲ. ಅಬ್ಬಾಸಲಿಯವರ ಮೇಲೆ ವೈರಿ ಸೈನಿಕರು ದಾಳಿ ಮಾಡಿದರು. ನಾಲ್ಕುನಿಟ್ಟಿನಿಂದ ಮೋಸದಿಂದ ಮುತ್ತಿದ ವೈರಿ ಸೈನಿಕರನ್ನು ಎದುರಿಸುತ್ತ ರುಂಡ ಚಂಡಾಡುತ್ತ ಕೊನೆಗೆ ಹುತಾತ್ಮರಾದರು. ಇದನ್ನೆ ಬಾಗಲಕೋಟೆ ನಾಗು-ಗೌಸು ಕವಿಗಳು ಹೀಗೆ ಬಣ್ಣಿಸಿದ್ದಾರೆ.

*ಸೂರಾ–ಧೀರಾ ತಗೊಂಡ ಹತಿಯಾರಾ*
*ಕೈಯಾಗ ಹಿಡದಾ ಅಂತಾನೋ ಬರ್ರೆಂದಾ*
*ಅಬ್ಬಾಸಲಿ ಶರಣರ ಜಂಗ ನಡೆದಿತೋ ಆವಾಗ*
*ಇಟ್ಟೆದಿಲ್ಲೊ ಜೀವದ ಹಂಗ | ನಬಿಸಾಬರ ಕರುಣ ನಮಗ*
*ಐತಿ ನಮ್ಮ ಮ್ಯಾಲಿ | ಅಂತಾರೋ ಅಬ್ಬಾಸಲಿ | ಶಿವನ ಮನಿಹುಲಿ.*
*ಕಡದಾ–ಹೊಡದಾ–ನಡದಾ*

'ಅಬ್ಬಾಸಲಿ ಶಿವನ ಮನಿ ಹುಲಿ' ಎನ್ನುವ ಧ್ವನಿಪೂರ್ಣ ಮಾತು ಅಬ್ಬಾಸ ಅಲಿ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುತ್ತದೆ.

ಕರ್ಬಲಾ ಕದನದಲ್ಲಿ ಪಾಲ್ಗೊಂಡು ಆತ್ಮಾರ್ಪಣೆಗೈದ ಧರ್ಮವೀರರ ಸಾಹಸ ಸಂಕಟ ಸಾವು ನೋವುಗಳನ್ನು ನಿರೂಪಿಸುವ ಕರ್ಬಲಾ ಪದಗಳಲ್ಲಿ ಹ | ಇಮಾಮ ಹಸೇನರ ಹೋರಾಟದ ಚಿತ್ರಣವನ್ನು ಕೊಡುವ ಪದಗಳು ಮುಖ್ಯವಾಗಿವೆ.

*ಹುಸನ್ಯೆನ ಸ್ವಾಮಿ ಶರಣರು ಕುದುರಿಗೆ | ಜೀನಹಾಕಿ ಕುಂತಾರವರು*
*ಕುದುರಿ ಕುಣಿಸೂತ ಶರಣಾ | ಅಂದಾರೋ ದೀನ್ ದೀನಾ*
*ಕರ್ಬಲಕ ಹೋಗಿ ಮಾಡ್ಯಾರೋ ರಣಾ*

ಸತ್ಯಧರ್ಮಗಳ ಉಳಿವಿಗಾಗಿ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿ ಲೌಕಿಕದಲ್ಲಿ ಸೋತಂತೆ ಕಂಡರೂ ವಿಶ್ವಕ್ಕೆ ಸತ್ಯದ ನಿತ್ಯತ್ವವನ್ನು ಮನಗಾಣಿಸಿಕೊಟ್ಟು ವೀರಮರಣವನ್ನಪ್ಪಿದ ಹ | ಇ | ಹುಸೇನರಂತವರು ಇತಿಹಾಸದಲ್ಲಿ ತೀರ ವಿರಳವಾಗಿ ದೊರೆಯುವರು ಇದನ್ನೆ ಜನಪದ ಕವಿ :

*ಧರ್ಮಕ ಸತ್ತವರು ಸಿಗತಾರ ಕೋಟಿಗೊಬ್ಬ ಜನರಾ*
*ಮುಸಲ್ಮಾನ ಮಂದ್ಯಾಗ ದೊರಿತಾರ ಹುಸೇನ ಸಾಹೇಬರಾ*

ಎಂಬ ಮಾತಿನಲ್ಲಿ ತಿಳಿಸಿದ್ದಾನೆ.

ಹ | ಇ | ಹುಸೇನರು ಮರಣಿಸಿದಾಗ ಅಲ್ಲಿದ್ದ ಪಶು-ಪಕ್ಷಿ ಸಂಕುಲ ಕೂಡ ತಮ್ಮ ಶೋಕ ಪ್ರದರ್ಶಿಸಿದಂತೆ ಜನಪದ ಕವಿ ಹೇಳಿದುದು ಬಹಳ ಅರ್ಥಪೂರ್ಣವಾಗದೆ.

*ಶರಣರನ್ನು ನೋಡಿ ಕಣ್ಣೆರು ಸುರಿಸ್ಯಾವರಿ*
*ಪಕ್ಷಿಗಳೆಲ್ಲ ಅವರ ಮೇಲೆ ಬಿದ್ದು ಮಾಡುವವು ಗುಲ್ಲಾ*
*ರಕ್ತ ಮುಳುಗಿ ಕೆಂಪಗೆ ಮೈ ಕೈ ಎಲ್ಲಾ*
*ಆಗ ದುಃಖಾತೋ ಅತಿ ಬಿಟ್ಟಾವು ಅನ್ನ ನೀರಾ*
*ಆಗಲೆ ಅವು ಸಕಲಾ ಎದಿವಡಿದು ಆದಾವು ಅಡವಿಪಾಲಾ*

ಇಲ್ಲಿ ಪಕ್ಷಿಗಳು ದುಃಖದಲ್ಲಿ ಪಾಲುಗೊಂಡುದನ್ನು ಓದಿದಾಗ ನಮಗೆ ತಟ್ಟನೆ ಲಕ್ಷ್ಮೀಶನ ಜೈಮಿನಿ ಭಾರತದ ಸೀತೆಯ ದುಃಖದಲ್ಲಿ ಅಲ್ಲಿದ್ದ ಪಕ್ಷಿ ಮೃಗ ಸಮೂಹ ಭಾಗಿಯಾದ ಸನ್ನಿವೇಶ ನೆನಪಿಗೆ ಬರದಿರದು.

ಆಡುವ ಮಾತುಗಳನ್ನೇ ಮೂಲ ಬಂಡವಾಳವಾಗಿಸಿಕೊಂಡ ಈ ಹಾಡುಗಳ ಪಾಲಿಗೆ ಅವುಗಳ ಸರಳ ಸೌಂದರ್ಯವೇ ಒಂದು ವೈಶಿಷ್ಟ್ಯ ಆದರೂ ಆಗಾಗ ಮಿಂಚಿಬರುವ ಮಾತಿನ ಬೆಡಗು-ಬಿನ್ನಾಣವನ್ನು ಗುರುತಿಸಬಹುದು.

*ಖಲೀಫರಿಗೆ ಸಂಬಂಧಿಸಿದ ಪದಗಳು*

ಖಲೀಫರ ಪದಗಳು, ಇಸ್ಲಾಮೀ ಸಾಮ್ರಾಜ್ಯಕ್ಕೆ ಧರ್ಮಪ್ರಭುಗಳೆಸಿ ಖಲೀಫ ಪಟ್ಟವನ್ನು ಏರಿದ ಖಲೀಫರ ಮತ್ತು ಅವರ ಸಂಬಂಧಿಗಳ ಜೀವನ ಮೌಲ್ಯಗಳ ಸುತ್ತ ಹೆಣೆದ ಪವಾಡ ಕಥಾನಕಗಳಾಗಿವೆ. ಈ ಪವಾಡಗಳಲ್ಲಿ ಕೆಲವು ಹಿಂದೂ ಧರ್ಮದ ಪ್ರಭಾವದಿಂದ ಸೃಷ್ಟಿಗೊಂಡವುಗಳೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಖಲೀಫರ ಮತ್ತು ಅವರ ಸಂಬಂಧಿಗಳಿಗೆ ಸಂಬಂಧಿಸಿದ ಪದಗಳಲ್ಲಿ – ಸೂರ್ಯನಿಗೆ ಉಮರ ಕೊಟ್ಟ ಪದಾ, ಮೌಲಾಲಿಯ ಜನನ ಮತ್ತು ಬಾಲಲೀಲೆ, ನಾಲ್ಕು ದಾರಿಯಪದಾ, ಕಂದೂರ ಕಿಲ್ಲೆಯ ಸೈನ್ಯ ಸೋಲಿಸಿದ ಮೌಲಾಲಿ ಪದಾ, ಹುಸೇನ ಹುಸೇನರ ಆಟದ ಪದಾ, ಸ್ವರ್ಗದ ಹಣ್ಣು ತಿಂದ ಹುಸೇನ ಹುಸೇನರ ಪದಾ, ಹುಸೇನ ಹುಸೇನರನ್ನು ಒತ್ತಿ ಇಟ್ಟ ಪದಾ, ದಾನ ಮಾಡಿದ ಪದಾ, ಫಾತಿಮಾರ ಮರಣದ ಪದಾ – ಮುಂತಾದವು ಮುಖ್ಯವಾಗಿವೆ.

ಎರಡನೆಯ ಖಲೀಫ ಹ | ಉಮರ ಫಾರೋಖ ಸೂರ್ಯನಿಗೆ ಕೊಟ್ಟ ಶಾಪದ ಪದವೊಂದು ಹೀಗಿದೆ.

ನಮಾಜು ಮುಗಿಸಿಕೊಂಡು ಉತ್ಪತ್ತಿಯ ವನಕ್ಕೆ ಬಂದ ಹ | ಉಮರ ಫಾರೋಖ ಅಲ್ಲಿ ಕುಳಿತು ತಾವು ತೊಟ್ಟ ಹರಕು ಅಂಗಿಯನ್ನು ಕಳೆದು ಹೊಲಿಯ ತೊಡಗಿದರು. ಅಷ್ಟು ಹೊತ್ತಿಗೆ ಉದಯಿಸಿದ ಸೂರ್ಯನ ಕಿರಣಗಳ ಬಿಸಿಯಿಂದ ಉಮರರ ಬೆನ್ನು ಸುಡಲು ಅವರು ಸಿಟ್ಟಿಗೆದ್ದರು. ಆಗ ಸೂರ್ಯ ಹೆದರಿ ಏಳನೆಯ ಪಾತಾಳದಲ್ಲಿ ಅಡಗಿಕೊಂಡನು. ಇದರಿಂದ ಎಲ್ಲ ಕಡೆಗೆ ಕತ್ತಲೆ ಆವರಿಸಿ ಎಲ್ಲರಿಗೂ ತೊಂದರೆಯಾಯಿತು. ಸೂರ್ಯ ಪುನಃ ಉದಿಸಿ ಬರಲು ಪೈಗಂಬರರು ನಾಲ್ಕು ಮಂದಿ ಜೊತೆಗಾರರನ್ನು ಕರೆದುಕೊಂಡು ಉಮರರಿದ್ದ ಉತ್ತತ್ತಿಯ ವನಕ್ಕೆ ಹೋದರು. ಅಲ್ಲಿ ಉಮರರು ಬರಿಮೈಯಿಂದ ಅಂಗಿ ಹೊಲಿಯುತ್ತ ಇನ್ನು ಕುಳಿತಿದ್ದರು. ಆಗ ದೂರದಿಂದ ಗುರುತಿಸಿದ ಪೈಗಂಬರರು ಉಮರರನ್ನು ಕುರಿತು ನುಡಿದರು :

*ಇಷ್ಟು ಸಿಟ್ಟ ಇಟ್ಟರ ನೀವು ಮನಸಿನವೊಳಗ*
*ನಡದೀತು ಹ್ಯಾಂಗ ಆದೀತು ಹ್ಯಾಂಗ ಬೈಗು ಬೆಳಗು*

*ಬಂದ ಜಿಬ್ರಾಯಿಲ ತಂದ ಮಾಹಿತಿ ಹೇಳಿದ ನಮಗ*
*ನೋಡಿ ಆ ಸೂಚನಾ ನಾವು ಇಲ್ಲಿ ತನಾ*
*ನಡದ ಬಂದೇನಿ ಕೊಡಬೇಕ ಮಾನ ಪಾನಾ*
*ಇಲ್ಲಂದರ ಇಂದಿಗೆ ಸೂರ್ಯ ಬರೂದಿಲ್ಲಂದಾ*
*ಇಷ್ಟು ಕೇಳಿ ಉಮರ ಸೂರ್ಯಗ ಝಟ್ಟನೆ ಕರದಾ*
*ಕೇಳಿ – ಈ ಶಬ್ದಾ ಆದ ಅಂವಾ ಲುಬ್ದಾ ತೆರದೀತ ಪ್ರಾರಬ್ದಾ*
*ಬಂದಾನೋ ಸೂರ್ಯ ಭೂಮಿಮ್ಯಾಲೆ ಮೂಡಿ.*

ಪುನಃ ಹುಟ್ಟಿಬಂದ ಸೂರ್ಯನನ್ನು ಕಂಡು ಸರ್ವರ ಮನಕ್ಕೆ ಸಂತೋಷವಾಯಿತು. ಸೂರ್ಯದೇವನನ್ನು ಕೂಡ ಅಂಜಿಸಬಲ್ಲ ಸಾಮರ್ಥ್ಯ ಹ | ಉಮರ ಫಾರೋಖರಲ್ಲಿ ಇದ್ದಿತೆಂಬ ಕವಿಯ ಆಶಯ ಇಲ್ಲಿ ಚನ್ನಾಗಿ ಮುಡಿಬಂದಿದೆ.

ತಮ್ಮ ಆಜ್ಞೆಯ ಮೂಲಕ ಶರಣರು ಸೂರ್ಯನನ್ನು ನಿಲ್ಲಿಸಿದ ಪವಾಡಗಳು ವೀರಶೈವ ಪುರಾಣಗಳಲ್ಲಿ ಬರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಅವುಗಳ ಪ್ರಭಾವ ಜನಪದ ಕವಿಯ ಮೇಲೆ ಆಗಿರುವ ಸಾಧ್ಯತೆಯಿದೆ.

ಹ | ಮುಹ್ಮದ ಪೈಗಂಬರರ ತರುವಾಯ ಮುಸ್ಲೀಮರು ಆರಿಸಿದ ನಾಲ್ವರು ಖಲೀಫರಲ್ಲಿ ನಾಲ್ಕನೆಯವರೆ ಹ | ಅಲಿಯವರು ಪೈಗಂಬರರ ಅಳಿಯಂದಿರಾದ ಇವರು ನಾಲ್ಕುವರ್ಷ ಒಂಬತ್ತು ತಿಂಗಳು ಖಲೀಫರಾಗಿ ಸೇವೆ ಸಲ್ಲಿಸಿದರು. ಪ್ರವಾದಿಗಳಿಗಿಂತ ಮೂವತ್ತು ವರ್ಷ ಚಿಕ್ಕವರಾದ ಹ | ಅಲಿ ಅವರು ತಮ್ಮ ಒಂಬತ್ತನೆಯ ವಯಸ್ಸಿನಲ್ಲಿ ಇಸ್ಲಾಂ ಧರ್ಮ ಸ್ವೀಕರಿಸಿದ ಸಾತ್ವಿಕರು, ನೀತಿವಂತರು. ಇವರನ್ನು ಜನಪದ ಕವಿ ಒಬ್ಬ ಪವಾಡ ಪುರುಷರಂತೆ ಬಣ್ಣಿಸಿದ್ದರಲ್ಲಿ ಆಶ್ಚರ್ಯವಿಲ್ಲ.

ಹ | ಅಲಿಯವರ ಜನನ ಮತ್ತು ಬಾಲಲೀಲೆ ವರ್ಣಿಸುವ ಪದವೊಂದು ಹೀಗಿದೆ. ಹ | ಅಲಿಯವರು ಜನಿಸಿದಾಗ ಮೂರು ಲೋಕವೆ ಅದುರಿತು. 'ಕಾಬಾ'ದ ತುಂಬ ಬೆಳಕು ಬಿದ್ದಿತು. ನಾಗಕನ್ಯೆಯರು ಸ್ವರ್ಗದ ನೀರ ತಂದು ಮಗುವಿಗೆ ಎರೆದರು. ದೇವತೆಯರು ತೊಟ್ಟಿಲು ತೂಗಿ ಹಡಿ ಹರಸಿದರು. ಒಂದು ದಿನ ಕೂಸು ತೊಟ್ಟಿಲಿನಲ್ಲಿ ಆಡುತ್ತಿದ್ದಾಗ ಒಂದು ಘಟನೆ ನಡೆಯಿತು :

*ತೊಟ್ಟಿಲದಾಗ ಮನಗಿಸಿ ಅಲಿ ಮೌಲಾಗ | ತಾಯಿ ಕೂತ್ರ ಬಚ್ಚಲದಾಗ ಜಳಕಕ*
*ಹಾಂವ ಒಂದ ತೊಟ್ಟಿಲದಾಗ | ಬಂದ ಚಿತ್ತ ಮೌಲಾನ ಮ್ಯಾಗ*
*ಎಚ್ಚರಾಗಿ ನೋಡುದರೊಳಗ | ಬಂತ ಕಡಿಯಾಕ*
*ಕಸುವ ತೋರಸ್ಯಾರ ಹುಟ್ಟಿದ ನಾಕ ದಿನಕ | ಆಗ ಮೌಲಾ*
*ಮಾಡಿ ಚಾಲಾಕಿ | ಎರಡು ಕೈಬಟ್ಟ ಹಾಂವಿನ ಬಾಯಾಗ ತುರಕಿ*
*ಸೀಳಿ ಒಗದಾರ ಮಾಡಿ ಎರಡು ಪಕರಾಣಕಿ*

ತಾಯಿ ಜಳಕಮಾಡಿ ಎದ್ದು ಬಂದು ನೋಡಿದರೆ ತೊಟ್ಟಿಲ ಎಡಬಲದಲ್ಲಿ ಘಟಸರ್ಪ ಸತ್ತು ಬಿದ್ದೀತ್ತು ಇದನ್ನು ನೋಡಿ ಹ | ಅಲಿಯವರ ತಾಯಿ ಹೆದರಿ ಚಿಟ್ಟನೆ ಚೀರಿದಳು. ನೆರೆಹೊರೆಯವರು ಕೂಡಿದರು. ಪೈಗಂಬರರು ಆಗಮಿಸಿದರು. ಮಗುವಿನ ಧೈರ್ಯ ಮೆಚ್ಚಿ ಮನಸಾರೆ ಹರಿಸಿದರು. ಇಂಥ ಅಸಾಮಾನ್ಯ ಬಾಲಕ ಬೆಳೆದು ದೊಡ್ಡವನಾದ ಶಕ್ತಿಯಲ್ಲಿ ಪ್ರಚಂಡನಾದ ಜಗಜಟ್ಟಿಯಾದ.

ಅಲಿ ಶಿಶುವನ್ನು ನಾಗಕನ್ಯೆಯರು ಸ್ವರ್ಗದಿಂದ ತಂದ ನೀರಿನಿಂದ ಎರೆದ ಸನ್ನಿವೇಶ, ಆ ಶಿಶು ಘಟಸರ್ಪ ಸೀಳಿ ಎಸೆದ ಘಟನೆ – ಎರಡು ಹಿಂದೂ ಪುರಾಣಗಳಿಂದ ಪ್ರಭಾವಿತವಾದವುಗಳು.

ಖಲೀಫರಿಗೆ ಸಂಬಂಧಿಸಿದ ಮೊಹರಂ ಪದಗಳನ್ನು ಒಟ್ಟಾರೆ ಗಮನಿಸಿದಾಗ ಹ | ಅಲಿಯವರನ್ನು ಕುರಿತು ರಚಿತವಾದ ಪದಗಳೇ ಹೆಚ್ಚು ಕಂಡು ಬರುತ್ತವೆ. ಹ | ಅಲಿಯವರಿಗೆ ಸಂಬಂಧಿಸಿದ ಬೀಬಿ ಮಾತಿಮಾ, ಹಸನ ಮತ್ತು ಹುಸೇನರನ್ನು ಕುರಿತು ರಚಿತವಾದ ಪದಗಳು ಕಡಿಮೆ ಪ್ರಮಾಣದಲ್ಲಿ ದೊರೆಯುತ್ತವೆ. ಎರಡನೆಯ ಖಲೀಫ ಹ | ಉಮರರ ಬಗೆಗೆ ಒಂದೇ ಒಂದು ಪದ ದೊರೆಯುತ್ತದೆ. ಆದರೆ ಉಳಿದ ಖಲೀಫರನ್ನು ಆ ಖಲೀಫರಿಗೆ ಸಂಬಂಧಿಸಿದವರನ್ನು ಕುರಿತು ಮೊಹರಂ ಪದಗಳು ಸೃಷ್ಟಗೊಂಡಂತಿಲ್ಲ.

***ಹ| ಮುಹ್ಮದ ಪೈಗಂಬರರಿಗೆ ಸಂಬಂಧಿಸಿದ ಪದಗಳು***

ಮೊಹರಂ ಹಬ್ಬದ ಸಂದರ್ಭದಲ್ಲಿ ಹಾಡುವ ಹ | ಮುಹ್ಮದ ಪೈಗಂಬರರಿಗೆ ಸಂಬಂಧಿಸಿದ ಪದಗಳನ್ನು ಕೂಲಂಕುಷವಾಗಿ ಗಮನಿಸಿದಾಗ ಕೆಲವು ಪದಗಳ ಕಥಾವಸ್ತು ಮುಸ್ಲಿಂ ಪರಂಪರೆಯಿಂದ ಬಂದವುಗಳಾಗಿದ್ದು ಅವು ಕುರಾನ್ ಮತ್ತು ಹದೀಸುಗಳಲ್ಲಿ ದೊರೆಯುತ್ತವೆ. ಇನ್ನು ಕೆಲವು ಪದಗಳು ಹಿಂದೂ ಧರ್ಮದ ಕಥಾವಸ್ತುಗಳ ಪ್ರಭಾವಕೆ ಒಳಗಾಗಿದ್ದು ಕಂಡುಬರುತ್ತದೆ.

ಹ | ಮುಹ್ಮದ ಪೈಗಂಬರರಿಗೆ ಸಂಬಂಧಿಸಿದ ಪದಗಳಲ್ಲಿ – ಮುಹ್ಮದ ಪೈಗಂಬರರು ಹುಟ್ಟಿದಾಗ ಹಾಡಿದ ಜೋಗುಳ ಪದಾ, ನಬಿಸಾಬರು ಮುಟ್ಟಿ ಜಗ್ಗಿದ ಪದಾ, ಮೊಮ್ಮಕ್ಕಳನ್ನು ಹೊತ್ತು ಸಮಾಜು ಮಾಡಿದ ಪದಾ, ಮೆಅರಾಜಕ್ಕೆ ಹೋಗಿಬಂದ ಪದಾ, ಚಂದ್ರನನ್ನು ಹೋಳುಮಾಡಿ ಮತ್ತೆ ಕೂಡಿಸಿದ ಪದಾ, ಪಾದಧೂಳಿಯ ಪವಾಡ ಪದಾ, ಜಾಬೀರನ ಮಕ್ಕಳನ್ನು ಬದುಕಿಸಿದ ಪದಾ – ಮುಂತಾದವು ಪ್ರಮುಖವಾಗಿವೆ.

ಹ | ಮುಹ್ಮದರ ಜನನದ ಕುರಿತು ಒಂದು ಪದ ಹೀಗಿದೆ. ಇದಕ್ಕೆ ಮೆಣಸಗಿ ರುದ್ರಗೌಡ ಪಾಟೀಲರ ಅಂಕಿತವಿದೆ. ಆದ್ದರಿಂದ ಅವರು ಅದನ್ನು ಬರೆದಿರಬೇಕು.

ಮಕ್ಕಾ ಪಟ್ಟಣದಲ್ಲಿ ಹ | ಮುಹ್ಮದ ಪೈಗಂಬರರು ಹ | ಬೀಬಿ ಅಮೀನಾ ಅವರ ಪುಣ್ಯಗರ್ಭದಿಂದ ಜನ್ಮತಾಳಿದರು. ಆಗ ಆರು ತಾಸು ರಾತ್ರಿಯಾಗಿತ್ತು ಗಂಧರ್ವರು ದೇವಕನ್ಯೆಯರು ಸ್ವರ್ಗದಿಂದ ನೀರು ತಂದು ಬಾಣಂತಿಗೆ ಎರೆದರು ಮತ್ತಿನ ತೊಟ್ಟಿಲಕಟ್ಟಿ ನಬಿಸಾಹೇಬರನ್ನು ಮಲಗಿಸಿ ಜೋಗುಳ ಹಾಡಿದರು.

***ಜೋ ಜೋ ಚೈತುನ್ನಬಿಕೋ ಜೋ ಜೋ***
***ಅಲ್ಲಾಕು ಪ್ಯಾರೆ ಪೈಗಂಬರಿ ನಬಿ ನೂರೇ ಕು ಜೂಲ ಜೂಲಾರೇ ಜೋ ಜೋ***
***ಏಳು ಲೋಕಕ್ಕೆ ಅಧಿಪತಿ ನೀನು ಶಿವನ ಕರುಣದಿಂದ ಹುಟ್ಟಿಬಂದವನೋ***
***ಜಗದ ಗುರುವಿನಂತೆ ನಬಿಸಾಹೇಬನೋ***
***ನಿನ್ನ ಜನ್ಮದ ನಾಮ್ಧೆಸರು ಮಹ್ಮದ ಹೌದೇನೋ ಜೋ ಜೋ***

ಇಲ್ಲಿ ದೈವಿ ಪುರುಷರು ಅವತರಿಸುವದು ಶಿವನ ಕಾರುಣ್ಯ ಕಿರಣದಿಂದ ಎಂದು ಭಾವಿಸಿದ ಕವಿ ಹ | ಮುಹ್ಮದ ಪೈಗಂಬರರನ್ನು ಅದೇ ಭಾವನೆಯಲ್ಲಿ ಸ್ವೀಕರಿಸಿದ್ದಾನೆ. ಇಂಥವರ ಜನನ ಸಾಮಾನ್ಯವಾದುದೆಂದು ಹೇಳಲು ಆತ ಒಪ್ಪದೇ 'ಏಳು ಲೋಕಕ್ಕೆ ಅಧಿಪತಿ ನೀನು ಶಿವನ ಕರುಣದಿಂದ ಹುಟ್ಟಿಬಂದವನು' ಎಂದು ವರ್ಣಿಸಿ ಸ್ವರ್ಗಲೋಕದಿಂದ ದೇವಕನ್ಯೆಯರನ್ನು ಕರೆಸಿ ಜನ್ಮೋತ್ಸವ ಮಾಡಿಸಿದ್ದಾನೆ.

ದಿನ ದಿನಕ್ಕೆ ಬಿದಿಗೆಯ ಚಂದ್ರನಂತೆ ಬೆಳೆದ ಮುಹ್ಮದರು ಎಂಟು ವರ್ಷದವರಾಗುವ ಹೊತ್ತಿಗೆ ತಂದೆ ತಾಯಿ ಅಜ್ಜಂದಿರನ್ನು ಕಳೆದುಕೊಂಡು ಅನಾಥರಾದರು. ಕಾಲಕ್ರಮೇಣ ಮನೆತನ ಉದ್ಯೋಗವಾದ ವ್ಯಾಪಾರವನ್ನು ಕೈಕೊಂಡು ಜೀವನ ಸಾಗಿಸತೊಡಗಿದರು.

ಹ | ಮುಹ್ಮದ ಪೈಗಂಬರರು ಮದೀನೆಗೆ ಪಲಾಯನ ಕೈಗೊಳ್ಳುವ ಒಂದು ವರ್ಷ ಮೊದಲು ರಜ್ಜಬ ತಿಂಗಳ ೨೭ನೆಯ ರಾತ್ರಿ ಆಕಾಶಾರೋಹಣದಂತಹ ಚಮತ್ಕಾರಪೂರ್ಣ ಸಾಂಕೇತಿಕ ಅರ್ಥವುಳ್ಳ ಭವಿಷ್ಯ ಸೂಚಕ ಘಟನೆಯೊಂದು ಸಂಭವಿಸಿತು. ಈ ಪವಾಡ

ಸದೃಶ್ಯ ಘಟನೆ ಅವರ ಬದುಕಿನಲ್ಲಿ ನಡೆದಂತೆ ಮುಸ್ಲೀಮರೆಲ್ಲರೂ ನಂಬುತ್ತಾರೆ.೮[7] ಕುರಾನೇ ಷರಿಫದಲ್ಲಿ ಕುರಾನೇ ಷರೀಪರಲ್ಲಿ ಹದೀಸ ವಾಣಿಗಳಲ್ಲಿ ಹಾಗೂ 'ಮಿಶ್ಕತ್ ಉಲ್ ಮಸಾಬಿಹ' ಎಂಬ ಕೃತಿಯಲ್ಲಿ ಮೇ ಅರಾಜಿನ ಉಲ್ಲೇಖವಿದೆ.೯[8].

ಹ | ಮುಹ್ಮದ ಪೈಗಂಬರರ ಜೀವನದಲ್ಲಿ ನಡೆದ ಅಘಟಿತ ಘಟನೆಗಳನ್ನು ಸಹಿಸದ ಜನ ಅದು ಕಣ್ಕಟ್ಟು ವಿದ್ಯೆಯೆಂದು ಬಗೆದು ಅವರನ್ನು ಪರೀಕ್ಷಿಸಲು ಮುಂದಾದರು. ಪೈಗಂಬರರ ಕೀರ್ತಿಯನ್ನು ಸಹಿಸದ ಕುಟಿಲ ಅಬೂಜಹಲ್ ಮತ್ತು ಇತರರು ಮುಹ್ಮದ ಪೈಗಂಬರರ ಬಳಿ ಬಂದು ಕಣ್ಕಟ್ಟು ವಿದ್ಯೆಯಿಂದಾ ನೀವು ಜನರನ್ನು ಮರುಳು ಮಾಡುತ್ತಿರುವಿರೆಂದು ಆಪಾದಿಸಿ ಹೀಗೆ ಸವಾಲು ಹಾಕಿದರು :

*ಬಿಟ್ಟ ಈ ಭೂಮಿಮ್ಯಾಗ ತೋರಿಸಬೇಕ ಆಕಾಶ ಮ್ಯಾಗ*
*ಇಲ್ಲಂದರ ಜಲಮಾ ಉಳಿಯಾಕಿಲ್ಲಾ*
*ಎರಡು ತುಣುಕುಮಾಡಿ ಚಂದ್ರಗ ರಸೂಲಿಲ್ಲಾ*
*ಕಾಣೂಹಾಂಗ ಸರೂ ಜನರಕ್ಕೆಲ್ಲಾ | ಶರಣರಾ ನೆನೆದಾರ ಶಂಕರಾ*
*ನಮಾಜಮಾಡಿ ವರವಬೇಡಿ ಚಂದರಗ ಸನ್ನಿಯ ಮಾಡಿ*
*ಆದೀತ ಎರಡು ತುಕಡಿ ಅಜೂಜಹಲ್ ಅಂತಾನ ನೋಡಿ*
*ಮತ್ತ ಕೂಡಸರಿ ರಸೂಲಿಲ್ಲಾ | ಚಂದರಗ ಒಂದ ಆಗಂದ್ರ ರಸೂಲಿಲ್ಲಾ*

ಸವಾಲಿಗೆ ಉತ್ತರ ದೊರೆತರೂ ಅಬೂಜಹಲ್ ಒಪ್ಪಿಕೊಳ್ಳಲಿಲ್ಲ. ನೋಡಿದ ಜನರೆಲ್ಲಾ ಹೇಳಿದರೂ ಕೇಳದೆ ತನ್ನ ಮೊಂಡುವಾದವನ್ನೇ ಮಂಡಿಸಿದನು. ಆದರೆ ಅಬೂಜಹಲ್‌ನೊಂದಿಗೆ ಬಂದ ಯಹೂದಿ ಪೈಗಂಬರರ ಸತ್ಯವನ್ನು ತಿಳಿದು ಕಲ್ಮಾ ಓದಿದನು.

ಹ | ಮುಹ್ಮದ ಪೈಗಂಬರರ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುವ ಚಂದ್ರನನ್ನು ಹೋಳುಮಾಡಿ ಕೂಡಿಸಿದ ಈ ಘಟನೆ ಹದೀಸದಲ್ಲಿ ಕೂಡ ಉಲ್ಲೇಖವಾಗಿದೆ.

*ಪೂರ್ವದ ಪೈಗಂಬರರಿಗೆ ಸಂಬಂಧಿಸಿದ ಪದಗಳು*

ಮೊಹರಂ ಪದಗಳಲ್ಲಿ ಹ | ಮುಹ್ಮದ ಪೈಗಂಬರರಿಗೆ ಸಂಬಂಧಿಸಿದ ಪದಗಳಷ್ಟೇ ಮಹತ್ವಪೂರ್ಣ ಪದಗಳೆಂದರೆ ಅವರಿಗಿಂತಲೂ ಪೂರ್ವದ ಪೈಗಂಬರರಿಗೆ ಸಂಬಂಧಿಸಿದ ಪದಗಳು. ಪೈಗಂಬರರ ಪರಂಪರೆಯಲ್ಲಿ ಹ | ಆದಮ್ ಅವರು ಪ್ರಥಮ ಮಾನವರು ಮತ್ತು ಪ್ರಥಮ ಪೈಗಂಬರರೆಂಬ ನಂಬಿಕೆ ಮುಸ್ಲೀಮರಲ್ಲಿದೆ. ಅವರ ತರುವಾಯ ಇಸ್ಲಾಂ ಧರ್ಮಕ್ಕೆ ಪರಿಪೂರ್ಣತೆ ತರಲು ಒಂದು ಲಕ್ಷ ಇಪ್ಪತ್ನಾಲ್ಕು ಸಾವಿರ ಪೈಗಂಬರರು ಜನ್ನ ತಾಳಿದರು. ಹ | ಮಹ್ಮದ ಪೈಗಂಬರರೇ ಅವರಲ್ಲಿ ಕೊನೆಯವರು. ಇವರೆಲ್ಲರೂ ತಮ್ಮ ತಮ್ಮ ಜನಾಂಗದವರಿಗೆ ತಮ್ಮ ತಮ್ಮ ಕಾಲದಲ್ಲಿ ಇಸ್ಲಾಂ ಧರ್ಮದ ತತ್ವಗಳನ್ನು ಬೋಧಿಸಿದರೆಂದು ಕುರಾನ್‌ದಲ್ಲಿರುವ ದೇವವಾಣಿಗಳಿಂದ ತಿಳಿದುಬರುತ್ತದೆ.೧೦[9] ಈ ಪೈಗಂಬರರಲ್ಲಿ ಕೆಲವರನ್ನು ಕುರಿತು ಮೊಹರಂ ಪದಗಳು ರಚನೆಗೊಂಡಿವೆ.

ಪೂರ್ವದ ಪೈಗಂಬರರಿಗೆ ಸಂಬಂಧಿಸಿದ ಪದಗಳಲ್ಲಿ – ಹ | ಅಯ್ಯೂಬರಿಗೆ ಇಬ್‌ಲೀಷ ಕಾಡಿದ ಪದಾ, ಹ | ಸುಲೇಮಾನರ ಅಂತರಗಮನದ ಪದಾ, ಹ | ಈಸಾ ಪೈಗಂಬರರು ಮಾಡಿದ ಪವಾಡ ಪದಾ, ಹ | ಈಸಾರು ಡೋಗಿ ಬದುಕಿಸಿದ ಪದಾ, ಜೇಲಿನಿಂದ ಪಾರಾದ ಪದಾ, ಹ | ಶಮವೂನ ಪೈಗಂಬರರಿಗೆ ಒದಗಿದ ಕಷ್ಟ, ಸಾರಾ ಅವರ ಪತಿವೃತಾ ಭಕ್ತಿಯ ಪದಾ – ಮುಂತಾದವು ಮುಖ್ಯ ಪದಗಳಾಗಿವೆ.

ಹ | ಅಯ್ಯೂಬ ಪೈಗಂಬರರ ಜೀವನದ ಸುತ್ತ ಜನಪದ ಕವಿಗಳು ಪದಗಳನ್ನು ಹೆಣೆದಿರುವರು ಅವುಗಳಲ್ಲಿ ಹ | ಅಯ್ಯೂಬರಿಗೆ ಇಬಲೀಷ ಕಾಡಿದ ಪದವು ಒಂದು. ಇದನ್ನು ನವಲಗುಂದ ತಾಲ್ಲೂಕ ಸೊಟಕನಹಾಳ ಗ್ರಾಮದಲ್ಲಿ ಹಾಡುತ್ತಾರೆ. ಮಹಾಪುಣ್ಯವಂತರಾದ ಹ |

ಅಯ್ಯೂಬರಿಗೆ ಧನ-ದೌಲತ್ತಿಗೇನು ಕಡಿಮೆಯಿರಲಿಲ್ಲ. ಮಕ್ಕಳು ಕೂಡ ಅವರ ಮನಸ್ಸಿಗೆ ತಕ್ಕಂತೆ ನಡೆದುಕೊಳ್ಳುವವರಾಗಿದ್ದರು. ಇಷ್ಟಿದ್ದರೂ ಅಲ್ಲಾಹನನ್ನು ಅವರು ಮರೆತವರಲ್ಲ. ಇಂಥವರ ಪಂಥ ಕೆಡಿಸಲು ಇಬಲೀಸ್ ಕಾಡಿಸಿತೊಡಗಿದನು.

ಆಕಸ್ಮಿಕವಾಗಿ ಬೆಂಕಿಹತ್ತಿ ಅವರ ಮನೆಸುಟ್ಟುಹೋಯಿತು. ಆನೆ ಕುದುರೆಗಳು ಭಸ್ಮವಾದವು. ಬೀಬಿ ರಹಿಮಾ ಒಬ್ಬರನ್ನು ಬಿಟ್ಟು ಉಳಿದ ಮೂರು ಜನ ಹೆಂಡಂದಿರು ಸ್ವರ್ಗಸೇರಿದರು. ಇದ್ದ ಏಳು ಮಂದಿ ಮಕ್ಕಳು ತೀರಿಕೊಂಡರು. ಇಷ್ಟೆಲ್ಲ ಕಷ್ಟನಷ್ಟವಾದರೂ 'ಹ್ಯಾಂಗ ಇಡತಾನ ಶಿವ ಹಾಂಗ ನಡಿಯಬೇಕ' ಎನ್ನುವ ಅಚಲ ನಿಷ್ಠೆ ಅಯ್ಯೂಬ ಶರಣರದು. ಆದರೂ ಇಬ್‌ಲೀಷನಕಾಟ ನಿಲ್ಲಲಿಲ್ಲ :

*ಶರಣರ ಕಾಲಿಗೆ ಹುಣ್ಣಾಗಿ ಬಹುಬ್ಯಾನಿ ಮಾಡಿತು ಜೀವಕ*
*ಏನು ಹಚ್ಚಿದರೂ ಮಾಯಲಿಲ್ಲ ಹೆಚ್ಚಾದಿತು ದಿನದಿನಕ*
*ಸುರುವಾತು ಮೈತುಂಬ ಹಬ್ಬುವುದಕ*
*ಸುಲದೀತೋ ಎಲ್ಲ ಮೈಯಾನ ತೊಗಲು ಉಳಿಯಲಿಲ್ಲ ತಟಕ*
*ಕೀವ ರಕ್ತ ಸೋರಿ ಹುಳಬಿದ್ದಾವು ಮೈ ಹತ್ತಿ ನಾರುದಕ*
*ಅವನ ಹೆಂಡತಿ ಮಹಾಗುಣವತಿ ಹೇಸಲಿಲ್ಲೋ ಅದಕ*
*ಹಗಲಿ ರಾತರಿ ಬೆಳತನಕ ಗಂಡನ್ನ*
*ಜೀಂವದಕ್ಕಿಂತ ಹೆಚ್ಚು ಮಾಡ್ಯಾ.ಳೋ ಜೋಪಾನ*
*ಊರಮಂದಿ ಬೇಜಾರು ಮಾಡ್ಯಾರೋ ಮೈನಾರುದಕ*
*ಹೊರಕ ಹಾಕಿದಾರೋ ಊರಿಂದ ಅಯ್ಯೂಬನ ನಸೀಬಕ*

ಉಪಾಯವಿಲ್ಲದೆ ಗಂಡನ ಕರೆದುಕೊಂಡು ಏಳೂರು ತಿರುಗಿದರೂ ಸ್ವಲ್ಪ ಜಗ ಸಿಗಲಿಲ್ಲ. ಹೆಂಡತಿ ಗಂಡನೊಂದಿಗೆ ಅಡವಿಯೊಳು ವಾಸಮಾಡತೊಡಗಿದಳು. ಅಯ್ಯೂಬರು ಮಾತ್ರ ತಪ್ಪದೆ ಐದುಹೊತ್ತು ನಮಾಜ ಮಾಡುತ್ತಿದ್ದರು. ಒಮ್ಮೊಮ್ಮೆ ಶಕ್ತಿ ಸಾಲದೇ ಇದ್ದಾಗ ಪತ್ನಿಯ ತಲೆಗೂದಲು ಹಿಡಿದು ಅದರ ಆಶ್ರಯದಿಂದ ನಮಾಜು ಸಲ್ಲಿಸುತ್ತಿದ್ದರು. ಹ | ಬೀಬಿ ರಹಿಮಾನರು ಸಮೀಪದ ಹಳ್ಳಿಗೆ ಹೋಗಿ ಕೂಲಿ ಮಾಡಿ ರೊಟ್ಟಿ ತರುತ್ತಿದ್ದರು. ತಂದಿದ್ದನ್ನು ಶರಣರಿಗೆ ಉಣಿಸಿ ತಾವೂ ಉಣ್ಣುತ್ತಿದ್ದರು. ಇಬ್‌ಲೀಷನ ಕಾಡಾಟ ಮತ್ತೆ ಮುಂದುವರೆಯಿತು.

*ತಡವಿಲ್ಲದೆ ಗಡ ಬಂದಾನೋ ಇಬಲೀಷಾಗ ಅಯ್ಯೂಬನಂತೇಕ*
*ಇಲ್ಲದೊಂದು ಮಾಡಿ ಹೇಳತಾನೋ ಮಲಕ*
*ನಿಮ್ಮ ಹೆಂಡತಿ ಬಾಳ ಪರಿಣಿತಳು ತುಡುಗ ಮಾಡಲಾಕ*
*ಸಿಕ್ಕ ಳಿಂದು ಪುರಮಾಸಿ ತಲೆಕತ್ತರಿಸಿ ಮಾಡ್ಯಾರ ಮುಂಡಕ*
*ಕೇಳಿ ಅಯ್ಯುಬಗ ಸಿಟ್ಟಬಂತು ಹೆಣತಿ ಕೃತ್ಯೇಕ.*

ಅದೇ ಕ್ಷಣದಲ್ಲಿ ಜಿಬರಾಯಿಲರು ಬಂದಿಳಿದು ಹ | ಅಯ್ಯೂಬರಿಗೆ ನಿಜ ಸಂಗತಿಯನ್ನು ಅರುಹಿದರು. ಹ | ಬೀಬಿ ರಹಿಮಾನರಿಗೆ ಸ್ವರ್ಗದಿಂದ ನೀರು ತಂದು ಕೊಟ್ಟರು. ಜಳಕ ಮಾಡಿದ ನಂತರ ಎಲ್ಲವೂ ಸುಖಾಂತವಾಯಿತು. ಈ ಪದದಲ್ಲಿ ಹ | ಬೀಬಿ ರಹಿಮಾನರ ಪತಿಭಕ್ತಿ ಸಂಪದವನ್ನು ಹ | ಅಯ್ಯೂಬರ ವೃತನಿಷ್ಠೆಯನ್ನು ಹೇಳಿರುವ ಜೊತೆಗೆ ಅವರು ಅನುಭವಿಸಿದ ನರಕಯಾತನೆಯನ್ನು ಕೇಳುಗರ ಕಣ್ಣು ಹನಿಗೂಡುವಂತೆ ವರ್ಣಿಸಲಾಗಿದೆ. 'ಎಷ್ಟು' ಮಾಡಿದರೂ ಇಬ್‌ಲೀಸನ ಆಟ ನಡೆಯಲಿಲ್ಲ.' ಎನ್ನುವ ಕವಿಯ ಮಾತು ಸತ್ಯಕ್ಕೇ ಕೊನೆಗೆ ಜಯವಾಗುವದೆಂಬುದರ ಸೂಚನೆಯಾಗಿದೆ.

ಇವಲ್ಲದೆ – ಶಿವನಾಗಬಯಸಿದ ಫರವೂನನಿಗೆ ಬುದ್ಧಿಕಲಿಸಿದ ಮೂಸಾಹಾರೂನರ ಪದಾ, ಆದಮ್ ಪೈಗಂಬರರು ಭೂಮಿ ಬಿತ್ತಿದ ಪದಾ, ಇಬ್ರಾಹಿಮ್ ಕಲಿಲುಲ್ಲಾರು ಕುರ್‌ಬಾನಿ ನೀಡಿದ ಪದಾ, ಯುನೂಸ್ ಪೈಗಂಬರರ ಪದಾ, ದಾವೂದ ಪೈಗಂಬರರು ನ್ಯಾಯ

ನಿಗದಿಸಿದ ಪದಾ – ಮೊದಲಾದವು ಪೂರ್ವದ ಪೈಗಂಬರರ ಜೀವನ ಚಿತ್ರಣ ಹಾಗೂ ಅವರು ತೋರಿದ ಪವಾಡದ ಘಟನೆಗಳನ್ನು ನಿರೂಪಿಸುವವು.

*ಮಾಬುಸುಬಾನಿ ಮತ್ತು ಇತರ ಸೂಫಿಸಂತರಿಗೆ ಸಂಬಂಧಿಸಿದ ಪದಗಳು*

ಸೂಫಿ ಸಿದ್ಧಾಂತವನ್ನು ವಿಶ್ವದ ಮೂಲೆ ಮೂಲೆಗೂ ಮುಟ್ಟಿಸಿದ ಸಂತರಲ್ಲಿ ಮಾಬುಸುಬಾನಿ, ಜಲಾಲುದ್ದೀನ್ ರೂಮಿ, ಖ್ವಾಜಾ ಮೈನುದ್ದೀನ್ ಚಿಸ್ತಿ, ಹಸನ ಬಸರಿ, ರಾಬಿಯಾ ಬಸರಿ ಖ್ವಾಜಾ ಬಂದಾನವಾಜ, ಖಾದಿರಷಾವಲಿ – ಮುಂತಾದವರು ಪ್ರಮುಖರು. ಇಂಥವರ ಜೀವನ ಚರಿತ್ರೆ ಹಾಗೂ ಇವರು ಮೆರೆದ ಪವಾಡಗಳ ಬಗೆಗೆ ಕೆಲವು ವಿವರಗಳು ಮೊಹರಂ ಪದಗಳಲ್ಲಿ ಬರುತ್ತಿವೆಯಾದರೂ ಹ | ಮಾಬುಸುಬಾನಿಯವರಿಗೆ ಸಂಬಂಧಿಸಿದ ಪದಗಳೇ ಹೆಚ್ಚಾಗಿ ದೊರೆಯುತ್ತವೆ. ಕಾಮುಕ ಹೆಣ್ಣಿಗೆ ಕ್ಷಮಿಸಿದ ಮಾಬುಸುಬಾನಿ, ಸುಂದರಿಯ ಮಾನ ಕಾಪಾಡಿದ ಮಾಬುಸುಬಾನಿ, ಏಳು, ಮಕ್ಕಳ ಫಲಾ ನೀಡಿದ ಮಾಬುಸುಬಾನಿ, ಸತ್ತ ಮದುಮಗನನ್ನು ಬದುಕಿಸಿದ ಪದಾ, ಅಬೂ ಸ್ವಾಲಿಹ ಅವರ ಸೇಬು ಹಣ್ಣಿನ ಪದಾ, ಹಸನ ಬಸರಿ ಮತ್ತು ಚೋಳಿನ ಪದಾ, ರಾಬಿಯಾ ಬಸರಿ ರೊಟ್ಟಿದಾನ ಮಾಡಿದ ಪದಾ – ಇತ್ಯಾದಿ ಮುಖ್ಯವಾದ ಪದಗಳಾಗಿವೆ.

ಹ | ಮುಹ್ಮದ ಪೈಗಂಬರರ ಅಳಿಯಂದಿರರಾದ ಹ | ಅಲಿ ಅವರ ವಂಶಸ್ಥರಾಗಿರುವ ಹ | ಮಾಬುಸುಬಾನಿಯವರ ಮೂಲ ಹೆಸರು ಶೇಖ್ ಅಬ್ದುಲ್‌ಖಾದಿರ್ ಜಿಲಾನಿ ಹಸ್ಸೈನುಲ್ ಹುಸೇನಿ, ಇರಾಕ್ ದೇಶದ ಜಿಲಾನಿ ಗ್ರಾಮದಲ್ಲಿ ಕ್ರಿ.ಶ. ೧೦೭೮ರಲ್ಲಿ ಜನಿಸಿದ ಮಾಬುಸುಬಾನಿ ಅವರನ್ನು ಜನಸಾಮಾನ್ಯರಿಗಾಗಿ ಅಸಂಖ್ಯಾತ ಪವಾಡಗಳನ್ನು ಮೆರೆದ ಪವಾಡ ಪುರುಷರೆಂದೇ ನಂಬಲಾಗಿದೆ. ಮಕ್ಕಳಿಲ್ಲವೆಂದು ಹಲಬುವ ಹೆಣ್ಣು ಮಗಳೊಬ್ಬಳಿಗೆ ಮಾಬುಸುಬಾನಿಯವರು ಪುತ್ರಫಲಕೊಟ್ಟು ಬದುಕು ಬಂಗಾರ ಮಾಡಿದ ಪದವೊಂದು ಹೀಗಿದೆ.

ಒಬ್ಬ ಹೆಣ್ಣು ಮಗಳು ಬಂಜೆಯ ಶಬುದ ಹೊರಲಾರದೆ ಸಮಾಜದ ಕಟುನುಡಿ ಸಹಿಸಲಾರದೆ ಶರಣರ ಸನ್ನಿದಾನಕ್ಕೆ ಬಂದು ಮಕ್ಕಳ ಫಲಬೇಡಿ ಅವರ ಪಾದ ಹಿಡಿದಳು :

*ಮೆಹಬೂಬ ಸ್ವಂತಾ ತಮ್ಮ ಕೈಮುಟ್ಟಿ ಹಸ್ತಾ*
*ಕೊಟ್ಟ ವಿಭೂತಿ ಕಟ್ಟಿಗೊ ಕೊರಳಾಗ ತಾಯಿತಾ*
*ಕಳಿಸ್ಯಾರೋ ತುರತಾ ಬಾಲಿಗೆ ಮಾಡಿ ಸನಮಂತಾ*
*ಪತಿವ್ರತಾ ಹೋದಾಳೊ ನಕ್ಕೊಂತಾ*
*ಶರಣರ ಭಾಷೆ ಆಗಲಿಲ್ಲ ಹುಸಿ*
*ಹಡದಾಳೋ ಏಳುಮಕ್ಕಳ ಒಂದೊಂದ ಎಣಿಸಿ*
*ಸತ್ಯವಂತಕೊಟ್ಟ ಹುಟ್ಟಿಸ್ಯಾನೋ ಭಗವಂತಾ*
*ಕರಾಮತ್ ಮೆಹಬೂಬ ಶರಣರದು ಪ್ರಖ್ಯಾತಾ.*
*ಇಸ್ಲಾಂ ತತ್ವ–ಮಹಿಮಾ ಸಾರುವ ಪದಗಳು*

ಕರ್ಬಲಾ ಕಾಳಿಗ ನಡೆದುದೇ ಇಸ್ಲಾಂ ಧರ್ಮ ಮತ್ತು ತತ್ವಗಳ ರಕ್ಷಣೆಗಾಗಿ ಅಂತೆಯೇ ಮೊಹರಂ ಪದಗಳಲ್ಲಿ ಧಾರ್ಮಿಕ ಪದಗಳ ಸಮಾವೇಶವಾಗಿದೆ. ಇಸ್ಲಾಂ ಧರ್ಮ ನಿಂತಿರುವುದು ನಂಬುಗೆಯ ಮೇಲೆ ಇದನ್ನು 'ಇಮಾನ್' ಎಂದು ಕರೆಯುವರು. ಕುರಾನೇ ಷರೀಫದಲ್ಲಿ ನಂಬುಗೆ ಕುರಿತು ವಿವರಗಳು ಬರುವಂತೆ ಕಲಿಮಾ, ನಮಾಜ, ರೋಜಾ, ಜಕಾತ್ ಹಾಗೂ ಹಜ್ಜಯಾತ್ರೆಗಳ ಬಗ್ಗೆಯೂ ವಿವರಿಸಲಾಗಿದೆ. ನಂಬುಗೆ ಮತ್ತು ಪಂಚಸೂತ್ರಗಳ ನಿರೂಪಣೆ ಮೊಹರಂ ಪದಗಳಲ್ಲಿ ಬರುತ್ತದೆ. ಕಥೆಯೊಂದರ ಮೂಲಕವೇ ತತ್ವ ನಿರೂಪಣೆ ಬಂದಿರುವುದು ಇಲ್ಲಿ ಸಾಮಾನ್ಯ.

ಇಸ್ಲಾಂ ತತ್ವ ಮಹಿಮಾ ಸಾರುವ ಪದಗಳಲ್ಲಿ – ಬಿಸ್ಮಿಲ್ಲಾದ ಮಹತ್ವ ಹೇಳುವ ಪದಾ, ಕಲಿಮಾದ ಮಹತ್ವ ಹೇಳುವ ಪದಾ, ನಮಾಜಿನ ಮಹತಿ ಹೇಳುವ ಪದಾ, ಹಜ್‌ಯಾತ್ರೆಯ ಪದಾ, ಕುರಾನ್‌ದ ಮಹತ್ವ ಹೇಳುವ ಪದ, ಸತ್ತಾಗ ಅಳಬಾರದೆನ್ನುವ ಪದಾ, ಶಬ್ದಾದ ಅರಸನ ಪದಾ, ದಜ್ಜಾಲನ ಮರಣದ ಪದಾ, ಅಬುಶ್ಯಾಮಾನ ಪದಾ, ನಮರೂದ ಅರಸನ ಗರ್ವಭಂಗದ ಪದಾ – ಮುಂತಾದವು ಪ್ರಮುಖವಾಗಿವೆ.

ಇಸ್ಲಾಂ ಧರ್ಮದ ಪಂಚಸೂತ್ರಗಳಲ್ಲಿ ಕೊನೆಯದು ಹಜ್‌ಯಾತ್ರೆ ಅರೇಬಿಯಾದ ಮುಕ್ಕಾ ಮತ್ತು ಮದೀನಾ ಪಟ್ಟಣಗಳಿಗೆ ಯಾತ್ರೆ ಮಾಡಿ ಕಾಬಾ ಸಂದರ್ಶಿಸಿ ವಿಧಿವತ್ತಾದ ಪ್ರಾರ್ಥನೆ ಸಲ್ಲಿಸುವುದೇ ಹಜ್. ಹಜ್‌ಗೆ ಹೋಗಿ ಬಂದವರು ಹಾಜಿಗಳು. ಹಜ್‌ಯಾತ್ರೆ ಮುಸ್ಲಿಮರ ಜೀವನದಲ್ಲಿ ಪವಿತ್ರವಾದ ಕಾರ್ಯ ಹಜ್‌ಯಾತ್ರೆಯಲ್ಲಿ ಕಾಬಾ ಸಂದರ್ಶನ ಬಹಳ ಮುಖ್ಯ.೧೧[10] ಇಂಥ ಪವಿತ್ರ 'ಕಾಬಾ'ದ ಬಗೆಗೆ ಅಪನಂಬಿಕೆ ನಿಂದೆ ಸಲ್ಲದು. ಈ ಆಶಯ ಸ್ಪಷ್ಟಪಡಿಸುವ ಮೊಹರಂ ಪದವೊಂದು ಇಂತಿದೆ.

ಪ್ರತಿವರ್ಷ ಜಿಲ್‌ಹಜ್ ತಿಂಗಳ ಮಕ್ಕಾಯಾತ್ರೆಗೆ ಹೋಗುವ ಮುಸಲ್ಮಾನರನ್ನು ಕಂಡು ಅಬ್ರಾಹಮ್ ಅರಸನು ತನ್ನ ದೇಶದಲ್ಲಿಯೇ ಹಜ್‌ಯಾತ್ರೆ ನಡೆಯುವಂತೆ ಮಾಡಲು ಬಯಸಿ ಸಾಕಷ್ಟು ಹಣ ಸುರಿದು ಮತ್ತೊಂದು ಕಾಬಾ ಕಟ್ಟಿಸಿದನು. ಮಕ್ಕೆಗೆ ಹೋಗುವುದನ್ನು ಬಿಟ್ಟು ಇಲ್ಲಿ ಹಜ್ ಮಾಡಬೇಕೆಂದು ಆಜ್ಞಾಪಿಸಿದನು. ಯರೊಬ್ಬರು ಅವನ ಆಜ್ಞೆಗೆ ಕಿವಿಗೊಡಲಿಲ್ಲ. ಕರಕರ ಹಲ್ಲುಕಡಿಯುತ್ತ ಮಕ್ಕೆಯಲ್ಲಿರುವ ಕಾಬಾದ ಕಟ್ಟಡ ಕೆಡುವಲು ಸಿದ್ಧನಾದನು.

ಅಬ್ರಹಾಮನ ಕಾರ್ಯವೈಖರಿ ಕಂಡ ಸೃಷ್ಟಿಕರ್ತ 'ಕಾಬಾ' ರಕ್ಷಣೆಮಾಡಲು ಸಾವಿರಗಟ್ಟಲೇ 'ಅಬಾಬಿಲ' ಎಂಬ ಪಕ್ಷಿಗಳನ್ನು ಕಳಿಸಿಕೊಟ್ಟ ಒಂದೊಂದು ಪಕ್ಷಿಯ ಬಳಿ ಅಸಾಧಾರಣ ಶಕ್ತಿಯ ಮೂರು ಮೂರು ಹರಳುಗಳಿದ್ದವು.

*ಚನ್ನಂಗಿ ಪ್ರಕಾರ ಒಂದು ಬಾಯಾಗ ಎರಡು ಕಾಲಾಗ*
*ಎರಡು ಒಗುತ್ತಿದ್ದವು ಒಗದಾಂಗ ಬಂದೂಕ ಗುಂಡಾ*
*ನೆತ್ತಿಗೆ ಬಡದು ಬೆನ್ನಲ್ಲೇ ಪಾರಾಗಿ ಹೋಗುವ ಪ್ರಾಣಾ*
*ಇದರಂತೆ ಅಬ್ರಾಹಮನ ದಂಡು ಸತ್ತಿತ ಹತ್ತಲಿಲ್ಲ ಒಂದು ಕ್ಷಣಾ*
*ನೋಡಿ ಅರಸ ಓಡಿಹ್ವಾದಾ ಕಾಬಾ ಬಿಟ್ಟ*
*ಅಷ್ಟರಲ್ಲಿ ಒಂದ ಬಂತ ಅಬಾಬಿಲ ಅವನ ಮನಿತನಾ*
*ಗಾಬಾಗಿ ಅರಸ ಮಂದೀಗೆ ಅಂದಾ ಇದರಂತೆ ಮರಣಾ*
*ಹಳ್ಳ ಒಗೀತ ಅರಸಗ ಅಬಾಬಿಲಾ*
*ನೆತ್ತಿಗೆ ಬಡದು ಸತ್ತಾನ ಅಬ್ರಾಹಮ ಮಾಡಿ ದುರ್ಗುಣಾ*

ಅಲ್ಲಾಹನ ಆಜ್ಞೆ ನೆರವೇರಿಸಲು ಜಿಬ್ರಾಯಿಲರು ಬರುವುದು ಸಾಮಾನ್ಯ ಆದರೆ ಆ ಕಾರ್ಯವನ್ನು 'ಅಬಾಬಿಲ್' ಪಕ್ಷಿಗೆ ವಹಿಸಿ ಅದರ ಹತ್ತರಿರುವ ಹರಳಿಗೆ ಅಸಾಮಾನ್ಯ ಶಕ್ತಿ ಬರಿಸಿ ಧರ್ಮದ ದಾರಿಗೆ ಅಡ್ಡಗಲ್ಲಾಗಿ ನಿಂತ ಅಬ್ರಾಹಮ ಅರಸನನ್ನು ನಾಶಮಾಡಿದುದು ಈ ಪದದ ವಿಶೇಷತೆ. ಈ ಪದ ಕಾಬಾದ ದರ್ಶನದ ಮಹತಿಯನ್ನು ಸೂಚಿಸುವ ಜೊತೆ ಮತ್ತೊಂದೆಡೆ ಕಾಬಾ ಕಟ್ಟಿಸುವುದು ಸಲ್ಲ ಎಂಬ ನಂಬಿಕೆಯನ್ನು ತಿಳಿಸುತ್ತದೆ.

*ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ ಸವಾಲ್–ಜವಾಬ್ ಪದಗಳು*

ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ರಿವಾಯಿತ ಪದಗಳನ್ನು ಹಾಡುವ ಮೇಳಗಳು ಇವೆ. ಈ ಮೇಳಗಳು ಮೊಹರಂ ಹಬ್ಬಕ್ಕಿಂತ ಮೊದಲೇ ತಾಲೀಮು ಮಾಡಲು ಪ್ರಾರಂಭಿಸುತ್ತವೆ. ಉತ್ತಮವಾಗಿ ಹಾಡುವ ತಂಡದವರನ್ನು ಸುತ್ತಮುತ್ತಣ ಹಳ್ಳಿಯವರು ವೀಳೆಯಕೊಟ್ಟು ಆಮಂತ್ರಿಸಿ ಹಾಡಿಸುವರು. ಒಮ್ಮೊಮ್ಮೆ ಒಂದಕ್ಕಿಂತ ಹೆಚ್ಚು ತಂಡದವರನ್ನು ಕರೆಯಿಸಿ ಹಾಡಿಸಿ ಗೆದ್ದ ಮೇಳಕ್ಕೆ

ಬಹುಮಾನ ಕೊಡುವರು. ಹೂಹಾರ ಹಾಕಿ ಗೌರವಿಸುವರು. ಇಂಥ ಸಂದರ್ಭದಲ್ಲಿ ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ ಸವಾಲ್-ಜವಾಬ್ ಪದಗಳನ್ನು ಹಾಡುತ್ತಿದ್ದರೆಂದು ಹೇಳಲಾಗುತ್ತದೆ. ಆದರೆ ಈಗ ಅದು ರೂಢಿಯಲ್ಲಿಲ್ಲ.

ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ ಸವಾಲ್ ಜವಾಬ್ ಪದಗಳು ಪೈಗಂಬರರ ಜೀವನಕ್ಕೆ, ಇಸ್ಲಾಂ ಧರ್ಮಕೆ, ಕರ್ಬಲಾ ಕಾಳಗಕ್ಕೆ, ಖಲೀಫರಿಗೆ ಸಂಬಂಧಿಸಿದ ಕಥಾವಸ್ತುಗಳನ್ನು ಕುರಿತಾಗಿರುತ್ತವೆ. ಸ್ಪರ್ಧೆಗೆ ಬಂದ ಮೇಳಗಳು ಪ್ರಾರಂಭದಲ್ಲಿ ಸಲಾಮಿ ಪದ ಹೇಳಿ ಅನಂತರ ಸವಾಲು ಪದ ಜವಾಬು ಪದ ಹಾಡುವರು. ಹಾಡುಗಾರರು ಮುಮ್ಮೇಳದಲ್ಲಿ ಇಬ್ಬರಿದ್ದರೆ ಹಿಮ್ಮೇಳದಲ್ಲಿ ನಾಲ್ಕೈದು ಜನರಿದ್ದು ನುಡಿಗಳ ಕೊನೆಯ ಸಾಲನ್ನು ಏರುಧ್ವನಿಯಲ್ಲಿ ಹೇಳುವರು.

ಇಸ್ಲಾಂ ಧರ್ಮ ಕುರಿತು ಸವಾಲು-ಜವಾಬು ಪದಗಳಲ್ಲಿ – ಅಯ್ಯುಬರ ಹೆಂಡರ ಹೆಸರು ಹೇಳೋ? ಪದಾ, ಯಾವ ಪೈಗಂಬರರ ಹೆಂಡತಿ ಮೊದಲು ಜಡಿ ಹಾಕ್ಯಾರೋ ಎಂದು ಕೇಳುವ ಪದ – ಇತ್ಯಾದಿಗಳು ಮುಖ್ಯವಾದವು

ಶಬ್ದಾದ ಅರಸನ ಸ್ವರ್ಗದ ಜವಾಬು ಪದಾ ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಪ್ರಸಿದ್ಧವಾಗಿದ್ದು ಅದು ಹೀಗೆ ಮುಕ್ತಾಯವಾಗುತ್ತದೆ.

*ಶಬ್ದಾದನ ಸ್ವರ್ಗ ನಾಲ್ವತ್ತು ಫರಲಾಂಗ ಓದಿ ನೋಡಿಕೋ ಹೋಗಿ*
*ನಾಲ್ಕು ಸಾವಿರ ಗೌಂಡೆರ ಕೂಡಿ ಕಟ್ಟುತಿದ್ದರೋ ತೂಕಾಮಾಡಿ*
*ಒಬ್ಬೊಬ್ಬನ ಕೈಯಾಗ ನೂರುಮಂದಿ ಓಡ್ಯಾಡಿ ದುಡುತ್ತಿದ್ದರೋ ಚನ್ನಾಗಿ*
*ಹನ್ನೊಂದು ವರ್ಷಕ ಪೂರಾ ಸ್ವರ್ಗಾತೋ ನೋಡೋ ತಯ್ಯಾರಾ*

ಮೊಹರಂ ಹಬ್ಬದ ಸಂದರ್ಭದಲ್ಲಿಯಲ್ಲದೆ ಕೆಲವು ಪ್ರಾದೇಶಿಕ ಉರುಸುಗಳಲ್ಲಿ ಈ ಸವಾಲ್-ಜವಾಬ್ ಪದಗಳನ್ನು ಆಗಾಗ ಹಾಡುವುದುಂಟು. ಆಗ ಹಾಡುಗಾರರು ರಿವಾಯಿತ ದಾಟಿಯ ಸವಾಲ್ ಜವಾಬ್ ಪದಗಳ ಜೊತೆಗೆ ಇತ್ತೀಚಿನ ಕವಿಗಳು ರಚಿಸಿದ ಪದಗಳನ್ನು ಹಾಡುವರು. ಯಾವ ಪೈಗಂಬರ ಸತಿಯು ಮೊದಲು ಜಡಿಯ ಹಾಕ್ಯಾರೋ ಎನ್ನುವ ಸವಾಲು ಪದ ಇದಕ್ಕೆ ಒಂದು ಉದಾಹರಣೆಯಾಗಿದೆ. ಪದದಲ್ಲಿ ಬರುವ ಸವಾಲು ಹೀಗಿದೆ :

*ಯಾವ ಪೈಗಂಬರ ಸತಿಯು ಮೊದಲು ಜಡಿಯ ಹಾಕ್ಯಾರೋ ನೀಟಾ*
*ಶಾಸ್ತ್ರ ಹಿಡಿದು ಸವಾಲು ಒಡಿಯೋ ಕಟ್ಟಿ ಇಟ್ಟಂಗಿ ಗಂಟಾ*
*ಒಡೆದು ಒಯ್ಯೋ ಇಲ್ಲಿ ನೋಟಾ ಇಲ್ಲಂದರ ಬೀಳತಾವೋ ಏಟಾ*
*ಸಣ್ಣ ಸವಾಲು ಒಡಿದರ ಕೊಡತೇನಿ ತಿನ್ನಾಕ ಬಿಸ್ಕೀಟಾ*

– ಈ ರೀತಿ ಮುಂಡರಗಿ, ಬಾಗಲಕೋಟೆ ಹಾಗೂ ಇತರ ಪ್ರದೇಶಗಳಲ್ಲಿ ಸವಾಲ-ಜವಾಬ್ ಪದಗಳನ್ನು ಹಾಡುತ್ತಾರೆ.

ಮೊಹರಂ ಸಂದರ್ಭದಲ್ಲಿ ಇಸ್ಲಾಂ ಧರ್ಮ, ತತ್ವ ಅದರಲ್ಲಿ ಆಗಿಹೋದ ಮಹಾಪುರುಷರು, ಕರ್ಬಲಾ ಕಾಳಗ – ಇತ್ಯಾದಿಗಳಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುವ ಜೊತೆಗೆ ಇಸ್ಲಾಮಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುವುದುಂಟು. ಇದಕ್ಕೆ ಮುಖ್ಯಕಾರಣ ಇಸ್ಲಾಮೇತರರೂ ಯಾವ ಭೇದ ಭಾವವಿಲ್ಲದೆ ಮೊಹರಂ ಆಚರಣೆಯಲ್ಲಿ ಭಾಗವಹಿಸುವರು. ಇಸ್ಲಾಮೇತರ ಇಂತಹ ಪದಗಳನ್ನು ೧) ಹಿಂದೂ ಧರ್ಮದ ಭಕ್ತಿ ಪದಗಳು, ೨) ಪೌರಾಣಿಕ ಪದಗಳು ೩) ಐತಿಹಾಸಿಕ ಪದಗಳು ೪) ಸಾಮಾಜಿಕ ಪದಗಳು ೫) ಸವಾಲ್-ಜವಾಬ್ ಪದಗಳು; ಇತರ ಪದಗಳು ಎಂದು ವರ್ಗೀಕರಿಸಬಹುದು. ಈ ಪದಗಳು ಹಿಂದೂ-ಮುಸ್ಲಿಂ ಭಾವೈಕ್ಯದ ಬೆಸುಗೆಯಾಗಿ ಕರ್ನಾಟಕದಲ್ಲಿ ರೂಢಿಯಲ್ಲಿವೆ.

*ಐತಿಹಾಸಿಕ ಪದಗಳು*

ದೇಶದ ಸ್ವಾತಂತ್ರ್ಯಕ್ಕಾಗಿ, ಪರಕೀಯರ ಆಕ್ರಮಣವನ್ನು ತಡೆಯುವುದಕ್ಕಾಗಿ ತಮ್ಮನ್ನು ತಾವು ಅರ್ಪಿಸಿಕೊಂಡ ಐತಿಹಾಸಿಕ ವ್ಯಕ್ತಿಗಳ ಸುತ್ತ ಹೆಣೆದ ಪದಗಳನ್ನು ಮೊಹರಂ ಹಬ್ಬದ ಸಂದರ್ಭದಲ್ಲಿ ಹಾಡುತ್ತಾರೆ. ಈ ಐತಿಹಾಸಕ ವ್ಯಕ್ತಿಗಳಲ್ಲಿ ಇತ್ತೀಚಿನವರೂ ಇದ್ದಾರೆ. ಇಂತಹ ಪದಗಳು ಲಾವಣಿ ಪದಗಳಲ್ಲಿ ಸೇರ್ಪಡೆಯಾದರೂ ಮೊಹರಂ ಸಂದರ್ಭದಲ್ಲಿ ಹಾಡುವುದರಿಂದ ಅವುಗಳನ್ನು ಇಲ್ಲಿ ಎತ್ತಿಕೊಂಡಿದೆ. ಇವುಗಳಲ್ಲಿ – ಸಿಂಧೂರ ಲಕ್ಷ್ಮಣನ ಪದಾ, ನೆಹರೂರ ಮರಣದ ಪದಾ, ದೊಡ್ಡಮೇಟಿ ಅಂದಾನಪ್ಪನವರ ಪದಾ – ಮುಂತಾದವು ಪ್ರಮುಖವಾದವು.

ತಮ್ಮ ಧೈರ್ಯ ಸಾಹಸಗಳಿಂದ ಜನಪದ ಕವಿಗಳ ಎದೆಯನ್ನು ಮುಟ್ಟಿ ತಟ್ಟಿದ ಕೆಲವು ಜನ ವೀರ ಪುರುಷರ ಪದಗಳು ಕನ್ನಡದಲ್ಲಿ ದೊರೆಯುತ್ತವೆ. ಅವರು ಜನಸಾಮಾನ್ಯರಿಂದ ಎದ್ದು ಬಂದವರು  ಅವುಗಳಲ್ಲಿ ಸಿಂಧೂರ ಲಕ್ಷ್ಮಣನ ಪದವೂ ಒಂದು ಮೊಹರಂ ಆಚರಣೆಯ ಸಂದರ್ಭದಲ್ಲಿ ಅದನ್ನು ಹಾಡಲಾಗುತ್ತದೆ.

ಸಿಂಧೂರ ಲಕ್ಷ್ಮಣನ ರೂಪ ಮತ್ತು ಸಾಹಸದ ವರ್ಣನೆ ಮಾಡುತ್ತ ಪದವು ಮುಂದುವರೆಯುತ್ತದೆ. ಅನಂತರ ಲಕ್ಷ್ಮಣನ ಕುಲ, ಸೌಂದರ್ಯ, ಶಕ್ತಿ, ಶೌರ್ಯ ಇತ್ಯಾದಿಗಳನ್ನು ಎಳೆ-ಎಳೆಯಾಗಿ ಬಿಚ್ಚಿಹೇಳುತ್ತಾ ಪದಾ ಮುಂದುವರಿಯುತ್ತದೆ. ಮುಂದೆ ಗೌಡ, ಧನಿ ಮತ್ತು ಸಿಂಧೂರಲಕ್ಷ್ಮಣರ ಮಧ್ಯ ವೈಮನಸ್ಸುಂಟಾಗಿ ಅವರಿಂದ ಲಕ್ಷ್ಮಣನು ಸಿಡಿದು ನಿಂತು ದರೋಡೆ ಮಾಡಲಾರಂಭಿಸುತ್ತಾನೆ. ಇಲ್ಲಿಂದ ಲಕ್ಷ್ಮಣನ ವೀರಜೀವನ ಪ್ರಾರಂಭವಾಗುತ್ತದೆ. ಬ್ರಿಟಿಷ ಸರಕಾರ 'ವಾರಂಟು' ಹೊರಡಿಸಿ ಅವನನ್ನು ಹಿಡಿದು ಜೇಲಿಗೆ ಹಾಕುತ್ತದೆ.

ರಾತ್ರೋರಾತ್ರಿ ಜೇಲುಮುರಿದು ಹೊರಬಿದ್ದ ಲಕ್ಷ್ಮಣನೂ ಅವನ ಸಂಗಡಿಗರೂ ತಮ್ಮ ಬೆನ್ನು ಹತ್ತಿದ ಪೋಲೀಸರಿಗೆ ಕವಣಿಕಲ್ಲು ಬೀಸಿಪಾರಾಗಿ ಮುಧೋಳಕ್ಕೆ ಬರುತ್ತಾರೆ. ಮುಧೋಳ ಸರಕಾರ ಅವರನ್ನು ಹಿಡಿಯಲು ಮಾಡಿದ ಪ್ರಯತ್ನಗಳೆಲ್ಲ ವಿಫಲವಾಗುತ್ತವೆ. ಬ್ರಿಟೀಷ ಸರಕಾರ ಲಕ್ಷ್ಮಣ ಮತ್ತು ಅವನ ಸಂಗಡಿಗರನ್ನು ಹುಡುಕಿ ತರಲು ಪೋಲೀಸರನ್ನು ಕಳುಹಿಸುತ್ತದೆ. ಮಾರುವೇಷದಲ್ಲಿ ಹೊರಟ ಪೋಲೀಸರು ಅಲ್ಲಲ್ಲಿ ಹುಡಕಾಡಿ ಅವರಿವರಿಂದ ವಿಷಯ ಸಂಗ್ರಹಿಸಿ ಲಕ್ಷ್ಮಣ ಇರುವ ಸ್ಥಳಕ್ಕೆ ಬರುತ್ತಾರೆ.

***ಪೋಲೀಸ ಸಾಹೇಬರಾ ಮನಿ ಸುತ್ತ ಹಾಕಿ ಗೇರಾ***
***ಮಾಡ್ಯಾರೋ ಗೋಲಿಯ ಬಾರಾ ಜನರೆಲ್ಲಾ***
***ಬಸ್ಯಾ ಎಂಬುವ ಶೂರಾ ಪೋಲೀಸರ ಮ್ಯಾಲೆ ಪೈರಾ***
***ಮಾಡ್ಯಾನೋ ಎರಡು ಬಾರಾ ಬಡಿಲಿಲ್ಲಾ***
***ಶೂರ ಮನ್ನಾ ಸಾಹೇಬಾ ಬಸ್ಯಾಗ ಇಟ್ಟಾನೋ ನೆದರಾ***
***ಮಾಡ್ಯಾನೋ ಒಬ್ಬಗ ಪೈರಾ ಸತ್ತಾನಲ್ಲಾ***
***ಪೋಲೀಸ ಜನರಾ ಗೋಲಿಯ ಬಾರಾ ಅಳತಿ ಇದ್ದಿದಿಲ್ಲಾ***
***ಅದರಾಗ ತಪ್ಪಿಸಿ ಹ್ವಾದಾನೋ ಓಡಿ ಲಕ್ಷ್ಯಾ  ಸಿಗಲಿಲ್ಲಾ.***

ಪೋಲೀಸರಿಂದ ಬಚಾವಾದ ಲಕ್ಷ್ಮಣ ಮತ್ತು ಅವನ ಜೊತೆಗಾರರು ಹುಲ್ಯಾಳ ದರೋಡೆ ಮಾಡಿ ತೆಗ್ಗಿ ನಾಯಕನಲ್ಲಿ ಆಶ್ರಯ ಪಡೆಯುತ್ತಾರೆ. ಸರಕಾರದವರು ಪಿತೂರಿಮಾಡಿ ತೆಗ್ಗಿನಾಯಕನಿಂದ ಲಕ್ಷ್ಮಣನನ್ನು ಹಿಡಿಯುವಲ್ಲಿ ಸಫಲರಾಗುತ್ತಾರೆ.

ಸಿಂಧೂರ ಲಕ್ಷ್ಮಣನ ಶೌರ್ಯ ಸಾಹಸವನ್ನು ಜನಪದ ಕವಿ ಈ ಪದದಲ್ಲಿ ಸಶಕ್ತವಾಗಿ ವರ್ಣಿಸಿದ್ದಾನೆ. 'ಇಂಗ್ರೇಜಿ ಸರಕರ ಕೈಯಾಗ ಯಾರು ಪಾರಾಗುವರಿಲ್ಲಾ' ಎನ್ನುವ ಮಾತು ಅಂದಿನ ಜನಸಾಮಾನ್ಯರ ಅಭಿಪ್ರಾಯವನ್ನು ಬಿಂಬಿಸುತ್ತದೆ.

*ಸಾಮಾಜಿಕ ಪದಗಳು*

ಲಾವಣಿಶಿಲ್ಪದಲ್ಲಿ ರಚಿತವಾದ ಸಾಮಾಜಿಕ ಕಥಾವಸ್ತುವುಳ್ಳ ಪದಗಳನ್ನು ಮೊಹರಂ ಹಬ್ಬದಲ್ಲಿ ಹಾಡುವುದುಂಟು. ಇವುಗಳಲ್ಲಿ ಮೊಹರಂ ಹಬ್ಬಕ್ಕೆ ಸಂಬಂಧಿಸಿದ ಯಾವ ಅಂಶಗಳು ದೊರೆಯುವುದಿಲ್ಲ. ಹೆಚ್ಚೆಂದರೆ ಇಸ್ಲಾಂ ಮತದ ಹೆಸರು, ಇಸ್ಲಾಂ ಪರಿವೇಷತೊಟ್ಟ ಕೆಲವು ಶಬ್ದಗಳು ಮಾತ್ರ ಸಿಗುತ್ತವೆ. ಕೆಲವೊಂದು ಪದಗಳಲ್ಲಿ ಅದ್ಭುತ, ಅಲೌಕಿಕ ಘಟನೆಗಳು ನುಸುಳಿಕೊಂಡಿವೆ. ಸಮಾಜದಲ್ಲಿಯ ಸುಖ-ದುಃಖ ಕಂಡುಂಡ ಕವಿ ತನಗೆ ಒಗ್ಗುವ ರೀತಿಯಲ್ಲಿ ರೂಢಿಯಲ್ಲಿರುವ ಶಬ್ದಗಳನ್ನೇ ಇವುಗಳಲ್ಲಿ ಬಳಸಿದ್ದಾನೆ. ಈ ಪದಗಳು ಕೇಳುಗರ ಹೃದಯವನ್ನು ನೇರವಾಗಿ ತಲುಪಬಲ್ಲವು. ಅಂತೆಯೇ ಮೊಹರಂ ಹಬ್ಬದಲ್ಲಿ ಇವುಗಳನ್ನು ಹಾಡುತ್ತಿರಬಹುದು. ಇವುಗಳ ಉದ್ದೇಶ ನೀತಿಬೋಧೆಯಾಗಿರುವುದರಿಂದಲೂ ಇವು ಜನಪದರ ಸಮಸ್ಯೆಗಳಿಗೆ ನಿರೂಪಿಸುವುದರಿಂದಲೂ ಮೊಹರಂ ಹಬ್ಬದಲ್ಲಿ ಇವನ್ನು ಹಾಡುತ್ತಿರಬೇಕು.

ಸಾಮಾಜಿಕ ಪದಗಳು ಕುಟುಂಬ ಜೀವನವನ್ನೊಳಗೊಂಡಂತೆ ಸಮಕಾಲೀನ ಬದುಕಿನ ನೈಜ ಚಿತ್ರಣವನ್ನು ಬಿಡಿಸಿ ಹೇಳುತ್ತವೆ. ದಾಂಪತ್ಯ ಜೀವನ, ಅತ್ತೆ ಸೊಸೆಯರ – ಸಂಬಂಧ ಸವತಿ ಮಾತ್ಸರ್ಯ, ತಾಯಿ ಮಕ್ಕಳ ಮಮತೆ, ಅಣ್ಣ ತಂಗಿಯರ ವಾತ್ಸಲ್ಯ ಮುಂತಾದ ವಿವಿಧ ಬಗೆಯ ಭಾವ ಭಾವನೆಗಳನ್ನು ಕಾಮದ ಕ್ರೌರ್ಯ, ಹಣದ ಪ್ರಭಾವ, ಮೂಢನಂಬಿಕೆ ಇತ್ಯಾದಿಗಳಿಂದ ಹುಟ್ಟಿಕೊಳ್ಳುವ ಸಮಸ್ಯೆಗಳನ್ನು ವಿವರಿಸಿ ಹೆಚ್ಚಾಗಿ ಸುಖಾಂತವಾಗಿ ಮುಕ್ತಾಯಗೊಳ್ಳುತ್ತವೆ. ಇಂತವುಗಳಲ್ಲಿ – ಅಣ್ಣ ತಂಗಿಯ ಪದಾ, ಗಂಡನಿಗೆ ಮೋಸಮಾಡಿದ ಹೆಣ್ಣಿನ ಪದಾ ಪ್ರಮುಖವಾದವು.

ಜನಪದ ಸಾಹಿತ್ಯದಲ್ಲಿ ಪ್ರಸಿದ್ಧವಾಗಿರುವ ಅಣ್ಣ-ತಂಗಿಯ ಕಥೆ ಉತ್ತರಕರ್ನಾಟಕದಲ್ಲಿ ಹೆಣ್ಣುಮಕ್ಕಳ ಹಾಡಾಗಿ, ಲಾವಣಿ ಪದವಾಗಿ, ಮೊಹರಂ ಪದವಾಗಿ ರೂಢಿಯಲ್ಲಿದೆ. ದಕ್ಷಿಣ ಕರ್ನಾಟಕದ ದೊಂಬಿದಾಸರು ಕೂಡ ಇಂಥ ಕತೆ ಹಾಡುತ್ತಾರೆ. ಪ್ರದೇಶ, ಕಾಲ, ಕವಿ, ಹಾಡುಗಾರ ಏನೇ ವ್ಯತ್ಯಾಸವಾದರೂ ಕಥಾವಸ್ತುವಿನ ಹೂರಣ ಮಾತ್ರ ಹಾಗೆ ಉಳಿದಿದೆ. ಪ್ರಸ್ತುತ ಅಣ್ಣ ತಂಗಿಯರ ಪದ ಬೆಳಗಾಂವ ಜಿಲ್ಲೆಯ ರಾಮದುರ್ಗ ತಾಲ್ಲೂಕಿನಲ್ಲಿ ದೊರೆತಿದ್ದು ಅದು ಹೀಗಿದೆ :

ಒಬ್ಬ ಬಡವನಿಗೆ ಒಂದು ಗಂಡು ಒಂದು ಹೆಣ್ಣು ಇಬ್ಬರು ಮಕ್ಕಳು. ತಾಯಿ ತಂದೆ ಅವರನ್ನು ಪ್ರೀತಿಯಿಂದ ಬೆಳೆಸಿದರು ಪ್ರಾಯಕ್ಕೆ ಬಂದ ಮಗಳ ಸೌಂದರ್ಯ ನೋಡಿ ಒಂದು ಶ್ರೀಮಂತ ಮನೆತನ ಸಾಕಷ್ಟು ಆಭರಣಹಾಕಿ ಅವಳನ್ನು ತಮ್ಮ ಮನೆಯ ಸೊಸೆಯನ್ನಾಗಿ ಮಾಡಿಕೊಂಡರು. ಗಂಡನ ಮನೆಯಲ್ಲಿ ಅವಳು ಸುಖದಿಂದ ಸಂಸಾರ ಮಾಡುತ್ತಿದ್ದಳು. ಪಂಚಮಿಹಬ್ಬ ಬರಲು ತಾಯಿ ತಂದೆಗಳಿಗೆ ಮಗಳ ನೆನಪಾಯಿತು. ತಂಗಿಯನ್ನು ಕರೆದುಕೊಂಡು ಬರಲು ಮಗನಿಗೆ ತಿಳಿಸಿದರು. ಗಂಡನ ಮನೆಯವರು ಬೆಳ್ಳಿ ಬಂಗಾರದ ದಾಗೀನು ಹಾಕಿ, ಜರದಮಡಿ ಉಡಿಸಿ ಪ್ರೀತಿಯಿಂದ ಸೊಸೆಯನ್ನು ಅವಳ ಅಣ್ಣನ ಜೊತೆ ಕಳುಹಿಸಿಕೊಟ್ಟರು. ತಂಗಿಯ ಮೈಮೇಲಿನ ಆಭರಣ ರಾಶಿಕಂಡು ಅಣ್ಣ ಬೆಕ್ಕಸ ಬೆರಗಾದ. ಅರ್ಧ ದಾರಿ ಕ್ರಮಿಸಿದ ಮೇಲೆ :

*ಹಿಂದ ಮುಂದ ಮಂದಿಯ ನೊಡಿ ಇಳಿಸ್ಯಾನೋ ತಂಗಿಯನಾ*
*ಮೈಮ್ಯಾಲಿನ ದಾಗೀನಾ ಬಿಚ್ಚಂತಾ ಹಿಡಿದಾನೋ ರಟ್ಟೆಯನಾ*
*ಬಿಚ್ಚಾನೋ ದಾಗೀನಾ ಕೆಡವಿ ತಂಗಿಯನಾ*
*ಕೈಕಾಲ ಕಟ್ಟಿ ಬಿಗಿದಾನೋ ಕೊಲ್ಲುದಕ ತಂಗಿಯನಾ*
*ಕೊಲ್ಲುದಕ ತೆಕ್ಕಿ ಹಾಕಿ ನೆಗವಿದ ಕಲ್ಲವನಾ*
*ಸರ್ಪ ಕಚ್ಚಿ ಬಿದ್ದ ಬಳಲತಾನೋ ಒಂದೇ ಸವನಾ*

ಕೈಕಾಲು ಬಿಚ್ಚಿಕೊಂಡು ಎದ್ದು ಬಂದ ತಂಗಿ ಅಣ್ಣನನ್ನು ತೆಕ್ಕಿಬಿದ್ದು ಕಣ್ಣೀರಿಟ್ಟಳು! ಅಣ್ಣನ ಪ್ರಾಣಾ ಉಳಿಸೋ ಭಗವಾನಾ ಮೈಮ್ಯಾಲಿನ ದಾಗೀನಾ ಮಾಡುವೆ ದಾನಾ' ಎಂದು ಪರಿಪರಿಯಾಗಿ ಬೇಡಿಕೊಂಡಳು. ಆರ್ತನಾದ ಅರಣ್ಯರೋಧನವಾಗಲು ಗಿಡಕ್ಕೆ ಹಗ್ಗಕಟ್ಟಿ ಉರುಲು ಹಾಕಿಕೊಂಡು ಪ್ರಾಣಬಿಡಲು ಮುಂದಾದಳು. ಬಾಲಿಯ ಭಕ್ತಿಗೆ ಮೆಚ್ಚಿದ ಶಿವ ತನ್ನ ರೂಪ ಬದಲಿಸಿಕೊಂಡು ಧರೆಗಿಳಿದ ಸತ್ತ ಅಣ್ಣನನ್ನು ಬದುಕಿಸಿ ಅಣ್ಣ-ತಂಗಿಯರನ್ನು ಕೂಡಿಸಿ ಮಾಯವಾದ.

ತನ್ನನ್ನೇ ಕೊಲ್ಲಲು ಮುಂದಾದ ಅಣ್ಣ ಸರ್ಪಕಚ್ಚಿಬಿದ್ದಾಗ ತುಟಿಗಲ್ಲ ಹಿಡಿದು ಅಳುವ ತಂಗಿಯ ಭ್ರಾತೃವಾತ್ಸಲ್ಯ ಓದುಗರ ಮನವನ್ನು ಕರಗಿಸುವಂತಹದು. ಕತೆಯ ಕೊನೆಯ ಭಾಗದಲ್ಲಿ ತಂಗಿಯ ಬೇಡಿಕೆಯಂತೆ ಅಣ್ಣನನ್ನು ಶಿವ ಬದುಕಿಸುವ ಪ್ರಸಂಗ ಭಕ್ತರನ್ನು ಶಿವ ರಕ್ಷಿಸುವನೆಂಬ ಜನಪದರ ಗಟ್ಟಿ ನಂಬಿಕೆಯನ್ನು ಸೂಚಿಸುತ್ತದೆ. ತಾಮ್ರದ ದುಡ್ಡು ತಾಯಿಮಕ್ಕಳನ್ನು ಕೆಡಿಸುತ್ತದೆಂಬ ನಾಣ್ಣುಡಿ ಜನಪದರಲ್ಲಿ ರೂಢಿಯಲ್ಲಿದೆ. ಇಲ್ಲಿ ಅದು ಅಣ್ಣನ ಮನಸ್ಸನ್ನು ಕೆಡಿಸಿದ್ದರೆ ಆಶ್ಚರ್ಯಪಡಬೇಕಿಲ್ಲ.

***ಇಸ್ಲಾಮೇತರ ಧರ್ಮಕ್ಕೆ ಸಂಬಂಧಿಸಿದ ಸವಾಲ್-ಜವಾಬ್ ಪದಗಳು***

ಇಸ್ಲಾಮೇತರ ಧರ್ಮಕ್ಕೆ ಸಂಬಂಧಿಸಿದ ಸವಾಲ್-ಜವಾಬ್ ಪದಗಳು ಯಾವುದೇ ವಿಷಯಕ್ಕೆ ಸಂಬಂಧಿಸಿದ ಒಂದು ಪ್ರಶ್ನೆಯನ್ನೋ, ಸಮಸ್ಯೆಯನ್ನೋ ಮುಂದಿಟ್ಟು ಅದಕ್ಕೆ ಉತ್ತರವನ್ನು ಅಪೇಕ್ಷಿಸುವ ರೀತಿಯವಾಗಿವೆ. ಇವು ಕಲ್ಗಿ ತುರಾಯಿ ಅಥವಾ ಹರದೇಶಿ ನಾಗೇಶಿ ಪದಗಳ ತರಹವೇ ಇದ್ದು ಏರು, ಇಳುವು, ಖ್ಯಾಲ, ಅಂತ್ಯಪ್ರಾಸ, ಹೊಂದಿರುತ್ತವೆ. ಕೇಳುಗರಲ್ಲಿ ಕುತೂಹಲವನ್ನು ಕೆರಳಿಸಿ ಅವರ ಮನಸ್ಸನ್ನು ಆಕರ್ಷಿಸುವ ಇಂತಹ ಪದಗಳನ್ನು ಮೊಹರಂ ಸಂದರ್ಭದಲ್ಲಿ ಹಾಡುವುದು ಸಹಜವೇ ಆಗಿದೆ. ಇವುಗಳಲ್ಲಿ – ಕಲ್ಲ ನೀರಮ್ಯಾಲೆ, ನಾಯಿ ಮುಗಿಲಮ್ಯಾಲೆ, ಗಿಡದ ಹೆಸರು ಹೇಳಬೇಕೋ? ಕೂಸು ಎಲ್ಲಿ ಹೋತೋ? ಬ್ರಾಹ್ಮಣ ಸತ್ತದೋಷ ಯಾರಿಗೆ ಬಂತೋ, ೩೬೦ ಹೆಂಡಿರ ಗಂಡನ ಹೆಸರು ಹೇಳುವ ಪದಾ – ಮುಂತಾದವುಗಳನ್ನು ಹೆಸರಿಸಬಹುದು.

ಕೆಲವು ಸವಾಲು ಪದಗಳಲ್ಲಿ ಯಾವ ಕತೆಯೂ ಇರದೆ ನೇರವಾಗಿ ಸವಾಲುಗಳೇ ಇರುತ್ತವೆ.  ಹಲವು ಜವಾಬು ಪದಗಳು ನೇರವಾಗಿ ಸವಾಲಿಗೆ ಜವಾಬು ಹೇಳುತ್ತವೆ. ಇವೆರಡು ರೀತಿಗೆ ೩೬೦ ಹೆಂಡಿರ ಗಂಡನ ಹೆಸರೇನು? ಮತ್ತು ೩೬೦ ಹೆಂಡಿರ ಗಂಡನ ಹೆಸರು ಹೇಳುವ ಜವಾಬು ಪದಗಳನ್ನು ಉದಾಹರಿಸಬಹುದು.

***ಶಾಹೀರಗ ಕೇಳತೇನಿ ನಾನಾ | ಮೂನ್ನಾರಾರವತ್ತು ಹೆಂಡಿರ |***
***ಗಂಡ ಒಬ್ಬ  ಇರತಾನೋ***

***ಜಗತ್ತಿನೊಳಗ ಪುಂಡಾ | ಹೇಳ ಅವನ ಹೆಸರೇನಾ***
***ತಿಳಿತೈತಿ ನಿನ್ನ  ಶಾಣೇತನಾ***

ಇದಕ್ಕೆ ಉತ್ತರವನ್ನು ಎದುರು ಪಕ್ಷದವರು ಜವಾಬು ಪದದಲ್ಲಿ ಹೀಗೆ ಹಾಡುವರು :

***ಉತ್ತರ ತುರ್ತಾ ಕೊಡುವೆ ಈಗಿಂದಾ ಈಗ ಪರತಾ***
***ಮೂನ್ನಾರಾರವತ್ತು ಸ್ತ್ರೀಯರು ಅಂದರೆ ನರಗಳು***
***ಗಂಡ ಅಂಬುವಂತಾ ಆತ್ಮನಲ್ಲಿ ಜೀಂವಾ ಕೇಳೋ***
***ಬಾಗಲಕೋಟೆ ಮೋಜಿನ ಪ್ಯಾಟಿ ನೆನೆದಾರ ಘಟ್ಟ***

ಇದು ಸವಾಲ್-ಜವಾಬ್ ನಡೆಯುವ ರೀತಿ.

ಕರ್ನಾಟಕದ ಪ್ರಮುಖ ಧರ್ಮಗಳಲ್ಲಿ ವೀರಶೈವ ಧರ್ಮವೂ ಒಂದು ವೀರಶೈವ ಧರ್ಮದ ಪ್ರಭಾವ ಮತ್ತು ವೀರಶೈವ ಸಾಹಿತ್ಯದ ಪ್ರಭಾವ ಮೊಹರಂ ಪದಗಳ ಮೇಲೆ ಸಾಕಷ್ಟು ಆಗಿದೆ. ಇಸ್ಲಾಮೇತರ ಧರ್ಮಕ್ಕೆ ಸಂಬಂಧಿಸಿದ ಸವಾಲು-ಜವಾಬು ಪದಗಳಲ್ಲಿ ವೀರಶೈವ ಧರ್ಮಕ್ಕೆ ಸಂಬಂಧಿಸಿದ ಒಂದು ಸವಾಲು ಪದ ಹೀಗಿದೆ :

***ಆರು ಸ್ಥಲ ಆರು ಚಕ್ರ ಆರು ಪ್ರಮಾಣ ಆರುಲಿಂಗ ಇದರರ್ಥ ಮಾಡೋ ನೀನಾ***
***ಸಭಾದೊಳು ನಿಂತು ಸರ್ವ ಸಭಾಕ ತಿಳುವ ಹಾಂಗ***

*ಆರು ಸ್ಥಲದ ವರಣದೊಳು ಮೂಲಸ್ಥಾನ ಯಾವುದು ಹೇಳು*
*ಯಾವ ಸ್ಥಲಕ ಯಾವ ಚಕ್ರ ಯಾವ ಪ್ರಮಾಣ ಯಾವ ಲಿಂಗ*
*ಸಭಾದೊಳು ಬಂದು ಇಟ್ಟೇದಿ ಬಡಿವಾರ ಶೋಧನಾ ಮಾಡೋ ನೀನಾ*

ಸವಾಲು ವೀರಶೈವ ತತ್ವಕ್ಕೆ ಸಂಬಂಧಿಸಿದ್ದಾದರೂ ರಿವಾಯಿತ ಪದಗಳ ಹೊತ್ತಿಗೆಯಲ್ಲಿ ದೊರೆತಿರುವುದು ಒಂದು ವೈಶಿಷ್ಟ್ಯ.

ಹೀಗೆ ಮೊಹರಂ ಪದಗಳು ಹಿಂದೂ-ಮುಸ್ಲಿಂ ಮೈತ್ರಿಯ ಸಂಕೇತವನ್ನು ಸಾರುತ್ತವೆ. ಭಾವೈಕ್ಯದ ಬೆಸುಗೆಯನ್ನು ಗಟ್ಟಿಗೊಳಿಸಲು ಪ್ರಮುಖ ಪಾತ್ರವಹಿಸುತ್ತವೆ.

*ಸಾಹಿತ್ಯಕ ದೃಷ್ಟಿಯಿಂದ ಮೊಹರಂ ಪದಗಳು*

ಮೊಹರಂ ಪದಗಳಲ್ಲಿ ಕಂಡುಬರುವ – ಇಟ್ಟು ಅಡಿ ಪ್ರಾಸ ಮಾಡಿಹಾಡುವನೋ ಜಾಣ, ಅಕ್ಷರ ಚಂದ ಕಟಬಂದ ತಿಳಿರಿ ನುಡಿ ಕೇಳರಿ – ಮುಂತಾದ ಮಾತುಗಳು ಮೊಹರಂ ಪದಗಳ ಬಗೆಗೆ ಜನಪದ ಕವಿಗಳು ತಾಳಿದ ನಿಲುಮೆಯನ್ನು ಸ್ಪಷ್ಟಪಡಿಸುತ್ತವೆ. ಪದಗಳಲ್ಲಿ ವರ್ಣನೆಗಳು, ಅಲಂಕಾರಗಳು ಬರಬೇಕೆಂಬ ಅಭಿಪ್ರಾಯ ಅವರದಾದರೂ ಅವು ಯವ ಪ್ರಮಾಣದಲ್ಲಿರಬೇಕು ಎಂಥವಿರಬೇಕು ಎಂಬುದರ ಬಗೆಗೆ ಎಲ್ಲಿಯೂ ಅವರು ಬಿಚ್ಚಿಹೇಳಿಲ್ಲ. ಆದರೂ ಅವರ ಹಾಡುಗಳಲ್ಲಿ ಅವು ಬಂದಿವೆ.

ಸಾಹಿತ್ಯಕ ದೃಷ್ಟಿಯಿಂದ ಅವನ್ನು ಪರಿಶೀಲಿಸಲು ಅಭ್ಯಾಸದ ಅನುಕೂಲತೆಗಾಗಿ ೧) ಕಥನಕಲೆ, ೨) ವರ್ಣನೆಗಳು, ೩) ಅಲಂಕಾರಗಳು, ೪) ರಸ ನಿರೂಪಣೆ, ೫) ಪಾತ್ರಪೋಷಣೆ, ೬) ನಾಟಕೀಯತೆ, ೭) ಸಮಾಜ ಚಿತ್ರಣ ೮) ಭಾಷೆ, ೯) ಭಾವೈಕ್ಯ ೧೦) ಮೊಹರಂ ಪದಗಳ ಸ್ವರೂಪ-ಲಕ್ಷಣ – ಎಂದು ಭಾಗಮಾಡಬಹುದು.

*ಕಥನ ಕಲೆ*

ಕಥನಕಲೆಯ ದೃಷ್ಟಿಯಿಂದ ಮೊಹರಂ ಪದಗಳನ್ನು ನೋಡಿದಾಗ ಎಲ್ಲ ಪದಗಳಲ್ಲಿ ಕೆಲವೊಂದು ಸಮಾನ ಲಕ್ಷಣಗಳನ್ನು ಗುರುತಿಸಬಹುದಾಗಿದೆ. ಪ್ರತಿಯೊಂದು ಪದ ನೆರೆದ ಸಭೆಗೆ ವಿನಂತಿಸಿಕೊಂಡು ಪ್ರಾರಂಭವಾಗುತ್ತದೆ. ಅನಂತರ ಹಲವಾರು ಮಾತುಗಳಿಂದ ಎದುರಾಳಿಯನ್ನು ತೆಗಳಿ ಕಥೆ ಪ್ರಾರಂಭಿಸಲಾಗುತ್ತದೆ. ಕೊನೆಯಲ್ಲಿ ಕಥೆಯಲ್ಲಿ ಬಂದ ವಸ್ತು ಮತ್ತು ಉದ್ದೇಶವನ್ನು ಸ್ಪಷ್ಟಪಡಿಸಿ ಕವಿಗಾರರು ಪರಿಚಯ ಹೇಳಿ ಊರು, ಓಣಿ, ದರಗಾ, ಅಂಕಿತ ಇತ್ಯಾದಿ ತಿಳಿಸಿ ಪದ ಮುಗಿಸುವರು. ಇಂಥ ಒಂದು ಕಥಾ ಹಂದರದೊಳಗೆ ಮೊಹರಂ ಪದಗಳು ತಮ್ಮ ರೂಪರಂಗನ್ನ ಪ್ರದರ್ಶಿಸುತ್ತವೆ.

ಮೊಹರಂ ಪದಗಳಲ್ಲಿಯ ಕಥೆಗಳಲ್ಲಿ – ಕರ್ಬಲಾ ಕಾಳಗದ ಚಿತ್ರಣ, ಖಲೀಫರ ವ್ಯಕ್ತಿತ್ವ ನಿರೂಪಣೆ, ಪೈಗಂಬರರ ಅಸಾಮಾನ್ಯ ಶಕ್ತಿಯ ಹಿರಿಮೆ, ಸೂಫಿ ಸಂತರ ದೈವೀಶಕ್ತಿ, ಭಕ್ತಿಯ ಪಾರಮ್ಯ, ಪೌರಾಣಿಕ ಅಂಶಗಳ ವಿವರಣೆ, ಐತಿಹಾಸಿಕ ವ್ಯಕ್ತಿಗಳ ಪರಿಚಯ, ಅಂದಿನ ಕಾಲದ ಸಮಾಜ ಚಿತ್ರಣ – ಇತ್ಯಾದಿಗಳು ಮುಖ್ಯವಾಗಿ ಮತ್ತು ಹಿತಮಿತವಾಗಿ ಬರುತ್ತವೆ. ಮೊಹರಂ ಪದಗಳಲ್ಲಿ ಬರುವ ಕೆಲ ಶಬ್ದ ಚಿತ್ರಗಳು ಕಥೆಯ ಒಡಲೊಳಗೇ ಬಂದಿರಲಿ ಅಥವಾ ಸ್ವತಂತ್ರವಾಗಿಯೇ ಇರಲಿ ಕೇಳುಗರ ಮನವನ್ನು ಸೂರೆಗೈಯುವ ಶೈಲಿಯಲ್ಲಿದ್ದು ಉದ್ದೇಶಿತವಸ್ತುವಿನ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸುತ್ತವೆ.

ಒಟ್ಟಿನಲ್ಲಿ ಪ್ರಾಸಬದ್ಧಶೈಲಿ, ವಿಶಿಷ್ಟದಾಟಿ, ವಿಶಿಷ್ಟ ಕಥಾವಸ್ತು, ಸತ್ಯಕ್ಕಾಗಿ, ಧರ್ಮಕ್ಕಾಗಿ ಒಕ್ಕಟ್ಟಿನಿಂದ ಹೋರಾಡಬೇಕೆನ್ನುವ ಸಂದೇಶ ಇವು ಮೊಹರಂ ಮೊಹರಂ ಪದಗಳಲ್ಲಿ ಮೇಳವಿಸಿದರ ಫಲವಾಗಿ ಅವುಗಳ ಕಥನ ಕಲೆಗೆ ಒಂದು ಬಗೆಯ ವಿಶೇಷ ಮೆರಗುಂಟಾಗಿ ಜನಪದ ಸಾಹಿತ್ಯದಲ್ಲಿ ವಿಶಿಷ್ಟಸ್ಥಾನವನ್ನು ಪಡೆಯಲು ಅವು ಅರ್ಹವಾಗಿವೆ.

*ವರ್ಣನೆಗಳು*

ಕವಿಯ ಕಲ್ಪನಾಶಕ್ತಿ, ಮಾತಿನ ಮೋಡಿ, ಶಬ್ದಭಂಡಾರ ಮತ್ತು ವರ್ಣನೆಗಳು ಪಾಂಡಿತ್ಯ ಪ್ರದರ್ಶನಕ್ಕೆ ತಕ್ಕಮಟ್ಟಿಗೆ ಅನುವುಮಾಡಿಕೊಡುತ್ತವೆ. ಒಮ್ಮೊಮ್ಮೆ ಸಂದರ್ಭಗಳಿಗನುಗುಣವಾಗಿ ವರ್ಣನೆಗಳು ಹಿತಮಿತವಾಗಿ ಬರುವುದುಂಟು. ಮಹಾಕವಿಗಳು ತಮ್ಮ ಕಾವ್ಯಗಳಲ್ಲಿ ಅಷ್ಟಾದಶ ವರ್ಣನೆಗಳನ್ನು ಕಡ್ಡಾಯವಾಗಿ ತಂದರೆ ಜನಪದ ಕವಿಗಳು ಕಥೆಗೆ ಅನುಗುಣವಾಗಿ, ಪಾತ್ರಪೋಷಣೆಗಾಗಿ, ರಸ ನಿರೂಪಣೆಗಾಗಿ ವರ್ಣನೆಗಳನ್ನು ಔಚಿತ್ಯವರಿತು ತಂದಿರುವುದು ಕಂಡುಬರುತ್ತದೆ ಮೊಹರಂ ಪದಗಳಲ್ಲಿ ಕೆಲವು ಸುದೀರ್ಘವಾಗಿ ಬಂದಿರುವ ವರ್ಣನೆಗಳಲ್ಲಿ – ಜನ್ಮೋತ್ಸವ ವರ್ಣನೆ, ಯುದ್ಧವರ್ಣನೆ, ವೀರಸ್ವರ್ಗದ ವರ್ಣನೆ ಇತ್ಯಾದಿ ಪ್ರಮುಖವಾಗಿವೆ. ಸಂಕ್ಷೇಪವಾಗಿ ಬಂದಿರುವ ವರ್ಣನೆಗಳಲ್ಲಿ ವೇಶ್ಯೆಯರ ವರ್ಣನೆ, ಕಾಮಜಾನಿಯ ವರ್ಣನೆ ಮುಖ್ಯವಾಗಿವೆ.

ಅಲ್ಲಾಹನ ಆಜ್ಞಾನುಸಾರ ಜಿಬ್ರಾಯಿಲ್ ಹ | ಮುಹ್ಮದ ಪೈಗಂಬರರನ್ನು ಕಾಮಜಾನಿಯ ಮೇಲೆ ಕೂಡಿಸಿಕೊಂಡು ಮೇ ಅರಾಜಕ್ಕೆ ಕರೆದುಕೊಂಡು ಹೋದ ವರ್ಣನೆ ಮೊಹರಂ ಪದಗಳಲ್ಲಿ ಬರುತ್ತದೆ. ಕಾಮಧೇನುವಿನಂತಹ ಒಂದು ಕಾಲ್ಪನಿಕ ಪ್ರಾಣಿ 'ಕಾಮಜಾನಿ' ಅದನ್ನು 'ಬುರಾಖ್' ಎಂದು ಪೈಗಂಬರರ ಚರಿತ್ರೆಯಲ್ಲಿ ಕರೆಯಲಾಗಿದೆ. ಕಾಮಧೇನುವಿನ ಕಲ್ಪನೆಯಿರುವ ಕನ್ನಡದ ಜನಪದ ಕವಿ ಅದನ್ನು ಕಾಮಜಾನಿ ಎಂದು ಕರೆದಂತೆ ತೋರುತ್ತದೆ. ಆ ಕಾಮಜಾನಿಯ ವರ್ಣನೆ ಒಂದು ಪದದಲ್ಲಿ  ಹೀಗೆ ಬಂದಿದೆ.

*ಮುತ್ತುರತ್ನ ಬೆಳಕಿನ ಛಾಯಾ ಗೋಮೇಧಿಕ ಗರಿಗಳು ಪಾಯಾ*
*ಪಂಚವರ್ಣ ಮುಖದಲಿ ನಾಮಾ 'ಲಾ ಇಲಾಹಾ' ಬರೆದಿತ್ತೊ ಕಲ್ಮಾ*
*ಸೃಷ್ಟಿಗೆ ಅಪರೂಪ ಜಲ್ಮಾ ಹುಟ್ಟಿಸಿದ ಪರಮಾತ್ಮಾ*

ಇಂಥ ಅಪರೂಪದ ಪ್ರಾಣಿಯನ್ನು ಪರಮಾತ್ಮಾ ಹುಟ್ಟಿಸಿದನೆಂದು ಕವಿ ಹೇಳುವ ಮಾತುಗಳು ಕಾಮಜಾನಿಯ ವೈಶಿಷ್ಟ್ಯವನ್ನು ಎತ್ತಿ ಹೇಳುತ್ತವೆ.

ಉಳಿದವುಗಳಲ್ಲಿ ಶಬ್ಾದ ಅರಸ ಕಟ್ಟಿಸಿದ ಸ್ವರ್ಗದ ವರ್ಣನೆ ಮತ್ತು ಅಲ್ಲಲ್ಲಿ ಬಂದಿರುವ ಸ್ತ್ರೀವರ್ಣನೆಗಳು ಸಾಧಾರಣವಾಗಿವೆ.

*ಅಲಂಕಾರಗಳು*

ಲೋಕ ರೂಢಿಗೆ ಮೀರಿದ ಕಾವ್ಯಸೌಂದರ್ಯ ಉಂಟುಮಾಡುವ ಶಬ್ದಾರ್ಥ ವೈಚಿತ್ರವೇ ಅಲಂಕಾರ. ಕಾವ್ಯದಲ್ಲಿ ಅಲಂಕಾರದ ಸ್ಥಾನ-ಮನದ ಬಗೆಗೆ ವಾದ-ವಿವಾದವಿದ್ದರೂ ಅನೇಕ ಕವಿಗಳಿಗೆ ಅಲಂಕಾರಗಳು ಪ್ರೀಯವೆಂಬ ವಿಷಯ ಕಾವ್ಯಾಭ್ಯಾಸದಿಂದ ಕಂಡುಬರುತ್ತದೆ. ಅಷ್ಟಾದಶ ವರ್ಣನೆಗಳಿಗೆ ಕಟ್ಟುಬಿದ್ದ ಪಂಡಿತ ಮಾನ್ಯ ಕವಿಗಳಂತೆ ಜನಪದ ಕವಿಗಳು ತಮ್ಮ ರಚನೆಗಳಲ್ಲಿ ಅಲಂಕಾರಗಳನ್ನು ಪಾಂಡಿತ್ಯ ಪ್ರದರ್ಶನಕ್ಕಾಗಿ ತಂದು ತುರುಕದಿರುವುದು ಒಂದುವಿಶೇಷ. ಜನಸಾಮಾನ್ಯರಲ್ಲಿ ಪ್ರಚಲಿತವಿರುವ ಉಹಾಹರಣೆಗಳನ್ನೇ ಅವರು ಭಾವ ನಿರೂಪಣೆ, ರಸ ಪೋಷಣೆ, ಪಾತ್ರ ಚಿತ್ರಣ, ಹಾಗೂ ಅರ್ಥ ಸ್ಪಷ್ಟತೆಗಾಗಿ ಬಳಸುತ್ತಾರೆ. ಅವರಿಗರಿವಿಲ್ಲದೆ ಸಹಜವಾಗಿಯೇ ಹಲವಾರು ಅಲಂಕಾರಗಳು ಜನಪದ ಹಾಡುಗಳಲ್ಲಿ ಕಾಣಿಸಿಕೊಳ್ಳುತ್ತವೆ. ಮೊಹರಂ ಪದಗಳಲ್ಲಿ ಉಪಮೆ, ರೂಪಕ ಉತ್ಪ್ರೇಕ್ಷೆ ಅಲಂಕಾರಗಳು ಹೇರಳವಾಗಿ ಬಳಕೆಯಾಗಿವೆ. ಅರ್ಥಾಂತರನ್ಯಾಸ, ಅತಿಶಯೋಕ್ತಿ, ಅತ್ಯುಕ್ತಿ ಅಲಂಕಾರಗಳು ಪದ್ಯಕ್ಕೆ ಪೋಷಕವಾಗಿ ಅಲ್ಲಲ್ಲಿ ಬಂದಿವೆ. ಉಳಿದ ಅಲಂಕಾರಗಳ ಬಳಕೆ ಅಪರೂಪ.

ಆಕಿ ನಾಸಿಕ ಸಂಪಗಿ ಅರಳಾ ಕಣ್ಣುಗಲ್ಲಾ ಕನ್ನಡಿ ಹರಳಾ, ಕೊಡಬೇಕ ನನಗ ಒಂದು ಪುತ್ರಫಲಾ, ಕೈ ಕಮಲಾ ಆಗಿತ್ತು ಮಾಣಿಕದ ಹೋಲಾ, ನನ್ನ ಕೂಸ ರಾಜಹಂಸ, ಬಾಡಿತು. ಮುಖಕಮಲಾ, ಮಾರಿಚಿನ್ನಾ ಹೊಳುವತಿತ್ತೊ ಹಾಲಿ, – ಮುಂತಾದ ರೂಪಕ ಅಲಂಕಾರಗಳು ಹೃದ್ಯವಾಗಿ ಮೂಡಿಬಂದಿವೆ.

ಅನನ್ವಯ, ದೃಷ್ಟಾಂತ, ಸಂದೇಹ, ಅಪಹ್ನುತಿ, ಸ್ವಭಾವೋಕ್ತಿ, ವ್ಯಾಜನಿಂದೆ ಅಲಂಕಾರಗಳು ಬಹಳ ಅಪರೂಪವಾಗಿ ಮೊಹರಂ ಪದಗಳಲ್ಲಿ ದೊರೆಯುತ್ತವೆ. ಒಟ್ಟಿನಲ್ಲಿ ಮೊಹರಂ ಪದಗಳಲ್ಲಿ ದೊರೆವ ಅಲಂಕಾರಗಳು ಕನ್ನಡ ನುಡಿಯ ಬೆಡಗು ಬಿನ್ನಾಣವನ್ನು

ಪ್ರದರ್ಶಿಸುವಲ್ಲಿ ಸಮಾಜ ಚಿತ್ರಣ ನೀಡುವಲ್ಲಿ ಸಹೃದಯರಿಗೆ ರಸಸ್ಫೂರ್ತಿ ಉಂಟುಮಾಡುವಲ್ಲಿ ಯಶಸ್ವಿಯಾಗಿರುವುದನ್ನು ಮರೆಯುವಂತಿಲ್ಲ.

*ರಸ ನಿರೂಪಣೆ*

ಜನಪದ ಕವಿಗಳ ಉದ್ದೇಶ ಕಥೆಯ ಮೂಲಕ ಜನ ಸಾಮಾನ್ಯರಿಗೆ ಮಾನವ ಧರ್ಮವನ್ನು ಬೋಧಿಸುವುದು. ಆದುದರಿಂದ ಅವರ ಲಕ್ಷ್ಯವೆಲ್ಲ ಕಥೆಯ ಕಡೆಗೆ ಮತ್ತು ಮಾನವ ಧರ್ಮ ನಿರೂಪಣೆಯ ಕಡೆಗೆ ಕೇಂದ್ರೀಕೃತವಾಗಿದ್ದರೂ ಸಮಯ ಸನ್ನಿವೇಶಗಳಿಗೆ ತಕ್ಕಂತೆ ತಮ್ಮ ಹೇಳಿಕೆ ಪರಿಣಾಮಕಾರಿಯೂ ಆಕರ್ಷಕವೂ ಆಗಬೇಕೆಂಬ ಇಚ್ಛೆ ಅವರಿಗಿದ್ದುದರಿಂದ ಹಾಗೆ ಮಾಡುವಾಗ ಸಹಜವಾಗಿಯೆ ರಸ ಪ್ರತಿಪಾದನೆಗೆ ತೊಡಗಿರುವುದು ಕಂಡುಬರುತ್ತದೆ. ಮೈನವಿರೇಳುವಂತೆ ಮಾಡುವ ವೀರರಸವನ್ನು, ಹೃದಯವನ್ನು ಕಲಕಿ ಕಣ್ಣನ್ನು ಹನಿಗೂಡಿಸುವ ಕರುಣರಸವನ್ನು ಮನಮುಟ್ಟುವಂತೆ ಹೃದಯ ತಟ್ಟುವಂತೆ ಜನಪದ ಕವಿಗಳು ಚಿತ್ರಿಸಿರುವರು.

ವೀರರಸ ನಮರಸಗಳಲ್ಲಿ ಒಂದು ಯುದ್ಧ ವರ್ಣನೆಯಲ್ಲಿ ವೀರರಸ ನಿರೂಪಣೆಗೆ ಅವಕಾಶ ಹೆಚ್ಚು. ಮೊಹರಂ ಪದಗಳಲ್ಲಿ ಕರ್ಬಲಾ ಕಾಳಗದ ವಿವರಣೆ ಬರುವುದರಿಂದ ಅಲ್ಲಿ ವೀರರಸ ಪ್ರತಿಪಾದನೆಗೆ ಸಹಜವಾಗಿಯೇ ಅವಕಾಶ ದೊರೆಯುತ್ತದೆ. ಹ | ಇ | ಹುಸೇನರ ಮಗ ಅಬ್ದುಲ್ಲಾ ತಂದೆ ತಾಯಿಗಳ ಅಪ್ಪಣೆ ಪಡೆದು ವೈರಿ ಸೈನಿಕರ ರುಂಡ ಚಂಡಾಡುವ ದೃಶ್ಯ ಮೈನವಿರೇಳಿಸುವಂತದು. ವೀರರಸ ಚಿಮ್ಮಿಸುವಂತದು.

*ಹಾಂ ಹಾಂ ಕುಂತಾರೋ ತಮ್ಮ ಕುದರಿಮ್ಯಾಗ*
*ಅಂತಾತೋ ದೊರಿ ಬಾ ವೈರಿ ನನ್ನ ಸರಿ*
*ಉಳದ ಬೆಳದ ಹೋಗಂತ ತುಳದ ಬಿಡತೇನಿ ಅಂತಾನ ಅಬ್ದುಲ್ಲಾ*
*ಮುಂದ ಜಿಗದ ಹತಿಯಾರ ಹಿರದ*
*ಹೋಗಿ ಬಿದ್ದಾನ ವೈರಿಮ್ಯಾಲೆ ಆಡಿನೊಳಗ ಬಿದ್ದಂಗಾತು ಹುಲಿ*
*ಹಾರತಾವೋ ಮ್ಯಾಲೆ ತಲಿ ದಡದಡನೆ ಭೂಮಿಮ್ಯಾಲಿ*

'ತುಳದ ಬಿಡತೇನಿ, ಆಡಿನೊಳಗ ಬಿದ್ದಂಗಾತು ಹುಲಿ, ಹಾರತಾವೋ ಮ್ಯಾಲೆ ತಲಿ' – ಎನ್ನುವ ಮಾತುಗಳು ಧ್ವನಿಪೂರ್ಣವಾಗಿದ್ದು ವೀರರಸ ಸ್ಫುರಿಸುತ್ತವೆ.

ಒಟ್ಟಾರೆ ಮೊಹರಂ ಪದಗಳಲ್ಲಿ ಶೃಂಗಾರ, ಹಾಸ್ಯ, ಭೀಭತ್ಸ ರಸಗಳು ಹೆಚ್ಚಾಗಿ ಬಂದಿಲ್ಲ. ರೌದ್ರ, ಭಯಾನಕ, ಶಾಂತ ರಸಗಳಿಗೆ ಹೆಚ್ಚಿನ ಆಸ್ಪದ ದೊರೆತಿಲ್ಲ. ಆದರೆ ವೀರ ಕರುಣ ಅದ್ಭುತ ರಸಗಳು ಸಮರ್ಥವಾಗಿ ಮೂಡಿಬಂದಿರುವುದನ್ನು ಕಾಣಬಹುದು.

*ಪಾತ್ರ ಪೋಷಣೆ*

ಮೊಹರಂ ಪದಗಳು ಮೂಲತಃ ಸುದೀರ್ಘವಲ್ಲದ ಬಿಡಿಬಿಡಿಯಾದ ಜನಪದ ರಚನೆಗಳು. ಅವು ಒಬ್ಬ ವ್ಯಕ್ತಿ ಅಥವಾ ಒಂದು ಪಾತ್ರಕ್ಕೆ ಸಂಬಂಧಿಸಿದಂತೆ ಒಂದು ಅಥವಾ ಕೆಲವು ಅಂಶಗಳನ್ನು ಮಾತ್ರ ಒಳಗೊಂಡಿರುತ್ತವೆ. ಅದರಿಂದಾಗಿ ಯಾವುದೇ ಪಾತ್ರದ ಸಮಗ್ರ ಮೂರ್ತಿ ಸ್ವರೂಪ ಅಖಂಡವಾಗಿ ಅವುಗಳಲ್ಲಿ ದೊರೆಯಲಾರದು. ಆದರೆ ಒಂದು ಪಾತ್ರ ಹಲವಾರು ಹಾಡುಗಳಿಗೆ ವಸ್ತುವಾದಾಗ ಅವುಗಳಲ್ಲಿ ಅಭಿವ್ಯಕ್ತಗೊಂಡಿರುವ ಆ ಪಾತ್ರದ ವಿವಿಧ ಅಂಶಗಳನ್ನು ಕ್ರೋಢಿಕರಿಸಿ ಅವುಗಳಿಗೊಂದು ರೂಪಕೊಡುವ ಮೂಲಕ ಆಯಾ ಪಾತ್ರಗಳ ಕೆಲಮಟ್ಟಿನ ನಿರೂಪಣೆ ಸಾಧ್ಯ.

ಕರ್ಬಲಾ ಘಟನೆಗೆ ಸಂಬಂಧಿಸಿದ ಮೊಹರಂ ಪದಗಳ ಕಥಾನಾಯಕ ಹ | ಇ | ಹುಸೇನ ಜನಪದ ಕವಿಗಳು ಅವರ ಮಾನವೀಯತೆ, ಧರ್ಮಜಿಜ್ಞಾಸೆ, ಶೌರ್ಯಸಾಹಸ ಇತ್ಯಾದಿ ಗುಣಗಳನ್ನು ಮೆಚ್ಚಿ ಮನಸಾರೆ ಹೊಗಳಿದ್ದಾರೆ ಮತ್ತು ಅವುಗಳನ್ನು ಎಳೆ ಎಳೆಯಾಗಿ ತಮ್ಮ ಪದಗಳಲ್ಲಿ ಬಿಡಿಸಿ ತೋರಿಸಿದ್ದಾರೆ.

ಮೊಹರಂ ಪದಗಳಲ್ಲಿ ಕಾಸೀಮ ಧೂಲಾ, ಹ | ಅಲಿ, ಹ | ಮುಹ್ಮದ ಪೈಗಂಬರ ಮಾಬುಸುಬಾನಿ, ಯಜೀದ್, ಹ | ಸುಲೇಮಾನ್, ಹ | ಇಸಾ, ಹ | ಬೀಬಿ ಫಾತಿಮಾ, ಶಹರಬಾನು, ಶುಮರ – ಮುಂತಾದ ಪಾತ್ರಗಳು ಅಮೋಘವಾಗಿ ಚಿತ್ರಿತವಾಗಿವೆ.

ಹ | ಸುಲೇಮಾನ್ ಅಸಾಮಾನ್ಯ ಶಕ್ತಿವಂತರು ಸತ್ಯವಂತರು, ಸಾಂಬನಲ್ಲಿ ವಿಶಿಷ್ಟ ಶಕ್ತಿಯ ಉಂಗುರ ಪಡೆದವರು. ಇರುಬಿ ಎಂಬತ್ತು ಕೋಟಿ ಜೀವರಾಶಿಗೆ ಊಟಹಾಕುವ ಪ್ರಯತ್ನ ಮಾಡಿದವರು ಎಂದು ಮೊಹರಂ ಪದಗಳಲ್ಲಿ ನಿರೂಪಿಸಲಾಗಿದೆ. ಹ | ಇಸಾ ಅಲ್ಲಾಹನ ಆಜ್ಞೆಯ ಮೇರೆಗೆ ಸತ್ತವರನ್ನು, ಸತ್ತಪಶುಪಕ್ಷಿಗಳನ್ನು ಬದುಕಿಸುತ್ತಿದ್ದರೆಂದೂ ರೋಗ ಪೀಡಿತರನ್ನು ನಿರೋಗಿಗಳನ್ನಾಗಿ ಮಾಡುತ್ತಿದ್ದರೆಂದೂ ಮೊಹರಂ ಪದಗಳಲ್ಲಿ ಹೇಳಲಾಗಿದೆ.

ಹ | ಫಾತಿಮಾ ಅವರು ತಮ್ಮ ಪುತ್ರ ಹಸನ್ ಮತ್ತು ಹುಸೇನರನ್ನು ಬಹುವಾಗಿ ಪ್ರೀತಿಸುತ್ತಿದ್ದರು. ಎಂಥ ಬಡತನ ಬಂದರೂ ಅವರು ದಾನ ಮಾಡುವುದನ್ನು ಬಿಟ್ಟವರಲ್ಲ ಎಂದು ಮೊಹರಂ ಪದಗಳಲ್ಲಿ ಹೇಳಿದ್ದು ಕಂಡುಬರುತ್ತದೆ.

ಹೀಗೆ ಮೊಹರಂ ಪದಗಳಲ್ಲಿ ಜನಪದ ಕವಿಗಳು ತಮಗೆ ತೋಚಿದ ವಿಚಾರಗಳನ್ನು ಅನಿಸಿದ ಭಾವನೆಗಳನ್ನು ತಿಳಿದುಕೊಂಡ ಗುಣಾವಗುಣಗಳನ್ನು ಪಾತ್ರಗಳಲ್ಲಿ ಮೂಡಿಸಿದ್ದಾರೆ.

***ನಾಟಕೀಯತೆ***

ಕಾವ್ಯದಲ್ಲಿಯೇ ಆಗಲಿ ಹಾಡಿನಲ್ಲಿಯೇ ಆಗಲಿ ವಾದ-ಸಂವಾದ ರೂಪದ ನಾಟಕೀಯತೆ ಹದವರಿತು ಸೇರಿಕೊಂಡಾಗ ಒಂದು ಬಗೆಯ ಆಕರ್ಷಣೆಯುಂಟಾಗುತ್ತದೆ. ಮೊಹರಂ ಪದಗಳಲ್ಲಿ ಇಂತಹ ನಾಟಕೀಯತೆ ಅಲ್ಲಲ್ಲಿ ಮಿಂಚಿದೆ. ಇಸ್ಲಾಂ ಮತ್ತು ಇಸ್ಲಾಮೇತರ ಧರ್ಮಕ್ಕೆ ಸಂಬಂಧಿಸಿದ ಪದಗಳಲ್ಲಿ ಇದಕ್ಕೆ ನಿದರ್ಶನಗಳು ದೊರೆಯುತ್ತವೆ. ಈ ನಾಟಕೀಯ ಸನ್ನಿವೇಶಗಳನ್ನು ಓದಿದಾಗ ಇಲ್ಲವೇ ಕೇಳಿದಾಗ ಪಾತ್ರಗಳು ಪ್ರತ್ಯಕ್ಷಬಂದು ಸಂಭಾಷಣೆ ಮಾಡಿದ ಅನುಭವವುಂಟಾಗದಿರದು.

ಕರ್ಬಲಾ ಯುದ್ಧಭೂಮಿಯಲ್ಲಿ ಹ | ಇ | ಹುಸೇನರ ಅನುಯಾಯಿಗಳು ವೈರಿಗಳ ಮೋಸಕ್ಕೆ ಪಕ್ಕಾಗಿ ಹತರಾಗುತ್ತಿರುವುದನ್ನು ಕಂಡ ಹುಸೇನರ ಮಗ ಅಬ್ದುಲ್ಲಾ ತಾನೂ ಯುದ್ಧಮಾಡಲು ಅಪ್ಪಣೆ ಕೊಡುವಂತೆ ತನ್ನ ತಂದೆಗೆ ಕೇಳಿದಾಗಿನ ಪ್ರಸಂಗ ನಾಟಕೀಯತೆಗೆ ಒಂದು ಒಳ್ಳೆಯ ಉದಾಹರಣೆಯಾಗಿದೆ :

**ಅಬ್ದುಲ್ಲಾ:**ಕೊಡರಿ ಹೋಗಲಾಕ ಅಪ್ಪಣೆ ನನಗ ಅನುಮಾನಯಾಕೀಗ. ಹೋಗುವುದು ರಣದಾಗ ಕಡದಾಡಿ ಕೊಲಿ ಹಾರಿಸಿ ತಲಿ ಭೂಮಿಮ್ಯಾಲೆ ಹಿಡಿದು ಹೊಡೆದು ಕಡದು ಹಾಕುವೆ ನನಗೇನು ಥರ ಜಲ್ಲಾ.

**ಹುಸೇನ:**ನಿಂದೇನು ವಯಸ್ಸಲ್ಲಾ ಕದನ ಮಾಡುವಾಗಿಲ್ಲಾ ನಿನ್ನ ವಯ ಹೋಗಬ್ಯಾಡೋ ನೀನು ಹೇಳತೇನೋ ನಾನು ಮರತ ಬಿಡೋ ನಿನ್ನ ಶರಥ ನಿನ್ನಿಂದೇನಾಗಾಕಿಲ್ಲಾ.

**ಅಬ್ದುಲ್ಲಾ:**ಶರಣ ಕರುಣ ಮಾಡಿರಿ.

**ಹುಸೇನ:**ನಿನಗ ಬಿಟ್ಟೇನಿ ಶಿವನಮ್ಯಾಗ ನಿನ್ನ ಅದೃಷ್ಟದಾಗ ಬರದಂತ ಬರಿ ಶ್ರೀಹರಿ ತಪ್ಪದಲಿ ನಾನೇನ ಮಾಡಲಿ ದೈವೇನು ನೋಡಿ ಬಂದಿಲ್ಲಾ.

– ಈ ಸಂವಾದದಲ್ಲಿ ಅಬ್ದುಲ್ಲಾರ ವಿರೋಚಿತ ಮಾತುಗಳು ಹ | ಇ | ಹುಸೇನರು ತಿಳಿಹೇಳುವ ರೀತಿಯು ಸಹಜ ಸುಂದರವಗಿ ಮೂಡಿಬಂದಿವೆ.

ಅಪ್ರಾಪ್ತ ವಯಸ್ಸಿನ ಬಾಲಕ ಕಾಸೀಮಧೂಲಾ ತಾನೂ ಯುದ್ಧಮಾಡಲು ಹೋಗುವುದಾಗಿ ಚಿಕ್ಕಮ್ಮನಿಗೆ ಕೇಳುವ ಪ್ರಸಂಗ, ಹ | ಸುಲೇಮಾನರು ಇರುಬಿ ಎಂಬತ್ತು ಕೋಟಿ ಜೀವರಾಶಿಗೆ ಊಟ ಹಾಕಬೇಕೆಂದು ನಿರ್ಧರಿಸಿ ಶಿವನಿಗೆ ತಿಳಿಸಿದರು. ಆಗ ಶಿವ ಮತ್ತು ಸುಲೇಮಾನರಲ್ಲಿ ನಡೆದ ವಾದ-ವಿವಾದ ಪ್ರಸಂಗ-ನಾಟಕೀಯತೆಗೆ ಉತ್ತಮ ಉದಾಹರಣೆ

***ಸಮಾಜ ಚಿತ್ರಣ***

ಜನಪದ ಸಾಹಿತ್ಯ ಗ್ರಾಮ ಸಂಸ್ಕೃತಿಯ ದರ್ಪಣ ಹಳ್ಳಿಯ ಸರಳ ಜೀವನದ ವಿವಿಧ ಮುಖಗಳು ಅದರಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಸಂಸಾರದ ಸುಖದುಃಖಗಳು ಬಂಧುಮಿತ್ರರ ಮಧ್ಯದ ವಿವಿಧ ಸಂಬಂಧಗಳು, ಜಾತಿ-ಮತ ಹಬ್ಬ ಹರಿದಿನ, ರೂಢಿ ವಿಧಿ ಕ್ರಿಯೆಗಳು ಒಟ್ಟಾರೆ ಅವರ ಜೀವನವನ್ನು ರೂಪಿಸುವ ಸ್ಫೂರ್ತಿ ವಿಶೇಷಗಳು ಜನಪದ ಸಾಹಿತ್ಯದಲ್ಲಿ ಹೇರಳವಾಗಿ ದೊರೆಯುತ್ತವೆ. ಜನಪದ ಸಾಹಿತ್ಯದ ಒಂದು ಭಾಗವಾದ ಮೊಹರಂ ಪದಗಳು ಇದಕ್ಕೆ ಹೊರತಲ್ಲ.

ಅಭ್ಯಾಸದ ಅನುಕೂಲತೆಯ ದೃಷ್ಟಿಯಿಂದ ಹ | ಮುಹ್ಮದ ಪೈಗಂಬರ ಪೂರ್ವದ ಮತ್ತು ಪೈಗಂಬರರ ಸಮಕಾಲೀನ ಸಮಾಜ ಚಿತ್ರಣ ಹಾಗೂ ಇತ್ತೀಚಿನ ಸಮಾಜ ಚಿತ್ರಣ ಎಂದು ವಿಭಾಗಿಸಿ ಪರಿಶೀಲಿಸಬಹುದು.

ಹ | ಮುಹ್ಮದ ಪೈಗಂಬರರಿಗಿಂತ ಮೊದಲು ಮತ್ತು ಅವರ ಸಮಕಾಲೀನದಲ್ಲಿ ಧಾರ್ಮಿಕ ಘರ್ಷಣೆಗಳು ನಡೆದುದರ ವಿವರಗಳು ಮೊಹರಂ ಪದಗಳಲ್ಲಿ ದೊರೆಯುತ್ತವೆ. ಅಂತಹ ಘರ್ಷಣೆಗಳಿಗೆ ಇದ್ದ ಮುಖ್ಯ ಕಾರಣಗಳಲ್ಲಿ ಮೂರ್ತಿಪೂಜೆಯೂ ಒಂದು ಹ | ಮುಹ್ಮದ ಪೈಗಂಬರರಿಗಿಂತ ಪೂರ್ವದ ಪೈಗಂಬರ ಇಬ್ರಾಹಿಮ್ ಅವರು 'ನಮರೂದ್' ಎಂಬುವ ಅರಸನಿಗೆ ಮೂರ್ತಿಪೂಜೆ ಬಿಡಲು ತಿಳಿಸಿದಾಗ ಅವನು ಸಿಟ್ಟಿಗೆದ್ದು 'ಕೊಂದುಬಿಡುವೆ ನಿಮ್ಮ ಅಲ್ಲಾಗ ಬೆಂಕಿ ಹಚ್ಚುವೆ ಕೈಲಾಸಕ' ಎಂದು ಎಗರಾಡಿದನು. ಪೈಗಂಬರರ ಸಮಕಾಲೀನ ಸಮಾಜದಲ್ಲಿ 'ಬಿಸಮಿಲ್ಲಾ' ಎಂದವರಿಗೆ ಮರಣದಂಡನೆ ವಿಧಿಸಲಾಗುತ್ತಿತ್ತು. ಹಡೆದ ತಂದೆ-ತಾಯಿಗಳೇ ಇದಕ್ಕೆ ಒಪ್ಪಿಗೆ ಕೊಡುತ್ತಿದ್ದರು.

ಸತ್ಯದ ಮಾರ್ಗದಲ್ಲಿ ದಾನ ಧರ್ಮ ಮಾಡುತ್ತ ನಮಾಜ ರೋಜಾ ಪಾಲಿಸುತ್ತ ಮರಣವನ್ನಪ್ಪಿದರೆ ಅವರಿಗೆ ಸ್ವರ್ಗ ಸಿಗುವುದೆಂಬ ನಂಬಿಕೆ ಅಂದಿನ ಸಮಾಜದಲ್ಲಿತ್ತು. ತಾಯಿ-ತಂದೆಗಳಿಗೆ ದುಃಖವುಂಟುಮಾಡಿದರೆ, ಬೇರೊಬ್ಬರ ವಸ್ತುವನ್ನು ಸ್ವಾಧೀನಪಡಿಸಿಕೊಂಡರೆ ನರಕ ಪ್ರಾಪ್ತಿಯಾಗುವುದೆಂದು ಪೈಗಂಬರರ ಕಾಲದಲ್ಲಿ ತಿಳಿದುಕೊಳ್ಳಲಾಗಿದ್ದಿತು.

ಮೊಹರಂ ಪದಗಳನ್ನು ಬರೆದವರು ಪ್ರಚಲಿತವಿದ್ದ ಪ್ರಸಂಗಗಳನ್ನು ಕೇಳಿ, ದೊರೆತ ಶಾಸ್ತ್ರಗ್ರಂಥಗಳನ್ನು ಅಭ್ಯಸಿಸಿ ಪ್ರಾದೇಶಿಕ ಭಾಷೆಯಲ್ಲಿ ಸಮಾಜವನ್ನು ಯಥಾವತ್ತಾಗಿ ಚಿತ್ರಿಸುವ ಪ್ರಾಮಾಣಿಕ ಪ್ರಯತ್ನಮಾಡಿದ್ದಾರೆ. ಅದನ್ನು ಸಂಸಾರಿಕ ಚಿತ್ರಣ ಉದ್ಯೋಗ ವೃತ್ತಿ, ಜಾರ-ಜಾರೆಯರು, ಜ್ಯೋತಿಷ್ಯ-ಭವಿಷ್ಯ, ಮೋಸಗಾರರು-ಕೊಲೆಗಾರರು, ಬಡವರು-ಸಿರಿವಂತರು, ದೇವ ದೇವತೆಗಳು, ಮನೋರಂಜನೆ ಆಟಗಳು, ವೇಷಭೂಷಣ-ಅಲಂಕಾರಗಳು, ಊಟ-ತಿಂಡಿ-ತಿನಿಸು – ಮುಂತಾಗಿ ವಿಂಗಡಿಸಿ ನೋಡಬಹುದು.

***ಮೊಹರಂ ಪದಗಳ ಭಾಷೆ***

ಮೊಹರಂ ಪದಗಳ ತವನಿಧಿಯಾದ ಉತ್ತರ ಕರ್ನಾಟಕದ ಭಾಗವನ್ನು ಹಲವು ಕಾಲ ಮುಸ್ಲಿಂ, ಮರಾಠಾ ಮತ್ತು ಬ್ರಿಟೀಶ ಅರಸರು ಆಳಿದರು. ಅದರಿಂದಾಗಿ ಗುಲಬರ್ಗಾ, ರಾಯಚೂರು, ಬೀದರ್, ಬಿಜಾಪುರ, ಧಾರವಾಡ, ಬೆಳಗಾಂವ ಜಿಲ್ಲೆಗಳ  ಭಾಷೆಯ ಮೇಲೆ – ಉರ್ದು, ಮರಾಠಿ ಅರಬ್ಬಿ, ಪರ್ಶಿಯನ್ ಮತ್ತು ಇಂಗ್ಲೀಷ್ ಭಾಷೆಗಳ ಪ್ರಭಾವ ಹೆಚ್ಚಾಗಿದ್ದುದನ್ನು ಕಾಣಬಹುದು. ಮೊಹರಂ ಪದಗಳೂ ಇದಕ್ಕೆ ಹೊರತಿಲ್ಲ. ಜೊತೆಗೆ ಪ್ರಾದೇಶಿಕತೆಯೂ ಸಾಕಷ್ಟು ಪ್ರಭಾವ ಬೀರಿದೆ. ಇದರ ಜೊತೆಗೆ ತಮ್ಮ ಸುತ್ತ ಮುತ್ತಲಿನ ಪರಿಸರದಲ್ಲಿ

ಪ್ರಚಲಿತವಿದ್ದ ಅನೇಕ ದೇಶಿಯ ಪದಗಳನ್ನು ನುಡಿಗಟ್ಟುಗಳನ್ನು ಜನಪದ ಕವಿಗಳು ಯಥೇಚ್ಛ ಬಳಸಿ ಹಾಡಿ ತೃಪ್ತರಾಗಿದ್ದಾರೆ. ಇದು ಜೀವಂತ ಭಾಷೆಯ ಆರೋಗ್ಯಕರ ಲಕ್ಷಣ.

ಈ ಎಲ್ಲ ವೈಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ಮೊಹರಂ ಪದಗಳಲ್ಲಿ ಒಡೆದು ಕಾಣುವ ಭಾಷಾ ವೈಶಿಷ್ಟ್ಯಗಳನ್ನು – ಸ್ವರ ವ್ಯತ್ಯಾಸ, ಮಧ್ಯಸ್ವರಾಗಮ, ಮಧ್ಯವರ್ಣಲೋಪ, ಅನುಕರಣವಾಚಿಗಳು, ಕೂಡುನುಡಿಗಳು, ದ್ವಿರುಕ್ತಿಗಳು, ನುಡಿಗಟ್ಟುಗಳು, ತದ್ಭವಗಳು, ಬೈಗುಳ, ಗಾದೆಗಳು ಎಂದು ಸ್ಥೂಲವಾಗಿ ವರ್ಗೀಕರಿಸಿ ವಿವರಿಸಬಹುದು.

*ಮೊಹರಂ ಪದಗಳಲ್ಲಿ ಭಾವೈಕ್ಯ*

ಭಾರತದಲ್ಲಿ ಅನೇಕ ಜಾತಿಗಳು, ಅನೇಕ ಧರ್ಮಗಳು ಇದ್ದರೂ ಮೂಲಭೂತವಾಗಿ ಅವೆಲ್ಲವುಗಳ ಉದ್ದೇಶ ಒಂದೇ ಅದೇ ಸತ್ಯಾನ್ವೇಷಣೆ ವಿವಿಧತೆಯಲ್ಲಿ ಏಕತೆಯಿರುವುದೇ ನಮ್ಮ ದೇಶದ ಒಂದು ವೈಶಿಷ್ಟ್ಯ.

ಮೊಹರಂ ಆಚರಣೆ ಮೂಲತಃ ಶೋಕಸ್ಥಾಯಿಯಾಗಿದ್ದರೂ ಕಾಲಚಕ್ರದಲ್ಲಿ ತನ್ನತನವನ್ನು ಕಳೆದುಕೊಂಡು ಉತ್ಸವದ ರಂಗು ಪಡೆದು ರಂಜಿಸುತ್ತಿರುವುದು ಕಂಡುಬರುತ್ತದೆ. ಮೊಹರಂ ಹಬ್ಬದ ಸಂದರ್ಭದಲ್ಲಿ ಹಾಡಲಾಗುವ ಮೊಹರಂ ಪದಗಳು ಹಿಂದು-ಮುಸ್ಲಿಂ ಮೈತ್ರಿಯ ಭದ್ರ ಬುನಾದಿಯಾಗಿವೆ. ಇವು ಇಸ್ಲಾಂ ಧರ್ಮಕ್ಕೆ ಸಂಬಂಧಿಸಿರುವುದರ ಜೊತೆಗೆ ಇಸ್ಲಾಮೇತರ ಧರ್ಮಕ್ಕೆ ಸಂಬಂಧಿಸಿದವುಗಳಾಗಿವೆ. ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ ಮೊಹರಂ ಪದಗಳು ಸಹ ಹಿಂದೂ-ಸಂಸ್ಕೃತಿಯ ಗಾಢಪ್ರಭಾವಕ್ಕೆ ಒಳಗಾಗಿವೆ.

ಹಸೇನ ಹುಸೇನರನ್ನು ಒತ್ತೆಯಿಟ್ಟ ಹ | ಅಲಿ ಅವರ ಪದವು ಹಿಂದುಕಾವ್ಯಗಳಲ್ಲಿ ಬಸವಣ್ಣನವರು ಸೂರ್ಯನನ್ನು ತಡೆದು ನಿಲ್ಲಿಸಿದ ಕಥೆಯಿಂದ ಪ್ರೇರಣೆ ದೊರೆತಂತಿದೆ. ಬೆಳವನ ಪದ ಶಿಬಿ ಚಕ್ರವರ್ತಿಯ ಕಥೆಯನ್ನು, ಚಿಗರಿಯ ಕಥೆ ಮಲ್ಲಿಗೆ ದಂಡೆ ಎಂಬ ಜಾನಪದ ಹಾಡಿನಲ್ಲಿಯ ಗೋವಿನ ಕಥೆಯನ್ನು ಹೋಲುತ್ತದೆ.

ಮೊಹರಂ ಪದಗಳನ್ನು ಹಾಡುವ ಮೇಳಗಳಲ್ಲಿಯೂ ಮತೈಕ್ಯವನ್ನು ಕಾಣುತ್ತೇವೆ.

ನಾಗು-ಗೌಸು ಅಂತಾರ ಸೋಸಿ, ಸಂಗ್ಯಾಗದಿಗ್ಯಾನ ಬುದ್ದಿಗೆ ಬೆಲೆಯಿಲ್ಲಾ ರಿವಾಯಿತ ಹೇಳುವರಲ್ಲಾ ಖುಲ್ಲಾ- ಮುಂತಾದ ಹೆಸರುಗಳ ಯಾದಿಯನ್ನು ಹೇಳಬಹುದು.

*ಮೊಹರಂ ಪದಗಳ ಸ್ವರೂಪ ಲಕ್ಷಣ*

ಜನಪದ ಸಾಹಿತ್ಯದಲ್ಲಿ ಗೀತ ಸಾಹಿತ್ಯವು ಪ್ರಮುಖವಾದದ್ದು. ಗೀತ ಸಾಹಿತ್ಯದ ಒಂದು ಭಾಗವಾದ ಮೊಹರಂ ಪದಗಳು ಮೊಹರಂ ಹಬ್ಬದ ಸಂದರ್ಭದಲ್ಲಿ ಮಾತ್ರ ಬಯಲಿಗೆ ಬರುವಂತಹವುಗಳು. ಸಮಸ್ತರ ಚಿತ್ತವನ್ನು ಸೆರೆಹಿಡಿವ ಇವುಗಳನ್ನು ಶೋಕಸ್ಥಾಯಿಯ ಹಿನ್ನಲೆಯಲ್ಲಿ ಅತ್ಯಂತ ಗಂಭೀರವಾದ ದಾಟಿಯಲ್ಲಿ ಹಾಡಲಾಗುತ್ತದೆ. ಲಾವಣಿಯನ್ನು ಹೋಲುವ, ಲಾವಣಿಯಿಂದ ಭಿನ್ನವಾದ ತಮ್ಮದೇ ಆದ ಸ್ವರೂಪ ಲಕ್ಷಣಗಳುಳ್ಳ ಮೊಹರಂ ಪದಗಳು ಜನಪದ ಗೀತ ದಾಟಿಯಲ್ಲಿ ರೂಢಿಯಲ್ಲಿವೆ.

ಶರಣರ ಮತ್ತು ದಾಸರ ಪದಗಳಲ್ಲಿ ಇರುವಂತೆ ಮೊಹರಂ ಪದಗಳಲ್ಲಿಯೂ ಪಲ್ಲ ಅನು ಪಲ್ಲ ನುಡಿಗಳು ಇರುತ್ತವೆ. ಸಭಿಕರನ್ನು ಉದ್ದೇಶಿಸಿ ಪ್ರಾರಂಭವಾಗುವ ಪಲ್ಲದಲ್ಲಿ ಕಥೆಯ ಉದ್ದೇಶವನ್ನು ಹೇಳಲಾಗಿರುತ್ತದೆ. ಅನಂತರ ಬರುವ ನುಡಿಗಳಲ್ಲಿ ಕಥೆಯನ್ನು ವಿವರಿಸಲಾಗಿರುತ್ತದೆ. ಪ್ರತಿನುಡಿಗಳ ಕೊನೆಗೆ ಪಲ್ಲ ಇರುತ್ತದೆ. ಪದದ ಕೊನೆಯಲ್ಲಿ ಕವಿಗಳ, ಹಾಡುಗಾರರ ಪರಿಚಯ ಅಂಕಿತ ಇರುತ್ತದೆ.

ಪಲ್ಲ ಮುಕ್ತಾಯಗೊಂಡ ತರುವಾಯ ಆರಂಭವಾಗುವ ನುಡಿಗಳು ರೂಪದಲ್ಲಿ ಪಲ್ಲದ ಛಂದಸ್ಸನ್ನೇ ಹೋಲುತ್ತಿದ್ದರೂ ಸಾಲುಗಳ ಸಂಖ್ಯೆ ಹೆಚ್ಚಾಗಿರುತ್ತವೆ. ಇವುಗಳನ್ನು ದಾಟಿಗನುಗುಣವಾಗಿ ಇಳವು, ಏರು ಚ್ಯಾಲ ಎಂದು ವರ್ಗೀಕರಿಸಿ ನುಡಿಗಳನ್ನಾಗಿ ಮಾಡಿರುತ್ತಾರೆ. ಎಂಥ ಗಂಭೀರ ಸನ್ನಿವೇಶಗಳನ್ನು ಸಹ ಇವು ಯಶಸ್ವಿಯಾಗಿ ನಿರೂಪಿಸುತ್ತವೆ.

ಮೊಹರಂ ಪದಗಳಲ್ಲಿ ವೃತ್ಯಾನುಪ್ರಾಸ, ಛೇಕಾನುಪ್ರಾಸ, ಅಡಿಪ್ರಾಸ ಇದ್ದು ಇವು ಕೇಳುಗರ ಮನ ಅರಳಿಸುವಲ್ಲಿ ಸಫಲವಾಗುತ್ತವೆ. ಮೊಹರಂ ಪದಗಳ ಒಂದು ಭಾಗವಾದ ಸವಾಲ್ ಜವಾಬ್ ಪದಗಳು ಮೂಲತಃ ಸ್ಪರ್ಧಾ ಮನೋಭಾವ ಇರಿಸಿಕೊಂಡೇ ಹುಟ್ಟಿದಂತವುಗಳು. ಇವುಗಳಲ್ಲಿ ಸಾಹಿತ್ಯಕ ಸತ್ವಕ್ಕಿಂತ ಪುರಾಣ, ಶಾಸ್ತ್ರಧರ್ಮಕ್ಕೆ ಸಂಬಂಧಿಸಿದ ವಿಷಯ ವರದಿಗಳು ಇರುತ್ತವೆ. ತೋಡಿ ಪದಗಳು ಸ್ಪರ್ಧಾ ಮನೋಭಾವವುಳ್ಳವುಗಳಾಗಿದ್ದರೂ ಸವಾಲ್ ಜವಾಬ್ ಪದಗಳಿಗಿಂತ ಭಿನ್ನವಾಗಿರುತ್ತವೆ.

ಮೊಹರಂ ಪದಗಳು ಲಾವಣಿಯ ಶಿಲ್ಪವನ್ನು ಹೋಲುತ್ತಿದ್ದರೂ ಹಾಡುವ ದಾಟಿ ಹೇಳುವ ಕಥಾವಸ್ತುವಿನಿಂದ ಭಿನ್ನವಾಗಿ ನಿಲ್ಲುತ್ತವೆ. ಛಂದಸ್ಸಿನ ದೃಷ್ಟಿಯಿಂದ ನೋಡಿದಾಗ ಶಿಷ್ಟ ಸಾಹಿತ್ಯದ ಛಂದಸ್ಸುಗಳಿಗೆ ಜನಪದ ಹಾಡುಗಳು ಹೊಂದಿಕೊಳ್ಳುವುದಿಲ್ಲ. ಆದರೂ ಕೆಲವು ಮೊಹರಂ ಪದಗಳು ಹಾಡು ಗಬ್ಬಗಳ ಛಂದಸ್ಸಾದ ಸಾಂಗತ್ಯ, ಅಥವಾ ತ್ರಿಪದಿಯ ಮೊದಲಿನ ಸಾಲಿನ ಅಂಶಗಣ ಛಂದಸ್ಸಿಗೆ ಹೆಚ್ಚು ಹತ್ತಿರವಾಗಿ ನಿಲ್ಲುತ್ತವೆ.

ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಮೊಹರಂ ಪದಗಳು ಮಾತ್ರಾಗಣಕ್ಕೆ ಹೊಂದಿಕೊಳ್ಳುವುದಿಲ್ಲ. ಆದರೆ ಲಯದ ದೃಷ್ಟಿಯಿಂದ ಕೆಲವೊಂದು ಪದಗಳು ಅಪರೂಪವಾಗಿ ಶರಷಟ್ಪದಿ, ಲಯ, ಭಾಮಿನಿ ಷಟ್ಪದಿ ಲಯವನ್ನು ಹೋಲುತ್ತವೆ. ತಾಳದಲ್ಲಿ ಏಕತಾಳ, ಕೇರವಾತಾಳ, ದಾದರ ದೀಪಚಂದಿಯನ್ನು ಹೋಲುತ್ತವೆ.

ಹೀಗೆ ಹಿಂದು-ಮುಸ್ಲಿಂ ಸಾಮರಸ್ಯದ ಸಂಕೇತಗಳಾಗಿ ಉಳಿದು ಬಂದಿರುವ ಈ ಮೊಹರಂ ಪದಗಳು ಜನಪದ ಸಾಹಿತ್ಯದ ಅಮೂಲ್ಯರತ್ನಗಳು ಅವುಗಳನ್ನು ಉಳಿಸಿಕೊಂಡು ಹೋಗಬೇಕಾದುದು ನಮ್ಮ-ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

***– ಡಾ|| ದಸ್ತಗೀರ ಅಲ್ಲೀಭಾಯಿ***

---

**2.B Lewis & others (Ed) – Encyclopedia of Islam Vol.III (Netherland Pub-1971) P : 611. Prof. Fazl Ahmad – Husain (Taj Comp Pub New Delhi – 1983) Pg No. : 137.**

[2] **೩. ಡಾ. ದಸ್ತಗೀರ ಅಲ್ಲೀಭಾಯಿ – ಹೈದ್ರಾಬಾದ್ ಮೊಹರಂ (ಸಂ. ಕ. ೨೮.೭.೧೯೯೦) ಪುಟ : ೩.**

[3] **4. G..E. Grunebaum – Mohammadan Festivals (H.S. Pub New Yark – 1951) P : 89.**

[4] **5. Mrs. Meer Hasan ali – Observations of the Muslaman’s of India Pg No. : 18.**

[5] **6. Shaikh Abrar Husain – Marriage Customs A.M. in India (Sterling Pub – 1976) P : 20.**

[6] **೭. ಎಂ. ಜೀವನ – ಟೀಪೂ ಎಕ್ಸ್‌ಪ್ರೆಸ್ (ನವ ಸಮಾಜ ಪ್ರಕಾಶನ ಹುಬ್ಬಳ್ಳಿ–೧೯೮೨) ಪು : ೮೬.**

[7] ೮.	**ಡಾ. ಎಂ. ಅಕಬರಅಲಿ – ಕರ್ಬಲಾ ಹಾಡುಗಳು (ಜಾ.ಸಾ.ದ. ಭಾಗ–೧, ಕ.ವಿ.ವಿ.ಧಾ–೧೯೭೪) ಪು:೨೫೧**

[8] ೯.	**ಡಾ. ಹಿರಣ್ಮಯ – ಮುಸ್ಲಿಂ ಉತ್ಸವ ಮತ್ತು ಸಂಸ್ಕಾರಗಳು (ಮೈ.ವಿ.ವಿ. ಮೈಸೂರು–೧೯೭೧) ಪು.೧೯.**

[9] ೧೦.	**ಡಾ. ದಸ್ತಗೀರ ಅಲ್ಲೀಭಾಯಿ – ಕ. ಮೊಹರಂ ಪದಗಳು (ಅಪ್ರಕಟಿತ ಮಹಾಪ್ರಬಂಧ) ಪು. ೨೬೬.**

[10] ೧೧.	**ಮಮ್ತಾಜ – ಹಜ್ಜಯಾತ್ರೆ (ತರಂಗ ವಾರಪತ್ರಿಕೆ ಮಣಿಪಾಲ ೧೬.೯.೧೯೮೪) ಪುಟ. : ೯-೧೦.**

## ಇಸ್ಲಾಂ ತತ್ವ ಮಹಿಮಾ ಸಾರುವ ಪದಗಳು

### ೬. ಅಬುಶ್ಯಾಮಾನ ಪದಾ

ಕೇಳರಿ ದೈವಾ ಚಂದಾ ಧ್ಯಾನಕ ತಂದಾ
ಇಟ್ಟ ಕೇಳರಿ ಖ್ಯಾಲಾ ಮಾಡಬ್ಯಾಡರಿ ಗುಲ್ಲಾ ತಗದೇನಿ ಶಾಸ್ತ್ರಸಂದ
ಏರು || ಕರಕೊಂಡ ಉಮರ ಅಬುಶ್ಯಾಮಾಗ | ಸ್ಮರಣಿ ಮಾಡ್ಯಾರೋ ಆಗ
ಕಾಬೇದೊಳಗ ತಿರುಗಿ ಬರುವಾಗ | ದಾರಿವೊಳಗ ಇಬ್ಲೀಸ ಮಾಡಿಮೋಸ
ಅವರ ಮನಸ ಒಡಿಸ್ಯಾನ ಅಬುಶ್ಯಾಮಾಗ || ೧ ||

ಇಳು || ಬಾಯಿಲೆ ಹೀಂಗಂದಾ ಶರಣಾರಮುಂದಾ
ದಣಿವಿನ ಸಲುವಾಗಿ ಅಗಸುದ್ದೆ ತಂದೇನಿ ಈಗ | ಕೆರೆ ಅಂತ ತಿಳಿಲಿಲ್ಲ ಬೇಧಾ
ಏರು || ಕುಡದ ಅಬುಶ್ಯಾಮಾಗ ಆದೀತ ಅಮಲಾ
ಕರಕೊಂಡ ನಡದಾನ ತನ್ನ ಹಿಂಬಾಲಾ | ಹೆಣ್ಣು ಒಂದು ಅಸಲಾ
ಇತ್ತ ಭಿನ್ನ ಮೌಲಾ | ಆಕಿ ಸಂಗ ಮಾಡಿ ಹೀಂಗ ಬಾಳ ರಂಗ
ಹಾರಸ್ಯಾರ ಬಂದ ಒದಗೀತೋ ಕೆಡಗಾಲಾ || ೨ ||

ಇಳು || ಅಬುಶ್ಯಾಮಾ ಅಲ್ಲಿಂದ ಮನಿಗೆ ಬಂದಾ | ನಿಂತಿತ ಆಕೀಗೆ ಅಮಲಾ
ಒಂಬತ್ತು ತಿಂಗಳ ಮ್ಯಾಲಾ | ದಿನಾ ತುಂಬಿ ಹಡದಾಳ ಕಂದಾ
ಏರು || ಎತಗೊಂಡ ಕೂಸಿಗೆ ತನ್ನ ಬಗಲಾಗ
ಕುಶಿಲಿಂದ ಆಕಿ ಹೊಂಟಾಳೋ ಆಗ | ಇಬ್ಲೀಸ ಬ್ಯಾಗ
ಕರಕೊಂಡ ಸಂಗ | ತಂದಾನ ಬಂದಾನ ಅಂದಾನ
ಉಮ್ಮರ ಮೊಮ್ಮಗ ನಡಿರೆಂದಾ || ೩ ||

ಇಳು || ಬಿತ್ತ ಉಮರಗೆ ಅಗಾಧ ಪರಿಪರಿಲಿಂದ ಆದಂತಾ
ಮಜಕೂರ ತಿಳಿಸಿ ಹೇಳ್ಯಾನ ಪೂರಾ | ವಿಚಾರ ಮಾಡಿರೆಂದಾ
ಏರು || ಮಿತ್ರಮಂಡಳಿ ಕೂಡಿತ ಜನಾ | ಕರಸ್ಯಾರ ಉಮ್ಮರ ಅಬುಶ್ಯಾಮಾನ
ಕಟಗೀಲೆ ನಿನ್ನಾ | ನೂರ ಸರತೆಯಿನ್ನಾ | ಹೊಡಿಬೇಕ ಬೈಸಕಾರ
ಶಾಸ್ತ್ರಕ್ಕ ಹೊಡಿ ತಪ್ಪು ಆಗೈತಿ ನಂದಾ || ೪ ||

ಕಟಗೀಲೆ ಎಣಿಸಿ ಒಂದೊಂದು ಬೆನ್ನಮ್ಯಾಲೆ ಹೊಡದಾ
ತೊಂಬತ್ತ ಕಟಗಿನಾ | ಹೊಡದಾಗ ಸೀಳೀತೋ ಬೆನ್ನಾ |
ಪ್ರಾಣ ಹೋತೊ ಅಬುಶ್ಯಾಮಾಂದಾ
ಏರು || ಮುಸಲ್ಮಾನಿ ಧರ್ಮಾ ಬಿಟ್ಟು ಅಬುಶ್ಯಾಮಾ ಮಾಡಿದ ಕರ್ಮಾ
ಸುಡತಾನ ಬ್ರಹ್ಮಾ ಇದರಾಂಗ ತಮ್ಮಾ | ಹಿಡುತಾನ ಹೊಡುತಾನ
ಸುಡತಾನ ಬೆಂಕ್ಯಾಗ | ಸುಳ್ಳಲ್ಲೋ ಶಾಸ್ತ್ರದ ಬೇಧಾ || ೫ ||

ಹತ್ತಕಟಗಿ ಉಳಿದಿದ್ದವು ಮುಂದಾ | ಗೋರಿಮ್ಯಾಲೆ ಹೊಡದಾ
ಗರುವು ಎಂಬುದು ಬಿಟ್ಟಾ | ಹಿಡಿಯಿರಿ ಮಾರ್ಗ ನೀಟಾ
ಹುಕುಮ ಹೀಂಗ ಐತಿ ಸಾಂಬಂದಾ
ಏರು || ಶ್ರೇಷ್ಠ ಬಾಗಲಕೋಟಿ ಶ್ಯಾರಾ | ಹಳೇ ಪ್ಯಾಟಿವೊಳಗ
ಅದಾನೊ ಕೇಸು ಪೀರಾ | ದಯಾಯಿಟ್ಟ ಪೂರಾ ಅವನ ಆಧಾರಾ
ಪ್ರಾಸ ಅಡಿ ಹೀಂಗ | ನೋಡಿ ಹುಡಿಕ್ಯಾಡಿ | ತರಬೇಕ ನಾಗು-ಗೌಸುನ ಮುಂದಾ || ೬ ||

* * *

**೭. ಗರ್ವ ಮರೆದು ನರಕದ ಸ್ವಾದೀನವಾದ ಶಬ್ದಾದ ಅರಸನ ಪದಾ**

ಶ್ರೀ ಸುಂದ್ರ ಸಭಾ ದೇವಿಂದ್ರ | ಸೂರ್ಯ ಚಂದ್ರನ ಸರಿಯೇಕಂದ್ರ
ಏನ ಬಂದ ಕೂಡಿರಿ ಅತಿ ಪ್ರೀತಿಯಿಂದ ಸರೂ ಸಂಪೂರ್ಣಾಗಿ ||
ಶಬ್ದಾದ ಹುಟ್ಟಿದ ಜಲ್ಮಾ | ಇದು ಒಂದು ತಿಳಿಸುವೆ ಕಲ್ಮಾ
ಕೇಳರಿ ಇಟ್ಟ ಖ್ಯಾಲಾ | ಕುಂತವರು ಬುದ್ಧಿವಂತರು
ಕೇಳಿ ಹೌದ ಅನಬೇಕ ಶಾಸ್ತರ | ಓದ ಬರಿ ಬಲ್ಲವರು
ಬರುತಿತ್ತ ಹಡಗೊಂದು | ತೇಲಿ ನೀರಿನ ಮ್ಯಾಲೆ | ಏನ ಹೇಳಲಿ ಸಮುದ್ರದಲ್ಲಿ
ಒಡದ ಹಡಗ ಏಕಾಯೇಕಿ ಸಿಡದ ಹಲಗಿ ಮ್ಯಾಲೆ
ಕುಂತಾಳ ಒಬ್ಬ ಹೆಣ್ಣ ಬಾಲಿ
ಉಳದ ಜನಾ ಒಡದ ಹಡಗ | ಬಿದ್ದು ಸತ್ತಾರ ಮುಳುಗಿ || ೧ ||

ಆ ಹಲಗಿ ನೀರಿನ ಮ್ಯಾಲೆ ತೇಲಿ | ಹೋಗು ವ್ಯಾಳೇಕ ಆ ಕ್ಷಣದಲ್ಲಿ
ಕರುಣೀಶ್ವರನ ಕರುಣದಿಂದ ಹೆಣ್ಣ ಬಾಲಿ | ಹಡದಾಳ ಚನ್ನಾಗಿ
ಏರು || ಕಮಲ ಪುತ್ರ ಹುಟ್ಟಿತೋ ಅಂದ | ನೇತ್ರ ಆತನ ಸುದ್ದ
ಆ ಕೂಸು ಅದೆ ಶಬ್ದಾದ | ಜನಾ ಕೇಳರಿ | ಮಿತಿಮೀರಿ

ಕುಂತೀರಿ ಚೌಕಾಸಿ ಮನಕ ಮಾಡಿ ತಿಳದ ನೋಡರಿ
ಶಿವನ ಅಪ್ಪಣಿ ಇಜರಾಯಿಲಗ ಆತ ಹೀಂಗ
ತಡಮಾಡದೆ ಹೋಗಿ ಈ ಕ್ಷಣಕ | ತೇಲಿ ಹೋಗುವ ಹಲಗಿಮ್ಯಾಲೆ
ಹಡದ ಹೆಣ್ಣ ಬಾಲಿಯ ಜಲ್ಮಾ | ನೀ ತಗಿಯಬೇಕ
ತಡಮಾಡದೆ ತಗದಾರ ಜಲ್ಮಾ | ಮರಮರಗಿ || ೧ ||

ಕೂಸ ಆಡತಿತ್ತ ಕೈ ಚೆಲ್ಲಿ | ಆ ದಿವಸ ಸಮುದ್ರದಲ್ಲಿ
ನೀರಿನ ಮ್ಯಾಲೆ ಹಲಗಿ | ಹೋಗತಿತ್ತ ಹೀಂಗ ತೇಲಿ | ಸಾಂಬನ ಕರುಣಾಗಿ
ಏರು || ಕಂಡ ಆಗ ಸರೂ ಆಗಿ ದಂಗ | ಹಿಡದಾರ ಆಗಿಂದ ಆಗ
ಕೂಸಿನ ಎತ್ತಿ ಬಗಲಾಗ | ಒಳೇ ಪ್ರೀತೀಲೆ |
ಹಲಗಿಯ ಮ್ಯಾಲೆ ಮರಣ ಹೊಂದ್ಯಾಳ ಹಡದ ತಾಯಿ
ಅಂತ ತಮ್ಮ ಹಸ್ತೀಲೆ ತಗದ ಹೆಣಾ | ಅಲ್ಲೇ ಮಾಡಿ ಮಣ್ಣಾ
ಕರುಣದಿಂದ ಓದ್ಯಾರ ತರುಣ ಬಾಲಕರಾ
ತಮ್ಮ ಪೈಕಿ ಒಬ್ಬ ಶ್ರೀಮಂತ | ಇದ್ದಂತಾ ಮಿತ್ರಗ ಕೊಟ್ಟಾರ ಆ ಕಂದನಾ
ಕಂಡ ಕೂಸೀನಾ ಅಪ್ಪಿಕೊಂಡಾನ ಹರುಷಾಗಿ || ೩ ||

ಇ|| ಏನ ಕೂಡಿಸಿ ಕೊಟ್ಟಾ ಭಗವಾನಾ | ನನ್ನ ಹೊಟ್ಟೀಲೆ ಇದ್ದಿಲ್ಲಾ ಸಂತಾನಾ
ಅಂತ ಪ್ರೀತಿಲಿಂದ ಕೂಸಿಗೆ ನೋಡುವಾ | ಜ್ವಾಪಾನ ತನ್ನ ಮನದಲ್ಲಿ ಹಿಗ್ಗಿ ||
ಏರು || ವಯಾ ವರ್ಷ ಏಳೆಂಟ | ಇದ್ದಾಗ ಚಲ್ಲಾಟ
ತಮ್ಮ ಗೆಳೆಯರೊಳಗೆ ಶ್ರೇಷ್ಟ | ಆಗಿ ಅವನು | ಆ ಹುಡುಗನು
ಕೂಡಿ ಹುಡುಗರ ಸಂಗಡ ಹರುಷಾಗಿ ಆಡುತ್ತಿದ್ದನು
ಅಷ್ಟರೊಳಗ ದಂಡ ಅರಸಂದು ಬಂತ ಅಲ್ಲೆ
ಕಂಡ ಹುಡುಗರು ಓಡಿ ಹೋಗ್ಯಾರಲ್ಲಾ | ದಿಟ್ಟ ಮಹಾದೊರಿಷ್ಟ
ದಿಬ್ಬಯೇರಿ | ನೋಡುತ್ತ | ಕುಂತ ನಿಂತಾನಲ್ಲಾ
ದಂಡ ಮನಗಂಡ ಮುಂದ ಹೋಗೂದು ಸಾಗಿ || ४ ||

ಆಮಂದಿ ಪೈಕಿ ಒಬ್ಬಾವಗ | ಸಣ್ಣ ಚೀಲದೊರಿತ ದಾರ್‍ಯಾಗ
ಕಣ್ಣಿಗೆ ಹಚ್ಚುದು ಸುರಮಾ ಇತ್ತ ಅದರೊಳಗ ನೋಡ್ಯಾನ ತಿರಮುರಗಿ
ಏರು || ಹಿಂದ ಉಳದ ಮಂದಿಗೆ ಎಲ್ಲಾ | ಹಿಡದ ಕೈಯಾಗ ಚೀಲಾ
ತೋರಿಸಿ ತಿಳಿಸ್ಯಾನ ಖುಲ್ಲಾ | ಈ ಕ್ಷಣದಲ್ಲಿ | ದಾರಿಯಲ್ಲಿ
ಸಿಕ್ಕಷ್ಟಿರುವುದು ಸುರಮಾ | ಕಣ್ಣಿಗೆ ಹಚ್ಚಿ ನೋಡರಿ ಪ್ರೀತೀಲೆ
ಅಂಜಿ ಜೀವಕ ಮಂದಿ ಅಂತಾರ ಅವನಿಗೆ
ನಂಬಬಾರದು ಈ ಸಿಕ್ಕೀದ ಬದಕ | ಒಳಿತಲ್ಲಾ ಮೊದಲಿಗೆ
ನಮ್ಮ ಕಣ್ಣಿಗೆ ಹಚ್ಚುದು ಯಾರಿಗಾದರ ಹಚ್ಚಿ ನೋಡಬೇಕ
ಹೀಂಗ ಅಂತ ಕಲ್ಪನಾ ತಗದಾರ ತಲಿದೂಗಿ || ೫ ||

ಇನ್ನ ಯಾರಿಗೆ ಹಚ್ಚಬೇಕಂತ ನೋಡ್ಯಾರ ಸುತ್ತಮುತ್ತ ನಿಂತ
ಒಬ್ಬ ಹುಡುಗ ದಿಬ್ಬದ ಮ್ಯಾಲೆ | ನಿಂತಿದಾ ಒಳೆ ಕುಣಕೊಂತಾ
ಕಂಡ ಕರದಾರ ಕೂಗಿ
ಏರು || ಥೈ ಥೈ ಕುಣಕೊಂತಾ ಬಂದ ನಿಂತಾ
ಅವರಂತೀಲೆ ಸೊಂತಾ | ಭೆಟ್ಯಾಗಿ ಕೇಳ್ಯಾನ ನಗುತಾ
ತುರ್ತ ಹೇಳರಿ | ತುಸು ತಿಳಿಸರಿ ಕೇಳುವೆಗೊಟ್ಟ ನನಗ
ಏನ ಕಾರಣ ಕರದಿರಿ | ಅಂತಾರ ಎಲ್ಲಾರು ಬಾ ತಮ್ಮಾ ಮುಂದಕ್ಕ
ಹಚ್ಚಿಕೋ ಸೂಕ್ಷಮಾ ಈ ಸುರಮಾ
ಕೇಳಿ ತೆರೆದ ಕಣ್ಣಾ ನಿಂತಾನ ಅಂತಾನ ಹಚ್ಚಿರಿ ಆದರ ನಿಮ್ಮ ಪ್ರೇಮಾ
ಹಚ್ಚಿದಾರ ಕಣ್ಣಿಗೆ ಸುರಮಾ ಮನಸಾಗಿ || ೬ ||

ಏನ ಹೇಳಲಿ ಹಚ್ಚಿದ ಕ್ಷಣಿಕ | ಭೂಮಿವೊಳಗ ಇದ್ದಂತಾ ಬದಕ
ಒಳೇ ನಿಚ್ಚಳಾಗಿ ಕಂಡ ಬಂತ ಕೇಳರಿ ಜನಲೋಕ
ಕುಂತಾನ ಮನಹಿಗ್ಗಿ ಅಂತಾನ ಅಯ್ಯೋ ಭಗವಾನಾ
ಕಳದಿಟ್ಟಾರ ನನ್ನ ಕಣ್ಣಾ | ನಾ ಮಾಡಲಿ ಇನ್ನೇನಾ
ಅಂತ ಮೆಲ್ಲಕ ಬಿದ್ದ ನೆಲಕ | ಅಂತಾರ ನಮ್ಮ ಅರಸರಲ್ಲೆ
ಹೋಗಿ ಹೇಳುವೆ ಬೇಶಕ್ | ಹೌಹಾರಿ ಗಾಬಾಗಿ
ದಿಕ್ಕಿಲ್ಲದಾಂಗ ಜನಾ | ಮಿಕ್ಕಿ ಓಡ್ಯಾರ ಏನ ಹೇಳಲಿ
ಗತ್ತ ಮಾಡಿ ಅತ್ತ ಇತ್ತ ನೋಡಿ | ಕುಂತ ಚೇಲಾ ತಗೊಂಡ ತನ್ನ ಹಸ್ತೀಲೆ
ಸಲುಹಿದಂತಾ ತನ್ನ ತಂದಿಗೆ ತಿಳಿಸ್ಯಾನ ಹೋಗಿ || ೭ ||

ಇಷ್ಟ ಮಾತ ಕೇಳಿ ಖುಷಿಯಾದಾ ಪುತ್ರನ ಮುಂದ ಹೀಂಗ ಅಂದಾ
ಸಿಕ್ಕಿದಲ್ಲೇ ಬದುಕ ತಕ್ಕೊಂಡ ಬಾ ವ್ರತದಿಂದ | ನೋಡುವೆ ಹರುಷಾಗಿ
ಏರು || ಆರತಾಸ ರಾತ್ರಿ ಅಮಲಾ ಆದಿತ್ಯ ಹೊಂಟಾನಲ್ಲಾ
ಹಚ್ಚಿ ಸುರಮಾ ಕಣ್ಣಿಗೆ ಮೊದಲಾ | ಊರ ಹೊರಗ ಹೋಗು ದಾರ್‍ಯಾಗ
ಭೂಮಿವೊಳಗ ಇದ್ದಂತಾ ಬದಕ | ಕಂಡ ಬಂತರಿ ಪುತ್ರಗ
ಕಂಡ ಗುದ್ದಲಿ ಹಚ್ಚಿ ಹಡ್ಡಿ ಭೂಮಿ | ಬದಕ ತಗಸಿ ಹೇರಸ್ಯಾನ
ಕತ್ತಿಮ್ಯಾಲಾ | ಮುತ್ತು ಮಾಣಿಕ ಹೊನ್ನ ವಜ್ರ ಬೆಳ್ಳಿ ಮುತ್ತು
ಬಂಗಾರ ಕಂಡ ದಂಗ ಆಗ್ಯಾರಲ್ಲಾ | ತಡಮಾಡದೆ
ಮುಟ್ಯಾರ ಮನಿಗೆ ಪುನಾ ಹೋಗಿ ||೮||

ಲೆಕ್ಕಿಲ್ಲದೆ ಮನಿಯಾಗ ಬದುಕ | ಒತ್ತಟ್ಟೆ ಇತ್ತ
ಇಟ್ಟಾರ ಹೇಳಲಿ ಏನ ಹೊಳುತಿತ್ತ ತುಂಬ ಬೆಳಕ ಚಂದ್ರನ ಸರಿಯಾಗಿ
ಏರು || ಇದರಂತೆ ಎಷ್ಟೋ ದಿನಾ ತಂದ ಕೂಡಿಸ್ಯಾನ ಹಣಾ
ಕಂಡ ಊರಾನ ಎಲ್ಲಾ ಜನಾ ಆಗಿ ಗೆಳೆಯರು ಕೂಡಿ ನಡುವುವರು
ಕೂಡಿ ಮಸಲತ ಮಾಡಿ ಊರ ಸರದಾರನಿಗೆ ಕೊಂದರು
ಈ ಸುದ್ದಿ ಸುದ್ದಾಗಿ ಮುಟ್ಟೀತ ಸದರಿಗೆ

ಸಿದ್ದಾಗಿ ಫೌಜುದಾರ ಕಟ್ಟಿ ನಡಾ ಹೊಂಟಾನ ಕಂಡಾನ
ಪುಂಡ ಶಬ್ಬಾದನು ಹಿಡದ ಕೈಯಾಗ ಹತಿಯಾರ ಜೋಡಾ
ಜಿಗದ ಫೌಜದಾರಗ ಕಡದಾ ಸಿಟ್ಟಾಗಿ || ೯ ||

ಧೋಡೆ ದಿವಸ ಆದ ನಂತರಾ | ಏನ ಹೇಳಲಿ ಶಿವನ ತಂತರಾ
ಅಲ್ಲೆ ಅರಸ ಮರಣ ಹೊಂದಿದ ಕೇಳಿ ಬಹಾದ್ದೂರಾ
ಹೊಂಟಾನ ಲಗುಬಿಗಿ ||
ಹೋಗಿ ಪಟ್ಟ ಕಂಡ ಕಣಗಂಡ | ಸ್ವಾದೀನ ಮಾಡಿಕೊಂಡ
ಎಲ್ಲಾ ಅರಸರ ಆಗಿ ಗಂಡ | ಪುಂಡಾತ್ಮನು | ಶಬ್ಬಾದನು
ಆದ ಸರಿ ಶ್ರೇಷ್ಟಾಗಿ ಸೃಷ್ಟಿವೊಳಗ ಆಳಹತ್ತಿದನು
ಬಂತ ಗರು ಆಗ ಶಬ್ಬಾದ ಮಂದಿಗೆ ಅಂತಾನ ನನಗ ಭಜಿಸಬೇಕ
ಶಿವನಂತ ಸ್ಮರಿಸಿರಿ | ನೋಡಿರಿ | ನಡಿಯಿರಿ | ತಿಳಿಸುವೆ ತಿಳಿಯಿರಿ
ಒಮ್ಮೆ ಮನಕ ಕೇಳಿ ಕೈ ಮುಗದಾರ ಜನಾ ತಲಿಬಾಗಿ || ೧೦ ||

ಸುದ್ದಿಕೇಳಿ ಪಂಡಿತರೆಲ್ಲಾ ಬಂದ ತಿಳಿಸ್ಯಾರ ಅರಸಗ ಮೊದಲಾ
ಬಿಡೋ ಪಂತ ಶಿವಗ ನೆನಸಂತ ತಿಳಿಸ್ಯಾರ ಖುಲ್ಲಾ ನಿಷ್ಟೀಲೆ ಸರಿಯಾಗಿ
ಏರು || ಕಂಡಿ ಸ್ವರಗ ತಿಳಿ.  ನೀನು ಮನಕ | ಇಲ್ಲಂದರ ಬೇಶಕ್
ಸುಟ್ಟ ಹ್ವಾದಿಯೋ ನರಕಕ | ಸಿಟ್ಟಾದನು ಶಬ್ಬಾದನು
ಅಂತಾನ ಶಿವನಿಗೆ | ಸತ್ತರ ಬಾಗಿ ತಲಿ ನಡಿಲಾರೆನು
ಯಾತಕ ಶಿವನಿಗೆ ನೆನಸಲಿ ಸ್ವರಗದ ಸಲುವಾಗಿ
ಸ್ವರಗ ಈ ಭೂಮಿಮ್ಯಾಗ ಮಾಡುವೆ ತಯ್ಯಾರ ಅಂತ ಪಣಾತೊಟ್ಟ
ತಯಾರ ಮಾಡ್ಯಾನ | ಸೊರ್ಗಾ ಆಗ | ಪ್ರೀತೀಲೆ ಅರಸ ತನ್ನ ಹಿತ ಸಲುವಾಗಿ || ೧೧ ||

ಇ|| ಆ ಸೊರ್ಗಾ ನೋಡಬೇಕಂತ | ಹೊಂಟಾನ ಕುದುರಿ ಮ್ಯಾಲೆ ಕುಂತ
ಸುತ್ತಿ ಜರಕಾಟಿ ಮಂದೀಲ | ಕುಣಿಸುವಾ ಕುದುರಿ ಸ್ವಂತಾ
ಅಲ್ಲೆ ಇಟ್ಟಾನ ಹೋಗಿ | ಶಿವನ ಅಪ್ಪಣಿ ಇಜರಾಯಿಲಗ
ಆದ ಕ್ಷಣಕ ಬಂದ ಬ್ಯಾಗ | ಜೀಂವಾ ತಗದಾರ ತುರ್ತ ಆಗ
ಸತ್ತ ಬಿದ್ದನು ಶಬ್ಬಾದನು | ಮಾಡಿ ಸ್ವರಗ ಕಾಣದೆ
ಹೋಗಿ ನರಕಕ ಹೊಂದಿದನು | ಐಕಾತ ಸ್ವರಗ ಆಗ
ಇದ್ದ ಜನಾ ಸತ್ತ ನಷ್ಟದು ಯಾರ್‍ಯಾರ ಉಳಿಯಲಿಲ್ಲಾ ||
ಯಾರಿಗೆ ತಿಳಿಯದು ಸಾಂಬನ ಕೌತುಕ | ಕೇಳಿರಿ ಕುಂತೀರಿ ದೈದವರೆಲ್ಲಾ
ಮತ್ತೊಂದು ಮಾಡುವೆ ಸವ್ವಾಲ ಶಾಸ್ತರ ಸರಿಯಾಗಿ || ೧೨ ||

ಸೊರ್ಗಾ ಐಕ್ಯಾದ ಮಜಕೂರ ನೀ ಕೇಳೋ ಕೊಳರ ಶಾಹೀರಾ
ಅ ಸೊರ್ಗಾ ಪುರುಷ ಒಬ್ಬ ಕಂಡಾನ ಹೇಳ ಅವನ ಹೆಸರ
ನೀ ಕೇಳೋ ಕಸಬಸಗಿ ಹೇಳೋ ನೋಡೂನು ಶಾಣೇತನಾ
ಬಿರದ ಹಚ್ಚೇನಿ ಅಂತ ಪಣಾ | ಇಟ್ಟ ಹಾಡಿದೋ ಹೈವಾನಾ

ತಿಳಿದ ಹೋಗಲಿ ಸಭಾದಲ್ಲಿ | ಸಾವುತನಕ ಇದು ಒಂದ ಸವ್ವಾಲಾ
ಬಾಕಿ ನಿನ್ನ ಮ್ಯಾಲೆಯಿರಲಿ | ಶಾರ ಬಾಗಲಕೋಟಿ ಪ್ಯಾಟ್ಯಾಗ ಮಲೇಕಲ್ಲಾ
ನೆನೆದಾರ ಶಿಸ್ತಾಗಿ ಮಡ್ಡಿಮ್ಯಾಲಾ | ಅಂತಾರ ಹುಸೇನಮಿಯಾ ಪುಂಡಾಗಿ
ವೈರಿಗೆ ಕಂಡಲ್ಲೆ ಒದ್ದಾರ ಚಂಡಿನಮ್ಯಾಲೆ
ವಾದ ಅಲ್ಲಾಂತ ವಾದ ಹಾಕಿದರ ಕಿತ್ತೇನ ನಾಲಿಗಿ || ೧೩ ||

* * *

**೮. ಶಬ್ದಾದ ಅರಸನ ಭೂಮಿಮ್ಯಾಲಿನ ಸ್ವರ್ಗಾ**

ಎಷ್ಟಂತ ಹೇಳಲಿ ತಿದ್ದಿ ಶಬ್ದಾದ ಅರಸನ ಬುದ್ಧಿ
ಜಿದ್ದ ಹಾಕಿ ಹಚಗೊಂಡ ಮುಕಳಿಗೆ ಬೂದಿ | ತನ್ನ ದುರ್ಗುಣಕ್ಕಾಗಿ
ಶ್ರೇಷ್ಠ ಶರಣರಾ | ಅನಿಸಿದಾರ ಪೈಗಂಬರಾ
ಹರುಷದಿಂದ ಹೋಗಿ ಅರಸ ಶಬ್ದಾದಗ ಮಾಡತಾರ ಉಪದೇಶಾ
ಅಷ್ಟ ಐಶಿರಿ ಕೊಟ್ಟಾ ಸಿಂಹಾಸನ ಸೃಷ್ಟಿಕರ್ತಾ ಆ ಜಗದೀಶಾ
ಗುರುತ ಹಿಡಿ ಈ ಶರತ ಆತನ ಹೊರತು ಸಿಗೂದಿಲ್ಲ ಕೈಲಾಸಾ
ನಿಷ್ಠಾ ಹಿಡಿ ಮುಕ್ತಿ ಪಡಿ ಸಾಕ್ಷಾತ್ ಭಗವಂತಾ
ಆತನ ಹೊರತು ಬಾಕಿದು ಎಲ್ಲ ವ್ಯರ್ಥ
ಅವನಿಂದ ಕಂಡಿ ಸ್ವರ್ಗ | ಅವನ ಹೆಸರ ಇಲ್ಲಂದರ ನರಕದ ಬೆಂಕಿಯೊಳಗ
ನುಗಿಸುವರೋ ಅಲ್ಲಿ ಜಗ್ಗಿ || ೧ ||

ಗರು ಅಂಬು ಗುಣಾ ಬಲುಕೆಟ್ಟಾ | ಶಬ್ದಾದಗ ಬಂದಿತ ಸಿಟ್ಟಾ
ಶರಣರಿಗೆ ಅಂತಾನ ಯಾತಕ ಇಷ್ಟಾ ಬೆಳಸುದು ಶಿವನಿಗೆ
ಸ್ವರ್ಗದ ಸುಖದ ಸಲುವಾಗಿ ಭಜಿಸಬೇಕ ನಾವು ಅವನಿಗೆ
ಹಂತಾ ಸ್ವರ್ಗಾ ನಾ ಸ್ವಂತಾ ಮಾಡತೀನಿ | ಅಂತಾ ಪಂತಾ ಹಾಕಿ ಪಣಾ ತೊಟ್ಟಾ
ಪತ್ರದಿಂದಲೆ ಪತ್ರ ಬರೆದಾ ತನ್ನ ಮಂತ್ರಿಗಳ ಕೈಯ್ಯಾಗ ಕೊಟ್ಟಾ
ಕರೆಸಬೇಕ ಎಲ್ಲಾ ಅರಸಮಂದಿಗೆ | ಸಹಕರಿಸಿ ಮಾಡಿರಿ ಲೂಟಾ
ಹುಕುಂ ಕೇಳಿ ಏಕದಮ್ಮಾ
ಹಿಂಡಿಗೆ ಹಿಂಡ ಪುಂಡ ಅರಸರ ಗಂಡ ಶಬ್ದಾದ ಸಾರ್ವಭೌಮಾ
ಕೂಡಿದ ಅರಸರಿಗೆಲ್ಲಾ ತಿಳಿಸಿದಾನ ತನ್ನ ಮನದ ಲೀಲಾ |
ಸ್ವರ್ಗ ಕಟ್ಟಿರಿ ಭೂಮಿ ಮ್ಯಾಲೆ ಅದು ನನ್ನ ಸಲುವಾಗಿ || ೨ ||

ನಾಡಾಗ ಹಬ್ಬಿತ ಅರಸನ ಸುದ್ದಿ | ಕಾಡಾಗಿರು ಕೌಶಲ್ಯೆ ಮಂದಿ
ತೋರಿಸಬೇಕರಿ ನಿಮ್ಮಲ್ಲಿ ಬುದ್ದಿ | ಬರಬೇಕ ಸದರಿಗೆ
ಕಟ್ಟುದಕ ಕೈಲಾಸ | ಹುಡುಕತಾರ ಜಾಗಾಖಾಸಾ
ಸಿಕ್ಕಿತಲ್ಲೆ ಒಂದ ಮಿಕ್ಕಿದ ಜಾಗಾಯಿತ್ತ
ಸ್ವಂತ ಪಾಯಾ ತಾ ನಿಂತ ಕಟಸಿದಾರ ಬಂದೋಬಸ್ತ ನಾಲ್ವತ್ ಗಜದಾ |

ಬಂಗಾರ ಇಟ್ಟಂಗಿ ಸಂಗಮವರಿ ಕಲ್ಲಿನ ಫರಸಿ ಬಹು ಚಂದಾ
ಶಾರಾಗಿರಿ ನಡದೀತ  ಬಾರಿ ಸರಸ ಮುನ್ನೂರ ವರುಷ ತನಕ ದುರಸ್ತ ಆತ ಬರೋಬರಿ
ಗಿಡಗಳು ಹಚ್ಯಾರ ಹಡ್ಡಿ ಬೆಳ್ಳಿ ಬಂಗಾರದ ಕಡ್ಡಿ ಮುತ್ತು ಮಾಣಿಕ ತಪ್ಪಲ
ಕೆಚ್ಚಿದ್ದಾ ಝಾಡಿ | ಯಾಕೂತದ ಟೊಂಗಿ || ೩ ||

ಹೊನ್ನ ಚಿನ್ನ ದೇಶದ ಮ್ಯಾಲೆ | ತೀರಿಹೋತ ಖಜಾನಿ ಖಾಲಿ
ಸುಲಕೊಂಡ ತರಲಿಕ್ಕೆ ಬಹಳ ಜರಬಿಲೆ | ಕಳಿಸಿದ ತನ್ನ ಮನುಷ್ಯರಿಗೆ
ಹುಕುಮ ಕೊಟ್ಟಿದ್ದಾ ಹೀಂಗ | ರೈತರ ಮನಿಯಾಗ
ಹೊಕ್ಕ ನೋಡಬೇಕ ಇಕ್ಕಿದ ಜಾಗಾ ಹೆಂಡರ ಮಕ್ಕಳ ಕೊರಳಾಗ
ಕಾಸಿದ ಬಂಗಾರ ಕಸಗೊಂಡ ಬಿಡಬೇಕ  |
ಒಂದ ಊರಾಗ ಒಬ್ಬ ಬಡವಿ | ಮುದುಕಿ ಇತ್ತ ಕೊರಳಾಗ ಹಳೆಯ ತಾಳಿ
ಬಂದ ಕಸಗೊಳಲಿಕ್ಕೆ ಮುದುಕಿ ನಿಂತ ಬಿಡತಾಳ ದೈನಾಸ
ಇದರ ಹೊರತ ಇಲ್ಲ ಏನೇನ | ತಿರಕೊಂಡ ತಿನ್ನಾಕಿ ನಾನು
ಹೇಳಿಕೊಂಡರ ಕೇಳಲಿಲ್ಲ ಮುದುಕಿ ಅನ್ನುದು | ಕಸಗೊಂಡಾರ ಜಗ್ಗಿ || ೪ ||

ಮುದುಕಿ ಸಾಂಬನ ಸದರಿಗೆ ಅರಜ ಮಾಡ್ಯಾಳ ಶಿರಬಾಗಿ
ಮರ್ತ ಕುಂತಿ ಅನಾಥ ಬಡಮಂದಿಗೆ | ನಡದೈತಿ ಇಲ್ಲೆ ಸುಲಿಗಿ
ಹಿಂತಾ ಗುರುವಿಷ್ಟಗ ತುರತಾ | ಮಾಡಬೇಕ
ಪೊಡವಿಯ ಪಾಲಕ ಆ ಬಡವಿಯ ವಿನಂತಿ ಮಾಡಿದಾಗ ಆಗ ಮಂಜೂರಾ
ಕಳುವಿಕೊಟ್ಟ ಯಮದೂತ ಇಜರಾಯಿಲ ಆಗಿ ನಡದಾನ ತಯ್ಯಾರಾ
ಹೋಗಿ ನಿಂತಾ ಶಬ್ಬಾದನ ಸ್ವರ್ಗದ ಬಾಕಲ ಹೊಸ್ತಿಲ ಹತ್ತರಾ
ಆ ದಿನಾ ಶಬ್ದಾದನ ಮನಾ  |
ಹೋಗಿ ನೋಡಬೇಕ ಸ್ವರ್ಗಾನಂದು ಹ್ಯಾಂಗ ಆಗೈತಿ ರಚನಾ
ನೋಡುದಕ ಸ್ವರ್ಗಾ ಹಾರಿ ಕುಂತಾನ ಕುದುರಿ
ಕರಕೊಂಡ ಸಂಗತಿಲೇನೆ ತನ್ನ ಐನೂರು ಮಂದಿಗೆ || ೫ ||

ಸ್ವರ್ಗ ನೋಡುದು ಅಕ್ಕರತಿ ಬಾಳ ಇತ್ತ ಅವನ ಪ್ರೀತಿ
ಹೋಗಿ ನಿಂತ ತನ್ನ ಸ್ವರ್ಗದ ಬಾಗಿಲ ಹತ್ತೀಲೆ  |  ಒಬ್ಬ ಕಂಡ ಕಣ್ಣೀಗೆ
ಶಬ್ದಾದ ಕೇಳತಾನು | ಯಾರ ಇಲ್ಲೆ ನಿಂತಾವ ನೀನು
ಅಂದ ಇಜರಾಯಿಲ ಬಂದೇನಿ ನಾನು ಸಾಂಬನ ಕಡೆಯಿಂದ ಯಮದೂತಾ
ಜಾವದೊಳಗ ನಿನ್ನ ಜೀವಾ ತಗೋತೀನಿ ನನಗಂತಾರ ವಲಕಲಮವೂತಾ
ಶಬ್ದಾದ ಅಂತಾನ ಸ್ವರ್ಗದ ಐಸಿರಿ ನೋಡತೇನಿ ಹಿಡಿ ಸನಮಂತಾ
ಕಟಿಸಿದಿನಿ | ನೋಡಿಲ್ಲರಿ | ನೋಡಿ ಸಾಯಬೇಕಂತಾ
ಶಬ್ದಾದ ಕುದುರಿ ಇಳುತಿದ್ದಾ ಹಾತೊರಿ
ಒಂದ ಕಾಲೂರಿ ಕಾಬದಾ ಒಂದ ಸ್ವರ್ಗದ ಹೊಸಲಿಮ್ಯಾಗ
ಜೀವ ತಗದಾ ಯಮದೂತಾ | ಅಷ್ಟರೊಳಗ ಕಾಣಲಿಲ್ಲ ಕಡಿಗಿ || ೬ ||

ನನ್ನ ಸ್ವರ್ಗ ನನ್ನ ಸ್ವರ್ಗ ಅಂತ ಶಬ್ದಾದ ಹ್ವಾದಾನ ಸತ್ತಾ
ನರಕದಾಗ ಒಗದಾರ ಆತನ ಹೊತ್ತಾ | ಅವನು ಕಟ್ಟಿಸಿದ ಸ್ವರ್ಗಾ
ಸಾಂಬನ ಕಡೆಯಿಂದ ಬಂದ ಫರಿಸ್ತಾ ಒತ್ತ್ಯಾನ ಇಳಿದೀತ ಪಾತಾಳಕ
ಶಬ್ದಾದನ ಕೂಡ ಇದ್ದ ಮಂದಿ ಸತ್ತ ಹ್ವಾದಾವೊ ನರಕಕ
ಬಾಗಲಕೋಟ್ಯಾಗ ಲಚಮನಸಿಂಗ ಮಾಡಿದ ಕವಿಗಳು ಬಲು ತೊಡಕ |
ಗುರು ದಸ್ತಗೀರ ಕೇಸುಪೀರಾ
ಹಸ್ತ ತೆಲಿಮ್ಯಾಲೆ ಇಟ್ಟ ಕೊಟ್ಟಾರೋ ಮಸ್ತ ಬುದ್ಧಿ ಭರಪೂರಾ
ನಾಗು-ಗೌಸೂನ ಕೂಡ ತೆಕ್ಕಿ | ಹಾಕಬ್ಯಾಡೋ ಹಿರದೇನ ಹಿಕ್ಕಿ
ಸಿಗಬಾರದ ಬಂದಕ್ಯಾರಾ ನೀ ಇಲ್ಲೇ ಸಿಕ್ಕಿ ಹೋಗಿನ್ನ ಪಾರಾಗಿ || ೭ ||

* * *

**೯. ಸತ್ತಾಗ ಅಳಬಾರದೆನ್ನುವ ತತ್ವದ ಪದಾ**

ಶಾಸ್ತರ ಸಿದ್ಧಾಂತ ಮಾಡಿ ನಾ ಪಂತ | ಹಾಡುವೆ ನಿಂತ ಕುಶಿಯಾಲಾ
ಮೇಸ್ತ್ರಿ ಜನ ಕುಂತ ಕೇಳ್ರಿ ಬಿಟ್ಟ ಪಂತ | ಶರಣರ ತಂತ್ರ ಬಲ್ಲವರಿಲ್ಲ
ಚ್ಯಾಲ || ಒಬ್ಬ ಶರಣನು ಒಬ್ಬಾಕಿ ಸ್ತ್ರೀ ಕೋಮಲಾ
ಲಗ್ನವಾಗರೆಂದು ತರಬಿದಳು ಬಿದ್ದು ಕಾಲಾ
ಹೇಳಿ ಆಕಿಗೆ ಉತ್ತರ ಕೊಟ್ಟನು ವತ್ತರ ನನ್ನ ಹತ್ತಿರ
ನಿನ್ನ ವಾಲ್ಮಲ ನಡಿಸುವಂತ ಸಂಪೂರ್ಣ ಪಂತ
ಇದ್ದರ ಸ್ವಂತ ಮಾಡಬೇಕ ಈ ಭಲಾ
ಇಲ್ಲದಿದ್ದರ ಹೋಗ ಮನಿಗೆ ಕಾಲಬಿದ್ದರೇನ ಫಲಾ
ಉದ್ದರಿ ಮಾತಿಲ್ಲ ಬಿಲ್‌ಕುಲ್ಲಾ
ಇ|| ಯತಿಯ ಮಾತಿಗೆ ಕೊಟ್ಟಾಳ ಸವಾಲಾ
ಕ್ಷಿತಿಯೊಳು ಪತಿಹೊರ್ತ ಸತಿಗೆ ಗತಿ ಇಲ್ಲಾ
ಪತಿಯ ಸಕಲಕ್ಕು ಕರ್ತ ಸುಳ್ಳಲ್ಲಾ
ಅಂತಾರಾಣಿ ಅನ್ನಲು ಉದ್ದಾಣಿ | ತೆಗೆದುಕೊಂಡು ಆಣಿ ಅಂತಾಳಲ್ಲಾ || ೧ ||

ಕಾಂತಿ ನಿನ್ನ ಹೊಟ್ಟಿ | ಮಕ್ಕಳು ಹುಟ್ಟಿ | ಸತ್ತರ ಮನಮುಟ್ಟಿ ಒಡಿಬ್ಯಾಡ ಜಲ್ಲಾ
ಹೀಗೆ ಆ ಶರಣಾ | ಹೇಳಿ ತಾ ಲಗ್ನ | ಆದಾನು ಧುರಿಣಾ ತತ್ಕಾಲಾ
ಇತ್ತ ಆ ರಾಣಿ ಆಗಿ ಗರ್ಭಿಣಿ ಹಡದಾಳು ಸುಖಜಾಣಿ ಖುಷಿಯಾಲಾ
ಚ್ಯಾಲಿ || ಬೀಬಿಯು ಅಮವಾಸಿಯ ದಿವಸ ಅವಳಿ ಜವಳಿ
ಎರಡು ಮಕ್ಕಳು ಹಡೆಯಲು ಊರೆಲ್ಲ ಬಿದ್ದಿತು ಬೆಳದಿಂಗಳ
ಮಕ್ಕಳ ವರ್ಣ ಸೂರ್ಯನ ಕಿರಣ ರತ್ನದಾಭರಣ ಹಾಕ್ಯಾರಲ್ಲಾ
ಹಸರಂಗಿ ಮಕಮಲ್ಲನಂಗಿ ಕೋಟುಬೂಟ ಜಂಗಿ ತೊಡಿಸ್ಯಾರಸಲಾ
ಚಿಕ್ಕಮಕ್ಕಳಿಗೆ ಹಾಲುಸಕ್ಕರಿ ಕುಡಿಸ್ಯಾಳಕ್ಕರದಿ ತಾಯಿಯು ಹಗಲೆಲ್ಲಾ
ಇ|| ಮೂರು ವರುಷದ ಮಕ್ಕಳಾದ ಮೇಲ | ಬಾರಿ ಶೆಟರೋಗ ಬಂದು ತತ್ಕಾಲಾ

ಹಾರಿ ಹೋದಾರೋ ಪ್ರಾಣ ಉಳಿಲಿಲ್ಲಾ | ಗಂಡನ ವಚನ ನಡಿಸುವ ಕಾರಣ
ಹೆಂಡತಿ ಕಣ್ಣೀರನಾ ಸುರಿಸಲಿಲ್ಲಾ | ಪಂತರು ಅಲ್ಮಪ್ರಭುವಿನ ಕಲ್ಮಾ
ಓದಿಸಿ ಅವರ ಜಲ್ಮಾ | ಮಾಡ್ಯಾರ ಸಫಲಾ || ೨ ||

ಮತ್ತು ಆರಾಣಿ ಆಗಿ ಗರ್ಭಿಣಿ | ಹಡಿದಳು ಸುಖಜಾಣ ಕುಸಿಯಾಲಾ
ಸತ್ತವರಿಗಿಂತ ಆ ಚೆಲ್ವರತ್ಯಂತ ಮಕ್ಕಳು ಶಾಂತ ಹುಟ್ಯಾರಲ್ಲಾ
ಚ್ಯಾಲಿ | ಮತ್ತು ಆ ಮಕ್ಕಳಿಗೆ ಹನ್ನೆರಡು ವರ್ಷದ ಮೃತ್ಯುಕಾಲಾ
ಒದಗಲು ಸತ್ತಾರು ಉಳಿಯಲಿಲ್ಲಾ ||
ಮಕ್ಕಳಿಬ್ಬರನಾ ಮಾಡಿ ದಫನ | ಧರ್ಮದಾನ ಕೊಟ್ಟಾರೋ ಮದಲಾ
ಇಷ್ಟಾದರೂ ಆ ಸತಿ ಜೋರು ತಾ ಕಣ್ಣೀರು ಸುರಿಸಲಿಲ್ಲಾ
ಪತಿಯ ಆಜ್ಞೆಯ ಮೀರದೆ ಆ ನಾರಿ ಸತತ ಸೌಖ್ಯದಿ
ಪತಿಯ ಮೇಲೆ ಇಟ್ಟಾಳ ಖ್ಯಾಲಾ ||
ಇ|| ಸತ್ಯ ಶರಣನು ಮಧ್ಯರಾತ್ರಿ ಶಾಲಾ | ನಿತ್ಯಗೋರಿಗೆ ಹೋಗಿ ಕರಿಯಲಾ
ಸತ್ತಮಕ್ಕಳು ಹೊರಗೆ ಬಂದಾಗಳಲಾ | ಸ್ವರ್ಗದ ಮಜಕೂರಾ
ಹೇಳಿ ನಾಲ್ವರ ಗೋರ್‍ಯಾಗ ಹೊಕ್ಕಿದ್ದಾರ ದರಸಲಾ || ೩ ||

ಗರಗರ ಹಿಂದಕ್ಕೆ ತಿರಗಿದ ತಾ ಆಕ್ಷಣಕೆ | ಮಲಗುವ ಮಂಚಕ್ಕೆ ಕುಶಿಯಾಲಾ
ಭೋಗದ ರಾಣಿ ಆಗಿ ಗರ್ಭಿಣಿ | ಹಡದಾಳು ಸುಖಜಾಣಿ ಕುಶಿಯಾಲಾ
ಸತ್ತವರಿಗಿಂತ ಚಲುವರತ್ಯಂತ ಮಕ್ಕಳು ಹುಟ್ಯಾರಲ್ಲಾ
ಚ್ಯಾಲಿ || ಮತ್ತು ಆ ಮಕ್ಕಳಿಗೆ ಆರನೆ ವರ್ಷ ಮೃತ್ಯುಕಾಲಾ
ಒದಗಲು ಸತ್ತಾರು ಉಳಿಯಲಿಲ್ಲಾ | ಎರಡು ಗೋರಿಗೆ ಪೀರಾ
ಬಂಗಾರ ಲಾಜೆವರ | ಮಾಡಿಸಿದ ಸರದಾರ | ಗೋರಿಗಳ ಮೇಲಾ
ಸುತ್ತು ಸಂಪು ನೆರಳೊಳು ತಂಪು | ಮನಸಿಗೆ ಇಂಪು ಬಹಳ ವಿಶಾಲಾ
ಬಂದೋಬಸ್ತ ಜಲಾ ಮರ ಶಿಸ್ತ | ಬಡಸಿದ ಸಂತ ವಿಸ್ತರದಿ ತೋಲಾ
ಇ|| ಬುದ್ಧಿವಂತ ಶರಣಾ ನಿತ್ಯಕಾಲಾ | ನಿತ್ಯಗೋರಿಗೆ ಹೋಗಿ ಕುಶಿಯಾಲಾ
ಸತ್ತ ಮಕ್ಕಳ ಹೊರಗೆ ಬಂದ ಘಳಿಲಾ | ಆರುಮಂದಿ ಶಾಂತ
ಆಗಿ ತಾವು ಸ್ವಂತ ಸ್ವರ್ಗದ ವೃತ್ತಾಂತ ಹೇಳುವರಲ್ಲಾ
ಈ ರೀತಿ ದರಾ | ಸ್ವರ್ಗದ ಕಾರಬಾರ | ಹೇಳಿ ಹೋಗುತ್ತಿದ್ದರ ದರಸಲಾ || ೪ ||

ಒಂದಾನೊಂದ ದಿವಸ ಆ ಶರಣ ಖಾಸ | ಅಮವಾಸ ದಿವಸ ಹೋಗುವ ಕಾಲಾ
ಸುಂದರಿ ಎಚ್ಚರ ಆಗಿ ಭರರರಾ | ಗಂಡನ್ಹಿಂದ ಸರರಾ ಹೋದಾಳಲ್ಲಾ
ಚ್ಯಾಲಿ || ಗೋರಿಯ ಹತ್ತಿರ ಹೋದಾನ ಶರಣಲೋಲಾ
ಯಾರ್‍ಯಾರು ಇದ್ದಿಲ್ಲಾ ಆಗಿತ್ತು ಕಾರ್ಗತ್ತಲಾ
ನಿಂತು ಅವಳು ಕರೆದು ಬಾಯಲಿ | ಬಂದ್ರೋ ಭರದಲಿ ತತ್ಕಾಲಾ
ಸೂರ್ಯ ಚಂದ್ರನಂತ ಸುಂದ್ರ ಮಕ್ಕಳ ಹಂದ್ರದಲಿ ಬಂದು ನಿಂದ್ರಲಾ
ಕಾರ್ಗತ್ತಲಾ ಹೋಗಿ ಸುತ್ತಲಾ | ಗ್ಯಾಸ ಕಂದೀಲ ಹಚ್ಚಿದಾಂಗ ಜ್ವಾಲಾ
ಇ || ಹೊಟ್ಟೆಯಲಿ ಹುಟ್ಟಿದ ಮಕ್ಕಳ ಮುಖಕಮಲಾ

ಸ್ಪಷ್ಟ ಕಾಣಲು ಬೀಬಿ ತತ್ಕಾಲಾ | ಕಷ್ಟ ತೋರಿ ಅತ್ತಾಳೋ ಸುಶೀಲಾ
ತಂದಿ ಮಕ್ಕಳಾ | ಮಾತಾಡಿ ನಿವ್ವಳಾ |
ಹೋದರು ಗೋರಿಯೊಳು ಕುಶಿಯಾಲಾ
ನೊಂದು ಆ ನಾರಿ ಬಂದಾಳ ಖಬರ್ದಾರಿ | ಮನಗ್ಯಾಳ ಸುಂದರಿ ಹಾಸಿಗಿ ಮೇಲಾ ||

ಮರುದಿನ ಯೋಗಿ ಗೋರಿಗೆ ಹೋಗಿ | ಕರಿಯಲೊಂದು ಗಳಗಿ ಆದಮೇಲಾ
ದುಃಖಲಿಂದ ತಾಯಿ ಅತ್ತಸಂದ | ಹೇಳ್ಯಾರು ಪಸಂದ ಉಳಿಯಲಿಲ್ಲಾ
ಚ್ಯಾಲ || ನಾಳಿಗೆ ಬರಬೇಡರಿ ರಾತ್ರಿಕಾಲಾ | ಇಂದಿಗೆ ನಮ್ಮ ನಿಮ್ಮ ರಿಣಾ
ಆಯ್ತೋ ಪೈಸಲಾ | ನಿನ್ನೆ ನಮ್ಮವ್ವ ಖಾಸ | ತಾಯಿ ಕಂಡ ದುಃಖ
ಮಾಡ್ಯಾಳ ಪಕ್ಕಾ ಬಂದು ಹಿಂಬಾಲಾ | ಅದರಿಂದ ನಮಗಿಂದು
ಅಪ್ಪಣಿ ಮುಂದಿಲ್ಲರಿ ಬಿಲ್‌ಕುಲ್ಲಾ | ಎಂದಾ ಸುತರು
ತಂದಿಗೆ ಹೇಳಿದ ಲೀಲಾ | ಹೊಂದಿಸಿ ಮಾಡಿದ ಮೆಣಸಗಿ ಪಾಟೀಲಾ
ಅಂದು ಕಾಣಲು ಬುಧರ ಹಾಕ್ಯಾರ ಮೇಲಾ
ರುದ್ರಗೌಡರ ಮುದ್ರಿ ಅಕ್ಷರ | ಅಬ್ದುಲ್ ಹಕ್ ಸಾಹೇಬರ
ನೋಡಿ ಮಿಡಲಾ ಭದ್ರ ಮೋಹರ ಮಾಡಿಸಿ ಕೊಟ್ಟಾರ
ತಮ್ಮ ಹೆಸರ ಹಾಕಿಸಿ ಮಿಡಲಾ || ೬ ||

* * *

### ೧೦. ನಮರೂದ ಅರಸನ ಗರ್ವಭಂಗದ ಪದಾ

ಸರೂ ಜೀವಕ ಮರೆವಿನ ಮಾತ | ಅರು ಅಂಬುದು ಗುರುವಿನ ಕೀಲಿ
ಗರು ಕೆಲಸಕ್ಕೆ ಬರೂದಿಲ್ಲ ಗುದ್ದಾಡಿ ಖಾಲಿ | ಹೋಗೂದು ಮುನ್ನ ಕೂಡಿ
ಏರು || ತಿಳಿದ ಗರು ಅಳದಾಂವ ಜಾಣಾ | ಮರೆವಿನಲ್ಲಿ ಬಿದ್ದಾಂವಾ ಕ್ವಾಣಾ
ನೇಮ ಇಟ್ಟ ಶಿವನಾಮ ಸ್ಮರಿಸಿದರೆ ಪ್ರೇಮಾ | ಅವರ ಮ್ಯಾಲೆ ಭಗವಂತಾ
ಮಾಯ ಮಾಡು ಶಿವರಾಯ | ಸ್ವರ್ಗದಾಗ ಭಯ ಇಲ್ಲದಾಂಗ ಕಿಂಚಿತ್ತಾ
ಮೂರ್ಖ ಗುರುವಿನಲ್ಲಿ ಗರ್ಕ ಆದರ ಮುಂದ ನರಕ ಆಗೂದು ಖಚಿತಾ
ಹರ ರೀತೀಲಿ ಆತನ ಲೀಲಿ | ಕಾಪಾಡಿ ವರಗಳ ಬೇಡಿ | ಮುಕ್ತಿ ಪಡಿ
ಆಗಬ್ಯಾಡ ಪ್ಯಾಲಿ | ಉದ್ದ ಬಲಿಸಿದಾನ ಬ್ರಹ್ಮಾಂಡ | ಜಿದ್ದ ಹಾಕಿ ಆತನಗೂಡಾ
ಸತ್ತ ಹ್ವಾದಾ ನಮರೂದ ನಮದೇನ ಪಾಡಫಲಾ ಇಲ್ಲಾ ಜಗಳಾಡಿ || ೧ ||

ನಮರೂದ ಅಂಬೂ ಅರಸಾ | ಇದ್ದಾನ ನಾಡಿಗೆ ಸರಸಾ
ಇಬ್ರಾಹಿಮ ಮಾಡತಾರ ಹೋಗಿ ಉಪದೇಶ ಪರಿಪರಿಲಿಂದ ತೀಡಿ
ಏರು || ಬಿಟ್ಟು ಬಿಡು ಮೂರ್ತಿ ಪೂಜೇ | ಇಷ್ಟಾ ಇಟ್ಟು ಮಾಡೋ ನಮಾಜಿ
ಸಾಂಬನೂಳಸ ನೀರ ಅಂಬು ನಿರಾಕಾರ ತುಂಬಿ ತುಳಕತಾನ ಜಗಜೆಟ್ಟಿ
ಅಲ್ಲಾನ ಹೊರ್ತು ಇನ್ನೆಲ್ಲಿ ದೇವರು ಕಲ್ಲಿಗೆ ಮೆಚ್ಚಿದಿ ಉಪರಾಟಿ
ಕೊಟ್ಟ ದೇವರು ಕಟಗೊಂಡು ಹೋಗುವಾಗ ಬಾಕಿ ದೇವರು ಬಡಿತಾವ ಗಂಟಿ

ಗರುವಿಷ್ಟಗ ಇದು ತಿಳಿದಿತ್ತ ಹ್ಯಾಂಗ | ಅಂದ ಸಿಟ್ಟಿಗೆ ಬಂದ ನಮರೂದ
ಕೊಂದ ಬಿಡುವೆ ನಿಮ್ಮ ಅಲ್ಲಾಗ | ಗರುವಿಲಿಂದ ಹೊಡದಾನ ಹೂಕಿ
ಕೈಲಾಸಕ ಹಚ್ಚುವೆ ಬೆಂಕಿ | ಗೆದ್ದು ಬರುವೆ ಇದ್ದಲ್ಲಿ ಸಾಂಬನ ಹುಡುಕಿ
ಬಲ್ಲಾಂಗ ಮಾತಾಡಿ ಕಲ್ಪನಾ ಮಾಡತಾನ ಮನದಾಗ ಕೈಲಾಸಕ ಹೋಗಬೇಕ
ಹ್ಯಾಂಗ ಮಸಲತ ಕೊಟ್ಟ ಇಬಲೀಸ ಬಂದ ಆತಗ
ಇಲ್ಲದ ಒಂದ ಹುಡಕ್ಯಾಡಿ || ೧ ||

ಗೀದ ಅಂಬು ನಾಲ್ಕು ಪಕ್ಷಿ | ಸಾಕಬೇಕ ಬಲ್ಲಾಂಗ ಪಕ್ಷಿ
ವತ್ರದಿಂದಲಿ ಎತ್ತ ಆಗತಾವ ಉತ್ತರ ದೇಶದ ಒಂಟಿಸರಿ
ಮೂರದಿವಸ ಕೂಳ ನೀರ ಹಾಕಬ್ಯಾಡ ಚ್ಯಾಂವ ಚ್ಯಾಂವ ಅಂತಿರಬೇಕ ಒದರಿ
ಬಾತ ಸುನೋ ಸಾಬೀತ ಕರೂ ತಾಬೂತ ಬೈಠನೇಕು ತಯಾರಿ
ತಾಬೂತಕ ತಳದಾಗ ಕಟ್ಟಬೇಕ ಅವು ನಾಲ್ಕು ಪಕ್ಷಿ ನಾಲ್ಕು ಬಾಜೂಕ
ಸಮತೂಕ ಒಂದೊಂದ ಮಾಂಸದ ತುಕಡಿ ಕಟ್ಟ ತಾಬೂತ ಮೇಲಗಡಿ
ಕಾಣುವಾಂಗ ಪಕ್ಷಿಗೆ ಅಜಮಾಸ ನೋಡಿ ಹೀಂಗ ನಾಲ್ಕು ಕಡಿ || ೨ ||

ಅನ್ನ ಇಲ್ಲದ ಪಕ್ಷಿ ಹಸ್ತಾ ಕಂಡ ಖಂಡ ತಿನಬೇಕಂತಾ
ಹಾರಿದಾಂಗ ಏರೂದು ನಿನ್ನ ತಾಬೂತಾ | ನೀಟ ಆಕಾಶ ಕಡಿ
ಹೇಳಿದಂತೆ ಮಾಡಿ ಸಾಹಿತಾ | ನಮರೂದ ಅರಸ ಮ್ಯಾಗ ಕುಂತಾ
ಹೌನಿಸಗೊಂಡ ಹ್ವಾದಾವ ಖಂಡಕ | ಪಕ್ಷಿ ತಾಬೂತ ಎದ್ದೀತ ಮ್ಯಾಗ
ಮೂರುದಿವಸ ಮೂರ ರಾತರಿ ಆದಿಂದ ಹಣಿಕಿ ನೋಡ್ಯಾನ ತೆಳಗ
ಗುಡ್ಡ ಗಂವಾರ ಒಂದೇ ಸಮನಾಗಿ | ಭೂಮಿ ಕಾಣೂದು ಬಟ್ಟಲದಾಂಗ
ಮತ್ತ ಎರಡು ದಿವಸ ಆದಿಂದ ಪೂರಾ ಹಣಿಕಿ ನೋಡ್ಯಾನ
ಭೂಮಿ ಅಡಗಿ ಕಂಡೀತ ನೀರ ನಿರಂಜನ
ಆಗ ಅರಸ ಮನಸಿ ತಿಳಿದಾ ಕೈಲಾಸಕ ಮುಟ್ಟೇನಿ ಬಂದಾ
ಅನುಮಾನ ಇಲ್ಲದೆ ಬಾಣ ಹೊಡದಾ ಕಸುವೀಲೆ ಕುಣದಾಡಿ || ೪ ||

ಸ್ವರ್ಗದ ಶಿವದೂತರು ಹೋಗಿ ಅರಜ ಮಾಡ್ಯಾರ ಶಿರಬಾಗಿ
ಉಚ್ಚ ನೀಚ ಸಲುವಾಂವ ಒಂದೇ ಸವನಾಗಿ ಅಂದ ತಾಬಡತೂಡಿ
ಬಾರು ಬಾನಕ್ಕ ಹಿಡಕೊಂಡ ಗಟ್ಟಿ ಮೀನದ ಬೆನ್ನಾಗ ಚುಚ್ಚಿ
ತಿರುಗಿ ಒಗಿಬೇಕ ಹುಕುಮಿನ ಪ್ರಕಾರ ಒಗುವಾಗ ದೂತರು ಪುರಮಾಸಿ
ವತ್ರದಿಂದಲೆ ಹತ್ರ ಮೀನದ ನೇತ್ರದೊಳಗ ಮುಣಗೀಸಿ
ತಾಬೂತದೊಳಗ ಬಂದ ಬಿತ್ತ ನಮ್ರೂದ ಎತ್ತಿನೋಡತಾನ ಅಡ್ರಾಸಿ
ನೇತ್ರಾಮುಣಗಿತ್ತ ಪೂರಾ ಭಂಡ ನಮ್ರಾದ ಕಂಡ ಬಾನಾ
ಆನಂದ ಆದ ಭಯಂಕರ ತಿಳಿದ ಸಾಂಬ ಹ್ವಾದಾನು ಸತ್ತ
ಬಾನತುಂಬಾ ಮುಳಗೈತಿ ರಕ್ತಾ | ಸಂತೋಷದಿಂದ ಇಳಿಸ್ಯಾನ
ತನ್ನ ತಾಬೂತ ಭೂಮಂಡಲ ಕಡಿ || ೫ ||

ಇಬ್ರಾಹಿಮ ಶರಣರಿಗೆ ಕರೆಸಿ | ಹೇಳತಾನ ತನ್ನ ಉಪದೇಶಿ
ಸತ್ತಾ ಇನ್ನಾ ಅಲ್ಲಾಗ ಫಲಾ ಏನ ನೆನಸಿ ನನ್ನ ಪಂತಾ ಹಿಡಿ
ಇಬ್ರಾಹಿಮ ಶರಣರು ನಕ್ಕು ಅಂತಾರ ಎಲೆ ಶತಮೂರ್ಖ
ಸಾಂಬನ ಕಾಣೂದು ಎಂದಿಗೆ ಆಗದು ನಿನಗೇನಠಾಂವಿಕಿ ಮುನ್ನಹೂಡಿ
ಮಳ್ಳ ಶಾಹೀರನಾಂಗ ಸುಳ್ಳ ಬೊಗಳಬ್ಯಾಡ | ಕಳ್ಳ ನಿಂತಕ್ಯಾಸ ಲಬ್ಬಿ ಹೊಡಿ
ಹೆಚ್ಚಿನ ಮಾತಿಗೆ ಹುಚ್ಚಾಗಿ | ನಮರೂದ ಕಚ್ಚೂತ ನಿಂತಾನ ತನ್ನ ದೌಡಿ
ಶರಣರಿಗೆ ಅಂತಾನ ಬೇಗ ಕರಸಬೇಕ ನಿನ್ನ ಸರಸ ಅಲ್ಲಾಸ ದಂಡ
ನನ್ನ ಎದುರಿಗೆ ಇಬ್ರಾಹೀಮ ಶರಣರು ನಮಾಜು ಮಾಡಿ ಬೇಡ್ಯಾರವರು
ಕಳಿಸಬೇಕ ನೊರಜಿನ ದಂಡಿಗೆ ತೀವರಾ ಬಲ ತಾಬಡ ತೂಡಿ || ೬ ||

ಶಿವಸಾಂಬ ಹುಕುಮ ಕೊಟ್ಟಾ ನೊರಜಿನ ದಂಡ ನಡದಿತ್ತ ಸಗಟಾ
ಎಲ್ಲಾಕು ಹಿಂದ ಬಂತ ಒಂದು ಕುಡ್ಡ ಕುಂಟ ಸಾಂಬಗ ಕೈ ಜೋಡಿ
ಏರು || ಪರಮಾತ್ಮ ಪಾಲಿಸೋ ಅರಜಾ ತಿನ್ನುವೆ ನಾ ನಮರೂದನ ಮಾಗಜಾ
ಸಜ್ಜಾಗಿ ನಿಂತ ನೊರಜಿನ ದಂಡಾ | ಮೋಡ ಬಂದಂಗಾತು ಕವಗೊಂಡಾ
ಒಬ್ಬೊಬ್ಬ ಮನುಷ್ಯಾಗ ಒಂದೊಂದ ನೊರಜಾ | ತಲಿಯಾನ ಮಿದಡ ಕಡಕೊಂಡಾ
ತಿಂದಾವ ದಂಡೆಲ್ಲಾ | ಅಳದಾವ ನಮರೂದ ಓಡಿದಾನ ಉಳಕೊಂಡಾ
ಮನಿಯಾಗ ಕುಂತ ಹೇಳತಿದ್ದಾ ಮಾತಾ | ಅಷ್ಟರೊಳಗ ಕುಂಟ ನೊರಜಾ
ಬಂತ ಆತಗ ಹುಡುಕೂತಾ | ಹಿಡಿಹಿಡಿ ಅನ್ನೊದರೊಳಗ ಹೊಕ್ಕಿತ ಮೂಗಿನ್ಯಾಗ
ಮಿದಡ ಕಡದ ಹೊಡದೀತ ಆ ನಮರೂದಗ ಪರಿಪರಿಲಿಂದ ಕಾಡಿ || ೭ ||

ನಮರೂದನ ಮರಣದ ಕತಿ | ಹೇಳಿದರ ಬಹಳ ಐತಿ
ಇಲ್ಲೀಗೆ ಬಿಟ್ಟೇನಿ ಮಾಡಿ ಮುಕ್ತಿ | ಕಿತಾಬದಾಗ ನೋಡಿ
ಏರು || ಬಾಗಲಕೋಟಿ ಶಾರ | ದೇಶಕ ಜಾಹೀರಾ | ಗುರು ದಸ್ತಗೀರ ಪೀರಾ
ಕೊಟ್ಟಾರ ಸರೂ ಮಾತಿನ್ಯಾಗ ಸಂಪೂರಣಾ | ಕೇಸುಪೀರನ ಹಸ್ತ ತೆಲಿಮ್ಯಾಗ
ಮಸ್ತಕೊಟ್ಟ ಬುದ್ಧಿಗ್ಯಾನ ನಾಗೂ-ಗೌಸು ಹೀಂಗ ಕವಿ ಮಾಡತಾರ
ರವಿ ರವಿಗೆ ಹಚ್ಚಿದಾಂಗ ಕುಂದನಾ | ಅಕ್ಷರಾ ಸುಳಿ | ಜಡದಾಂಗ ಕುಳಿ
ಹಡಕ ಶಾಹೀರಾ ಮಿಡಕ ಮನದಾಗ ಕುಡಿಗೆ ಕುಂತಾಂಗ ಕೋಳಿ
ಹೇಳೋದಕ ನಮ್ಮದಾಟಿ ಬರಬೇಕೋ ಇನ್ನೊಮ್ಮೆ ಹುಟ್ಟಿ
ಹೊರಸೇವಿ ತಲಿಮ್ಯಾಲೆ ಹೆಂಡಿಪುಟ್ಟಿ ಜರಾ ದಮ್ಮ ಹಿಡಿ || ೮ ||

* * *

### ೧೧. ದಜ್ಯಾಲನ ಮರಣದ ಪದಾ

ಕಡೀ ಮಜಲಾ ಕೂಡಿರಿ ಜನಾ | ಚಿತ್ತಿಟ್ಟ ಕೇಳರಿ ಬಯಾನಾ
ಹಾದಿ ಮಾಡುವೆ ಸಭಾ ರಚನಾ | ಮುಂದೆ ಆಗುವೆ ಖೂನಾ
ಏರು || ಶಾಸ್ತ್ರರ ಸಿದ್ದಾಂತ ಬರದ ಇಟ್ಟಾರ ಲಿಖಿತಾ

ತಿಳಿಸುವೆ ನಾನು ಶಿರಬಾಗಿ ಈ ಸಭೆದೊಳಗ ಬಂದ ಕೂಗಿ
ಸಣ್ಣ ದೊಡ್ಡ ಸರೂ ಮಂದಿಗೆ | ನಾ ಮಾಡುವೆ ಶರಣಾ
ನಿಮಗ ಒಂದ ತಿಳಿಸತೇನಿ ಖೂನಾ | ಬಿಡಬ್ಯಾಡ್ರಿ ಇಮಾನಾ || ೧ ||

ದಜ್ಯಾಲ ಅಂಬಾವಾ ಹೀನಾ | ಇರತಾನ ವಂಚರಗಣ್ಣಾ
ಬರತಾನ ಮತ್ರ್ಯೇಕ ಬೇಮಾನಾ | ಕೆಡಸೂಕ ನಮ್ಮ ನಿಮ್ಮನಾ
ಏರು || ನಾನೇ ಶಿವಾ ಸಾಕ್ಷಾತ್ ನಾನೇ ಅದೇನಿ ಜಗಭರಿತಾ
ಅಂತಾನ ಅಂವಾ ಹಗಲೆಲ್ಲಾ | ನನ್ನ ಹೊರ್ತು ಮತ್ತು ಯಾರೂ ಇಲ್ಲಾ
ಮೈ ಖುದಾವೋ ಖಾದರ ಅಲ್ಲಾ | ಮಾಡಿ ಚಂದ್ರಾಮ ತಾನಾ
ಇಲ್ಲದೊಂದು ಚಾಲಾಕಿ ತೋರಸೋಣಾ | ಮರುಳಾಗುವರೋ ಜನಾ || ೨ ||

ನೆಪ್ಪ ಹಿಡಿರಿ ಮರಿಬ್ಯಾಡ್ರಿ ಪುನಾಃ ಕುಂಡರೂದು ಕತ್ತಿ ವಾಹನಾ
ಹನ್ನೆರಡು ಮೈಲು ಒಂದೇ ಸವನಾ | ಆ ಕತ್ತಿ ಬೆನ್ನಾ
ಏರು || ಜೀನ ಹಾಕುವಾ ಭರ್ಜೇರಾ ತರದಾ | ಎಡಗಾಲಿರತೈತಿ ಬಿಳಿದಾ
ಹೋಗಿ ನಿಂತಾರ ಸಮುದ್ರದಾಗ | ನೀರ ಬರೂದಿಲ್ಲ ಮೊಳಕಾಲ ಮ್ಯಾಗ
ಬ್ರಹ್ಮಲಿಖಿತ ಕತ್ತಿ ಹಣಿಮ್ಯಾಗ | ಕೆಟ್ಟ ಸೈತಾನಾ
ಯಾತರದು ಇಲ್ಲದೆ ಗುಮಾನಾ | ಒದರೂದು ಒಂದೇ ಸವನಾ || ೩ ||

ಬಲುಮಂದಿ ಹತ್ತುವರು ಬೆನ್ನಾ | ತಿಳಿಲಾರದು ಆತನ ಗುಣಾ
ನೀನೇ ಕಾಯುವನೋ ನಮ್ಮನಾ | ಸತ್ತೇ ಭಗವಾನಾ
ಏರು || ಎಡಕ ಒಂದ ಬಲಕ ಒಂದ | ಗುಡ್ಡ ಬರತಾವ ಆತನ ಹಿಂದ
ಬಲಗಡಿ ಗುಡ್ಡ ಬಹು ಅನಲಾ | ಬಲು ಚೈನ ಇರುವುದು ರಂಗಮ್ಹಾಲಾ
ಅಲ್ಲಿ ತೋರಸ್ಯಾನ ಸ್ವೊರಗದ ಲೀಲಾ | ನಾ ಹೇಳಿದ ವಚನಾ
ಪಾಲಿಸಿದವರಿಗೆ ರಸ್ತಾ ನಾ | ಇಡತೇನಿ ಸಂಪೂರಣಾ || ೪ ||

ಎಡಗಡಿ ಗುಡ್ಡಾ | ನರಕದ ಖೂನಾ | ಬೆಂಕಿಯದು ಅಳತಿಲ್ಲಾ ಏನಾ
ಹಾಂವ ಚೋಳ ವಿಷ ಹಾಕಿ ಸಾಮಾನಾ | ತುಂಬೀದ ಸಾಮಾನಾ
ಏರು || ನನ್ನ ಮಾತ ಯಾರು ಕೇಳುವರಿಲ್ಲಾ | ಮಾಡೇನಿ ನರ್ಕದ ಪಾಲಾ
ಕೈಕಾಲ ಕಟ್ಟಿ ಆತಗ | ಒಗೂತೇನಿ ಇದೇ ಬೆಂಕ್ಯಾಗ
ಬಲು ಮಂದಿ ಅಂಜಿ ಆವಾಗ | ಅಂವಗ ಮಾಡ್ಯಾರ ಶರಣಾ
ಹೌದಂತಾರ ಸತ್ಯೆ ಭಗವಾನಾ | ನಿರವಾ ಇಲ್ಲದಿನ್ನಾ || ೫ ||

ಸುತ್ತಂತಾ ತಾಯಿ ತಂದಿನಾ | ಅಜ್ಜಿ ಮುತ್ಯಾಮರಿ ಮಕ್ಕಳನಾ
ಸಾಕ್ಷಾತ್ ದಜ್ಯಾಲ ತೋರಿಸೂಣಾ | ಬಿಟ್ಟಾರ ಇಮಾನಾ
ಏರು || ಖಾತ್ರಿ ಮಾಡಿ ಸರೂ ಮಂದಿಗೆ | ವಿದ್ಯಾವಂತ ಬುದ್ದಿವುಳ್ಳವರಿಗೆ
ಬಡದೀತ ಆವಾಗ ಭ್ರಾಂತಿ | ತಿರುಗುವರು ಅವನ ಬೆನ್ನ ಹತ್ತಿ

ಖರೇ ಹೌದ ಇಂವಾ ಜಗಪತಿ | ಸಂಶೆ ಇಲ್ಲ ಏನಾ
ಮುರದಾನ ದೊಡ್ಡ ದೊಡ್ಡ ದೇವಸ್ಥಾನ ಭೂಮಂಡಲವನಾ || ೬ ||

ತಿರುಗಾಡಿ ಸರೂ ಎಲ್ಲಾ ಭವನಾ | ಮಾಡಿಕೊಂಡ ತನ್ನ ಸ್ವಾಧೀನಾ
ಬಾಕಿ ಮುಂದ ಒಂದ ಉಳೀತ ಇನ್ನಾ | ಮಕ್ಕಾ ಮದೀನಾ
ಏರು || ಅಲ್ಲಿಗೆ ಹೋಗಿ ಮಾಡ್ಯಾನ ಮೆಟ್ಟಾ | ನಡಿಸಿದಾನ ತನ್ನ ಕಾಡಾಟಾ
ಬಲುಮಂದಿಗೆ ಕೊಟ್ಟಾನು ಈಜ್ಯಾ | ಇಮಾಮೆ ಮೆಹದಿ ಸರತಾಜಾ
ಅವರು ಮಾಡ್ಯಾರ ಶಿವನ ಕಡಿ ಅರಜಾ | ಬಂದಾನ ದುಷ್ಮಾನಾ
ಕಾಯಬೇಕ ಮಾನಾಭಿಮಾನಾ | ಪ್ರಶಂಸಾಗಿ ನೀನಾ ||೭||

ಮಾದೇವಗ ಹುಟ್ಟಿತ್ತ ಕರುಣಾ | ಕಬೂಲ ಮಾಡಿ ಅವರ ವಂದನಾ
ಹುಟಸ್ಯಾನ ಈಸಾ ಶರಣರನಾ | ದಜ್ಯಾಲನ ಮರಣಾ
ಶರಣ ಕಿತ್ತ ಹೊಡದಾರ ಕೋಲಾ | ತಲಿವೊಡಿದು ಆದೀತು ಟಿಸಿಲಾ
ದಜ್ಯಾಲಗ ಮಾಡ್ಯಾರ ನಷ್ಟಾ | ದೂರ ಆತ ಬಂದ ಅರಿಷ್ಟಾ
ಬಾಗಲಕೋಟಿ ಗಂಡಮೆಟ್ಟಾ | ಗುರು ದಸ್ತಗೀರನ ವಚನಾ
ಕೇಸುಪೀರ ಆದಾರ ಪ್ರಶಂಸಾ | ನಾಗೂ-ಗೌಸೂನಾ || ೮ ||

* * *

**೧೨. ಬಾವಾನಿಗೆ ದಾನಾ ಮಾಡಿದ ಪದಾ**

ಮಿಕ್ಕಿ ಸಭಾ ಲಕ್ಕ ಕೂಡಿರಿ ನಿಮ್ಮ ತಕ್ಕ ತಿಳಿಸುವೆ ನಾ
ಏರು || ಚಿಕ್ಕ ಬಾಲಕಯಿದ್ದು ಕಲ್ಪಣಾ | ತಗದ ಹೇಳುವೆ ಶಾಸ್ತರ ಧುರೀಣಾ
ಕುಂತ ದೈವಕ ನಾ ಮಾಡಿ ಕರುಣಾ | ಒಬ್ಬ ಅರಸನು
ಮಹಾ ಮೂರ್ಖನು ಗರ್ವಿಷ್ಟನು | ಇಟ್ಟ ಅಹಂಕಾರ ಸಿಟ್ಟ ಆಳುನಾ
ಅನುಭಾವಾ ತಿಳಿಪಡಿಸುವೆ ಸರೂದೈವಕ ಮಾಡಿ ರಚನಾ || ೧ ||

ದುಷ್ಟ ಅರಸ ಕೆಟ್ಟಮನಸ ಹುಟ್ಟಿ ಎಂದು ಮಾಡಿಲ್ಲಾ ದಾನಾ
ಏರು || ಎಂಥ ಪಾಪಿಷ್ಟ ಪುಣ್ಯದ ಮಾರ್ಗ
ಬಿಟ್ಟ ಕರ್ಮದ ಹಾದಿ ಹಿಡಿದಾನ ಹೀಂಗ
ಡಂಗೂರ ಹೊಡಸ್ಯಾನ ತನ್ನ ಊರೊಳಗ | ಯಾರಾದರ ಇಲ್ಲೆ ಬಂದರ
ಬಹು ಎಚ್ಚರಾ | ಆಗಿ ಮನಸ ಮಾಡಿದರ ದಾನಾ | ಆಕ್ಷಣಾ
ಕಡದ ಕೈಯ ಊರ ಹೊರಗ ಹಾಕುವೆ ನಿಮ್ಮನ್ನಾ || ೨ ||

ವರ್ತಮಾನ ಕೇಳಿ ತುರ್ತ ಗಾಬಾಗ್ಯಾರ ಎಲ್ಲಾ ಜನಾ
ಏರು || ಒಬ್ಬ ಸನ್ಯಾಸಿ ಒಳ್ಳೆ ಹಸು ಆಗಿ
ಅಸನ ಊರಾಗ ಮನಿಮನಿಗೆ ಹೋಗಿ
ಭಿಕ್ಷಾ ಬೇಡತಾನ ಊರೆಲ್ಲಾ ತಿರುಗಿ | ಯಾರೊಬ್ಬರು ಅನ್ನಾದರು ಕೊಡವಲ್ಲರು

ಅಂಜಿ ಅರಸಗ ಮಾಡಲಿಲ್ಲ ದಾನಾ ಊರ ಜನಾ
ಹಸ್ತ ಸನ್ಯಾಸಿ ಬಾಯಿಕಿಸ್ತ ನಿಂತಾನ ಆಕ್ಷಣಾ || ೩ ||

ಇ|| ಏನ ಹೇಳಲಿ ನೆರೆದ ಸಭಾದಲ್ಲಿ ಸೃಷ್ಟಿಕರ್ತನ ಕರುಣಾ
ಏರು || ಕಷ್ಟ ತಾಳದೆ ಬಾವಾ ಮತ್ತ ಮುಂದಕ ಹೋಗಿ ನಿಂತ ಅಂತಾನ
ಬಾಗಿಲ ಹಿಡಿದ ಆಕ್ಷಣಕ ಹಸ್ತೇನಿ ಉಣಿಸುವಂತ ರೊಟ್ಟಿ ತುಣಕಾ ||
ಆ ವೈಯಾರಿ | ಕೇಳಿ ಬೆದರಿ | ನಾನಾ ಪರಿ
ಕೇಳ ನಮ್ಮ ಅರಸ ನಾನು ಕೊಟ್ಟರ ದಾನಾ | ನನ್ನ ಪ್ರಾಣಾ
ಉಳಿಯಲಿಕ್ಕಿಲ್ಲ | ತುಸು ಇಲ್ಲ ಆತಗ ಕರುಣಾ || ೪ ||

ಆಹಾದೇವಾ ಅಂತಬಾವಾ ಬಿದ್ದ ನೆಲಕ ಇಲ್ಲದಾಂಗ ತ್ರಾಣಾ
ಏರು || ಬಾಲಿ ಬಾವನ ನೋಡದೆ ಮರಗ | ಅಂತಕರಣ ಹುಟ್ಟಿ ಮನದೊಳಗ
ಓಡಿ ಹೋಗ್ಯಾಳ ಅಡಗಿ ಮನಿಯೊಳಗ | ಅವಸರಲೆ ಬಹು ಪ್ರೀತೀಲೆ
ತನ್ನ ಹಸ್ತೀಲೆ ತಂದಾಳ ಓಡಿ ದೈರ್ಯ ಮನಮುಟ್ಟಿ
ಎರಡು ರೊಟ್ಟಿ ಕರದು ಕೊಟ್ಟಾಳ | ಬಾವಾ ಆನಂದ ಆಗ್ಯಾನ ಆದಿನಾ || ೫ ||

ಈ ಸುದ್ದಿ ಮುಟ್ಟಿತ ಅರಸಗ ಭ್ಯಾಗ | ಕರಿಕಳಿಸ್ಯಾನ ಆಕಿನಾ
ಏರು || ಕರಸಿ ಬಾಲಿಯ ಕೈ ಕಡದಾನ ಆಗ | ಅರಸಗ ಆಗಿ ಸಿಟ್ಟ ಮನದೊಳಗ
ಇಡಲಿಲ್ಲ ಆಕಿಗೆ ಹಾಕ್ಯಾನ ಊರಹೊರಗ | ದುಃಖ ಮಾಡೂತ
ಹೀಂಗ ನೆನಸುತ್ತ ಶಿವನ ಹೊರ್ತ | ಯಾರಿಲ್ಲಾಂತ ತಿಳಿದ ತನ್ನಕ
ಚಿಕ್ಕ ಬಾಲಕ ಇತ್ತ ಬಗಲಾಗ | ಹೋಗಿ ಸೇರ್‍ಯಾಳ ಅಡವಿ ಆರ್‍ಯಾಣಾ || ೬ ||

ನೀತಿವಂತ ಬೀತಿಗೆಟ್ಟ ಅತಗೊಂತ ತಿರುಗುವಳೋ ಮೋಹನಾ
ಏರು || ಕೆಟ್ಟ ಮಹಾ ಮದ್ಯಾನ ಬಿಸಲಾ ನೀರಡಿಸಿ ಒಣಗಿತ್ತ ಗಂಟಲಾ
ಕೂಸ ಅಳತಿತ್ತ ಅಳತಿದ್ದಿಲ್ಲಾ | ಮನಮೋಹಿತ
ನೋಡಿ ರಂಬಿಸೂತ | ನೀರ ಹುಡುಕೂತ
ಹೊಂಟಾಳ ಹೋಗಿ ಕಂಡಾಳ ಚದುರಿ ಮಿರಿಮೀರಿ
ಹರುತಿತ್ತ ಹಳ್ಳದಾಗ ನೀರು ಒಂದೇ ಸವನಾ || ೭ ||

ಹರುಷಾಗಿ ಓಡಿಹೋಗಿ ನೀರ ಕುಡಿಲಿಕ್ಕೆ ಬಾಗಿದ್ದಕ್ಷಣಾ ||
ಏರು || ಬಗಲಾಗ ಇದ್ದಂತಾ ಕೂಸು ಜಾರಿ ಬಿತ್ತು
ಹಿಡಿಬೇಕಂತ ಅನ್ನುದರೊಳಗ ಮುಳಗಿತ್ತು
ಅಳತಾಳ ಹಳ್ಳದ ದಂಡಿಮ್ಯಾಲೆ ಕುಂತು
ಶಿವಶಂಕರಾ ಅಯ್ಯೋ ಹರಹರಾ ಏನ ಹಣಿಬಾರಾ
ಬರದಿ ಬ್ರಹ್ಮಾ | ನಾ ಮಾಡಿದ್ದೆ ಧರ್ಮಾ
ಸುಮ್ಮಾ ಸುಮ್ಮಾ ಕರಮ ಒದಗಿತ್ತ ಬಂದ ಎಂಥ ಹಸ್ತಗುಣಾ || ೮ ||

ಜಗದೊಳಗ ಇನ್ನ ಹ್ಯಾಂಗ ಈಗ ಬಿಟ್ಟ ಇರಲಿ ಮಗನ್ನಾ
ಏರು || ಶಿವನ ಅಪ್ಪಣೆಲಿಂದ ಯಮದೂತರು
ನರಜನ್ಮ ಅವತಾರ ತೊಟ್ಟ ಇಬ್ಬರು
ಬಂದ ನಿಂತ ಇದರಿಗೆ ಕೇಳುವರು
ಇಷ್ಟಯಾತಕ ಮಾಡತಿ ದುಃಖಾ | ಬಿದ್ದ ನೆಲಕ
ಕೇಳಿ ಕೊಟ್ವಾಳ ಉತ್ತರಾ | ನನ್ನ ಕೂಸ ರಾಜಹಂಸಾ
ಮುಳುಗಿ ಸತ್ತಾನ ನೀರಿನೊಳಗ ಹೇಳಲಿ ಏನಾ || ೯ ||

ಇಷ್ಟ ಮಾತ ಯಮದೂತ ಹೇಳಿ ತುರ್ತ ಮುಳುಗಿ ಆಕ್ಷಣಾ
ಏರು || ತಂದಾಕೂಸಿಗೆ ಜೀಂವದರಿಸಿ ಮ್ಯಾಲೆ
ಕೊಟ್ವಾನ ಸುಂದರಿ ಹಸ್ತದಲ್ಲೆ | ಅಪ್ಪಿಕೊಂಡಾಳ ತಾಯಿ ಪ್ರೀತೀಲೆ
ಮತ್ತೊಬ್ಬನು ಯಮದೂತನು ಹಸ್ತವನ್ನು ಹಚ್ಚಿದ ಕೂಡಲೆ
ಹಸ್ತ ನೆಟ್ಟಗಾಯಿತು ತಿಳಿದು ಬಂತು
ಆಗ ನಾರಿಗೆ ಬ್ಯಾಗ ಆತ ಸಮಾಧಾನಾ || ೧೦ ||

ತಿಳಿದಿಲ್ಲಾ ನಿಮ್ಮ ಕುಶಲಾ | ತುಸು ತಿಳಿಸಬೇಕರಿ ನನ್ನಾ
ಏರು || ದಾನಾ ಮಾಡಿದಿ ರೊಟ್ಟಿ ಬಾವಾಗ ಎರಡು
ದುಷ್ಟ ಅರಸಾ ಕಡದಾ ಕೈ ನಿನ್ನ ತಿಳಿದ ನೋಡು
ಕಷ್ಟ ಸೋಸಿದ್ದಿ ಝಲ್ಲಾ ಬಿಟ್ಟು ಬಿಡು
ಪಡದಿ ಆನಂದಾ ಪುಣ್ಯಯಲಿಂದಾ ಕೇಳವ್ವಯಿಂದಾ ||
ಬಂದೇವಿ ಇಬ್ಬರು ಪುಣ್ಯೆ ಮಾಡಿದ್ದಕ ನೀ ಕೇಳ ರಮಣಿ
ಉಳಿಸಬೇಕಾತ ರೊಟ್ಟಿ ದಾನಾ ಮಾಡಿದ ಕಾರಣಾ || ೧೧ ||

ಬಲ್ಲಾಂವಾ ಅನುಭಾವಾ ಕೇಳಿ ತಲಿ ತೂಗುವಾ ಜಾಣಾ
ಏರು || ಪ್ಯಾಟಿ ಪಟ್ಟಣಾ ಬಾಗಲಕೋಟಿ | ಶ್ರೇಷ್ಟವಾದಂತ ವೆಂಕಟಪ್ಯಾಟಿ
ಕಳಿಸುವೆ ಶಾಹಿರನ ಕುಂಡಿ ಸುಟ್ಟಿ
ದುಡಕಿದರ ಕೇಳೋ ಗಂವಾರಾ ಬಹು ಎಚ್ಚರಾ
ಸಂಪೂರ್ಣಾ ಮಡ್ಡಿ ಪೀರಾನ ದಯಾ | ಹುಸೇನಮಿಯಾ
ಅಂತಾರ ನಿಂತಕವಿ ಮಾಡಿ ಬಹುರಚನಾ || ೧೨ ||

* * *

**೧೩. ಕಾಬಾ ಕೆಡುವಲು ಹೋಗಿ ಮಣ್ಣು ಮುಕ್ಕಿದ ಅರಸ**

ಮಾಡಿ ದೈವಕ ವಿನಂತಿ | ಶಾಹೀರಗ ತಿಳಿಸುವೆ ನಡತಿ
ಶಬ್ದಾದ ಅರಸಗ ಎಷ್ಟು ಬೆಳಸಿ ಹಾಡತಿ ಕೈಮಾಡಿ ತಲೆತೂಗಿ
ಏರು|| ಎಂತೆಂಥವರು ಇಟ್ಟ ಪಂಥ ಮುಕ್ಯಾರ ಮಣ್ಣಾ ನಾ ಶ್ರೇಷ್ಟಾಂತಾ
ಅಬ್ರಾಹಂ ಅರಸ ಯೆಮನ ಪಟ್ಟಣದ ಪಟ್ಟ ಆಳತಿದ್ದಾ ಇಟ್ಟ ಗರು |

ಹಾಜಿಮಂದಿ ಮಕ್ಕಾ ಮದೀನಾ | ಕಾಬೇದುಲ್ಲಾಕ ಹೋಗುವರು
ಸುತ್ತ ದೇಶದ ಜನರೆಲ್ಲಾ ಅಲ್ಲಿಗೆ ಬಂದ ಸಿರಿಯವರು ಮಿಕ್ಕಿಜನಾ
ಸಂಪೂರ್ಣಾ ದಾನ ಮನ ಬಲ್ಲಾಂಗ ಮಾಡುವರೋ ನಮಾಜ ಆದಕ್ಷಣಾ
ಕಂಡ ಅಬ್ರಾಹಂ ಅರಸ ಇಟ್ಟ ತನ್ನ ಮನದಲ್ಲೆ ಕುನಸ
ಇದರಕ್ಕಿಂತ ಒಳ್ಳೆಮಿಕ್ಕಿ ಕಾಬೇದುಲ್ಲಾ ಭಾಗ ಮಾಡುವೆ ಸೊಚ್ಚಾಗಿ || ೧ ||

ಇದರಂತೆ ಪಣಾತೊಟ್ಟ ಥರಾಹಾಕಿ ಗ್ವಾಡಿಕಟ್ಟಿ
ಕಾಬಾ ತಯ್ಯಾರ ಮಾಡ್ಯಾನ ಮನಕಟ್ಟಿ ಏನ ಶ್ರೀಂಗಾರ ಆಗಿ
ಏರು || ಅದರ ನಡುವೆ ಮೆಂಬರ ಒಂದ ಸಂಗಮರಮರ ಕಲ್ಲಿಂದ
ತಯಾರ ಮಾಡಿಸಿ ಹೋಗಿ ಬರುವ ಮಂದಿಗೆ ತೋರಿಸಿ ಅಂತಿದ್ದಾ
ನೋಡಿರಿ ಕಾಬಾ ತಯ್ಯಾರ ಮಾಡೇನಿ ಅದರಕ್ಕಿಂತಾ ಒಳೇ ಹೆಚ್ಚಿಂದಾ
ಆ ಕಾಬೇಕ ಹೋಗದೆ ಯಾತ್ರಾ ಮಾಡಬೇಕರಿ ಇಲ್ಲಗೆ ಬಂದಾ
ರಂಬಿಸಿ ಕರಕರಸಿ ದುಷ್ಟ ಅರಸ ಕಷ್ಟ ಪಡದಾ
ಬ್ಯಾಸೊತ್ತ ತಿಳಿತಿಳಿಸಿ ಯಾರೊಬ್ಬರು ನನ್ನ ಮಾತ ಕಡಿಗೆ ಕೇಳಲಿಲ್ಲಾ ಅಂತಾ
ಅರಸ ಮನಿಯಾಗ ವಿಚಾರ ಮಾಡುವಾ ಕುಂತ ಮನದಲ್ಲೆ ಸಿಟ್ಟಾಗಿ || ೨ ||

ಸೊಗಸಿಲ್ಲ ಎನ್ನ ಮನಸ ತಡಮಾಡದೆ ಹೋಗಿ ಖಾಸ
ಕೆಡುವೆ ಕಾಬೇಕ ಮಾಡಿ ಬರುವೆ ನಾಶ ಈ ನೆಲಸಮನಾಗಿ
ಏರು || ಅಷ್ಟರಲ್ಲಿ ಪುರುಷ ಒಬ್ಬ ಬಂದಾ ಅರಬಸ್ತಾನ ಪಟ್ಟಣಲಿಂದಾ
ಅಬ್ರಾಹಂ ಅರಸ ಮಾಡಿದ | ಕಾಬೇದ ಖಾದಿಮ ಆಗಿ ಇದ್ದಾನು
ಆದಿನ ಅರಸಗ ಗೊತ್ತಿಲ್ಲದಾಂಗ ರಾತ್ರಿ ಮಸಲತ್ ಮಾಡಿದನು
ಕಾಬೇದೊಳಗ ಇದ್ದಂತಾ ಬದಕಾ | ತಗೊಂಡ ಓಡಿ ಹೋದನು
ಬೆಳಗಾಯಿತು ಹೊತ್ತು ಏರಿತು | ಬಂದ ಅರಸ ನೋಡ್ಯಾನು
ಖಾದೀಮ ಕಾಣದಾಂಗ ಆಯಿತು | ಇದ್ದಂತ ಬದುಕ ಎಲ್ಲಾ
ಕಟ್ಟಿ ಬೈದಾನಲ್ಲಾ ಸಿಟ್ಟಾಗಿ ಅರಸ ಹಲ್ಲ ತಿಂತಾನಲ್ಲಾ | ಅವನ ಕೊಲ್ಲುವದಕ್ಕಾಗಿ || ೩ ||

ಕರಿಸಿ ತನ್ನ ಸೈನ್ಯಮುಂದ ತಿಳಿಸುವಾ ಮನಸ್ಸಿನಿಂದ
ಹೋಗಿ ಕಾಬಾ ಕೆಡವಿ ಬರೂನ ಇಂದು ಅಂತಾನ ಸಿಟ್ಟಾಗಿ
ಏರು || ತಯ್ಯಾರ ಮಾಡರಿ ದಂಡ | ಶಮರಂತವರಿಗೆ ಕಂಡ ಕಂಡ
ಕರಕೊಂಡ ನಡಿಯಿರಿ | ಕೆಡವಿ ಕಾಬೇಕ | ಬರೂನು ಮನದಲ್ಲಿ ಚೈನಯಿಲ್ಲಾ ||
ಕೇಳಿ ತಯ್ಯಾರ ಮಾಡಾನ ದಂಡ | ಕುದುರಿ ಒಂಟಿ ಆನಿಗೆ ಜೂಲಾ
ಕಟ್ಟಶ್ಯಾನ ಅಂಬಾರಿ ಮಿತಿಮೀರಿ ದಂಡ ಏನ ಹೇಳಲಿ ಲೆಕ್ಕ ಇದ್ದಿಲ್ಲಾ
ಹೊಂಟಾರ ಮಹಾಮುಡದಾರ | ಹೋಗೂವ ದಾರ್‍ಯಾಗ
ಅರಬಸ್ತಾನ ಮಂದಿ ಕಂಡರ | ಕೊಲ್ಲುತಿದ್ದಾ ಕರಣ ಇಲ್ಲದಾಂಗ
ಹರುಷಾಗಿ ಮನಬಲ್ಲಾಂಗ  ಇದರಂತೆ ಕಡಕೊಂತ
ಮುಟ್ಯಾನ ಒಂದು ಕ್ಷಣದಾಗ ಬೈದುಲ್ಲಾಕ ಹೋಗಿ || ೪ ||

ಕಂಡ ಅರಸನ ದಂಡ ದರಬಾರ ಅಲ್ಲೆ ಇದ್ದಂತಾ ಜನರಾ
ಓಡಿ ಹೋಗಿ ಸೇರ್‍ಯಾರ ಗುಡ್ಡ ಗಂವಾರಾ ಎಲ್ಲಾರು ಗಾಬಾಗಿ
ಗಿಡಗಂಟಿಗೆ ಮಂದಿ ಮಿಕ್ಕಿ ಕುಂತ ಕೊಂಡಾರೊ ಹಣಹಣಕಿ
ಆನಿ ಒಂಟಿ ಕುದುರಿಯ ಮ್ಯಾಲೆ ಕುಂತ ಜನರೆಲ್ಲಾ ಇಳಿದಾರು
ಕಾಬೇದುಲ್ಲಾ ಸ್ವತಃ ಕೈಲಿಂದ ಕೆಡುವಬೇಕಂತ ಹೋದಾರು
ಹೋಗಿ ಸಮೀಪ ಅಂಜಿಕಿ ಹುಟ್ಟಿ ಹಿಂದಕ ತಿರುಗಿ ಬಂದಾರು
ಮತ್ತು ಪುನಾಃ ಅರಸನ ಜನಾ ಹತ್ಯಾರ ಆನಿ ಒಂಟಿ ಕುದುರಿ
ಮ್ಯಾಲೆ ಆಕ್ಷಣಾ ಅಬ್ರಾಹಂ ಅರಸ ಮೊದಲಾ
ಮಹಮೂದ ಅಂಬುವ ಆನಿಯ ಮ್ಯಾಲಾ ಹತ್ತಬೇಕಂತ ಹೋಗ್ಯಾನ
ಹತ್ತಗೊಡಲಿಲ್ಲಾ ನಿಂತಾನ ಹೈಪಾಗಿ || ೫ ||

ಆ ಆನಿಗೆ ಹಿಂದಕ ಒತ್ತಿ ಮತ್ತೊಂದು ಆನಿಯಮ್ಯಾಲೆ ಹತ್ತಿ
ಕುಂತಾನ ತಲಿಮ್ಯಾಲೆ ಜರಕಾಟಿ ಮಂದೀಲ ಸುತ್ತಿ ತಾ ಮನದಲ್ಲಿ ಹಿಗ್ಗಿ
ಏರು || ಏಕಂದರ ದಂಡ ಪುಂಡ ಕುಂತು ಹೊಂಟಾರ ಮನಗಂಡು
ಅಷ್ಟರೊಳಗ ಆ ಸೃಷ್ಟಿಕರ್ತನ ಕೃಪಾದಿಂದ ಅಬಾಬಿಲ ಒಂದಾ
ಹಾರಾಡಿಕೊಂತ ಪಕ್ಷಿಕಾಲಾಗ ಹಿಡಕೊಂಡು
ಸಣ್ಣ ಸಣ್ಣ ಹಳ್ಳ ಮ್ಯಾಲಿಂದ ಒಗದರ ಟುಬಾಕಿ ಒಗತಾ
ಒಗದಾಂಗ ಆಗೂದು ಕೇಳರಿ ಗೋಳ ಹಳ್ಳ ಒಂದೊಂದ
ಬಂದ ಮ್ಯಾಲಿಂದಾ ಬಿದ್ದಕ್ಷಣಾ ನೆಟ್ಟ ಹೊಟ್ಯಾಗ ಪಾರ ಆಗೂದು
ಮುಕಳಿಯಲಿಂದಾ | ಒಬ್ಬೊಬ್ಬರ ಹಾರಿತ್ತ ಪ್ರಾಣಾ ದಂಡೆಲ್ಲಾ ಸರೂ ಸಂಪೂರಣಾ
ಗೊತ್ತ ಆತ ನೋಡಿ ಅರಸ ಅಂತಾನ ಬೇಮಾನಾ ಮೈ ಥರ ಥರ ನಡುಗಿ || ೬ ||

ಆನಿ ಒಂಟಿ ಕುದುರಿ ಎಲ್ಲಾ ಸತ್ತ ಹ್ವಾದಾವು ಉಳಿಯಲಿಲ್ಲಾ
ಉಳದ ಅರಸ ಓಡಿಹ್ವಾದಾ ಜೀವದ ಕಬರಿಲ್ಲಾ ತಾ ಉಳುವ ಸಲುವಾಗಿ
ಏರು || ಅಬಾಬಿಲ ಒಂದೇ ಸವನಾ | ಬಿಡಲಿಲ್ಲಾ ಹತ್ತಿತ್ತ ಅವನ ಬೆನ್ನಾ
ಅರಸ ಮನಿಯಾಗ ಕುಂತ ಮಂದೀಗೆ ದಂಡ ನಷ್ಟ ಆಗಿದ್ದ
ಮಜಕೂರ ತಿಳಿಸುವಷ್ಟರಲ್ಲಿ ಅಬಾಬಿಲ ಹಾರತಿತ್ತ ಅರಸನ ಇದರಾ
ಕಂಡ ಅರಸ ಮಂದಿಗೆ ತೋರಸತಾನ ಇದ ಪಕ್ಷಿಯ ಪ್ರಕಾರಾ
ಇತ್ತೊ ಎಲ್ಲಾ ದಂಡಿನ ಮ್ಯಾಲಾ ಹಾರಿಕೊಂತ ಹಳ್ಳ ಒಗದ
ದಂಡ ಮಾಡ್ಯಾರ ಮಣ್ಣಿನ ಪಾಲಾ ಏನ ಹೇಳಲಿ ಮಣ್ಣಿನ ಗೋಳ
ಅಂತ ಹೇಳು ತನಕ ಒಂದ ಹಳ್ಳ ಬಿತ್ತರಿ ಹೊಟ್ಟಿಯ ಮ್ಯಾಲೆ
ಹೊರಗಬಿದ್ದಾ ಸತ್ತಾನ ಮರಮರಗಿ || ೭ ||

ಕಾಬೇದುಲ್ಲಾ ಮುರಿಬೇಕಂತಾ ದುಷ್ಟ ಅರಸಾ ಇಟ್ಟಿದ್ದಾ ಪಂತಾ
ಮುಕ್ಕಿ ಮಣ್ಣಾ ನರಕಗ ಹ್ವಾದಾ ಹೋಯ್ಕೊಂತಾ ತನ್ನ ಕರ್ಮಕ್ಕಾಗಿ
ಏರು || ಉಳೀತ ಕಾಬಾ ಕೆಡಲಿಲ್ಲ ಕಡಿಗೆ | ಶಿವನ ದಯಾದಿಂದ ಇನ್ನೂವರಿಗೆ
ಸುತ್ತ ದೇಶದ ಜನಾ ಕೂಡುತಾರ ಇನ್ನೂವರೆಗೆ ದರವರ್ಷಕ

ಯಾತ್ರಾ ಮಾಡಿ ಹಾಜಿ ಆಗಿ ಬರತಾರ ನಡದೈತಿ ಇನ್ನೂತನಕ
ಮಹಾಪಂಡಿತರು ಕೂಡಿರಿ ಕೇಳಿ ಅಲ್ಮತರಾಜಾದಿ ನೋಡಬೇಕ
ಸಂಪೂರ್ಣಾ ತಿಳಿಸಿನಿ ನಾ ಜಾಹೀರ ಮರತೇಕ ಬಾಗಲಕೋಟಿ ಪ್ಯಾಟಿ ಪಟ್ಟಣಾ
ಪೀರಮಲ್ಲೇಕಲ್ಲನ ಗಂಧ ಏರಸುವೆ ಪ್ರೀತಿಯಲಿಂದ
ವೈರಿ ಇದ್ದಾಂವಾ ಹುಸೇನಮಿಯ್ಯಾನ ಮುಂದ ಬಂದು ನಿಂತಾನ ಡೊಗ್ಗಿ || ೮ ||

* * *

**೧೪. ಜಿಬರಾಯಿಲ್ – ಇಸರಾಫಿಲ್ ಮಾಡಿದ ಪವಾಡ**

ಕುಂತಿರು ಸಭಾ ಬಂದ ಖುಷಿಯಾಲಾ
ಅಂತೇನಿ ನಾನು ನಿಮ್ಮ ಸಣ್ಣ ಬಾಲಾ || ಪಲ್ಲವಿ ||
ಏರು || ನನ್ನ ಕಡಿ ಆದರ ತಪ್ಪಾ | ದೈವಾ ನೀವು ಮಾಡರಿ ಮಾಫಾ
ಬಿಟ್ಟ ಮನದಾನ ನಿಮ್ಮ ಕೋಪ
ಅಜ್ಞಾನಿ ಇದ್ದೀನಿ ಸುಜ್ಞಾನಿ ದೈವದ ಮುಂದ
ಇದು ಒಂದ ಪಸಂದ ತಗದೇನಿ ಬಯ್ಯಾನಾ ಬಹು ಅಸಲಾ || ೧ ||

ಜಿಬರೀಲ ಇಸ್ರಾಪೀಲ ಶಾಮಿಲಾ | ಸಾಂಬಗ ಕೇಳತಾರೋ ಸಾನುಕೂಲಾ
ಏರು || ಬೆಂಕಿಲಿಂದ ಹುಟ್ಟಿಸಿದಿ ನಮಗ | ಮಣ್ಣೀಲೆ ಹುಟ್ಟಿಸಿದಿ ಮಾನವಂಗ
ಬಹಳ ಪ್ರೀತಿ ನೀ ಅವರ ಮ್ಯಾಗ
ಚ್ಯಾಲ || ಹುಚ್ಚಾಗಿ ಇಚ್ಚಾಗಿ ಹೆಚ್ಚಿಗೆ ಏನ ನಮಕ್ಕಿಂತಾ
ಅತ್ಯಂತಾ ಭಗವಂತಾ ಕಾರಣ ಇದು ನಮಗ ತಿಳೂದಿಲ್ಲಾ || ೨ ||

ಇ|| ಹಗಲಿರುಳು ನಾವು ನಿನಗೆ ಇಟ್ಟ ಖ್ಯಾಲಾ
ಇರತೇವಿ ತಾಬೇದಾಗ ಸದಾಕಾಲಾ
ಏರು || ಮಹದೇವ ಕೊಟ್ಟಾನ ಉತ್ತರಾ | ಭೂಮಿಮ್ಯಾಗ ಹೋಗರಿ ಒತ್ತರಾ
ಆಗ ಕಂಡ ಬಂದಾವ ನೇತ್ರಾ
ಚ್ಯಾಲ || ಮಾನವರು ಎಂತವರು ಇರತಾರ | ಅನ್ನೂದು ನಿಮಗೈತಿ ಗುಮ್ಮಾ
ಆತ ಹುಕುಮಾ ಹೊಂಟಾರ ಜಿಬ್ರಾಯಿಲ ಇಸರಾಫೀಲ್ || ೩ ||

ಒಂದ ಊರ ಕಂಡು ಇಬ್ಬರು ಅಗಲ್ಯಾರಲ್ಲಾ |
ಇಳದಾನ ಮಸೂತಿವೊಳಗ ಇಸರಾಫಿಲಾ ||
ಏರು || ವೈದ್ಯಗಾರ ಆಗಿ ಜಿಬರಾಯಿಲರು ಪ್ಯಾಟಿವೊಳಗ ಹೋಗಿ ಕುಂತಾರು
ಸಾವು ಜಲ್ಮಾ ಉಳಿಸುವೆ ನಾನು
ಚ್ಯಾಲಿ || ಬೇಕಾದ್ದ ಔಷಧ ಪಸಂದ ಬಿದ್ದರ | ಒಯ್ಯರಿ ಖಾತ್ರಿ ಮಾಡಿಕೊಳ್ಳಿರಿ
ಇಸರಾಫಿಲ್ ಮಸೂತಿವೊಳಗ ತಗದಾನ ಅಕಲಾ || ೪ ||

ಇ|| ಹೊಟ್ಟಿ ಕಡತ ಎದ್ದೈತಂತ ಗಾಲಮೇಲಾ
ಉರುಳಾಡಿ ಮಸೂತಿವೊಳಗ ಮಾಡಿ ಗದ್ದಲಾ
ಏರು|| ಕೂಡೀತ ಊರಾನ ಮಂದಿ | ಹಾಕತಾರ ತಂದ ಅಗಸುದ್ದಿ
ಮತ್ತಷ್ಟು ಸತ್ತಾಂಗ ಅಗದಿ ಮಾಡತಾನ ನೋಡತಾನ ಬಿಡತಾನ
ಕಣ್ಣ ಪಿಳಿ ಪಿಳಿ | ಹಾಕಿ ಗಾಳಿ ಜನಾಕೇಳಿ
ಕರತಂದಾರ ವೈದ್ಯಗಾರಗ ತತ್ಕಾಲಾ || ೫ ||

ಅಂತಾನ ವೈದ್ಯಗಾರ ಆದ ಜಿಬರಾಯಿಲಾ
ಸಾವೂತಾನಾ ಈ ಮನುಷ್ಯಾ ಉಳಿಯೂದಿಲ್ಲಾ
ಏರು || ಇದಕ ಒಂದ ಉಪಾಯ ಐತಿ | ಮಾಡಿದರ ಜೀವ ಉಳಿತೈತಿ
ಸಿಗುವುದು ಕಠಿಣ ಐತಿ | ಶ್ರೀಮಂತ ಅತ್ಯಂತ ಗುಣವಂತ
ಆದ ತನ್ನ ಮಗನ ಕೋದಾ ತಾನಾ ಶಾಂತ ಮನಾ
ಕಾಳಜ ದಿಲ್ ರಗತಾ ಇವು ಎಲ್ಲಾ || ೬ ||

ಇ|| ಇರಬೇಕ ಐದು ವರ್ಷದ ಸಣ್ಣ ಬಾಲಾ
ಮುಗಸಿರಬೇಕ ಅವನು ಕಲಮಾ ಎಲ್ಲಾ
ಏರು || ಕೇಳಿಕ್ಯಾರ ಈ ಸುದ್ದಿ ಅಷ್ಟು ಮಂದಿ ಕುಂತಾರ ಸ್ತಬ್ದ
ಅಂದ ಒಬ್ಬ ಅಸಹಾಬ ಎದ್ದ
ಚ್ಯಾಲ || ಬರತೇನಿ ತರತೇನಿ ಕೊಡತೇನಿ ಅನುಮಾನ ಯಾಕ
ಸದ್ಯಕ ಮನಪಾಕ ಹೇಳತಾನ ಮಡದಿಗೆ ಇದು ಎಲ್ಲಾ || ೭ ||

ಇ|| ಖುಷಿಲಿಂದ ಪತಿವ್ರತಾ ಆದಾಳ ಕಬೂಲಾ
ಸಾಲಿಗೆ ಹೋಗಿದಾನು ಸಣ್ಣಬಾಲಾ
ಏರು || ಕೊಯ್ತೇನಿ ನಾ ನಿನ್ನ ಕುತಗಿ ಕೇಳಿ ಮಗಾ ತನ್ನ ಶಿರಬಾಗಿ
ಚ್ಯಾಲ || ಅಂತಾನ ನಗತಾನ ಜ್ವಾಪಾನಾ ಅಸ್ಥಿರ ಘಟಕ
ಮಾಡೂದು ಯಾಕ ಈ ಕ್ಷಣಕ ಅನುಮಾನ ಮಾಡಬ್ಯಾಡರಿ ಬಿಲ್‌ಕುಲ್ಲಾ || ೮ ||

ಇ|| ಕಣ್ಣಮುಚ್ಚಿ ಮಲಗಿದ್ದನು ಸಣ್ಣಬಾಲಾ
ಕೋದಾನ ತಂದಿ ಅಂದ ಬಿಸಮಿಲ್ಲಾ
ಏರು || ಕಾಳಜ ಮತ್ತು ದಿಲ್ ರಕ್ತಾ ಕೊಟ್ಟ ವೈದ್ಯಗಾರಗ
ತುರತಾ ಮುಸಾಫಿರಾ ಎದ್ದು ಕುಂತಾ ಹರುಷಾಗಿ ಮನಸಿಗೆ
ಎಲ್ಲಾರಿಗೆ ಹೇಳಿ ಹೋದರು ಇಬ್ಬರು ದೂತರು
ಮಾನವರು ಭಕ್ತಿ ಇರುವದು ಬಹು ತೋಲಾ || ೯ ||

ಇ|| ಸಾಂಬನ ಮುಂದ ಹೋಗಿ ತಪಶೀಲಾ | ಹೇಳತಾರೋ ದೂತರು ಇದು ಎಲ್ಲಾ
ಏರು || ಮಹಾದೇವ ಅಂತಾನ ಮತ್ತಾ | ಭೂಮಿಮ್ಯಾಗ ಹೋಗರಿ ಪರತಾ

ಹುಡುಗನಿಗೆ ಮಾಡರಿ ಜೀವಂತಾ | ದೂತರು ಇಬ್ಬರು ಬಂದಾರ
ಫಕೀರರಾಗಿ ಅದೇಮನಿ ಬಾಗಿಲಿಗೆ | ಉಣಿಸಂತಾ ಮಡಿದರೋ ಸವ್ವಾಲಾ || ೧೦ ||

ಮೂರು ದಿವಸ ಆಯಿತು ಇಂದಿಗೆ ರಾತರಿ ಹಗಲಾ
ಉಪವಾಸ ಅದೇವಿ ನಾವು ಉಂಡಿಲ್ಲಾ
ಏರು || ಸಾವುಕಾರನ ಮಗನ ಹೆಣಕ | ಹೊರಗ ತಂದಿದ್ದರು ಎರಿಯಲಾಕ
ಇನ್ನ ಮ್ಯಾಗ ಮಣ್ಣ ಮಾಡೂದಕ
ಚ್ಯಾಲ || ಸಾವುಕಾರ ಇಬ್ಬರು ಫಕೀರಗಳಿಗೆ ಅಂದಾ | ಪಸಂದಾ
ಆನಂದಾ ಉಣಿಸಂತ ಮಡದಿಗೆ ಹೇಳ್ಯಾನಲ್ಲಾ || ೧೧ ||

ಪತಿವ್ರತಾ ಬಾವಾಗಳಿಗೆ ತಡಾಯಿಲ್ಲಾ
ಕುಂಡರಿಸಿ ಮುಂದ ತಂದ ಇಟ್ಟಾಳಗಲಾ
ಏರು || ಫಕೀರಗಳು ಕೇಳತಾರ ಆಗ ಮಕ್ಕಳು ಏಸು ಅದಾವ ನಿಮಗ
ಪತಿವ್ರತಿ ಅಂದಾಳ ಹೀಂಗ | ಇರೂದೊಂದ ನನ್ನ ಕಂದಾ
ಕೋದಿಂದ ಕಾಳಜರಕ್ತಾ ಬೇಕಂತ ನನ್ನ ಕಾಂತಾ
ಓದು ಕೊಟ್ಟಾನ ಮಸೂತಿಯೊಳಗ ಸುಳ್ಳಲ್ಲಾ || ೧೨ ||

ಮಕ್ಕಳಿಲ್ಲದ ಮನಿವೊಳಗ ಬಿಲ್‌ಕುಲ್ಲಾ
ಫಕೀರರು ನಾವು ಇಬ್ಬರೂ ಉಣ್ಣೂದಿಲ್ಲಾ
ಏರು|| ಸತಿ ಅಂದ್ಲು ಮಾಡಲಿ ಹ್ಯಾಂಗ | ಫಕೀರ ಅಂದ್ರೋ ಕರಿ ನಿನ್ನ
ಮಗನ ಹೆಸರಗೊಂಡ ಒದರ್‍ಯಾಳ ಆಗ |
ಚ್ಯಾಲ || ತೊಳಿಯತಿದ್ದ ಹೆಣಾ ಎದ್ದ ಪಸಂದಾ | ಎಲ್ಲಾರ ಹುಜರಾ
ಹುಶಿಯಾರಾ ಫಕೀರರಾ ಕರಕೊಂಡ ಉಂಡ ಹ್ವಾದಾರೋ ಕುಶಿಯಾಲಾ || ೧೩ ||

ಇ|| ಬಾಗಲಕೋಟಿ ಊರಾ | ಮಹಾಸೇಲಾ
ದಸ್ತಗೀರ ಕೇಸೂಪೀರ ಪ್ರಭೂಲಾ
ಏರು || ಮ್ಯಾಗಿನ ಓಣಿಗೆ ಮರತಬಿಟ್ಟಿ | ಬೆಳಸತೀದಿ ವೆಂಕಟಪ್ಯಾಟಿ
ಹೆಸರ ಹೆಳತಿ ಯಾರಿಗೆ ಹುಟ್ಟಿ
ಚ್ಯಾಲ || ಕುಂತವರು ನಿಂತವರು ಉಗಳ್ಯಾರ ನಿನ್ನ ಮಾರಿಮ್ಯಾಗ
ಪಡದಾಗ ಬಿಡದಂಗ ಕಿತ್ತಾರೋ ನಾಗೂ-ಗೌಸು ನಿನ್ನ ಹಲ್ಲಾ || ೧೪ ||

*** * ***

**೧೫. ಪುಣ್ಯದ ಫಲಾ**

ದೈವಕ ಮಾಡುವೆ ಶರಣಾ | ಇರಬೇಕ ನಿಮ್ಮ ಕರುಣಾ
ಮಾಡಿ ಹೇಳುವೆ ವರಣಾ ಒಂದ ಬಯ್ಯಾನಾ ||
ಏರು || ಗ್ನಾನವಂತರು ಮಹಾ ಪಂಡಿತರು | ಕೂಡಿ ಕುಂತೀರಿ ಸರುವಾ

ಧ್ಯಾನಿಟ್ಟ ಕೇಳಿರಿ ನಾ ಹೇಳುವೆ ನುಡಿ ಜೋಡಿಸುವೆ ಕರವಾ
ಅಲ್ಪ ಬುದ್ಧಿಲಿಂದ ಅಂತೇನಿ ಸ್ವಲ್ಪಾ | ಎಣಿಸಬಾರದು ನೀವು ನನ್ನ ತಪ್ಪಾ
ಇದ್ದಷ್ಟು ಬುದ್ದಿಲಿಂದ ಮಾಡಿಸಿ ಬಯಾನ | ತಿಳಿಸುವೆ ನಿಮ್ಮ ಮುಂದೆ ಮಾಡಿ ರಚನಾ || ೧ ||

ಮೆಹಬೂಬರ ವಂಶದಾಂವಾ | ಇದ್ದ ಫಕೀರ ಬಾವಾ
ಭಿಕ್ಷಾ ಬೇಡುವ ಅಂವಾ | ಮಾಡಿ ಯೋಚನಾ
ಏರು || ಆ ದೇಶದಾಗ ಒಬ್ಬಾಂವಾ ಅರಸ ಇದ್ದಾನೋ ಶ್ರೀಮಂತಾ
ಭೂಮಿ ಸೀಮಿ ಧನ ದ್ರವ್ಯ ಬಾಳ ಅಂವಗಿತ್ತರಿ ಸಂಪತ್ತಾ
ಅವನ ಮನಿಗೆ ಹೋಗಿ ಬೇಡೂನು ಭಿಕ್ಷಾ | ಅವನ ಮನಸ ಮಾಡುವೆ ಪರೀಕ್ಷಾ
ಬಾವಾ ಮನದಾಗ ಅಂದಾ | ಸವಾಲ ಮಾಡಬೇಕೋ ಒಂದಾ
ಏನ ಕೊಡತಾನೋ ತಂದಾ | ನನಗವನಾ || ೨ ||

ಒಂದ ಗಡಗಿ ತಗೊಂಡ ಒಡಕಿ ಕಿನ್ನುರಿ ಕಾಯಿ ಮಾಡಿದಾ | ಖಡಕ
ಹರಕ ಹಗ್ಗಾ ಜೋಡಿಸಿ ಅದಕ ತಂತಿ ನೂತನಾ |
ಏರು || ಕಿನ್ನೂರಿ ಕಾಯಿ ಒಳ ಸಂಪನುಡಿಸತಿದ್ದಾ ಕಲ್ಮಾ ಓದುವ ಶಬ್ದಾ
ಕಲ್ಮಾ ಓದುವ ನಾದದ ಒಳಗ ಆಗಿದ್ದಾ ಆನಂದಾ
ಸಂಗತೀಲೆ ತಗೊಂಡ ತನ್ನ ಕಿನ್ನುರಿ | ದಾರಿ ಹಿಡಿದ ಬಂದಾಗ ಬಿರಿಬಿರಿ
ಅರಸನ ಮನಿಗೆ ಹೋಗಿ | ಸವಾಲಾ ಮಾಡಿದಾ ಯೋಗಿ
ದಾನಾ ಮಾಡೂತ ಕೂಗಿ | ಕರದಾನಲ್ಲಾ || ೩ ||

ಬಾವಾನ ಸವಾಲ ಕೇಳಿ ಮನದಾಗ ಹರುಷ ತಾಳಿ
ಅರಸ ನೋಡಿದ ಹೊರಳಿ ನಿಂತ ಬಾವಾನ್ನ ||
ಏರು || ಬಿಕ್ಷಾ ಬೇಡಲಿಕ್ಕೆ ಬಂದಾರ ಸ್ವಾಮಿ || ಕೊಡಬೇಕ ಇವರ ತಕ್ಕ
ಮುತ್ತು ರತ್ನಗಳ ತಬಕ ತುಂಬಿಕೊಂಡು ಬಂದಾನ ಕೊಡುವುದಕ
ಬಾವಾ ಅಂತಾನ ಬಲ್ಲೇನೊ ನಾನು | ಇದನ್ನ ತಗೊಂಡು ನಾ ಮಾಡಲಿ ಏನು |
ಅರಸ ಗಾಬಾಗಿ ಆಗ ಕೈಮುಗಿದು ಅಂತಾನ ಹೀಂಗ |
ಮತ್ತೇನು ಬೇಕರಿ ನಿಮಗ ಕೊಡುವೆನು ನಾ || ೪ ||

ನಾನು ಸಂತೋಷದಿಂದ ಕೊಟ್ಟೇನಿ ಇಂದ | ಒಲ್ಲೇನಂತ
ನೀವು ಸಂಶಯ ತಂದ ಕಾರಣೇನಾ |
ಏರು | ಕೇಳೋ ಅರಸ ಇದು ಯಾಕ ಬೇಕೋ ನೀ ಮಾಡುವ ಧರ್ಮಾ
ನಿನ ದಾನಕ ಬೆಂಕಿ ಹಚ್ಚಿ ಸುಡೋ ಛೀ ಹೋಗೊ ನೀಚ ಧರ್ಮಾ
ಭೂಮಿ ಮ್ಯಾಲೆ ಹುಟ್ಟಿ ಏನ ಮಾಡಬೇಕೋ | ದಾನಾ ಮಾಡುಕ ಮನಸಿರಬೇಕೋ ಪಾಕ
ಸ್ವತಾ ದುಡದು ತಂದದ್ದು ನೀನಾ | ನನಗ ಕೊಡಬೇಕೋ ದಾನಾ
ಹೀಗಂತ ಬೈದು ಅವನ್ನಾ | ಹ್ವಾದಾನೊ ಅವನಾ || ೫ ||

ಅರಸ ಆಗ್ಯಾನೊ ಸುಂದಾ | ತಿರುಗಿ ಮನಿಯೊಳಗೆ ಬಂದಾ
ಹೇಳ್ಯಾನ ಮಗಳಿನ ಮುಂದಾ | ಮಾಡಿ ವ್ಯಸನಾ
ಏರು || ಸಾಕ್ಷಾತ್ ಬಾವಾ ಭಿಕ್ಷಾ ಬೇಡಲಿಕ್ಕೆ ಬಂದ ನಿಂತಿದ್ದಾ ಹೊರಗ
ಮುತ್ತು ರತ್ನಗಳು ತಬಕ ತುಂಬಿ ಕೊಡಲಾಕ ಹ್ವಾದೆ ಅಂವಗ
ಒಲ್ಲೆ ಅಂತಾ ಅಂವಾ ಹಿಂದಕ್ಕ ಬಿಟ್ಟಾ | ಬಲ್ಲಾಂಗ ಬೈದು ಮಾಡಿದಾ ಸಿಟ್ಟಾ
ಸ್ವತಾ ನೀನು ದುಡದದ್ದು ತಂದಾ | ಕೊಡಬೇಕಂತ ಹೀಂಗ ಅಂದಾ
ನಾನು ಇದಕ ಮುಂದ ಮಾಡಲೇನಂದಾ || ೬ ||

ತಂದಿಗೆ ಅಂತಾಳ ಮಗಳು | ನನ್ನ ಮಾತು ಮನಸಿಟ್ಟು ಕೇಳು
ಬಾವಾನ ಮಾತು ಅಲ್ಲರಿ ಸುಳ್ಳು | ಸತ್ಯ ವಚನಾ
ಏರು || ಅರಸ ಅಂಬುವಂತಾ ಶಬ್ದಾ ಬಿಟ್ಟು | ಬಡವನ ವೇಷಾ ತೊಟ್ಟು
ತಡಮಾಡದೆ ನೀವು ದುಡಿಲಾಗ ಹೋಗರಿ | ಮನದ ಸಂಶಯ ಬಿಟ್ಟು
ಮಗಳ ಮಾತಿಗೆ ಒಪ್ಪಿದಾ ಅರಸಾ | ಬಡವನಂತೆ ತೊಟ್ಟಾನ ವೇಷಾ
ತಯಾರಾಗಿ ಹೊಂಟಾನ ಅರಸಾ | ಹೊತ್ತ ಮುಳಗಿ ಹಚ್ಚೀತ ದೀಪಾ
ಮನದೊಳಗೆ ಸಂಕಲ್ಪಾ | ಇತ್ತ ಏನೇನಾ || ೭ ||

ಅಲ್ಲೇ ಒಬ್ಬಾ ಕಂಬಾರ ಇದ್ದಾ | ಘನ್ನ ಹೊಡೂದು ಕೇಳಿದ ಶಬ್ದಾ
ಹೋಗಿ ನಿಂತಾನೋ ಖುದ್ದಾ | ಕೇಳಿ ಅವನ್ನಾ
ಏರು || ಬಾಳ ಬಡವ ನಾ ಬಂದೇನಿ | ದಯಮಾಡಿ ಹಚ್ಚೀರಿ ದಗದಕ್ಕ
ದುಡದಷ್ಟು ಪಗಾರ ಕೊಡಬೇಕೋ | ನನಗ ಬಾಳೈತಿ ನಾಜೂಕ
ಕಂಬಾರ ಕೇಳತಾನ ಆ ಬಡವನ್ನಾ | ನಿನಗ ಹಚ್ಚತೀನಿ ಹೊಡಿಲಾಕ ಘನ್ನಾ
ಘನ್ನಾ ಹೊಡೆದರ ನೀನು ಆಣಿ ರೊಕ್ಕ ಕೊಡತೇನಿ ನಾನು |
ಇದಕ್ಕಿಂತ ಹೆಚ್ಚಿಂದೇನು ಕೊಡುದುಲ್ಲಾ ನಾನು || ೮ ||

ಕಂಬಾರನ ಮಾತಿಗೆ ಖಬೂಲಾ | ಆಗಿ ಅಂವಾ ನಿಂತಾನಲ್ಲಾ
ದೊಡ್ಡ ಸುತಗಿ ಕೊಟ್ಟಾನೋ ತೋಲಾ | ಇತ್ತ ವಜನಾ
ಏರು || ಎತ್ತೆತ್ತಿ ಘನ್ನಾ ಹೊಡುವಾಗ ಮೈಯೆಲ್ಲಾ ಆತರಿ ನೀರ ನೀರಾ
ಕೈತುಂಬ ಗುಳ್ಳಿ ಎದ್ದು ಒಡದಾವೋ ಆಗಿತ್ತು ನೆತ್ತರಾ |
ಕಂಬಾರಾ ಗಾಬಾದಾ ನೆತ್ತರ ನೋಡಿ | ಆಣಿ ರೊಕ್ಕ ಕೊಟ್ಟ ಲಗುಮಾಡಿ
ರೊಕ್ಕಾ ತಗೊಂಡು ಬಂದಾನ ಅರಸಾ | ರಾತ್ರಿ ಆತೋ ಮೂರು ತಾಸಾ |
ಮಗಳ ಕೈಯಾಗ ಹಣಾ | ಕೊಟ್ಟಾ ತಾನಾ || ೯ ||

ತೊಗೊಂಡಾಳೋ ಕೈಯಾಗ ರೊಕ್ಕಾ | ಖುಷಿ ಆಗ್ಯಾಳ ತನ್ನ ಮನಕ
ಅಂತಾಳ ಇವು ತಗದಿಡಬೇಕೋ ಮಾಡಿ ಜ್ವಾಪಾನಾ
ಏರು || ನಾಳೆ ಮುಂಜಾಲೆ ಕರಕೊಂಡ ಬರಬೇಕ ಬಾವಾನ್ನ ಹುಡಿಕ್ಯಾಡಿ
ದಣದ ಬಂದಿರಿ ಮಲಗ ಹೋಗರಿ ಲಗೂ ಊಟಾ ಮಾಡಿ
ಮಲಗಿದರ ಅಂವಗ ಬಿಡಲಿಲ್ಲ ಚಿತ್ತ ನಿದ್ದಿ ಹತ್ತಲಿಲ್ಲರಿ ಬೆಳತನಕ

ಮುಂಜಾಲೆದ್ದು ಹ್ವಾದಾನೋ ಅರಸಾ | ಮನದಾಗ ಬಾವಾನ ಧ್ಯಾನಾ
ಕರತಂದು ಮಾಡಿ ತಪವಾ ಕೊಟ್ಟಾನೋ ದಾನಾ || ೧೦ ||

ಆಣಿ ರೊಕ್ಕಾ ಕೈಯಾಗ ಹಿಡದಾ | ದಾನಾ ಕೊಡೂದು ಅಂತಾನ ಹೌದಾ
ಮಾಡಿ ಅಂವಗ ಆಶೀರ್ವಾದಾ | ಹೊಂಟಾ ಆ ದಿನಾ ||
ಏರು || ದಾನಾ ತೊಗೊಂಡ ಬಾವಾ ಖುಷಿಯಾಗಿ | ದಾಳಿಂಬ್ರ ಹಣ್ಣಾ ತಂದಾ
ಅದೇ ಹಣ್ಣು ತಂದು | ಅಂಗಳದಾಗ ತೆಗ್ಗ ತಗದ ಹುಗದಾ
ನೀರ ಹಾಕತಿದ್ದ ಅಂವಾ ದರದಿವಸಾ | ಹಣ್ಣ ಗಿಡಾಹುಟ್ಟೈತಿ ಒಳೇ ಸರಸಾ
ಗಿಡದ ತುಂಬ ತಪ್ಪಲ ಚಿಗಿತ | ಹೂಕಾಯಿ ಬಿಟ್ಟಾವೋ ಮಸ್ತಾ
ಹಣ್ಣ ಆಗ್ಯಾವೋ ಮುತ್ತಿನ ಜೋತಾ ಬಹು ರಚನಾ || ೧೧ ||

ಹಣ್ಣು ನೋಡಿ ಬಾವಾ ಅಂದಾ | ಕಣ್ಣಿಗೆ ಕಾಣತಾವೊ ಚಂದಾ
ಹರಕೊಂಡಾನ ಆಗ ಒಂದಾ | ಹಣ್ಣ ನವೀನಾ |
ಏರು || ಹಣ್ಣ ಕೈಲೆ ತಿಕ್ಕಿ ತಿಕ್ಕಿ ನೋಡತಾನ | ಉದರತಾವೊ ಹೊನ್ನಾ
ಪುಣ್ಯೇದ ಫಲ ಇದರಂತೆ ಬೆಳುತೈತಿ | ಇಟ್ಟ ಕೇಳರಿ ಧ್ಯಾನಾ
ದಾನಧರ್ಮದಲ್ಲೆ ಇರಬೇಕ ಮನಸಾ | ಭೂಮಿ ಮ್ಯಾಕೆ ಇದು ಹೆಚ್ಚಿನ ಜನನಾ
ಇದರಂತೆ ಇರಬೇಕ ನೀತಿ | ಬಾಗಲಕೋಟೆ ಊರ ಭರ್ತಿ
ಮಡ್ಡಿಪೀರಾನಲ್ಲೆ ಮುಕ್ತಿ ಪಡಿರಿನ್ನಾ || ೧೨ ||

* * *

**೧೬. ಮುತ್ತಿನ ಜಡಿ ದಾನ ಮಾಡಿದ ಪದಾ**

ಶಾಸ್ತ್ರದಿಂದ ಹುಡುಕಿ ತಗದೇನಿ ಸಂದ
ಓಣಿಗೆ ಒಬ್ಬರ ಆಗ್ಯಾರ ಶಾಹೀರ | ಉಸ್ತಾದಾಗಿ ಕುಂತಾರ ಹುಲ್ಲ ಕೊಯ್ಯುವರ
ನಡಕಟ್ಟಿ ಬರತಾನ ಎಟ್ಟಿ ಹಾಡೂಕ ಸಿಟ್ಟೀಲೆ ಮೂರ್ಖ ಅಕ್ಷರ ಒಂಟ
ತಂದ ತೊಂಟ ಬಂಟ ಅನಸುಕ ಶಾಹೀರಿ ಮಾಡೂದು ಮಾರಿ ಅಲ್ಲದು
ದಾರಿ ಸಿಗದಕ ಮೂಲಾಗಿ ಇಂವಾ ಬಂದಾ ಮಾನಾ ಪಾನಾದಸಿಂದಾ || ೧ ||

ಹೆಣ್ಣು ಒಂದಾ ರೂಪ ಪೂರ್ಣಮಿ ಚಂದ್ರಾ
ಖಾಜಿ ಹೊಟ್ಟೀಲೆ ಹುಟ್ಯಾಳ ಬಾಲಿ | ಭಕ್ತಿವಂತಳು ಅನಸ್ಯಾಳ ಜಗದಲ್ಲಿ
ದರ ದಿನಾ ಶಿವನ ಧ್ಯಾನಾ ಮಾಡುವಳು ಗ್ಯಾನವಂತಳು
ಇಟ್ಟ ಚಿತ್ತ ಐದ ಹೊತ್ತ ನಮಾಜ ತುರತಾ
ಮಾಡುವಳು ಅನುಮಾನವಿಲ್ಲದೆ ದಾನಾ ದರದಿನ ಕೊಡುವಳು
ನಿರಮಳ ಮನದಿಂದ ಸಂಶಯವು ಇಲ್ಲನಾ || ೨ ||

ಮುತ್ತಚಂದ ಪೋಣಿಸಿ ಕೂದಲಲೊಂದೊಂದಾ |
ಜಡಿಯ ವಿಸ್ತಾರಾ ಮುತ್ತಿನಬಾರಾ | ಹೇಳತೇನ ಕೇಳಬೇಕ ಹಿರಿಯರಾ

ಆಕಿಚಳಕ ಎಳಕ ಹರೆಯ ಬೆಳಕು ಬಿದ್ದಾಂಗ
ಆ ತರುಣಿ ಮುಖಾ ಹೊರಳಿ ಪುಷ್ಪಾ ಅರಳಿ ಬಂದಾಂಗ
ಅಕ್ಕರತಿ ಬಾಳಾ ಪ್ರೀತಿ ಸಾಂಬನ ಭಕ್ತಿ ಅತಿ ಮ್ಯಾಗ |
ಕೇಳಿ ವಾರ್ತೆ ಒಬ್ಬ ಬಂದಾ ದಾನದದಸಿಂದಾ || ೩ ||

ಹೆಸರಾ ನಿಮ್ಮದಾ ಕೇಳಿ ಬಂದೀನಿ ದೂರದಿಂದಾ
ತಾಯವ್ವಾ ದಾನಾ ಕೊಡಬೇಕ ಇಂದಾ | ಕೊಟ್ಟಿದ್ದಾರ ಸ್ವಾಮಿ ನಿಮಗ ಭಗವಾನಾ
ಶಿವಾ ಬಲ್ಲಾ | ಏನೇನು ಇಲ್ಲಾ | ಮನ್ಯಾಗ ಎಲ್ಲಾ ತೀರಿತು |
ಏನು ಕೊಡಲಿ ಅಂತಾಳ ಬಾಲಿ | ಮನಸಿನಲಿ ಈ ಹೊತ್ತು
ಮುತ್ತಿಂದು ಜಡಿ ಕೊಯಿದು ಕೊಟ್ವಾಳ  ತಂದು ಈ ಹೊತ್ತು
ಮನಸಾಗಿ ಆನಂದಾ ಹೊಂಟಾನೋ ಅಲ್ಲಿಂದಾ || ೪ ||

ಪ್ಯಾಟ್ಯಾಗ ಬಂದಾ ಜಡಿ ಮಾರುದಕ ತಂದಾ
ಖಾಜಿಯ ಮಗಳಾ | ನನಗಾಗಿ ಮರುಳಾ | ಜಡಿಯ ಮುತ್ತಿಂದು ಕೊಟ್ವಾಳ ಕೆಚ್ಚಿದ ಹರಳಾ
ಊರೆಲ್ಲಾ | ಆದೀತ ಗುಲ್ಲಾ | ಖಾಜಿ ಎಲ್ಲಾ ಕೇಳ್ಯಾನು
ಆಗಿ ಸಿಟ್ಟ ಮನಿಗೆ ಹೊಂಟಾಂವಾ ಮುಕ್ಕಟ ಬಂದಾನು
ಹತಿಯಾರ ಹಿಡಿದ ಶಿರಾ ಮಾಡುವೆ ಪಾರ್ ಅಂತಾನು
ತಲಿಯ ಹೊಡಿಯಬೇಕೆಂದಾ ವಿಚಾರ ಆದಿಂದಾ || ೫ ||

ಕರುಣ ಬಂದು ಸಾಂಬಾ ದೂತರಿಗೆ ಅಂದಾ | ಕೆಚ್ಚಿದ ಹರಳಾ
ಜಡಿ ಬಂದ ನಿವಳಾ ವಜ್ರ ಮುತ್ತಿಂದು ಜೋತ ಥಳ ಥಳಾ
ಸ್ವರ್ಗದಿಂದ ದೂತ ಬಂದ ಜಡಿ ತಂದಾ ಆ ಕ್ಷಣಾ
ತೆಲಿಮ್ಯಾಗ ಇಟ್ವಾರ ಬ್ಯಾಗ ಬೆಳಕ ಆಗ ಬಿತ್ತಣ್ಣಾ
ಸಿರಬಾಗಿ ಹೊಂಟಾರ ತಿರುಗಿ ಸಂತೋಷಾಗಿ ಆ ದಿನಾ
ಜಗದೊಳಗ ಹುಟ್ಟಿಂದಾ ಭಕ್ತಿ ಪಡಿಯಬೇಕೆಂದಾ || ೬ ||

ಮನಿಯಾಗ ಹೋದಾ ಖಾಜಿ ಮಗಳಿಗೆ ಕರದಾ
ಜಡಿಯ ಮುತ್ತಿಂದಾ | ಐತೇನ ನಿಂದಾ | ಖರೇ ಮಾತ ಹೇಳಬೇಕ ನನ್ನ ಮುಂದಾ
ಸಾಂಬನ ಹುಕುಮು ನನಗಿತ್ತು ಶಂಕರ ಭವಸಾಗರ ಸಹಕಾರ ನನ್ನನು
ಜಗಜ್ಯೋತಿ ಜಡಿ ಐತಿ ತೆಲಿಗೆ ಭಕ್ತಿ ಪಡೆವೆನು
ನೋಡ್ಯಾನ ಬೆನ್ನಿಂದಾ ಬಿದ್ದ ಬವಳಿಕಿ ಬಂದಾ || ೭ ||

ನೆನದಾ ಸಾಂಬಗ ನೆನೆದಾ ಸ್ಮರಣಿ ಮಾಡಿ ಆತಂದಾ
ಇಟ್ಟ ಏಕಭಾವಾ | ಮಾಡಿದರ ಸೇವಾ | ಒಲಿತಾನ ನಮಗ ಮಹಾದೇವಾ
ಮಾಡಿ ತಗಲ ಆಗಿರಿ ನೀವು ಬಾಗಲಕೋಟ್ಯಾಗ
ದಸ್ತಗೀರ ಕೇಸುಪೀರ ಮತಿ ಕೊಟ್ಟಿದ್ದಾರ ನಮಗ

ನಾಗೂ-ಗೌಸು ಅಂತಾರ ಸೋಸು ಅಷ್ಟಾರ ತುಸುಮನದಾಗ
ಲಾಲ ಡೋಂಗ್ರಿಯ ಮುಂದ ಆಟ ನಡುದಿಲ್ಲ ನಿಂದಾ || || ೮ ||

* * *

## ಇಸ್ಲಾಮೇತರ ಧರ್ಮಕ್ಕೆ ಸಂಬಂಧಿಸಿದ ಮೊಹರಂ ಪದಗಳು

## i. ಐತಿಹಾಸಿಕ ಪದಗಳು

**೧. ಸಿಂಧೂರ ಲಕ್ಷ್ಮಣನ ಪದಾ**
ಹತ್ತು ದೈವದ ಮುಂದ ಗೊತ್ತ ಇರುವದು ಸಂದ
ಮುತ್ತು ಸುರಿದಾಂಗ ಚಂದ ಮಾಡಿ ಅಸಲಾ || ಪಲ್ಲವಿ ||

ಇ|| ಸಿಂಧೂರ ಲಕ್ಷಣನು ಜಾತಿಲೆ ಬೇಡರವನು ಲಿಂಬಿಹಣ್ಣಿನ ವರಣಾ
ರೂಪ ಡೌಲ ಚಲ್ವಿಕಿ ಚಂದ್ರರೂಪ ಒಳೆ ಸುಂದರ ಬರೆದು ಇಟ್ಟಾನೋ ಬ್ರಹ್ಮಾ
ಏರು || ಶಿವನ ಮಹಿಮಾ ಶಿವನಿಗೆ ಠಾವಿಕಿ ಹತ್ತುದಿಲ್ರಿ ನೇಮಾ
ಜತ್ತಿಯ ಮಾರಾಜ ಇಬ್ಬರು ಕೂಡಿ ದಾಲಪಟ್ಟಿ ಆಡತಿದ್ರೂ ಸರಿಜೋಡಿ
ಮುಂದಕ ಹನ್ನೊಂದು ಮಾರು ಹಿಂಬರಕಿಲೆ ಐದಾರು ಜಿಗಿತಿದ್ದಾ ಬಹಳ ಜೋರ || ೧ ||

ಇ|| ಹುಟ್ಟೇತೋ ಕದನದ ಮಾರಿ ದರೂಡಿ ಮಾಡಿದ ಮೀರಿ
ಅಂವಗ ಆದಾನೋ ವೈರಿ ಧನಿ ಮೊದಲಾ ಅಳಿಯಾನ ಹೆಸರು ನರಿಸ್ಯಾ
ಗೋಪಾಳ ಕರಿಯ ಬಸ್ಯಾ ನಾಲ್ವರು ಅಳಿಯರು ಖಾಸ ಇದ್ದಾರಲ್ಲಾ
ಏರು || ಹೊಲಿಯನ ಕೂಡಿಸಿ ಆರು ಮಂದಿಗೆ ತಗದಾರೋ ವಾರಂಟಾ
ಸರ್ವರು ಕೂಡಿ ದರೂಡಿ ಮಾಡಿದ ಕಲಮಾ ಹದಿನೆಂಟಾ
ಹಿಡಿದು ತಂದಾರೋ ಆರು ಮಂದಿನಾ ಅಥಣಿ ಜೇಲಿಗೆ ಹಾಕ್ಯಾರೋ ಅವರನ್ನಾ
ಹದಿನಾಲ್ಕು ವರ್ಷ ಶಿಕ್ಷಾ ಒಂದನೆ ದರೂಡಿ ಕೇಸು ಕೊಟ್ಟಾರು ಅವರಿಗೆ ಸರಸಾ ಬಿಡಲಿಲ್ಲಾ || ೨ ||

ಇ|| ಬೆಳಗಾಂವಿ ಜೇಲಿನೊಳಗ ಹಾಕ್ಯಾರೋ ಅವರಿಗೆ ಆಗ ಏಳು ವರ್ಷ ಶಿಕ್ಷಾ |
ಮತ್ತ ಕೊಟ್ಟಾರಲ್ಲಾ | ಅಂತಾನೋ ಮನದಾಗ ಮಾಡಬೇಕೋ ಇನ್ಹ್ಯಾಂಗ
ಜೇಲ ಮುರಿದು ಹೊರಗ ಬರಬೇಕಂದಾನಲ್ಲಾ ||
ಏರು || ಮಾಡಿ ಪಿತೂರಿ ಮುರದಾರೋ ಜೇಲಾ ಹೊರಗ ಬಂದಾರಲ್ಲಾ
ಪೋಲೀಸ ಜನರು ಹತ್ಯಾರೋ ಬೆನ್ನು ಹಿಂಬಾಲ ಬಿಡಲಿಲ್ಲಾ
ತೊಗಲ ಕವಣೀಲೆ ಗುರಿಹೊಡಿ ಅಳಿಯಾ ಮಾಂವಾ ಒಗಿತಿದ್ರೋ ಜೋಡಿ
ಮುಧೋಳಕ ಬಂದಾರಲ್ಲ | ಧನಿಗೆ ಅಂತಾರ ಮೊದಲಾ | ನಿನ್ನ ಶಿರಾ ಬಿಡೂದಿಲ್ಲಂದಾರಲ್ಲಾ || ೩ ||

ಇ|| ಮುಧೋಳ ಸರಕಾರ ಪೋಲೀಸ ಜನರಾ | ಹತ್ಯಾರೋ ಕುದುರಿ |
ಸವಾರಿ ಹಿಂಬಾಲಾ ಸಿಗಲಾರದೆ ಹ್ವಾದಾರೋ ಓಡಿ ಅಳಿಯಾ ಮಾಂವಾ ಸರ್ವರು ಕೂಡಿ
ಹ್ವಾದಾರೋ ಗುಡ್ಡದ ಕಡಿ ಸಿಗಲಿಲ್ಲಾ | ದರೂಡಿ ಬದಕ ದಾನಧರ್ಮ ಮಾಡ್ಯಾರೋ
ಬಡಜನರಿಗೆಲ್ಲಾ ಜಮಖಂಡಿ ಇನ್ಸ್‌ಪೆಕ್ಟರ ಇದ್ದಾ ಒಳೆ ಗಟ್ಟಿ ಧೈರ್ಯದಲ್ಲಿ  ಮಿಗಿಲಾ
ದರೂಡಿ ಜಗಾದಲ್ಲಿ ಪಂಚನಾಮಿ ಮಾಡೂತ ನಿಂತಾನೋ ಭಯಾವಿಲ್ಲಾ ಏನಾ
ಲಕ್ಷಮ್ಯಾನ ಪಿತೂರ ಮಾಡ್ಯಾನೋ ಗೋಲಿಬಾರಾ || ೪ ||

ಇ|| ತೊಡಿಯೊಳು ಬಡದೀತೋ ಪೂರಾ | ಜಿಗಿದಾನಲ್ಲಾ ತೆಕ್ಕಿಬಿದ್ದಾನ ಗಡಾ
ಇನ್ಸ್‌ಸ್ಪೆಕ್ಟರ ಬಾಳ ಪುಂಡಾ ಏನ ಹೇಳಲಿ ಅವನ ಭಂಡಾ ಬಿಡಲಿಲ್ಲಾ
ಕೊಯ್ಯತಿದ್ದ ಲಕ್ಷಣನ ಶಿರಾ | ಅಳಿಯಾಗ ಒದರಿದ ಪೂರಾ
ನರಸ್ಯಾ ಬಂದಾ ಕೇಳಿ ಸ್ವರಾ ತತ್‌ಕಾಲಾ ||
ಏರು || ಮಾಡಿದ ಮೋಸಾ ಕೋದಾನೋ ನರಸ್ಯಾ ಇನ್ಸ್‌ಪೆಕ್ಟರ್‌ನ ಶಿರಾ
ಮುಧೋಳದ ಅಗಸಿಗೆ ಕಟ್ಯಾರೋ | ಆಗ ಇಬ್ಬರು ಹೋಗಿ ಶಿರಾ
ಇಂಗ್ರೇಜಿ ಸರಕಾರಕ ಹತ್ತಿತೋ ಬೆಂಕಿ | ಕೊಂದ ತರಬೇಕ ಇವರನ ಹುಡುಕಿ ತತ್ಕಾಲಾ
ಅಲ್ಲಲ್ಲಿಗೆ ಪೋಲಿಸರಾ ಊರಿಗೆ ಐದಾರಾ | ಸಂಗತಿಗೆ ಗೋಲಿಬಾರ ಇದ್ದಾವಲ್ಲಾ || ೫ ||

ಬಿಜಾಪುರ ಜಿಲ್ಲಾದೊಳಗ ಹ್ವಾದಾರೋ ಸರ್ವರಾಗ |
ಹೆರಕಲ್ಲ ಊರಾಗ ಹ್ವಾದಾರಲ್ಲಾ ||
ತುಮ್ಮರಮಟ್ಟಿ ಗುಡ್ಡದೊಳು ಗಟ್ಟಿ ಲಕ್ಷ್ಮಣ ಇದ್ದಾನಲ್ಲಾ
ಜಾತಿಲೆ ಕುರುಬರ ಹತ್ತು ಹನ್ನೆರಡು ವರ್ಷದ ಬೋರಾ
ರಾಯಾ ಅವನ ಹೆಸರು ಕೂಡ್ಯಾನಲ್ಲಾ | ಮೆರ್ಬಾನ ಪೋಲೀಸ ಸಾಯೇಬಾ
ಬಾದ್ದೂರಾ ಸುದ್ದಿಕೇಳಿ ಮೊದಲಾ | ಅಲ್ಲಿಗೆ ಪೋಲಿಸರಾ ಹಾಕ್ಯಾರೋ ಸುತ್ತಗೇರಾ
ನರಸ್ಯಾಗ ಇಟ್ಟ ನೆದರಾ ಮಾಡ್ಯಾರೋ ಪೈರಾ
ಮುಂಗೈಗೆ ಬಡದೀತೋ ಪೂರಾ ಓಡ್ಯಾರಲ್ಲಾ || ೬ ||

ಇ|| ಅಲ್ಲಿಂದ ಹ್ವಾದಾರೋ ಓಡಿ ಲಕ್ಷಣ ಮಾಂವಾ ಸರ್ವರು ಕೂಡಿ
ತುಮ್ಮರಮಟ್ಟಿ ಊರ ಕಡೆ ಬಂದಾರಲ್ಲಾ | ಅಲ್ಲಿಯ ಊರಗೌಡ
ಕಜ್ಜೂರ ಹಣ್ಣ ತರಸ್ಯಾನೋ ಗಡಾ | ಎರಡು ಮೂರು ಅಂಡಗಿ ತಿನ್ನಾಕ ಸಾಲಲಿಲ್ಲಾ
ಏರು || ಎಡಹಳ್ಳಿ ಊರಾಗ ಗುಜ್ಜರ ಸಾವಕಾರ ಇದ್ದ ಬಾಳಮೇಲಾ

ಅಲ್ಲಿಗೆ ಹೋಗಿ ದರೂಡಿ ಮಾಡ್ಯಾನ ಲಕ್ಷ್ಮಣನ ಜನರೆಲ್ಲಾ
ಎರಡು ಮೂರು ತಾಸು ಇರೂತ ಹೊತ್ತು ದರೂಡಿ ಮಾಡಿ ಲಕ್ಷ್ಮಣ ನಿಂತ ಭಯವಿಲ್ಲಾ
ಪೋಲೀಸ ಸಾಹೇಬರ ಸಿಟ್ಟವಗ ಭರಪೂರ ಬೆನ್ಹತ್ತಿ ತಿರಿವ್ಯಾರ ಅವಗ ಸಿಗಲಿಲ್ಲಾ || ೭ ||

ಇ|| ಮೊಗಲಾವಿ ಊರೊಳಗ ಹ್ವಾದಾರೋ ಸರ್ವರಾಗ ಚೈನಿಲ್ಲಾ ಮನದಾಗ ಸವಡಿಲ್ಲಾ
ಪೋಲೀಸ ಸಾಹೇಬರ ತಪಾಸು ಮಾಡ್ಯಾರಾಗ ಶಾಪೂರ ಎಂಬುದು ಊರಾ ಕೇಳ್ಯಾರಲ್ಲಾ
ಏರು || ಬಾವಾನ ವೇಷ ಸಿಪಾಯಿ ಖಾಸ ಹಾಕಿ ಹ್ವಾದಾರಲ್ಲಾ
ತಪಾಸು ಮಾಡಿ ಬಂದಾನೋ ಓಡಿ ಹೇಳ್ಯಾನೋ ತತ್ಕಾಲಾ
ಪೋಲೀಸ ಸಾಹೇಬ ಮೋಟಾರ ಹತ್ತಿ ಅಲ್ಲಿಗೆ ಬಂದು ಮಾಡ್ಯಾನ ಯುಕ್ತಿ
ಪೋಲೀಸ ಜನರಾ ಮನಿಸುತ್ತ ಹಾಕಿ ಗೇರಾ ಮಾಡ್ಯಾರೋ ಅವರಿಗೆ ಪೈರಾ ಜನರೆಲ್ಲಾ || ೮ ||

ಇ|| ಬಸ್ಯಾ ಎಂಬುವ ಸೂರಾ ಪೋಲೀಸರ ಮ್ಯಾಲೆ ಪೈರಾ
ಮಾಡ್ಯಾನೋ ಎರಡು ಬಾರೆ ಬಿಡಲಿಲ್ಲಾ | ಶೂರ ಮನ್ನಾ ಸಾಹೇಬರಾ
ಬಸ್ಯಾಗ ಇಟ್ಟ ನೆದರಾ | ಮಾಡ್ಯಾರೋ ಒಬ್ಬಗ ಪೈರಾ ಸತ್ತ ಬಿದ್ದಾನಲ್ಲಾ
ಏರು || ಪೋಲೀಸ ಜನರಾ ಗೋಲಿಯಬಾರಾ | ಅಳತೇನು ಇದ್ದಿಲ್ಲಾ
ಅದರಾಗ ತಪ್ಪಿಸಿ ಹ್ವಾದಾನೋ ಓಡಿ ಲಕ್ಷ್ಮಣ ಸಿಗಲಿಲ್ಲಾ
ಪೋಲೀಸ ಜನರಾ ಹತ್ಯಾರೋ ಬೆನ್ನಾ | ಒಂಬತ್ತು ದಿವಸ ಹೊಟ್ಟೆಗಿಲ್ರಿ ಅಸನಾ
ತಿನಕೊಂತ ಗಿಡದ ತಪ್ಪಲಾ ಇಲ್ಲಿಗೆ ಬಂದಾರಲ್ಲಾ | ಹೊಟ್ಟೆಗೆ ಅನ್ನವಿಲ್ಲಾ ಶಿವಾಬಲ್ಲಾ ||೯||

ಇ|| ಹ್ವಾದಾರೋ ಐವರು ಕೂಡಿ ಮಾಡ್ಯಾರ ಹುಲ್ಯಾಳ ದರೂಡಿ |
ತಗ್ಗಿಯ ಗುಡ್ಡದ ಕಡಿ ಬಂದಾರಲ್ಲಾ | ಅಲ್ಲಿಯ ಜನರ ನಂಬಿಗಿ ಬಹಳ ಪೂರಾ |
ಯಮನ್ಯಾ ಎಂಬ ವಾಲಿಕಾರ ಯಿದ್ದಾನಲ್ಲಾ
ಏರು || ನಾಯಿಕ ವಾಲಿಕಾರ ಇಬ್ಬರು ಕೂಡಿ ಬ್ಯಾಟಿ ಕೊಯ್ದಾರಲ್ಲಾ
ಸೋಮವಾರ ದಿವಸ ಅಮಾಸಿ ಅಡಗಿ ಮಾಡಿಸಿ ಊಟಕ್ಕ ಹೇಳ್ಯಾರಲ್ಲಾ
ಬಂದ ಊಟಕ್ಕ ಕುಂತಾರಲ್ಲಾ ಆರೇಳು ತಾಸು ರಾತ್ರಿ ಅಮಲಾ | ಮೊದಲಿಗೆ
ವಾಲಿಕಾರ ಮಾಡ್ಯಾನೋ ಗೋಲಿಬಾರಾ | ಕಾಲಿಗೆ ಬಡದೀತೋ ಪೂರಾ ಓಡ್ಯಾನಲ್ಲಾ || ೧೦ ||

ಇ|| ಬಿಜಾಪುರ ಪೋಲಿಸರಾ ಬೀಳಗಿಯಲ್ಲಿ ಇರುವರಾ
ಇನ್ಸ್‌ಪೆಕ್ಟರ್ ಫೌಜದಾರ ಬಂದಾರಲ್ಲ | ಗುಪ್ರೀಲೆ ಫೌಜದಾರ ಪೋಲಿಸರಾ
ಲಕ್ಷಣ ಅಂತಾ ಹಚ್ಚಿ ನೆದರಾ | ಮಾಡ್ಯಾರೋ ಒಬ್ಬಗ ಪೈರಾ ಸತ್ತಾನಲ್ಲಾ
ಮಂಗಳವಾರ ದಿನಾ ತಂದಾರೋ ಹೆಣಾ | ಬೀಳಗಿಯ ಊರಾ
ಹಸನ ಡೋಂಗ್ರಿ ದರಗಾದ ಉರಸಿಗೆ ಕೂಡತಿದ್ರೋ ಬಹುಜನಾ
ಸುತ್ತಿಲೆ ಹತ್ತು ಹರದಾರಿ ಜನಾ | ಬಂದು ನೋಡ್ಯಾರೋ ಲಕ್ಷ್ಮಣ ಹೆಣಾ
ಮುಂಬೈಗೆ ಮಾಡ್ಯಾರೋ ತಾರಾ | ಲಕ್ಷ್ಮಣನ ಕೊಂದೇವರಿ ಪೂರಾ
ಪೋಲೀಸ ಸಾಹೇಬರ ನೋಡ್ಯಾರಲ್ಲಾ || ೧೧ ||

ಲಕ್ಷ್ಮಣನ ಪೋಟೋ ತಗದಾರೋ ಪೆಂಟಾರ | ಸುಣಗದ ಕುಲಕರ್ಣಿ ಪೂರಾ
ಅಲ್ಲಿಯ ಡಾಕ್ಟರ ಮಾಡ್ಯಾರೋ ವಿಚಾರಾ | ಇನ್‌ಸ್ಪೆಕ್ಟರ ನಿಂತು ಇದರ ಕೋದಾರಲ್ಲಾ
ಏರು || ಗೋಲಿಯ ಬಾರಾ ಮೈಯಲ್ಲಿ ಪೂರಾ | ಬಡದದ್ದು ಅಳತಿಲ್ಲಾ
ಗೋಲಿಯ ಚೂರಾ ತಗದು ಡಾಕ್ಟರಾ ಮಣ್ಣು ಮಾಡ್ಯಾರಲ್ಲಾ
ನೋಡಿದ ಜನರು ಮರಗುವರೋ ಮರಮರ | ಎಷ್ಟಂತ ಹೇಳಲಿ ದುಃಖಸಾಗರ
ಸೋಮವಾರ ದಿವಸ ತಾರೀಖ ಪಂಚವೀಸ | ಏಳನೇ ತಿಂಗಳು ಖಾಸ ಇತ್ತಲ್ಲಾ || ೧೨ ||

ವಾಲಿಕಾರನ ಫಜೂತಿ ಇನ್ನು ಮುಂದೆ ಆಗೂದೈತಿ
ಅಳಿಯಾಗ ಸಿಟ್ಟು ತುಂಬೇತಿ ಬಿಡೂದಿಲ್ಲಾ | ಅಳಿಯಾ ಅದಾನ ಸೂರಾ
ಸಿಕ್ಕರ ವಾಲಿಕಾರ ಮಾಡುವ ಚೂರ ಚೂರ ಬಿಡೂದಿಲ್ಲಾ
ಏರು || ಸಂದ ಬಾಳ ಐತಿ ಮುಂದ ಉಳದೈತಿ ಕೇಳರಿ ದೈವೆಲ್ಲಾ
ಇಂಗ್ರೇಜಿ ಸರಕಾರ ಕೈಯಾಗ ಯಾರೂ ಪಾರಾಗುವರಿಲ್ಲಾ
ಸಿಗಲಿದ್ದರೆ ಪಿತೂರಿ ಮಾಡಿ ಹಿಡಿದು ಮಾಡುವರೊ | ತರವಲ್ಲ ಕೆಟ್ಟಕಾರಬಾರಾ
ತಪ್ಪಾದರೆ ನಂದು ಮಾಪ ಮಾಡರಿ ಇಂದ ಹತ್ತು ದೈವಕ ಬಂದ ನಿರ್ವಾಯಿಲ್ಲಾ || ೧೩ ||

ಇ|| ಕೆರವೂರ ದೇಶಕ್ಕ ಶಾರಾ ಇರುವುದು ಕಡಕ | ಕವಿ ಒಳ್ಳೆ ನಾಜೂಕ ಮಾಡುವರಲ್ಲಾ
ಚೆಣಗಿ ಪೀರನ ಬೆಳಕ ಸಾರುವುದು ಲೋಕಕ್ಕೆ | ಕೇಳರಿ ಇನ್ನು ತನಕ ಭೂಮಿ ಮೇಲಾ
ಏರು || ಹಿರೇಲಾಲು ವೈರಿಗೆ ಹೇಳ್ಯಾರೋ ವಾದ ತರವಲ್ಲಾ
ಕವಿ ಮಾಡುವುದು ಪ್ರಾಸ ಕೂಡಿಸೂದು ನಿನಗ ಬರೂದಿಲ್ಲಾ
ರಾಜಹೈದರನ ಹಾಡಿಕಿ ನೋಡಿವೈರಿ ನಿಂತಾನೋ ಕರಗಳ ಜೋಡಿ
ಹೊಸಪ್ಯಾಟೆ ಹುಡುಗರ ಕಲ್ಗಿ ಮ್ಯಾಳದವರ ವೈರಿಗೆ ತೋಡಿ ಪೂರಾಕೊಡುವರಲ್ಲಾ || ೧೪ ||

*** * ***

**೨. ನೆಹರೂರ ಮರಣದ ಪದಾ**

ನೆಹರು ಸರಕಾರಕ ಬಂದು ಒದಗಿತು ಮರಣಾ
ಮುಳುಗಿ ಹೋದೀತು ನಮ್ಮ ಹಿಂದುಸ್ತಾನದ ರತನಾ || ಪಲ್ಲವಿ ||

ಏರು || ಪಾಲನೆ ಮಾಡಿದ್ರೊ ಗಾಂಧಿ ಮಾತ್ಮನ ವಚನಾ |
ಹೂಡ್ಯಾರ ಸತ್ಯಾಗ್ರವನಾ ನಿತ್ಯಧರಿಸ್ಯಾರ ಸತ್ಯ ಸ್ವಾತಂತ್ರ್ಯವನಾ |
ದೂಡಿ ಕಳಿಸ್ಯಾರೋ ಹಿಡಿದು ಇಂಗ್ರೇಜರನಾ || ೧ ||

ಇಳು || ಬಡವರ ಮ್ಯಾಲೆ ಬಾಳ ಅಂತಃಕರಣಾ
ಕೈಯ ಹಿಡಿದಿದ್ರೋ ರಾಷ್ಟ್ರದ ರೈತರನಾ
ಏರು | ಸಾಲಿ ಕಲಿಯುವ ಸಣ್ಣ ಸಣ್ಣ ಮಕ್ಕಳನಾ |
ಬೋರ್ಡಿಂಗ ಊಟದ ಸೌಕರ್ಯವನಾ

ಗೌರ್ನಮೆಂಟದಿಂದ ಉಡುಗರಿ ಚೊಣ್ಣಾ |
ಪಾಪಿ ಪುಸ್ತಕ ಮಾಡತಿದ್ರೋ ದಾನಾ || ೨ ||

ಇಳು || ಮನಸಿನ್ಯಾಗ ಬಾಳ ಇತ್ತೊ ಕಲ್ಪನಾ
ಮುಂದ ತರಬೇಕಂತ ನಮ್ಮ ಹಿಂದುಸ್ತಾನಾ
ಏರು || ಕೃಷ್ಣಾ ಮಲಪ್ರಭಾ ತುಂಗಭದ್ರಾ ನದಿಯನಾ |
ನೀರಿನ ನೆಲಿಯೋಜನಾ ಮೂರು ನದಿ ನೀರು ಕೂಡಿಸಿ
ಬಿಡಕಾವಲಿನಾ ಹಿಂದುಸ್ತಾನಕೆಲ್ಲಾ ತುಂಬಾ ನೀರಾವರಿನಾ || ೩ ||

ಇ|| ಕೈಮೀರಿ ಹೋತೋ ನೆಹರು ಕಲ್ಪನಾ |
ಹಾರ್ಟ ಎಂಬ ರೋಗ ಪಂಡಿತರಿಗೆ ಪೂರ್ಣಾ
ಏರು || ಅರವತ್ತು ಮಂದಿ ಕೂಡ್ಯಾರ ಡಾಕ್ಟರ ಜನಾ |
ಕೊಟ್ಟಾರ ಇಂಜೆಕ್ಷೆನ್ನಾ ಮಾಡ್ಯಾರ ಬಾಳ ಉಪಚರಣಾ |
ಉಳಿಯಲಿಲ್ಲೊ ಪಂಡಿತ ನೆಹರು ಬಿಟ್ಟಾರ ಪ್ರಾಣಾ || ೪ ||

ಇ|| ತಾರೀಖ ಇಪ್ಪತ್ತೇಳು ತಿಂಗಳೈದನೇ ದಿನಾ |
ದೇಶ ಪಂಡಿತರು ಹೊಂದಿದಾರೊ ಮರಣಾ
ಏರು || ನಾಲ್ಕು ದಿಕ್ಕಿಗೆ ಸುದ್ದಿ ಕಳಿಸ್ಯಾರ ಪರ ಊರವರಿಗೆ ಕರುಣಾ
ಹತ್ತು ಮಿನೀಟಿಗೆ ಬಂದು ಮುಟ್ಟಿತೋ ಫೋನಾ | ವ್ಯಾಪಾರುದ್ರಿ ಬಂದ
ಮಾಡ್ಯಾರೋ ಹಳ್ಳಿ ಶಾರದ ಜನಾ | ಬೋರ್‍ಯಾಡಿ ಅಳತಾರ ಸುರಿಸಿ ಕಣ್ಣೀರನಾ || ೫ ||

ಇ|| ಅತ್ತಹ್ವಾದಾವರಿ ಎಷ್ಟೋ ಮಂದಿ ಕಣ್ಣಾ
ಭಾರತ ದೇಶಕ ಹರಿದು ಬಿದ್ದಿತು ಗಗನಾ
ಏರು || ಸೊಲ್ಲಾಪುರದಾಗ ಒಬ್ಬ ಶ್ರೀಮಂತ ಸಾವುಕಾರನಾ |
ಕೊಟ್ಟಾರ ತಮ್ಮ ಕಣ್ಣಾ ನೆಹರೂರ ಸಲುವಾಗಿ ಆತೋ ಕೋಲಾಹಲನಾ
ಇಂದಿರಾಗಾಂಧಿಯವರ ದುಃಖ ಹೇಳಲೇನಾ || ೬ ||

ಇ|| ಬಂದ ಕೂಡ್ಯಾರೋ ಪರರಾಷ್ಟ್ರದ ಜನಾ
ಸಿಂಗಾರ ಮಾಡ್ಯಾರ ಹೂವಿನ ಪಲ್ಲಕ್ಕಿನಾ
ಏರು || ನೆಹರೂನ ಮೊಮ್ಮಗ ಸಂಜೀವರ ಕರುಣಾ |
ಹಿಡಿಸ್ಯಾರ ಬೆಂಕಿಯನಾ ಯಮುನಾನದಿ ದಂಡಿಮ್ಯಾಲೆ ಮಾಡ್ಯಾರೊ ದಹನಾ |
ಮೂವತ್ತೈದು ಲಕ್ಷ ಕೂಡಿತ್ತ ಜನಾ || ೭ ||

ಇ|| ತಾರೀಝು ಇಪ್ಪತ್ತೆಂಟು ತಿಂಗಳೈದನೆ ದಿನಾ |
ಹತ್ತೊಂಬತ್ತ ನೂರಾ ಅರವತ್ನಾಲನೇ ದಿನಾ
ಏರು || ಶುಭಮುಹೂರ್ತ ಗುರುವಾರ ದಿನಾ |
ಹೊಂದಿದಾರೋ ಸ್ವರ್ಗವನಾ ಪರರಾಷ್ಟ್ರದ ಎಷ್ಟೋ ಮಂತ್ರಿವರನಾ |
ಸುರಸ್ಯಾರೋ ಕಣ್ಣಿರನಾ || ೮ ||

ಇ|| ಮುಗಿದಿಲ್ಲರಿ ನೆಹರೂರ ಕಥನಾ |
ಸಂದ ಮುಗಿಸೇನಿ ಸುರಿಸಿ ಕಣ್ಣೀರನಾ
ಏರು || ಹಿಂದುಸ್ತಾನದಾಗ ಚಂದ ಮಂದಿರಸ್ತಾನಾ |
ಕೊಣ್ಣೂರ ಕೂನಾ ದೇಶಭಕ್ತರು ಮಾಡಿದ ಕವನಾ |
ನಿತ್ಯ ಮಾಡೂರೋ ನೆಹರೂರ ಪ್ರಾರ್ಥನಾ || ೯ ||

* * *

**೩. ದೊಡ್ಡಮೇಟಿ ಅಂದಾನಪ್ಪನವರ ಪದಾ**

ರೋಣ ತಾಲೂಕ ರತ್ನವೊಂದ ಜಕ್ಕಲಿ ಗ್ರಾಮದ ಜ್ಯೋತಿವೊಂದ
ದೊಡ್ಡ ಮೇಟಿ ಹೆಸರಿಂದ ಕಳಕೊಂಡ ಜೊತೆಯಿಂದ
ದಾರಿಯ ತೋರುವರ್ಯಾರು ಇನ್ನೂ ಮುಂದಾ || ಪಲ್ಲವಿ ||

ಇ|| ಊರಿಗೆ ವತನದಾರ ದೊಡ್ಡಮೇಟಿ ಮನೆತನದವರಾ
ಅಚ್ಚುಮೆಚ್ಚಿನ ಮುದುಕರವರೋ ಅಂದಾನಪ್ಪವನರೋ
ಏ|| ದೊಡ್ಡಮೇಟಿ ಮನೆತನದವರೋ ವೀರ ಒಕ್ಕಲಿಗರೋ || ೧ ||

ಇ|| ರಡ್ಡಿಯ ಕುಲದವರೋ ಊರಿಗೆ ಆದಾರೋ
ಜ್ಞಾನಪ್ಪನೆಂಬ ಹೆಸರಿನವರೋ ಶ್ರೀಮಂತರೋ
ಏರು || ಸುರಕೋಡ ಪುರದವರೋ ಅರಹುಣಿಸಿ ಮನೆತನದವರೋ || ೨ ||

ಇ|| ಬಸಮ್ಮನೆಂಬವರೋ ಸುಮಂಗಲ ಸದ್ಗುಣಿಯರೋ
ಏರು || ಜ್ಞಾನಪ್ಪನವರ ಸಹಧರ್ಮಿಣಿಯಾದರೋ
ಜ್ಞಾನದಂಪತಿಗಳ ಉದರದಿ ಜನಿಸಿದರೋ || ೩ ||

ಇ|| ಶಿವನಾಗಪ್ಪ ಅಂದಾನಪ್ಪನವರ ಅಕ್ಕರದಿ ಅಣ್ಣ ತಮ್ಮರೋ
ಸಕ್ಕರಿಹಾಲು ಬೆರಸಿದಂಗ ರಾಜಪುತ್ರರೋ ವಿಧಿ ಜಾಲಕ ಜಾರಿದರೋ
ಏರು | ನಮ್ಮ ಜ್ಞಾನಪ್ಪನವರ ಚೊಕ್ಕ ಒಕ್ಕಲಿಗರ ಮರಣವ ಗೈದರ
ಹಸುಮಕ್ಕಳ ಶಿಶುಮೋರೆ ನೋಡಿ ಬಾಳಿದರ ಬಸಮ್ಮನವರ || ೪ ||

ಇ|| ಮರಣ ಮಾಯದೊಳು ಸಿಲುಕಿದ ಶಿವನಾಗಪ್ಪನವರು
ತಂದೆಯ ಕೂಡಿದರೋ ಜೀವನ ಪಥ ಮುಗಿಸಿದರೋ
ತಮ್ಮನ ಮರೆತರೋ ಶಿವನಲ್ಲಿ ಸೇರಿದರೊ || ೫ ||

ಇ|| ಕೋಟ್ಯಾದೀಶ ವೀರರಾ ದೊಡ್ಡಮೇಟಿ ಅಂದಾನಪ್ಪನವರಾ
ಅಣ್ಣನ ಕಳಕೊಂಡರಾ ದುಃಖದಿ ಮುಳುಗಿದರಾ
ಏರು || ತಾಯಿಗಿಯಾದರ ಏಕೈಕ ಕುವರಾ || ೬ ||

ಇ|| ಸಾಲಿಯ ಕಲಿತರಾ ಸುರಕೋಡ ಪುರದೊಳವರಾ
ಕೋಟಿ ವಿದ್ಯೆಯಲಿ ಮೇಟಿ ವಿದ್ಯೆ ಮೇಲೆಂದರಿತರೋ
ಏರು|| ನೇಗಿಲಯೋಗಿ ಆದರೋ ಭೂಮಿಸೇವೆ ಮಾಡಿದರೋ || ೭ ||

ಇ|| ರಾಷ್ಟ್ರದ ಪಿತರವರ ಗಾಂಧಿಯ ಮಹಾತ್ಮರ
ಬೋಧೆಯ ಪಡೆದರಾ ಅನುಯಾಯಿ ಆದರಾ
ಏರು|| ದೇಶದ ಹಿತದವರಾ ಶಿಷ್ಯತ್ವ ಪಡೆದವರಾ || ೮ ||

ಇ|| ಪರದಾಸ್ಯದ ಪಕ್ಕದಲ್ಲಿ ಪವಡಿಸಿದ ಭಾರತಾಂಬೆ
ಪರದಾಸ್ಯೆ ಪರಿಹರಿಸಲು ಪಣವ ತೊಟ್ಟಾರೋ
ಏರು || ನಮ್ಮ ವೀರ ದೊಡ್ಡಮೇಟಿಯವರೋ ಅಂದಾನಪ್ಪನವರೋ || ೯ ||

ಇ|| ಖಾದೀಯ ತೊಟ್ಟಾರು ಖಾದೀಯ ಉಟ್ಟಾರು
ಕಾಂಗ್ರೆಸ್ಸಿನ ಹಾದಿಯ ಹಿಡಿದಾರ ದೊಡ್ಡಮೇಟಿಯವರ
ಏರು|| ದೇಶಕ್ಕಾಗಿ ದೇಹಕ ಸವೆಸಿದರೋ || ೧೦ ||

ಇ|| ಚಳುವಳಿ ಮಾಡಿದರ ಹಾವಳಿ ಎಬಿಸಿದರ
ಬ್ರಿಟೀಶರಗೂಡ ಬಡಿದಾಡಿದರ ಸೆರೆಮನೆಗ್ಹೋದರ
ಏರು || ಸ್ವರಾಜ್ಯ ಗಳಿಸಿದರ ನಮ್ಮ ವೀರರೂ || ೧೧ ||

ಗಾಂಧೀಯ ತತ್ವದಂತೆ ಬಡವರಿಗೆ ದಾನದಂತೆ
ಸ್ವಂತ ಭೂಮಿ ಹಂಚಿದರ ದೊಡ್ಡಮೇಟಿಯವರ
ಏರು|| ಅವರೇ ನಮ್ಮ ದೇಶ ಭಕ್ತರ ಅಂದಾನಪ್ಪರವರ || ೧೨ ||

ಇ|| ಹಳ್ಳಿಗೆ ಭಾಗ್ಯದಾತರ ಬಡವರ ಅನ್ನದಾತರ
ಅಂದಾನಪ್ಪನವರ ನಮ್ಮಹೆತ್ತ ತಂದೆಯವರ
ಏರು|| ಕರ್ನಾಟಕದ ಹುಲಿ ಎನಿಸಿದರ ದೊಡ್ಡಮೇಟಿವೀರರಾ || ೧೩ ||

ಇ|| ಹಳ್ಳಿಯ ಸೇವಕರ ಅಹಿಂಸಾ ಪಾಲಕರ
ನಮ್ಮ ನಾಯಕರ ದೊಡ್ಡಮೇಟಿ ವೀರರಾ
ಏರು || ಸತ್ಯ ಸೇವಕರಾ ನಿಸ್ವಾರ್ಥ ಭಕ್ತರಾ || ೧೪ ||

ಇ|| ಕಾಯ್ದೆ ಭಂಗ ಚಳುವಳ್ಯಾಗ ಹಿಡಿದ ವ್ಯಾಳೇದಾಗ
ಹೆತ್ತತಾಯಿ ಬಸಮ್ಮನಾಗ ಹಲುಬಿದಳೋ ಮನಿಯಾಗ
ಏರು|| ತಿರುಗಿ ಮುಖವ ತೋರೋ ಕಂದ ನೀನು ಬೇಗ || ೧೫ ||

ಇ|| ವತ್ತರದಿ ಪತ್ರ ಬರದಾರೋ ಬಸಮ್ಮನವರ
ಚಂದಿರ ಬೆಳಕನು ಬೀರೋ ಕಂದ ಮಾರುತನೆ ಬಾರೋ
ಏರು || ಕಂದ ಮುಖವ ತೋರೋ ತಾಯಿ ಮಡಿಲು ಮರುಗುತಿದೆ ಬಾರೋ || ೧೬ ||

ಇ|| ಪತ್ತರ ನೋಡಿದಾರೋ ಉತ್ತರ ಬರಿದಾರೋ
ಊರಿನ ಜನರೋ ನಿನ್ನಯ ಕುವರರೋ
ಏರು || ಒಂದೇ ತಾಯಿ ಮಕ್ಕಳೋ ತಾಯಿಗೆ ತಿಳಿಸಿದರೋ || ೧೭ ||

ಇ|| ಹತ್ತರದಿ ಗಾಂಧಿಯವರೋ ಪತ್ತರ ನೋಡಿದಾರೋ
ಮುಗ್ಧ ಮುದುಕರೋ ಬುದ್ಧಿಯ ಹೇಳಿದಾರೋ
ಏರು || ತಾಯಿ ಕರುಳು ಊರಿಗೆ ಹೋಗೆಂದಾರೋ || ೧೮ ||

ಇ|| ಮೇಟಿಯ ವೀರರಾ ಕೋಟ್ಯಾಧೀಶ ವೀರರಾ
ನಿನಗ್ಯಾಕೋ ಧೀರಾ ಇಂಥ ದುರ್ದರಾ
ಏರು || ನಿನ್ನ ತಾಯಿಯ ನೆಚ್ಚಿನ ಕುವರಾ || ೧೯ ||

ಇ|| ದೊಡ್ಡ ಮೇಟಿ ಕೇಳಿದರ ಕಂಠತುಂಬಿ ತಂದಾರೋ
ದೇಶದ ಜನರೋ ನನ್ನ ಅಣ್ಣ ತಮ್ಮರೋ
ಏರು || ನಾವೆಲ್ಲ ಒಂದೇ ತಾಯಿ ಮಕ್ಕಳು ಎಂದರೋ || ೨೦ ||

ಇ|| ಮಹಾತ್ಮಾ ಗಾಂಧಿಯವರೋ ವೀರನ್ನ ನೋಡಿದರೋ
ನುಡಿಯನಾಲಿಸಿದರೋ ಅಪ್ಪಿ ಮುದ್ದಾಡಿದರೋ
ಏರು || ರಾಜ್ಯ ತಾಂತ್ರಿಕ ನೆನಸಿದರೋ ರಾಜ್ಯವನ್ನಾಳಿದರೋ || ೨೧ ||
ಇ|| ಮೈಸೂರು ರಾಜ್ಯದ ಮಂತ್ರಿಯಾದರೋ
ಕೆಚ್ಚದೆ ವೀರರೋ ದೊಡ್ಡಮೇಟಿ ಕುವರರೋ
ಏರು || ದೇಶದ ಹಿತಕ ದೇಹದ ಸವೆಸಿದರ ||೨೨||

ಇ|| ದೇಹ ದುರ್ಬಲ ಅರಿತ ಮುದುಕ ರೋಣ ತಾಲೂಕ ಮೀಟಿಂಗಕ
ಸಂಸ್ಥೆ ಕಾಂಗ್ರೆಸ್ಸಿಗೆ ಸೇವೆ ಸಲ್ಲಿಸುದಕ
ಏರು || ತರುಣರನ ಹುಡುಕುದಕ ಹೊಂಟಾರೋ ಮುದಕಾ ||೨೩||

ಇ|| ವಿಷಗಳಿಗೆ  ಒದಗೀತ ಹುಬ್ಬಳ್ಳಿಯ ಸನೇಕ
ಕಾರ ಅಪಘಾತ ಸಂಜೆಯ ಸಮಯಕ
ಧಾರವಾಡ ಜಿಲ್ಲೆಯೊಳಗ ಹುಬ್ಬಳ್ಳಿ ಶಾರದಾಗ ||೨೪||

ಇ|| ಕೆ.ಎಂ.ಸಿ ಎಂಬುದು ದೊಡ್ಡ ದವಾಖಾನೆಯೊಳಗ
ಔಷದೋಪಚಾರ ಡಾಕ್ಟರ ಸಮೂಹದೊಳಗ
ಏರು | ಮೈಸೂರ ರಾಜ್ಯದ ಹಿತಕ ಕರ್ನಾಟಕ ಎಂದು ಕರೆಯಾಕ || ೨೫ ||

ಇ|| ಹಗಲಿರುಳು ಹೆಣಗಿದ ಮುದುಕ ಪ್ರಜರ ಹಿತಕ
ಜೀವ ತೆತ್ತರೋ ದೇಶದ ಹಿತಕ
ಏರು | ಫೆಬ್ರುವರಿ ಇಪ್ಪತ್ತೊಂದ ಸೋಮವಾರ ಅಂದ || ೧೬ ||

ಇ|| ರತ್ನ ಒಡೆಯಿತು ಹೊತ್ತು ಮುಳುಗಿತು
ದೊಡ್ಡಮೇಟಿ ಎಂಬ ಜ್ಯೋತಿ ಹುಬ್ಬಳ್ಳಿಯಲ್ಲಿ ನಂದೀತ
ತಾರು ಫೋನು ತಿಳಿಸೀತ ಜಗವೆಲ್ಲ ಹಬ್ಬೀತ || ೧೭ ||

ಇ|| ಹಳ್ಳಿ ಹಳ್ಳಿಯೊಳು ಕತ್ತಲಾಯಿತೋ ರೋಣ ತಾಲೂಕಿನ ಸಿರಿ ಮುಳುಗಿತೋ
ಚಿಕ್ಕ ಮಕ್ಕಳು ಅತ್ತರವರೋ ಅಜ್ಜ ನಮ್ಮನ್ನಗಲಿದರೋ
ಏರು | ದೇಶದ ಜನರೊಳಗೊಬ್ಬ ಮಯಸಾಗರಾ || ೧೮ ||

ಇ|| ಎಷ್ಟೊಂದು ಹೇಳಿದರು ತೀರದು ಅವರ ವರ್ಣನಾ
ಮುತ್ತಣನೆಂಬ ಕುವರಾ ಪದವ ಮಾಡಿ ಹೇಳಿದರಾ
ದರಗಾದೋಣಿ ಹುಡುಗೂರಾ ಹಾಡಿ ಸೇವೆ ಮಾಡುವರೋ || ೧೯ ||

* * *

**೪. ಭಾರತ ಭಾಗ್ಯವು ಹೆಚ್ಚು ಮುಂದಾಗಲಿ**

ಭಾರತದಾಗ ಮೊಹರಮದ ಹಬ್ಬಾ ಬಂತು || ಪಲ್ಲವಿ ||

ಏರು|| ಸ್ವರಾಜ್ಯದೊಳು ಹಿಂದು-ಮುಸ್ಲೀಮರೊಂದಾಗಿ | ಆಡಿದಲಾವಿ ಬಂತು
ಜಿನ್ನಾ ಗಾಂಧಿವಾದವು ಬೆಳೆದುನಿಂತು | ಹಿಂದು ಪಾಕಿಸ್ತಾನ ಇಬ್ಭಾಗವಾಯ್ತು || ೧ ||

ಇ|| ಕಂಟ್ರೋಲ ಬರಬಂದು ಹೊಟ್ಟೆಗಿಲ್ಲದಂಗಾತು | ಕಳ್ಳ ಸಂತ್ಯಾಗ ಬಿತ್ತು
ಏರು || ಒಳ್ಳೊಳ್ಳೆಯವರು ಲಂಚಕಾದಾರೋ ತುತ್ತು
ಇಷ್ಟಾದ ಮೇಲೆ ನಮಗೆ ವಿಪತ್ತು ಬಂತು || ೨ ||

ಇ|| ಹಿಂದು-ಮುಸ್ಲೀಮರೊಂದಾಗಬೇಕೆಂದು | ಗಾಂಧಿ ಮಾಡಿದ ಮಸಲತ್ತು
ಏರು || ಹಿಂದು ಮಹಾಸಭೆಗೆ ವಾಕರಕಿ ಆತು
ಹೀಂಗಾಗಿ ಗಾಂಧಿ ಆದ್ರೋ ಮರಣಕ ತುತ್ತು || ೩ ||

ಇ|| ಕಾಲ ಬದಲಾಯಿತು ಕಾಯ್ದೆ ಬದಲಾದವು | ಹಾಲು ನೀರಾದಂಗಾತು
ಏರು || ಟೆನೆನ್ಸಿಯ್ಯಾಕ್ಟು ಹೊಲ ಸಾಗುವಳಿಗೆ ಕುತ್ತು
ಹೊಲದೊಡೆಯರು ಹೊಯ್ಕೊಳ್ಳು ಹೊತ್ತು ಬಂತು || ೪ ||

ಇ || ಕನ್ನಡ ಪ್ರಾಂತ ನಿರ್ಮಾಣ ಮಾಡುವಂತ | ಕಾಲ ತಾನಾಗಿ ಬಂತು
ಏರು || ಭಾರತ ಸರಕಾರ ಭಾರವನು ಹೊತ್ತುದೆಂತು
ಭಾರತದಾಗ ಮೊಹರಮ್‌ದ ಹಬ್ಬಾ ಬಂತು || ೫ ||

ಇ|| ಇನ್ನು ಮೇಲಾದರು ಕನ್ನಡ ಪ್ರಾಂತಕ್ಕೆ | ನಿರ್ಮಾಣ ಮಾಡುವ ಸಂಪತ್ತು
ಏರು || ಭಾರತ ಸರಕಾರ ಭಾರವನು ಹೊತ್ತುದೆಂತು
ಕನ್ನಡ ರಾಜ್ಯಗೈಯಲಿ ನಿಜ ಸಂಪತ್ತು || ೬ ||

ಇ|| ಇಂದು ಕನ್ನಡ ನಾಡು ಒಂದಾಗಿ ಮೆರೆಯಲಿ | ಹರಿಯಲಿ ನಾಡ ಕುತ್ತು
ಏರು || ಕನ್ನಡ ರಾಜ್ಯ ಒಂದಾದ ದಿನ ಸಂಪತ್ತು
ಬಯಸಲಿ ಸರಕಾರ ಸಹಕಾರ ವಿಪತ್ತು || ೭ ||

ಇ|| ನಾಡ ಗಂಡಾಂತರ ನೋಡಿ ನಡಿಯಲಿ ಜನರು |
ಸ್ನೇಹ ಮಂತ್ರಿಗೆ ಪರಿಷತ್ತು ಅವರಾಡಳಿತಕ್ಕೆ ತಕ್ಕ ಬೆಂಬಲವನಿತ್ತು |
ಮುಂದವರಿಗೆ ಕೊಡಬೇಕ್ರಿ ನಿಜ ಸವಲತ್ತು || ೮ ||

ಇ|| ಅನ್ನ ಅನ್ನ ಬಟ್ಟೆ ಬಟ್ಟೆ ಎಂದು ಬಡಕೊಳ್ಳುವ | ಕಣ್ಣಿಗೆ ಕಾಣುವ ವಿಪತ್ತು
ನಮ್ಮನಾಡನು ಬಿಟ್ಟು ಹೋಗದಿರಲಿ ದೌಲತ್ತು
ಬರುವುದಕ್ಕೆ ಬೆಳಸಬೇಕರಿ ನಾಡ ಸಂಪತ್ತು || ೯ ||

ಇ|| ಮದ್ಯ ಕುಡಿಯೂದು ಬಿಟ್ಟು ಹೊಲದ ಕರಕಿಯ ನಟ್ಟು | ಇಡಬೇಕ್ರಿ ಮನಸುಗೊಟ್ಟು
ಏರು || ಟ್ರ್ಯಾಕ್ಟರ ಹೊಡೆದು ಹೊಲವ ಹಸನವ ಮಾಡಿಟ್ಟು
ಬೆಳೆಯಬೇಕರಿ ಭಾರತ ಜನ ಪಣ ತೊಟ್ಟು || ೧೦ ||

ಇ|| ಭಾರತ ಭಾಗ್ಯವು ಹೆಚ್ಚು ಮುಂದಾಗಲಿ | ಕೊರತೆ ಕಂಟ್ರೋಲ ನೀಗಲಿ
ನೀರಾವರಿ ಭೂಮಿ ಬೆಳೆದು ನಿಲ್ಲಲಿ | ಸ್ವರಾಜ್ಯದ ಧ್ವಜವೆಲ್ಲ ಕಡಿದೇಳಲಿ || ೧೧ ||

ಭಾರತದೇಳ್ಗೆಗೆ ಕಾರಣವಾದಂತ ಪಂಚವಾರ್ಷಿಕ ಯೋಜನೆ
ಏರು || ನೆಹರು ಮಂತ್ರಿಮಾಡಿದ ನವ ಘಟನೆ |
ಸ್ವರಾಜ್ಯದ ಪ್ರಗತಿಗೆ ನಿಜಸಾಧನೆ || ೧೨ ||

ಇ|| ನಲವಡಿ ಗ್ರಾಮದಿ ನವನಾಗರಿಕರೆ ಕೂಡಿ ಅಲಾವಿನಾಡಿ
ಏರು || ಹಿಂದು-ಮುಸಲ್ಮಾನರು ಒಂದುಗೂಡಿ |
ಧೀನ್ ಧೀನಂತ ನಲಿದು ಅಲಾವಿನಾಡಿ || ೧೩ ||

*** * ***

**೫. ಬಿಡರಿ ಪರದೇಶಿಯನಾ ಆಗ್ರಿ ಸುದ್ದ ಹಿಂದುಸ್ತಾನಾ**

ಕೇಳರಿ ಮೊಹರಂದ ಕಥೆಯ ವಿಸ್ತಾರಾ
ಕೋಳಿ-ಕುರಿಯ ಕುಡಿಯುತೀರಿ ನೆತ್ತರಾ
ಏರು|| ಜ್ಞಾನಿ ಪೈಗಂಬರ ಆಡಿದ ಗಂಭೀರಾ

ತಿಳಿದು  ನಡಿಯಬೇಕ್ರಿ ಸತ್ಯ ಶಾಸ್ತ್ರ ವಿಚಾರಾ
ನಡಿದಾರು ಶರಣರು ಹಿಡಿದು ಸತ್ಯವನಾ || ೧ ||

ಬಡಿದುಕೊಳ್ಳಬ್ಯಾಡರಿ ನಿಮ್ಮ ಪಾರತಂತ್ರವನಾ
ಏರು || ಬಿಡರಿ ಪರದೇಶಿಯನಾ ಆಗ್ರಿ ಸುದ್ದಿ ಹಿಂದುಸ್ತಾನಾ
ಬಡಿದಂತ ಬೂತ ನಮಗೆ ಪರರ ಬಂಧನಾ || ೨ ||

ಇ|| ಚಾ ಪರದೇಶದಿಂದ ಬಂದಂತ ಪಾನಾ
ಏರು || ಕುಡಿದು ಕಳೆದುಕೊಳ್ಳಬ್ಯಾಡರಿ ನಿಮ್ಮ ಗಂಡಸ್ತಾನಾ
ಚೌ ಕುಡಿದು ರಕ್ತಹೀನಾ ನಮ್ಮ ಹಿಂದು-ಮುಸಲ್ಮಾನಾ
ಮನಿಬಿಟ್ಟು ಹೊರಗ ಮಲಗತಾರೋ ಅಪಮಾನಾ || ೩ ||

ಇ ||  ಪರದೇಶದಿಂದ ಬಂದ ಕಾಜೀನ ಸ್ವಾಮಾನಾ
ಏರು || ತರಬ್ಯಾಡರಿ ಸೋಪು ಪೌಡರು ಯಸಲೈನ ಸನ್‌ಲಾಯಿಟನಾ
ಬಿಡರಿ ಪರದೇಶಿಯನ್ನಾ ಆಗ್ರಿ ಸುದ್ದ ಹಿಂದುಸ್ತಾನಾ
ಇಲ್ಲೇನ್ರಿ ನಿಮಗೆ ದೇಶದ ಅಭಿಮಾನಾ || ೪ ||

ಇ|| ಉಡುಪಿ ಬ್ರಾಹ್ಮಣರೆಂಬ ತುಡುಗರನೋಡಸರಿ
ಏರು || ಹರಕು ಲುಂಗಿ ರಗಟೆಗೆ ಎಣ್ಣಿ ಉಗ್ಗಿ ಸುಡಿರಿ
ಪಾನಪಟ್ಟಿ ಸಿಗರೇಟು ಸೇದುವವನ ಮುಕಳಾಗ ಗೂಟಾ
ಹಿಡಿದು ಜಡಿದು ನಡು ಊರಾಗ ನಿಲ್ಲಸರಿ || ೫ ||

ಇ|| ಕೊಡಬೇಕರಿ ನಾವು ನಮ್ಮ ದೇಶಕ್ಕಾಗಿ ಪ್ರಾಣಾ
ಏರು || ಬಿಡಬೇಕರಿ ಹೆಂಡತಿ ಮಕ್ಕಳಿಗೆ ತಿಲತರ್ಪಣಾ
ಜವಾಹಿರ ಸುಭಾಸರನ ಗಾಂಧಿ ಮಹಾತ್ಮರ ವಚನಾ
ಪಾಲಿಸಿ ಪಡೆಯಿರಿ ಸ್ವಾತಂತ್ರ್ಯವನಾ || ೬ ||

ಇ|| ಅಡ್ಡಗೂಳಿ ಬಂದು ನಮ್ಮ ಹೊಲವ ಮೆಯ್ಯೂದನ
ಏರು || ಕುದ್ದರಾಗಿ ನೋಡಬ್ಯಾಡ್ರಿ ಎಂಥ ದಿನಮಾನಾ
ತೊಡ್ಡ ಬಡದ ಹೋರಿಯಂತೆ ಮಡ್ಡತನ ಬಿಟ್ಟು ನಿಂತು
ಸೊಡ್ಡು ಹೊಡದು ಉಳಸರಿ ನಮ್ಮ ಭಾರತ ಮಾನಾ || ೭ ||

ಇ|| ಹಗಲಚೆಕ್ಕಿ ಮುಗಲಬಾಣಾ ಪರದೇಶಿ ಬಳೆಗಳನಾ
ಏರು || ತಗದು ಒಡಿದು ಹಾಕರಿ ನೀವು ಮಾತೃಭಗಿನಿ ಜನಾ
ಕಿವಿ ಮ್ಯಾಲ ಕ್ರಾಪ್ ತಿರುವಿ ಬಿಟ್ಟು ನೀವು ಗಂಡಸರ ಪರಧಿ
ತಿರಗಬ್ಯಾಡ್ರಿ ತಿಗರಿಯಂಗ ತಿರುವರಿ ರಾಟಿಯನಾ || ೮ ||

ಇ|| ನಲವಡಿ ಕವಿಕಥನಾ ಹುಣ್ಣಿಮಿ ಚಂದ್ರವನಾ
ಏರು || ಬೆಳಕು ಬಿದ್ದಾಂಗ ಹರೆಯದವಳೋ ಮುದುಕನ್ನ
ಅಪ್ಪಿದಾಗ ಅವನಿಗೆ ಆಗುವುದು ಆನಂದ್ದಾಂಗ
ಆನಂದ ಕಡಲ ಉಕ್ಕಿದಾಗ ಸವಿ ಸಪ್ಪನಾ || ೬ ||

* * *

**೬. ಟೀಪೂ ಸುಲ್ತಾನ**

ಸರಸವುಳ್ಳ ಶ್ರೀ ರಾಮಚಂದ್ರ | ಸಭಾ ಬಂದು ಕೂಡಿರಿ ಇಂದ್ರ
ಹೇಳತೀನಿ ಬೇಧ ಏಕಂದ್ರಾ | ಮಾಡಿ ಖುಲ್ಲಾ ||
ಏರು || ಅಂತೇನಿ ಪರಸಂಗ ಒಂದಾ | ಕೇಳರಿ ಧ್ಯಾನಕ ತಂದಾ
ಅಂಗೈ ನೆರಳಿನೊಳು ಇನ್ನಾ | ಸಲುವುತ್ತ ದೈವ ನನ್ನಾ
ಮಾಡಬೇಕು ನೀವು ಇನ್ನ ಮಾಪಾ | ನನ್ನ ಕಡೆ ಇದ್ದರ ತಪ್ಪಾ
ಬಿಟ್ಟು ಮನದನ ಕೋಪಾ | ನಾ ನಿಮ್ಮ ಬಾಲಾ || ೧ ||

ಸೃಷ್ಟಿವೊಳಗ ನರಸುಳ್ಳಾತ | ಯುದ್ಧದೊಳಗ ರಣಶೂರಯೀತ
ಟೀಪು ಸುಲ್ತಾನ ಮಾತ | ಇಡರಿ ಖ್ಯಾಲಾ
ಏರು || ಬ್ರಾಹ್ಮಣನ ಮನಿವೊಳಗ | ಚಾಕರಿಯಿದ್ದ ಟೀಪು ಆಗ
ಸಣ್ಣವನು ಇರೂತನಾ | ಕಾವುತಿದ್ದ ಆಕಳು ದನಾ
ನಿತ್ಯ ನೇಮ ಹೋಗುವನು ಹೊಲಕ | ಬಿಟ್ಟು ದನಾ ಗಿಡದ ಬುಡಕ
ಮಲಗುವನು ಬೇಶಕ್ಕ | ಯಾರ ಭಯಾಯಿಲ್ಲಾ || ೨ ||

ನಿದ್ರೆಯಲ್ಲಿ ಮಲಿಗ್ಯಾನೋ ಸಾಪಾ | ಬಂತು ಏಳು ಪದ್ಮದ ಸರ್ಪಾ
ನೆರಳು ಆಗ ಹಿಡಿದೀತಪ್ಪಾ | ಮಾರಿ ಮ್ಯಾಲಾ
ಏರು || ಬ್ರಾಹ್ಮಣರ ಮನಿಲಿಂದಾ | ತಿರುಗೂತ ಹೊಲಕ ಬಂದಾ
ಕಂಡ ಕಣ್ಣೀಲೆ ಸರ್ಪಒಂದಾ | ಹಿಡಿದಂತಾ ನೆರಳಾ ಅಂದಾ
ಖುಷಿಯಾಗಿ ಮನಸಿನ ಒಳಗ | ಎಬಿಸ್ಯಾನ ಅಂವ ಆಳಮಗ್ಗ
ಕರಕೊಂಡ ಬಂದ ಮನಿಗೆ | ತಡಾಯಿಲ್ಲಾ || ೩ ||

ಬ್ರಾಹ್ಮಣ ಅಂಗಡಿಲಿಂದಾ | ಪೂಚ ಜರದ ಪೋಷಾಕ ತಂದಾ
ಇಟ್ಟನೊ ಅವರ ಮುಂದ | ಖುಷಿಯಾಲಾ |
ಏರು | ಸ್ವಚ್ಚ ಪನ್ನೀರಿನಿಂದಾ | ಇಟ್ಟ ಟೀಪೂವಿಗೆ ಎರದಾ
ಭೂಷಣ ಸರ್ವಾಂಗದೊಳು | ವಾಸನಿ ಅರಬಿಗಳ ತೊಡಸಿ
ಸರತಾಜ ಸಿರಪೇಚ್ಯಾಗ | ಇಟ್ಟಾರೊ ತಲಿಮ್ಯಾಗ
ಹೇಳತಾನ ಪೂರ್ಣ್ಯೆ ಆಗ | ನೋಡಿ ರಮಲಾ || ೪ ||

ಗ್ನಾನವಂತ ಪೂರ್ಣ್ಯ ಆಗ | ಹೇಳತಾರ ಟೇಪೂಗ
ರಾಜಕಿ ಬರುವದು ನಿನಗ | ಸುಳ್ಳಲ್ಲಾ |
ಏರು || ಯಾವ ಜಾಗೆ ಕೊಡತೀರಿ ಅಂತಾ | ಪೂರ್ಣ್ಯ ಹಿಡಿದ ಶರತಾ
ಸರ್ವ ಸೇನೆಗಳ ಮ್ಯಾಗ | ಪ್ರದಾನಿ ಪೂರ್ಣ್ಯ ಆಗ
ಮಾಡಿದರು ವಚನವ ಕೊಟ್ಟಾ | ಮನದಾನ ಸಂಶಯವ ಬಿಟ್ಟಾ
ಟೇಪು ಸುಲ್ತಾನನ ಪಟ್ಟಾ | ಆದೀತಲ್ಲಾ || ೫ ||

ಪಟ್ಟಕ ಪ್ರಧಾನಿ ಸುಖಾ | ಇಟ್ಟಾ ಪೂರ್ಣ್ಯಗ ಜರಬಾ
ಕಾಟಿಕ ಇವನಂತಾ ಕುರುಬಾ | ಏನು ಬಲ್ಲಾ |
ಏರು || ವಜ್ರ ಪಾಶಾಣದಂತಾ ಕುದುರಿ | ಹಾಕಿ ಜೂಲ ಜರತಾರಿ
ಕುದುರಿ ಕೊಳ್ಳಾಗ ಸುಬಾ | ಡಾಗ ಪುಟ್ಟೇಕ ಕುಬ್ಬಾ
ಎರದ ಟೇಪೂನ ಸವಾರಿ | ಕುಂತಾರ ಕುದುರಿಹಾರಿ
ಹೊಂಟಾರೋ ತಿರುವೂತ ಸೇರಿ | ಭಯಾವಿಲ್ಲಾ || ೬ ||

ಎಡವತಿತ್ತೋ ಕುದರಿಯೆಲ್ಲಾ | ದ್ರವ್ಯವುಂಡು ಇರುವುದಲ್ಲಾ
ಎತ್ತಿ ಒಗಿಯುವರು ತಮ್ಮ ಕೈಲೆ | ಅವರ ಮ್ಯಾಲೆ |
ಏರು || ಇದರಂತೆ ಭೂಮಿಮ್ಯಾಗ | ದ್ರವ್ಯ ಸಿಗುವದು ಆಗ
ಶಿವನ ಕಡಿಲಿಂದ ಗರ್ದಿ ಇತ್ತು ತನಗೆ ದೊರೆತ ಗಾದಿ
ಸುತ್ತ ರಾಜರಗಂಡಾ ಅನಸೀದ ಪ್ರಚಂಡಾ
ಟಿಪ್ಪು ಸುಲ್ತಾನ ಮುಖಂಡಾ ಅನಿಸ್ಯಾನಲ್ಲಾ || ೭ ||

ಪೂರ್ಣ್ಯಯನ ಮೋಹದ ಕನ್ನಿ | ರೂಪವುಳ್ಳ ದೇವಗನ್ನಿ
ಪತಿವ್ರತ ಧರ್ಮಪೂರ್ಣೆ | ಇದ್ದಾಳಲ್ಲಾ ||
ಏರು || ಗೆಳತೇರು ಕರಕೊಂಡು ಸಂಗ | ನದಿಗೆ ಹೋದಾಳೋ ಬ್ಯಾಗ
ಕೊರಳು ಶಂಕಿನಂತೆ ಹೆರಳ ರಾಘುಟ್ಟಿ ಚೌರಿ
ಕಾಮಸೈಸದಾತ ಮದನಿಗೆ ಮದನ ಮೋಹಿತಾ
ಒಬ್ಬ ಸಿಪಾಯಿ ನಿಂತಿದ್ದಾತಾ ಖಬರಿಲ್ಲಾ || ೮ ||

ಕಳವುಳ್ಳರೂಪಗ ಜಾರಿ | ಬಿದ್ದು ಕಾಮ ಆದೀತು ಸೂರಿ
ಸರ್ವ ಮಾತು ಹೋದೀತು ತೀರಿ | ಬಿಡಲಿಲ್ಲಾ |
ಏರು || ಬಂದಾಳೊ ದುಃಖದೊಳಗ ಅಂದಾ | ತಂದಿ ಕೇಳೋ ಈಗ
ಯಾರಿಗೆ ಹೇಳಲಿ ಮಾರಿ ತೋರಿಸದಂತೆ ಆತ
ಕೇಳಿ ಹೀಂಗ ಮಗಳ ಮಾತ | ಕೋಪ ತಡಿಯದಾತ
ಮಂಡಲದಾಗ ಮನಹೋತು | ಅಂತಾನಲ್ಲಾ || ೯ ||

ಬಿಚಗತ್ತಿ ಹಿಡಿದು ಕೈಯಾಗ | ಪ್ರಧಾನಿ ಹೊಂಟನೊ ಆಗ
ಬಂದು ದರಬಾರದೊಳಗ | ಅಂದಾನಲ್ಲಾ

ಏರು || ಮಾಡರಿಯಿನ್ನಾ ಸಾಪಾ | ಅರಸರು ನೋಡಿ ತಪ್ಪಾ
ಸರಿಯಬಾರದಂತಾ ಮಾಯಾ | ಹರಿಯನಾತನಿಗೆ ಕೊಟ್ಟು
ಸಿಪಾಯಿಗೆ ವರ್ದಿ | ಇನ್ನು ಉಸಾಪ ನಡದೀತು ಗರ್ದಿ
ಅಂದ ಸಿಪಾಯಿ | ತಪ್ಪಿತು ಹಾದಿ | ತಿಳಿಯಲಿಲ್ಲಾ || ೧೦ ||

ಅರಸ ಅಂದಾಕೇಳು  ಪ್ರಧಾನಿ | ಅಟ್ಟಾದ ಅಡಗಿ ಕೆಟ್ಟಿತು ಅದನಾ
ಕೊಟ್ಟವಗ ಮಾಡೋ ಲಗ್ಗನಾ ತಿಳಿಯಾಕಿಲ್ಲಾ ||
ಏರು || ಇಟ್ಟ ಮನದಾಗ ಕಪಟಾ | ಬಂದಾನು ಲಾಗು ಪೇಟಾ
ಕುಲಗೇಡಿ ಬ್ಯಾಹ್ಮಣ ತಾನು ಕುಲಾಚಾರ ಬಿಟ್ಟಾನವನು
ಪೂರ್ಣ್ಯೆಯಾಗ ಮಾಡಿ ಫಿತೂರಾ | ಬಲಾಯತಗೆ ಬರದ ಪತ್ತರಾ
ಸೋಜರ ದಂಡ ವತ್ತರಾ ತರಸಾನಲ್ಲಾ || ೧೧ ||

ಮೇಣಿದೊಳಗೆ ಸೋಜೇರಾ ಸೈನಾ ತುಂಬಿ ತುಂಬಿ ಬಂದಿತರಣಾ
ಪೂರ್ಣ್ಯೆಯನಾ ಕಪಟತನ ತಿಳಿಯಲಿಲ್ಲಾ ||
ಏರು || ತಂದು ತಂದು ಇಳಿಸ್ಯಾನಾಗ | ಸರ್ವಸೈನಾ ವಾಡೇದವೊಳಗ
ತನ್ನ ಸರ್ವಸೈನಕ ಆಗ | ಪೂರ್ಣ್ಯೆಯಾ ಹೇಳ್ಯಾನೋ ಹೀಂಗ
ರಪು ಎತ್ತಿಗೋಸ್ಯಾದೋರು ತೀರಿಸುವಾಗ
ಅಡ್ಯಾದೋರು ಜನಾ ಬಿಟ್ಟು ಹೋಗರಿ ದೂರ ಅಂದಾನಲ್ಲಾ || ೧೨ ||

ಸರ್ವದಂಡ  ಹೋದೀತು ಹೊಂಟಾ | ಪೂರ್ಣ್ಯೆಯಾ ಹುಕುಮ ಕೊಟ್ಟಾ
ಸುರಂಗೇರಾನಾ ಬೈಲಿಗೆ ಬಿಟ್ಟಾ | ತಡಾಯಿಲ್ಲಾ
ಏರು || ಮದ್ದುಗುಂಡು ಹಾರ್ಯಾವದುಂದಾ | ಟೀಪು ಕೇಳಿ ಆಗ ಬಂದಾ
ಶಾರ ಮದ್ರಶಾಕ ಅನಿಸಿ | ಧೀರ ಆ ಸುಲ್ತಾನನು
ಡಾಲು ಕತ್ತಿ ಕೈಯವೊಳಗ | ಗುಂಡುಗಳು ಸುಲ್ತಾನಗ ಬಡದು
ಪ್ರಾಣ ಹೋದೀತು ಆಗ | ತಿಳಿಯಲಿಲ್ಲಾ || ೧೩ ||

ಗಂಜ್ಯಾಮದೊಳಗ ಮಾಡ್ಯಾರೊ ಮಣ್ಣಾ | ಟೀಪು ಸುಲ್ತಾನಗ ದಫನಾ
ಹಿಡಿದು ಕಡದ ಪೂರ್ಣ್ಯೆಯಗ ಬಿಡಲಿಲ್ಲಾ
ಏರು || ಪರಂಗೇರ ಜೆಂಡೆ ಆಗ ನಡಸ್ಯಾರ ಕಿಲ್ಲೇದಮ್ಯಾಗ
ಬರದ ಪ್ರಾರಬ್ದದೊಳಗ | ಬರಿಯದು ತಪ್ಪೀತುಹ್ಯಾಂಗ
ತೋಡಿಪದಾ ಹೀಂಗ ಮಾಡಿ ಹಾಡುವೆ ದೈವದೊಳಗ
ಹೊಡದ ನಿನ್ನ ಮಾರಿಮ್ಯಾಗ ಮುರದ ಹಲ್ಲಾ || ೧೪ ||

ಹರಕುಬುದ್ದಿ ಹಾದರಗಿತ್ತಿ | ಅನಿಸಿದಾಗ ನೀನು ಪರಿವ್ರತೆ
ಎಲ್ಲಿ ಹೋದರ ನಿನ್ನ ಫಜೀತಿ ಮಾಡೇನಲ್ಲಾ ||
ಏರು || ನನಗ ನಿನಗ ಬಿಟ್ಟೀತ ಹ್ಯಾಗ | ತಿಳಿ ನಿನ್ನ ಮನಸಿನ ಒಳಗ
ಎರಿ  ಹೊಲಕ ಬಿರಿ ಬಿಟ್ಟಂತೆ | ಕದನಗಿತ್ತಿ ಕಾಳಿ ನೀನು

ಗುರು ನಮ್ಮ ದಸ್ತಗೀರಾ ಕರುಣುಳ್ಳ ಕೇಸೂಪೀರಾ
ನಾಗೂ ಗೌಸು ಗೆಳೆಯರಂತಾರಲ್ಲಾ || ೧೫ | |

* * *

# II. ಪೌರಾಣಿಕ ಪದಗಳು

**೧. ಹಾತಿಮ ಅರಸನ ಪದಾ**

ಬಯ್ಯಾನೊಂದು ಕೇಳರಿ ಠೀಕ | ಬರುವಾಂಗ ಶಾಣ್ಯಾರ ಮನಕ
ತಿಳಿಸುವೆ ಸರೂಜನಕ ಮಾಡಿ ಖುಲ್ಲಾ || ಪಲ್ಲವಿ ||

ಏರು || ಬಯ್ಯಾನ ಗರ್ದಿ ಹೇಳುವೆ ವರ್ದಿ ಕೇಳರಿ ಹಿರಿಯರಾ
ಹಾತಿಮ ಅರಸು ಜಗತ್ಯೇಕ ಸರಸು ಆಗ್ಯಾನೋ ಜಾಹೀರಾ
ಪುಣ್ಯವಂತ ಮಹಾ ಪರಉಪಕಾರಿ ಪೃಥ್ವಿವೊಳಗ ಇಲ್ರಿ ಅವನ ಸರಿ
ಅತಿಥಿ ಅಭ್ಯಾಗತ ಜನಕ ನಿತ್ಯನೇಮ ಅವರಿಗೆ ತಕ್ಕ
ಬಹುಮಾನ ಕೊಡುವನೋ ಲೆಕ್ಕ ಗುಣಶೀಲಾ || ೧ ||

ಮುನಾರ ಸ್ವಾಮಿಯ ಸಲುವಾಗಿ ಮಹಾಘೋರ ಅಡವಿಯ ತಿರುಗಿ
ವಸಂತ ಶೆಕಿ ಉರಿಬ್ಯಾಸಗಿ ಕೆಟ್ಟ ಬಿಸಲಾ ||
ಏರು || ಆರ್ಯಾಣದೊಳು ಅರಸನಗೋಳು ಕೇಳುವರ್ಯಾರಿಲ್ಲಾ
ಮಟ ಮಟ ಮಧ್ಯಾಣ ಮೀರಿತು ಠಾಣಾ ಸುಡತಾವ ಬರಿಗಾಲಾ
ನೀರಡಿಸುತ ಒಂದ ನಾಯಿ ಅಡವಿಯೊಳಗದು ಬಿಡುವುದು ಬಾಯಿ
ನಾಲಿಗಿ ಚಾಚಿತು ಗೇಣುದ್ದ ಕೂಗಿಲ್ಲರಿ ಕಾಗಿ ಹದ್ದಾ
ಹಾತಿಮನ ಎದುರಿಗೆ ಬರುವುದು ಎದಿಮ್ಯಾಲಾ || ೨ ||

ಇ || ಹಾತಿಮನು ಕಣ್ಣಿಲೆ ಕಂಡಾ ನಾಯಿ ಸಂಗಡ ಕರಕೊಂಡಾ
ಹುಡುಕುವನು ಭಾವಿಯ ಹೊಂಡಾ ಸಿಗಲಿಲ್ಲಾ ||
ಏರು || ತಪಾಸು ಮಾಡಿ ಭಾವಿಯ ನೋಡಿ ಹೋದಾನೋ ಏಕದಮ್ಮಾ
ಜಗ್ಗಲಿಕ್ಕೆ ಕೊಡ ಹಗ್ಗವು ಇಲ್ಲಾ ಬಗ್ಗಿ ಒಗಿದಾನೋ ಬಾವ್ಯಾಗ ಕಲ್ಲಾ
ನೀರಿದ್ದವರಿ ಬಾಳ ದೂರ ನಿಂತಗೊಂಡ ಹಾಕುವಾ ಉಸರಾ
ಎಂಥಾ ಇಂವಾ ಪರ ಉಪಕಾರಿ ಬೆಲೆ ಇಲ್ಲಾ || ೩ ||

ಇ || ಹಂಚಿಕಿ ಮಾಡುವ ಹಾತಿಮಾ ಹೌಹಾರಿ ನಿಂತಾನೋ ಸುಮ್ಮಾ
ತಲೆಯಿಂದ ತಗಿದಾನೋ ತನ್ನ ರುಮಾಲಾ
ಏರು || ರುಮಾಲ ಹರಿಸಿ ಬಾವ್ಯಾಗ ತೋಸಿ ಎಳೆದಾನೋ ಮೇಲಕ್ಕೆ
ಬರುವ ನಾಯಿ ಅದರ ಬಾಯಿಯವೊಳಗ ಹಿಂಡುವಾ
ಹೀಗೆ ನಾಯಿಗೆ ಕುಡಿಸಿದಾ ನೀರಾ | ಹೋಗಿ ಕೂತ ಒಂದು ಗಿಡದ್ಹತ್ತರಾ

ನೆರಳತ್ತು ಬಹಳ ಸಂಪಾ ನಾಯಿಗಾದೀತು ಬಹಳ ತಂಪಾ
ಹಾತಿಮನ ಉಪಕಾರ ನೆನಪ ಹಗಲೆಲ್ಲಾ || ೪ ||

ಇ || ಗಿಡಾ ಬಾಳ ಸಂಪಾಗಿತ್ತು ನಾಯಿ ಅಲ್ಲಿಗೆ ಬಂದೀತು
ಹಾತಿಮಾನ ಹತ್ತಿರ ಕುಂತಿತು ತೊಡಿಮ್ಯಾಲಾ ||
ಏರು || ನಾಯಿಗೆ ನೋಡಿ ಪ್ರೀತಿಯ ಮಾಡಿ ಹಾತೀಮ ಹೇಳುವಾ
ಜಾತಿ ನಾಯಿ ಇದು ಪ್ರೀತೀಲೆ ಇರುವದು ಮಾಡಿ ಬಹಳ ಜೀವಾ
ಏನಚಂದ ಇದು ನಾಯಿಯ ಕುಲಾ | ಕೈಯಾಡಿಸಿದನೋ ತಲೆಯಮೇಲಾ
ಕೈಯಿಗೆ ತಾಕಿತು ಒಂದು ಮಳಿ ದಂಗಾದೀರಿ ದೈವಾ ಕೇಳಿ
ಇತ್ತೊ ನಡು ನೆತ್ತಿಯ ಸುಳಿ ಸುಳ್ಳಲ್ಲಾ || ೫ ||

ಇ || ಕಸುವು ಮಾಡಿ ಮಳಿ ಕಿತ್ತಿಟ್ಟಾ | ಮುಸುಕಿತೋ ಮಾಯದ ಪೆಟ್ಟಾ
ಮನುಷ್ಯ ಆದಾನೋ ಉತ್ಕೃಷ್ಟ ತತ್ಕಾಲಾ ||
ಏರು || ನಾಯಿಯು ಹೋಗಿ ಮನುಷ್ಯನಾದಾನೋ ಹಾತಿಮನೆದುರಿಗೆ
ಸಾಗರಬಿದ್ದು ಪಾದಕ ಮುದ್ದು ಕೊಡತಾನ ಅವರಿಗೆ
ನನ್ನ ಜನ್ಮ ಮಾಡಿದಿ ಉದ್ಧಾರ | ತೀರಲಾರದು ನಿಮ್ಮ ಉಪಕಾರಾ || ೬ ||

ಇ || ನನ್ನ ಮೈಯಾನ ಚರ್ಮವ ಸುಲಿಸಿ ನಿಮ್ಮ ಕಾಲಿಗೆ ಮಚ್ಚಿಯ ಹೊಲಿಸಿ
ಕೊಟ್ಟರ ತೀರುವುದಿಲ್ಲಾ ಉಪಕಾರಾ ||
ಏರು || ಪಾರಸ ಪಟ್ಟಣದವ ನಾನು | ದೊಡ್ಡ ಸಾವಕಾರನ ಮಗನು
ಕೇಳು ನಾನು ಹೇಳುವುದನ್ನು ಇನ್ನ ಮೇಲಾ
ಇ || ನನ್ನ ಹೆಂಡತಿ ಹಾದರಗಿತ್ತಿ ಇರುವಳು ಬಂಗಾಲಿ
ಪರ ಪುರುಷರಿಗೆ ಕೊಡುವಳು ಭೋಗ ಪ್ರೀತಿ ಅದರ ಮೇಲಾ
ಸೇರಲಾರದೆ ಆ ಗಯ್ಯಾಳಿ ಜಡಿದು ಬಿಟ್ಟಾಳೊಂದು ತಲಿಯಾಗ ಮಳಿ
ಆ ಕ್ಷಣಾ ಆದೆನು ಶ್ವಾನಾ | ಮನಿಬಿಟ್ಟು ಹೋದೆನು ಹೊರಗ
ಹೊಟ್ಟೆಗಿಲ್ಲದೆ ಅಸನಾ ಹಗಲೆಲ್ಲಾ || ೭ ||

ಇ || ತಿರುಗಿದೆ ಓಣಿ ಹಿಡಿದು ಓಣ್ಯಾನ್ನ ನಾಯಿ ಕಡಿದು
ಹೊರಗ ಹಾಕ್ಯಾರೋ ಬಡಗೀಲೆ ಹೊಡೆದು ಜನರೆಲ್ಲಾ
ಏರು || ಹೇಳುವುದನ್ನು ಕೇಳಿಕೊಂಡು ಮನಿಗೆ ಹೊಂಟಾರಲ್ಲಾ
ಅವನ ಹೆಂಡತಿ ಗೆಣಿಯನ ಸಂಗತಿಲೆ ಮಲಗಿದ್ಲೋ ಗರದೀಲೆ
ಇ || ವಂಚನೆ ಇಲ್ಲದೆ ಮಂಚದ ಮ್ಯಾಲೆ ನಿದ್ರಿಯೊಳಗ ಎಚ್ಚರವಿಲ್ಲಾ
ಕಳವಳಿಸಿ ನಿಂತಾನೋ ಮಿತ್ರಾ ಮಳೆಯಿತ್ತೊ ಹಾತಿಮನ ಹತ್ರಾ
ತಲಿಮ್ಯಾಲೆ ಜಡಿದಾನೋ ವತ್ರಾ ಬಿಡಲಿಲ್ಲಾ || ೮ ||

ಇ || ಹೆಣ್ಣುನಾಯಿ ಆದೀತು ಆಗ ಮನಿಬಿಟ್ಟು ಹೋದೀತು ಹೊರಗ
ಗಂಡು ನಾಯಿ ಆ ಓಣ್ಯಾಗ ಹಿಂಬಾಲಾ ||

ಏರು || ತಾನೆ ಕಂಡಿತು ಮಾಯದ ಮಾತಿದು ಎಂದಿಗೆ ಬಿಡಲಿಲ್ಲಾ
ಹೆಣ್ಣು ನಾಯಿಗೆ ಬೆಳಸೋ ನೀನಾ ಗಂಡು ನಾಯಿಗಳ ಹತ್ತಿಸಿನಿ ಬೆನ್ನಾ
ಕವಲೂರೊಳು ಹೂವಿನ ಮಗ್ಗಿ ಚಿಕ್ಕಮಸೂತಿಗೆ ಹೋಗಿ
ಮಾಲಿಹಾಕೋ ಮಲ್ಲಿಗೆ ಗೊಂಚಲಾ || ೯ ||

* * *

**೨. ಚಂದ್ರಾವತಿ ಮದುವೆ ಪದಾ**

ಕುಂತ ಜನಕ ನಾ ನಿಂತ ಹೇಳತೇನಿ ಕುಂತಕೇಳರಿ ಜನಾ
ರಾಜರ ಮಂತ್ರಿ ಚರಿತ್ರ ಹೇಳತೇನಿ ಕೇಳರಿ ಸಂಪೂರಣಾ
ಉತ್ತರ ದಿಕ್ಕಿನೊಳಗ ಒಂದು ಇತ್ತೋ ರಾಜಸ್ಥಾನಾ
ಏರು || ಅಲ್ಲಿ ಅರಸನ ಹೊಟ್ಟೇಲೆ ಒಬ್ಬ ಇದ್ದ ಬಾಲಕನಾ
ಪ್ರಾಯದಲ್ಲಿ ಇದ್ದಾನಂವಾ ಒಳ್ಳೆಯವನಾ
ಅವನ ಹಣಿಮ್ಯಾಲೆ ಇತ್ತೋ ಕೇಳರಿ ಚಂದ್ರರೇಖವನಾ
ಅವನ ಬಣ್ಣಾ ಲಿಂಬಿ ಹಣ್ಣಾ ಹೊಳಿದಾಂಗೋ ರತನಾ || ೧ ||

ಇ || ಒಂದು ದಿನ ಅರಸ ತಗಸ್ಯಾನೋ ಮಗನ ಪೋಟೋನಾ
ಮಂತ್ರಿಯ ಕರೆದು ಹೇಳತಾನೋ ಮಾಡೂನು ಲಗ್ನನಾ
ನಮ್ಮಸರಿ ಇದ್ದವರ ಕೂಡ ಮಾಡೋಣ ಬೀಗತಾನಾ
ಏರು || ಇಷ್ಟು ಹೇಳಿ ಅರಸ ಕೊಟ್ಟಾನೋ ತನ್ನ ಮಗನ ಪೋಟೋನ್ನಾ
ಕುದುರಿಯ ಹತ್ತಿ ಮಂತ್ರಿ ಹೋದಾನೋ ನೋಡಾಕ ಕನ್ಯೆವನಾ
ಚಂದ್ರಾವತಿ ಎಂಬುವದೊಂದು ಇತ್ತೊ ಪಟ್ಟಣಾ
ಅಲ್ಲಿ ಅರಸನ ಮಗಳು ಇದ್ದಾಳೋ ವಿದ್ಯಾದಲ್ಲಿ ನಿಪುಣಾ || ೨ ||

ಇ || ಅಲ್ಲಿಗೆ ಹೋಗಿ ಮಂತ್ರಿ ಕೇಳತಾನೋ ಚಂದ್ರಾವತಿ ಅರಸನ್ನಾ
ಉತ್ತರದರಸನ ಕೂಡ ನೀನು ಮಾಡೋ ಬೀಗತನಾ
ಇಷ್ಟು ಕೇಳಿ ಅರಸ ಅನ್ನತಾನ ಅವನ ಗುರುತೇನಾ
ಏರು || ಇಷ್ಟು ಕೇಳಿ ಮಂತ್ರಿ ತಗದ ಕೊಟ್ಟಾ ಉತ್ತರದರಸನ ಪೋಟೋನಾ
ಪೋಟೋ ನೋಡಿ ಅರಸ ಕರಿಯತಾನಾ ತನ್ನ ಮಗಳನ್ನಾ
ಯಾತಕ ಕರದಿಯಂತ ಬಂದ ಕೇಳತಾಳೋ ಚಂದ್ರಾವತಿ ತಾನಾ
ಆಗಿಂದಾಗ ಕೈಯಾಗ ಕೊಟ್ಟಾನ ಉತ್ತರದರಸನ ಪೋಟೋನಾ || ೩ ||

ಇ || ನಿನ್ನ ಮನಸಿಗೆ ಬಂದರ ನೋಡವ್ವಾ ಮಾಡತೇನಿ ಬೀಗತನಾ
ವಿದ್ಯಾವತಿ ಗುರುತ ಹಿಡದಾಳೋ ಚಂದ್ರರೇಖವನಾ
ಇಂವಗಾರ ಮಾಲಿ ಹಾಕಲಿಕ್ಕೆ ಒಪ್ಪಿಗೆ ಅದೇನೋ ನಾನಾ
ಏರು || ಚಂದ್ರಾವತಿ ಬಣ್ಣಾ ನೋಡಿ ಮಂತ್ರಿ ಮುಚ್ಯಾನೋ ಕಣ್ಣಾ
ಆಗಿಂದಾಗ ಮಂತ್ರಿ ಹಾಕತಾನೋ ಒಂದ ಅಕಲವನಾ

ತನ್ನ ಮಗನಿಗೆ ಮಾಡಬೇಕಂತಾನ ಈ ಹೆಣ್ಣಾ
ಆಗಿಂದಾಗ ಲಗ್ನ ನೇಮಿಸ್ಯಾನೋ ಹನ್ನೆರಡನೇ ತಾರೀಖಿನದಿನಾ || ೪ ||

ಇ || ಪರ್ತ ಪೋಟೋ ತಕ್ಕೊಂಡು ಚಂದ್ರಾವತಿ ಕೊಟ್ಟಾಳೋ ಪೋಟೋನ್ನಾ
ಪೋಟೋ ತಕ್ಕೊಂಡು ಮಂತ್ರಿ ಹೋದಾನೋ ತನ್ನ ರಾಜ್ಯಕ ತಾನಾ
ಉತ್ತರದರಸಗ ಹೇಳತಾನೋ ಕನ್ಯಾದ ಸುದ್ದಿಯನಾ
ಏರು || ಚಂದ್ರಾವತಿ ಪಟ್ಟಣದೊಳಗ ನೋಡೇನೊಂದ ಕನ್ಯವನಾ
ವಿದ್ಯಾ ಬುದ್ಧಿಯಲ್ಲಿ ಆದಾಳೋ ಒಳ್ಳೆ ನಿಪುಣ್ಣಾ
ನಮ್ಮ ಅರಸಗ ಸರಿಯಾಗುದಿಲ್ಲಾ ಕಪ್ಪು ಐತಿ ಆಕಿ ಬಣ್ಣಾ
ಇಷ್ಟು ಕೇಳಿ ಉತ್ತರದರಸ ಸುಮ್ಮನೇ ಆದಾನಾ || ೫ ||

ಇ || ಪೋಟೋ ಕೊಟ್ಟು ಮಂತ್ರಿ ಹೋದಾನೋ ತನ್ನ ಮನಿಗೆ ತಾನಾ
ತನ್ನ ಮಡದಿಗೆ ಹೇಳತಾನೋ ಕನ್ಯಾದ ಸುದ್ದಿಯನಾ
ಚಂದ್ರಾವತಿ ಪಟ್ಟಣದೊಳಗ ನೋಡೋನೊಂದು ಕನ್ಯೆವನಾ
ಏರು || ನನ್ನ ಮಗನ ಲಗ್ನ ಮಾಡಬೇಕಂತ ನೇಮಿಸೇನಿ ಹನ್ನೆರಡನೇ ತಾರೀಖಿನ ದಿನಾ
ಲಗ್ನದ ಸುದ್ದಿ ಊರ ಮುಂದ ಹೇಳಬ್ಯಾಡ ನೀನಾ
ಲಗ್ಗನ ನೇಮಿಸಿದ ಮೂರು ದಿನಕ್ಕ ಕನಸ ಕಂಡಾಳೋ ಚಂದ್ರಾವತಿನಾ
ತಿರುಕನ ಮಗನ ಕೂಡ ಆದಂಗಾತೋ ಆಕಿಯ ಲಗ್ಗನಾ || ೬ ||

ಇ || ಎದ್ದು ಕುಂತು ಆಕಿ ತಂದಿಯ ಕರದು ಹೇಳತಾಳೋ ಯಾಕಂತ ಬಂದಾನಾ
ಈಗಿನ ಕ್ಷಣದೊಳಗಾ ಐತೇ ಮೋಸತಾನಾ
ತಿರುಕನಾಗಲಿ ಹರಕನಾಗಲಿ ಹಾಕುವೆ ಮಾಲಿಯನಾ
ಏರು || ನಾನು ಹೇಳಿದಂತೆ ಲಗ್ಗನ ಪತ್ತರ ಕಳಸಪ್ಪಾ ನೀನಾ |
ನನ್ನ ಮಗಳು ಮನಸಿಗೆ ಬಂದವರಿಗೆ ಹಾಕ್ತಾಳಂತ ಮಾಲಿಯನಾ
ಇದರಂತೆ ಲಗ್ಗನ ಪತ್ತರ ಕಳಿಸ್ಯಾನೋ ಅರಸನಾ
ಎಲ್ಲಾ ಜನರು ಬರಬೇಕಂತಾ ಹನ್ನೆರಡನೆಯ ತಾರೀಖಿನ ದಿನಾ || ೭ ||

ಇ || ಹಂದರ ಹಾಕಿ ಬಲ್ಲಾಂಗ ಇಟ್ಟಾನೋ ಸಾಲ ಕುರ್ಚೇವನಾ
ಮಂತ್ರಿಮಗನ ಕರಕೊಂಡು ಬಂದು ಕುಂತಿದ್ದಾ ನಡು ಹಂದರದಾಗವನಾ
ಎಲ್ಲಾ ಜನರು ಬಂದು ಕೂಡಿದ್ರೋ ಲಗ್ನದ ದಿನಾ
ಏರು || ಮಂತ್ರಿ ಮಾಡಿದ್ದ ಕಂತ್ರಿತನ ತಿಳಿದಿದ್ದ ಉತ್ತರ ದರಸನ ಮಗನ್ನಾ
ಮುಂದ ಬಿಟ್ಟ ಅಂವಾ ಹಿಂದ ಹತ್ಯಾನೋ ತನ್ನ ಕುದರಿಯನಾ
ಚಂದ್ರಾವತಿ ಪಟ್ಟಣಕ ಬಂದು ಇಳದಾನೋ ಕುದರಿಯನಾ
ಊರ ಹೊರಗ ಬಂಗ್ಲೇದಾಗ ಇಳದ ಕುಂತಿದ್ದನಾ || ೮ ||

ಇ || ಚಂದ್ರಾವತಿ ಒಳಗಿಂದ ಬಂದಾಳೋ ಹಿಡಕೊಂಡ ಮಾಲಿಯನಾ
ಕುಂತ ಜನರಿಗೆ ಕೈಯ ಮುಗಿದು ಇಳಿದಾಳೋ ಕಟ್ಟಿಯನಾ

ಸಾಲ ಹಿಡಿದು ನೊಡಕೊಂಡ ಹೊಂಟಾಳೋ ಚಂದ್ರರೇಖವನಾ
ಏರು || ನನಗ ಹಾಕತಾಳೋ ನಿನಗ ಹಾಕತಾಳೋ ಅಂತಾರೋ ಕುಂತೀರೋ ಜನಾ
ಮಂತ್ರಿಗುರುತು ಹಿಡಿದು ಸನಿಯಾಕ ಬಂದು ನಿಂತಾಳೋ ಸುಮ್ಮನಾ
ಬೀಗತಾನ ಮಾಡಲಿಕ್ಕೆ ಬಂದವನು ಹೌದೇನು ಅಲ್ಲೋ ನೀನಾ
ಎಲ್ಲಿ ಐತಿ ತಗದ ಕೊಡಪ್ಪಾ ನೀ ತಂದ ಪೋಟೋನ್ನಾ || ೯ ||

ಇ || ಇಷ್ಟು ಕೇಳಿ ಮಂತ್ರಿ ಮಾಡಿದಾ ತಳಿಯಾಕ ಮಾರಿಯನಾ
ಮಂತ್ರಿ ಮಗನ್ನಾ ದಾಟಿ ಹೋದಾಳೋ ನೊಡಕೊಂತ ರೇಖವನಾ
ಹಂದರ ಕಡೆ ಸಿಡಿದು ಹೋಗಿ ನಿಂತಿದ್ದ ಕರದಾಳೋ ತಂದಿಯನಾ
ಏರು || ಯಾಕ ಕರದೀಯಂತ ಬಂದ ಕೇಳತಾನೋ ತನ್ನ ಮಗಳನ್ನಾ
ಊರವೊಳಗ ಯಾರ್‍ಯಾರ ಇದ್ದಾರ ಕರಸಪ್ಪಾ ನೀನಾ
ಇಷ್ಟು ಕೇಳಿ ಅರಸ ಬಿಟ್ಟಾನೋ ನಾಲ್ಕಾರು ಮಂದಿಯನಾ
ಊರ ಸುತ್ತಹಾಕಿ ಬರೂದರೊಳಗ ನೋಡ್ಯಾರ ಬಂಗ್ಲೇದಾಗವನಾ || ೧೦ ||

ಇ || ಯಾವೂರವನು ಇಲ್ಯಾಕ ಕುಂತಿದ್ದೀ ನಮ್ಮರಸ ಕರಿತಾನಾ
ಇಷ್ಟು ಕೇಳಿ ಬಾಲಕ ಅಂತಾನ ನನ್ನಕಡೆ ಕೆಲಸೇನಾ
ಮಾತ ಮತಾಡಕೊಂತ ಇಳಿದು ಬಂದು ಹತ್ಯಾನೋ ತನ್ನ ಕುದರಿಯನಾ
ಏರು || ಅವರ ಇದರಿಂದ ಬಲಕ ಬಂದಾನೋ ಹಂದರ ಲಗತಿಗವನಾ
ದೂರ ಇರೂತಲೆ ಗುರುತ ಹಿಡಿದಾಳೋ ಚಂದ್ರರೇಖವನಾ
ನನ್ನ ಪುರುಷ ಇಲ್ಲೇ ಬಂದಾನಂತ ಹಿಡದಾಳ ಮಾಲಿಯನಾ
ಹಂದರ ಲಗತಿಗೆ ಬಂದ ಇಳೂದರೊಳಗ ಹಾಕ್ಯಾಳೋ ಮಾಲಿಯನಾ || ೧೧ ||

ಇ || ಮತ್ತ ಮಾಲಿಹಾಕಿ ಪಾದಕ ಎರಗಿ ಹಳತಾಳೋ ತಾನಾ
ನನ್ನ ಪರೀಕ್ಷೆ ಮಾಡಬೇಕಂತ ಕುಂತಿದ್ದೀ ಏನೋ ದಿನಾ ||
ಕಂಡವರಿಗೆ ಹಾಕಲಿಕ್ಕೆ ಅಲ್ಲ ಅರಸನ ಮಗಳು ಅಲ್ಲೋ ನಾನಾ
ಏರು || ಇಷ್ಟು ಕೇಳಿ ಕುಂತ ಜನರೆಲ್ಲಾ ಚಪ್ಪಾಳೆ ಹಾಕ್ಯಾರಾದಿನಾ
ಆಗಿಂದಾಗ್ಗೆ ಅರಸ ತರಿಸ್ಯಾನೋ ಒಳಗಿಂದ ಸಿಂಹಾಸನಾ
ಅಳಿಯನ ಕರದು ಕುಂಡರಿಸ್ಯಾನೋ ಸಿಂಹಾಸನದ ಮ್ಯಾಲೆ ಅವನಾ
ಆರತಿ ಮಾಡಿ ಎಡಕ ಕುಂತಾಳೋ ಚಂದ್ರಾವತಿ ತಾನಾ || ೧೨ ||

ಇ || ತನ್ನ ತಂದಿನ್ನ ಕರಿದು ಹೇಳತಾಳೋ ಊಟ ಮಾಡಿಸೋ ಜನಾ
ಇಷ್ಟು ಕೇಳಿ ಮಂತ್ರಿ ಎದ್ದಾನೋ ಕರಕೊಂಡ ತನ್ನ ಮಗನ್ನಾ
ಮಂತ್ರಿ ಮಾಡಿದ ಕಂತ್ರಿತನ ನಡಿಲಿಲ್ಲೊ ಲಗ್ನದ ದಿನಾ
ಏರು || ಆನಿ ಒಂಟಿ ನೌತ್ತ ನಗಾರಿ ತರಿಸ್ಯಾನೋ ಮೇಣೆವನಾ
ಅಳಿಯ ಮಗಳನ್ನಾ ಕುಂಡರಿಸಿ ಕಳಿಸ್ಯಾನೋ ಉತ್ತರ ದೇಶಕ್ಕವರನಾ
ತಮ್ಮ ರಾಜ್ಯೇಶ ಹೋಗಿ ಎಬ್ಬಿಸ್ಯಾನೋ ಆದಿನ ಗದ್ಲವನಾ
ರಾಜ್ಯವಾಡೇದ ಸನಿಯಾಕ ಹೋದಾಗ ಗುರುತ ಹಿಡದಾನೋ ಮಗನ್ನಾ || ೧೩ ||

ಇ || ನನ್ನ ಬಿಟ್ಟು ನೀ ಲಗ್ನ ಮಾಡಿಕೊಂಡ ಬಂದಿ ನನ್ನ ಮಗ ಅಲ್ಲೋ ನೀನಾ
ಇಷ್ಟು ಕೇಳಿ ಚಂದ್ರಾವತಿ ಅಂತಾಳೋ ತಪ್ಪಿಲ್ರಿ ಅವರದೇನಾ
ಬೀಗತಾನ ಮಾಡಲಿಕ್ಕೆ ಯಾರನ್ನ ಕಳಿಸಿದ್ರಿ ತಿಳಕೊಳ್ಳರಿ ಇನ್ನಾ
ಏರು || ಇಷ್ಟು ಕೇಳಿ ಅರಸ ಕರಿಸ್ಯಾನೋ ದಾಸಿಯ ಮಡದಿಯನಾ
ಸೊಸಿಯ ಇಳಿಸಿಕೊಂಡು ಹೋದಾರೊ ಅರಮನಿ ತಾನಾ || ೧೪ ||

ಬರದು ಪತ್ತರ ತಂದ ಕೊಟ್ಟಾನೋ ಅರಸನ ಕೈಯಾಗ ಅವನಾ
ಮಂತ್ರಿ ಮಾಡಿದ ಕಂತ್ರಿತನ ತಿಳಿದೀರಿ ಕುಂತೀರು ಜನಾ
ಏರು || ಪತ್ತರ ನೋಡಿ ಅರಸ ಕರಿಸ್ಯಾನೋ ಮತ್ತ ಮಂತ್ರಿಯನಾ
ಯಾತಕ ಕರದೀಯಂತ ಬಂದ ಕೇಳತಾನೋ ತನ್ನ ಅರಸನ್ನಾ
ಈಗಿಂದೀಗ ಊರ ಬಿಡದಿದ್ರ ಕೊಡತೇನಿ ಫಾಸಿಯನಾ
ಆಗಿಂದಾಗ ಮಂತ್ರಿ ಒಪ್ಪಿಸ್ಯಾನೋ ಕಾಗದ ಪತ್ರವನಾ || ೧೫ ||

ಇ || ಕಾಗದ ಪತ್ರ ಒಪ್ಪಿಸಿ ಮಂತ್ರಿ ಹೋದಾನೋ ತನ್ನ ಮನಿಗೆ ತಾನಾ
ತನ್ನ ಮಡದಿಗೆ ಹೇಳತಾನೋ ಅರಸನ ಸುದ್ದಿಯನಾ
ಆಗಿಂದಾಗ ಕಟಗೊಂಡ ಎದ್ದಾನೋ ತನ್ನ ಗುಡಿಚಾಪೀನಾ
ಏರು || ಮಾಹಿತಿ ಇದ್ದರ ಮಾಡಿ ಹೇಳರಿ ಇಂಥ ಪದವನಾ
ಹಾಳಿ ಹಿಡಿದ ಓದಬ್ಯಾಡ್ರಿ ನಿಮ್ಮ ಹಳೇ ಪುರಾಣಾ
ಐದನೆ ವಾರ್ಡಿನ ಹುಡುಗರು ಪದಾಮಾಡಿ ಹೇಳ್ಯಾರೋ ಇದನಾ
ಅವರ ಮ್ಯಾಲ ಮಾರುತಿ ದಯವು ಐತಿ ಪೂರಾ ಇನ್ನಾ || ೧೬ ||

* * *

**೩. ಅರಸನ ಸತ್ತ ಮಗಳನ್ನು ಮದುವೆಯಾದ ಫಕೀರ**

ಎಷ್ಟಂತ ಹೇಳಲಿ ಸ್ವಾಮಿ ಸೃಷ್ಟಿಕರ್ತನ ಮಹಿಮೆ
ನಿಷ್ಠವಂತರಿಗೆ ನೇಮ ಇಷ್ಟಾರ್ಥ ಮಾಡುವ ಅನುಕೂಲಾ
ಏರು || ನಿಷ್ಠೀಲೆ ನಡೆದರ ಆ ಶಂಭುಶಂಕರ
ಬೇಕಾದ್ದು ಹಾಜರ ಮಾಡುವ ಭಿನ್ನ ಘೋರ
ಬಲಕ ಪಟ್ಟಣದ ಅರಸೊಬ್ಬ ಇರತಿದ್ದ ಸರಸ
ಆತಗ ಖಾಸ ಮಗಳು ರೂಪ ಬಂಗಾರದ ವರಣಾ
ಇನ್ನೂ ಹರೆಯದ ಝಳಕ ಬಿದ್ದಾಂಗ ಸೂರ್ಯನ ಕಿರಣಾ
ಮೈಬಣ್ಣ ಲಿಂಬಿಹಣ್ಣ ಮುಚ್ಚತಾವ ಕಣ್ಣಾ
ಜಾತಿ ಪದ್ಮಿನಿ ನಸುಗೆಂಪು ನಾಸಿಕ ಸರಳ ಫಕೀರ ಒಬ್ಬ ಆಗಿದ್ದ ಮರುಳ
ಇಬ್ರಾಹಿಂ ಆದಂ ತರಳ | ಕೂಳ ನೀರಿನ ಇದ್ದಕ್ಯಾಲಾ || ೧ ||

ಇ || ಅರಸಂದು ಹೀಂಗಿತ್ತು ನೇಮ ಮನಸ್ಸಿನಿಂದ ಮಾಡುವ ಧರ್ಮಾ
ಯಾರಿಗೇನು ಬೇಡಿದ್ದ ಸುಮ್ಮಕೊಡತಿದ್ದ | ಇಲ್ಲ ಅನ್ನಲಿಲ್ಲಾ

ಏರು || ಕೇಳಿ ಮಜಕೂರ ಬಂದಾನ ಫಕೀರ
ಕೂಡಿತ್ತ ದರಬಾರ ಹೋಗಿ ನಿಂತಾನ ಹುಜರಾ
ಅರಸ ಕೇಳತಾನ ಕೇಳಿ ಫಕೀರಗ ಬೇಡ ಸಂಶೆ ಇಡಬ್ಯಾಡ
ಮನಸಿನ್ಯಾಗ ನೋಡು ತಿಳಿದು ಸಂಪೂರಣಾ
ನಿಂತಾನ ಫಕೀರ ಅಂತಾನ ಸವಾಲು ಹೇಳತಾನ ಮನಸಿನ್ಯಾಗ ಧೋರಣಾ
ನಿಮ್ಮ ಪ್ರೀತಿಯ ಮಗಳ ಕೊಟ್ಟು ಕೀರ್ತಿ ಪಡೆಯಿರಿ | ಅರ್ತಿಲೆ ಆಗುವೆ ಲಗ್ನನಾ
ಅರಸ ಪರದಾನಿಗೆ ಅಂದಾ ಇವನ ಸವಾಲಾ ಅತೀ ಹೆಚ್ಚಿನದಾ
ಏನಾರ ಮಾಡಿ ಒಂದ ಅಕಲಾ | ಕಳವರಿ ಒಂದ ಹಾಕಿ ಜಾಲಾ || ೧ ||

ಫಕೀರ ಮಂದೀದು ಕೋಪ ತಾಳಲಾರದೆ ಸಂತಾಪ
ಇಲ್ಲಂದರ ಕೊಡತಾನ ಸ್ರಾಪ ಇದು ಒಳ್ಳೆ ಬಂದು ಬಿತ್ತ ತಗಲಾ
ಏರು || ಏನಾರ ಚಾಲಾಕಿ ಮಾಡಿ ಬಿಡರಿ ಹೊರಗೆ ಹಾಕಿ
ಪರದಾನಿ ಹಂಚಿಕಿ ಒಂದ ತಗದಾನ ಹುಡುಕಿ
ಕರದ ಫಕೀರಗ ಅಂತಾನ ಹೀಂಗ
ತಿಳಿ ಅರಸನ್ಹಂತೇಲಿ ಐತಿ ಒಂದ ಬೆಲೆ ಇಲ್ಲದ ರತನಾ
ಸರತ ಪರತ ಇಂಥಾ ರತನಾ ತಂದಂವಗ ಮಾಡಿಕೊಡುವೆ ಲಗ್ನನಾ
ಹುಡಿಕಿ ತೊಗೊಂಡ ಬಾ ಇಲ್ಲಂದರ ನೀ ಹೋಗಬೇಕ ಸುಮ್ಮನಾ
ಫಕೀರ ಹೊಂಟ ಅದೇ ಕ್ಷಣದಲ್ಲಿ ರತ್ನಗಳು ದೊರಿತಾವು ಎಲ್ಲಿ
ಸಿಗತಾವ ಸಮುದ್ರದೊಳಗ ಹೋಗಿ ಕುಂತಾನ ಸಮುದ್ರದ ಮ್ಯಾಲಾ || ೩ ||

ಇ || ದಿನಾ ಆದಾವು ಎರಡು ವರ್ಷ ಮನದಾಗ ಆಗಿ ಉಪವಾಸಾ
ಬಿಡತಾನ ಬಹಳ ಸಾಹಸಾ ರತನದ ಹರಳು ದೊರಿಯಲಿಲ್ಲಾ
ಏರು || ಆಗ ತಿಳಿದ ಮನಸ್ಸಿಗೆ ಈ ನೀರೆಲ್ಲ ನುಂಗಿ ಬಿಟ್ಟರೆ ಭೂಮಿಗೆ
ಸಿಗತಾವು ತಾವಾಗಿ ನಿಷ್ಟುರ ಮನದಾಗ ಗಟ್ಟಿ ಯೋಚಿಸಿ
ಶೂರ ಫಕೀರ ಶಂಕರನ ನೆನೆದು ತಾ ನೀರು ಉಗುಳತಾನ ನಿಂತ
ಹೀಂಗ ಬೇಗ ಬೆಳಗ ಒಂದೇ ಸವನ ಬ್ಯಾಸರಿಲ್ಲ ದಿನಾ ಆದಾವು ನಾಲ್ವತ್ತ
ಇವನ ಕಷ್ಟ ನೋಡಿ ಆ ಸೃಷ್ಟಿಕರ್ತಗ ಹುಟ್ಟಿತು ಮಾಯಾ ಮಮತಾ
ಹುಕುಂ ಕೊಟ್ಟ ಖಾಜಾಕಿಜರಗ ತುರ್ತು ಹೋಗಿ ಆ ಫಕೀರಗ
ರತ್ನದ ಹರಳು ಮನಬಲ್ಲಾಂಗ ಕೊಟ್ಟು ಬಿಡಿಸರಿ ಮನಸಿನ ಜಲ್ಲಾ || ೪ ||

ಇ || ಖಾಜಾಕಿಜರ ಶರಣ ಅಂತಾರ ಎಲೋ ದಿವಾನಾ
ನುಂಗಿದರ ಸಾವೂತನಾ ಒಂದ ಹನಿ ಕಡಿಮಿ ಆಗುದಿಲ್ಲಾ ||
ಏರು || ಹಿಡಿದ ಶರಣರ ಚರಣಾ ಹೆಂಗ ಮಾಡಲಿ ಇನ್ನಾ
ಹೋಗು ಮುಚ್ಚ ನೀ ನಿನ್ನ ಕಣ್ಣ ತೆರೆದು ನೋಡು ರತನಾ
ಕಂಡ ರತನದ ಡೀಗ ಅದರಾನು ಪಕ್ತ ತಗೊಂಡ ನಾಲ್ವತ್ತು ರತನಾ
ಒಂದಾನ ಬಲಕ ಪಟ್ಟಣದ ಕೂಡಿ ಪರದಾನಿಗೆ
ನೋಡ ರತನಾ ತಗೋ ಮಾಡು ಮದವಿ ಈ ಕ್ಷಣಕ

ಪರದಾನಿಗೆ ಅಂತಾನ ಬಾವಾ ಬಿಡೂದಿಲ್ಲ ಹೋಗಲಿ ಜೀವಾ
ಹೆಂಗ ಮೆಚ್ಯಾನ ಶಿವಾ ಕೊಟ್ಟ ವಚನ ತಪ್ಪಿದ ಮ್ಯಾಲಾ || ೫ ||

ಇ || ಪರದಾನಿ ಸಿಟ್ಟಿಗೆ ಬಂದಾ ಬಡಗಿ ತಗೊಂಡು ಬಲ್ಲಂಗ ಬಡದ
ಕವಳ ಹತ್ತಿ ಫಕೀರ ಬಿದ್ದ ಮಾಡಿ ಬಿಟ್ಟಾರ ಅಡವಿ ಪಾಲಾ
ಏರು || ಅರಸನ ಬಾಲಕಿ ಮೋಹದ ಲಡಕಿ
ಬಂದ ಕೆಟ್ಟ ಕಸಾರಕಿ ಸತ್ತಾಳೋ ಏಕಾಏಕಿ
ಹೆಣಕ ಪೆಟ್ಟಿಗೆಯೊಳಗ ಹಾಕಿ ಮಣ್ಣ ಮಾಡಿದಾರೋ
ಅಗ ಸಣ್ಣ ದೊಡ್ಡ ಮಂದಿ ಕೂಡಿ
ಅಡಿವ್ಯಾಗ ಬಿದ್ದ ಫಕೀರ ಹುಶಾರಾಗಿ ಎದ್ದ ಬರತಿದ್ದ ಓಡಿ
ತಂಡ ತಂಡ ಜನ ಹಿಂಡ ಹಿಂಡ ಬರುದ ಕಂಡ ಕೇಳತಾನ ನೋಡಿ
ಊರ ಅರಸನ ಮಗಳು ಏಕಾಏಕಿ ತೀರಿಕೊಂಡಳು
ಅತ್ತ ಫಕೀರ ಎಬಸ್ತಾನ ಗೋಳು ಸಾರ್ಥಕ ಆಗಲಿಲ್ಲ ಸಫಲಾ || ೬ ||

ಇ || ಅಳತಾನೋ ಮಿತಿಮೀರಿ ಮತ್ತೊಮ್ಮೆ ನೋಡಲಿಲ್ಲ ಮಾರಿ
ರಾತ್ರಿ ಹೋಗಿ ಹಡ್ಯಾನೋಗೋರಿ | ಹೆಣಾ ಹೊತಗೊಂಡ ಹೆಗಲಮ್ಯಾಲಾ
ಏರು || ಒಂದ ಗಿಡಕ ಕುಂದರಿಸಿ ಹಾಡಿ ಅಳತಾನ ಸೋಸಿ
ಎಲ್ಲಿಹೋದಿ ರಾಜಹಂಸಿ | ನಾ ಆದ್ಯೋ ಪರದೇಶಿ
ಉರಿಯ ಬೆಳಕ ಮಾಡಿ ಮಾರಿ ನೋಡತಾನ
ಬೆಳಕ ಕಂಡ ಆ ಕ್ಷಣಕ ಬಂದ್ರು ಅಲ್ಲಿತನಕ
ಕಾರವಾನ ಜನರು ಕೇಳತಾರ ವಿಚಾರ ಮಾಡತಾರ
ಫಕ್ಕೀರಗಂತಾರ ಹೇಳ ನೀ ಯಾರು
ಬಡ್ಡಿ ಹಿಡದ ಅಲ್ಲಿತನ ಸರುವ ಎಲ್ಲ ಒಡದ ಹೇಳ್ಯಾನೋ ಎಲ್ಲಾ ಮಜಕೂರಾ
ಅದರೊಳಗಿದ್ದ ಹಕೀಮಾ | ಬಿಸಮಿಲ್ಲಾದ ಕೇಳರಿ ಮಹಿಮಾ
ಕಟಪಟ ಮಾಡಿ ತುಂಬಶಾನ ಜಲ್ಮಾ | ಎದ್ದು ಕುಂತಾಳೋ ಅರಸನ ಕಮಲಾ || ೭ ||

ಇ || ಕಾರವಾನ ಜನರೆಲ್ಲಾ ಕೂಡಿ ಸನಮಂತ ಹೇಳಿ ಸರ್ವ ಎಲ್ಲಾ ತೀಡಿ
ಇಬ್ಬರಿಗೆ ಮದುವೆ ಮಾಡಿ ಸತಿಪತಿ ಸೇರಿ ಬಂದ ಅಮಲಾ
ಏರು || ನಡೆದೀತ ಸಂಸಾರ | ಹಡದಾಳೋ ಪುತ್ತರಾ
ವಯಾ ವರ್ಷ ಐದಾರ ಅಂತಾನ ಫಕೀರ
ಸಾಲಿಗೆ ಹಾಕಿ ಮಗನಿಗೆ ವಿದ್ಯೆ ಕಲಿಸಬೇಕ
ಒಂದ ಊರಿಗೆ ಮುಂಜಾಲೆ ತಂದ | ಸಂಜೀಗೆ ಮನಿಗೆ ಒಯ್ಯುತ್ತಿದ್ದ
ಒಂದ ದಿವಸ ಊರ ಆಳುವ ಅರಸ | ಸಾಲಿ ಪರೀಕ್ಷೆ ನೋಡಲಿಕ್ಕೆ ಬಂದ
ಆ ಕುಂತ ಹುಡುಗನ ಮ್ಯಾಲೆ ಬಿತ್ತ | ನಜರ ಅರಸಂದು ದಿಟ್ಟಿಸಿ ನೋಡಿದ
ಹುಡಗಂದು ನೋಡಿ ಚಲುವಿಕಿ ಐತಿ | ನನ್ನ ಮಗಳ ಹೋಲಿಕಿ
ಮಾಸ್ತರಗ ಹೇಳಿ ತಿಳುವಳಿಕೆ ಮನಿಗೆ ವೈದ ಅರಸ ಬಿಡಲಿಲ್ಲಾ || ೮ ||

ಇ || ಕಂಡ ಅರಸನ ಸತಿ ನೋಡತಾಳ ಕೂಸಿನ ಮಾರಿ
ತದ್ರೂಪ ನನ್ನ ಮಗಳ ಗತಿ ತುಸು ತಟಕ ಪರಕ ಇದ್ದಿಲ್ಲ
ಏರು ಕೂಡಿ ಬೀಗ ಬಿಜ್ಜರ ಮಾಡ್ಯಾರ ವಿಚಾರ
ಹೇಳಪ್ಪಾ ಕುಮಾರ ನಿಮ್ಮ ತಾಯಿ ತಂದಿ ಹೆಸರಾ
ಇಡಲಿಲ್ಲ ಮಚ್ಚಿ ಹೇಳತಾನ ಬಿಚ್ಚಿ
ಕೂಸ ಅದೇನಿ ನಾ ಖಾಸ ಆದಮರ ದೇಶ ಹೆಸರ ತಂದಿದಾ
ಪ್ರೀತಿ ಮಾತ ಇಸೂಪ ಇಬ್ರಾಹಿಂ ನಾಮಕರಣ ಐತರಿ ನಂದಾ
ಅರಸನ ಸತಿ ಕೇಳಿ ಎಲ್ಲಾ ಹರೀಕತಿ ಆದ್ರೋ ಆನಂದಾ
ಹುಡುಗನ ಮುಂದ ಕುಂಡರಿಸಿ ಸಡಗರದಿ ಪೋಷಾಕ ತೊಡಸಿ
ಪಂಚಾಮೃತ ಪಕವಾನ್ ಉಣಿಸಿ ಮೊಮ್ಮಗನ ಮ್ಯಾಲೆ ಹಂಬಲಾ || ೯ ||

ಇ || ಫಕೀರ ಬಂದಾ ಆ ಮಾಸ್ತರಗ ಕೇಳತಾನ ಎಲ್ಲಿ ಹೋದ ಹುಡುಗ
ಅರಸ ವೈದ ಕಳಸಂದ ನಿಮಗ ಹೋದ ಫಕೀರ ಅರಸನ ಮಹಲ
ಏರು || ಅರಸಂದ ನೀ ಕೇಳು ತಡಿಯದೆ ಒಡೆದು ಹೇಳು
ಸತ್ತಂತ ನನ ಮಗಳು ನಿನಗ್ಹ್ಯಾಂಗ ದೊರೆತಳು | ಫಕೀರ ಅಂತಾನ ಸಾಂಬನ ಕಾರಣದಿ
ಮೇಣೆ ಕಳಿಸಿ ತನ್ನ ಮಗಳಿಗೆ ಅರಸ ಮೋಹನದಿಂದ ಕರೆತಂದ
ತಾಯಿ ತಂದಿ ಮಗಳ ಮೊಮ್ಮಗ ಅಳಿಯಾ ಒಳ್ಳೆ ನಿವ್ವಳಾ ಪ್ರೀತಿ ಹೆಚ್ಚಿಂದಾ
ಮೊಮ್ಮಗ ಪಟ್ಟದ ಮ್ಯಾಗ ಕುಂಡರಿಸಿ ಮುತ್ಯಾ ಸಾಂಬಗ ನೆನೆದ
ಬಾಗಲಕೋಟಿ ಶಾರ ಗುರು ನಮ್ಮ ದಸ್ತಗೀರ
ಕರುಣ ಲಯಾ ಕೇಸುಪೀರ ಪೀರ ನಾಗೂ ಗೌಸು ನ ಕವಿಗಳು ಮಿಗಿಲಾ || ೧೦ ||

*** * ***

## iii. ಭಕ್ತಿ ಪದಗಳು

### ೧. ಎರಡು ಮೀನಿನ ಪದಾ

ಶಿವನ ಸೊರಣಿ ಮಾಡುತಲಿದ್ದವು ಕೇಳರಿ ಬಯಾನಾ
ಹೆಣ್ಣು ಗಂಡು ಎರಡು ಜೋಡಿನ ಮೀನಾ
ನಿತ್ಯವು ಮಾಡ್ತಾವೊ ಶಿವನ ಧ್ಯಾನಾ | ಭಕ್ತಿ ಇರಲಿ ಪೂರಣಾ || ೧ ||

ಹೆಣ್ಣು ಮೀನ ತನ್ನ ಗಂಡಗ ಹೇಳತಾದೋ ಎಂಥ ಹುಚ್ಚ ನೀನಾ
ಇಂಥ ನದಿ ಎಲ್ಲಿ ತಂದ್ಯೋ ಸುಮ್ಮನಾ
ಯಾವ ಕೊಲ್ಲತಾನೊ ಏನೋ ನಮ್ಮನಾ | ಬಿಡೋ ಶಿವನ ಧ್ಯಾನಾ || ೨ ||

ಅಷ್ಟರೊಳಗ ಒಬ್ಬ ಬ್ಯಾಟಿಗಾರ ಹೊಳಿಮ್ಯಾಲೆ ಹೊಂಟಾನಾ
ಬಲಿಬಿಚ್ಚಿ ಹೊಳಿಯಾಗ ಅಂವಾ ಒಗದಾನಾ
ಹಿಡಿಯಬೇಕೆಂದು ಅವನು ಎರಡು ಮೀನಾ | ಅವೇ ಸಿಕ್ಕಾವ್ರಿ ರತನಾ || ೩ ||

ಮೀನಿನ ಗಂಟು ಕಟಗೊಂಡು ತಲಿಮ್ಯಾಲೆ ಹೊತ್ತಾನಾ
ತನ್ನಮನಿ ದಾರಿಯ ಹಿಡಿದಾನಾ
ಮನದಲ್ಲಿ ಕುಶಿಯ ಆಗ್ಯಾನಾ | ಅಂವಾ ಹಿರಿಹಿರಿ ಹಿಗ್ಯಾನಾ || ೪ ||

ಮೀನಿನ ಗಂಟು ಮನಿಗೆ ಒಯ್ದು ಹೆಂಡ್ತಿಗೆ ಹೇಳತಾನಾ
ಬಾಳ ಚೊಕ್ಕ ಮೀನಾ ತಂದೇನಿ ನಾನಾ
ಮಾರಿದರ ಸಿಗತಾವ ಎನಗ ಹೊನ್ನಾ | ಏನಂತಿದಿ ನೀನಾ || ೫ ||

ಬ್ಯಾಟಿಗಾರನ ಹೆಣತಿ ಗಂಡಗ ಹೇಳ್ತಾಳೋ ದಿನದಿನ ಮಾರೋಣಾ
ಪ್ರಿಯ ಮನೆಯೊಳಗಿಲ್ಲೊ ದೈವಾನಾ
ಬೀಗರಿಗೆ ಬಿನ್ನಾಯಿ ಹೇಳೋಣಾ | ಅಡಗಿಯ ಮಾಡೋಣಾ || ೬ ||

ಬ್ಯಾಟಿಗಾರನ ಹೆಣತಿ ಗಂಡಗ ಹೇಳತಾಳೋ ಅಂಗಡಿಗೆ ಹೋಗೋ ನೀನಾ
ಹೆಚ್ಚ ಮಸಾಲಿ ತೊಂಬಾರೋ ಸುಗುಣಾ
ಬರೂತಾನಾ ಮೀನ ಕೊಯ್ತೇನಿ ನಾನಾ | ಲಗೂನ ಹೋಗ ನೀನಾ || ೭ ||

ಮೀನಿನ ಗಂಟಬಿಚ್ಚಿ ನೋಡತಾಳ ಬಾಳ ಚೊಕ್ಕ ಮೀನಾ
ಕೈಯಲ್ಲಿ ಹಿಡದಾಳ ಈಳಗಿನಾ
ಬಾಳಮಾಡಿ ಅಳತಿತ್ತೊಹೆಣ್ಣ ಮೀನಾ | ನಮಗ ಒದಗಿ ಬಂತೋ ಮರಣಾ || ೮ ||

ಹೆಣ್ಣುಮೀನ ತನ್ನ ಗಂಡಗ ಹೇಳತಾದೋ ಚಾವೋ ಜವಕ ಸುಗುಣಾ
ನಿತ್ಯ ಮಾಡ್ತಿದ್ದೇವಿ ಶಿವನಧ್ಯಾನಾ
ಶಿವನ ಧ್ಯಾನಾ ಮಾಡಿ ಫಲವೇನಾ | ಶಿವನ ಬಾಯಲಿ ಮಣ್ಣಾ || ೯ ||

ಗಂಡುಮೀನ ತನ್ನ ಹೆಣತಿಗೆ ಹೇಳ್ತಾದ ಹಿಡಿ ಹಿಡಿ ಸಮಾಧಾನಾ
ಒಬ್ಬರ ಕೈಯಲ್ಲಿ ಸಿಕ್ಕೇವಿ ಇನ್ನಾ
ಕೋಲ್ಲಾವನಕ್ಕಿಂತ ಉಳಸಾಂವಾ ಮೇಲನಾ | ನೆನೆ ನಿನ್ನ ಗುರುದೀನಾ || ೧೦ ||

ಅಷ್ಟರೊಳಗ ಮೂಡಲಮಾರಿ ಮಿಂಚನ್ನುಟ್ಟಿತ್ತಾ
ಗದ್ದರಿಸಿ ಗಡಗಡನಂದಿತ್ತಾ | ತಡದ ಮಳಿ ಹೊಡೆದಿತ್ತ ಒಂದೇ ಸವನಾ
ಕೈಯಾನ ಮೀನು ಪಾರು ಆಗ್ಯಾವ್ರಿ ಇನ್ನಾ || ೧೧ ||

ನಾಲವಾರ ಊರು ದೇಶಕ್ಕೆ ಭರಣಾ | ತುಂಬ ತುಳಕತದೋ ಸಂಪೂರಣಾ
ಕಾಕಿಗುರುವು ಹೇಳಿದನು ಈ ವಚನಾ
ಹೀಂಗ ಸುದ್ದ ಬಾಯಲಿ ಸುರದಂಗ ರತನಾ || ೧೨ ||

*** * ***

**೨. ಶೇಖ ಫರೀದನ ಭಕ್ತಿ ಪದಾ**

ಮನಸಿಟ್ಟ ಕೇಳರಿ ನೀವು | ದೈವ ಕೂಡಿದ ಚಂದ
ಜಳ ಜಳ ತೊಳದ ಮನದ ಹೇಳತೇನಿ ಕೇಳರಿ ನೀವು
ಐತಿದು ಮಜಕೂರ | ಬಿಟ್ಟ ಮಾಡೇನಿ ಬಹು ಗೋರಾ
ತಪ್ಪಿದರ ತಿದ್ದಿಹೇಳುವೆ | ಬುದ್ದಿವಂತರ ಮುಂದ || ೧ ||

ಶರಣರೊಳಗ ಶೇಖ ಪರೀದನ ಎಂಬುವನೊಬ್ಬನಿದ್ದ
ಸಾಂಬನ್ನ ನೋಡುವದೈತಿ ಬಹು ಮನಸಿನಿಂದ ||
ಏರು || ತಾಯಿಯ ಒಳಿಗೋಗಿ ಹೇಳತಾನ ಶಿರಬಾಗಿ ಗಟ್ಟಿಪಾದ ಹಿಡಿದ
ಅಪ್ಪಣಿ ಕೇಳತಾನ ತಾಯಿನ ಸಾಂಬನ್ನ ನೋಡುವದೈತಿ
ಬಹಳ ನಂದ ಮನಸ || ೨ ||

ಹಡದವ್ವ ಬಿಡದೆ ಹೇಳತಾಳ | ತನ್ನ ಮಗನ ಮುಂದ
ಜೀವಮಾಯದಿಂದ ಸಾಂಬನ್ನ | ನೋಡಿ ಹ್ಯಾಂಗ ಚಂದ
ಏರು || ಜಗದೊಳಗೆ ಹುಟ್ಟಿದ ಮ್ಯಾಲೆ ಶಿವ ಯಾರಿಗೆ ಕಾಣುವದಿಲ್ಲ
ಹೇಳತಾಳ ಖುಲ್ಲಾ | ಮಗನ ತುಟಿ ಹಿಡಿದು ಗಲ್ಲಾ ||
ಸಿಟ್ಟಿ ಮಾಡಿ ಶೇಖ ಫರೀದಗ ಹೇಳತಾಳ ಬೈದ || ३ ||

ಹಡದವ್ವನ ಮಾತು ಕೇಳಿದ | ಸಿಟ್ಟೀಲೆ ನೋಡಿದಾ
ಹೋಗುವ ಕಾಲಕ್ಕೆ ನುಡಿಯಬ್ಯಾಡವ್ವ ಕೆಟ್ಟ ಶಬ್ದ
ಏರು || ತಾಯಿಯ ಕಕಲಾತಿ | ಕಟ್ಯಾಳ ರೊಟ್ಟಿ ಬುತ್ತಿ
ಮಗನದಶಿಂದ | ಹೋಗಿ ಬಾರೋ ಕಂದ |
ಸಾಂಬನ್ನ ನೋಡುವ ಅಬ್ಬರ ಐತಿ ಬಹಳನಿಂದ || ४ ||

ಸಾಂಬನ್ನ ನೋಡುವದಕ್ಕಾಗಿ | ಶೇಖ ಫರೀದ ನಡಿದಾ
ಅಡಿವ್ಯಾಗ ಗಿಡಾ ಕಂಡನೋ ದೊಡ್ಡದಿತ್ತೊ ಒಂದಾ
ಏರು || ಗಿಡದ ಬುಡಕ ನೋಡ್ಯಾನೊ ಹಮ್ಮ ಚೌಕ ದೊಡ್ಡದು
ಭಾವಿಯಿತ್ತೊ ಒಂದ | ಅಳತಿ ನೂರ ಮೊಳಾ ಉದ್ದಾ
ಕಾಲು ಮ್ಯಾಲಕ್ಕ ಮಾಡಿ ಗಿಡಕ ತೂಗ ಬಿದ್ದಾ || ೫ ||

ಹನ್ನೆರಡು ವರುಷ ಉಪವಾಸ ಗಿಡಕ ತೂಗಬಿದ್ದ
ಮೈಯಾನ ಮಾಂಸ ತಿಂದಾವೋ ಹದ್ದು ಕಾಗಿ ಹರಿದಾ
ಏರು || ನವನಾರ ಸಂದಿಗೆ ಸಂದ | ಹದ್ದು ಕಾಗಿ ತಿಂದಾವೋ
ಎಲ್ಲ ಮಾಂಸ ಹರಿದಾ | ಉಳಿಯಲಿಲ್ಲಾ ಆಕಾರಾ
ನಿಂತಿತೋ ಎಲುಬಿನ ಹಂದರಾ | ಉಳಿಯಲಿಲ್ಲಾ ಗಂಧಾ || ೬ ||

ಭಾವಕ್ಕ ಮೆಚ್ಚಿ ಸಾಂಬನು ಯೋಗಿಯಾಗಿ ಬಂದಾ
ನಾನೇ ಸಾಂಬನೆಂದ ಶೇಖ ಫರೀದನ ಮುಂದಾ
ಏರು | | ತನಗ ತಿಳಿಯದೆ ಹೇಳತಾನ ಸಾಂಬಗ ಚಂದ
ಮಾಡತಿದಿ ಜವಾಬಾ | ಛೀ ತಗಿ ನೀನು ಅಲ್ಲ ಸಾಂಬಾ
ಬಹಳ ಮಾತನ್ನ ಹೇಳಬ್ಯಾಡೋ ಸುಳ್ಳ ನನ್ನ ಮುಂದಾ || ೭ ||

ನೀನೆ ಸಾಂಬನಾದರೆ ಸಕ್ಕರಿ | ಮಾಡೊ ಬಾಯಿಯ ತುಂಬಾ
ಮೊದಲಿನಂಗ ಇರಲಿ ನನ್ನದು ದೇಹ ಬಹಳ ಚಂದಾ
ಏರು || ಶೇಖ ಫರೀದ ಹೇಳಿದ ಮಾತು | ಸಾಂಬಾ ಮಾಡಿದ ಸಿದ್ದಾಂತಾ
ನಿಜರೂಪ ಹೊಂದಿ ಮುಂದೆ ನಿಂತು ಕರೇ ಮಾಡಿ ತೋರಿಸ್ಯಾನ ಭಗವಂತಾ
ತೋರಿಸಿ ಶೇಖ ಫರೀದಗ ಮಾಯವಾಗಿ ನಡಿದಾ || ೮ ||

ಆಗಿಂದಾಗ್ಗೆ ಆಯಿತೋ ಸಕ್ಕರಿ ಆ ಬಾಯಿಯ ತುಂಬಾ
ಶೇಖ ಫರೀದನ ದೇಹ ಆತೋ ಬಹಳ ಚಂದಾ
ಏರು || ಶೇಖ ಫರೀದ ಪ್ರತ್ಯಕ್ಷ ಸಾಂಬಾ ಬೆಟ್ಟಿಯಾಗಿ ನುಡಿದಾ
ಆಗಲೀಗ ಗಟ್ಟಿ ಮತಿನಿಂದಾ ಕಣ್ಮುಚ್ಚಿ ನೋಡುವೆ ನಾನು ಇಂದಾ
ವರವ ಕೊಟ್ಟಾನೊ ಸಾಂಬಾ | ಮಾಯವಾಗಿ ನಡಿದಾ || ೯ ||

ಅನುಮಾನ ಯಾತಕ ಆಗಿ ಹೋಗಲಿ ನಮ್ಮ ನಿಮ್ಮಿಂದಾ
ಕರಕೊಂಡ ಬಾ ಹೋಗೋ ನೀನು ನಿಮ್ಮ ಗುರುವರನಾ
ಏರು || ದೇಶಕ್ಕ ವಾಹಿನಾ | ಹೈಯಿಲಗೋಳ ಠಿಕಾಣಾ
ವಸ್ತಾದಿ ಇರತಾನ ಕುಬೇರ | ಕವಿ ಹುಟ್ಟತಾವೊ ಒಳ್ಳೆ ಹಸನಾ
ಪದಾ ಮಾಡಿ ಹೇಳತಾನ ಆಗುವಂಗ ಸಭಾ ರಚನಾ || ೧೦ ||

* * *

**೩. ಮಗನನ್ನು ಕೊಂದು ಬಾವಾನಿಗೆ ಉಣಿಸಿದ ಭಕ್ತಿಪದಾ**

ಚಂದ್ರದಂತ ಏನ ಸುಂದ್ರ ಸಭಾ ಕುಂತೀರಿ ಸಂಪನ್ನಾ
ಮಿಕ್ಕಿ ಸಭೇದಾಗ ಸಿಕ್ಕಿ ಶಾಹೀರಾ | ಆಗಿ ಹೋಗಲಿ ಚೌಕಾಸಿ
ಚೊಕ್ಕ ಕವಿ ಒಳೆ ಲಕ್ಕ ಮನಸಿನ ತಕ್ಕ ಮಾಡೇನಿ ಪುರಮಾಸಿ

ಹವಣಿಸಿ ಬಂದಂವಗ ಮೂಗಿನ್ಯಾಗ ಕವಡಿ ಪೋಣಿಸಿ
ಕಳಿಸಿನಿ ಇಡಸಿ ಬಿಲಾವರ ಬಳಿ ಎಚ್ಚರಕಿರಲಿ ನಿನ್ನಾ || ೧ ||

ಜೈಕುಮನೆಂಬ ಅರಸ ಮಹಾ ಸರಸ ಇದ್ದಾ ಭಕ್ತಿವಾನಾ
ಏರು || ಬಂದ ಬಡಜನಕ ಕಂಡ ಅರಬಿ ಅಂಚಡಿ ಕೊಡುವನೊ
ದಿನಕದಿನಾ ಮಾಡಿ ದಾನಾ ಪುಣ್ಯೆ ಪಡಕೊಳ್ಳುವನೋ
ಮನಸ ನೊಯಿಸದಾಂಗ ಬೇಡಿದಷ್ಟು ಕೊಟ್ಟು ಕಳಿಸುವನೊ
ಇದ್ದಾ ಧೈರಿಷ್ಟಾ ಅರಸಾ ಮಹಾ ಪುಣ್ಯೆವಾನಾ || ೨ ||

ಇ || ಲಕ್ಷ ಇಟ್ಟ ಕೇಳರಿ ಭಿಕ್ಷಾಪತಿ ಒಂದಾನವೊಂದಿನಾ
ಏರು || ಹಿಡಿದ ಕೈಯಾಗ ಜಪಮಣಿ ಕೊರಳಲ್ಲಿ ರುದ್ರಾಕ್ಷಿ ಅಷ್ಟಗಂಧಾ
ಹಚ್ಚಿ ತನ್ನ ಜೈಕುಂಬ ಅರಸನ ಮನಿಮುಂದಾ ನಿಂತಾನ ಬಂದಾ
ಅರಸ ಕಂಡ ಮನಗಂಡ ಮುತ್ತು ಮಾಣಿಕ ಹೊನ್ನ ತುಂಬಿ ತಂದಾ
ಅಂತಾರ ಹಿಡಿಯಿರಿ ಸ್ವಾಮಿ ನಿಮಗ ಕೊಡುವೆ ದಾನಾ || ೩ ||

ಬಾವಾ ದ್ರಿಷ್ಟೀಲೆ ನೋಡಿ ಅಂದಾ ಆಗಿನ ಕ್ಷಣಾ
ಏರು || ಮುತ್ತು ಮಾಣಿಕ ಹೊನ್ನ ಬಂಗಾರ ನಿಂದು ನಾಯೇನ ಮಾಡಲಿ
ಸನ್ಯಾಸಿಗೆ ಯಾತಕ ಬೇಕಿದು ಬಾಳೇಬದುಕ ಏನ ಸುಡಲಿ
ಕೇಳಿ ಸುದ್ದಿ ಬಂದಿನಿ ಮಹಾಭಕ್ತಿವಂತ ನೀ ಜಗದಲಿ
ಖರೇ ಇದ್ದರ ಕೈಯ ಮುಟ್ಟಿ ಕೊಡೋ ವಚನಾ || ೪ ||

ಇ || ಆದರೆ ಬಿಕ್ಕಟ್ಟ ಸವಾಲು ನಂದು ತಿಳಿಸುವೆ ನಿನ್ನಾ
ಏರು || ಅರಸ ಕೇಳಿ ಮನಸ ಹರುಷದಿಂದ ಕೊಟ್ಟಾನ ವಚನಾ
ದ್ರುಷ್ಟ ಆ ಸನ್ಯಾಸಿ ಅರಸಗ ಅಂತಾನ ನಿನ್ನ ಕಂದನಾ
ಕೋದ ಅಡಗಿ ಮಾಡಿ ನೀಡಬೇಕ ತಂದ ನೀ ನನ್ನಾ
ತಲಿಕುಟ್ಟಿ ಶಿರಾ ಚಟ್ನಿ ಮಾಡಿ ಹಂಚ ಸವನಾ || ೫ ||

ಆಗ ಹೌದು ಅಂದೇನ ನಿನ್ನ ಮಹಾಭಕ್ತಿ ವಾನಾ
ಏರು || ಮನಸಿನೊಳಗ ಮಿಡಕಿ ಅರಸ ಸನ್ಯಾಸಿಗೆ ಅಂತಾನೋ
ನನ್ನ ಹೊಟ್ಟೀಲೆ ಹುಟ್ಟಿದ ಆ ಪುತ್ರ ಒಬ್ಬನೆ ಇರುವನೋ
ಅಂವುಗ ಅಳದ ಬಳಿಕ ರಾಜಧಾನಿ ಯಾರು ಆಳುವನೋ
ಮತ್ತು ಬೇಕಾದ್ದ ಬೇಡೋ ಬಾವಾ ಕೊಡುವೆ ನಿನ್ನಾ || ೬ ||

ಇಷ್ಟು ಕೇಳಿ ಬಾವಾ ಅರಸಗ ಅಂದಾ ದ್ರುಷ್ಟ ನೀನಾ
ಏರು || ವಚನ ಭ್ರಷ್ಟ ಆದಿ ಅಂತ ದಾರಿ ಹಿಡದಾನ ಮೆಲ್ಲಕ
ಕೇಳಿ ಅರಸ ದಿಕ್ಕ ತಪ್ಪಿ ಹೋಗಿ ಬಿದ್ದಾನ ಪಾದಕ ||
ನಿಂತ ಇದರಿಗೆ ಬಾವಾಗ ಅಂತಾನ ನಾ ನಿನ್ನ ವಚನಕ
ಎಂದಿಗೆ ಬ್ರಷ್ಟ ಆಗೂದಿಲ್ಲ ನಿಮಗ ಕೊಟ್ಟ ವಚನಾ || ೭ ||

ಪುನಾ ರಂಬಿಸಿ ಕರಕೊಂಡ ಹ್ವಾದಾ ಮನಿತನಾ
ಏರು || ಸರೂ ವೃತ್ತಾಂತ ಮಡದಿ ಮುಂದ ತಿಳಿಸ್ಯಾನ ಹೌಹಾರಿ
ಕೇಳಿ ಸತಿಯಳು ಕುಂತಾಳ ಮನದಲ್ಲಿ ಆಗಿ ಗಾಬರಿ
ಅಂತಾಳ ಕೊಟ್ಟ ವಚನಕ ಬೃಷ್ಟ ಆಗಬಾರದರಿ
ಬ್ರಹ್ಮಾ ಅದರುಷ್ಟ ಬರದಿದ್ದ ತಪ್ಪುದಿಲ್ಲ ಕಂದನಾ || ೮ ||

ಕರದ ಕಂದನ ಕೆಡವಿ ಕೊಯ್ದಾರ ಕೇಳರಿ ಜನಾ
ಏರು || ಮಿಕ್ಕಿ ಆಗಿ ಲಕ್ಕ ಮಾಡ್ಯಾರ ಕೊಟ್ಟ ವಚನದ ಪ್ರಕಾರ
ಕುಟ್ಟಿ ಶಿರಾ ಚಟ್ನಿ ಮಾಡ್ಯಾರ ಹಾಡಿ ಪದಾ ಒಳೇ ಗಂಭೀರಾ
ನೆಂಬಿ ಎಡಿ ತುಂಬಿ ಬಾವಾನ ಮುಂದ ಒಯ್ದು ಇಟ್ಟಾರ
ಕಂಡ ಬಾವಾ ಅಂದಾ ಮಾಡರಿ ನಾಲ್ಕು ಎಡಿ ಸವನಾ || ೯ ||

ಕೂಡಿ ಸಂಗತಿಲೆ ಮಾಡೂನು ಊಟಾ ಒಂದ ಸವನಾ
ಏರು || ನಿನ್ನ ಮಗನ ಹೆಸರಗೊಂಡ ಕರಿಯಬೇಕ ಈ ಕ್ಷಣಕ
ಇಷ್ಟ ಮಾತ ಕೇಳಿ ತಾಯಿ ತಂದಿಗೆ ಬಂದಿತ್ತ ದುಃಖ
ನಿರವಾ ಇಲ್ಲದೆ ಅರುವಹಾರಿ ಕರದಾರ ಆ ವಾಳ್ಯೇಕ ||
ಬಂದ ನಿಂತಾನ ನಕ್ಕೊಂತ ಪುತ್ರ ಚಂದ್ರ ಚೆನ್ನಾ || ೧೦ ||

ಕಂಡ ತಾಯಿ ತಂದಿ ಶಾಂತ ಆಗ್ಯಾರ ಸಂಪೂರಣಾ
ಏರು || ಕೂಡಿ ನಾಲ್ವರು ಬ್ಯಾಗ ಪ್ರೀತೀಲೆ ಆಗ ಮಾಡ್ಯಾರ ಭೋಜನಾ
ಬಾವಾ ಅರಸಗ ಕೊಟ್ಟ ಆಶೀರ್ವಾದ ಹೊಂಟ ಹ್ವಾದಾ ಆಕ್ಷಣಾ
ಭಕ್ತೀಲೆ ನಡುವವಂಗ ಸಂಬನ ಇರುವದು ಅಂತಃಕರುಣಾ
ಕುಂತ ನಿಂತ ಮಾಡುವೆ ಶರಣಾ || ೧೧ ||

ಬಾಗಲಕೋಟ್ಯಾಗ ನೆನದಾರ ಮಲ್ಲೇಕಲ್ಲ ಹುಸೇನಾ
ಕಷ್ಟ ಬಿಟ್ಟಾ ಇಂದಾ ತಂದ ನನ್ನ ಮೈಯ ತುಂಬಿ ಹಚ್ಯಾನ ಕ್ಯಾಮಣ್ಣಾ
ಮತ್ತಷ್ಟು ಜಿಗೂತೇನಿ ಜಗದಾಗ ಆಗಿ ಪುಂಡ ಪೈಲವಾನಾ
ಅಂತಾರ ಹುಸೇನಮಿಯ್ಯಾ ಕುಡಿದಾಂಗ ಕುಡೆವಿತಿ ಕುಸ್ತಿಖಣಾ
ಸತ್ತಿ ಒತ್ತಿ ಬಡದರ ಮುಕಳ್ಯಾಗ ಬಾಳಿಹಣ್ಣಾ || ೧೨ ||

* * *

## iv. ಸಾಮಾಜಿಕ ಪದಗಳು

### ೧. ಅಣ್ಣ ತಂಗಿಯ ಪದಾ

ಕಲಿವಿಕದ ಕತಿಯ ಕೇಳರಿ ಕುಂತಿರು ಜನಾ
ಕೈಮುಗಿದು ತಿಳಿಸುವೆ ಬಡವನ ಸಾರಾಂಶನಾ || ಪಲ್ಲವಿ ||

ಏರು|| ಇಬ್ಬರು ಮಕ್ಕಳನಾ ಮಾಡ್ಯಾರ ಜ್ವಾಪಾನಾ
ತಿರಕೊಂಡ ತಂದ ಅವರಿಗೆ ಹಾಕುವರೋ ಅನ್ನಾ
ಮಕ್ಕಳಿಗೆ ಉಣಿಸಿ ಉಳಿದಷ್ಟು ಮಾಡುರೋ ಭೋಜನಾ
ಉಳಿಯದಿದ್ದರ ಕಾಲಹರಣ ಹಾಕುವರೋ ನಿತ್ಯದಿನಾ || ೧ ||

ಇ|| ಮಗಳ ಮ್ಯಾಲೆ ಪ್ರೇಮಾ ತಾಯಿ ಜ್ವಾಪಾನಾ
ಬಂಗಾರ ಬೇಡಿದಷ್ಟು ಮಗಳಿಗೆ ಬಲ್ಲಿದ ಸಾವುಕಾರ ಜನಾ
ಏರು || ಚಲುವಿಕೆ ನೋಡಿ ಮಗಳಿಗೆ ಹಾಕ್ಯಾರೋ ದಾಗೀನಾ
ಬಳಿ ವಂಕಿ ರುಳ್ಳಿ ಸರಗಿ ಕಾಲೊಳು ಪೈಜಣಾ
ಕೊರಳೊಳು ದಾಗಿನಾ ಚಂದ್ರಹಾರ ಕಂಠಿಯನಾ
ಬಂಗಾರ ಪಟ್ಟಿ ರೇಶಿಮಿ ದಟ್ಟಿ ಮೂಗಿನ್ಯಾಗ ನತ್ತವನಾ || ೨ ||

ಬೇಡಿದ ದಾಗೀನ ಹಾಕಿ ಮಾಡಿಕೊಂಡಾರೋ ಲಗ್ನನಾ
ಪ್ರೀತಿಯಿಂದ ಇಟ್ಟಾರೋ ಸೊಸಿಗೆ ಮಾಡಿ ಬಹಳ ಪ್ರೇಮಾ
ಏರು || ತೌರುಮನಿ ವ್ಯಸನಾ ಮರತಾಳ ಸುಂದರಿನಾ
ಪಂಚಮಿ ಬಂದೀತು ಹೆಣ್ಣುಮಕ್ಕಳ ಚಲ್ಲಾಟನಾ
ತಾಯಿ ತಂದಿ ಮಗಳಿಗೆ ನೆನಿಸಿ ಮಾಡುರೋ ದುಃಖವನಾ
ಕರಕೊಂಡ ಬರಬೇಕೋ ಹೋಗಿ ನೀ ನಿಮ್ಮ ತಂಗಿಯನಾ || ೩ ||

ಇ|| ಎತ್ತಿಗೆ ಸಬರವನಾ ಬಿಗಿದನಾಕ್ಷಣಾ
ತಂಗಿ ಕರಿಲಾಕ ಹೊಂಟಾನು ಆಗಿ ಸಿಂಗಾರನಾ
ಏರು || ಗೆಳತ್ಯಾರ ಕೂಡ ಕುಂತಾಳೋ ಬಾಲಿ ಆಡುದಕ ಆಟವನಾ
ಅಣ್ಣ ಬಂದದ್ದು ನೋಡಿ ಬಿಟ್ಟ ಹೊಂಟಾಳ ಗೆಳತ್ಯಾರನಾ
ಹಾಂಹಾಂ ಕಾಲಿಗೆ ನೀರವನಾ ಕೊಟ್ಟಾಳಾಕ್ಷಣಾ
ಅಣ್ಣನ ಕೊರಳಿಗೆ ತೆಕ್ಕಿಹಾದು ಅಳತಾಳೊ ಒಂದೇ ಸವನಾ || ೪ ||

ಇ|| ಪಂಚಾಮೃತದಡಗಿ ಮಾಡ್ಯಾಳೋ ಉಣಿಸುದಕ ಅಣ್ಣನಾ
ಬಿಸನೀರಿಟ್ಟು ಜಳಕ ಮಾಡಿಸ್ಯಾಳೋ ಭರದಿಂದ ಆಕ್ಷಣಾ
ಏರು || ಅಮೃತಡಗಿಯನಾ ಉಣಿಸ್ಯಾಳೋ ಮಾಡಿ ಪ್ರೇಮಾ
ಉಂಡು ಕುಂತು ಮಾವನ ಕೇಳ್ಯಾನೋ ಕಳಸರಿ ನಮ್ಮ ತಂಗಿಯನಾ
ಕಳಿಸುದಕ ಎರಿದಾರೊ ಸೊಸಿಗೆ ಇಡಸ್ಯಾರೋ ದಾಗಿನಾ
ಜರದ ಮಡಿ ಉಡಿಸ್ಯಾರೊ ಸೊಸಿಗೆ ಮಾಡಿ ಬಾಳ ಪ್ರೇಮಾ || ೫ ||

ಇ|| ಕರಕೊಂಡ ತಂಗಿಯನ ಹಿಡಿದಾನೋ ಹಾದಿಯನಾ
ಹಕ್ಕಿಪಕ್ಕಿ ಸುಳುವು ಇದ್ದಿಲ್ಲಾ ಹಳ್ಳಿತ್ತೊ ಇಂಜೆನ್ನಾ
ಏರು|| ಹಿಂದ ಮುಂದ ಮಂದೀಯ ನೋಡಿ ಇಳಿಸ್ಯಾನೋ ತಂಗಿಯನಾ
ಮೈಮ್ಯಾಲಿನ ದಾಗೀನ ಬಿಚ್ಚಂತ ಹಿಡಿದಾನೋ ರಟ್ಟೆಯನಾ

ಬಿಚ್ಯಾನೋ ದಾಗೀನಾ ಕೆಡವಿ ತಂಗಿಯನಾ
ಕೈಕಾಲಕಟ್ಟಿ ಒಗಿದಾನೊ ಕೊಲ್ಲುದಕ ತಂಗಿಯನಾ || ೬ ||

ಇ|| ಕೊಲ್ಲುದಕ ತೆಕ್ಕಿ ಹಾದ ನೆಗವಿನ ಕಲ್ಲವನಾ
ಸರ್ಪಕಚ್ಚಿ ಬಿದ್ದ ಬಳಲತಾನೋ ಒಂದೇ ಸವನಾ
ಏರು || ನೋಡಿ ಅಣ್ಣನಾ ನೆನಸೂಳೋ ಸಾಂಬನ್ನಾ
ಕೈಕಾಲ ಬಿಚ್ಚಿಕೊಂಡ ಎದ್ದ ತೆಕ್ಕಿ ಹಾದಾಳೋ ಅಣ್ಣನ್ನಾ
ಅಣ್ಣನ ತುಟಿಗಲ್ಲ ಹಿಡಿದು ಅಳತಾಳೋ ಒಂದೇ ಸವನಾ
ತಾಯಿ ಮುಂದ ಏನಂತ ಹೇಳಲಿ ಅಣ್ಣನ ವರ್ತಮಾನಾ || ೭ ||

ಇ|| ಅಣ್ಣನ ಪ್ರಾಣಾ ಉಳಿಸೋ ಭಗವಾನಾ
ಮೈಮ್ಯಾಲಿನ ದಾಗೀನಾ ಮಾಡುವೆ ದಾನಾ
ಏರು || ಗಿಡಕ ಹಗ್ಗಹಾಕಿ ನಿಂತಾಳೋ ಕೊಡುವುದಕ ಪ್ರಾಣಾ
ಸಾಕ್ಷಾತ್ ಇಳಿದಾನೋ ನೋಡಿ ತಪ್ಪಿಸಿ ರೂಪವನಾ
ಅಣ್ಣನ ಪ್ರಾಣಾ ಉಳಿಸೋ ನೀ ಭಗವಾನಾ
ಮೈಮ್ಯಾಲಿನ ದಾಗಿನಾ ಮಾಡುವೆ ನಾ ದಾನಾ || ೮ ||

ಇ|| ಬಾಲಿ ಭಕ್ತಿಗೆ ಮೆಚ್ಚಿ ಒಲಿದಾನೋ ಶಂಕರನಾ
ಮಾಯಾಗಿ ಹ್ವಾದಾನೋ ಕೂಡಿಸಿ ಅಣ್ಣ ತಂಗಿಯನಾ
ಏರು || ಸೈಯ್ಯದ ಪೀರನ ಕೂನಾ ಹಿಂದ ಶಾಹೀರ ಜನಾ
ಜರದ ಗಲ್ಲೀಪ ಹೊಚ್ಚಿ ಮಾಡುರೋ ಸೇವೆಯನಾ ||೯||

ಕಲಿವಿಕದ ಕತಿಯ ಕೇಳರಿ ಕುಂತಿರು ಜನಾ
ಕೈಮುಗಿದು ತಿಳಿಸುವೆ ಬಡವನ ಸಾರಾಂಶವನಾ ||

*** * ***

**೨. ಗಂಡನಿಗೆ ಮೋಸ ಮಾಡಿದ ಹೆಣ್ಣಿನ ಪದಾ**

ಕೂಡಿರಿ ಜನಾ ಹೇಳುವೆ ನಾನು ಒಂದು ಬಯ್ಯಾನಾ
ಗಂಡನ ಮ್ಯಾಲೆ ಕಪಟವ ಮಾಡಿದ ಹೆಣ್ಣಿನ ಚರಿತ್ರವನಾ || ಪಲ್ಲವಿ ||

ಏರು || ಹಾಂ ಹಾಂ ಒಂದು ಊರೊಳಗೆ ಇದ್ದರು ಗಂಡ ಹೆಂಡಿರು
ಪ್ರೀತಿಲೆ ಬಾಳ್ವೆ ಮಾಡುತಿದ್ದರು ಬಾಳ ಹಸನಾ
ಗಂಡನ ಮನಸು ಹೈನದ ಮೇಲೆ ಆತೋ ಸಂಪೂರಣಾ || ೧ ||

ಇ|| ಸಾವಿರ ರೂಪಾಯಿ ಕೊಟ್ಟು ತಂದಾನೋ ಒಂದು ಎಮ್ಮಿಯನಾ
ಮಡದಿಗೆ ಹೇಳತಾನೋ ಹೈನ ಮಾಡೋ ನೀನಾ
ಏರು || ಹಾಂ ಹಾಂ ಹುರುಪುಲಿಂದ ಮಾಡೋ ಹೈನವನಾ

ಹುಲ್ಲು ತರುತೇನಿ ಎಮ್ಮಿಗೆ ಸಾಲುಹಂಗ ನಾನಾ
ಮಡದಿ ಹೇಳತಾಳ ಗಂಡನಿಗೆ ಕೇಳರಿ ಸಂಪೂರಣಾ || ೧ ||

ಇಳು || ಕಾಗಿ ಕಾಟ ಹೆಚ್ಚಾಗ್ಯಾವ ಎರೆಹೊಲದಾಗ ಇನ್ನಾ
ಲಗು ಮನಿಗೆ ಬರಬ್ಯಾಡರಿ ನೀವಿನ್ನಾ
ಏರು || ಗಂಡನ ಹೊಲಕ ಕಳಿಸಿ ಹಿಂಡ್ಯಾಳೋ ಮನಸಿನ ತಕ್ಕ ಎಮ್ಮೀನ
ಶಿಸ್ತಾಗಿ ಕೂತಾಳೋ ಸಮನೆಲಕ ಬಾಲಿನ
ಹಾಲುಬಸ್ತ ಹಣಿದಾಳೋ ಆಗುವಂಗ ಮನಕಿನ್ನಾ || ೩ ||

ಇ|| ಗಂಡ ಹೊಲದಿಂದ ಬಂದ ಹೇಳತಾಳೋ ಅವನ ಮುಂದಿನ್ನಾ
ಎಂಥ ಎಮ್ಮಿ ತಂದು ಕೊಟ್ಟೇರಿ ನೀವಿನ್ನಾ
ಏರು || ಶೆರಿ ಮುಕ್ಕ ಹಿಂಡವಲ್ಲದು ಎಮ್ಮಿ ಲಕ್ಷಣದ ಗೆರಿಬಾಳ ಚಲೋದಿಲ್ರಿ ಏನಾ
ಸುಮಾರು ಇದ್ದಮ್ಯಾಲೆ ತರೂನಂತ ಇನ್ನೊಂದನ್ನಾ
ದಿನಂ ಪ್ರತಿ ಊಟ ಮಾಡಿ ಆದಳು ತಿಗರಿಯ ಸಮಾನಾ || ೪ ||

ಇ|| ತಿಂದು ತಿರುಗಾಕ ಹತ್ಯಾಳಪ್ಪ ಕ್ವಾಣನ ಸಮಾನ
ಗಂಡ ಮನದೊಳು ಮಾಡತಾನೋ ಬಹಳ ಆಲೋಚನಾ
ಏರು || ದ್ಯಾಸಕ್ಕ ಬಂತ್ರಿ ಆಕ್ಷಣಾ ಹೋಗಿ ಬಿದ್ದ ಸಾದುರ ಪಾದದ ಮ್ಯಾಲಿನ್ನಾ
ಆದದ್ದು ಹೇಳತಾನೋ ಮನಿಯ ವರ್ತಮಾನಾ
ಸೋದ ಮಾಡಿ ಸಾಧು ಒಂದು ಯಂತ್ರ ತಯ್ಯಾರ ಮಾಡ್ಯಾನ || ೫ ||

ಇ|| ಭೂತಕಾಳಿ ಯಂತ್ರವನಾ ಮಾಡಿಕೊಟ್ಟಾನಾ
ಹೋಗಿಕಟ್ಟೋ ನೆಲವಿನ ಕಾಲಿನ ಮ್ಯಾಲೆ ಇದನ್ನಾ
ಏರು || ತಡಮಾಡದೆ ಹೋಗಿ ನೆಲವಿನ ಕಾಲಿನ ಮ್ಯಾಲೆ ಕಟ್ಯಾನ
ಹಾಲ ಸ್ವಾರಿ ಇತ್ತರಿ ನೆಲವಿನ ಮ್ಯಾಲಿನ್ನಾ
ಹಾಲಿನ ಮ್ಯಾಲ ಅವಲಂಬನಾಗಿ ಹೋಗ್ಯಾನ ಹೋಲಕಿನ್ನಾ || ೬ ||

ಇ|| ಮಂದಿಯ ಸುಳುವು ಕಾಣಲಾರದೆ ಕೈ ಹಾಕ್ಯಾಳ ಸ್ವಾರಿಗೆ ಬಾಲಿಗೆ ನಾ
ಭೂತಕಾಳಿಯಂತ್ರದ ಶಕ್ತಿ ಕೈ ಹಿಡಕೊಂಡು ಬಿಟ್ಟೇತು ಆಕೀನಾ
ಏರು || ಜೋತು ಬಿದ್ದಾಳೋ ತೋಳ ಬಾವಲಿಯ ಸಮಾನಾ
ಒಂದು ಎಮ್ಮಿಕರ ಬಾಳ ಬೆರಕಿತ್ತು ಅರಬಿ ತಿನ್ನೂದು ಕಲಿತಿತ್ತರಿ ತಾನಾ
ಹರಕೊಂಡು ಬಂದು ಕಟ್ಟಿಯ ಮೇಲೆ ನಿಂತಿತ್ರಿ ಸಂಪೂರಣಾ || ೭ ||

ಇ|| ಉಟ್ಟ ಸೀರಿಯ ತಿಂದು ಬಿಟ್ಟಿತು ಆಕ್ಷಣಾ
ಶೆರಿಬಟ್ಟೆ ಇಲ್ಲದಂಗಾತ್ರಿ ನಾರಿಯ ಮೈಮ್ಯಾಗಿನ್ನಾ
ಏರು || ಹೊರಗಿದ್ದ ಒಬ್ಬ ದಾಸಪ್ಪ ಭಿಕ್ಷೆಗೆ ಒಂದಾನ
ಗೋವಿಂದ ಗೋವಿಂದ ಅಂತ ಆಕಿಯ ಮನಿಗೆ ಬಂದಾನ
ಬಾಲಿಯನೋಡಿ ಅಯ್ಯೋ ಭಗವಾನಾ ಅಮ್ಮನವರದು ಸಿಗವಲ್ಲದು ನನಗ ಕೂನಾ || ೮ ||

ಇ|| ದಾಸಯ್ಯನ ಮಾರಿ ನೋಡಿ ಬಾಲಿ ಕರಿಯತಾಳ ಆಕ್ಷಣಾ
ಬಿಡಿಸ ಬರ್ರಿ ಬಲಿಯಾಗ ಬಿದ್ದೇನಿ ನಾನಾ
ಏರು || ಹೊರಗ ಬಂದು ಕೊಡತೇನಿ ಗೋಪಾಳ ಪುಟ್ಟಿ ತುಂಬ ಜೋಳವನಾ
ಅಬರು ಉಳಿಯುದಿಲ್ಲ ನಂದು ಬಿಡಿಸಬಾರೋ ದಾಸಯ್ಯಾ ಇನ್ನಾ
ದಾಸಯ್ಯ ಆಸೇಕ ಬಿದ್ದು ಎಮ್ಮಿ ಕರಾ ಹೊಡದಾಕ್ಷಣಾ || ೯ ||

ಇ|| ಸುಮ್ಮನೆ ಹೋಗಬಾರದೇನ್ರಿ ಜಂಬಮಾಡಿ ಬಿಡಸಾಕ ಹೋಗ್ಯಾನಾ
ಭೂತಿಕಾಳಿ ಯಂತ್ರದ ಶಕ್ತಿ ಕೈಹಿಡಕೊಂಡು ಬಿಟ್ಟಿತ್ರಿ ಆಕ್ಷಣಾ
ಏರು || ಜೋತುಬಿದ್ದ ಅಮ್ಮನವರ ಬಗಲಾಗ ತತ್‌ಕ್ಷಣಾ
ಹೊಲದಿಂದ ಗಂಡ ಬಂದು ನಿಂತು ನೋಡ್ಯಾನ
ನೀಟಾದ ಬ್ಯಾಕೋಲ ಕೈಯೊಳಗ್ಹಿಡಿದು ದಾಸಯ್ಯನ ಬೆನ್ನಮ್ಯಾಲೆ ಬಡದಾನ || ೧೦ ||

ಇ|| ದಾಸಯ್ಯಂದು ಬೆನ್ನು ಬಾತು ಎಳೆದು ಹಾಕತಾನ ಉಸರನ್ನಾ
ಆಗ ದಾಸಯ್ಯ ಬೇಡಿಕೊಳ್ಳತಾನ ಬಡಿಯಬ್ಯಾಡರಿ ನನ್ನಾ
ಏರು || ಬೆನ್ನು ಬಾತು ಹೋಯಿತ್ರಿ ಈ ಅಮ್ಮನವರ ಕಾಲಾಗ ಆಕ್ಷಣಾ
ಎದ್ದ ವ್ಯಾಳೆ ಬಾಳ ಸುಮಾರ ಐತೆ ಬುದ್ದಿಯಿಲ್ಲದೆ ಕೆಟ್ಟೆ ನಾನಾ
ಭಿಕ್ಷೆಕ ಬರುದಿಲ್ಲಪ್ಪ ನಿಮ್ಮ ಓಣ್ಯಾಗ ನಾ ಸಾವುತನಾ || ೧೧ ||

ಇ|| ಬಾಲಿ ಹೇಳತಾಳೋ ಗಂಡನಿಗೆ ಕೇಳೋ ಭಗವಾನಾ
ಹಾಂಹಾಂ ಇಷ್ಟ ಸಾಕು ಸಾಕಾಗಿ ಹೋಯಿತ್ರಿ ನನಗಿನ್ನಾ
ಏರು || ಉಂಡು ಮಾಡೂದಿಲ್ಲಾ ಇಂಥ ಬಾಳ್ವೆವನಾ
ಗಂಡನ ಮನದೊಳಗ ಕರುಣ ಬಂತ್ರಿ ಬಿಚ್ಯಾನ ಯಂತ್ರವನಾ
ಸಾಷ್ಟಾಂಗ ಹಾಕ್ಯಾಳೋ ಗಂಡನ ಪಾದದ ಮೇಲೆ ಆಕ್ಷಣಾ || ೧೨||

ಇ|| ಅಲ್ಲಿಯಲಿಂದ ಬಾಳ್ವೆ ಮಾಡುವರೋ ಬಾಳ ಹಸನಾ
ತಿನಸಮಾರಿ ಹೆಂಡರ ಕೈಯಾಗ ಕೊಡಬ್ಯಾಡರಿ ಹಿರೇತನಾ
ಏರು || ಆದಂತ ಕಥನ ಕೈಯ ಮುಗಿದು ಹೇಳೇನಿ ನಾನಾ
ತಪ್ಪು ಅಕ್ಷರ ಬಂದರ ಕ್ಷಮಾ ಮಾಡರಿ ನನ್ನಾ
ಕಲಿಗಿಗೆ ಇಡಸತೇನಿ ಬಿಲಾವರ ಬಳಿಯನಾ || ೧೩ ||

ಇ|| ತುರಾಯಿ ಹಚ್ಚೆ ಮೆರೆಯತೇನಿ ನಾನಾ
ಕೇಳ ನೀ ನಿಂತಕೊಂಡು ಹೈವಾನಾ
ಏರು || ಹಾಂಹಾಂ ಮೋಜ ಮಾರನ ಬಸರಿ ಇರುವುದು ಬಾಳ ಹಸನಾ
ಚಿಕ್ಕಮಸೂತಿ ಹುಸೇನ ಪೀರರ ದಯಾ ನಮ್ಮಮ್ಯಾಲೆ ಪೂರ್ಣಾ
ಫಕರು – ನಬಿಯನ ಕವಿ ಬಹಳ ಹಸನಾ || ೧೪ ||

* * *

**೩. ಅತ್ತಿ ಸೊಸಿ ಕಥನಾ**

ಪೃಥಿವಿಯೊಳಗ ಪಾಪವು ಹೆಚ್ಚಾತ್ರಿ ಜನಾ
ಬಿಚ್ಚಿ ಹೇಳುವೆ ನಾ ಸೊಸಿ ಅತ್ತಿ  ಕವನಾ
ಸೋಸಿ ನೋಡರಿ ಇದು ಶಾಣ್ಯಾರು ಸಂಪೂರಣಾ
ಶಿಸ್ತಿಲಿಂದ ಮಸ್ತ ಮಾಡೇನಿ ಅತ್ತಿ ಸೊಸಿ ಕದನಾ
ಸೊಸಿ ಕುಂತು ಅತ್ತಿ ಕೊಲ್ಲಿಸು ಕತಿ ಹೇಳುವೆ ನಾನಾ || ೧ ||

ಇ|| ಅತ್ತಿ ನಿತ್ಯೆ ಮಾಡುವಳೋ ಸೊಸಿಗೆ ಜ್ವಾಪಾನಾ
ಅತ್ತಿ ಅಂದ್ರ ಸೊಸಿ ಅಗದಿ ಸೇರತಿದ್ದಿಲ್ಲೊ ಪೂರಣಾ
ಏರು ||  ಹೊರಗಿನ ಮಂದಿ ಮ್ಯಾಗ ಇತ್ತೊ ಆಕಿ ಯಸನಾ
ಸುದ್ದಿಕೇಳಿ ಸದ್ದೇಕ ಹಿಡಿಸಬೇಕಂತಾಳ ಅತ್ತಿಯನಾ
ಬಂದ ಮಾಡಿ ಸಂದಕ್ದಾಕಿ ಕೊಲ್ಲಿಸಬೇಕತ್ತೆವನಾ || ೨ ||

ಬಾಂವಕಿ ಕಾಡತಾವ್ರಿ ಏನ ಹೇಳಲಿ ಒಂದೇ ಸವನಾ |
ಗಂಡನ ಮುಂದ ಬಂದು ಹೇಳ್ಯಾಳೋ ಮೋಹನಾ |
ಏರು || ನಿಮ್ಮ ತಾಯಿ ಹೊಟ್ಯಾಗಿನ ಕರಳಕಾಜವನಾ
ಇಂದು ತಂದುಕೊಟ್ಟರ ನನಗ ಆಗೂದು ಸಮಾಧಾನಾ
ಗರಜಿಲಿಂದ ಗರ್ಭಿಣಿ ಆಗೇನ್ರಿ ನಾನಾ || ೩ ||

ಮಳ್ಳ ಮನಶಾ ಕಳ್ಳ ಹಿಡಿಲಿಲ್ಲಾ ಹಡದ ತಾಯವ್ವನಾ
ಹೇಸಿರಂಡಿ ಹೆಂಡತಿ ಮಾತು ಕೇಳ್ಯಾನೋ ಸ್ವಾನಾ
ಏರು || ಹಡದ ತಾಯಿಗೆ ಅಂತಾನರಿ ನಡಿಯವ್ವಾ ನೀನಾ
ನೋಡಲಾಕ ಹೋಗೂಣು ಉಳವಿ ಗೋಕರಣಾ |
ಮಾಡಿದ ಪಾಪಾ ಎಲ್ಲಾ ಹೋಗಿ ಬರತೈತಿ ಪುಣ್ಯವನಾ || ೪ ||

ಮುಪ್ಪಿನ ಮುದುಕಿ ಜಪ್ಪನೆದ್ದು ಕಟ್ಟಿದಾಳ ಬುತ್ತಿಯನಾ
ಎತ್ತಿನ ಮ್ಯಾಲೆ ಬುತ್ತಿಯ ಹೇರಿ ಹತ್ತಿಸಿದ ತಾಯಿಯನ್ನಾ
ಏರು || ಹಾದಿಬಿಟ್ಟು ಅಡವಿಗೆ ಹೊಡೆದಾನ ಎತ್ತನ್ನಾ
ಹಡೆದ ತಾಯಿ ಅಂತಾಳರಿ ತಪ್ಪಿದೆಪ್ಪ ಹಾದಿಯನಾ
ಎತ್ತಿನ ಮ್ಯಾಗ ಕುಂತ ನೀನು ನೋಡಪ್ಪ ದಾರಿಯನಾ || ೫ ||

ಇಲ್ಲೆ ಐತಿ ಇಲ್ಲೆ ಬಾರವ್ವಾ ಗೋಕರಣ ದಾರಿಯನಾ
ಮುಂದ ಬಂದ ಕೂಡೇತಿ ಇರವ್ವಾ ನೀ ಸುಮ್ಮನಾ
ನಡು ಹಾದಿಗೆ ಗಡಾ ಹೋಗಿ ಇಳಿಸಿದ ತಾಯವ್ವನಾ
ತಂದ ಮಾದ್ಲಿ ಬುತ್ತಿಗಂಟ ಬಿಚ್ಚವ್ವಾ ನೀನಾ ||
ಉಂಡ ಮನಗಂಡು ತೋರಸತೇನಿ ಉಳವಿ ಗೋಕರಣಾ || ೬ ||

ಕಟ್ಟು ಕಟ್ಟವ್ವಾ ಬುತ್ತಿಯನಾ ಈಗ ಸುಮ್ಮನಾ
ತಾಯಿ ಕಂಡು ಮಗಾ ಆಗ ಅಂತಾನೋ ಬೇಮಾನಾ
ಏರು || ಹೊತ್ತ ಆಗೇತಿ ಮತ್ತ ತಿನ್ನುವಿಯಂತ ಕಟ್ಟವ್ವಾ  ಬುತ್ತಿಯನಾ
ಕೈಯೊಳಗಿನ ರೊಟ್ಟಿ ಕಸಗೊಂಡ ಆಗ ಬೇಮಾನಾ
ಕರುಣ ಬರಲಿಲ್ಲರಿ ಅವಗ ಕಲ್ಲಿನಂತಾ ಜಲುಮಾ || ೭ ||

ಕೈಯಾಗ ಹಿಡಿದಾನಾ ಬಿಚ್ಚಿಗತ್ತಿಯನಾ
ನೋಡದೆ ತಾಯಿಯ ಎದಿಮ್ಯಾಲೆ ಕುಂತಾನ ಬೇಮಾನಾ
ಏರು || ಹಡದ ತಾಯಿ ಗಾಬಾಗಿ ಅಂತಾಳೋ ಯಾಕೋ ನನ್ನ ಮಗನಾ
ಇದು ಏನಪ್ಪಾ ನಿನ್ನಾ ಉಳವಿ ಗೋಕರಣಾ ||
ಹಂತಾದು ಏನು ನಿನಗ ಮಾಡೇನಿ ನಾನಾ || ೮ ||

ಹೆಂಡತಿ ಮಾತು ಕೇಳಿ ಕೊಲ್ಲಬ್ಯಾಡಪ್ಪಾ ನೀನಾ
ಆಕಿಯನ್ನ ಬಿಟ್ಟರೆ ಮತ್ತೊಂದು ಮಾಡತೇನಿ ಲಗ್ಗನಾ
ಏರು || ತಡಾ ಮಾಡದೆ ಗಡಾಹೋಗಿ ಕೋದಾನ ಗೋಣಾ
ತನ್ನ ತಾಯಿ ಹೊಟ್ಯಾಗಿನ ಕರಳ ಕಾಜವನಾ
ಎತ್ತಿನ ಮ್ಯಾಲೆ ಹೇರಿಕೊಂಡು ಹಿಡಿದಾನ ದಾರಿಯಾನಾ || ೯ ||

ಮುನಿಯೊಳಗ ಮಾಡ್ಯಾಳ್ರಿ ಹೇಣತಿ ಯೋಚನಾ
ಗಂಡನ್ನ ಹಿಡಿಸುದಕ ತಗದಾಳ ಯುಕ್ತಿಯನಾ
ಬಬ್ಬಾಟ ಮಾಡಿ ಬೈಲಿಗೆ ತರಬೇಕ ಆತನ್ನಾ
ಹಿಡಕೊಂಡ ಹೋಗಿ ಕೊಡತಾರ ಅವಗ ಗಲ್ಲು ಫಾಸೇದ ಹುಕುಮಾ
ಗರದಿಲಿಂದ ಒಬ್ಬಾಕಿ ಇರಬೇಕರಿ ನಾನಾ || ೧೦ ||

ಪಂಚರು ನೋಡ್ಯಾರ ಗಂಟ ಬಿಚ್ಚಿ ಕಟ್ಟಿದ ಕಾಜವನಾ
ಸಿಟ್ಟು ಹತ್ತಿ ಕಂಬಕಕಟ್ಟಿ ಬಡಿತಾರ ಆತನ್ನಾ
ಕಟ್ಟಿ ಬಡಿದಾಗ ಶ್ರೇಷ್ಟ ತಾಯಿಗೆ ಹುಟ್ಟಿತೋ ಕರುಣಾ
ಕರುಳುಗಳು ಹೊರಳಾಡಿ ಅಂತಾವೊ ಬಡಿಬ್ಯಾಡ್ರಿ ಮಗನ್ನಾ
ಖಾಸ ಸೋಸಿ ಮಾಡಿ ಕೊಲ್ಲಿಸ್ಯಾಳರಿ ನನ್ನಾ || ೧೧ ||

ಸೊಸಿಗೆ ಕರಿಸ್ಯಾರಿ ಆಗ ಕಛೇರಿಗಿನ್ನಾ
ಸುಬೇದಾರ ತಗೊಂತಾನೊ ಆಕಿ ಜವಾಬನಾ
ಏರು || ಅಂತ ಮುಂದಕ ಕರದಾರ್ರಿ ಆಗ ಆತನ್ನಾ
ಗಂಟ ತಗೊಂಡು ಹೊಂಟ ಹೋಗೋ ಬಿಟ್ಟೇವಿ ನಿನ್ನಾ
ತಟ್ಟನ ಹೋಗಿ ಕೊಟ್ಟು ಬಾರೋ ನಿಮ್ಮ ತಾಯಿಗೆ ಮಣ್ಣಾ || ೧೨ ||

ಮಣ್ಣು ಕೊಡುವಾಗ ಕಣ್ಣೀರು ತನ್ನಿಂದ ತಾನಾ
ಯಾಕ ಕೊಂದೆನೊ ಸ್ವಾಮಿ ನನ್ನ ತಾಯವ್ವನಾ

ಏರು || ಇಳಿದಾನ್ರಿ ಬೆತ್ತ ತಗೊಂಡು ಭಗವಾನಾ
ಬಡದು ಎಬ್ಬಿಸಿದಾನ್ರಿ ಮುದುಕಿ ಆಕ್ಷಣಾ
ಆವಾಗ ಕೊಡಿಸ್ಯಾನ್ರಿ ತಾಯಿ ಮಗನ್ನಾ || ೧೩ ||

ಮಗಾ ಕುಂತು ನೋಡ್ಯಾನ್ರಿ ತಾಯಿ ಮುಖವನ್ನಾ
ಹಡದ ತಾಯಿಗೆ ಕರೆದುಕೊಂಡು ಬಂದಾನ ಸುಮ್ಮನಾ
ಏರು || ಸೊಸಿಗೆ ಬಡದಾರೊ ಆಗ ಸುಣ್ಣ ಕ್ಯಾಮಿಯನಾ
ಕತ್ತಿಮ್ಯಾಲ ಹತ್ತಿಸಿ ಮೆರಸ್ಯಾರ ಆಕಿಯನಾ
ಆತ ನೋಡ್ರಿ ಇಲ್ಲಿಗೆ ಅತ್ತಿ ಸೊಸಿ ಕಥನಾ || ೧೪ ||

ಹ್ಯಾಂಗ ಐತಿ ಮಂಗರಂಡಿಯರ ಕವನಾ
ಅಕ್ಷರ ಸರಿಯಾಗಿ ಬರಲಿ ಒಂದೇ ಸವನಾ
ತೊರಗಲ್ಲ ಇರುವದು ಗುರುವಿನ ಸ್ಥಾನಾ
ನರಗುಂದ ಊರಾಗ ಮಕ್ತುಂ ಬಾವಾ ಶರಣಾ
ಏರು || ದಯ ನಮ್ಮ ಮ್ಯಾಗ ಇರುವದು ಸಂಪೂರಣಾ
ಉಸ್ತಾದ ರಾಜೇಸಾಬ ಮಾಡಿದ ಕಥನಾ
ಶಿರಬಾಗಿ ನಾ ಮಾಡುವೆ ನಿಮಗೆ ಶರಣಾ
ಇಷ್ಟಕ ಮುಗಿದಿತ್ರಿ ಅತ್ತಿ ಸೊಸಿ ಕವನಾ || ೧೫ ||

*** * ***

**೪. ಮುಂಗ್ಲಿಮರಿ ಪದಾ**

ಕೇಳರಿ ಬಯಾನಾ ಸ್ವಲ್ಪ ಇಟ್ಟು ಧ್ಯಾನಾ
ಗುರು ಹಿರಿಯರು ಸಣ್ಣ ದೊಡ್ಡವರಾ ಮಾಡುವೇನ್ರಿ ಶರಣಾ
ಇರಲಿ ನಿಮ್ಮ ದಯಾ ಅಂತಃ ಕರುಣಾ | ತಿಳಿಸ್ತೇನಿ
ಮುಂಗ್ಲೀಯ ಬಯ್ಯಾನಾ | ಆದಂತ ಬಯ್ಯಾನಾ || ೧ ||

ದ್ವಾರ್ನಳ್ಳಿ ಊರಾಗಿನ್ನ ಸತಿಪತಿ ಗೌರತನಾ
ಇದ್ದಾರ ಗಂಡ ಹೆಂಡತಿ ಬಾಳ ಪ್ರೀತಿಲಿಂದಿನ್ನಾ
ಅಗಲಿ ಇರತಿದ್ದಿಲ್ರಿ ಒಂದು ಚಣಾ
ಅವರಿಗಿದ್ದಿದಿಲ್ರಿ ಸಂತಾನಾ | ಇತ್ತೋ ಬಾಳ ವ್ಯಸನಾ || ೨ ||

ಕಿಡಿಗೇಡಿ ಭಗವಾನಾ ಇಷ್ಟ ಬರೆದಿದ್ದನೇನಾ
ದೇವರು ಮ್ಯಾಲಾ ಹಾಕಲಿಲ್ಲಾ ತೂರಿನಂತಾಳ ಮಣ್ಣಾ
ಅವನಲ್ಲಿ ಇಲ್ಲಾ ಅಂತಃಕರುಣಾ
ಬಂಜೆ ಎಂದು ಕರಿತಾರೋ ಸರ್ವಜನಾ | ಇದಕೆ ಮಾಡಲೇನಾ || ೩ ||

ಮಾತಾ ಕೇಳೇ ಹೆಣ್ಣಾ | ಚಿಂತೆ ಮಾಡಬೇಡ ನೀನಾ
ವಾರೀಸ ಸಾಬೀಕ ಬರದ ಲಿಖಿತ ತಪ್ಪುದಿಲ್ಲೊ ಯಾರಾದರೇನಾ
ದೇವರಿಟ್ಟಂಗ ಇರಬೇಕು ಸುಮ್ಮನಾ
ಮಾಡಬೇಕು ಕಾಲ ಹರಣಾ || ೪ ||

ಬ್ಯಾಡರ ಸಿದ್ದಣ್ಣಾ ಮುಂಗ್ಲಿ ಮರಿ ತಂದಾನಾ
ನೋಡಿದ ಚಣಕೆ ಆಗ್ಯಾನ ಸಿದ್ದಣ್ಣ ಕೊಡೋ ಮುಂಗ್ಲಿಮರೀನಾ
ಮುಂಗ್ಲಿಮರಿ ತೊಗೋತೀನಿ ನಾನಾ
ಮೂರು ರೂಪಾಯಿ ಕೊಟ್ಟ ಅದೇ ಚಣಾ | ತೊಗೊಂಡು ನಡದಾನಾ || ೫ ||

ಮನಿಗೆ ಬಂದಾನಾ ಅಂತಾನೋ ಮಡದಿಗೆನಾ
ಮಕ್ಕಳಿಲ್ಲಂತ ಹಲಬೂತ ತಂದೇನಿ ಮುಂಗ್ಲಿ ಮರೀನಾ
ಇದಕ ತಿಳಿ ನಿನ್ನ ಹೊಟ್ಟಿ ಮಗನಾ |
ನಮಗ್ಯಾರ್‍ಯಾನಾ ಹೇಳೆ ನೀನಾ | ನೋಡಿಕೊಳ್ಳೆ ನೀ ದಿನಾ ದಿನಾ || ೬ ||

ಮನಿಗೆ ಬಂದಾನಾ ಅಂತಾನೋ ಮಡದಿಗೆನಾ
ಮಕ್ಕಳಿಲ್ಲಂತ ಹಲಬೂತ ತಂದೇನಿ ಮುಂಗ್ಲಿಮರೀನಾ
ಇದಕ ತಿಳಿ ನಿನ್ನ ಹೊಟ್ಟಿ ಮಗನಾ |
ನಮಗ್ಯಾರ್‍ಯಾನಾ ಹೇಳೆ ನೀನಾ | ನೋಡಿಕೊಳ್ಳೆ ನೀ ದಿನಾ ದಿನಾ || ೬ ||

ಮುಂಗ್ಲಿಯ ಕಾಲ್ಗುಣ ಇತ್ತೊ ಸುಭಲಕ್ಷಣಾ
ಅವರಿಗೆ ಸಂತಾನ ಕೊಟ್ಟಾನೋ ಭಗವಾನಾ
ಹುಟ್ಟಿತೋ ಒಂದು ರತನಾ | ಮುಂಗ್ಲಿಕೂಸಿಗೆ ಒಂದೇ ಸವನಾ
ಮಾಡ್ಯಾರೋ ಜೋಪಾನಾ | ತಿಳಿಕೋರಿ ನೀವು ಇದರ ವರ್ತಮಾನಾ || ೭ ||

ಅಣ್ಣತಮ್ಮರು ಇಬ್ಬರು ಕೂಡಿ ಆಡ್ತಾರೋ ಸಂಚಿತಾನಾ
ಮುಂಗ್ಲಿ ಕೂಸಿಗೆ ನೋಡಿ ಇನ್ನಾ ಕುಸಿ ಆಗ್ಯಾಳೋ ತಾನಾ
ಹೋಯಿತು ಆಕೀಗೆ ಈಗ ಬಂಚಿತಾನಾ
ಉಗುರು ಕಣ್ಣಾಗಾಕೀಗೆ ಉಲ್ಲಾಸ ಆಗ್ಯಾದಣ್ಣಾ | ತಿಳಿರಿ ಮುಂದಿನದಿನ್ನಾ || ೮ ||

ಬಾಲಿಗಂಡ ಒಂದಿನಾ ಹೊರಿಯಾಕ ಹೋಗ್ಯಾನಾ
ಮನಿಯಾಗ ನೀರ ಮುಕ್ಕ ಇಲ್ಲೊ ಜರ ಕೊಡ ತೊಗೊಂಡಾಳತಾನಾ
ತೊಟ್ಟಿಲದಾಗೆ ಮಲಗಿಸ್ಯಾಳ ಕೂಸೀನಾ
ಮುಂಗ್ಲಿಗೆ ಹೇಳತಾಳೋ ತಮ್ಮ ಮಲಗ್ಯಾನಾ | ಮಾಡೋ ಸಮಾಧಾನಾ || ೯ ||

ತೊಟ್ಟಿಲ ಮ್ಯಾಲಿನ ಸರ್ಪಾ ಬಂತೋ ಸನನಾನಾ
ಹಗ್ಗನೆ ಹಿಡಿದು ತೆಳಿಯಾಕೆ ಇಳಿದು ಕಚ್ಚಬೇಕೋ ಕೂಸಿನಾ

ಅಷ್ಟರದಾಗೆ ಮುಂಗಲಿಯ ದೃಷ್ಟಿನಾ
ಸರ್ಪಕಟ್ಟಿ ತಮ್ಮ ಸಾಯಿತಾನಾ | ಇದಕೆ ಮಾಡಲೇನಾ || ೧೦ ||

ನೆಟ್ಟಕ್ಕೆ ಏರಿಯಿನ್ನಾ ಹಾರಿತೋ ಹೌಸಾಣಾ
ಸರ್ಪನಾ ಹಿಡಿದು ಜಗ್ಗಿ ಜೋಲಿ ಹೊಡಿದು ಬಿದ್ದಿತೋ ಕುಸ್ತಿನಾ
ತುಣಕ ತುಣಕ ಮಾಡಿತೋ ಸರ್ಪಿನಾ
ಬಾಯಿಯಲ್ಲಿ ರಕ್ತರವ ಮಂಡಲಾಗ್ಯಾದಣ್ಣಾ | ಐತೋ ಗುಲಾಬಿ ಬಣ್ಣಾ || ೧೧ ||

ಇಷ್ಟ ಆಗತಾನಾ ತಾಯಿ ಬಂದಾಳ ಇನ್ನಾ
ತಾಯಿನ ನೋಡಿ ಮುಂಗ್ಲಿ ಓಡಿ ಹೋಯ್ತಣ್ಣಾ
ಬಿದ್ದ ಪಾದಕ ಹೊರಳಿ ನೇತ್ರದಿಂದ ಬಾಯಿ ಕೆಂಪ ವರಣಾ
ಘಾತ ಮಾಡಿತೋ ಮುಂಡೇಮಗನಾ | ಕೊಲ್ಲೀದೊ ಕೂಸಿನಾ || ೧೨ ||

ಎಷ್ಟ ಪರಿಲಿಂದ ಉಂಡಿದ್ದೋ ಬೇಮಾನಾ
ಇಷ್ಟ ಹೇಳಿ ನಾರಿ ಸಿಟ್ಟೀಗೆ ಏರಿ ಕಣ್ಣಾ ಕೆಂಪವರಣಾ
ತುಂಬಿದ ಕೊಡ ಮುಂಗ್ಲಿಯ ಮೈಮ್ಯಾಲಣ್ಣಾ
ಒಗದಕೇಸಿ ನಿಂತಾಳ ಅದೇ ಚಣಕಿನ್ನಾ | ಹೋಯಿತೋ ಮಂಗ್ಲಿಯ ಪ್ರಾಣಾ || ೧೩ ||

ಒಡಕೊಂಡ ಮಾರಿ ಅಳವುತ ಹೋಗ್ಯಾಳಣ್ಣಾ
ಚೀರುತ ಹೊಡಕೊಂಡ ಮನಿಯ ತಾನಾ
ಅಡರಾಸಿ ಹೋಗಿ ತೊಟ್ಟಿಲ ತಾನಾ
ಕಾಲಬಡದು ಆಡತಿತ್ತೋ ರೌರತನಾ | ನೋಡಿದ್ದಾಳೋ ಆಕಿ ತನ್ನ ಚಿನ್ನಾ || ೧೪ ||

ತಿರುಗಿ ನೋಡತಾಳ ಸರಪಿನ ದೃಷ್ಟಿನಾ
ಹಾಯ್ ಹಾಯ್ ಮಗನೆ ಕೊಲ್ಲಿದೆ ನಿನ್ನ ನಾ
ನಾನೆಂತ ಬೇಮಾನಾ ಮುಂಗ್ಲಿಗೆ ತೊಡಿಮ್ಯಾಲ ಹಾಕೋಣಾ
ದುಕ್ಕಮಾಡಿ ಅಳತಾಳೋ ಒಂದೆ ಸವನಾ | ಎಲ್ಲಿ ದೊರತೀದೊ ಮಗನಾ || ೧೫ ||

ನಿನ್ನ ಪಾಪ ನಾನಾ ಎಲ್ಲಿ ತೊಳಕಲ್ಲೋ ಮಗನಾ
ನಿನ್ನಗೂಡ ನನ್ನಿಟ್ರ ಮಣ್ಣ ತಪ್ಪುದಿಲ್ಲೊ ನಿನ್ನ ಋಣಾ
ರಿಣಗೇಡಿ ಆದೇನೋ ಕಡಿತಾನಾ
ತಪ್ಪ ಮಾಡದಕೀಗ ತಕ್ಕ ಸಿಗ್ಸೆಯೇನಾ | ಆದ್ರೂ ಈಗಾದ್ರು ಮಾಡಿದ್ರ ಬಂತೇನಾ || ೧೬ ||

ದಂಡೋತಿ ಸಿಂಗ್ನಾಳ ಅಗಸಿ ಮುಂದ ಕಾಗೀಣಾ
ಕಾಲೀನ ಪ್ಯಾಟಿ ಮುತ್ತಿನ ಕ್ವಾಟಿ ಇತ್ತೊ ಬಂಗಾರದೊರಣಾ
ಅಲ್ಲಿ ನಮ್ಮ ಗುರುವಿನ ಠಿಕಾಣಾ | ಸಾಧು ಸಂತರ ಕೆಂಗಾವಿನಾ
ವಾರಿಗಿ ಹುಡುಗರು ಅಲಾಯಿ ಆಡೋಣಾ || ೧೭ ||

* * *

**೫. ಸೋಮರಾಯ ಭೀಮರಾಯನ ಪದಾ**

ಶರಣು ಮಾಡುವೆ ಸರ್ವರಿಗೆಲ್ಲಾ ಇದ್ದೇನಿ ಸಣ್ಣಬಾಲಾ
ಕತಿ ಒಂದು ಹೇಳತೇನಿ ಗೆಳತನ ತೋಲಾ
ಒಂದೇ ಗ್ರಾಮದಲ್ಲಿ ಇದ್ದರು ಇಬ್ಬರು ಜೋಡಿನ ಗೆಳೆಯಾರು
ಬಂದಿತ್ತೋ ಉಮರ ಗೆಳೆತನ ತೋಲಾ
ಸೋಮರಾಯ ಭೀಮರಾಯ ಎಂಬುವರಿದ್ದಾರಲ್ಲಾ | ಒಂದೇ ಬೈಟಾಕಿ ಮ್ಯಾಲಾ
ಹಾ ಹಾ ಇರತಿದ್ದರೋ ಯಾವತ್ತು ಕಾಲಾ || ೧ ||

ಒಬ್ಬರಮನಿ ಒಬ್ಬರಿಗೆ ಗುರುತಿಲ್ಲಾ ಎಂದು ನೋಡಿಲ್ಲಾ
ನಾಗರಪಂಚಮಿ ದಿವಸ ಇಬ್ಬರು ಕುಶಿಯಾಲಾ
ಹೋಗಿದ್ದಾರೊ ಹನುಮಂತದೇವರ ನಮಸ್ಕಾರ ಮಾಡಿ ದೇವರಿಗೆ
ಕಟ್ಟಿಮ್ಯಾಲಾ ಸದರಿಗೆ ಕುಂತಾರಲ್ಲಾ ||
ನಾರೆರೆಲ್ಲಾ ನಾಗಯ್ಯಗ ಹಾಲು ಎರಿವುದು ತೋಲಾ
ಒಬ್ಬರಕಿನ್ನ ಒಬ್ಬರು ಅಸಲಾ ಹಾ ಹಾ ಹೊಂಟಾರೋ ಸಾಲಿಗೆ ಸಾಲಾ || ೨ ||

ಭೀಮರಾಯನ ಮಡದಿ ಅದರಾಗ ಇದ್ದಾಳಲ್ಲಾ ರೂಪದಲ್ಲಿ ಅಸಲಾ
ಸೋಮರಾಯಗ ಇದರ ಬೇದ ಗುರುತಿಲ್ಲಾ
ಆಕಿಗೆ ನೋಡಿ ಆಗಿದ್ದಾನೊ ಮರುಳಾ ಕಣ್ಣಿಗೆ ಬಂತ್ರಿ ಬಹುಳಾ
ಬಿದ್ದಾ ಹ್ವಾದಾ ಜೀವಕಾಳಾ ಅರುವಿಲ್ಲಾ
ಸೋಮರಾಯನ ನೋಡಿ ತಂದು ಕೊಟ್ವಾನ ಹಾಲಾ
ಭೀಮರಾಯ ಕೇಳತಾನಲ್ಲಾ ಹಾ ಹಾ ಸ್ವಲ್ಪರುವಾದ ಮ್ಯಾಲಾ || ೩ ||

ನಾರಿಗೆ ತೋರಸ್ಯಾನ ಕೈ ಇಷ್ಟರ ಮ್ಯಾಲಾ ನೋಡೋ ಮಿತ್ರ ಲಾಲಾ
ಆ ಹೆಣ್ಣಿನ ಮ್ಯಾಲಾ ಎನ್ನ ಹಂಬಲಾ
ಆಕಿಗೆ ನನಗ ವಸ್ಯಾ ಮಾಡಿಸೋ ಸಿದ್ಧಾಂತ ಇರತೇನಿ ವರಸ್ಯಾಂತ
ಸಾಯತೇನಿ ವ್ಯರ್ಥ ಉಳಿಯೋದಿಲ್ಲಾ |
ಭೀಮರಾಯ ಕೇಳಿ ರಂಗ ಆದಾನೋ ತೋಲಾ
ಎರಡು ಕಡಿಗಿದು ಮುಸ್ಕೀಲಾ  ಹಾ ಹಾ ಯಾಕೆ ತಂದಿಟ್ಟ ಕೇವಾಲಾ || ೪ ||

ಪತಿವ್ರತಾ ಹಾನಿಯಾದರೂ ಪರವಾಯಿಲ್ಲಾ ದೋಸ್ತಿ ಕಡಿಯುವದಲ್ಲಾ
ಇವನ ಮನಸ್ಸು ಮುರಿದರೆ ಪಾಪಕ್ಕೆ ಮೂಲಾ
ನಗು ನಗುತಾ ಹೇಳತಾನೋ ಮಿತ್ರಗಾ | ಇವತ್ತ ರಾತ್ರಿ ನಿನಗಾ
ಆಕಿನ ಭೆಟ್ಟಿ ಮಾಡಿಸೋ ದಿನಾ ಒದಗಿದಲ್ಲಾ
ಸೋಮರಾಯ ಕೇಳಿ ಹಿಗ್ಗ ಆದಾನೋ ತೋಲಾ
ಇಷ್ಟು ಎಲ್ಲಾ ಆದ ಮ್ಯಾಲಾ | ಹಾ ಹಾ ಮನಿಗವರು ಬಂದಾರಲ್ಲಾ || ೫ ||

ರಾತ್ರಿ ಆಗಿತ್ತೋ ಹತ್ತು ಬಡಿಯುವ ಹಮಲಾ | ಮಂದಿ ಮಲಗ್ಯಾರ ಜುಮಲಾ
ಭೀಮರಾಯ ಹೋದನು ಮಡದಿ ಮಹಲಿನ ಮ್ಯಾಲಾ
ಪುರುಷ ಬರುವ ದಾರಿ ನೋಡುತ ಕುಂತಾಳಾ ಮನಸಿಟ್ಟು ದಯಾಳಾ
ಪತಿವ್ರತಾ ಶಿವಕೂಲಾ ಪುಣ್ಯ ಸೇಲಾ
ಚಿಂತಿವೊಳಗ ಗಂಡಗ ನೋಡಿದಾಳಲ್ಲಾ
ಅಡರಾಸಿ ಕೇಳತಾಳಲ್ಲಾ | ಹಾ ಹಾ ಯಾಕ ಬಾಡ್ಯಾವ್ರಿಗಲ್ಲಾ || ೭ ||

ಎನ್ನದೊಂದ ಮಾತಕೇಳ ಮೊದಲಾ ಆಗತೇನಿ ಕಬೂಲಾ
ಹಾರಿಹೋಗಿ ಹಿಡದಾಳ್ರಿ ಗಂಡನ ಕಾಲಾ
ಪರಿಪರಿಲಿಂದ ಹೇಳ್ರಿ ಆ ರಾಜ ಹೇಳೋ ನಮಗ ಮಹಾರಾಜಾ
ಅದೊ ನಿಮ್ಮದು ಲ್ಯಾಜಾ ನಮಗ ತೋಲಾ
ಮೀರಂಗಿಲ್ರಿ ನಿಮ್ಮ ವಚನಾ ಮೊದಲಾ
ಭೀಮರಾಯ ಹೇಳತಾನಲ್ಲಾ | ಹಾ ಹಾ ಮನಸಿನ ಹಾಲತ್ತು ಜಮಲಾ || ೭ ||

ಎನ್ನ ದೋಸ್ತ ಒಬ್ಬ ಅದಾನೆ ಅಸಲಾ ಇದೇ ಊರ ಮ್ಯಾಲಾ
ನಿನ್ನ ಮ್ಯಾಲೆ ಮಾಡಿದ್ದಾನೆ ಹಂಬಾಲಾ
ನನ್ನ ಸಂಗಡ ಹೆಂಗ ನಡಿತಿ ಅದರಕಿನ್ನಾ ತೋಲ ಜಾಸ್ತಿ ಮಾಡೆ
ಅವನಿಗೆ ಮನಸ್ಯಾಂತಿ ಬಾಗಿಲ್ಲಾ
ನಾರಿ ಕೇಳಿ ಜೀಂವಾ ಅಂದಿತೋ ಜಲ್ಲಾ
ಎನ್ನ ಪ್ರೇಮದ ನಲ್ಲಾ | ಹಾ ಹಾ ಹಿಂದು ಹೇಳೋಣಿದ್ದಿದಿಲ್ಲಾ || ೮ ||

ಬಹಳ ರಂಜಿಲಿ ರಾಜಿ ಆದಳಲ್ಲಾ ಬಾಗಿದ್ದಿದಿಲ್ಲಾ
ಸೋಮರಾಯನ ಕರದೊಯ್ದಾನ ತಡ ಮಾಡಲಿಲ್ಲಾ
ಆವಾಗ ಮಡದಿ ಮೊಕಾಬಿಲಿಗಿ ಖಾತ್ರಿ ಕೊಟ್ಟಾ ಮನಸಿಗಿ
ತಿರುಗಿ ವಾಪಸ ಟಾಣ್ಯದ ಮ್ಯಾಲಾ
ಸೋಮರಾಯ ನೋಡಿ ಹಿಗ್ಗ ಆದನೋ ತೋಲಾ
ಆದ ಬಾಳ ಕುಶಿಯಾಲಾ | ಹಾ ಹಾ | ಕುಂತ ಪಲ್ಲಂಗ ಮ್ಯಾಲಾ || ೯ ||

ದೋಸ್ತಿ ತಲವಾರ ಒಂದಿತ್ತೊ ಅಸಲಾ ಕಣ್ಣಿಗೆ ಬಿದ್ದಿತಲ್ಲಾ
ಅದನೋಡಿ ಹಿಡಕೊಂಡ ನಷ್ಟ ಕುಶಿಯಾಲಾ
ತಲವಾರ ಮೇಲೆ ಬರೆದಿತ್ತೊ ಗೆಳೆಯನ ಹೆಸರು ಓದಿಕೊಂಡಾ ತಸ್ವೀರ
ಆಗಿ ಕುಂತಾ ಬೇಕಾರಾ ಹವುಲಾ ಜೋಲಾ
ತಲ್ವಾರಲಿಂದ ಇಳಿಸಿಕೊಂಡಾನ ಕುತ್ತಗಿ ಮ್ಯಾಲಾ
ಶಿರಸ್ ಕಡಿಯಾಗಿತಲ್ಲಾ | ಹಾ ಹಾ ಕಣಮುಟ್ಟ ನೋಡ್ಯಾಳಲ್ಲಾ || ೧೦ ||

ನಾ ಇದ್ದು ಸಾರ್ಥಕೇನು ಆಗಲಿಲ್ಲಾ ಮರ್ತ್ಯದ ಮ್ಯಾಲಾ
ಆಕಿ ಒಬ್ಬಾಕಿ ಹೊಡಕೊಂಡಾಳ ತಡಾ ಮಾಡಲಿಲ್ಲಾ

ಆವಾಗ ಎರಡು ಹೆಣಗಳನ್ನು ಒಂದು ತಾಸುಗಳಿಗಿನ್ನಾ
ಅಲ್ಲಿ ಬಂದು ಯಾರು ಕೇಳೋಣಿಲ್ಲಾ
ಅಷ್ಟರೊಳಗೆ ಭೀಮರಾಯ ಬಂದಾನಲ್ಲಾ
ಹೊಳಿದಾರಿ ಸಪ್ಪಳಿಲ್ಲಾ | ಹಾ ಹಾ ಮೈಮಾ ತಿಳಿಯಲಿಲ್ಲಾ || ೧೧ ||

ತಟ್ಟಿ ಮುರಿದು ನೋಡಿ ಕಂಡನಲ್ಲಾ ಹಾಲತ್ ಜುಮಲಾ
ಎರಡು ಹೆಣಾ ನೋಡಿ ಹೌಸಾನಾ ಹಾರಿತಲ್ಲಾ
ಆವಾಗ ಹಿಡಕೊಂಡ ತಲವಾರು ಆಗಿ ಕುಂತಾ ಬೇಕಾರಾ
ಏನು ಹೇಳಲಿ ವಿಸ್ತಾರಾ ಹವುಲಾ ಜೋಲಾ
ಆಗ ಬಂದು ನಿಂತಾ ಸಾಕ್ಷಾತ್ ಕೇವಾಲಾ
ಹೇಳತಾನಾ ಮಾಡಿ ಜುಮಲಾ | ಹಾ ಹಾ ವ್ಯರ್ಥ ಇದ್ದೀರಲ್ಲಾ || ೧೨ ||

ಇಬ್ಬರಿಗೆ ಜೀಂವಕಾಳಾ ತುಂಬಿ ಕೇವಾಲಾ ಮಾಯವಾದನಲ್ಲಾ
ಅವರು ಮೂವರು ಕೊರಳಿಗೆ ಬಿದ್ದು ಅಳತಾರಲ್ಲಾ
ಇದ್ದರಿರಬೇಕು ಇಂಥ ಗೆಳೆಯರು ಇಲ್ಲದಿದ್ದರೆ ಬೇಕಾರಾ
ಈಗಿನ ಗೆಳೆಯಾರು ಮತಲಬಿ ಇರುವುದೊ ತೋಲಾ
ಮ್ಯಾಲೆ ಮಾತಾಡುತ ತುಳಿವರು ಕಾಲಾ
ದೋಸ್ತಿ ಇದ್ದರೇನು ಫಲಾ | ಹಾ ಹಾ ಹಾವಿಗೆ ಇದ್ದಾಂಗ ಇಸಾಹಲ್ಲಾ || ೧೩ ||

ದಂಡೋತಿ ಊರು ಎಂಬುದು ಸೇಲಾ | ಮರ್ತ್ಯದ ಮೇಲಾ
ಅಲ್ಲಿ ಹಾನ ಗುರುಮುನಿ ಕೇವಾಲಾ
ಎಕ್ಕಳ್ಳಿ ಮಠದಾಗ ಇರತಾನ್ರಿ ಶಿಷ್ಯರಿಗೆ ಹೇಳತಾನ್ರಿ ಆ ವಸ್ತುಕ
ತಿಳಿಸ್ಯಾನ್ರಿ ಮಾಡಿ ಖುಲ್ಲಾ
ಅರ್ಜುಣಪ್ಪ ಎಂಬುವಾ ಸಣ್ಣ ಬಾಲಾ
ರಿವಾಯಿತು ಮಾಡ್ಯಾನಲ್ಲಾ | ಹಾ ಹಾ ಕಾಲಗೆಜ್ಜಿಯ ಮ್ಯಾಲಾ || ೧೪ ||

*** * ***

**೬. ಅತ್ತಿ ಸೊಸಿ ಮಗನ ಪದಾ**

ಸಭಾ ಮಾಡಿ ಕುಂತಿರಿ ಸರ್ವರು ಎಲ್ಲಾ
ಕರಮುಗಿದು ಹೇಳತೇನಿ ನಾ ಸಣ್ಣಬಾಲಾ | ಮಾಡಬೇಡರಿ ಗುಲ್ಲಾ
ಕಲಿವಿಕದ ವರ್ತಮಾನಾ ಹೇಳತೇನಿ ಕುಲ್ಲಾ || ೧ ||

ಒಂದು ಗ್ರಾಮದ ಸುದ್ದಿ ಹೇಳುವೆನಲ್ಲಾ
ಅತ್ತಿ ಸೊಸಿ ಮಗ ಮೂವರ ಮ್ಯಾಲಾ | ಹೇಳತೇನಿ ಕುಲ್ಲಾ
ಹೊಸದಾಗಿ ಸೊಸಿ ನಡಿಲಾಕ ಬಂದಳಲ್ಲಾ || ೨ ||

ಅತ್ತಿಯ ಪ್ರೇಮ ಬಹಳ ಸೊಸಿಯ ಮ್ಯಾಲಾ
ಗಂಡ-ಹೆಂಡತಿ ಉಂಡು ಮಂಚದ ಮ್ಯಾಲಾ | ಮಲಗಿದಳಲ್ಲಾ
ಗಂಡಗ ಹೇಳತಾಳೋ ಒಂದು ಒಂದು ಅಕಲಾ || ೩ ||

ನಿಮ್ಮವ್ವ ನಮಗಂದರ ಸೇರುವುದಿಲ್ಲಾ
ನಿತ್ಯ ಮಾರುತ್ತಾಳೋ ಮನಿಯಾನಾ ಮಾಲಾ | ಹಾಳು ಮಾಡುತ್ತಾಳಲ್ಲಾ
ಕೇಳಿದರ ಹೊಡಿಲಾಕ ಬರತಾಳ ಮೈಮ್ಯಾಲಾ || ೪ ||

ಬೇಮಾನಾ ಮಾಡತಾಳ್ರಿ ಅತ್ತಿಯ ಮ್ಯಾಲಾ
ಅತ್ತಿ ಇದ್ದರ ನಮ್ಮ ಜೀವಕ ಮೂಲಾ | ಸೊಸಿ ಅಂತಾಳಲ್ಲಾ
ಏನಾರ ಪರಿಯ ಮಾಡಿ ಹೊಡಿಸಬೇಕಲ್ಲಾ  || ೫ ||

ನಿಮ್ಮವ್ವ ಇದ್ದರ ನಾ ಇರೂದಿಲ್ಲಾ
ತವರು ಮನಿಯ ಮ್ಯಾಲಾ ಬಹಳ ಹಂಬಲಾ | ಸೊಸಿದು ಇದ್ದೀತಲ್ಲಾ
ಅತ್ತಿ ಇದ್ದರ ನಮ್ಮದೇನೂ ನಡೆಯೋದಿಲ್ಲಾ || ೬ ||

ಮಗ ಮುಂಜಾನೆದ್ದು ಹೊಲಕ ಹೋಗ್ಯಾನಲ್ಲಾ
ಗಂಡ ಬರುವುದರೊಳಗೆ ಅತ್ತಿ ಎದಿಮ್ಯಾಲಾ | ಕುಂತಿದ್ದಾಳಲ್ಲಾ
ಬಾಯಿತುಂಬ ಕುಸುಬಿ ತುಂಬಿದಾಳಲ್ಲಾ || ೭ ||

ತಾಯಿ ಪ್ರೇಮಾ ಬಾಳ ಮಗನ ಮ್ಯಾಲಾ ||
ಅತ್ತಿ ಬಿದ್ದಾಳೋ ಸೊಸಿ ಕಾಲಿನ ಮ್ಯಾಲಾ | ಹೇಳತಾಳಲ್ಲಾ
ಅಂತದ್ದೇನು ಮಾಡೇನಿ ಬರಲಿ ಎನ್ನ ಬಾಲಾ || ೮ ||

ಅಷ್ಟರೊಳಗೆ ಮಗ ಬಂದಿದ್ದಾನಲ್ಲಾ
ಗಂಡನ ಪ್ರೇಮ ಬಹಳ ಹೆಂಡತಿಯ ಮೇಲಾ | ಕರೆದಿದ್ದಾಳಲ್ಲಾ
ಇಷ್ಟೊಂದು ಸಿಟ್ಯಾಕೋ ನೀ ನನ್ನ ಮ್ಯಾಲಾ || ೯ ||

ಲಗುಮಾಡಿ ಹೆಣತಿಯು ಬಂದಿದ್ದಾಳಲ್ಲಾ
ಗಂಡನ ಮುಂದೆ ನಿಂತು ಹೇಳತಾಳೋ ಕುಲ್ಲಾ | ನಿಮ್ಮವ್ವಾ ಎಲ್ಲಾ
ಕುಸುಬಿ ತಿಂದು ಹಾಳು ಮಾಡಿದಳಲ್ಲಾ || ೧೦ ||

ಇಷ್ಟ ಕೇಳಿ ಸಿಟ್ಟು ಬಂತೋ ತಾಯಿಯ ಮೇಲಾ
ಹೆಣತಿ ಮಾತು ಗಂಡ ಕೇಳಿದನಲ್ಲಾ | ಕೇಳಿ ಅಂತಾನಲ್ಲಾ
ಕೋಪ ಬಂತೋ ಬಹಳ ತಾಯಿಯ ಮ್ಯಾಲಾ || ೧೧ ||

ಮಗನಿಗೆ ಕರಿತಾಳೋ ಬಾರೋ ಎನ್ನ ಬಾಲಾ
ಅಂತಾದ್ದೇನು ಮಾಡೇನಿ ನಾ ನಿನ್ನ ಮ್ಯಾಲಾ | ಸಿಟ್ಯಾಕೋ ತೋಲಾ
ನಾ ಸತ್ತಮ್ಯಾಲ ನೀನು ನೆನಸಿದಿ ಬಾಲಾ || ೧೨ ||

ಇಷ್ಟು ಕೇಳಿ ಸಿಟ್ಟುಬಂತು ತಾಯಿಯ ಮೇಲಾ
ನಾಲ್ಕು ಕಟ್ಟಿದಾನೋ ಬಿಗಿದು ಕೈಕಾಲಾ | ಹೊತ್ತ ತಲಿಯಮ್ಯಾಲಾ
ಹೊತಗೊಂಡ ನಡದಾನ ಸಂವರಾತ್ರಿ ಹಮಲಾ || ೧೩ ||

ಹೋಗಿ ಭಾಂವಿ ಮ್ಯಾಲೆ ನಿಂತು ಒಗಿದಾನಲ್ಲಾ ||
ಮನಿಗೆ ಹೋಗಿ ಹೇಳತಾನೋ ಹೆಣತಿಗೆ ಖುಲ್ಲಾ | ಕೇಳಿ ಅಂತಾಳಲ್ಲಾ
ಪೀಡಾ ಹೋಯ್ತು ನಮ್ಮ ಇಬ್ಬರ ಮ್ಯಾಲಾ || ೧೪ ||

ಮುದುಕಿ ಭಕ್ತಿಗೆ ಮೆಚ್ಚಿ ಶಿವಾ ಬಂದಾನಲ್ಲಾ
ಮುದುಕಿಗೆ ಹಿಡದಾನೋ ಅಂತರದಿ ಮ್ಯಾಲಾ | ಕೇಳತಾನಲ್ಲಾ ||
ಏನು ಬೇಡತಿ ಬೇಡವ್ವಾ ಕೊಡುವೆ ತತ್ಕಾಲಾ || ೧೫ ||

ತಾಯಿ ಪ್ರೇಮ ಬಹಳ ಮಗನ ಮೇಲಾ |
ನನ್ನ ಮಗ ಇದ್ದಾನ್ರಿ ಸಣ್ಣ ಬಾಲಾ | ಅವನ ಮ್ಯಾಲೆ ಕ್ಯಾಲಾ
ಬಡತಾನ ಬಾಳಾದ್ರಿ ನಾ ಹೇಳೂದಿಲ್ಲಾ || ೧೬ ||

ಮುದುಕಿ ಹೊಟ್ಯಾಗಿನ ಮಾತು ಶಿವಾ ತಿಳಿದಾನಲ್ಲಾ
ಹೊನ್ನಿನ ಕೊಡ ಹೊರಸಿ ಹೆಗಲಮ್ಯಾಲಾ | ಮನಿಗೆ ಹೋದಳಲ್ಲಾ
ಮಗನಿಗೆ ಕರಿತಾಳೋ ಬಾರೋ ಎನ್ನ ಬಾಲಾ || ೧೭ ||

ಲಗು ಮಾಡಿ ಸೊಸಿಯು ಬಂದಿದಾಳಲ್ಲಾ |
ಹೊನ್ನಿನ ಕೊಡನೋಡಿ ಹೆಗಲಮ್ಯಾಲಾ | ಇಳಿಸಿದಾಳಲ್ಲಾ
ಎಲ್ಲಿಂದ ತಂದೆವ್ವ ಪ್ರೇಮ ನಮ್ಮ ಮ್ಯಾಲಾ || ೧೮ ||

ಅತ್ತಿಗೆ ಸಿಟ್ಟು ಬಂತೋ ಸೊಸಿಯ ಮ್ಯಾಲಾ
ಸೊಸಿಗೆ ಹೇಳತಾಳೋ ಒಂದು ಒಂದು ಅಕಲಾ | ನನಗೇಳಲಿಲ್ಲಾ
ಇದ್ದಷ್ಟು ತಂದೇನಿ ನೀ ಬರಲಿಲ್ಲಾ || ೧೯ ||

ಹೆಣತಿ ಹೇಳತಾಳೋ ಗಂಡಗ ಅಕಲಾ
ನಾಲ್ಕು ಕಟ್ಟು ನನ್ನ ಬಿಗಿದು ಕೈ ಕಾಲಾ || ಹೊತ್ತುತಲಿ ಮ್ಯಾಲಾ
ಬಾವಿ ಮ್ಯಾಲೆ ನಿಂತು ಜಿಗಿದು ಒಗದಾನಲ್ಲಾ || ೨೦ ||

ಮೂರು ಸಲ ಮುಳಮುಳುಗಿ ಎದ್ದಿದಾಳಲ್ಲಾ
ಗಂಡನಿಂತು ಹೇಳತಾನೋ ಬಾಂವಿ ದಂಡಿಮ್ಯಾಲಾ | ಬಿಡಬ್ಯಾಡೆ ಸಡಿಲಾ
ಹೊತಗೊಂಡು ಬಾರೆ ನೀ ಕೋಸಿಸ್ ಮ್ಯಾಲಾ || ೧೦ ||

ಬೇಮಾನಾ ಮಾಡತಾರೋ ಅತ್ತಿ ಮೇಲಾ
ಸೊಸಿಗೆ ಒಂದಿತ್ರಿ ಒದಗಿ ಕೆಡುಗಾಲಾ | ಕೇಳರಿ ದೈವೆಲ್ಲಾ
ತನ್ನ ಕರ್ಮಕ್ಕೆ ತಾನು ಸರಿಬಿದ್ದಳಲ್ಲಾ || ೧೧ ||

ಕಲಿವಿಕದ ವರ್ತಮಾನಾ ತಿಳಿಸಿನಿ
ಇವತ್ತು ನಾಳೆ ಪ್ರೇಮ ಹೆಂಡರ ಮ್ಯಾಲೆ | ಮಾಡತಾರೋ ಕ್ಯಾಲಾ
ಬೇಮಾನಾ ಮಾಡತಾರೋ ತಾಯಿ ತಂದಿಯ ಮ್ಯಾಲಾ || ೧೩ ||

ಮಾಲಗತ್ತಿ ಊರದೊ ದೇಶಕ್ಕೆ ಮಿಗಿಲಾ
ಬೀಬಿ ಫಾತಿಮಾ ನೆನದಾಳೋ ನಡು ಊರಾಗೆಲ್ಲಾ | ಮತಿ ಕೊಟ್ಟಾಳಲ್ಲಾ
ರಿವಾಯಿತು ಮಾಡ್ಯಾರೋ ಸತಿಪತಿ ಮ್ಯಾಲಾ || || ೧೪ ||

* * *

## ೬. ಸೇರಿಗೆ ಸವ್ವಾಸೇರು

ಶಾಸ್ತರ ವಿಸ್ತರ ತುಸು ತಿಳಿಸುವೆ ಜನಕೆ
ಗುಲ್ಲಾ ಮಾಡದೆ ಜರಾ | ಕೇಳರಿ ಮಜಕೂರಾ
ಒಂದ ಊರಾಗ ಒಬ್ಬ ಇದ್ದ ಸಾಹುಕಾರಾ | ಆತಗಿದ್ದರಪ್ಪ ಇಬ್ಬರು ಹೆಂಡರಾ
ಪೈಲಾದಾಕಿ ಇದ್ದಾಳ ಬೆರಕಿ ಮಂತರ ತಂತರಕ || ೧ ||

ಮಕ್ಕಳಿಲ್ಲದೆ ರೊಕ್ಕಾ ಇದ್ದೇನು ಸುಡಬೇಕ | ಹಡೀಲಿಲ್ಲ ಮುಂಚೆನಾಕಿ
ಮತ್ತೊಂದು ಆದಾನ ಉಡಕಿ | ಇಟ್ಟ ಆಕಿ ಮ್ಯಾಲ ಸಾಂಬ ಹರಕೆ
ಗಂಡಸುಮಗ ಹುಟ್ಯಾನ ರಾಜಹಂಸಿ |
ಪ್ರೀತಿ ಮಮತೆ ಮಾಡುವ ಪತಿ ಆಕಿ ಮ್ಯಾಲ ಲಕ್ಕ || ೨ ||

ಮೊದಲಿನ ಹೆಂಡತಿ ಮನದಾಗ ಮುರುತಿದ್ದಳು ಚಿಟಕ
ಹೆಂಡರಿಗೆ ತಾಕೀತ ಕೊಟ್ಟಾ ಗಂಡ ಹೋದಾ ವ್ಯಾಪಾರಕ
ಮೊದಲಿನ ಹೆಂಡತಿ ಮನಿಯಾಗ ಅರ್ಬಾಟಾ ನಡಿಸ್ಯಾಳ ತನ್ನ ಬಂಗಾಲಿ ಆಟಾ
ರಂಬಿ ಉಬ್ಬಿ ಬಟ್ಟಲ ತುಂಬಿ ತಗೊಂಡಾಳ ಉದಕ || ೩ ||

ಮಂತ್ರಿಸಿ ಸಿಂಬಡಿಸ್ಯಾಳ ತಾಯಿ ಮಗ್ಗ ತಟಕ
ನೀರಬಿದ್ದ ಬರೋಬರಿ | ಆಕಳ ಆಗ್ಯಾಳ ನಾರಿ ಮಗಾ ಆಗಿ ನಿಂತ ಸಣ್ಣ ಹೋರಿ
ಡುರಕಿ ಹೊಡಿಯತಾನ ತನ್ನ ಕಾಲಕೆದರಿ
ಅಲ್ಲೆ ಇದ್ದ ಕಟಗನ ಕರೆದು ಕೊಟ್ಟಾಳ ತಾಬೇಕ || ೪ ||

ಸಾವುಕಾರ ವ್ಯಾಪಾರ ಮಾಡಿಕೊಂಡ ತಿರುಗಿ ಬಂದ ಆ ಕ್ಷಣಕ
ನೋಡತಾನ ಮನಿಯಾಗ  ಹೋಗಿ ಮೋಹದ ಸತಿ ಸುತರಿಗೆ
ಕಾಣಲಿಲ್ಲ ಇಬ್ಬರು ಕಣ್ಣಿಗೆ | ಒಬ್ಬಾಕಿ ಕುಂತಿದ್ಲು ಮೊದಲಿನ ಗೂಗಿ
ಕಂಡ ಗಂಡ ಕೇಳತಾನ ಉಂಡು ಮಾರಿ ಬಾಡಿ ಮುಖ || ೫ ||

ಯಾವಲ್ಲೆ ಹೋಗ್ಯಾಳ ನನ್ನ ಸತಿ ಸುತ ಹಿತಚಿಂತಕ
ತಗದ ಹೇಳ್ಯಾಳ ಹಂಚಿಕಿ ಬಂದೀತ ಕೆಟ್ಟ ಕಸಾರಕಿ
ಉಳದಾಳ ಅಂತ ಬಹಳ ಮಾಡಿದ್ದೇ ಜ್ವಾಕಿ
ಮಗನು ನೋಡಿ ಹೋದಾನ ಓಡಿ ನೋಡಲಾರದಕ || ೬ ||

ನೆನಸಿ ನೆನಸಿ ಅಳತಾನ ಸೋಸಿ ಸಾವುಕಾರ ನಸೀಬಕ
ಅಯ್ಯೋ ನನ್ನ ಮೋಹದ ಮಡದಿ ಬಿಟ್ಟ ನನಗ ಯಾವಲ್ಲಿ ಹೋದಿ
ಮುದ್ದು ಮಗನಿಗೆ ಯಾವ ಕಡಿಹಾದಿ ತೋರಿಸಿ ನನಗ ವನವಾಸ ತಂದಿ
ದುಃಖಸುಖ ಇಟ್ಟಿದಿ ನನಗ ತಪ್ಪದು ಸಾವು ತನಕ || ೭ ||

ಬಂದೀತ ಬಕರೀದ ಹಬ್ಬ ಮುಂದ ತುಸು ದಿನಕ
ಗಂಡಗ ಅಂತಾಳ ಕುಂತ, ಕುಂದರಬಾಡ್ರಿ ಮೈಮರೆತ
ಸತ್ತವರಗೂಡ ಯಾರೂ ಹೋಗುದುಲ್ಲಾ ಸತ್ತಾ
ಇದ್ದವರ ಜಲ್ಮಕ ಇರಬೇಕು ಸ್ವಸ್ಥಾ | ಇಂದ ಚಂದ ಆಕಳ ತಂದು ಕುರಬಾನಿ ಕೊಡಬೇಕ || ೮ ||

ಕಟಗಗ ಕೊಟ್ಟಿದ್ದ ಆಕಳ ತಂದಾಳಾ ಕ್ಷಣಕ
ಕಂಡ ಗಂಡನ ಮಾರಿ ಒದರೀತ ಚಿಟ್ಟನೆ ಚೀರಿ
ಪತಿ ಅಂದಾ ಇದಕ ಸಾಕುನು ನಾರಿ | ಮತ್ತೊಂದು ತಂದು ಕೊಡುನು ಬ್ಯಾರಿ
ಮಮತೆ ಪ್ರೀತಿ ಬಹಳ ಬರತೈತಿ ನೋಡೂನು ಇದಕ || ೯ ||

ಸದ್ಯಕ್ಕ ಇದ್ದದ್ದು ಬಿಟ್ಟು ಗುದ್ಯಾಡುದು ಯಾಕ
ಹಿಡಿಲಿಲ್ಲಾ ಹೆಣತಿ ಖೂನಾ ಕೆಡವಿ ಕೋದಾನ ಗೋಣಾ
ಆ ಬೋಳೆ ಗಂಡಗ ಆ ರಕ್ತ ನೋಡೋಣ ಬವಳಿಕೆ ಬಂದ ಮುಚ್ಯಾನ ಕಣ್ಣಾ
ಅಂತಾಳ ಸವತಿ ಆತ ನಿಶ್ಚಿಂತಿ ನನ್ನ ಮನತಕ್ಕ || ೧೦ ||

ಸವತಿಗೆ ಕೊಂದ ರಂಡಿ ಇರಲಿಲ್ಲ ಸುಮ್ಮಕ
ಜನಾ ಬಹಳ ಸಾಲೂದಿಲ್ಲಾ ಹೋರಿಗೆ ಹಿಡತಂದಾಳಲ್ಲಾ
ಕಟಗಗ ಅಂತಾಳ ತಿಂದೈತಿ ಕಾಳಾ ಅದರಕ್ಕಿಂತ ಇದು ಇದ್ದೀತು ನಿವ್ವಳಾ
ಬಾರಿ ಹೋರಿ ತಂದೀಯ ಮಾರಿ ನೋಡಿದ ಬಳಿಕ || ೧೧ ||

ಕಸುವಿಲೆ ಕೊಸರಿ ಬಂದು ಬಿದ್ದೀತ ತಂದಿ ಪಾದಕ
ಕಂಡ ಆ ಹೊಯ್ಮಾಲಿ ಮಲತಾಯಿ ಮಾಡತಾಳ ನಕಲಿ

ತಂದಿ ಅಂದಾನೊ ಇದು ಅರ ಇರಲಿ ಮುಂದಿನ ಹಬ್ಬಕ ಕೊಯ್ಯುನು ನಾರಿ
ತಂದಿ ಅಂದ ಕಟಗನ ಕರೆದು ತಿರುಗಿ ಒಯ್ಯ ಹಿಂದಕ || ೧೨ ||

ಕಂಡ ಕಟಗನ ಮಗಳು ಮಾಡತಾಳ ದುಃಖ
ಆಕಳ ಹೊದೀತ ತೀರಿ | ಇದು ಒಂದು ಉಳಿದೀತ ಹೋರಿ
ತಂದೆಗಂದಾಳು ನೀವೇನು ತಿಳಿದಿರಿ ಅದು ಹೋರಿ ಅಲ್ಲಾ ಮಗಾಹಾಸ ಸೌಕಾರನ
ತಂದಿ ಮಂದಿ ಮುಂದ ಸುದ್ದಿ ಹೇಳಿದ ಬಳಿಕ || ೧೩ ||

ಬಂದಾವ ಆ ಹೋರಿ ತಂದಿ ಆ ಕಟಗನ ಮನಿತನಕ
ಹಡದವ್ವ ಮಾಡ ಸಾಹಸಾ | ಉಡಸೂವೆ ಸೀರಿ ಕುಬಸಾ
ಕಟಗಗ ಅಂದಾಳ ನನಮಾತಾ | ತುಸಾ ಕೇಳರಿ ನಂದು ಇತ್ತ ಮನಸಾ |
ಈಗ ಬ್ಯಾಗ ನನಗ ಅಂವಗ ಲಗ್ನ ಮಾಡಬೇಕ || ೧೪ ||

ಕೊಟ್ಟಾನ ಸಾವುಕಾರ ವಚನ ಘಟ್ಟ ತಿಳಿಮನಕ
ನಿನ್ನ ಮ್ಯಾಲೆ ಎರಡನೆ ಇಲ್ಲಾ ಅನ್ನುನಾ ಕಟಗನ ಅಬಲಾ
ತೊಗೊಂಡಾಳ ಕೈಯಾಗ ನೀರಿನ ಬಟ್ಟಲಾ ಮಂತ್ರಿಸಿ ಉಗ್ಯಾಳ ಹೋರಿಯ ಮ್ಯಾಲಾ
ಕಂದ ಚಂದ ನಿಂತಾನ ಇಂದ ಮನುಷ್ಯಾಗಿ ಲಕ್ಕ || ೧೫ ||

ವಚನದ ಸರಿಯಾಗಿ ಮದುವಿ ಆತ ಖಡಕ
ಮನಿಮಗಳು ಬಂದಾಳು ಸೊಸಿ ನಡದೀತ ಗುಸುಮುಸಿ
ಸೊಸಿ ಒಗದಾಳ ನೀರ ಮಂತ್ರಿಸಿ ಅತ್ತಿ ಚಿಗರಿ ಆಗ್ಯಾಳ ಪರದೇಶಿ
ಸೇರಿಗೆ ಸವ್ವಾಸೇರ ಆದರ ಮುರಿತೈತಿ ಸೊಕ್ಕಾ || ೧೬ ||

ಬಾಗಲಕೊಟ್ಯಾಗ ಗುರು ದಸ್ತಗೀರನ ಬೆಳಕ
ಕರುಣುಳ್ಳ ಕೇಸುಪೀರ ಮಸ್ತ ಬುದ್ದಿಕೊಟ್ಟಾನ ಧೀರಾ
ದೇಶದ ಮ್ಯಾಗ ನಾಗೂಗೌಸನ ಹೆಸರಾ ಡಂಕಾ ಹೊಡುತೈತಿ ಇಲ್ಲದಾಂಗ ಕಸರಾ
ತಮ್ಮಾ ದಮ್ಮಾ ಬಿಟ್ಟ ಬಿಡ ಹಮ್ಮಾ ಬರುದಿಲ್ಲ ಕೆಲಸಕ || ೧೭ ||
* * *

## v. ಸವಾಲ್-ಜವಾಬ್ ಪದಗಳು

### ೧. ಕಲ್ಲ ನೀರ ಮ್ಯಾಲೆ ನಾಯಿ ಮುಗಿಲ ಮ್ಯಾಲೆ

ಪಂಥ ತೀರಿಸಲಾಕ ಎಂಥ ರಿವಾಯಿತ
ಹಾಡಿ ಕುಂತಲ್ಲೇ ಸುಗಡಿ || ಪಲ್ಲವಿ ||

ಅರ್ಥವಿಲ್ಲದೆ ಎತ್ತ ಬೋಗಳತಿದಿ | ಒದ್ದ ಮುರದೇನ ದವಡಿ
ಹೇಳತೇನಿ ತಗೋ ನಿನ್ನ ತೋಡಿ

ಇ|| ಅಲ್ಲ ಅಂದರ ನಿನಗ ಗುಲ್ಲ ಕೊಡತೇನಿ | ಕೇಳೆಲೆ ದೆವಗೇಡಿ

ಸಣ್ಣ ಹುಡುಗರೊಳು ಬಣ್ಣದ ಮಾತ್ಹೇಳಿ | ಹೊಂಟಲ್ಲೇ ಅಡ್ಡನಾಡಿ

ಏರು|| ದನಾ ಕಾವುವಲ್ಲೇ ದಿಮಾಕ ಮಾಡತೀರಿ | ಬಲ್ಲಾಂಗ ಒದರ್‍ಯಾಡಿ

ಕತ್ತಿಯಂಗ ಎತ್ತ ಮಸಡಿ ಮಾಡಿ

ಇ|| ಹಾಡ್ತೇನಿ ಸುಗಡಿ ನಿಂತ ನಿಮ್ಮನ್ನು ನೋಡಿ | ಹ್ವಾದಿ ಓಡಿಗೀಡಿ

ಏರು|| ಮೊನ್ನೆ ಮೊನ್ನೆ ಒಂದು ಹೊಳಿಯಾಗ ಹೋಗಿತು

ಕಲ್ಲ ಒಂದ ತೇಲಿ | ಬದರಿತ್ತ ನಾಯಿ ತೆರೆದಿತ್ತ ಬಾಯಿ

ಆಕಾಶಕ ನೋಡಿ | ಜನಗಾಬಾತ ಅದನ ನೊಡಿ

ಇ|| ಇಲ್ಲ ನೀರ ಮ್ಯಾಲೆ | ನಾಯಿ ಮುಗಿಲ ಮ್ಯಾಲೆ

ಓಡಿತ್ತ ಹಂಗ ಓಡಿ

ಏರು|| ಹೆಣದಂಗ ಬಾಯಿ ತಕ್ಕೊಂಡ ಕುಂತಿದಿ

ನೊಣಾ|| ಹೊಕ್ಕಾವ ಖೋಡಿ

ಒಗಟ ಬಡಿಯದಿದ್ದರ ಬಿಡೂದಿಲ್ಲಾ ತಮ್ಮಾ

ಕುಬಸ ಬಳಿ ಹಿಡಿ | ಕೈಯೊಳ್ಳು ಇಟಗೊಳ್ಳು ರಿಣಗೇಡಿ

ಇ|| ಸಿಗಬಾರದ ಸಿಕ್ಕಿ ಸೆರಿ ಬಡುವುತೇನಿ |

ಇನ್ನೊಂದ ಹಾಡಿಗೀಡಿ

ನಾಗನೂರ ಶಾರ ದೇಶಕ್ಕ ಜಾಹೀರಾ | ಐತೇ ನಾಲ್ಕು ಕಡಿ

ಮುಸಲ್ಮಾನ ಓಣಿಯ ಹುಡುಗರು ಹೇಳ್ಯಾರೋ

ತಗದ ನಿನ್ನ ರಾಡಿ ||

* * *

### ೧. ಗಿಡದ ಹೆಸರು ಹೇಳಬೇಕೋ

ಸಲಾಂ ಬಂದೀತ್ರಿ ದೈವಕ ನಂದಾ

ಸಲಾಂ ತಗೋ ಬೇಕರಿ ಬಡವಂದಾ

ಪ್ರಾಂತದೊಳು ಗಿಡ ಕಂಡೇನಂದಾ

ಗಿಡದ ಬಡ್ಡಿ ಇದ್ದಾವರಿ ಹದಿನೈದಾ

ಒಂದೊಂದ ಬಡ್ಡಿಗೆ ಹನ್ನೆರಡು ಟಿಸಿಲಾ

ಟಿಸಿಲಿಗೆ ಹನ್ನೆರಡು ಎಲಿ ಅಸಲಾ

ಅಸಲಿಗೆ ಹನ್ನೆರಡು ಕಾಯಿ ಮಿಗಿಲಾ

ಒಂದೊಂದು ಕಾಯಿ ಇದ್ದಾವರಿ ಭೂಮಿ ಅಗಲಾ

ಒಂದೊಂದ ಕಾಯಿಗೆ ಹನ್ನೆರಡು ಹಣ್ಣಾ

ಹಣ್ಣಿಗೆ ಐವತ್ತಾರು ತರದ ಬಿಣ್ಣಾ

ಹಣ್ಣಿಗೆ ಬಿದ್ದಾಗ ಸೂರ್ಯನ ಕಿರಣಾ

ಅದನ್ನೋಡಿ ಮೆಚ್ಯಾನೋ ಭಗವಾನಾ

ಒಂದೊಂದ ಗಿಡಕ ಒಬ್ಬ ಮನಸ್ಯಾನಿದ್ದಾ

ಅಳತಿ ತೆಂಗಿನ ಮರದುದ್ದಾ
ದಿನಾಂಪ್ರತಿ ನೀರ ಹಣಿಸತಿದ್ದಾ
ಗಿಡಗಳ ಜೋಪಾನ ಮಾಡತಿದ್ದಾ
ಗಿಡದ ಹೆಸರು ಹೇಳಬೇಕರಿ ಒಡದಾ
ನಿಮಗ ಸಾಯೂತನಾ ಬಿಡದಾ
ಬಾಗಲಕೋಟೆ ದೇಶಕ ಕವಿ ಮಿಗಿಲಾ
ನಾಗೂ-ಗೌಸು ಹೇಳ್ಯಾರ್ರಿ ಹೊಸ ಖ್ಯಾಲಾ ||

* * *

**೩. ಕೂಸು ಎಲ್ಲಿ ಹೋತೊ**

ಬುದ್ಧಿವಂತ ಬಲ್ಲವರಾ | ಕುಂತ ಕೇಳರಿ ಹಿರಿಯರಾ
ಅನಂದ ಮನಾಯಿಟ್ಟು ಧ್ಯಾನ ಕೇಳರಿ ಪೂರಾ
ತಿಳಿಯಿರಿ ಮಜಕೂರಾ || ಪಲ್ಲವಿ ||

ಇ|| ಅರಬಸ್ತಾನ ದೇಶದಲ್ಲಿ ಇರುವದು ಬಾರಿ ಸಮುದ್ದರಾ
ಹಡಗದೊಳು ಜನಾ ಕುಂತಿದ್ರೋ ಘನಾ
ಹೇರಿ ಸ್ವಾಮಾನ | ಹಡಗ ಸಾಗಿತ್ತೊ ಆಡಂಬರಾ ||
ಇ|| ಹಡಗ ಹೋದೀತೋ ಬಹು ದೂರಾ ಎತ್ತ ನೋಡಲು ನೀರಾ
ನೀರಿನ ಸುಳಿ ಇದ್ದಿತ್ರಿ ಚಕ್ರಾ | ಗುಡ್ಡದ ಹತ್ತಿರಾ
ಹಡಗ ಮುಳಗಿತ್ತೊ ಎಳೆದು ನೀರಾ
ಇ|| ಜನರು ಕೂಡಿ ಹರಕಿ ಬೇಡಿ ಅಂದ್ರೋ ಹರ ಹರಾ
ಏರು|| ನಮಗ ನೀನು ಮಾಡೋ ಪಾರಾ
ಬರೆದಿದ್ದ ಹಣೆಬಾರಾ | ಸರಿಯಾಗಿ ಶ್ರೀಹರಾ
ಇ|| ನಡಿಯಲಿಲ್ಲೊ ಬಂದೀತು ಕಷ್ಟಾ ತಿರುಗಿ ಪೂರಾ
ಏರು|| ಒಬ್ಬ ಬಾಲಿ ಬಂದು ಹಲಗಿಯ ಮೇಲೆ ಕುಂತಿದ್ದಳೋ ತೀವ್ರಾ
ಹೋಯಿತೋ ಹಲಗಿ ನೀರಿನಲ್ಲಿ | ಕೇಳರಿ ಹಿರಿಯರಾ
ಆಕಿ ಇದ್ದಾಳೋ ತುಂಬ ಬಸರಾ
ಇ|| ಹಡದಾಳೋ ಗಂಡು ಪುತ್ತರಾ | ಆಕಿಗಿದ್ದಿಲ್ರಿ ಎಚ್ಚರಾ
ಏರು|| ತನ್ನ ಮಗನ ಮಾರಿ ನೋಡ್ಯಾಳೋ ನಾರಿ
ಆಗಿ ಎಚ್ಚರಾ | ಕಂದ ಆಗಿದ್ದ ಚಂದಿರಾ
ಇ|| ಬರೆದಿದ್ದರೋ ಹಣೆಯಲ್ಲಿ ಶನಿ ಹತ್ತಿತೋ ಭಲಾ
ತಪ್ಪಿ ಶಿವನ ಕರುಣಾ ಬಂದೀತೋ ಮರಣಾ ಪೂರ್ಣಾ
ಏರು|| ತಾಯಿ ಹೆಣಾ ಹುಗಿದವರಾ | ಧ್ಯಾಸ ಮಾಡಿ ಹೇಳೋ ಉತ್ತರಾ
ಕೂಸೆಲ್ಲಿ ಹೋತೋ ಹೇಳೋ ನಿಂ ಮಾಡಿ ಚಮತ್ಕಾರಾ
ಏರು|| ಆಗಬ್ಯಾಡೋ ಸುಮಾರಾ ಹಂಪಿನಾಗೇನಹಳ್ಳಿ
ಹೂವಿನಬಳ್ಳಿ ಬಂದಿತ್ರಿ ಹೆಸರಾ

ಇ|| ಕಾಲೇಪೀರನಲ್ಲಿ ನೀ ಹೋಗೋ ಪ್ಯಾಲಿ
ಸಿಗುವುದು ಉತ್ತರಾ | ಬರೆದಿದ್ದ ಮುಸ್ತಪಾ ಶಾಹೀರಾ ||

*** * ***

**೪. ಜೀವ ಒಬ್ಬನದು ದೇಹ ಮತ್ತೊಬ್ಬನದು**

ಕುಂತ ಕೇಳರಿ ದೈವೆಲ್ಲಾ ಮಡಬ್ಯಾಡ್ರಿ ಕಲಲಲಾ
ತಗದೇನಿ ಒಂದು ನಕಲಾ ಮಾಡಿ ಅಸಲಾ || ಪಲ್ಲವಿ ||

ಏರು|| ಒಬ್ಬ ಪುರುಷ ಬ್ಯಾಸಿಗಿ ಬಿದ್ದ ಬೆಳಗ ಗಂಟಲ ಒಣಗಿ
ಇದ್ದ ಒಂದ ಊರಿಗೆ ಹೋಗಿ ನೀರಡಿಸಿ ಮನೆ ಮನೆ ತಿರುಗಿ
ಆಗ ಇತ್ತೊ ರಾತರಿ ಕಾಲಾ ಎಲ್ಲೆಲ್ಲಿ  ಸಿಗಲಿಲ್ಲೊ ಜಲಾ
ಮುದುಕಿ ಒಬ್ಬಾಕಿ ನೂಲುತ್ತಿದ್ದಳಲ್ಲಾ ಮತ್ಯಾರಿಲ್ಲಾ || ೧ ||

ಇ|| ಬ್ಯಾಸೊತ್ತ ಆ ಪುರುಷನು ಧರ್ಮಸಾಲ್ಯಾಗ ಮಲಗಿದನು
ಜೀವ ಹೋತರಿ ಹುಡಕಲಿಕ್ಕೆ ತಾನು ತತ್ಕಾಲಾ
ಏರು|| ಮುದುಕಿ ಕೈ ಬಿಂದಗಿಯಲ್ಲಿ ನೀರು ಕುಡಿವ ಸಮಯದಲ್ಲಿ
ನೂಲುದಾಯ್ತು ಆಕ್ಷಣದಲ್ಲಿ ಹಂಜಿಪುಟ್ಟಿ ಮುಚ್ಚಿ ಅಬಲಿ
ಮಲಗಿಕೊಂಡಾಳು ಮಧ್ಯರಾತರಿ ಆ ಜೀವ ಬಿಂದಗ್ಯಾಗ ಅಂತರಿ
ಬಂಗಲೆ ಬಿಡುವೆ ಜೀವ ಹೋತರಿ ಉಳಿಯಲಿಲ್ಲಾ || ೨ ||

ಇ|| ಮರುದಿವಸ ಸರಕಾರದವರು ಪರದೇಶಿ ಹೆಣ ಎಂದು
ಅವರು ದಹನ ಮಾಡಿಬಿಟ್ಟಾರೋ ಬಿಡಲಿಲ್ಲಾ...ऽऽ
ಏರು|| ಅದೇ ದಿವಸ ಆ ಊರಾಗ ಸತ್ತಾನೊಬ್ಬ ಸಾಹುಕಾರಾ
ಬಂಧು ಬಳಗ ಕೂಡಿತೋ ಪೂರಾ | ಸುರಸತಿದ್ರೋ ಕಣ್ಣೀರಾ
ಮುಂಜಾಲೆ ಮುದುಕಿ ಎದ್ದು ಬಿಂದಗಿ ಬಾಯಿ ತಗೆದು
ಹಂಜಿಪುಟ್ಟಿ ಒತ್ತಟ್ಟಿಗೊಗೆದು ಕುಂತಾಳಲ್ಲೊ || ೩ ||

ಇ|| ಬಿಂದಿಗಿ ಬಾಯಿ ತೆರದಾಕ್ಷಣ ಒಳಗ ಸಿಕ್ಕ ಜೀವಾ
ಧರ್ಮಶಾಲೆಗೆ ಹೋಗಿತೋ ಗಡಣಾ ದಿಂಬಾ ಇಲ್ಲಾ
ಏರು|| ಸಾಹುಕಾರನ ಮನೆಯಲ್ಲಿ ಅಳುದನ್ನು ಕೇಳುತಲೆ
ಅಲ್ಲಿ ಹೋಗಿ ಆ ಕ್ಷಣದಲ್ಲಿ ಸೇರಿತವನ ದೇಹದಲ್ಲಿ
ಬದುಕಿದ ಆಗ ಸಾವುಕಾರಾ ಮಾತಾಡಿದ ಬದಲಿಯ ಸ್ವರಾ
ಗಂಡನಂತ ಹೆಂಡತಿ ತೀವ್ರಾ ಹಿಡದಾಳಾ ಕಾಲಾ || ೪ ||

ಇ|| ಒಳಗ ಜೀವ ಹೇಳತೈತಿ ನೀನಲ್ಲ ನನ್ನ ಸತಿ
ಹಿಂತ ಊರಾಗ ನನ್ನ ಹೆಂಡತಿ ಇರುವಳಲ್ಲಾ

ಏರು| ಕರಿಸ್ಯಾರೋ ದೈವೆಲ್ಲಾ ಕೂಡಿ ಹೆಂಡತಿ ಬಂದಾಳೋ ಓಡಿ
ಅಳತಾಳೋ ದೇಹ ನೋಡಿ ದೈವದಾಗ ಹೊರಳಾಡಿ
ಹೇಳಬೇಕೋ ಇದರ ಮೂಲಾ ತಿಳಿಯದಿದ್ರಾ ಬೀಳೋ ಕಾಲಾ
ಸುಳ್ಳ ಕಿಸಿಯಬ್ಯಾಡೋ ಹಲ್ಲಾ ಕಂಗಾಲಾ || ೫ ||

ಇ|| ರುದ್ರಗೌಡ ಮುದ್ರಿಯಕೀಲಾ ಭದ್ರ ಪಂಡಿತ ಬಲ್ಲವ ಬಲ್ಲಾ
ನಿದ್ರಿ ಕಣ್ಣಿಗೆ ಬರುವುದಿಲ್ಲಾ ಬಿಲ್‌ಕುಲ್ಲಾ
ಏರು| ಭದ್ರಜನಾ ಕುಡಿದಾಂಗ ಹಾಲಾ ತಿಂದಾಂಗ ಕೊಬ್ಬರಿಬೆಲ್ಲಾ
ಛಿದ್ರ ಶಬ್ದ ಎಳ್ಳಷ್ಟು ಇಲ್ಲಾ ಅದ್ರಿ ಮೇಲೆ ಬಿಟ್ಟಾಂಗ ರೈಲಾ || ೬ ||

* * *

**೫. ಬ್ರಾಹ್ಮಣ ಸತ್ತ ದೋಷ ಯಾರಿಗೆ ಬಂತೋ?**

ಏನ ಚಂದ ಕೂಡಿರಿ ದೈವಾ ಕೇಳಿರಿ ಸವಾಲಾ
ಗಪ್ ಚುಪ್ ಕುಂತ ಕೇಳರಿ ಮಾಡಬಾರದು ಗುಲ್ಲಾ
ಏರು| ಬಗದಾದ ಎಂಬುವ ಶಹರಾ ದೇಶಕ್ಕ ಜಾಹಿರಾ
ಭಕ್ತನೊಬ್ಬ ಅದಾನ ಕೊಡತಿದ್ದಾ ಅನ್ನಾ
ಅವನ ಹಂತೇಲಿ ಬ್ರಾಹ್ಮಣ ಭಿಕ್ಷೆ ಬೇಡ್ಮಾನಲ್ಲಾ || ೧ ||

ಭಿಕ್ಷೆದ ಸುದ್ದಿಕೇಳಿ ಕುಶಿ ಆದಾನಲ್ಲಾ
ನಮ್ಮಲ್ಲೆ ಊಟ ಮಾಡಲಿಕ್ಕೆ ಏನೂ ಅಡ್ಡಿ ಇಲ್ಲಾ |
ಏರು | ಬ್ರಾಹ್ಮಣ ಕೇಳಿದಾಕ್ಷಣ ಮಾಡಲಿಕ್ಕೆ ಹೋದಾನು ಸ್ನಾನಾ
ಸತಿಗೆ ಹೇಳುತಾನ ಅಡಗಿ ಮಾಡು ವತ್ತರ
ಗೌವಳಗಿತ್ತಿ ಮೊಸರ ಮಾರತಿದ್ಲೊ ಹೊತ್ತು ತಲಿಯಮೇಲಾ || ೨ ||

ಇ|| ಗೌವಳಗಿತ್ತಿ ಮೊಸರ ತಗೊಂಡು ಬರುತ್ತಿದ್ದಳಲ್ಲಾ
ತಲಿಯ ಮೇಲೆ ಹೊತ್ತ ಗಡಗಿಯದು ಬಾಯಿ ಮುಚ್ಚಿದಿಲ್ಲಾ
ಏರು| ಗರುಡೊಂದು ಹಾರಿತು ಮೇಲಾ ಸರ್ಪ ಕಚ್ಚಿ ಬಾಯೊಳು
ಒಯ್ಯುತಿತ್ತು ತಿನ್ನುದಕ ಸರ್ಪ ತನ್ನ ಜೀವದ ಸಂಕಟಕ
ವಿಷವ ಕಾರೀತು ಗಡಿಗ್ಯಾಗ ಬಂದು ಬಿದ್ದಿತಲ್ಲಾ || ೩ ||

ಮೊಸರ ತಗೊಂಡ ಬಾಲಿ ಎರಡು ಭಯವಿಲ್ಲಾ
ಬ್ರಾಹ್ಮಣ ಜಳಕವ ಮಾಡಿ ಕುಂತ ಎಡಿಯ ಮೇಲಾ
ಏರು| ಮಾಡಿದಂತ ಪಕ್ವಾನ್ನ ಪಂಚಾಮೃತ ಅಡಗಿ
ಹಾಲು ಮೊಸರು ಮೇಲಾ ನೀಡ್ಯಾಳ ಉಳಿಸಲಿಲ್ಲಾ
ಜರಾ ಉಂಡಾಕ್ಷಣ ಬ್ರಾಹ್ಮಣ ಹೊಟ್ಟಾಗ ಬಿದ್ದಿತು ಕಲಭಲಾ || ೪ ||

ಇ|| ಹಾವಿನ ವಿಷವು ಅವನಿಗೆ ಜೇರ ಮಾಡಿತಲ್ಲಾ
ನೋಡು ನೋಡುದುರೊಳಗ ಅವನ ಜನ್ಮ ಉಳಿಯಲಿಲ್ಲಾ
ಏರು| ಬ್ರಾಹ್ಮಣ ಸತ್ತ ದೋಷ ಯಾರಿಗೆ ಬಂತೋ ತ್ರಾಸ
ಸುಳ್ಳ ಹಿಂತ ಪಂಟ ಹೇಳಿ ಹೋಗಬ್ಯಾಡ ಹೊಂಟ
ಓಡಿ ಹೋದರ ಹೇಡಿ ಬೆನ್ನ ಬಿಡೂದಿಲ್ಲಾ || ೫ ||

ಇ|| ನಿಮ್ಮಂತ ಹುಲ್ಲ ಕವಿಗಳು ಬಂದು ಬಂದು ಹೋಗ್ಯಾರಲ್ಲಾ
ವೈರಿಯ ತಲಿಯಮ್ಯಾಲಾ ಕಸಬರಗಿಯ ಹುಲ್ಲಾ
ಏರು| ಬಾಗಲ್‌ಕೋಟಿ ರಂಗಲಾಲಾ ಮಹ್ಮದ ಗೌಸು ವೈರಿಗೆ ಮಿಗಿಲಾ
ನಾಲ್ಕು ಮಂದಿಗೆ ತೋಲಾ ಸಭೆಯೊಳಗ ಇವರ ಕೈ ಮೇಲಾ
ವೈರಿಯ ತಲಿಯಮ್ಯಾಲಾ ಕಸಬರಗಿಯ ಹುಲ್ಲಾ || ೬ ||

* * *

**೬. ಆರು ಸ್ಥಲ ಆರು ಚಕ್ರ ಆರು ಪ್ರಮಾಣ**

ಕೂಡಿರಿ ದೈವಾ ಬಂದ ಹೇಳುವೆ ಚಂದದಿಂದಾ
ಅನುಭವ ತಗದೇನಿ ಒಂದ ಹೇಳಬೇಕೋ ನೀನಾ
ತೂಕ ಹಚ್ಚಿದಾಂಗ ಚಿಂತಾಲಾ | | ಪಲ್ಲವಿ ||

ಇ|| ಧ್ಯಾನಮಾಡೋ ಸಾಂಬನಾ ಮುಕ್ತಿಕೊಡುವ ನಿನಗವನಾ
ಏರು|| ನೀಚಗುಣವನ್ನು ಬಿಡು ನೀನಾ ಪೇಳುವೆ ನಿಮಗೆ ನಾನಾ
ಆಧಾರ ಮೂಲ ಹೇಳಬೇಕ ಸೀದಾ ಹೇಳದಿದ್ದರ ಆದಿ ಅಪಮಾನಾ || ೧ ||

ಇ|| ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಆರು ಗುಣಾ
ಕಳೆದು ಉಳಿದಿದ್ದು ಹೇಳೋ ನೀನಾ ಕೇಳುವೆ ನಾನಾ
ಏರು|| ಅಹಂಕಾರ ಬಿಡೋ ನೀನಾ ಭಜಿಸು ಸಾಂಬನಾ
ಎಷ್ಟು ಇಟ್ಟರಿ ಒಣಡೌಲಾ ಮಾಡಿರಿ ಮೇಲಾ ನಿಮಗಿಲ್ಲೋ ಒಂದರ ಹ್ಯಾಂವಾ
ಹೇಳಬ್ಯಾಡೋ ನೀವಾ ಸಬಾದೊಳಗ ಹಲ್ಲುಕಿಸ್ತಾ || ೨ ||

ಇ|| ಆರು ಸ್ಥಲ ಆರು ಚಕ್ರ ಆರು ಪ್ರಮಾಣ ಆರು ಲಿಂಗ ಇದರರ್ಥ ಮಾಡೋ ನೀನಾ
ಸಭಾದೊಳು ನಿಂತ ಸರ್ವ ಸಭಾಕ ತಿಳುವ ಹಾಂಗ
ಏರು|| ಆರುಸ್ಥಲದ ವರ್ಣದೊಳು ಮೂಲಸ್ಥಾನ ಯಾವುದು ಹೇಳೋ
ಯಾವ ಸ್ಥಲಕ ಯವ ಚಕ್ರ ಯಾವ ಪ್ರಮಾಣ ಯಾವ ಲಿಂಗ
ಸಭಾದೊಳು ಬಂದ ಇಟ್ಟದಿ ಬಡಿವಾರ ಶೋಧನ ಮಾಡೋ ನೀನಾ || ೩ ||

ಇ|| ಹಮ್ಮಿಗಾಗಿ ಬ್ರಹ್ಮಕೆಟ್ಟಾ ಅದರಂತೆ ದೇಹ ನಷ್ಟಾ
ತಿಳಕೊಳ್ಳ ಧ್ಯಾಸ ಇಟ್ಟು ಪರಿಪೂರ್ಣವಾಗಿ

ನಿಂದ್ಯಾ ಆಡಬಾರದೋ ಮನುಷ್ಯ ಜಲುಮಾ ||
ಏರು| ಶಾಣ್ಯಾನಾಗಿ ಸಬ್ಬಾದೊಳು ಬಂದು ಹೇಳಬೇಕೋ ಉತ್ತರ ತಂದು
ಹಾಕೇನಿ ನಿಮಗೆ ತೋಡಿ | ಹಾರ್‍ಯಾಡಬ್ಯಾಡ ಕೋಡಿ
ಉತ್ತರಕೊಟ್ಟು ಹೋಗೋ ಲೌಡಿ ಹಾಡು ಸಭೆಮಾಡಿ ಗುಲ್ಲಾ || ೪ ||

ಇ|| ಧರೆಯೊಳು ಬಾಗಲಕೋಟಿ ಇರುವುದು ಮೋಜಿನ ಪ್ಯಾಟಿ
ಹುಡುಗರು ಹೇಳಿದ ದಾಟಿ ಹೊಡದಾಂಗ ಸಿಡಿಲಾ
ಏರು|| ವೈರಿ ಕುಂತಾನೋ ಹೌಹಾರಿ ಹಿರೇ ಮಸೂತಿವೊಳಗಾ
ಕೇಸುಪೀರ ದಸ್ತಗೀರನ ದಯಾ ನಮ್ಮ ಮ್ಯಾಲೆ ಸಂಪೂರ್ಣಾ
ಕೇಳೋ ವೈರಿ ಹಾಡೋ ನೀ ತೋಡಿ
ಹಾಡದಿದ್ದರ ನೀ ಆಗುವೆ ಹುಚ್ಚಪ್ಯಾಲಿ || ೫ ||

* * *

### ೬. ಮುನ್ನೂರಾರವತ್ತು ಹೆಂಡರ ಗಂಡನ ಹೆಸರು

ಅತ್ತ ಇತ್ತ ಸುಳ್ಳ ಕಳಿಬ್ಯಾಡೋ ಹೊತ್ತಾ
ಮಾಡಿ ವ್ಯರ್ಥಾ ಕವಿ ತಿಳಿಯದೆ ಅರ್ಥಾ || ಪಲ್ಲವಿ ||

ಏರು|| ನಗತ ನಗತ ಬೆದಿ ಗೊತ್ತಿಲ್ಲದ ಹಾದಿ
ಒರಸುವೆ ಮುಕಳಿಗ ಬೂದಿ ತೆರುಹಾಂಗ ನಿನಗೂದಿ
ತಗೋ ಇನ್ನ ಚಡತಿ | ಮಾಡತೇನಿ ಜಡತಿ | ಬಿಟ್ಟ ಪಡಾ ಓಡತಿ
ಕೊಟ್ಟರ ಬರಿ | ನಗುನಗುತಾ ಮೋಜು ಮಾಡೂನೋ ನಿಂತಾ
ಸುತ್ತ ಮುತ್ತ ಕುಂತಿರಿ ಕೇಳರಿ ಬುದ್ದಿವಂತಾ || ೧ ||

ಇಡೋ ಚಿತ್ತಾ ಕವಿ ಮಾಡಿ ಹಾಡುವೆ ಸೊಂತಾ
ಇಲ್ಲಂತ ಹೇಳಿದರ ಮಾರೂಂಗಾ ಸರಪೆ ಜೂತಾ
ಏರು| ನಿಂತ ಹೊಯ್ಕಂಡಿ ಬಂದ ಸಿಕ್ಕೊಂಡಿ | ಕೇಳೋ ತಮ್ಮಾ ಸುಖಾ ಏನ ಉಂಡಿ
ಬಿಡಿಸುವೆ ನಿನ ತಿಂಡಿ | ಇಡೂದಿಲ್ಲ ಮುಚ್ಚಿ | ಹೇಳತೇನಿ ಬಿಚ್ಚಿ
ಬಾಯಾಗ ಉಚ್ಚಿ | ಹೊಯ್ಯುವೆನು ನಿಂತಾ | ಕೇಳೋ ಮಾತಾ
ಎನಗೂಡ ಇಟ್ಟರ ಪಂತಾ | ಒದುವೆ ನಿಂತಾ | ಸಿಡೂಹಾಂಗ ಮುಕಳ್ಯಾಗಿನ ಜಂತಾ || ೨ ||

ಕುಂತಿ ಬೆರೆತಾ ತಗೋ ಕಡತಾ ಮ್ಯಾಲೆ ಕಡತಾ |
ಬಾರೋ ಕಲತಾ | ಆಗಿ ಗುರುವಿನ ತೊತ್ತಾ |
ಏರು| ಬಲ್ಲವಗ ಏನ ಬಿರಿ ಶಾಯಿರಿ ಮಾಡುವುದು |
ನಿನ್ನಂತ ಬುದ್ದಿಗೇಡಿಗೆ ಹ್ಯಾಂಗ ತಿಳಿಯುವುದು |
ಅಂದಲ್ಲೋ ನೀ ಹೋಗಿ ಮನಿಮನಿ ತಿರುಗತಿಯೋ ಸ್ವಾನಿ

ಚೈನ ಇಲ್ಲದಾಂಗ ಕೇಳಿಕೊಂತ ಮಂದಿ ಕೈಕಾಲ ಹಿಡಕೊಂತಾ
ತಿರಗತಿ ಸೊಂತಾ ಸಲಾಮ ಖುದಾಕು ಕೈಸೆ ಮಿಲತಾ || ೩ ||

ಎಷ್ಟಂತ ಹಾಡಿ ಲೌಡಿ ಕುಣಿಕೊಂತಾ | ರಕ್ತ ಬಂದೀತ ಹ್ವಾದಿ ಅತಗೊಂತಾ |
ಏರು| ಬೈದಾಡೂದು ನಿಮಗ ಸೆಂವಿ ಕಂಡೈತಿ | ಭಂಡತನಕ ನಾ ನಿಮಗಂಡ
ನಿಮದೇನ ನಡುತೈತಿ ಇನ್ನಾರ ತಿಳಿಯೋ | ಕೋಪಯೆಲ್ಲ ಅಳಿಯೋ
ಹಿಡಿಕಸಬರಗಿ ಪುಟ್ಟಿ | ಹೊತ್ತ ಆಗಿ ಇಬ್ಬರು ಜತ್ತಾ
ನಡಿಬೇಕೋ ಶಿಸ್ತಾ | ನೋಡೋ ಕೈಯಾಗಿನ ಬೆತ್ತಾ || ೪ ||

ಹಿಡಿಯೋ ಗುರ್ತಾ ನಿಮಗ ಬಂದೈತಿ ಹೊತ್ತಾ
ನುಡಿಸಿ ನುಡತಾ | ಕೊಡುವೆ ಎಣಿಸಿ ರೂಪಾಯಿ ಹತ್ತಾ |
ಏರು | ಮುಪ್ಪಿನ ಕಾಲಕ ಸರಿ | ಬಂತ ನಿನಗ ಚಾಕರಿ | ಮುನಸಿಪಾಲಿಟಿಗೆ ಹೋಗಿ
ಕೊಡಬೇಕ ಹಾಜರಿ ಹಿಡಿನೆಪ್ಪಾ ಇನ್ನಾ | ಒಪ್ಪುದು ಸ್ವಾನಾ ತಪ್ಪದೆ ನೀನಾ
ಹೋಗಿ ದರದಿವಸ ಬ್ಯಾಸತ್ತ ಕೋಳೋ ಮಾಡಿದರ ಹರಕತಾ
ಕುಂತರ ಮರತಾ ಸಿಗಲಿಕಿಲ್ಲೊ ರೂಪಾಯಿ ಹತ್ತಾ || ೫ ||

ಇಡರಿ ಚಿತ್ತಾ ತಿಳಿಸುವೆ ಮಾತೊಂದಾ ಮುತ್ತಾ | ಉತ್ತರ ತುರ್ತಾ ಕೊಡುವೆ ಈಗ ಪರ್ತಾ
ಏರು | ಮೂನ್ನಾರಾರವತ್ತು ಸ್ತ್ರೀಯರು ಅಂದರೆ ನರಗಳು | ಗಂಡ ಅಂಬುವಂತ ಆತ್ಮದಲ್ಲಿ
ಜೀವಾ ಕೇಳೋ | ಬಾಲಗಕೋಟಿ ಮೋಜಿನ ಪ್ಯಾಟಿ | ನೆನೆದಾರ ಘಟ್ಟಿ
ಪೀರ ಮಲ್ಲೇಕಲ್ಲ ಇಟ್ವಾರೋ ಹಸ್ತಾ | ಹುಸೇನಮಿಯ್ಯಾನ ತಲಿಮ್ಯಾಲೆ ಶಿಸ್ತಾ
ನೋಡಿ ಸೊಂತಾ ಕೇಳಿ ನಿಂತಾನ ವೈರಿ ಬೆರೆತಾ || ೬ ||

*** * ***

**೮. ಮೂನ್ನೂರಾರವತ್ತು ಹೆಂಡರ ಗಂಡನ ಹೆಸರೇನು?**

ಮುಂಚೆ ಮೊದಲಿಗೆ ನಾನು | ನಮಿಸುವೆ ಸ್ವಾಮಿ ಶಂಕರನಾ
ಏರು|| ಅಷ್ಟ ಜೀವರಾಶಿಗೆ ಹುಟ್ಟಿಸಿ ಕಳುಹಿ | ಪರಿಪರಿಯಿಂದ ಅವರಿಗೆ ಸಲುಹಿ
ಜೋಕೆ ಮಾಡ ಎನ್ನ ಜತನಾ | ಮರೆಯದೆ ಭಜಿಸುವೆ ನಾನಾ || ೧ ||

ನೆನೆಸುವೆ ಮನವಿಟ್ಟು ಹಸನಾ | ಸುತ್ತ ದೇಶಕ್ಕ ಮಕ್ಕಾ ಮದೀನಾ
ಏರು|| ಅಲ್ಲೆ ಇರತಾರೋ ನಬಿಸಾಬ ಶರಣಾ | ಮೌಲಾ ಖಾತೂನ ಜನ್ನತನಾ
ಹಸನ್ನೈನ ಹುಸನ್ನೈನಗ ಶರಣಾ | ತುಸು ಇಡರಿ ಇತ್ತ ಕರುಣಾ ಕುಂತಿರು ದೈವಕ್ಕ ಶರಣಾ || ೨ ||

ಈ ಮಾನವ ಜಲ್ಮಕ ಹುಟ್ಟಿ ಬಂದು | ನೀವು ನಡಿಸರಿ ಹುಕುಮ ಸಾಂಬಂಧ
ಏರು|| ನಿತ್ಯ ಕೊಡಬೇಕ ದಾನಾ | ಭಕ್ತೀಲೆ ಇಟ್ಟು ಮಾನಾ
ನಿತ್ಯ ಐದು ಹೊತ್ತಿನಾ | ನಮಾಜ ಮಾಡುವರೊ ದಿನಾ || ೩ ||

ನಮಾಜ ಮಾಡಿದಂವಗ ಸ್ವರ್ಗದಾಗ ಹಾಕುವರೋ
ಏರು|| ಬೇನಮಾಜಿಗೆ ನರಕದಾಗ ದೂಡುವರೋ | ದುಡ್ಡು ದುಗಲ ಕಾಂಚಾಣಾ
ಖರ್ಚು ಹತ್ತುದಿಲ್ಲಾ ಏನೇನಾ | ತುಸು ಮಾತಿನ ಕಲ್ಪನಾ || ೪ ||

ಶಾಹೀರಗ ಕೇಳತೇನಿ ನಾನಾ | ಮುನ್ನೂರಾರವತ್ತು ಹೆಂಡಿರಗಂಡು ಒಬ್ಬ ಇರತಾನೋ
ಜಗತ್ತಿನೊಳಗ ಪುಂಡಾ ಹೇಳ ಅವನ ಹೆಸರೇನಾ | ತಿಳಿತೈತಿ ನಿನ್ನ ಶಾಣೇತನಾ || ೫ ||

ಇ|| ಗುರು ನಮ್ಮ ದಸ್ತಗೀರಗ ಶರಣಾ ಕೇಸುಪೀರ ಕುಸಿಯಿಂದಾ ಶರಣಾ
ಏರು|| ಬಾಗಲಕೋಟ್ಯಾಗ ಇರತಾರೋ | ನಾಗೂ-ಗೌಸು ಮಾಡಿ ರಿವಾಯಿತ
ಹೇಳತಾರೋ ಚಂದದಿಂದ ಮಾಡುವೆ ದೈವಕ್ಕ ಶರಣಾ || ೬ ||

* * *

**೯. ನೆಲಕ್ಕೆ ಹತ್ತದ ಗಿಡದ ತಪಶೀಲೇನು?**

ಪೃಥ್ವಿಪಾಲಕ ಸಂಬಗ ಶರಣಾ | ಮಾಡುವೆ ಮೊದಲಿಗೆ ನಾ
ಇರಿಬಿ ಎಂಬತ್ತು ಕೋಟಿಗೆ ದಾತಾ ಅವನೇ ಭಗವಂತಾ
ಯಾರಿಲ್ಲಾ ಅವನ ಹೊರತಾ | ಮಾಡಾಂವಾ ನೋಡಾಂವಾ ಕೊಡಾಂವಾ
ಮುಕ್ತಿ ಸ್ವಾದೀನಾ ಇಟ್ಟು ನಡಿಯಬೇಕ ಇಮಾನಾ | ಆತನ ಪಾದಕ ಶರಣಾ || ೧ ||

ಸುತ್ತ ದೇಶಕ ಮಕ್ಕಾ ಮದೀನಾ ಆಗೇತರಿ ಬಹಳ ವಾಹಿನಾ
ಏರು|| ನಬಿಸಾಬ ಶರಣಾ ಬೀಬಿ ಕಾತೂನಾ | ಮೌಲಾನ ರತನಾ
ಹಸನ ಹುಸೇನಾ ಇವರ ಮನಕಂದನಾ
ಅವರಿಗೆ ವಂದಿಸುವೆ ನಾನಾ ಆತನ ಪಾದಕ್ಕ ನನ್ನ ಶರಣಾ || ೨ ||

ಒಂದ ಗಿಡಾ ಕಂಡೇನಿ ಅದರ ಬುಡಾ ನೆಲಕ್ಕ ಹತ್ತುದಿಲ್ಲೇನಾ
ಏರು|| ಇಪ್ಪತ್ತೊಂದ ಟೊಂಗಿ ಅದಕ್ಕ ಹಣ್ಣು ಇದ್ದವು ಹದಿನಾಲ್ಕು
ಒಂದ ಹಣ್ಣ ತಿಂದರ ಮೂಕ ಒಂಬತ್ತ ತಿಂಗಳ ತನಕ
ಹೇಳೂತನಕ ಮುಂದಕ್ಕ ಬಿಡೂದಿಲ್ಲಾ ಗಿಡಕ ಬಿಡುತೇನಾ
ಮುದ್ದತ್ ತಗೊಳು ಸಾವೂತನಾ || ೩ ||

ಹೋಗಿ ಕೇಳೋ ನಿಮ್ಮ ಗುರುವಿನಾ ಮಾಡುವೆ ಮೊದಲಿಗೆ ನಾ
ಒಳೆ ಬಂದ ಸಿಕ್ಕಿದೀ ಶಾಹೀರಾ ನಿನಗ ಹಾಕೇನಿ ಗಂಟಲಗಾಣಾ
ಏರು|| ಒಂದು ಕೊಡ ನೀರ ಅದಕ | ಹಣಿಸಲಿಲ್ಲೊ ಆ ಗಿಡಕ
ಹೇಡಿ ಸರ್ಪ ಅದಕ ತೊಡಕ ಹಾಕಿತೋ ಆ ಗಿಡಕ
ಶಾಹೀರಾ ಗಂಭೀರಾ | ಹುಶಿಯಾರಾ ಆಗಬೇಕೋ ನೀನಾ
ಉಸರ ಹಾಕಬ್ಯಾಡೋ ಸ್ವಾನಾ | ಬಂದ ಹೊಲಸ ಪಂಡಿತ ಕೋಣಾ || ೪ ||

ಸುತ್ತ ದೇಶಕ ಬಾಗಲಕೋಟಿ ಆಗೇತರಿ ಬಹಳ ವಾಯಿನಾ
ಏರು|| ಪೀರ ದಸ್ತಗೀರನ ದಯಾ ಇರೂತನಕ
ಸಭೆದಲ್ಲಿ ಹಾಡುವೆ ಖಡಕ ಲಕ್ಷಣಸಿಂಗನ ಕವಿ ಬಲೇ ಖಡಕ
ಶಾಹೀರ ನಿಂದರೊ ಎಡಕ ಬಹಾದ್ದೂರ ಗಂಭೀರಾ
ಹುಶಿಯಾರಾ ಆಗಬೇಕೋ ನೀ ಇನ್ನ ಹೋಗಿ ಸಾಲಿ ಕಲಿಯೊ
ಗುರುವಿನ ನಾಮವೇ ಮೊದಲಿಗೇನಾ || ೫ ||

* * *

**೧೦. ಯಾರು ಆದ್ರೋ ಆಕಿ ಲಗ್ನಣಾ ನೋಡಿ ಹೇಳೋ ಶಾಹೀರಾ**

ಬಂದ ಕೂಡಿರಿ ಜನಾ | ಮಾಡುವೆ ಈಗ ಶರಣಾ
ತಪ್ಪಾದ್ರ ನನ್ನ ನುಡಿನಾ | ಮಾಫ ಮಾಡ್ರಿ ಇನ್ನಾ ||
ಏರು|| ನಾನೇ ಶಾಹೀರನೆಂದು ನೀನಾ || ಸಾರಿ ಹೇಳಬ್ಯಾಡೋ ಇನ್ನಾ
ಘೋರ ತರುವನು ಬಗವಾನಾ | ಹೋಗುವಾಗ ನಮಗಿನ್ನಾ
ಗರುವು ಬಿಟ್ಟು ನಡಿಯೋ ನೀ ಇನ್ನಾ
ದಿನ ನಿತ್ಯ ಸ್ಮರಿಸೋ ಸಾಂಬನ್ನಾ | ಮನದೊಳಿನ್ನಾ
ಅಂದರೆ ಸಿಗುವುದು ಮೋಕ್ಷನಾ | ನೆನಸು ಅಲ್ಲಾನ್ನಾ || ೧ ||

ಮುಂದ ಕೇಳ್ರಿ ನಾನಾ | ಹೇಳುವೆ ಆದಂತ ಸೂಚನಾ |
ನಾಲ್ಕು ಮಂದಿ ಒಳ್ಳೆಗೆಳೆತನಾ | ಕಳಿತಿದ್ರೊ ಕೂಡಿ ಕಾಲವನಾ |
ಏರು|| ಒಂದನೆಯವರು ಬಡಿಗಾರವನಾ | ಎರಡನೆಯವನು ಚೆಂಪಿಗಾರವನಾ
ಮೂರನೆಯವನು ಪತ್ತಾರವನಾ | ನಾಲ್ಕನೆಯವರು ಮುಸಲ್ಮಾನಾ
ಒಂದು ದಿವಸ ಮಾಡಿ ಅವರು ಹವಣಾ | ಮಾಡಲಿಕ್ಕೆ ಹೋಗಾಣಾ ಸಂಚಾರನಾ
ಅಡವಿ ಆರ್‍ಯಾಣಾ ಹೋಗಿ ನಿಂತ್ರೊ ಅವರು ಕಾನನಾ
ಮುಂದ ಕಾಣಲಿಲ್ಲೊ ಏನೇನಾ || ೨ ||

ಎಂತಾ ಹೊತ್ತು ತಂದಿಯೋ ನೀನಾ | ಕಾಯಬೇಕೋ ಭಗವಾನಾ
ಸ್ಮರಿಸುತ ಕುಂತಾರೋ ಸಾಂಬನಾ | ಹಮ್ ಕ್ಯಾ ಕರನಾ
ಏರು|| ಕುಂತು ಮಾಡ್ಯಾರೊ ಯೋಚನಾ | ಮೂರು ತಾಸು ಒಬ್ಬೊಬ್ಬರನಾ
ಇದರಂತೆ ಸರತಿನಾ | ಕಾಯಬೇಕೋ ಸಾಮಾನಾ
ಪಾಳೆ ಪ್ರಕಾರನಾ | ಅದರಂತೆ ಇನ್ನಾ
ಮುಟ್ಟುವುದು ನಮ್ಮ ಪಾಳಿನಾ | ಒಂದೇ ಸವನಾ || ೩ ||

ಬಡಿಗೇರಾವಾ ಮಾಡಿಟ್ಟಾನಾ | ದೊಡ್ಡದೊಂದು ಗೊಂಬಿಯನಾ
ಗೆಳಿಯಾಗ ಹೇಳ್ಯಾನೋ ಸೂಚನಾ | ಏಳು ನೀ ಮಲಗುವೆ ನಾನಾ
ಏರು|| ಎದ್ದು ಕುಂತು ಚೆಂಪಿಗ್ಯಾ ಇನ್ನಾ | ಸುತ್ತ ಮುತ್ತ ನೋಡ್ಯಾನೋ ತಾನಾ
ದೊಡ್ಡಗೊಂಬಿ ಕಂಡಿತಾಕ್ಷಣಾ | ಕಣ್ಣೀಗೆ ಸಂಪೂರಣಾ

ಈ ಗೊಂಬಿ ಯಾಂವ ಮಾಡ್ಯಾನಾ | ಏನ ಚಂದ ಕಾಣುವುದು ಇದರ ವರಣಾ
ಏನು ಮಾಡಲಿ ನಾನಾ ಹೊಲಿದು ಹಾಕುವೆ ಬಟ್ಟೆಯನಾ ಎಲ್ಲಾ ತರತರನಾ || ೪ ||

ತನ್ನ ವ್ಯಾಳೆ ಮುಗಿಯಿತು ಇನ್ನಾ | ಎಬಿಸ್ಯಾನೊ ಪತ್ತಾರವನಾ
ಮಲಗಿಕೊಳ್ಳುವೆ ನಾನಾ | ಕಾಯಪ್ಪಾ ನೀನಾ ||
ಏರು|| ಎದ್ದು ಪತ್ತಾರ ನೋಡುತಾನಾ | ಚಿತ್ತಾರದ ಗೊಂಬಿಯನಾ
ಯಾವ ಇಲ್ಲಿ ಮಾಡಿ ಇಟ್ಟಾನಾ | ತೀರದು ಇದರ ವರಣಾ
ನಡುವಿಗೆ ಮಾಡಿ ವಡ್ಯಾಣಾ | ಬಾಜೂ ಬಂಧಿ ಕೈಗೆ ಇಟ್ಟಾನಾ
ಕೊರಳಾಗ ಇನ್ನಾ ಹಾಕಿ ಬಿಟ್ಟಾನಾ ಸ್ವಾಮಾನ ಎಲ್ಲಾ ತರತರನಾ || ೫ ||

ಎಬಸ್ಯಾನೊ ಸಾಹೇಬನಾ | ಬಂತು ನಿನ್ನ ಸರತಿ ಇನ್ನಾ
ಕಾಯಬೇಕೋ ನೀನು ಜಾಣಾ | ಮಲಗುವೆ ನಾನಾ
ಏರು|| ಎದ್ದು ಕುಂತು ನೋಡತಾನಾ | ಏನಿದು ಭಗವಾನಾ
ತಿಳಿಯಲಾರದು ನನಗ ಇನ್ನಾ | ಮಾಡಲಿ ಇನ್ನೇನಾ
ಸುಂದರವಾದ ಗೊಂಬಿಯನಾ | ಕಣ್ಣಿಲೆ ಕಂಡೆನಾ ನಿನ್ನಾ
ಅಬ್ ಮೈಕ್ಯಾಕರನಾ | ಸಾಂಬ ಶಿವನಾ
ಸ್ಮರಿಸುತ ಕುಂತ ಸುಮ್ಮನಾ | ಕೊಡು ಜೀವವನ್ನಾ || ೬ ||

ಭಕ್ತಿಲಿಂದ ಸಾಹೇಬನಾ | ನೆನಸೂತ ಅಲ್ಲಾನಾ
ಪಡೆದುಕೊಂಡಾನೊ ವರವನ್ನಾ | ಗೊಂಬಿ ಜಲ್ಮಕ ಇನ್ನಾ
ಏರು | ಗೊಂಬಿ ಜೀವತುಂಬಿ ನಿಂತಿತೋ ಇನ್ನಾ | ಏನು ಹೇಳಲಿ ಸುಂದರ ಹೆಣ್ಣಾ
ಕಾಣುವುದು ಕಣ್ಣಿಗೆ ಬಣ್ಣಾ | ಗಜ ನಿಂಬಿಯ ಹಣ್ಣಾ
ನಡಸಣ್ಣ ನೋಡ ನಡಗೀನಾ | ತುಟಿ ತೊಳಪ ಗಲ್ಲ ಹೊಳಪನ್ನಾ
ನವಲಿನ ವರಣಾ | ಕಾಣ್ವಳೊ ಆಕಿ ಯೌವ್ವನಾ |
ನಿಂತು ನೋಡ್ಯಾರ ಎಲ್ಲಾರು ತಾವಣ್ಣಾ || ೭ ||

ಬಡಿಗೇರಾವ ಅಂತಾನಾ | ನಾನೇ ಮಾಡಿದ್ದೆ ಈ ಗೊಂಬಿಯನಾ
ಮದುವೆ ಆಗುವೆ ನಾನಾ | ಬಿಡೂದಿಲ್ಲ ಈಕಿಯನ್ನಾ ||
ಏರು|| ಚಿಂಪಿಗಾರ ಅಂತಾನಾ | ತರತಹದ ಅರಬಿಯನ್ನಾ
ಹೊಲದ ತೊಡಸೇನಿ ನಾನಾ | ಮದುವೆ ಆಗುವೆ ಇನ್ನಾ
ಪತ್ತಾರವಾ ಹಿಂದ ಅಂತಾನಾ | ತರತರದ ಎಲ್ಲ ಸ್ವಾಮಾನಾ
ಮಾಡಿಇಟ್ಟಾವ ನಾನಾ | ಮದುವೆ ಆಗುವೆ ಇನ್ನಾ | ಬಿಡೂದಿಲ್ಲ ಆಕಿಯನಾ || ೮ ||

ಸಾಹೇಬ ಅಂತಾನಾ | ಹಂಗ ಇಟ್ಟಿದ್ರಿ ಗೊಂಬಿಯನಾ
ವರವು ಪಡಕೊಂಡು ಅಲ್ಲಾನಾ | ಜೀವ ತುಂಬಿಸಿನಿ ನಾನಾ
ಏರು|| ಮೈ ಶಾದಿ ಕರೆ ಇನ್ನಾ | ಆಗುವೆ ನಾನು ಲಗ್ನನಾ
ಬಿಡೂದಿಲ್ಲಾ ಈಕಿಯನ್ನಾ | ತಡ ಮಾಡಲಾರೆ ನಾನಾ

ಅಂದು ನಿಂತಾನಾ | ಯಾರು ಆದ್ರೋ ಆಕಿ ಲಗ್ಗಣಾ
ನೋಡಿ ಹೇಳೋ ಶಾಹೀರ ನೀನು ಇನ್ನಾ | ಇದರ ಹವಣಾ
ಸೋಸಿ ತಗದಾಗ ಬಂಗಾರನಾ | ಕಸರಿಲ್ಲೋ ಏನಾ || ೯ ||

ನೋಡೋ ಹಿರೇ ವಡ್ಡಟ್ಟಿನಾ | ಪಗಡಿ ಬಾಜಾರನಾ
ಚಿಕ್ಕ ಮಸೂತಿಗೆ ಶರಣಾ | ಹೋಗಿ ಬೇಡಿಕೊಳ್ಳೋ ನೀನಾ || || ೧೦ ||

*** * ***

## ೧೧. ಮೂರು ಮಂದಿಯೊಳಗ ಲಗ್ನ ಆದಾಂವ ಯಾರು?

ಪಂಡಿತರು ಕೂಡಿರಿನ್ನಾ ಶರಣ ಮಾಡುವೆ ನಾ
ಏರು| ಒಂದು ಮಹತ್ವವನಾ ಹೇಳುವೆ ನಾನಾ | ಚಿತ್ತಿಟ್ಟ ಕೇಳರಿ ನೀವಾ ಸರ್ವಜನಾ
ಒಂದ ಊರಾಗ ಒಬ್ಬ ಸಾಹುಕಾರನ ಮಕ್ಕಳಿದ್ದರೊ ನಾಲ್ಕು ಜನಾ
ಒಂದು ಹೆಣ್ಣು ಮೂರು ಗಂಡು ಅಕ್ಕನದು ಆಗಿತ್ತೊ ಲಗ್ಗನಾ
ಹಿರೇ ಅಕ್ಕ ಹಡೆದಿದ್ದಳಾಕೆ ಒಂದು ಹೆಣ್ಣನಾ | ಇವರು ಹೋದ್ರೋ ಆ ಕ್ಷಣಾ
ನನಗ ನಿನಗ ಅಂತ ಮೂವರು ಒಡದಾಡುತ ಇನ್ನಾ ನಿಂತರೋ ಆ ದಿನಾ
ನಿಮಗ ಈ ಹೆಣ್ಣು ಕೊಡುವುದಿಲ್ಲರಿ ನಾನಾ | ವಿದ್ಯೆಬುದ್ದಿ ಕಲಿತವಗ ನಾನಾ
ಕೊಡತೇನಿ ಈ ಹೆಣ್ಣಾ | ಕಲಿಯಲಿಕ್ಕೆ ಹೋದಾರೋ ವಿದ್ಯೆವನಾ || ೧ ||

ಇ|| ಹೋಗಿ ಸೇರಿದರೊಂದು ದೊಡ್ಡ ಪಟ್ಟಣನಾ
ಏರು|| ಹಿರೇ ಅಣ್ಣಾ ಆದಿನಾ ಹೋದಾ ಮಣಿಗಾರ ಪ್ಯಾಟಿಗೆ ತಾನಾ
ಮಣಿಗಾರ ಇಟ್ಟಿದ್ದ ಒಂದ ಕನ್ನಡಿನಾ ಕೇಳಿದ ಕನ್ನಡಿಯನಾ
ಕೇಳಿದರ ಬೆಲಿನಾ ಸಾವಿರ ರೂಪಾಯಿ ಹೇಳಿದನಾ
ಮಾಡಿದಾ ಚೌಕಾಸಿ ಹೇಳಿದ ಪುರಮಾಸಿ | ಈ ಜಗತ್ತು ಕಾಣುವುದಿನ್ನಾ
ಚ್ಯಾಲಿ || ಸಾವಿರ ರೂಪಾಯಿ ಕೊಟ್ಟ ತಗೊಂಡ ಒಂದ ಕನ್ನಡಿಯನಾ
ಇಟಗೊಂಡ ಸ್ವಾದೀನಾ | ನಡುವಿನವಾ ಹೋಗಿ ಹೊಕ್ಕ ಕಂಬಳಿ ಬಜಾರನಾ
ಬೆಲೆ ಕೇಳಿದ ತಾನಾ | ಕಂಬಳಿಯ ಬೆಲೆಯನ್ನಾ
ಐದನೂರು ರೂಪಾಯಿನಾ ಇಷ್ಟ್ಯಾಕೋ ಇದಕಇನ್ನಾ
ಇದು ಏನು ಮಾಡೂದ ಇನ್ನಾ | ಮ್ಯಾಲೆ ಕುಂತು ಗಮನಾ |
ಅಂದರ ತಿರುಗೂದು ಪೃಥ್ವಿಯನಾ || ೨ ||

ಐದುನೂರು ರೂಪಾಯಿ ಕೊಟ್ಟುಕೊಂಡ ಕಂಬಳಿಯನಾ
ಏರು|| ಚಿಕ್ಕ ತಮ್ಮ ಒಂದಿನಾ | ಹೋದಾನ ಹುಲ್ಲಿನ ಬಾಜಾರ ತಾನಾ
ಹುಲ್ಲ ಹೊತ್ತ ಬಂದಾಳೊಬ್ಬ ಮುದುಕಿ ತಾನಾ | ಹುಲ್ಲಿನ ಬೆಲೆಯ ಕೇಳಿದ ಅವನಾ
ಸಾವಿರ ವರಗಳ ಹೇಳಿದಳಿನ್ನಾ ಮಾಡಿದ ತಕರಾರಾ
ಅಂದಾನೋ ಬಾಹದ್ದೂರಾ | ಇದಕ್ಯಾಕ ಸಾವಿರ ವರವನ್ನಾ
ಚ್ಯಾಲಿ || ಅಂದಾಳ ನಾರಿ | ಸತ್ತವರ ಮ್ಯಾಲೆ ಎಳೆದರ ಇದನ್ನಾ

ಏಳುವರೋ ತತ್‌ಕ್ಷಣಾ | ಸಾವಿರ ವರಗಳ ಕೊಟ್ಟು ತಗೊಂಡ ಕಡ್ಡಿಯನಾ
ನೀವು ಕೇಳರಿ ಈ ಕ್ಷಣಾ | ಕೊಂಡಾರೋ ಹುಲ್ಲನ್ನಾ
ಮೂವರು ಕೂಡಿದರಿನ್ನಾ | ಹಿರೇ ಅಣ್ಣ ಅಂದ ಆ ದಿನಾ
ಅಕ್ಕನೂರಿಗೆ ಹೋಗೂನು ಇನ್ನಾ | ಕಬೂಲಾಗಿ ಕುಂತಾರೋ ಆ ದಿನಾ || ೩ ||

ಕನ್ನಡಿ ಇಟ್ಟು ನೋಡಿದಾನೋ ಆ ಕ್ಷಣಾ
ಏರು|| ನೋಡೂದರೊಳಗ ಅವನಾ | ಸತ್ತಿತೋ ಹೆಣ್ಣಾ
ಹಿರೇ ಅಣ್ಣ ಹೇಳತಾನೋ ಹೋಗಿ ಫಲವೇನಾ
ನಡುವಿನವಾ ತಂದೇನಿ ಕಂಬಳಿನ | ಗಮನ ಅಂದರ ಹಾರುವುದಿನ್ನಾ
ಚಿಕ್ಕಾಂವಾ ಅಂತಾನ ಜೀವಾಳದ ಕಡ್ಡಿಯನಾ | ತಂದೇನಿ ನಾನು ಈ ದಿನಾ
ಚ್ಯಾಲಿ|| ಕಂಬಳಿ ಗದ್ದಗಿ ಮಾಡಿ ಕುಂತ್ರೋ ಮೂವರು ಅಂದ್ರೋ ಗಮನಾ
ಒಯ್ದು ಇಳಿಸಿತು ಅಲ್ಲಿಗಿನ್ನಾ | ಚಿಕ್ಕ ತಮ್ಮ ಜೀವಾಳಕಡ್ಡಿ ಎಳಿದ ಆ ಕ್ಷಣಾ
ಎದ್ದು ಕುಂತಿತೋ ಹೆಣ್ಣಾ | ಮೂರು ಮಂದಿ ವಿದ್ಯೆದೊಳಗ
ಲಗ್ನ ಆದ ಯಾಂವ ಬ್ಯಾಗಾ | ಕೇಳತೇನಿ ನಾನು ನಿಮಗಾ
ಹೇಳಬೇಕು ನೀನು ಬ್ಯಾಗ | ಹೇಳದಿದ್ರ ಗುರು ನಮಗ ಅಲ್ಲೋ ನಿನಾ || ೪ ||

ದೇಶದೊಳು ಜಾಹಿರಾ | ಕಣವಿಯ ವಾಹಿನಾ
ಏರು|| ಕ್ಷಣ ಕ್ಷಣಕೆ ನೆನಸುವೆ ಗುರುವಿನ್ನಾ
ವಾದ ಹಾಕಿ ಗೂದಿಹಾದು ನಿಮ್ಮಾಂಗ ಸತ್ತಾರೋ ಎಷ್ಟೋ ಜನಾ
ಬೇಧ ತಿಳಿದು ಶೋಧಮಾಡಿ ಕವಿಯ ಮಾಡಬೇಕೋ ನೀನಾ
ಚ್ಯಾಲ|| ನಿನ್ನ ಕವಿಯ ಕಲ್ತ ಶಿಷ್ಯ ಈಗ ಆಗ್ಯಾನೋ ಸ್ವಾನಾ
ಅವನಿಗಿಲ್ಲೇಳೋ ಗ್ನಾನಾ | ಹನುಮಗರಡಿ ಹುಡುಗರ ಗೂಡ
ವಾದ ಮಾಡಿ ನೀನಾ | ಕುಂತ್ಯೋ ಮಂಗ್ಯಾನಂಗ ನೀನಾ
ಏರು|| ನಮ್ಮ ಜೋಡಿ ನೀ ಏನ ಹಾಡಿ | ಎದ್ದು ಹೋಗೋ ಸಿರಿಗೇಡಿ
ಗುದ್ದಿ ಮುರಿದೇನಿ ದವಡಿ | ಎದ್ದು ಹೋಗೋ ಬಿದ್ದಾಡಿ
ಶಾಹೀರಗ ಹಾಕೇನಿ ಮುತ್ತಿನ ಹಾರವನಾ || ೫ ||

* * *

## ಮೊಹರಂ ಆಚರಣೆಗೆ ಸಂಬಂಧಿಸಿದ ಹೆಜ್ಜೆ ಪದಗಳು

### ೧೧೩. ಶರಣರು ಹೊಳಿಗೆ ಹೊಂಟಾಗ

ಹತ್ತು ಮಂದಿ ಹಿರಿಯರು ಕೂಡಿ ಚಂದ್ರನ ನೋಡಿದರಾ
ಚಂದ್ರನ ನೋಡಿದರ ದೀನೆಂದು ಗುದ್ದಲಿ ಹಾಕಿದರಾ
ಗಂಧರಾತ್ರಿ ದಿನ ದೇವರ ಮೂರ್ತಿ ಸಿಂಗಾರಾಗ್ಯಾರಾ
ಸಿಂಗಾರಾಗ್ಯಾರ ಅವರು ಗಂಧ ಏರ್ಯಾರ

ಕತ್ತಲರಾತ್ರಿ ದಿನ ಶರಣರ ಮೇಲೆ ಕತ್ತಲಗವಿದಾವ
ಕತ್ತಲಗವಿದಾವ ಅವರಿಗೆ ದುಃಖ ತುಂಬ್ಯಾವ
ದುಃಖ ತುಂಬಿಕೊಂಡು ಶರಣರು ಹೊಳಿಗೆ ಹೊಂಟಾರ
ಹೊಳಿಗೆ ಹೋಗಿ ಹೊಳ್ಳಿಬರುವಾಗ ಕಲಮಾ ಓದ್ಯಾರ

**೧೧೪. ಮಂಟಪ ಕಟ್ಯಾರ**

ಮೊಹರಂದೊಳ ಮಂಟಪ ಕಟ್ಯಾರ ಕನ್ನಡಿ ಹಳ್ಳಿಂದ
ಕನ್ನಡಿ ಹಳ್ಳಿಂದ ದೇವರಿಗೆ ಹೋಗೂದು ದುಂದ
ಊದುಬತ್ತಿ ಊದಿನಕಡ್ಡಿ ಹಚ್ಯಾರೋ ಮಕರಂದ
ಹಚ್ಯಾರೋ ಮಕರಂದ ದೇವರಿಗೆ ಹೊಂಟಾರೋ ಚಂದ
ದೇವರಿಗಂತ ಮಕನಾ ಕಟ್ಟಸ್ಯಾರೋ ಮಲ್ಲಿಗೆ ಹೂವಿಂದ
ಮಲ್ಲಿಗೆ ಹೂವಿಂದ ದೇವರಿಗೆ ಹಾಕ್ಯಾರೋ ಚಂದ
ದೇವರಿಗಂತ ಸಕ್ಕರಿ ಲಾಡಿ ತಂದಾರೋ ಚಂದ
ತಂದಾರೋ ಚಂದ ಓದಕಿ ಮಾಡಸ್ಯಾರೋ ದುಂದ

**೧೧೫. ಚುಟುಕು ಪದಗಳು**

ದೇವರಿಗೆ ಹೋಗೂಣು ಬಾ ಈ ಡೋಲಿಯೊಳಗ
ಹೂವ ಸೂರ್ಯಾಡುಣು ಬಾ
* * *
ವರ್ಷದಲ್ಲಿ  ಹುಟ್ಟಿ ಬರುವರು ಹಸೇನ ಹುಸೇನರಾ
ಹಸೇನ ಹುಸೇನರಾ ಅವರು ಸತ್ತುಳ್ಳ ಶರಣರಾ
* * *
ಕೈಯಾಗ ಹೂವಿನ ಚಡಿ
ದೇವರಿಗೆ ಹೋಗೂನು ನಡಿ
* * *
ಶರಣರು ಹೊಂಟಾರ ಸವಾರಿನಾ
ಹಿಡದಾರ ಕರ್ಬಲಾ ದಾರಿನಾ
ಪ್ರಥಮ ಕೇಳರಿ ನೀವು ಕುಂತಜನಾ
ಹುಟ್ಟಿ ಬಂದಾರೋ ಹಸೇನ ಹುಸೇನಾ
ಅಂತಾರ ಧೀನ್ ಧೀನಾ ||

**೧೧೬. ಮೊಹರಂ ಅಸಲಾ**

ಕುಂತ ಕೇಳರಿ ನೀವು ಮೊಹರಂ ಅಸಲಾ
ಹುಸೇನ್ಹುಸೇನೆಂಬ ಸತ್ತುಳ್ಳ ಶರಣರಾ
ಸತ್ತುಳ ಶರಣರಾ ವರ್ಷಕ್ಕೊಮ್ಮೆ ಬರುವರಾ
ಲಾಲಶ್ಯಾವಲಿ ಹುಸೇನ್ಹುಸೇನಿ ಬೀಬಿ ಫಾತಿಮಾರಾ
ಐದು ಮಂದಿವರಾ ಒಂದೇ ಸ್ಥಳದಲ್ಲಿ ಕೂಡುವರಾ

ಬೀಬಿ ಫಾತಿಮಾರು ಶರಬತ ಮಾಡ್ಯಾರ
ಹಸೇನ್ಹುಸೇನರಿಗೆ ಕುಡಿ ಕುಡಿ ಅಂತಾರ
ಕುಡಿ ಕುಡಿ ಅಂತಾರ ಮೌಲಾಲಿ ನಿಂತ ನಗತಾರ
ಶಾರ ಬೆಟಗೇರಿ ಕನ್ಯಾಳ ಅಗಸಿ ಹೀಂಗ ಹೇಳ್ಯಾರ
ಹೆಜ್ಜಿ ಮ್ಯಾಳಕೊಪ್ಪವರಾ ಗುಂಡಪ್ಪಣ್ಣನ ಶಿಷ್ಯರಾ

**೧೧೭. ನಾಚಿತೋ ಮೊಹರಂ**

ನಾಚಿತೋ ಮೊಹರಂ ಐಸೂರಕಿದು ನಾಚಿತೋ ಮೊಹರಂ
ಊಚ ಅಲಾವಿಗೆ ಚಾಚಿದ ಬೆಂಕಿಗೆ

ಬೂಚರ ಕೇಚರ ತಾಚಾರ ತಿಳಿಯದೆ ||
ಮೇಳೈಸಿ ಬಳ್ಳಿ ಹಿಡಿದಾಡುವ ಸಮಯದೊಳು
ಸುಳ್ಳು ಸವಾಲ್ ಜವಾಬು ಹೇಳುವುದ ಕಂಡು ||
ಹಾಳು ಮಣ್ಣಿಲೆ ಮುಚ್ಚಿ ದಾಳಿಂಬರ ಗೊನಿ ಚುಚ್ಚಿ
ಬಹಳ ವಿಲಾಸದಿ ಹೇಳುವುದನ ಕಂಡು ||
ಕತ್ತಲ ಶಹಾದತ್ ಮಥನದೊಳು ಇಹರೆಂದು
ಹಿತವರಿಯದ ತಾನು ಗತಿ ಇಲ್ಲದದನು ಕಂಡು ||
ಚೂರ ಚೊಂಗೇದ ಎಡಿ ಸಾರಿ ದೈವಕ ನೀಡಿ
ನೀರಿನ ಬದಿಯಲ್ಲಿ ಮಾತಿ ತಗ್ಗಿಸಿ ನಿಂತು ||
ಸಾಲ ತುರಕರು ಜತ್ತು ಮ್ಯಾಲೆ ಡೋಲಿಯ ಹೊತ್ತು
ಅಲ್ವಿದಾ ಹೇಳುವಾಗ ಜೊಲ್ಲು ಬಿತ್ತು ನೆಲದ ಮ್ಯಾಗ ||
ಅಲ್ಲಮ ಶಿಶುನಾಳ ಬಲ್ಲಿದ ಗುರುವಿಗೆ
ನಾಚಿತೋ ಮೊಹರಂ ಐಸೂರಕಿದು ನಾಚಿತೋ ಮೊಹರಂ

**೧೧೮. ಅಲಾವಿಗೆ ಐಸೂರ್ಯಾತಕೋ**

ಅಲಾವಿಗೆ ಐಸೂರ್ಯಾತಕೋ | ಅಲಾವಿಗೆ ಐಸೂರ್ಯಾತಕೋ
ಐಸೂರ್ಯಾತಕೋ ಹೇಸಿ ಮೊಹರಂ ಸಾಕೋ ||
ಕಾಲ ಕೆಸರಿನೊಳು ತುಳಿದು ತುಳಿದು ಜನ
ಸಾಲ ಬಳ್ಳಿ ಹಿಡಿದಾಡು ಅಲಾವಿಗೆ ||
ಬಣ್ಣದ ಲಾಡಿಯು ಹಾಕಿ ಮೆರೆವ ಜನ
ಪುಣ್ಯ ಪಾಪ ಎರಡಿಲ್ಲದ ಅಲಾವಿಗೆ ||
ಮುಲ್ಲಾ ಮಸೀದ್ಯಾಗ ಬೆಲ್ಲ ಓದಿಕೆಮಾಡಿ
ಸಲ್ಲು ಸಲ್ಲಿಗೆ ಧೀನೆಂಬ ಅಲಾವಿಗೆ ||
ಕಡಿದು ಕರ್ಬಲ ಕತ್ತಲ ಶಹಾದತ್
ಉತ್ತಮ ಶಿಶುನಾಳದೀಶನಲಾವಿಗೆ ||

# ಹೆಜ್ಜೆ ಮೇಳಕ್ಕೆ ಸಂಬಂಧಿಸಿದ ಪದಗಳು

**೧೦೯. ನಮ್ಮ ಮುಜರಿ**

ಸಲಾಮಂದರ ಗುಲಾಮನ್ನಬ್ಯಾಡ್ರಿ | ಸಣ್ಣ ದೊಡ್ಡವರಿಗೆ ನಮ್ಮ ಮುಜರಿ
ಸಣ್ಣ ದೊಡ್ಡವರಿಗೆ ನಮ್ಮ ಮುಜರಿ | ಗುರು ಹಿರಿಯರಿಗೆ ಮೇಲ್ಮುಜರಿ
ಅನ್ಯಾಯ ಮಾಡಿದರ ಪುಣ್ಯೆ ಬರಾಕಿಲ್ಲ | ಹೆಣ್ಣು ಮಕ್ಕಳಿಗೆ ನಮ್ಮ ಮುಜರಿ
ಹೆಣ್ಣು ಮಕ್ಕಳಿಗೆ ನಮ್ಮ ಮುಜರಿ | ತಾಯಿ ತಂದಿಗೆ ಮೇಲ್ಮುಜರಿ
ಇರುವಿ ಎಂಬತ್ತು ಕೋಟಿ ಜೀವರಾಶಿಗೆ | ಅನ್ನ ಹಾಕು ಬಸವಗ ನಮ್ಮ ಮುಜರಿ
ಅನ್ನ ಹಾಕು ಬಸವಗ ನಮ್ಮ ಮುಜರಿ | ಯೋಗಿ ಭೋಗಿಗೆ ಮೇಲ್ಮುಜರಿ
ಕಟ್ಟಿಮ್ಯಾಲೆ ಕುಂತಗೊಂಡು ಹಂಚೇಕಿ ಹಾಕ್ತೀರಿ | ಮಸೂತಿಗೆ ಹೋಗೂನು ನಡಿರಿ
ಮಸೂತಿಗೆ ಹೋಗೂನು ನಡಿರಿ | ಮಕ್ತುಮ್ಹುಸೇನಿಗೆ ನಮ್ಮ ಮುಜರಿ
ಸಲಾಮಂದರ ಗುಲಾಮನ್ನಬ್ಯಾಡ್ರಿ ಸಣ್ಣ ದೊಡ್ಡವರಿಗೆ ನಮ್ಮ ಮುಜರಿ

**೧೧೦. ಬಂತೋ ಮೊಹರಂ ಹೊಡೆದಂಗ ಬಾಣಾ**

ಬಂತೋ ಮೊಹರಂ ಹೊಡದಂಗ ಬಾಣಾ | ಕಟ್ಟಬೇಕೋ ಬಿರದಾ
ಕಟ್ಟಬೇಕೋ ಬಿರುದಾ ವೈರಿಯ ಕಳಿಸಬೇಕೋ ಮುರದಾ
ತಲಿಮ್ಯಾಲ ನೀವು ಕರಾಪ ಬಿಟಗೊಂಡ ಮಾಡತೀರಿ ಡೌಲಾ
ಮಾಡತಿರಿ ಡೌಲಾ ನಿಮಗ ಹೆಂಗಸೂರು ಅಂಜೂದಿಲ್ಲಾ
ಕೆಂಪು ನಿಶಾನಿ ಬಿದರಿನ ಕಾಳಿ ಬಂತ ನಮ್ಮ ಟೋಳಿ
ಬಂತ ನಮ್ಮ ಟೋಳಿ ನೀ ಎಂದ ಹಾಡಿದ್ಯೋ ಮೂಳಿ
ಹೆಂಗಸರ ಮಾತಕೇಳಿ ಕೇಳಿ ಜಗಳಕ ಬರತೀರಿ
ಜಗಳಕ ಬರತೀರಿ ಒಮ್ಮೆ ದಕ್ಕಿ ತಿಂತೀರಿ ||
ನಿಮ್ಮ ಮ್ಯಾಳದಾಗ ಯಾಂವ ಬಂಟಾ ಅದಾನೋ ಯಪ್ಪಾ
ಅವನ ತಲಿಯ ಮ್ಯಾಲೆ ಹೊರಸೇವಿ ರೊಟ್ಟಿಯ ಗಂಟಾ
ಹಿಂದಕ ಸರದರ ಮುಂದಕ ಬಂದರ ತಿಳಿಯಾಕಿಲ್ಲಪ್ಪಾ
ಡಗ್ಗಾತಾಳ ಕಸಗೊಂಡ ಕಳಸೇವಿ ಓಡಿಹ್ವಾದಿ ಯಪ್ಪಾ ||

**೧೧೧. ಮಸೂತಿ ಓಣಿ ಮ್ಯಾಳಾ**

ಅಲಿಹಬ್ಬದೊಳು ಹುಲಿ ಹಾರಿದಂಗ ಮಸೂತಿ ಓಣಿಮ್ಯಾಳಾ
ಸಿಡಿಮದ್ದು ಸಿಡಿದಾಂಗ ಸಪ್ಪಳಾ ನಮಗ ಹಾದಿಬಿಡರಿ ಏಳುಮೊಳಾ
ನಮಗ ಹಾದಿಬಿಡರಿ ಏಳುಮೊಳಾ ಬಂತೋ ನಮ್ಮ ಮ್ಯಾಳಾ
ಹುಲಿಯ ಬಣ್ಣಕ ಹೋಗಿ ನರಿಯ ಮೈಯಾನ ಸುಟ್ವಾವ ತುಪ್ಪಳಾ

ಸುಟ್ಟಾವ ತುಪ್ಪಳಾ ನರಿಯು ಆಗೇತಿ ನಿಚ್ಚಳಾ
ಇದರಂತೆ ಬರುವುದು ಮೂರು ಮೊಳಾ ಬಂತೋ ನಮ್ಮ ಮ್ಯಾಳಾ
ಬಾಳ ಜಿಗದಾಡಬ್ಯಾಡ ಮೂಗಿನೊಳಗಿಂದ ಬಂದಿತೋ ಸುಂಬಳಾ
ಬಂದಿತೋ ಸುಂಬಳಾ ಕಣ್ಣೀರು  ಹರಿದಾವೋ ದಳದಳಾ
ಇದರಂತೆ ಬರುವುದು ಮೂರು ಮೂಳಾ ಬಂತೋ ನಮ್ಮ ಮ್ಯಾಳಾ

**೧೨೧. ಹೆಜ್ಜಿ ಮ್ಯಾಳಾ**

ನೋಡ ನೋಡ ನನ್ನ ವಸ್ತಾದಿ ಎಂಥಾ ಚೆಲುವಾ
ತಿರುಗಿ ನೋಡಿದರ ಮುರುಗಿ ಹಾಕತಾನ ಮುರಗಿ ಸುಟ್ಟ ಕೈಯಾಗ ಹಿಡಿದಾ
ಬಾಡ್ಯಾ ಮ್ಯಾಳಾ ಕಟ್ಯಾನಲ್ಲಾ ತಿನ್ನಾಕ ಇಂವಗ ಕೂಳ ಇಲ್ಲಾ
ಜಿನಗ ದೋತರ ಉಟ್ಟಾನಲ್ಲಾ ಕೇಸರಿ ಶರ್ಟು ಹಾಕ್ಯಾನಲ್ಲಾ
ತಾಳ ಬಿಟ್ಟು ಪದಾ ಹಾಡತಾನಲ್ಲಾ ಹರಕರ ಮ್ಯಾಳ ಕೂಡಿಸ್ಯಾನಲ್ಲಾ
ಇಂಥ ಪದಗಳು ನಮಕಡೆ ಬಾಳ ಒಯ್ದರ ಒಯ್ಯೋ ಕೈಗಡ ಮೊದಲಾ
ವಸ್ತಾದಿ ಗುಂಡಪ್ಪಣ್ಣನ ಮ್ಯಾಳಾ ಅಗಸಿ ಓಣ್ಯಾಗ ಇರತೇವಿ ಮೊದಲಾ

**೧೨೩. ಚಿಕ್ಕ ಮಕ್ಕಳ ಚಿಣಿಕೋಲಾಟ**

ಚಿಕ್ಕಮಕ್ಕಳ ಚಿಣಿಕೋಲಾಟ ಚಿಗರಿ ಜಿಗಿದಾಂಗ
ಗೋದಿಯ ಸಸಿಯೊಳು ನಲಗಮಾಡಿ ನವಲು ಕುಣದಾಂಗ
ಕೇಳೋ ಸೂರಾ ಪ್ಯಾರಲ ಗಿಡದಾಗ ಗಿಳಿಯು ಕೂಗಿದಾಂಗ
ಗುಂಪು ವನದಾಗ ಸಂಪು ಕೇಳೋ ನೀನು ಕೋಗಿಲಿ ಸೊರದಾಂಗ
ಬಾಳಿ ವನದಾಗ ಮೊಲಾ ಮೇಯುತಿತ್ತು  ಬೆಳಗಿನ ಜಾವದಾಗ
ಮೊಲದ ವಾಸನಿಗೆ ನಾಯಿ ಬಂದಿತೋ ಸಿಗಲಿಲ್ಲ ಆವಾಗ
ಪಲ್ಲ ಪಲ್ಲವಿ ಕೂಡಿಸಿ ಹಾಡೋ ಕೂಡಿದ ಸಭೆದಾಗ
ಹಾಡದಿದ್ದರ ಮಾರಿಗೆ ಹೊಡದೇವೋ ಹೋಗೋ ನೀನೀಗ ||

**೧೨೪. ಕಪ್ಪಿ ಸಾಯತಾವೋ ಮರಮರಗಿ**

ಊರ ಮುಂದಿನ ಕಾಳವ್ವನ ಕೆರಿಯಾಗ ಕಪ್ಪಿ ಸಾಯತಾವೋ ಮರಮರಗಿ
ಕಪ್ಪಿ ಸಾಯತಾವೋ ಮರಮರಗಿ ನಿನಗೇನ ತಿಳಿದೀತೋ ಕಸಬರಗಿ
ಹತ್ತು ಹುಡುಗರು ನಾವು ಜತ್ತೀಲೆ ಬರುವಾಗ ತಿರಗಿಸಬ್ಯಾಡೋ ಮುಕಳಿಮಾರಿ
ತಿರುಗಿಸಬ್ಯಾಡೋ ಮಕಳಿಮಾರಿ ತ್ವಾಟಿ ಹಿರದೇನೋ ದುಬ್ಬದ ಹುರಿ
ಜರದ ಸೆಲ್ಲೇವ ಮೇಲೆ ತಂದ ಹಾಸತೀರಿ ನೀವು ಹಳೇ ಕಂಬಳಿ ಕೋರಿ
ನೀವು ಹಳೇ ಕಂಬಳಿ ಕೋರಿ ಎಂದಿಗೆ ಆದೀರೋ ನಮ್ಮ ಸರಿ ||

**೧೨೫. ಗುಲ್ಲ ಕೊಟ್ಟೇವಿ ಗಲ್ಲದ ಮ್ಯಾಲ**

ಹೆಜ್ಜಿ ಆಡೂದು ಹೀಂಗಲ್ಲ ತಮ್ಮಾ ಗೆಜ್ಜೀಲೆ ಹೊಡದರ ಬಿಟ್ಟಿತೋ ದಿಮ್ಮಾ
ಗೆಜ್ಜೀಲೆ ಹೊಡದರ ಬಿಟ್ಟೀತೋ ದಿಮ್ಮಾ ಕರಿಲಾಕ ಬಂದಾಳೋ ಹೋಗೋ ನಿಮ್ಮಮ್ಮಾ
ಥಕತೋಡಿ ಮಾನಗೇಡಿ ನಿನಗೇನಂದಿಲ್ಲಾ ಅಲ್ಲಂದರ ಗುಲ್ಲ ಕೊಟ್ಟೇವಿ ಗಲ್ಲದ ಮ್ಯಾಲಾ ||

**೧೧೬. ಮಂದಿಗೆ ಹೇಳತೀರಿ ಆಚಾರ**

ಸವಾಲ ಹೇಳತೇನಿ ಹಾಳರಟಿ  ನಿಮಗೇನ ತಿಳುವತೈತಿ ಮುಲಗೊಟ್ಟಿ
ಹಾರಿ ಹೋತೋ ನಿನ್ನ ಗುಳಬುಟ್ಟಿ ನಮ್ಮ ಜಪಾಟ್ಯಾಗ ಸಿಕ್ಕು ಬಾಯ್ಬಿಟ್ಟಿ
ತತ್ವ ವಿಚಾರ ಬಾಯಿಲಿ ಹೇಳತೀರಿ ನೀವು ನಡೆ ನುಡಿ ಇಲ್ಲದೆ ಕೆಡತೀರಿ
ಮಂದಿಗೆ ಹೇಳತೀರಿ ಆಚಾರಾ ಕೆಟ್ಟ ಗುಣ ಇಟ್ಟ ಮಾಡತೀರಿ ಕಾರಬಾರಾ
ಹೆಜ್ಜಿಗೊಮ್ಮೆ ಹರಹರಾ ನಿಮಗ್ಹ್ಯಾಂಗ ಒಲಿದಾನ ಶಂಕರಾ ||

**೧೧೭. ನೀವೆಂತ ಗಂಡಸೂರಾ**

ಗೆಳ್ಯಾಗ ನಮಗ ಬೀಳಲಿ ಸವಾಲ ಬ್ಯಾಡೆನ್ನುವರಾರು
ಬ್ಯಾಡೆನ್ನುವರಾರು ನಮ್ಮ ಕೂಡ ಮಾಡಬ್ಯಾಡ ತಕರಾರ
ಮೂರ್ನಾಲ್ಕು ಪದಗಳ ಮುರಕಾ ಮಾಡಿ ಹಾಡತೀರಿ ನೀವೆಂತ ಗಂಡಸೂರಾ
ನೀವೆಂತ ಗಂಡಸೂರಾ ನಮ್ಮ ಕೂಡ ಮಾಡಬ್ಯಾಡ ತಕರಾರು

**೧೧೮. ಕಾಲೊಳಗೆ ಗೆಜ್ಜಿ ಗಿಲ್ ಗಿಲ್**

ಆಡಿರಿ ಅಲಾವಿ ಕೂಡಿರಿ ಮ್ಯಾಳದಿ ಕಾಲೊಳಗೆ ಗೆಜ್ಜಿ ಗಿಲ್ ಗಿಲ್
ಕಾಲೊಳಗೆ ಗೆಜ್ಜಿ ಗಿಲ್ ಗಿಲ್ ಮಾಡಬ್ಯಾಡರಿ ನೀವು ಗುಲ್ ಗುಲ್
ಮಹಾ ಮೊಹರಂ ಚಂದ್ರ ನೋಡಿ ಸಬಾ ಧೀನ್ ಧೀನ್
ತಿಳಿ ಹೊಳಿ ಶರಣರ ಸ್ತುತಿ ಆಗಿ ಹೋತೋ ಕರ್ಬಲದಿಗತಿ
ಕರ್ಬಲದೊಳಗ ಗರ್ದಿ ಸಭಾ ಧೀನ್ ಧೀನ್

**೧೧೯. ಕೊಡತಾಳ ಉಂಡಿ**
ಟಕ್ಕ ನಕ್ಕು ಟಕ್ಕ ಟಾಕಿ ನಮ್ಮ ಹುಡುಗರನ ಕೆಡಸಿರಿ ಜ್ವಾಕಿ
ಕೈಯಾಗ ಎಲಿ ಕಿವಿಯಾಗ ವಾಲಿ ಒಳ್ಳೊಳ್ಳೆ ಹುಡುಗರಿಗೆ ಹಾಕತಾಳ ಮಾಲಿ
ಕೈಯಾಗ ಸುಣ್ಣ ಮಾಡತಾಳ ಬಣ್ಣ ಒಳ್ಳೊಳ್ಳೆ ಹುಡುಗರಿಗೆ ಹಚ್ಚತಾಳ ಬಣ್ಣ
ತಲಿಮ್ಯಾಲ ಹೊರಿ ಕೈಯಾಗ ಕಟಗಿ ಒಳ್ಳೊಳ್ಳೆ ಹುಡುಗರಿಗೆ ಹೊಡಿತಾಳ ಲಟಗಿ
ಉಡೇದಾಗ ಪುಂಡಿ ಕೈಯಾಗ ಗಿಂಡಿ ಒಳ್ಳೊಳ್ಳೆ ಹುಡುಗರಿಗೆ ಕೊಡತಾಳ ಉಂಡಿ

**೧೨೦. ಬಾರಲೆ ಮುಂದಕ್ಕ**

ಹಾಳಗ್ವಾಡಿಯ ಮ್ಯಾಲೆ ಹಾಲಕ್ಕಿ ನುಡಿದಂಗ ನುಡಿದಲೆ ಇವತ್ತ
ನುಡಿದಲೆ ಇವತ್ತ ನೀನು ಬಾರಲೆ ಮುಂದಕ್ಕ

ಹತ್ತು ಜನರು ಕೂಡ್ಯಾರೋ ತಮ್ಮಾ ಇಂದಿನ ಸಬಾಕ
ಇಂದಿನ ಸಭಾಕ ತಮ್ಮಾ ತಿಳಿಯಲಿ ನಿನ್ನ ಬೆಳಕ
ವಹಿ ಇಲ್ಲದ ಹಾಡೋ ತಮ್ಮಾ ಬೆಳ್ಳ ಬೆಳತನಕ
ಬೆಳ್ಳ ಬೆಳತನಕ ತಿಳಿಯಲಿ ನಮ್ಮ ನಿಮ್ಮ ಬೆಳಕ
ಇದ್ದಲಿ ಕುಂತು ಮಸಿಗೆ ಬುದ್ಧಿ ಹೇಳಿದಂಗ ನಿಮ್ಮ ತರಕ
ರಠ ಈಕ ಗ ಇಞ ಣ ಕಲಿಯೋ ಮುಂದಕ ||

**೧೩೦. ಬಿಲ್ಲಿಗೆ ಸೇರ ಕೇರ**

ಯಾಕೋ ಮುಡದಾರ ನನ್ನ ಕೂಡ ಮಾಡತೀದಿ ತಕರಾರ
ಕಿವಿ ಗರಗರ ತಿರುವಿ ಒಗದೇವಿ ಪೂರ
ಮಲ್ಲಾಡ ದೂರ ಅಲ್ಲಿ ಬಿಲ್ಲಿಗೆ ಸೇರ ಕೇರ
ಬಿಲ್ಲಿಗೆ ಸೇರ ಕೇರ ಹುಡಿ ನೋಡಿ ಬಡದೇವರಿ ಪೂರ

**೧೩೧. ಗೆಜ್ಜಿ ಕಟ್ಟಿ ಬಂದೇವಿ**

ಗೆಜ್ಜಿ ಕಟ್ಟಿ ಬಂದೇವಿ ತಮ್ಮಾ ಹೆಜ್ಜಿಯಾಡುದಕ
ಹೆಜ್ಜಿಯಾಡುದಕ ನಿಮ್ಮನ್ನ ಕಂಡ ಕೇಳುದಕ
ಹಾಡೂದಂತು ಹಾಡತಾವ ಗೊತ್ತ ಇಲ್ಲಿವಕ
ತಾಳ ಜಾತಿ ಕೇಳಿದರ ಹೋಗತಾವ ಸುಮ್ಮಕ

**೧೩೩. ಆಡೂನು ಅಲಾವಿ**

ಕೂಡಿದ ಮ್ಯಾಳ ಆಡೂನು ಅಲಾವಿ ತಾಳದೊಳಗ ಹೆಜ್ಜಿ ಚೆಲ್ ಚೆಲ್
ಮಾಡಬ್ಯಾಡರಿ ನೀವು ಗುಲ್ ಗುಲ್ ಕಾಲೊಳಗ ಗೆಜ್ಜಿ ಸಪ್ಪಳ ಗಿಲ್ ಗಿಲ್
ದೇಶದೊಳಗ ನಮ್ಮ ಕಾಸ ಬಂಡಿವಾಡ ಈಶ ಮಾರುತೇಶನ ಕೂಡ ಕೂಡ
ಹಿಂತ ಪದಗಳ ವರ್ಣಿಸಿ ಹಾಡ ಹಾಡ ಹಾಡದಿದ್ದರ ಬಗ್ಗಿಸಿ ಬಡದೇವಿ ನೋಡ ನೋಡ

**೧೩೪. ನಾಚ ಮಾಡತಿದಿ ತತ್ತಗಿರಿಗಿರಿ**

ಪಾತರದಾಕಿಯಾಂಗ ನಾಚಮಾಡತಿದಿ ತತ್ತಗಿರಿಗಿರಿ ತತ್ತಗಿರಿಗಿರಿ ತೋಂ ಶರಣಾ
ಹೊಂಟೈತಿ ಸವಾರಿ ನೋಡಲಿಲ್ಲಾ ಜನಾ ರಮ್‌ಜಾನ್ ರಮ್‌ಜಾನ್ ಧಮ್ ಶರಣಾ
ಮ್ಯಾಳಕಟ್ಟಿ ನೀನಾ ಪದಾ ಹಾಡತೀದಿ ತಾಳ ನುಡಿಸೋ ತಮ್ಮಾ ಜಂಜಂಜಣ್ಣಾ
ಪದಾ ಹಾಡದಿದ್ದರ ಕತಿ ಮಾಡಿ ಹೇಳತೇನಿ ಮನಿಗೆ ಒಗಿ ನಿಮ್ಮ ಪಯಣಾ

**೧೩೫. ಹವೀಜ ಮಾರಿ**

ಹೌದಲೇ ಹವೀಜಮಾರಿ ಹೌಹಾರಿದ ಕೋತಂಬರಿ
ಪ್ಯಾಟ್ಯಾಗ ಹಚ್ಚೆಸಿಕೊಂಡಿ ಪಾವು ಸೇರ ತೂಗಿಸಿಕೊಂಡಿ ಅಚ್ಚೇರ

ಚಪ್ಪರ ಹಿಂದಲೆ ಬಿತ್ತಿಸಿಕೊಂಡಿ ಹೌದಲೆ ಟಾಣೆ ಟುಣೆ

ಟೊಮೆಟೋ ಹಣ್ಣು ಹಾಕಿದ ಹದಿನಾಲ್ಕು ದಿವಸಕ್ಕ ಕೀಳಿಸಕೊಂಡಿ

ಒಳ್ಳಾಗ ಹಾಕಿ ಕುಟ್ಟಿಸಿಕೊಂಡಿ ಹೌದಲೆ ಹವೀಜಮಾರಿ

**೧೩೮. ಹೆಜ್ಜಿ ನೋಡ ಹುಡುಗರ ಗೆಜ್ಜಿ ನೋಡ**

ತಾಳ ನೋಡ ಹುಡುಗರ ಮ್ಯಾಳಾ ನೋಡ ಗೋಕುಲ ಬಸವನ ತೇರನೋಡ

ತೇರನೋಡ ತೇರಿನ ಕಳಸನೋಡ ಹೆಜ್ಜಿನೋಡ ಹುಡುಗರ ಗೆಜ್ಜಿನೋಡ

ಒಂದ ವಾರಿಗಿ ಹುಡುಗರ ಮಜಲ ನೋಡ ಹುಡುಗರ ಯಮಕ ನೋಡ

**ಚುಟುಕು ಪದಗಳು**

ಕಾಜಿನ ಬುರುಡಿ ಮಜಾದ ಹುಡುಗರು | ಬಾಜಾರ ಹಿಡಿದು ಬರತಾರ

ಬಾಜಾರ ಹಿಡಿದು ಬರತಾರ | ಮಲಕಿನ ಹೆಜ್ಜಿ ಕಲಿತಾರು ||

*** * ***

ಅಲ್ಯಾಕ ನಿಂತಿ ಸಂಧ್ಯಾಗ | ಮುಂದಕ ಬಾರೋ ಮಂದ್ಯಾಗ

ಮುಂದಕ ಬಾರೋ ಮಂದ್ಯಾಗ | ಹೋಗಾಕ ಬಿಡೂದಿಲ್ಲ ಸಂಧ್ಯಾಗ ||

*** * ***

ದುಂಧಲೇ ಬಲು ದುಂಧಲೇ ಕೆಂಧೂಳು ಹಾರೂದು ನೋಡಲೇ

ಕೆಂಧೂಳು ಹಾರೂದು ನೋಡಲೇ ಸಂದಿ ಬಿದ್ದರ ಓಡಲೇ ||

*** * ***

ಗಾಡಿ ಬಂತೋ ಒತ್ತರಾ ಟಿಕೇಟು ಕೊಡೋ ಮಾಸ್ತರಾ

ಟಿಕೇಟು ಕೊಡೋ ಮಾಸ್ತರಾ | ಹೋಗಬೇಕೋ ತುಮಕೂರಾ ||

*** * ***

# ಮಾಬುಸುಬಾನಿಯವರಿಗೆ ಸಂಬಂಧಿಸಿದ ಪದಗಳು

**೧. ಬಾಲಕ ಮಾಬುಸುಬಾನಿಯವರ ಸಾಹಸ**

ಮೈಬೂಬ ಶರಣರ ಮಹಿಮಾ ತಿಳಿಸುವೆ ಜನಕ

ತಾಯಿ ಗರ್ಭದಿ ನಿರ್ಭಯದಿ ತೋರಸ್ಯಾರ ಕೌತುಕ

ಹಾಂ ಹಾಂ ತಿಳಿಯಿರಿ ನಿಮ್ಮ ಮನಕ

ಫಾತಿಮಾ ಮನಿ ಬಿಟ್ಟು ಬಂದಾಳೋ ಕೇಳರಿ ಹಿತ್ತಲಕ

ಬಂದ ನೋಡಿದರ ಸೂಕ್ಷ್ಮದಾಳಿಂಬರಿ ಇತ್ತರಿ ಆ ಕ್ಷಣಕ

ಹಾಂ ಹಾಂ ತಿಳಿಯಿರಿ ನಿಮ್ಮ ಮನಕ

ಫಾತಿಮಾ ಜೊಹರಾ ಏರಿ ನಿಂತಾರೋ ಹಣ್ಣನು ಹರಿವುದಕ

ನಾಗರ ಸರ್ಪ ನಾಲಿಗಿ ಚಾಚಿ ಅವರನ್ನು ಕಡಿಯುದಕ ||

ನಾಗರ ಸರ್ಪ ಕಚ್ಚಿಬಿಟ್ಟಿತು ಕೇಳರಿ ಆ ಕ್ಷಣಕ ||
ಶಿವಾ ಶಿವಾ ಎನ್ನುತ ಭೂಮಿಗೆ ಬಿದ್ದಾಳೋ ತಿಳಿಯಿರಿ ನಿಮ್ಮ ಮನಕ ||
ಮೈಬೂಬ ಶರಣರು ಓಡಿ ಬಂದಾರೋ ಕೇಳರಿ ಆಕ್ಷಣಕ
ಹಲ್ಲಿನಿಂದ ವಿಷ ತೆಗೆದು ತೋರಸ್ಯಾರೋ ಕೌತೂಕ ||
ಹಾಂ ಹಾಂ ತಿಳಿಯಿರಿ ನಿಮ್ಮ ಮನಕ

**೧. ಮಾಬು ಸುಬಾನಿಯವರ ಚಣಿಪಣಿಯಾಟ**

ಶಾಸ್ತರ ಲೀಲಾ ಹೇಳುವೆ ಮೂಲಾ ಸಂದ ಕಡಕ ನಿಮ್ಮ ಕರುಣೆ ಇರಬೇಕ
ಶಾಹೀರ ಅಂತಿದಿ ಎಂತಾ ಕ್ಷಾಣಾ ಕೊಡೋ ಉತ್ತರನಾ ಸಂದ ತಿಳಿಸುವೆ ಈ ದಿನಾ
ಮೈಬೂಬ ಮಕಬೂಲ ಚಣಿಪಣಿಯಾಟ ಆಡೂದು ಒಳ್ಳೆ ತರಕ ಗೆಳೆತನ ಒಳೆದಿಮಾಕ
ಸೋಲುವುದು ಗೆಲುವುದು ನಡದೈತಿ ಕೇಳರಿ ಕೌತುಕನಾ ಚಣಿಪಣಿಯಾಟ ಆಡೂದಕನಾ
ಹೊತ್ತು ಏರಿ ನೆತ್ತಿಮ್ಯಾಲ ಮಧ್ಯಾಹ್ನ ಬಿಸಿಲಾತ ತುರಸಿನ ಆಟ ನಡದೀತ
ಮೈಬೂಬ ಮಕಬೂಲ ಸಾಲಿ ಕಲಿಯಾಕ  ಒಳೆ ಚುರುಕ ಗೆಳೆತನ ಇರೂದು ಠೀಕ
ಇಬ್ಬರಲ್ಲಿ ವಾದ ಬೆಳಿತೋ ಸೋಲುವುದು ಗೆಲುವುದಕ ಚಣಿಪಣಿ ಆಡೂದಕ
ಮಕಬೂಲ ತಾಯಿ ಹುಡುಕೂತ ಬಂದಾಳೋ ಮಮತಿಲಿಂದನಾ
ನೋಡ್ಯಾಳೋ ಮಕ್ಕಳ ಆಟವನಾ
ಊಟ ಮಾಡಿ ಬರಬೇಕೋ ಕಂದಾ ಹೇಳ್ಯಾರೋ ಠೀಕನಾ ಹೊತ್ತ ಆತೋ ಈ ದಿನಾ
ಮೈಬೂಬ ಅಂತಾನೋ ಸಿಟ್ಟಿನಿಂದ ಅಂಗಿ ಹಿಡಿದನಾ ಕೊಡೋ ಆಟ ಈ ದಿನಾ
ತಾಯಿ ಮಾತ ಮೀರದೆ ಮಕಬೂಲ ಹೇಳ್ಯಾನೊ ಠೀಕನಾ ಬಂದ ಕೊಡತೇನಿ ಆಟನಾ
ನನ್ನ ಆಟ ಕೊಡುತನಾ ಜಾಮೀನ ಕೊಡಬೇಕ ಸತ್ಯ ನುಡಿ ಇರಬೇಕ
ಅಲ್ಲಾನ ಸಾಕ್ಷಿ ಕೊಟ್ಟ ಹೊಂಟಾನೋ ಊಟ ಮಾಡುದಕ ಹೊಳ್ಳಿ ಬರತೇನಿ ಆಡುದಕ
ತಾಯಿ ಮಕಬೂಲ ಉಂಡಾರೋ ಶಿಸ್ತ ಮಮತಿಲಿಂದನಾ ತಕ್ಷಣ ಹೊಂದ್ಯಾನೋ ಮರಣಾ
ಮಕಬೂಲನ ಡೋಲಿ ಹೊಂಟಿತೋ ಶಿಸ್ತ ಮೌಲೂದ ಹೇಳೂತ ಜನ ಇತ್ತೊ ಬಹುಠೀಕ
ಮೈಬೂಬ ಬಂದು ತರಬ್ಯಾನೋ ಡೋಲಿ ನೀಎಂತ ಸತ್ಯವಂತ ಮಾಡುವೆ ಹರಕತ ತುರತಾ
ಕೂಡಿರು ಜನಾ ಆಗಿ ಗಾಬ ಕೇಳರಿ ಈ ದಿನ ಡೋಲಿ ಬಿಡಬೇಕ ಈ ದಿನ
ಪುನರ್ಜನ್ಮ ಆಗಿ ಮಕಬೂಲ ಕೊಟ್ಟಾನೋ ಆಟನಾ ಪುನಾ ಹೊಂದ್ಯಾನೋ ಮರಣಾ
ಕೂಡಿರೋ ಜನಾ ನೋಡಿ ಆಟ ಆಗ್ಯಾರೋ ದಂಗನಾ ಮುಗಸೇನಿ ಸ್ವಲ್ಪಕ ಈ ದಿನ
ಸೋತಗೆದ್ದ  ಆಟದ ಲೆಕ್ಕ ಕೇಳತೇನಿ ವಿಸ್ತಾರನಾ ವಯಸ್ಸು ಎಷ್ಟೋ ಆ ದಿನಾ
ಕೆರೂರ ಶಾರ ಮೋಜಿನ ಶಾರ ಐತಿ ಒಳೆ ಶಿಸ್ತ ಬಜಾರ ಶಿಸ್ತ ಇರುವುದಕ
ಶಾಹೀರ ಇಮಾಮ ಮಾಡೋರು ಕವಿ ಒಳ್ಳೆ ಚುರುಕ ಅಜಮೀರ ಗ್ಯೆಬು ಇರಬೇಕ

**೩. ಮಾಬುಸುಬಾನಿ ಮಾಡಿದ ಪವಾಡ**

ಕೂಡಿರು ದೈವಾ ಅನಬೇಕ ವಾಹವ್ವಾ ನಾನು ಶರಣಾ
ಸುಂದ್ರ ಸಬಾ ಇಂದ್ರನಕ್ಕಿಂತ ಆದೀತೋ ಮೇಲಾ ಕೇಳರಿ ಜನಾ
ಬಂಜೆಯರ ಕಥನಾ ತಿಳಿಸುವೆ ನಾನಾ ಮಾಬೂಬ ಶರಣಾ ಕರುಣಾ

ಒಬ್ಬಾಕಿ ಬಂಜೆನಾ ಮಕ್ಕಳ ಇಲ್ಲದೆ ಬಳಲುವೆ ನಾನಾ ಮಾಡರಿ ಕರುಣಾ
ಮುಟ್ಟಿದ ಗಿಡನಾ ಒಣಗಿತೋ ಪೂರ್ಣಾ ಬಂಜೆಯರ ಕಥನಾ
ಕೆರಿಭಾವಿ ಬತ್ತಿತೋ ಹೂಕಾಯಿ ಒಣಗಿತೋ ಮುಟ್ಟಿದ ತಕ್ಷಣಾ
ಮಕ್ಕಳು ಇಲ್ಲದೆ ಬಳಲುವೆ ನಾನಾ ಮಾಡರಿ ನೀವು ಕರುಣಾ
ಬಗದಾದ ಅರಸಾ ಮಾಬೂಬ ಶರಣಾ ನುಡಿದರೆ ವಾಕ್ಯ ಆಗೂದು ನೇಮಾ
ಮಕ್ಕಳು ಕೇಳುದಕ ಬಂದಾರೋ ಬಂಜೆಯರಾ ಕೊಡರಿ ನೀವು ಮಕ್ಕಳನಾ
ಲಿಂಬೆಯ ಹಣ್ಣು ತಿನ್ನಿರಿ ಮೊದಲಾ ಆಗುವವು ಮಕ್ಕಳನಾ ಕೇಳರಿ ಜನಾ
ಕುಶಿಯಾಗ ಬಂಜೆಯರು ತಿಂದಾರೋ ಹಣ್ಣಾ ಮಾಬೂಬ ಶರಣಾ ಕರುಣಾ
ಒಬ್ಬಾಕಿ ಬಂಜಿ ತಿನಲಿಲ್ಲ ಹಣ್ಣನ್ನಾ ತಿಪ್ಪಿಯಲಿ ಮುಚ್ಚಿ ಹೇರ್ಯಾಳೋ ಕಲ್ಲನ್ನಾ
ಹಣ್ಣು ತಿಂದ ಅಬಲೆಗೆ ಮಕ್ಕಳು ಆಗ್ಯಾವೋ ಪೂರ್ಣಾ
ಶರಣರ ವರಣಾ ಆದೀತೋ ಮೇಲನಾ ತಿನ್ನದ ಅಬಲೆ ಬಂದಾಳೋ ಪೈಲಾ ಕರುಣಾ
ಮುಚ್ಚಿಟ್ಟ ಬಾಲೆಗೆ ಆಗಲಿಲ್ಲ ಮಕ್ಕಳು ಅಂದಾಳೋ ತೀವ್ರ ಮೊದಲಾ
ಮಾಬೂಬ ಶರಣಾ ತಿನ್ನದ ಅಬಲೆ ನಾ ತಿಪ್ಪೆಯಲಿ ಹಣ್ಣಾ ಪಿಂಡ ವರ್ಣಾ
ಕೂಡಿರು ಜನಾ ನೋಡ್ಯಾರೋ ಪೂರ್ಣಾ ಆದಂತ ಪಿಂಡವರ್ಣಾ
ತಪ್ಪ ಮಾಪ ಮಾಡರಿ ಶರಣಾ ಓದ್ಯಾರೋ ಕಲ್ಮನಾ ಕೂಡಿರೋ ಜನಾ
ದೇಶಕ್ಕ ವಾಹಿನಾ ಕೆರವೂರ ಮಿಗಿಲಾ ಇಮಾಮ ಶಾಹೀರಾ ಮೇಲಾ
ಅಜಮೀರ ಪೀರನಾ ಕಲಿಗಿಗೆ ಮೂಲಾ ವಾದಿಯ ಜನಕ ಕೊಟ್ಟಾನೋ ಗುಲ್ಲಾ

## ಖಲೀಫರಿಗೆ ಸಂಬಂಧಿಸಿದ ಪದಗಳು

**೧. ಶಿವನ ಹುಲಿ ಹಜರತಲಿ**

ಸರಜರಸ ಮೌಲಾ ಇವರ ಸರಿಯೊಳು ಸಮರ್‍ಯಾರಿಲ್ಲಾ

ಭೂಮಿ ಮೆಟ್ಟಿ ಸೀಳಿದಾರೋ ಪಾತಾಳನೆಲ್ಲಾ ಸೋಸಿದಾರೋ
ಅಲ್ಮ ಪ್ರಭುವಿನ ಕಲ್ಮ ಸಾರುವ ಜನರಿಗೆಲ್ಲಾ ತಿಳಿಸಿದಾರ
ಶ್ರೇಷ್ಠರೆನಿಸಿದ್ರೊ ಮೌಲಾ ಅಲಿ ಹೈದರ ಹಜರತ ಮೌಲಾ
ಇವರ ಸರಿಯೊಳು ಸಮರ್‍ಯಾರಿಲ್ಲಾ
ಏಳು ಅಂತಸದಲ್ಲಿ ತಿರುಗಿ ಗಗನದಲ್ಲಿ ಗಮಸಿದರೋ ಹೋಗಿ
ಗುಡಗ ಹೊಡೆದಂಗಾಯ್ತೊ ಮಂಡಲದೊಳಗ ಹತ್ತಿತೋ ಬ್ಯಾಗಿ
ಶೌರ್‍ಯೇ ಸಾರ್‍ಯಾರೋ ಮೌಲಾ ಅಲಿ ಹೈದರ ಹಜರತ ಮೌಲಾ
ಇವರ ಸರಿಯೊಳು ಸಮರ್‍ಯಾರಿಲ್ಲಾ
ಹರನು ಒಲಿದಾರಿವರ ಮ್ಯಾಲಾ ಶಿವನ ಹುಲಿ ಅನಿಸಿದಾರೊ ಮೌಲಾ
ಪೂರ್ವ ಪಶ್ಚಿಮ ಉತ್ತರ ದಕ್ಷಿಣ ನಾಲ್ಕು ದಿಕ್ಕಿಗಿವರು ಮೇಲಾ
ಶೌರ್‍ಯೇ ಸಾರ್‍ಯಾರೋ ಮೌಲಾ ಅಲಿ ಹೈದರ ಹಜರತ ಮೌಲಾ ||

ಇವರ ಸರಿಯೊಳು ಸಮರ‍್ಯಾರಿಲ್ಲಾ
* * *
ಮೌಲಾಲಿ ಶರಣಾ ಮಹ್ಮದ ಪೈಗಂಬರಾ
ಅಪ್ಪಣಿ ತಗೊಂಡು ಹತ್ಯಾರೋ ಕುದರಿಯನಾ
ಹೊಂಟಾರೋ ಶರಣಾ ಕಂಡಾರೋ ಪಕ್ಷಿಯನಾ
ಪಕ್ಷಿಮ್ಯಾಲ ಬರದೈತೋ ಕುರಾನಾ ||

**೨. ಬೀಬಿ ಫಾತಿಮಾ**

ಬೀಬಿ ಫಾತಿಮಾನ ಕಥನ ಹೇಳುವೆ ನಾನಾ
ಮಕ್ಕಾ ಶಾರದೊಳು ಬೇಬಿ ಫಾತಿಮಾ
ಓದುವಳೋ ನಿತ್ಯ ಕುರಾನಾ ||

**೩. ಜೈತುನೆಂಬಾಕಿ ಜಟ್ಟಿ**

ಸೈ ಸಬಾಸಿ ಮರತೇಕ ಬಂದಾಳೋ ಹುಟ್ಟಿ
ಜೈತುನೆಂಬಾಕಿ ಜಟ್ಟಿ
ಪೊಡವಿಯೊಳು ಪಾಶಾನ ಹೊಟ್ಟೀಲಿ ಹುಟ್ಟಿ
ಗಂಡಸೂರ ಡ್ರೇಸ ಹಾಕ್ಯಾಳೋ ಗಟ್ಟಿ
ಕುದುರಿಯ ನೇರಿ ಬಿಟ್ಟಾಳೋ ನೀಟಕಟ್ಟಿ
ಮಹ್ಮದ ಹನೀಫ ಆಗ್ಯಾನೋ ಭೆಟ್ಟಿ
* * *

## ಖಲೀಫರು ಮತ್ತು ಅವರ ಸಂಬಂಧಿಕರಿಗೆ ಸಂಬಂಧಿಸಿದ ಪದಗಳು

## ೧. ಸೂರ್ಯನಿಗೆ ‘ಉಮರ’ ಕೊಟ್ಟ ಶಾಪದ ಪದ

ಪಂತರು ಬುದ್ಧಿವಂತರು ಕೂಡಿ ಕುಂತೀರಿ ಬಂದಾ
ಮಜಕೂರ ಒಂದ ಧ್ಯಾನಕ ತಂದ ಮನಸಿಗೆ ತಂದ
ಏರು | ಸರಸ ಸಬಾ ನೀವು ಪುರಮಾಸಿ | ನೆರದೀರಿ ಮಾಡೂದಕ ಚೌಕಾಸಿ
ಚ್ಯಾಲ || ಇಂದ ನಾನು ಒಂದ ಕತಿ ತಗದೇನಿ ಹುಡುಕಿ
ಮುಂದ ಶಾಹೀರ ಕೇಳೋ ನಿನ್ನ ಮನದಾಗ ಮಿಡುಕಿ
ತಮ್ಮಾ ಜರಾ ದಮ್ಮ ಹಿಡಿ ಹಾರಿಸುವೆ ಪಡಕಿ
ನಿನ್ನ ಅಡಿಗಡಿ ಕೊಡತೇನೋ ತೋಡಿಗೆ ತೋಡಿ
ನಿನ್ನ ಮೂಗಿನ್ಯಾಗ ಪೋಣಿಸಿ ಬಿಡತೇನಿ ಕೌಡಿ
ಹಾಡತೀದಿ ಮಂಗ್ಯಾನಂಗ ಬಲು ಕುಣದಾಡಿ || ೧ ||

ಇ || ಖಡಕ ಅಕ್ಷರ ತೊಡಕ ಬಲು ಬಿಗಿ ಬಂದ
ಧ್ಯಾನಕ ತಂದ ಕೇಳರಿ ಪಸಂದ ಮನಸ್ಸಿಗೆ ತಂದ
ಏರು || ಉಮರ ಉಸ್ಮಾನ ಅಲಿ ಮೌಲಾ | ಅಬೂಬಕರ ಸಿದ್ದೀಕಾದರ ಅಲಿ
ಚ್ಯಾಲ || ಇವರು ಅಗದಿ ಅಗದಿ ಜೀವನ ಮಿತ್ರ
ಶರಣ ನಬಿಸಾಬನ ತಲಿಮ್ಯಾಲಿನ ಛತ್ರ
ಐದು ಹೊತ್ತು ನಮಾಜ ಮಾಡ್ಯಾರೊ ಸಾಂಬನ ಸ್ತ್ರೋತ್ರಾ
ಅಷ್ಟು ಮಂದಿ ಕುಡಿ ಉದಯದ ನಮಾಜ ಮಾಡಿ
ಹೊರಟು ಹೋದಾರೋ ತಮ್ಮ ತಮ್ಮ ಮನಿ ಕಡೆ
ಉಮರ ಅದರಾಗಿಂದ ಹ್ವಾದಾನೊಡದ || ೧ ||

ಇ || ಉತ್ತತ್ತಿ ವನದಾಗ ಉಮರ ಹೋಗಿ ಕುಂತಿದ್ದಾ
ಅವರ ಮೈಯಾಗಿದ್ದ ಅಂಗಿ ತೊಟ್ಟೆದ್ದು ಹೋಗಿತ್ತೊ ಹರದಾ
ಏರು || ಕಳದಾರ ಉಮರ ಮೈಮ್ಯಾಲಿನ ಅಂಗಿ | ಉತ್ತತ್ತಿ ಎಳಿಲಿಂದ ಹೊಲುವ ಸಲುವಾಗಿ
ಚ್ಯಾಲ || ಸಣ್ಣನೂಲ ಬೆನ್ನಮ್ಯಾಲ ಹೋಗಿತ್ತೋ ಹರದ
ಜೋಡಿಸಿ ಅದು ಪೋಣಿಸಿ ಉತ್ತತ್ತಿಗಿಡದ
ಆಗಿ ಮನ ಪೈರನ ಬಿಡಬೇಕ ಹೊಲದ ಸೂಜಿ ಹಿಡಿದರಾಗ
ತಂದ ಮನಸಿನ ಮ್ಯಾಗ ಗಟ್ಟಿ | ಹೊಲಿಬೇಕೋ ಎಂದೂ ಹರಿದಾಂಗ
ಬರಿಮೈಯ ಬಿಟ್ಟು ಉಮರ ಅಂಗಿಯ ಹೊಲಿತಿದ್ದ || ೨ ||

ಅಷ್ಟು ಹೊತ್ತಿನ್ಯಾಗ ಸೂರ್ಯ ಉದಿಹಾದ ಬಂದಾ
ಉಮರನ ಹಿಂದ ಪೂರ್ವಕ್ಕೇರಿದ್ದಾ ಬೆನ್ನ ಮಾಡಿ ಕುಂತಿದ್ದಾ
ಏರು || ಹೊಲುದರೊಳಗ ಬಿದ್ದಿತೋ ಉಮರನ ಧ್ಯಾಸಾ | ಎಳೆ ಬಿಸಲಿಗೆ ಬಳೆ ಸುಟ್ಟಿತೋಬೆನ್ನಾ
ಚ್ಯಾಲ || ಸುಟ್ಟ ಬೆನ್ನ ಸಿಟ್ಟಿಲಿಂದ ತಿರುವ್ಯಾರೋ ಗೋಣಾ
ಉಮರ ಆಗ ಸೂರ್ಯನಮ್ಯಾಗ ಕಿಸ್ತಾರೋ ಕಣ್ಣಾ
ಸೂರ್ಯ ಜರಬ ಆಗಿ ಗಾಬ ಸೂರ್ಯ ಬರಲಿಲ್ಲ ತಿರುಗಿ
ಹೋಗಿ ಏಳನೆಯ ಪಾತಾಳದಾಗ ಕುಂತಾನೋ ಅಡಗಿ
ಕುಂತಿದ್ದ ಜಾಗ ನಮಗ ಹೇಳಬೇಕೋ ಒಡದಾ || ४||

ಇಳು || ಬಿದ್ದೀತು ಸುತ್ತ ಮುತ್ತ ಕತ್ತಲ ಗಡದಾ
ಕಾಳ ಕತ್ತಲ ಗಡದಾ ಬಡಬಗ್ಗರದಾ ಆದೀತ ಬಂದಾ
ಏರು || ಕಂಡ ನಬಿಸಾಬ ಶರಣರಾ | ಮಾಡುವರೊ ಮನಸಿನ್ಯಾಗ ವಿಚಿಯಾರಾ
ಚ್ಯಾಲ || ಏನು ಚಮತ್ಕಾರವಿದು ತಿಳಿಲಿಲ್ಲ ನನಗ
ಮೂಡಿ ಮುಣುಗಿದ್ದು ಆಗಿಲ್ಲ ಹ್ಯಾಂಗ
ಕಿಯಾಮತ್ ಪ್ರಳಯಕಾಲ ಬಂದೀತ ಈಗ
ಇದ ಯೋಚನ್ಯಾಗ ಕುಂತಾನ ಬಡದ ದಿಂಗ
ಚೂರ ಚೈನ ಇದ್ದಿಲ್ಲ ಅವನ ಜೀವದ ಒಳಗ
ಶರಣ ನಬಿಸಾಬಗ ಬಿದ್ದೀತೋ ಭುಗಿಲಾ || ೫ ||

ಇ || ಅರಜ ಮಾಡ್ಯಾರೋ ಶರಣರು ಸಿದ್ದಶಿವನ ಹುಕುಮಲಿಂದಾ

ಜಿಬರಾಯಿಲಾ ಬಂದಾ ತಿಳಿಸುದಕ

ಏರು || ಅಂತಾನೋ ಜಿಬಿರಾಯಿಲಾ ಯಾತಕ್ಕ ಚಿಂತೆ

ನಿಮ್ಮ ಅಸಹಾಬ ಉಮರ ಮಾಡಿದ ಖ್ಯಾತಿ

ಚ್ಯಾಲ || ಇಂದ ಮುಂಜಾಲೆ ಹೋಗಿದ್ದ ಅಂವಾ ಉತ್ತತ್ತಿ ವನಕ

ನೀವು ಎಲ್ಲಾರೂ ಕೂಡಿ ನಮಾಜು ಮಾಡಿದ ಬಳಕ

ಅವನ ಅಂಗಿ ಹರಿದಿತ್ತು ಹೊಲುವುದುಸಕ

ಅಂಗಿ ಕಳದ ಕುಂತಾ ಸ್ವಲ್ಪ ಏರಿತ್ತೊ ಹೊತ್ತಾ

ಎಳೆ ಬಿಸಿಲು ಹತ್ತಿ ಅವನ ಬೆನ್ನು ಸುಟ್ಟಿತಲ್ಲಾ

ಅವರು ಸಿಟ್ಟೀಲೆ ದಿಟ್ಟೇಸಿ ನೋಡ್ಯಾರ ಸೂರ್ಯ ಆದ ಐಕಾ || ೬ ||

ಇ || ಈ ಮಾತ ಅವರಿಂದಾ ನೀಗದೊ ಯಾರಿಂದಾ

ಹೇಳಿ ಇಷ್ಟ ಬೇದಾ ಜಿಬರಾಯಿಲಾ ಹೋದಾ ಹುಕುಮ ಸಾಂಬಂದಾ

ಏರು || ಈ ಮಾತು ನಬಿಸಾಬ ತಿಳಕೊಂಡಾ

ಹೋದಾರೋ ನಾಲ್ಕುಮಂದಿ ಕರಕೊಂಡಾ

ಚ್ಯಾಲಿ || ಸಾಗಿ ಅವರು ಅಲ್ಲಿಗೆ ಹೋಗಿ ನೋಡುತನಕ

ಊರ ಬಿಟ್ಟ ದೂರ ಇರುವ ಉತ್ತತ್ತಿ ವನಕ

ಕುಂತಿದ್ದಾ ಅಂವಾ ಅಂಗಿ ಹೊಲುತಿದ್ದಾ ಒಂದು ಗಿಡದ ಬುಡಕ

ಶರಣರು ಹಿಡದಾರೋ ಕೂನಾ ದೂರಿಂದ ಮಾಡ್ಯಾರೊ ಶರಣಾ

ಬಾಳ ಬುದ್ಧಿವಂತ ಉಮರ ನಿಮ್ಮದು ಶಾಂತಗುಣಾ

ಇಷ್ಟೊಂದ ಕೋಪಾ ನಿಮಗ ಯಾಕ ಬಂದಿತೋ ಇಂದಾ || ೭ ||

ಇ || ನಿಮ್ಮ ಜರಬಿಗೆ ಅಂಜಿ ನಡುಗಿ ಗದಗದಾ

ಮಾರಿ ತೋರಿಸದೆ ಬಂದಾ ಅಂವಾ ಇಳದ ಸೂರ್ಯ ಮುಳುಗಿದ್ದಾ |

ಏರು || ಹಂತವರದು ಆಗೇತಿ ಆಗತಿ ಬೆಳಗು ಮಾಡೋ ಅಧಿಪತಿ

ಚ್ಯಾಲ || ಇಷ್ಟು ಸಿಟ್ಟ ಇಟ್ಟರ ನೀವು ಮನಸಿನೊಳಗ

ನಡದೀತ ಹ್ಯಾಂಗ ಆದೀತ ಹ್ಯಾಂಗ ಬೇಗು ಬೆಳಗು

ಬಂದ ಜಿಬಿರಾಯಿಲ ತಂದ ಮಾಹಿತಿ ಹೇಳಿದ ನಮಗ

ನೋಡಿ ಆ ಸೂಚನಾ ನಾವು ಇಲ್ಲಿತನಾ

ನಡೆದ ಬಂದೇವಿ ಕೊಡಬೇಕ ಮಾನಾ ಪಾನಾ |

ಇಲ್ಲಂದರ ಇಂದಿಗೆ ಸೂರ್ಯ ಬರುವುದಿಲ್ಲಂದಾ || ೮ ||

ಇ || ಇಷ್ಟು ಕೇಳಿ ಉಮರ ಸೂರ್ಯಗ ಝಟ್ಟನೆ ಕರದಾ

ಕೇಳಿ ಈ ಶಬ್ದಾ ಆದಾ ಅಂವಾ ಲುಬ್ದಾ ತೆರದೀತ ಪ್ರಾರಬ್ದಾ

ಏರು || ಬಂದಾನೋ ಸೂರ್ಯ ಭೂಮಿಮ್ಯಾಲೆ ಮೂಡಿ

ಸರ್ವರ ಮನಾ ಸಂತೋಷ ಆತ ಪ್ರಕಾಶ ನೋಡಿ

ಚ್ಯಾಲಿ || ಶರಣರು ಮತ್ತು ನಾಲ್ವರು ಮಿತ್ರರು ಕೂಡಿ

ಸಾಂಬನಲ್ಲಿಗೆ ಹೋಗಿ ಬಂದಾರ ಬೇಡಿ
ದಸ್ತಗೀರ ಕೇಸುಪೀರ ಸತ್ಯದ ಮಹಿಮಾ
ಬಾಗಲಕೋಟಿಯೊಳಗ ಉಸ್ತಾದ ಲಚ್ಚಮನ ಸಿಂಗ
ತುಸು ತಗುಲಿಲ್ಲದೆ ಮಿಗಿಲಾದರೋ ದೇಶದೊಳಗ
ನಾಗು ಗೌಸು ವೈರಿಗೆ ಹೊಗಿಸ್ಯಾರೋ ಗುಡ್ಡಾ || ೬ ||

* * *

## ೨. ಮೌಲಾಲಿಯ ಜನನ ಮತ್ತು ಬಾಲಲೀಲೆ

ಪಂಡಿತ ಪಂತರು ಎಲ್ಲಾ ಇಟ್ಟಕೇಳರಿ ಖ್ಯಾಲಾ ||
ಹುಟ್ಟಿ ಬಂದಾರೋ ಅಲಿ ಮೌಲಾ ಮರತೇಕ || ಪಲ್ಲವಿ ||

ಏರು || ಬೀಬಿ ಫಾತಿಮಾ ಫಕರಾ ಮೌಲಾನ ತಾಯಿಯ ಹೆಸರಾ
ಒಂಬತ್ತು ತಿಂಗಳ ಬಸರಾ ಕಾಲಕ ಸಾಗಿ ಹೋಗಿಹೋಗಿದ್ದರು ಬೇಬಿಬೈತುಲ್ಲಕ್ಕ
ಆ ಕಾಬೇಕ ಬಂದ ಮ್ಯಾಲಾ ಬೆಟ್ಟಿ ಆದ್ರ ನಬಿರಸೂಲಿಲ್ಲಾ
ಅಂತಾರ ಬೀಬಿಗೆ ತಡೆಯದೆ ತತ್ಕಾಲಾ
ಹೋಗರಿ ಮನಿಗೆ ಇನ್ನಾ | ಬ್ಯಾರೆ ಆಗೇತಿ ನಿಮ್ಮ ಚಿನ್ನಾ |
ಬರತಾರ ಹುಟ್ಟಿ ರತನಾ ಜಗತೇಕ || ೧ ||

ಇ || ಶರಣರು ತಾಕೀತ ಕೊಟ್ಟ ಹ್ವಾದಾರ ಮನಿಗೆ ಹೊಂಟಾ
ತಿಳೂದಿಲ್ಲ ಸಾಂಬನ ಆಟ ಕೌತೂಕ
ಏರು || ಬೀಬಿ ಫಾತಿಮಾ ಫಕರಾ ತಿಳಕೊಂಡ ಮಜಕೂರಾ
ಮಾಡತಾರ ಅವಸರಾ ಹೋಗುದಕ | ಬ್ಯಾನಿಯೆದ್ದ ಹೊಟ್ಟಿ ಕಡಿಲಾಕ
ಆ ಪರಮಾತ್ಮನ ಲೀಲಾ ಸುಳ್ಳು ಆಗೂದು ಕವಲಾ
ಕಾಬೇದಾಗ ಹುಟ್ಟೂದು ಇತ್ತ ಅಲಿಮೌಲಾ
ಬ್ಯಾನಿಯೆದ್ದು ಮಾಡ್ಯಾವ ಜೇರಾ ಆದಾರಾ ಗಾಬರಾ
ಇದ್ದಿಲ್ಲಾ ಯಾರ್‍ಯಾರ ಹಂತೇಕ || ೨ ||

ಇ || ಫಾತಿಮಾ ಫಕರಾ ಆಗ ನೆನಸಿ ಅಂತಾರ ಶಿವಗ
ಸಿಗವಲ್ಲದು ಮರಿಯಾದಿ ಜಾಗ ನಸೀಬಕ
ಏರು || ಬೀಬಿ ಮರಗವ ನೋಡಿ ಬಿರದೀತ ಕಾಬೇದ ಗ್ವಾಡಿ
ಸಾಂಬನ ಹುಕುಂ ಮಾಡಿದಾಕ್ಷಣಕ ಹೋಗಿ ಕುಂತಾರ ಬೀಬಿ ಆಸರಕ
ಆ ಪರದ್ಯಾಗ ರಂಬಿ ಹಡದಾರ ಮೌಲಾಗ ನವಮಾಸ ತುಂಬಿ
ಮಾದೇವನ ಕರುಣ ಕಟಾಕ್ಷ ನಂಬಿ
ಭೂಮಿಗೆ ಬಿದ್ದಾಕ್ಷಣ ಅದರೀತ ತ್ರಿಲೋಕ
ಕಾಬೇ ತುಂಬ ಬಿದ್ದೀತ ಬೆಳಕ ಸುರತಕ್ಕ || ೩ ||

ಇ || ಬಂದಾರ ನಾಗಕನ್ಯಾರು ಸ್ವರ್ಗದ ನೀರು ತಂದು ಎರೆದಾರು
ಕಳಿಸಿದಾ ಸದ್ಗುರು ಬಾಣೇತನಕ
ಏರು || ಮೂರು ದಿನದ ಮ್ಯಾಲಾ ಬಿಟ್ಟಾರ ಬೈತುಲ್ಲಾ
ಮನಿಗೆ ಹೋದಾರ ಖುಷಿಯಾಲಾ ಮದೀನೇಕ
ಖುಷಿಯಾದಾರ ರಸೂಲಿಲ್ಲಾ ನೋಡಿ ಕಮಲಾ
ಆ ಕೂಸಿನ ಮ್ಯಾಗ ಮಮತಿ ಬಗಲಾಗ ತಗೊಂಡಾರ ಎತ್ತಿ
ನಬಿಸಾಬ ಮೌಲಾಗ ನೋಡಿ ಬಿಡುವರು ಅಕ್ಕರತಿ
ಮುದ್ದಾಡಿದಾರ ಅಂವಚಿ ಮಾರಿಗೆ ಮಾರಿ ಹಚ್ಚಿ
ಹತ್ತಿತ ವಿದ್ಯೆದ ಶುಚಿ ಅದ ಕಾಲಕ || ೪ ||

ಇ || ಮರುದಿನಾ ತೊಟ್ಟಿಲದಾಗ ಮಲಗಿಸಿ ಅಲಿ ಮೌಲಾಗ
ತಾಯಿ ಕೂತ್ರ ಬಚ್ಚಲದಾಗ ಜಳಕಕ
ಏರು || ಹಾಂವ ಒಂದ ತೊಟ್ಟಿಲದಾಗ ಬಂದ ಬಿತ್ತ ಮೌಲಾನ ಮ್ಯಾಗ
ಎಚ್ಚರಾಗಿ ನೋಡುದರೊಳಗ ಬಂತ ಕಡಿಯಾಕ
ಕಸುವ ತೋರಸ್ಯಾರ ಹುಟ್ಟಿದ ನಾಕ ದಿನಕ
ಆಗ ಮೌಲಾ ಮಾಡಿ ಚಾಲಾಕಿ ಎರಡು ಕೈ ಬಟ್ಟ | ಹಾಂವಿನ ಬಾಯಾಗ ತುರಕಿ
ಸೀಳಿ ಒಗದಾರ ಮಾಡಿ ಎರಡು ಪಕರಾಣಕಿ
ಫಾತಿಮಾ ಪತಿವರತಾ ಜೆಳಕಾ ಮಾಡಿ ಎದ್ದಾರ ತುರತಾ
ತೊಟ್ಟಿಲ ಸುತ್ತ ಬಿದ್ದೀತ ರಗತಾ ನೋಡುತನಕ || ೫ ||

ಇ || ತೊಟ್ಟಿಲ ಎಡಬಲಕ ಬಿದ್ದೀತ ಹಾಂವಿನ ತುಣಕ
ಗಟಾಸರ್ಪ ಅಚಾನಕ ಜೀವದಸಕ
ಏರು || ತಾಯಿ ಕಂಡು ಹೌಸಾಣ ಹಾರಿ ಒದರ್ಯಾರ ಚಿಟ್ಟನೆ ಚೀರಿ
ಕೂಡ್ಯಾರ ನೆರಿಹೊರಿ ಕಲಕಾಟಕ ನೋಡಿತ್ತ ಕೂಡಿತ ಮಂದಿ ಕೌತೂಕ
ಆಗ ಹಜರತ ರಸೂಲಿಲ್ಲಾ ನಿಂತ ನೋಡತಾರ ತೊಟ್ಟಿಲ ಮಗ್ಗಲಾ
ಮೌಲಾನ ಚೆಹರಾ ಸಿಟ್ಟೀಲೆ ಆಗಿತ್ತ ಕೆಂಪಲಾಲಾ
ಮೈತುಂಬ ಮುಣಗಿತ್ತ ರಗತಾ ಒರಸಿದಾರ ಕೈಮುಟ್ಟಿ ಹಸ್ತಾ
ಶಿವನ ಹುಲಿ ಶಕ್ತಿವಂತಾ ಈ ಬಾಲಕ || ೬ ||

ಇ || ಗಫಾರನ ಪಂಚಪ್ರಾಣಾ ಕೂಫಾರನ ಗಂಟಲಗಾಣಾ
ಕಂಡಲ್ಲಿ ಕೊಯಿತಾರಾ ಗೋಣಾ ಕಡಿತನಕ
ಏರು || ಪ್ರೀತೀಲೆ ಹುಟ್ಟಿಸ್ಯಾನ ಸಾಂಬಾ | ಇಸ್ಲಾಮ ಧರ್ಮದ ಸ್ಥಂಬಾ
ಆಗೂದು ಜಗತುಂಬಾ ಇವರ ಬೆಳಕಾ
ಕಾಳ ಆಗುವಾ ವೈರಿಗಳ ಕುಲಕ | ಆ ಬಾಗಲಕೋಟಿ ಶಾರಾ
ಸುತ್ತದೇಶಕ ಜಾಹಿರಾ | ದಸ್ತಗೀರ ಕೇಸುಪೀರಾ ಶೇನೇದಾರ
ನಾಗೂ-ಗೌಸೂನ ಜರಬಾ | ನಿನಗ ಹ್ಯಾಂಗ ಬಂದೀತ ಕುರುಬಾ
ಕೊಯಿಕೊಂಡ ಬಿಡತೇನಿ ತುರಬಾ ಕಡಿಕಾಲಕ || ೭ ||

* * *

## ೩. ನಾಲ್ಕು ದಾರಿಯ ಪದ

ಚಂದ ಸಬಾ ಕೂಡಿರಿ ಬಂದ | ಮಜಕೂರ ತಗದೇನಿ ಒಂದ
ಆಗಬೇಕ ಆನಂದ ಜನರೆಲ್ಲಾ || ಪಲ್ಲವಿ ||

ಮರ್ತ್ಯದೊಳಗ ಮೌಲಾ | ಆದಾರೋ ಪ್ರಭೂಲಾ
ಶಿವನ ಹುಲಿ ಅನಿಸಿದರಲ್ಲಾ | ಭವದೊಳು ಭಕ್ತರ ಮೇಲಾ
ಏರು || ಒಂದ ದಿನ ಆಡಾಕ ಬ್ಯಾಟಿ | ಹೊಂಟಾರೋ ನಡಾ ಕಟ್ಟಿ
ಕುದುರಿಗೆ ಜೀನ ಜರಕಾಟಿ | ರಂಗಲಾಲಾ || ೧ ||

ಇ || ನಬಿಸಾಬ ಕಂಡರಾಗ ಕರದಾರ ಅಲಿ ಮೌಲಾಗ
ತಾಕೀತ ಮಾಡ್ಯಾರ ಹೀಂಗ | ರಸೂಲಿಲ್ಲಾ
ಏರು || ನಿಮ್ಮ ಮನದಾಗ ಹುಟ್ಟಿ | ನಡದೀರಿ ಆಡೂಕ ಬ್ಯಾಟಿ
ನಿಮಗೊಂದ ಹೇಳತೇನಿ ಗಟ್ಟಿ | ನಮ್ಮ ಸೀಮಿ ಹ್ವಾದಿಂದ ದಾಟಿ
ಬರತಾವ ನಾಲ್ಕುದಾರಿ | ತಪ್ಪದಲೆ ನೆಪ್ಪಹಿಡಿರಿ
ಅದರಾಗ ಮೂರುದಾರಿ ಭಯಾಯಿಲ್ಲಾ || ೨ ||

ಇ || ನಾಲ್ಕನೆಯ ದಾರಿಗೆ ಹೋಗಬ್ಯಾಡಾ | ಐತಿ ಅದು ಬಲೆ ಅನಗಡಾ
ದಕ್ಷಿಣ ದಿಕ್ಕು ಸುಡಗಾಡಾ | ಚಲ್ಲೋದಲ್ಲಾ
ಏರು || ಕೇಳಿಕೊಂಡು ಮಾವನ ಕಲ್ಮಾ | ಹೊಂಟಾರೋ ತಗೊಂಡ ಹುಕುಮಾ
ದಾರಿ ಹಿಡದಾರೋ ತಮ್ಮಾ ಕುದುರಿಗೆ ಹಾಕಿ ಲಗಾಮಾ
ಸೀಮಿದಾಟಿ ಹೋಗೂತನಕ | ದಾರಿಗಳು ಬಂದಾವ ನಾಲ್ಕು
ಮಾವನ ಮಾತ ಆದೀತ ತರ್ಕಾ ಮರೆಯಲಿಲ್ಲಾ || ೩ ||

ಇ || ಬ್ಯಾಡಂತ ಹೇಳಿದ ಹಾದಿಗೆ | ಕುದುರಿ ಹ್ವಾದೀತ ಸಾಗಿ
ಎಷ್ಟು ಹಿಡಿದರ ಜಗ್ಗಿ ಕೇಳಲಿಲ್ಲಾ
ಏರು || ತುಂಬೀತ ಕುದುರಿಗೆ ಗಾಳಿ | ಹೋಗುವಾಗ ಆರ್‍ಯಾಣದಲ್ಲಿ
ಮೂರು ಭಾವಿ ಇದ್ದಾವ ಅಲ್ಲಿ | ನೋಡತಾರಾ ಮೌಲಾ ಅಲಿ
ಎಡಬಲ ಬಾವ್ಯಾಗ ನೀರಾ | ತುಂಬಿದ್ದವು ಭರಪೂರಾ
ನಡುವಿನ ಬಾವ್ಯಾಗ ಜರಾ | ಇದ್ದಿದ್ದಿಲ್ಲಾ || ೪ ||

ಇಳು || ಕಂಡ ಮೌಲಾ ಆಗ್ಯಾರ ಹೈಪಾ | ಸಾಂಬನ ತಂತ್ರ ತಾರೀಫಾ
ಕಲ್ಪನಾ ಮಾಡಿದರು ಸ್ವಲ್ಪ ತಿಳಿಯಲಿಲ್ಲಾ
ಏರು || ಮತ್ತ ಅಲ್ಲಿಂದ ಕುದುರಿ | ಹೋದೀತ ಭರಾರರಿ.
ಗಾಳಿ ಬಿಟ್ಟ ರವದಿಯ ಸರಿ | ಸಮುದ್ರಕ ಬಂದಿತ್ತರಿ

ಚಮತ್ಕಾರಾ ಕಂಡಾರ ಮೌಲಾ | ಮುಣುಗುತಿದ್ದವು ನೀರಾಗ ಕುಳ್ಳಾ
ತೇಲುತಿದ್ದವು ದೊಡ್ಡ ದೊಡ್ಡ ಕಲ್ಲಾ | ಹರಗೋಲಾ || ೫ ||

ಇ || ಕಣಗಂಡ ಕಂಡ ಕೌತೂಕ | ಮೌಲಾವಲಿ ಆದಾರ ಭಕ್ಕ
ಗೂಡಾರ್ಥ ಅವರಿಗೆ ಪಕ್ಕ ತಿಳಿಯಲಿಲ್ಲಾ |
ಏರು || ಮಜಕೂರ ತಿಳಿದಂಗಾತು | ಮನದಲ್ಲಿ ಅಗಾದ ಹಿಡಿತು
ಕುದುರಿ ದಾರಿ ಹಿಡಿದಿತ್ತು | ಮತ್ತ ಪಕ್ಷಿವೊಂದ ಕಣ್ಣಿಗೆ ಬಿತ್ತ
ಹಕ್ಕಿರೆಕ್ಕಿಯ ಮ್ಯಾಲಾ | ಅಕ್ಷರ ಬರೆದಿದ್ದವು ಖುಲ್ಲಾ
ತಮಾಮ ಕಲ್ಮಾ ಷರೀಪಯೆಲ್ಲಾ ಉಳಿದಿದ್ದಿಲ್ಲಾ || ೬ ||

ಇ || ನೆದರ್ಹಚ್ಚಿ ನೋಡೂತನಕ | ಪಕ್ಷಿ ತಿಂತಿತ್ತೊ ನರಕ
ಚೈನೇನು ಮೌಲಾನಾ ಜೀಂವಕ್ಕ ಉಳಿಯಲಿಲ್ಲಾ |
ಏರು || ಕಣಮುಟ್ಟಿಕಂಡ ಮ್ಯಾಲಾ | ಕುಂತಗೊಂಡು ಅತ್ತಾರ ಮೌಲಾ
ಮೈತುಂಬಾ ಕಲಾಮುಲ್ಲಾ | ಬಾಯಿಲೆ ತಿಂತಿತ್ತೊ ಎಲ್ಲಾ ||
ಮೌಲಾ ಅಲಿ ಆದಾರ ಗಾಬಾ | ಇದು ಏನು ಸಬಾಬಾ
ಅಂತಾರ ತೋಬಾ ತೋಬಾ | ಯಾ ಅಲ್ಲಾ || ೭ ||

ಇ || ಅವಸರಲಿ ಮನಿಗೆ ಬಂದಾ | ಹೇಳತಾರ ಮಾವನ ಮುಂದಾ
ಅಡವ್ಯಾಗ ಆಗಿದ್ದ ಬೇದಾ | ತಪಶೀಲಾ
ಏರು || ಬಿದ್ದೈತಿ ನನಗ ಗುಮ್ಮಾ | ಒಡದ ಹೇಳರಿ ಕಲ್ಮಾ
ಕೇಳಿ ಅಂದ್ರೊ ರಸೂಲೆ ಕರಿಮಾ | ಮುಂದ ಮಳೇ ಆಗೂದು ಕಮ್ಮಾ
ಒಬ್ಬನ ಹೊಲಕ ಆಗೂದು ಮಸ್ತಾ | ಮಗ್ಗಲದಾಂವಾ ಕುಂತಾನ ಅತ್ತಾ
ಮೂರುಬಾಂವಿದು ತಿಳಿಬೇಕ ತರ್ಕಾ | ಸುಳ್ಳಲ್ಲಾ || ೮ ||

ಇ || ಸಮುದ್ರದು ಕೇಳರಿ ಸೂಚನಾ | ಬರತಾವ ಇಂಥ ದಿನಮಾನಾ
ಒಳ್ಳೆ ಮನುಷ್ಯರದು ಮಾನಾ ಉಳೂದಿಲ್ಲಾ
ಏರು || ಪಕ್ಷಿ ತಿನ್ನೂದು ನರಕಾ | ಇಟ್ಟ ಕೇಳರಿ ತರಕಾ
ಸಿಟ್ಟಿಗೆ ಬರಬ್ಯಾಡ್ರಿ ತೋಕ | ಬಿದ್ದರ ಮಾತಿನ ಫರಕಾ
ಪುರಾಣ ಕುರಾನ ಓದಾವರು | ನಮಾಜ ರೋಜಾ ಮಾಡಾವರು
ಬಡ್ಡಿ ತಿನ್ನೊದು ಅವರು ಬಿಡೂದಿಲ್ಲಾ || ೯ ||

ಇ || ಕೇಳಿ ಮಾಂವನ ಮಾತಾ | ಮೌಲಾನ ಮನ ಆದೀತ ಶಾಂತಾ
ಈ ಮಾತ ನಡದಾವ ತುರತಾ | ಹಾಲಿಹಾಲಾ
ಏರು || ಇನ್ನಾರ ಬಿಡವಲ್ಲಿ | ತಿನ್ನೂದು ಬಿಡವಲ್ಲಿ
ದಸ್ತಗೀರ ಕೇಸುಪೀರನ್ಹಂತೇಲಿ | ಜವಾಬೇನ ಕೊಡತೀದಿ ಪ್ಯಾಲಿ
ನಾಗೂಗೌಸೂನ ಕೂಡ ರಂಡಿ ಜಿದ್ದಹಾಕಿಯೇನ ಉಂಡಿ
ಜಿಗದಾಡಿ ಕಳಕೊಂಡಿ ರುಂಬಾಲಾ || ೧೦ ||

* * *

## ೪. ಕಂದೂರ ಕಿಲ್ಲೆಯ ಸೈನ್ಯ ಸೋಲಿಸಿದ ಮೌಲಾಲಿ

ಪ್ರಖ್ಯಾತ ಪೃಥ್ವಿಮ್ಯಾಲೆ ಕಂದೂರ ಬಂದೂರ ಕಿಲ್ಲೆ
ಕಾಣೆ ಈ ಭೂತಳದಲ್ಲೆ ಬಲು ಮಾಟ ಘಾಟ ಸುದ್ದ ಇಮಲಾ
ಏರು || ಆ ಕಿಲ್ಲೇದ ಗ್ವಾಡಿ ಥೇಟ ತಗದಾಂಗ ಪಗಡಿ
ಯೊಳ ಜಾತಿಯ ಮಾಡಿ ಕಲ್ಲಿನ ಚೌಕಡಿ
ಕಿಲ್ಲೇದ ಸುತ್ತ ಬಲು ಬಂದೋಬಸ್ತ
ನಾಲ್ಕು ಗುಡ್ಡ ಇದ್ದು ಮ್ಯಾಕ ನೋಡಿದರ
ತಳಿಯಾಕ ಬೀಳೂದು ರುಂಬಾಲಾ |
ಆ ನಾಲ್ಕು ಗುಡ್ಡದ ಬಣ್ಣ ಬ್ಯಾರೆ ಬ್ಯಾರೆ ವರಣಾ
ಹಸಿರು ಕರೆ ಕಿರಣ ಹಳದಿ ಕೆಂಪಲಾಲಾ
ಕಿಲ್ಲೇದ ಸುತ್ತ ಮುತ್ತ ನೀರ ಇತ್ತ
ಸಮುದ್ರದೊಳಗ ಹೋಗುವದು ಸ್ವತಂತ್ರದಾರದು ಇಲ್ಲಾ
ನಾಲ್ಕುನೂರು ಗುಮಜಗಳು ಕೆಚ್ಚಿದಾಂಗ ಕಾಣುವ ಹರಳಾ
ಶಾಹೀರ ನೀ ಕುಂತಗೊಂಡ ಕೇಳು ಮುಖತಿಲಕ ಅರಸನ ಅಮಲಾ || ೧ ||

ಅಡಮುಟ್ಟ ಅಬೂಜೈಲನ ಕಮಲಾ ತತ್ಕಾಲ ಅಂಭುವಾ ಕುಲ್ಲಾ
ನೊಂದ ಬೆಂದ ಅಂದ ಹಗಲೆಲ್ಲಾ | ನಮ್ಮ ತಂದಿಗೆ ಕೊಂದಾರೊ ಮೌಲಾ
ಏರು || ಆ ಮಹಾಬಲಗೂಡ ನಾ ಆಗೂದಿಲ್ಲ ಈಡಾ
ಹೀಂಗಿತ್ತು ಹಳವಂಡಾ ಹ್ಯಾಂಗ ತೀರಸಲಿ ಸೇಡಾ
ಕಂದೂರ ಬಂದೂರ ಅರಸನ ಬಹಾದ್ದೂರಾ
ಇನ್ನ ಹೋಗಿ ಅವನ ಬೆನ್ನ ಬಿದ್ದರ ನನ್ನ ಪಂಥ ತೀರುವದು
ಖೋಡಿ ಅಲ್ಲಿಗೆ ಓಡಿ ಹೋಗಿ ರಣಹೇಡಿ ನಿಂತ ಕೈಮುಗಿದು
ತಿಳಿಸಿ ವರ್ತಮಾನ ಬಳಸಿ ಅರಸಗ ಉಳಸದೆ ಎಲ್ಲಾನು ಒಡದು
ಕುಂದರಬ್ಯಾಡೋ ನೀ ಮೈಮರತಾ ಮೌಲಾವಲಿ ಮಹಾಶಮರಂತಾ
ನಿನಗಾದರೂ ಒಂದಿನ ಪೂರ್ತಿ ಪಿಲಾದೇಂಗೆ ಇಸಲಾಮಿ ಪ್ಯಾಲಾ || ೨ ||

ಮುಖಾತೀಲ ಅರಸಗ ಕೆಟ್ಟಾ ಮನಸಿಗೆ ಹತ್ತಿತೋ ಪೆಟ್ಟಾ
ಅಬ್ಬರಿಸಿ ತುಂಬಿತೋ ಸಿಟ್ಟಾ ಆಗ ಬಾರಿಸ್ಯಾನೊ ಜಂಗಿನ ತಬಲಾ
ಏರು || ರಣಬೇರಿ ಬಾರಿಸಿ ದಂಡಿಗೆ ಕೂಡಿಸಿ
ಈ ಮಜಕೂರ ತಿಳಿಸಿ ಹುರಿ ಹಾಕರಿ ಮೀಸಿ
ಇದ್ದಾಂವಾ ಬಂಟಾ ಬರ್ರಿ ಮುಕ್ಕಟ್ಟಾ
ಇಂದ ಮೌಲಾಗ ಕೊಂದ ತಲಿ ತಂದವನಿಗೆ ಅಂದೇನೊ ಕರ್ಣಾ
ಅರ್ಧ ರಾಜ್ಯ ಮತ್ತ ನೆರೆದ ಮಗಳ ಕೊಟ್ಟು ಗರ್ದಿಲೆ ಮಾಡುವೆ ಲಗ್ನಾ
ಬಕ್ಷೀಸ ಇಟ್ಟಿದ್ದಾ ಇಂಥಾ ಬಹಳ ಶಮರಂತಾ

ಮುಖದ್ವರ ಅಂತೊಬ್ಬ ಇದ್ದ ಪೈಲ್ವಾನ ಇಳೇಯೆತ್ತಿ ಅಂದಾ ಬಾಯಿಲಿ
ತರತೇನಿ ನಾ ಮೌಲಾನ ತಲಿ ನಡಾಕಟ್ಟಿ ಹೊಂಟಾ ಕ್ಷಣದಲ್ಲಿ
ಕರಕೊಂಡ ತನ್ನ ದಂಡ ಹಿಂಬಾಲಾ || ೩ ||

ಮುಖದ್ದರ ಮೌಲಾನ ಶೋಧ ಮಾಡೂತ ಮಾರ್ಗ ಹಿಡಿದಾ
'ದಿನಮೇಕ' ಎಂಬ ಗುಡ್ಡದಾಗ ಬಂದಾ |
ಅಲ್ಲಿ ಇಳಿಸ್ಯಾನೋ ತನ್ನ ಮಾರ್ಬಲಾ
ಏರು || ಈ ಗುಡ್ಡ ಮೌಲಾನದು ಐತಿ ಬ್ಯಾಟಿ ಆಡೂದು
ಕುಂತರ ತಳಹಿಡಿದು ನಮ್ಮ ಕೆಲಸ ಆಗುವದು
ಗುಡ್ಡದ ವಾರಿಲಿ ಇತ್ತೊಂದ ಚಿರಕಿಲಿ
ಅಡಗಿ ಕುಂತಾರವರು ತುಡಗ ಬೆಕ್ಕಿನ್ಹಾಂಗ ಮನದಾಗ ಮಾಡಿ ಮಸಲತ್ತಾ
ಬ್ಯಾಟಿ ಆಡೂತ ಮೌಲಾ ಬಂದರ ಕಟ್ಟುವೆವು ಜೀವಂತಾ
ಬ್ಯಾಗ ತೋರಿಸಿ ಶಿರಾ ಲಗ್ನ ಆಗಬೇಕಂತಾ
ಹಿಗ್ಯಾನೊ ಮುಖದ್ದರ ಪೂರ್ತಿ ಆ ದಿವಸ ಮದೀನದೊಳಗ
ನಮಾಜು ಮಾಡಿ ಮಸೂತಿಯೊಳಗ
ಮಂದ್ಯಾಗ ಕುಂತಿದ್ದರು ನಬಿ ರಸೂಲಿಲ್ಲಾ || ೪ ||

ನಬಿಸಾಬ ಶರಣರು ಖಾಸಾ ಅಂತಾರೋ ಚಿಗರಿ ಮಾಂಸಾ
ತಿನ್ನೂದು ಆಗೈತಿ ಮನಸಾ ಯಾರ ತರತೇರಿ ಹೇಳರಿ ಮೊದಲಾ
ಏರು || ಆದಮ ಎಂಬವನು ಔತಣ ಕೊಟ್ಟಾನೋ
ನಡಾಗಟ್ಟಿ ಹೊಂಟಾನೊ ಬ್ಯಾಟಿ ಆಡಿ ತರುವೆನು
ಹತ್ಯಾನೋ ಕುದರಿ ತಿರುವೂತ ಪೇರಿ
ಹೊಂಟ ಬ್ಯಾಟಿಗೆ ಬಂಟ ಆದಮ ಬಂದಾನೊ ಅದ ಗುಡ್ಡದಾಗ
ಕಂಡ ಆದಮಗ ಬಂಡ ಮುಖದ್ದರನ ದಂಡು ಘೇರಾಯಿಸಿ ಅಂವಗ
ಬಿರಸಿ ಮಾತ ಆಡಿ ಸರಸ ಮೌಲಾಗ ತೋರಸ ಅಂತಾರ ನಮಗ
ಕೊಯಿಕೊಂಡು ಹೋಗುವೆ ತೆಲಿ ಹೂಕಿ ಹೊಡೆದ ಆದಮ ಹುಲಿ
ನಾನೇ ಅದೇನಿ ಮೌಲಾ ಅಲಿ ನಿಮ್ಮ
ಮೈಯ್ಯಾನ ತೊಗಲಾ ಸುಲದೇನೋ || ೫ ||

ಎದಿಗೊಟ್ಟು ನಿಂತಾರಾ ಇದಿರಾ | ಹಿಡಕೊಂಡ ತನ್ನ ಹತಿಯಾರಾ
ಹೊಕ್ಕಾನೋ ರಣದಾಗ ಶೂರಾ | ಜೀವದ ಹಂಗ ಇಡಲಿಲ್ಲ
ಅಲಿ ಮೌಲಾಗ ನೆನೆದಾ ಜಂಗ ಮಾಡ್ಯಾರೊ ಕುಣದಾ
ಮನ ಬಲ್ಲಾಂಗ ಹಣದಾ | ರಾಶಿ ಹಾಕ್ಯಾನೊ ಹೆಣದಾ
ಆದೀತೋ ಭಂಡ ಮುಖದ್ದರನ ದಂಡಾ
ತಿರುಗಿ ನಿಂತಾರೋ ಹರುಷಾಗಿ ಆದಮನ | ಕೊರಳಿಗೆ ಹಾಕ್ಯಾರೊ ಕಮಂಡಾ
ಹದ್ದ ಹಾರಿದಾಂಗ ಖುದ್ದ ಬಿದ್ದ ಕುದುರಿ ಮ್ಯಾಗಿಂದಾ
ಬಾಣ ಬಿಡದ ನಿತ್ರಾಣ ಆಗಿದ್ದಾ | ಗೋಣ ಕೋದ್ರೊ ಆತಂದಾ

ತಲಿತಗೊಂಡು ಮುಖದ್ದರ ನಡದಾ | ಕಂದೂರ ಬಂದೂರಕ ಬಂದಾ
ಇಟ್ಟಾನೊ ಅರಸನ ಮುಂದಾ | ಲಗೂ ತೀರಸಲಿ ನಮದೆಲ್ಲಾ || ೬ ||

ಅರಸ ಅಂದಾ ವಾವ್ಹಾರೆ ಮರ್ದಾ | ಅರ್ಧ ರಾಜ್ಯ ಕೊಟ್ಟಾನೊ ಬರದಾ
ಮದುವೆ ಮಾಡುವೆ ಮುಹೂರ್ತ ತಗದಾ
ಸರೂ ಕೂಡಿಸ್ಯಾರೊ ಸಂಭ್ರಮಯೆಲ್ಲಾ ||
ಏರು || ಕೂಡಿ ಬೀಗ ಬಿಜ್ಜರಾ ಹಾಕ್ಯಾರೋ ಹಂದರಾ
ಮುಖದ್ದರ ಬಹಾದ್ದೂರ ತಂದ ಮೌಲಾನ ಶಿರಾ
ಸುತ್ತ ಚೌಪೀರ ಜೈಜೈಕಾರ ಇತ್ತಿಡರಿ ನಿಮ್ಮ ಚಿತ್ತ
ಮದೀನಕ ಬಂತ ಆದಮನ ಕುದುರಿ ಮೈತುಂಬ ರಕ್ತ ಮುಣಗಿತ್ತ
ಮಸೂತಿ ಮುಂದೆ ನಿಂತಿತ ಕಾಲ ಕೆದರಿ
ಕಣ್ಣೀಲೆ ಹರೂತಿದ್ದು ನೀರ ಕೇಳಿ ಮಜಕೂರ
ಆದ್ರ ಗಾಬರಿ ಮಂದಿಯೆಲ್ಲಾ ಹೆದರಿ | ಮೌಲಾಲಿಗೆ ಹತ್ತಿತೊ ಸುತ್ತಿ
ಮನಬಲ್ಲಾಂಗ ಮೈತುಂಬಾಗುದ್ದಿ | ಮುಖದ್ದರಗ ಮಾಡುವೆ ಮುದ್ದಿ || ೭ ||

ಹೊಂಟಾರೋ ತಡ ಮಾಡಲಿಲ್ಲ | ಹೊಕ್ಕಾರೊ ಕಿಲ್ಲೇದವೊಳಗ
ಲಗ್ನದ ಮಂಟಪದಾಗ ಸಾಗಿ ಹೋಗಿ ಹೊಡದಾರೋ ಗುಡಗ
ಇದು ಏನ ನಡಸಿರಿ ತಗಲಾ
ಏರು || ಮುಖದ್ವರ ಅಂಬಾವಾ ಎಲ್ಲಿರತಾನೋ ಅಂದಾ
ನನ್ನ ತಲಿ ತರಾಂವಾ ಇಲ್ಲ ಜಗದಾಗ ಯಾಂವಾ
ಚಿತ್ತ ಪ್ರಸಂಗ ನಡಿದೀತೊ ಜಂಗ
ಹಾರಿ ಬಂದಾಂವಗ ತೂರಿ ಒಗೂತಿದ್ರೋ | ಯಾರೂ ಇಲ್ಲ ದರಕಾರಾ
ನೋಡಿ ಮುಖದ್ದರ ಓಡಿ ಹೋದನೋ |
ಕಿಲ್ಲೇದ ಸೈನ್ಯಯೆಲ್ಲಾ ಅಳದ ಬಿಟ್ಟಾನೋ
ಉಳಿದವರು ಇಲ್ಲ ಯಾರ‍್ಯಾರು
ಹಮ್ಮು ಬಿಟ್ಟಾರೋ ಕಲ್ಮ ಓದ್ಯಾರೊ | ಜಲ್ಮ ಆತೋ ಉದ್ದಾರಾ
ಕಂದೂರ ಕಿಲ್ಲೇದ ಕತಿ ಹೇಳಿದರ ಬಾಳೈತಿ | ಇಲ್ಲಿಗೆ ಮಾಡೇನಿ ಮುಕ್ತಿ || ೮ ||

ಬಾಗಲಕೋಟಿ ಜಾಗಾ | ಪೀರ ದಸ್ತಗೀರನ ದರಗಾ
ಜಾಗ ನೋಡಿ ಹೊಡದಾರೊ ಪಾಗಾ
ಹಸ್ತ ಇಟ್ರೋ ನಮ್ಮ ತಲಿಮ್ಯಾಲಾ ||
ಏರು || ಕರುಣುಳ್ಳ ಕೇಸುಪೀರಾ | ನಮಗೈತಿ ಆಸರಾ
ನಾಗೂ ಗೌಸು ಶಾಹೀರಾ | ದೇಶಕ್ಕ ಜಾಹೀರಾ
ಲಚಮನಸಿಂಗ ವಸ್ತಾದಂದ್ರೋ ಹೀಂಗ
ಖಾಸ ಕವಿ ಅಡಿಪ್ರಾಸ ಕಡಿತನಾ | ಸೋಸಿದಾಂಗ ಬಂಗಾರಾ
ಹಗರ ಪದಾ ಹಾಡಿ ನಿಗರಬ್ಯಾಡೋ ಒಗರು ಉಳುದೆಲ್ಲಾ ಜರಾ
ಇಂಥ ಪದಾ ಮಾಡೆ ಶಾಂತಗುಣ ಇಡೊ ಅಂತೇನಿ ಆಗ ಕವಿಗಾರಾ

ಸುಮಕ ನಿನ್ನ ದಿಮಾಕ | ಬಹಳ ಏರಿಸ್ತಿದೋ ಮುಂಗೈ ತೋಳಾ
ಪದದವೊಳಗ ಏನಿಲ್ಲಾ ಹುರುಳಾ | ನೀವು ಹೇಳರಿ ಹೌದೇನಿಲ್ಲಾ || ೯ ||

* * *

## ೫. ತನ್ನನ್ನು ಮಾರಿಕೊಂಡು ಸಹಾಯ ನೀಡಿದ ಮೌಲಾಲಿ

ಅಲಲೆ ಬಪ್ಪರೆ ಮೌಲಾ ಪುಂಡ ಪೈಲ್ವಾನಾ
ಬಂದ ಬಡಜನಕ ಕಂಡ ಮಾಡ್ಯಾರು ದಾನಾ || ಶ್ಲೋಕ ||

ಏರು || ಶಾಸ್ತ್ರರಕ ಸರಿಯಾಗಿ ನಾ ತಿಳಿಸುವೆ ಖುಲ್ಲಾ
ಬಂದಾನೊಬ್ಬ ಕಂಗಾಲಾ ಮಾಡ್ಯಾನೋ ಸವ್ವಾಲಾ
ಚ್ಯಾಲ || ಕೇಳರಿ ಅಲಿಮೌಲಾ | ನನಗ ಒಂದು ನೂರ ಹೊನ್ನಾ ಕೊಡಬೇಕರಿ ಆಕ್ಷಣಾ
ಇ || ಕೇಳಿ ಸುದ್ಧಿ ಬಂದೇನಿ ನಿನ್ನ ಬಿಟ್ಟ ಪಟ್ಟಣಾ | ಅಂತ ಹಿಡಿದಾನೋ ಚರಣಾ
ಮಗನ ಮದವಿ ಮಾಡೇನಂದರ ಇಲ್ಲರಿ ಅಸನಾ | ನಾ ಮಾಡಲಿನ್ನೇನಾ
ಏರು || ಕೇಳಿ ಅಲಿ ಮೌಲಾ ಅಂತಾರೋಖುಲ್ಲಾ
ಚ್ಯಾಲ || ಹಂತೇಲಿ ಏನು ಇಲ್ಲಾ | ನಿಂತಾರ ಪ್ಯಾಟ್ಯಾಗ ಮಾರನಡಿ ನನ್ನಾ || ೧ ||

ಇ || ಬಿಗಿದು ರಟ್ಟಿಗೆ ಕಟ್ಯಾನೋ ಹಗ್ಗಾ ಹಿಗ್ಗಿ ಸಂಪೂರಣಾ
ಹಿಡಕೊಂಡ ಕಂಗಾಲಾ ಮೌಲಾಗ ನಡದಾನೋ ಆಕ್ಷಣಾ || ಪಲ್ಲ ||

ಏರು || ಗಬರೆಂಬುವ ಶಹರ ಇತ್ತರಿ ಒಳೇ ಬಾರ
ಮರತೇಕ ಜಾಹೀರಾ ಅರಸನಿದ್ದಾನೊ ಬಾದ್ದೂರಾ
ಚ್ಯಾಲ || ಆತನ ಪ್ಯಾಟಿ ಪಟ್ಟಣದೊಳಗ
ಹೋಗಿ ಮುಟ್ಯಾರೋ ಜನರೆಲ್ಲಾ ಕಂಡಾರೋ
ಇ || ನೋಡಿ ರೂಪ ಹೈತ ಆಗೂರೊ ಕುಂತ ನಿಂತವರೋ ||
ಮನದಲ್ಲಿ ಮರುಗುವರೊ ಅಷ್ಟರೊಳಗ ಅರಸ ಪರದಾನಿ ಕೂಡಿ ಇಬ್ಬರೋ
ಏರು || ಜತ್ತಾಗಿ ಬಂದಾರೋ ಕಂಡಾರ ಮೌಲಾಗ ಕೇಳತಾರ ಅಂವಗ
ಕಿಮ್ಮತ್ತ ಹೇಳೋ ತಂದಿ ಪ್ಯಾಟ್ಯಾಗ ಮಿಕ್ಕಿ ಪೈಲ್ವಾನ
ಚ್ಯಾಲ || ಚಿತ್ತ ಇಟ್ಟ ಕೇಳರಿ ದೊರಿ ಖರೇ ವಚನ
ಎಣಿಸಿಕೊಟ್ಟರ ಕೊಡತೇನಿ ಒಂದು ನೂರು ಹೊನ್ನಾ || ೨ ||

ಏರು || ಹೇಳಿ ಅರಸ ಹೀಂಗಂದ ಮನಸಾಗೈತಿ ನಂದಾ
ತಗೋ ಕೊಡತೇನಿ ಸುದ್ದಾ ಇಟ್ಟಾನೋ ಅವನ ಮುಂದಾ
ಒಂದು ನೂರು ಹೊನ್ನ ತಗೊಂಡು ಮಾರಾಟ ಮಾಡ್ಯಾನ ಪ್ಯಾಟ್ಯಾಗ ಆಕ್ಷಣಕ ಮೌಲಾಗ
ಚ್ಯಾಲ || ಕೊಟ್ಟಾನೊ ತಗದ ಹೊಂಟದಾರಿ ಹಿಡಿದಾನೋ ಬ್ಯಾಗ
ಕುಶಿಯಾಗಿ ಮನದಾಗ ಅರಸನ ಸಂಗತೀಲೆ ಮೌಲಾಗ

ನೆನೆದಾನೋ ಆಗ ನೆನಸೂತ ಸಾಂಬಗ
ಇ || ಪುಣ್ಯೆ ಪ್ರಭೂಲಾ ಮರತೇಕ ಮಿಗಿಲಾ
ಅನಸ್ಯಾರೊ ಮೌಲಾ ತಿಳಿಸುವೆ ಖುಲ್ಲಾ ಕೇಳರಿ ಜಾಣಾ || ೩ ||

ಏರು || ಮೌಲಾ ಎಂಬುದು ಅರಸಗ ಗೊತ್ತಯಿಲ್ಲ ಇಲ್ಲರಿ ಏನೇನ
ಕುಂತ ಪಟ್ಟದ ಮ್ಯಾಲೆ ಅರಸ ತಗದಾನ ಕಲ್ಪನಾ || ಪಲ್ಲವಿ ||

ಕರಸ್ಯಾನೊ ಮೌಲಾಗ ತಿಳಿಸ್ಯಾನರಿ ಬ್ಯಾಗ
ನಮ್ಮ ಊರ ಸೀಮ್ಯಾಗ ಏನ ಹೇಳಲಿ ಈಗ
ದೊಡ್ಡ ಸರಪ ಐತಿ ಅಂಜಿಕಿ ರೇತರ ಜೀವಕ್ಕೆ | ಹೋಗಿ ಹೊಡಿಬೇಕ ಅದಕ್ಕ
ಏರು || ಕೇಳಿ ಪುಂಡ ಮೌಲಾ ಹೊಂಟಾ | ಅಡವಿ ಆರ್ಯಾಣಕ
ಚಿಕ್ಕೊಂತ ಅಲಕ್ಕ ಮೆಲ್ಲಕ | ಹೋಗಿ ಕಂಡ ಸರ್ಪ ಹೊಡೆದಾಕ್ಷಣಕ
ಮಾಡ್ಯಾರ ಮೂರ ತುಣಕ
ಚ್ಯಾಲ || ಕುಂತ ಅರಸ ಅಂದಾ | ಮಾಡಿದೆ ಮೂರ ತುಂಡಾ
ನಮ್ಮ ದಂಡಿನವೊಳಗ ಇಂವಾ ಪುಂಡ ಪೈಲ್ವಾನಾ || ೪ ||

ಇ || ಅರಸನ ಮನಸಾ ಆಗಿ ಹರುಷಾ | ಮತ್ತ ಮೌಲಾಗ ಅಂತಾನ
ಇನ್ನ ಒಂದ ಮಾತ ನಿಮಗ ತಿಳಿಸುವೆ ಸೂಚನಾ ||
ಏರು || ಇನ್ನ ತಿಳಿಸುವೆ ಗುರುತ ಇಡಬೇಕರಿ ಚಿತ್ತ
ಕೆರಿವೊಡ್ಡು ಒಳೆ ಶಿಸ್ತ | ಹಾಕಬೇಕೋ ಸುತ್ತ ಮುತ್ತ
ನೀರ ಮುಕ್ಕ ಕುಡಿಯಲಿಕ್ಕೆ ಇರೂದಿಲ್ಲ ಜನಕ್ಕ
ಇಷ್ಟು ಕೇಳಿದಾಕ್ಷಣಕ ಕಟ್ಟಿ ನಡಾ ಸಿಟ್ಟೀಲೆ ಹೊಂಟಾ
ಹೋಗ್ಯಾರಾರ್ಯಾಣಕ ಎತ್ತಿ ತಂದಾರೋ ಗುಡ್ಡಕ
ಒಡ್ಡ ಸುತ್ತ ಮುತ್ತ ಹಾಕ್ಯಾರೋ
ಕೆರಿ ಎಡಬಲಕ | ನೀರ ನಿಂದರುವದುಸಕ
ಚ್ಯಾಲ || ಮಾಡಿ ಒಳ್ಳೆ ಶಿಸ್ತಾ | ಮೌಲಾ ಅಲಿ ಸ್ವಂತಾ ||
ಹತಿಯಾರ ಸಂಗತೀಲೆ ಹಿಡುವರು ನೇಮ ಬಾಕ ಸಂಗೀನ || ೫ ||

ಇ || ಮತ್ತ ಮೌಲಾಗ ಕರೆಸಿ ಅರಸ ತಿಳಿಸ್ಯಾನೋ ಸ್ವಾನಾ
ಪುಂಡ ಮನಗಂಡ ಇದವೊಂದ ಮಾತ ಕೇಳಬೇಕೋ ನೀನಾ
ಏರು || ನಾ ಇಟ್ಟೇನಿ ಪಂಥಾ ಅಲಿ ಮೌಲಾಗ ತುರತಾ
ತರಬೇಕೋ ಹಿಡಿ ಗುರುತ ಈ ಕೆಲಸ ನಿನ ಹೊರತ |
ಆಗೂದಿಲ್ಲ ಯಾರ ಕಡಿಂದ
ಹೋಗಬೇಕೋ ನೀನ | ಹಿಡಿದು ತರಬೇಕೋ ಅವನ
ಅಂದರ ನಿನಗ ರಾಜ್ಯದಾ ಸಂಪೂರಣಾ ನಾ ಕೊಡುವೆನು ಇನ್ನಾ
ಚ್ಯಾಲ || ಕೇಳಿ ಪ್ರಭೂಲಾ ಅಂತಾರೋ ಖುಲ್ಲಾ
ನಾನೇ ಮೌಲಾ ಅಂತ ಜಿಗದ ನಿಂತ ಹಿಡಿಬಾ ನೀನನ್ನ || ೬ ||

ಇ || ಸಿಟ್ಟೇಲಿ ಅರಸ ದಿಟ್ಟಿಸಿ ನೋಡಿ ಹೌರಿ ಹೌಸಾಣಾ
ದಂಡ ತಗೊಂಡು ಮಾಡ್ಯಾನೋ ಜಂಗ
ನಡದೈತೋ ಧುಮಸ್ಯಾನೋ ||
ಏರು || ಮೌಲಾ ಅಲಿ ಪುಂಡ ಕಂಡ ಗಂಡ ಮನಗಂಡ
ಮಿಕ್ಕಿ ಕೊಯ್ದಾರೊ ರುಂಡ ಬಿದ್ದಾವರಿ ಚಂಡ
ಕಂಡ ಗಬರು ಅರಸ ಬಂದ ಅಲ್ಲಿಗೆ ಓಡಿ ಅಂತಾನೋ ಕೈಜೋಡಿ
ಬೇಡಿಕೊಂಬುವೆ ಕೇಳರಿ ಚಿತ್ತಿಟ್ಟ ನನಕಡಿ ಸ್ವಲ್ಪರ ದಯಮಾಡಿ
ಇಷ್ಟ ಈ ಅಹಂಕಾರ ಹಾದಿ
ಚ್ಯಾಲ || ಆದೆ ನಾ ಖೋಡಿ ಈ ತಪ್ಪ ನನಕಡಿ
ಉಳದ ಮಂದಿಯೆಲ್ಲಾ ಕೇಳರಿ ಮೌಲಾ
ಬಾಗಿ ಶಿರಾ ನಾವು ಆಗುವೆ ಕೂಡಿ ಇಂದ ಮುಸಲಮೀನ || ೭ ||

ಇ || ಕೇಳಿ ಮೌಲಾ ಓದಸ್ಯಾರೋ ಕಲ್ಮಾ ಅವರಿಗೆ ಆಕ್ಷಣಾ
ಲೆಕ್ಕ ಇಲ್ಲದ ಮಂದಿ ಮುಸಲ್ಮಾನ ಆಗ್ಯಾರೋ ಆ ದಿನಾ ||
ಏರು || ಶಾರ ಬಾಗಲಕೋಟಿ ಒಳ್ಳೆ ಮೋಜಿನ ಪ್ಯಾಟಿ
ತಿಳಿ ಶಾಯಿರ ಎಟ್ಟಿ | ಕಳಿಸುವೆ ಕುಂಡಿ ಸುಟ್ಟಿ
ಬಿಟ್ಟ ಪಡಾ ಓಡಿ ಹ್ವಾದಿಯೋ
ತಿಳಿ ನಿನ್ನ ಮನಕ ಜಾಹೀರ ಮರತೇಕ
ಇರತಾರೋ ಪೀರ ಮಲ್ಲೆಯಕಲ್ಲಾ ಹೊಂದಿ ಪಾದಕ್ಕ
ಗಂಧ ಏರಿಸಬೇಕು ಅಂತಾರೋ ಹುಸೇನಮಿಯ್ಯಾನ ಕವಿ
ಮಾಡಿ ಬಹು ತೊಡಕ ಮುರದಾಂಗ ವೈರಿ ಸೊಕ್ಕ
ಚ್ಯಾಲ || ಮಾಡಬ್ಯಾಡೋ ಡೌಲಾ | ಕಳಕೊಂಡಿ ರುಂಬಾಲಾ
ಹತ್ತೇನಿ ಬೆನ್ನಾ ಇಂದಿಗೆ ನಿಮಗ ಒಯೋ ಮನಿತನಾ || ೮ ||

* * *

## ೬. 'ಬೀಬಿ ಫಾತಿಮಾ ಅವರ ಪ್ರೇಮ ಯಾವ ಮಗನ ಮೇಲೆ ಹೆಚ್ಚು' ಎನ್ನುವ ಪದಾ

ಜನ ದಂಗ ಆದಿರಿ ಒಂದ ಪರಸಂಗಂತೇನಿ ಭಿನ್ನಮೌಲಾ || ಪಲ್ಲ ||

ಹಸೇನ ಹುಸೇನ ಸಾಹೇಬ ಮೌಲಾನ ಪುತ್ತರಾ
ಖಾಸಾ ಅಣ್ಣ-ತಮ್ಮರಾ | ಇಬ್ಬರು ಮಾಡ್ಯಾರ ತಕರಾರಾ
ವಿದ್ಯೇಕ ಗನ್ನಾ ಹುಡುಗರಾ | ಕೇಳರಿ ರಂಗಲಾಲಾ
ಅಲಿ ಮೌಲಾನ ಹೊಟ್ಟೀಲಿ ಹುಟ್ಟಶ್ಯಾನ ಎರಡು ಕಮಲಾ || ಪಲ್ಲ ||

ಏರು || ಜೋಡಿಲಿ ಮರ್ತ್ಯದಾಗ ಜೀಂವಾ ಹೆಚ್ಚಿನ ರತನಾ
ಫಾತಿಮಾ ಮಾಡ್ಯಾಳೋ ಜೋಪಾನಾ | ಆರೇಳು ವರ್ಷ ದಿನಾ
ಜಾಗ್ರತದಿಂದಲೆ ಜೋಪಾನ ಮಾಡ್ಯಾಳ | ಕುಡಿಸಿ ಮಲಿಹಾಲಾ || ೧ ||

ಇ || ತನ್ನ ಮಕ್ಕಳಾಡುದು ನೋಡಿ ತಾಯಿ ಆಗ್ಯಾಳೋ ಕುಶಿಯಾಲಾ
ಮೌಲಾನ ಮುಂದ ಹೇಳತಾಳ ಬೀಬಿ ಫಾತಿಮಾ
ಇನ್ನ ದೈವ ತೆರಿತ್ರಿ ನಿಮ್ಮಾ ಆಡೂದು ನೋಡಿರಿ ರತನಾ
ಸಾಲಿ ಹಾಕಿ ಬಿಡರಿ ಸುಮ್ನ ಕಲಿಲಿ ವಿದ್ಯೆ ಎಲ್ಲಾ || ಪಲ್ಲಾ ||
ಏರು || ಹಸನ ಹುಸೇನ ಸಾಹೇಬ ಕರಕೊಂಡು ಹೋದಾರೊ ಅಲಿಮೌಲಾ
ಸಾಲಿಗೆ ಹಾಕಿ ಬಂದಾರಲ್ಲಾ ವಿದ್ಯೆ ಕಲಿಯಾಕ
ನಬಿಸಾಹೇಬರ್ಥಂತೇಕ ಅರೆಬ್ಬಿ ಕುರಾನ ಓದುದಕ
ಪಾಠ ಹೇಳ್ಕೋರೊ ದಿನ ದಿನಕ ನಬಿ ರಸೂಲಿಲ್ಲಾ || ೨ ||

ಇ || ಚಿಕ್ಕ ಹುಡುಗರು ಮಿಕ್ಕಿ ವಿದ್ಯೆ ಕಲಿತ ಬುದ್ದಿಗೆ ಬೆಲಿಯಿಲ್ಲಾ |
ಒಂದಾನ ಒಂದ ದಿನ ಅಣ್ಣ ತಮ್ಮರು ಬ್ಯಾಗ
ಸಾಲಿ ಬಿಟ್ಟು ಬರುವಾಗ ಕದನ ತಗದಾರೋ ಹಾದ್ಯಾಗ
ಹುಸೇನ ಸಾಹೇಬ ಅಂತಾನಣ್ಣ ತಗದಿ ಹೆಚ್ಚಿನ ಅಕಲಾ
ನಮ್ಮ ತಾಯಿ ಫಾತಿಮಾ ಪ್ರೀತಿ ಆದಾಳು ಯಾರ ಮ್ಯಾಲಾ || ೩ ||

ಇ || ನನ್ನ ಮ್ಯಾಲೆ ನಿನ್ನ ಮ್ಯಾಲೆ ಹೋಗಿ ನೋಡೂಣು
ಪರೀಕ್ಷೆ ಮಾಡೂಣು | ಮುಂದ ನಡಿಯೋ ಅಣ್ಣಾ ನೀನಾ
ನಾನು ಬರುವೆ ಬೆನ್ನ ಹತ್ತಿ ನಿನ್ನ ಹಿಂಬಾಲಾ || ಪಲ್ಲ ||

ಏರು || ಹುಸೇನ ಸಾಹೇಬನ ಮಾತಿಗೆ ಹಸನ ಸಾಹೇಬ ಆಗಿ ಕಬೂಲಾ
ಅಣ್ಣನ ಬೆನ್ನ ಹತ್ತಿ ತಮ್ಮನು ಬಂದಾನ ಆಗ
ಫಾತಿಮಾ ಇದ್ದಾರೋ ಮನಿಯಾಗ | ಎತ್ತಿಕೊಂಡಾರೊ ಬಗಲಾಗ
ಪ್ರೀತಿ ಮಾಡ್ಯಾರೋ ಹಿರೇಮಗ್ಗ ಚುಂಬಿಗಲ್ಲದ ಮ್ಯಾಲಾ
ಪ್ರೀತಿ ಮಾಡೂದು ಕಣ್ಣತುಂಬಿ ನೋಡಿ ಹುಸನೈನ ಸಣ್ಣ ಬಾಲಾ || ೪ ||

ಇ || ತಾಯಿಗೆ ಅಂತಾನ ಬಾಳ ಬಾಯಿಲೆ ಸಿಟ್ಟೆಗೇರಿ
ಸತ್ತರ ನೋಡಾಕಿಲ್ಲ ಮಾರಿ | ಫಾತಿಮಾ ತಗೋ ಕಡಿ ಮುಜರಿ
ಇಂದಿಗೆ ಆದೆ ನಾನಿನ್ನ ವೈರಿ | ಬೀಳತೇನಿ ಕಾಲಾ || ಪಲ್ಲ ||

ಏರು || ತಮ್ಮ ತಾಯಿ ಸಂಗಾಟಾ ಮಾಡಿ ಮನಸಾ ಹುಸನೈನ ರಣಧೂಲಾ
ಸಿಟ್ಟೀಲೆ ಹೊಂಟಾನೋ ಬಾಳ ತಿಳಿದ ತಾಯಿ ಮಹಿಮೆ
ದಾಟ್ಯಾನೋ ಮಕ್ಕಾ ಮದೀನಾ ಸೀಮಿ | ತೋರಸೂಕ ತನ್ನ ಪರಾಕ್ರಮಿ
ನಡಗತಿತ್ತ ಗಡ ಗಡ ಭೂಮಿ | ಒದರತಿತ್ತ ಮುಗಲಾ || ೫ ||

ಇ || ಸಂಗ ಯಾರು ಇಲ್ಲದೆ ರಂಗ ತುಂಬಿ ಆಗಿ ಅಡವಿಪಾಲಾ ||
ಕುಂತಾನೋ ಹುಸೇನಸಾಹೇಬ ಮಾಡೂತ ಶಿವನಲೀಲಾ
ಮೂರುದಿನಾ ಮುಕ್ಕನೀರ ಕುಡಿಯಲಿಲ್ಲಾ | ಎಳ್ಳಷ್ಟು ಬಿದ್ದಿದಿಲ್ರಿ ಬಿಸಲಾ |
ಬಿದ್ದೀತು ಕಾಣದಾಂಗ ಕತ್ತಲಾ | ಅವತ್ತೇನು ಸುಳ್ಳಲ್ಲಾ ||
ಎಲ್ಲಾ ಆಕಾಶಕ ಹೋಗಿ ಪ್ರಕಾಶ ಭೂಮಿಗೆ ಕಳದ ಗೌದಿತೋ ಕತ್ತಲಾ ||
ಏರು || ಯಾವೆಲ್ಲೊ ಅಡಗ್ಯಾನೋ ಹೋಗಿ ಹೇಳೋ ಸೂರ್ಯನ ಕಿರಣಾ
ಬಲ್ಲಾಂವಾ ಶಾಸ್ತ್ರರಾ ಓದಾಂವಾ | ಹೇಳಿದರ ಹೌದಂತ ತರಬ್ಯಾನಾ
ಇಲ್ಲೀಕಂದರ ಬಿಟ್ಟಿಕ್ವಾಣಾ ಅಂತಾರೋ ಜನರೆಲ್ಲಾ
ಹೀಂಗಾತೋ ಶಿವನ ಮಹಿಮೆ | ಬಂದಾರೋ ಜುಬರಾಹಿಲಾ || ೬ ||

ಇ || ಸಾರಿ ಫಾತಿಮಾಗ ನಿನ್ನ ಜೀವದ ಕಮಲಾ
ಆಗಿ ಕುಂತಾನ ಅಡವಿ ಪಾಲಾ | ರಂಬಿಸಿ ಕರಕೊಂಡ ಬಾರೋ ಮೌಲಾ ||
ಇಲ್ಲೀಕಂದರ ಮೂರುಮಂಡಲ ಆದೀತೋ ಗಾಲಮೇಲಾ || ಪಲ್ಲ ||

ಏರು || ಇಷ್ಟ ಮಾತ ಕೇಳಿ ಎದಿಎದಿ ಬಡಕೊಂಡ್ರೋ ಮೌಲಾ ||
ಅಳತಾರೋ ಬೀಬಿ ಫಾತಿಮಾ ಧರಣಿಗೆ ಹೊರಳಾಡಿ
ಹೊಂಟಾರೋ ಮೌಲಾ ಲಗುಮಾಡಿ |
ಕರಕೊಂಡ ನಬಿಸಾಹೇಬರ ಜೋಡಿ |
ಜೀವದ ಕಬರು ಇಲ್ಲದ ಓಡಿ ಇಬ್ಬರೂ ಬರಿಗಾಲಾ || ೭ ||

ಇ || ಹೋಗಿ ನಾನಾ ತರದಿಂದ ಕರಿತಾರೋ ಹುಸನ್ಯೆನಾ ಬರವೊಲ್ಲಾ
ಬಗಲಾದ ಎತ್ತಿಕೊಂಡಾರೋ ಮುತ್ಯಾರಸೂಲಿಲ್ಲಾ
ಮದೀನಕ ಬಂದ ತೆರಿತ್ರಿ ಬಿಸಿಲಾ | ಅಂತಾರ ಪೀರ ಮಲ್ಲೇಕಲ್ಲಾ
ಏರು || ನಿಂತಾರ ಹುಸೇನ ಮಿಯಾ ಇದರಿಗೆ ವೈರಿ ಎದಿಯ ಮೇಲಾ
ಜನದಂಗ ಆದಿರಿ ಒಂದ ಪರಸಂಗಂತೇನಿ ಭಿನ್ನ ಮೌಲಾ || ೮ ||

***

## ೭. ಹಸೇನ ಹುಸೇನರ ಆಟದ ಪದಾ

ನಾಶರಿಸುರಿ ದೈವಕ ತಿಳಿಸುವೆ ಸಾರಿ
ಕುಂತ ಧ್ಯಾನಕ ನೀವು ಅಂತೀರಿ || ಪಲ್ಲ ||

ಶರಣ ನಬಿಸಾಬ ಧ್ಯಾನ ಸಾಂಬಂದು ಮಾಡಿಕುಂತಾರೋ ಒಂದಿನಾ |
ಒಬ್ಬ ಬ್ಯಾಟಿಗಾರ ಬಂದ ಚಿಗರಿ ತಂದಾ ಆಂವಾ ಆದಿನಾ |
ಅಂತಾನವ ಶರಣರ ಮುಂದ | ಅರಜ ಐತಿ ಕೇಳರಿ ನಂದಾ
ನಿಮ್ಮದಸಿಂದ ಚಿಗರಿ ಮರಿ | ನಾಶರಿಸುರಿ ದೈವಕ ತಿಳಿಸುವೆ ಸಾರಿ || ೧ ||

ಆ ಶರಣ ಕರುಣಾಯಿಟ್ರೋ ಚಿಗರಿ ಮ್ಯಾಲೆ ಭಾರಿ
ಅಂತಾರ ನಬಿಸಾಬಗ ಬರ್ರಿ ||
ಚಿಗರಿ ಆಗ ಅವರ ಕೈಯಾಗ ಕೊಟ್ಟಾರ ಬ್ಯಾಗ | ನಬಿಸಾಬ ಶರಣಾ
ಏನಚಂದ ಚಿಗರಿ | ಇಂದ ಮುತ್ಯಾ ತಂದ ಕೊಟ್ಟಿರಿ ನೀವು ನನ್ನ
ಖುಷಿ ಆಗಿ ಮನಸಿನೊಳಗ | ಹಸನಸಾಬರು ಆಡುರೊ ಹೊರಗ
ಬೆನ್ನಿಂದ ಬರುತಿತ್ತೊ ಹಾರಿ ಹಾರಿ |
ನಾಶರಿಸುರಿ ದೈವಕ ತಿಳಿಸುವೆ ಸಾರಿ || ೧ ||

ಹುಸನೈನ ಶರಣಾ | ಕೇಳತಾರ ಅಣ್ಣನ ಪರಿಪರಿ
ನಿಮಗ್ಯಾರ ಕೊಟ್ಟಾರ ಚಿಗರಿ ಮರಿ
ಏರು || ಚಲ್ಲಾಟ ಚಿಗರಿ ಮರಿಯಾಟ ನೋಡಿ | ಸಿಟ್ಟಬಂದೀತ ಆವಾಗ
ಹಿರೇ ಅಣ್ಣಗಂತಾರ ನನಗ | ಕೊಡರಿ ನಾನು ಆಡುವೆ ಈಗ
ಹಸನಸಾಬರು ಅಂದ್ರೋ ಹುಸನೈನಾ | ಕೊಡೋದಿಲ್ಲ ಚಿಗರಿ ನಾನಾ
ಕೇಳಿಬಂದೀತ ಸಿಟ್ಟಿಬಾರಿ | ಸಾಶರಿಸುರಿ ದೈವಕ ತಿಳಿಸುವೆ ಸಾರಿ || ೩ ||

ಸಂತಾಪ ಕೋಪ ಬಂತ ಹುಸೇನಸಾಬಗ ಬಾರಿ
ಅಳವೂತ ಹೊಂಟಾರ ಚೇರಿ ಚೇರಿ ||
ಏರು || ಸಿಟ್ಟಿಲಿಂದ ಮುತ್ಯಾಗಂದ ಚಿಗರಿ ಕೊಡರಿ ತಂದ ನಮಗಿನ್ನಾ
ಅಣ್ಣಗ ಕೊಟ್ಟಿರಿ ಹ್ಯಾಂಗಾದರೂ ಬಿಡೂದಿಲ್ಲ ನಾನು ನಿಮ್ಮನ್ನಾ
ನಬಿಸಾಬರು ಅಂದ್ರೋ ಹುಸನೈನಾ | ಮತ್ತೊಮ್ಮಿಗೆ ಕೊಡತೇನಿ ನಿನಗಿನ್ನಾ
ಎತ್ತುವೆ ಬಗಲಾಗ ಬರ್ರಿ | ನಾಶರಿ ಸುರಿ ದೈವಕ್ಕ ತಿಳಿಸುವೆ ಸಾರಿ || ೪ ||

ಇಲ್ಲ ಚೈನಾ ಹುಸನೈನಾ | ದುಃಖಿಸಿ ಅಳತಾರ ಬಾರಿ
ಕೇಳಿ ಸಾಂಬಗ ಬಂತ ಬಿರಿ
ಏರು || ಬಿಕ್ಕಟ್ಟ ಸಾಂಬನ ಆಟ | ಇದು ಎಳ್ಳಷ್ಟು ತಿಳಿಯದು ಯಾರಿಗೇನಾ
ಶ್ರೇಷ್ಠ ಸಂಬಾ ಇಟ್ಟ ಮಾಯಾ ತೊಟ್ಟ ಹುಕುಮಾ ಚಿಗರಿಗೆ ನಾ
ಅಳತಾರ ಹುಸನೈನಾ ಕೊಟ್ಟಬಾರ ನೀ ಕೂಸಿಗಿನ್ನಾ
ಕೇಳಿ ಹೊಂಟಿತೋ ಬಿರಿಬಿರಿ
ನಾಶರಿ ಸುರಿ ದೈವಕ ತಿಳಿಸುವೆ ಸಾರಿ || ೫ ||

ತನ್ನ ಕಂದನ ತಂದಾ | ನಿಂತಿತ ಆವಾಗ ಚಿಗರಿ
ಬಾಳ ಮನದಲ್ಲೇ ಉಮೇದ್ವಾರಿ |
ಏರು || ಆ ಚಿಗರಿ ಅಂತೈತಿ ಒದರಿಕೇಳರಿ | ಸದರಿಗೊಪ್ಪುವ ಶರಣಾ
ಶಿವನಿಂದ ಹುಕುಮಾತ ಇಂದ | ನಾನು ನಿಮಗಿನ್ನಾ
ನಬಿಸಾಬರು ಅಂದ್ರೊ ಹುಸನೈನಾ | ಶಿವಾ ಚಿಗರಿ ಕಳಿಸ್ಯಾರೊ ನಿನಗಿನ್ನಾ
ಬಿಡಲಿಲ್ಲ ಹಟಾ ನಿಮ್ಮದು ಬಾರಿ ||
ನಾಶರಿ ಸುರಿ ದೈವಕ ತಿಳಿಸುವೆ ಸರಿ || ೬ ||

ಆ ಬಾಲಾ ಕುಷಿಯಾಲಾ ಆದ ಹುಸೇನಸಾಬ ದೊರಿ
ತಗೊಂಡು ನಡದಾರೋ ಚಿಗರಿ ಮರಿ |
ಏರು || ಖುಷಿಯಿಂದ ಅಣ್ಣನ ಮುಂದ
ಚಿಗರಿ ತಂದ ತೋರಸ್ಯಾರ ನೋಡರಿ
ಇಬ್ಬರು ಕೂಡಿ ಆಡುವರೋ ಜೊಡಿ | ಹೀಂಗ ಮಾತಾಡಿ ಕತಿ ಆತರಿ
ತಗೋ ಪದಾ ತೋಡಿಗೆ ತೋಡಿ | ಅಲ್ಲಾ ವಾಳಿ ನಮ್ಮ ಜೋಡಿ
ಕುಂಡ್ಯಾಗ ಇಟ್ಟೇನೋ ಕಾಲಮರಿ
ನಾಶರಿ ಸುರಿ ದೈವಕ ತಿಳಿಸುವೆ ಸಾರಿ || ೭ ||

ದಸ್ತಗೀರ ಪೀರನ ಮೇಲೆ ಹಾರಿಸೋ ಚೌರಿ
ಕೇಸುಪೀರನ ದಯಾ ನಮಗ ಭಾರಿ |
ಏರು || ಹಸ್ತಿಟ್ಟ ಮತಿಹೀಂಗ ಕೊಟ್ಟ ಕೇಳರಿಶ್ರೇಷ್ಠ
ನಾಗೂ-ಗೌಸೂನು ಸೇವಾದಲ್ಲಿ ಇರತಾರಲ್ಲಿ ರಾತ್ರಿ ಹಗಲಿ ಮಾಡಿ ವಂದನಾ
ಲಾಲ ಡೋಂಗ್ರಿ ಸಾಂಬನ ಹಿಂಬಾಲಾ
ಜೂಜಾಡಿ ಕಳಕೊಂಡ್ರೋ ರುಮಾಲಾ |
ನಾಚಿಕಿಲ್ಲ ನಿನಗ ನಾರಿ | ನಾಶುರಿಸುರಿ ದೈವಕ ತಿಳಿಸುವೆ ಸಾರಿ || ೮ ||

* * *

## ೮. ಸ್ವರ್ಗದ ಹಣ್ಣು ತಿಂದ ಹಸೇನ ಹುಸೇನರ ಪದಾಕುಂ

ತ ಕೇಳರಿ ಇಟ್ಟ ಕರುಣಾ | ಸರೂದೈವಕ ಶರಣಾ
ಕರುಣಾದಿ ಕರುಣೇಶ್ವರಾ ಅಲಿ ಮೌಲಾಗ ವಲ್ಲತ್ತಾ ||
ಏರು || ಏನು ಹೇಳಲಿ ಮಹಿಮಾ ಹರಿಬ್ರಹ್ಮನ ತಿಳುದಿಲ್ಲಾಂತಾ
ವರ್ಣಿಸಲಾರೆ ತರುಣ ಬಾಲಕ ಶ್ರೀ ಶರಣರನಾ ಸ್ಮರಿಸುವೆ ನಾ
ಹರುಷದಿಂದ ಮಾಡಿ ವಂದನಾ | ಬೀಬಿ ಖಾತೂನಾ
ಪುತ್ರ ಎರಡು ಹಸೇನ ಹುಸೇನಾ || ೧ ||

ಇ || ಅಡ್ಡಾಡುತ್ತ ಕೂಡಿ ಒಂದಿನಾ | ಹೊಂಟ ಹೋಗ್ಯಾರ ರತನಾ
ಚಿಂತ್ಯಾಗಿ ಮನಿವೊಳಗ ತಾಯಿ ಕುಂತಾರ ಅತಗೊಂತ
ಬ್ಯಾಸಗಿ ಬಿಸಿಲ ಮಕ್ಕಳು ಎರಡು ಬರಲಿಲ್ಲ ಅಂತ |
ಆಡಿಕೊಂತ ಹೋದಾವ ಇನ್ನೂವರಿಗಿ ಬಂದಿಲ್ಲ ತಿರುಗಿ
ಇನ್ನೇನ ಗತಿ ಮಾಡಲೆಂತ | ಮನದಲ್ಲೆ ಮರಗಿ | ಯಾರಿಗೆ ಹೇಳಲಿ
ಅಂತಾರ ಕೈವೊಡ್ಡಿ ಮೋಹನಾ | ನೀ ಕಾಯೋ ಭಗವಾನಾ || ೨ ||

ಇ || ಅಷ್ಟರಲ್ಲಿ ಬಂದಾರ ಶರಣಾ | ನೋಡಿ ಮಾರಿಯಾ ಚಿನ್ನಾ
ಅಂತಾರ ಕೇಳವ್ವಾ ಚಿಂತ್ಯಾಗಿ ಕುಂತೇನ ಕಾರಣಾ

ಏರು || ಏನು ಹೇಳಲಿ ಮನೆಯಲ್ಲಿ ಯಾರಿಲ್ಲಾ ಹಸೇನ ಹುಸೇನಾ
ಆಡಿಕೊಂತ ಅಣ್ಣ ತಮ್ಮ ಕೂಡಿ ಹೊಂಟ ಹೋಗ್ಯಾರಲ್ಲಾ |
ಮಿಕ್ಕೇತಿ ಊಟದ ವ್ಯಾಳೆ ಕೇಳರಿ ಬ್ಯಾಸಿಗೆ ಬಿಸಿಲಾ
ಇದ್ದಾರಿ ಎಳೆ ಕಮಲಾ
ನೀರಡಿಸಿ ಪುತ್ರಯನ್ನ ರತನಾ | ಆಗಿದ್ದಾರ ಹೈರಾಣಾ || ೩ ||

ಕೇಳಿ ಇಷ್ಟೆಲ್ಲಾ ಆ ಕ್ಷಣಾ | ನಬಿಸಾಹೇಬ ಶರಣಾ
ಚಿಂತಿಸಬೇಡವ್ವಾ ಅಂತ ಕಣ್ಣೀರ ಸುರಸೂತ ಹೊರಗ
ದುಕ್ಕಮಾಡಿಕೊಂಡ ವತ್ತರದಿಂದ ಹೊಂಟಾರ ಬ್ಯಾಗ
ಈ ವಜ್ರದ ಹರಳ ಎರಡು ನಿವ್ವಳ ಅಂತರ್ಯದಲ್ಲಿ
ಎನ್ನ ಪ್ರೇಮ ಪುತ್ರ ಎಲ್ಲಿ ಇದ್ದಾರಂತ ಹುಡುಕಲಿ
ಕೇಳಿದರೆ ಮೌಲಾ ಅಲಿ ಎಲ್ಲಿವರು ತಮ್ಮ ಮಗ | ನಾ ಮಾಡಲಿನ್ನೇನಾ || ೪ ||

ಇ || ಶರಣರಿಗೆ ಇಲ್ಲದೆ ಚೈನಾ | ಹೊಂಟಾರ ಮೊಮ್ಮಕ್ಕಳ ಧ್ಯಾನಾ
ಹುಡುಕ್ಯಾಡಿಕೊಂತ ಮುಟ್ಯಾರ ಹೋಗಿ ಆರ್ಯಾಣದೊಳಗ
ಏರು || ಶಿವಸಾಂಬನ ದಯಾಕರುಣದಿಂದ ಆಗ ಬ್ಯಾಗ
ಮನಗಂಡ ಕಣ್ಣೀಲೆ ಕಂಡಾರ ನಿಂತಾನ ಪುರುಷ ಒಬ್ಬ
ಹಿಡಿದ ಕೈಯಾಗ ಬಡಗಿ ಆಡ ಕಾಯುತ್ತಿದ್ದ ಕುರುಬ | ಅಂತಾರ ತರಬಿ
ತಿಳಿಸ್ಯಾರ ಸ್ಥಿತಿಗತಿ ತನ್ನಾ | ನಿಮತ ಇದರಿಗೆ ಕರಣಾ || ೫ ||

ಇ || ಕೇಳಿ ಕುರುಬ ಅಂತಾನ ಶರಣಾ ವರ್ಣಿಸಲಾರೆ ನಾನಾ
ಚಿಕ್ಕವಯ ಮಿಕ್ಕೇತಿ ಮೈಬಣ್ಣ ಲಿಂಬಿ ಹಣ್ಣ
ಹೊಳುತಿತ್ತ ಸೂರ್ಯ ಚಂದ್ರನ ಸರಿ ಮಾರಿಯ ಚೆನ್ನ
ಕೂಡಿ ಆಡಿಕೊಂತ ಇಲ್ಲಿಂದ ಹೋಗ್ಯಾರ ಸಾಗಿ
ಇದೇ ದಿಕ್ಕ ಅಂತ ಕುರುಬ ತನ್ನ ತಲೆಬಾಗಿ ಆಂವಾ ಚರಣಕ ಎರಗಿ
ಕೇಳಿ ಸಂತೋಷಾಗಿ ಶರಣಾ | ಶಿಶುಕುಮಾರ ಧುರಿಣಾ || ೬ ||

ಇ || ಅತ್ತಇತ್ತ ಬಾಡಿದ್ದವು ಕಣ್ಣಾ | ಹೊಂಟೋಗ್ಯಾರ ಆ ಕ್ಷಣಾ
ಏರು || ಏನ ಹೇಳಲಿ ಶಿವನ ಮಹಿಮಾ ಯಾರ್‍ಯಾರಿಗೆ ತಿಳೂದಿಲ್ಲಾ
ಪುತ್ರ ಎರಡು ಗಿಡದ ಬುಡಕ ಹೋಗಿ ಮಲಕೊಂಡಿದ್ದಾರಲ್ಲಾ
ಜಿಬರಾಯಿಲ ಬೀಸಣಿಕಿ ಹಿಡಿದ ಕೈಯಲ್ಲಿ ಸೊಂತ
ಹಸೈನ ಹುಸೈನ ಮ್ಯಾಲೆ ಗಾಳಿ ಬೀಸೋರೊ ಕುಂತ
ಕಂಡಾರ ಶರಣರು | ನಿಂತ ಅತಿ ಸಂತೋಷಾಗಿ ಮನಾ
ನೆನಸ್ಯಾರ ಶಿವಶರಣರನಾ || ೭ ||

ಇ || ಧರಣಿ ಪಾಲಕರ ಕರಣಾ | ಇವರ ಮ್ಯಾಲೆ ಸಂಪೂರಣಾ
ಏರು || ಇದ್ದಾಂಗ ಮತ್ತು ಯಾರಿಗಿಲ್ಲಂತ ಮುಂದಕ ಸಾಗಿ

ತನ್ನ ಮೊಮ್ಮಕ್ಕಳಿಗೆ ಹಿಡಿದ ಕೈಯಾ ಎಬಸ್ಯಾರ ಹೋಗಿ | ಅಪ್ಪಿಕೊಂಡಾರ
ಕಂಡ ಮಕ್ಕಳ ಮುತ್ಯಾಗ ನೋಡಿ | ಉಣಸರಿ ಹಸುಬಾಳ ಆಗೇತಿ ಅಂತಾರ ಕೂಡಿ
ಶರಣರು ಯೋಚನೆ ಮಾಡಿ | ಅಂತಾರ ಇಲ್ಲ ಅಡವ್ಯಾಗ ಇಲ್ಲಾ | ದೊರೆಯುವದು ಕಠಿಣಾ || ೮ ||

ಇ || ಅಷ್ಟರಲ್ಲಿ ಚಿಬರೀಲ ಆಕ್ಷಣಾ | ಮತ್ತ ಬಂದಾರ ಪುನಾಃ
ಏರು | | ಅಂತಾರ ನಿಂತ ಶರಣರ ಮುಂದ ತಿಳಿಸ್ಯಾರ ಕುಶಿಯಾಲಾ |
ಶಿವನ ಅಪ್ಪಣಿಯಲಿಂದ | ಸ್ವರ್ಗದ ಹಣ್ಣು ಹಂಪಲಾ
ತಂದೇನಿ ತಿನಸರಿ ಸುಕುಮಾರ ಆಗಲಿ ಶಾಂತ
ಭೂಪ್ರಾಂತದೊಳು ಇವರಷ್ಟು ಮಾಯಾ ಯಾರಿಗಿಲ್ಲಂತಾ
ತಿಳಿಯಿರಿ ಸ್ವಂತ ಸಾಕ್ಷಾಂತ | ಆ ಭಗವಾನ ಕೊಟ್ಟ ಕಳಿಸ್ಯಾನ ನನ್ನಾ || ೯ ||

ಇ || ತಂದಂತಾ ಸ್ವರ್ಗದ ಹಣ್ಣಾ | ಕೊಟ್ಟಾರ ಮೊಮ್ಮಕ್ಕಳನಾ
ಏರು || ಒಳೇ ಪ್ರೀತಿಲಿಂದ ಹಸೇನ ಹುಸೇನ ತಿಂದಾರ ಕುಂತ
ನೀರಡಸಿ ಮುತ್ಯಾಗ ಅಂತಾರ ನೀರ ಕುಡಿಸಬೇಕಂತ
ಅಷ್ಟರೊಳಗ ಏನ ಹೇಳಲಿ ಆತ ಚಮತ್ಕಾರಾ
ಆ ಗಿಡದ ಬಡ್ಯಾಗಿಂದ ಪುಟಿಲಿಕ್ಕ ಹತ್ತೀತ ನೀರಾ | ಕುಡದಾರ ಮನಪೂರಾ
ಶಾಂತಾಗಿ ಹಸ್ಯೆನಾ ಹುಸ್ಯೇನಾ | ಅಪ್ಪಿಕೊಂಡಾರ ಮುತ್ಯಾನಾ || ೧೦ ||

ಇ || ಎತ್ತಿಕೊಂಡ ಹಸನ ಹುಸೇನನಾ | ಹೆಗಲಮ್ಯಾಲೆ ಶರಣಾ
ಏರು || ಮುಟ್ಯಾರ ಹೋಗಿ ಕಂಡ ಅಪ್ಪಕೊಂಡಾರ ಖಾತೂನನಾ
ಇರುವದು ಬಾಗಲಕೋಟಿ ಪಟ್ಟಣದೊಳಗ | ಮಲ್ಲೇಕಲ್ಲ ಹುಸೇನಾ
ನೆನದಾರ ಕೇಳರಿ ಮಡ್ಡಿಮ್ಯಾಲಾ ಹೊಳಿದಂಡಿ ಸಾಲಾ |
ಉಸ್ತಾದ ಹುಸೇನ ಮಿಯ್ಯಾನ ಕವಿ ರಂಗಲಾಲಾ ||

* * *

## ೯. ಹಸೇನ ಹುಸೇನರನ್ನು ಒತ್ತೆಯಿಟ್ಟ ಮೌಲಾಲಿ

ನೋಡಿರಿ ದೈವೆಲ್ಲಾ | ಮಾಡಬ್ಯಾಡರಿ ಗುಲ್ಲಾ || ಪಲ್ಲವಿ ||

ರೂಢಿಗೊಡೆಯ ಅಲಿ ಹಜರತಮೌಲಾ | ಬೇಡಿದ್ದ ಕೊಡುವ ಫಲಾ
ಏರು || ಕಡುಗಲಿ ಹತ್ತಿರ ಒಬ್ಬ ಬಡವ ಕಂಗಾಲಾ
ಅಡಬರಿಸಿ ಆಗಿ ಹೋದ ಅಡವಿ ಪಾಲಾ
ತೆರವಿನ ಸಲುವಾಗಿ ಹಣ | ಕಮ್ಮಿಯಾದ ಕಾರಣ
ಧರ್ಮಿಷ್ಟ ಹಣ ಕೊಡು ಎಂದು ಪಾದದ ಮೇಲಾ | ಬಿದ್ದು ಏಳಲಿಲ್ಲಾ || ೧ ||

ಇ || ಬಡವನ ಹಾಸಿಲಾ ಕೇಳಿ ಹಜರತಲಿ ಮೌಲಾ
ಬಿಡೋ ಬಿಡು ಚಿಂತೆಯೆಂದು ಎಬಿಸಿದನಲ್ಲಾ | ಅನುಮಾನ ಬಿಡಲಿಲ್ಲಾ

ಏರು || ಸದ್ಯಕ್ಕೆ ಕೊಡಲಿಕ್ಕೆ ಒಂದು ದುಡ್ಡು ಇಲ್ಲಾ
ಎದ್ದಾನೋ ಕೇಳಲಿಕ್ಕೆ ಒಡ್ಡಿ ಸಾಲಾ
ಅಡವಿಟ್ಟರೆ ಸಾಹುಕಾರರು ಕೊಡುವೆವು ಅಂದರು ಮಿಡಿಮಿಡಕಿ
ಹಜರತಲಿ ಮೌಲಾ ಆದ್ರೋ ಗಾಲಮೇಲಾ || ೨ ||

ಇ || ತರುವಾಯ ಸುಶೀಲಾ | ಹಸೇನ ಹುಸೇನ ಘಳೀಲಾ
ಕರೆಸಿ ಒತ್ತಿಇಟ್ಟಾರೊ ತತ್ಕಾಲಾ | ತಗೆದುಕೊಂಡ್ರೊ ಸಾಲಾ
ಏರು || ಬಡವಗ ಹಣಕೊಟ್ಟು ಕಳಿಸಿದ ಮೇಲಾ
ದೃಡವಂತ ಸಾಹುಕಾರ ಹೇಳ್ಯಾರೋ ಅಲಿ ಮೌಲಾ
ಇವತ್ತು ಬೇಗಿನ್ಹೊತ್ತು | ಹೊತ್ತು ಮುಳುಗುವದರೊಳಗ
ಯಾವತ್ತು ರಖಮು ಮಾಡು ಫೈಸಲಾ | ನಿಜನಿಜ ಸುಳ್ಳಲ್ಲಾ || ೩ ||

ಇ || ಶರಣರ ಮಹಿಮದ ಲೀಲಾ | ತಿಳಿಯದೆ ಆ ಚೆನಿವಾಲಾ
ತಿರಿಗುತ್ತರ ಕೊಟ್ಟ ಖೊಟ್ಟಿ ಕುಲಾ | ಯಾವುದು ಗೊತ್ತಿಲ್ಲಾ
ಏರು || ಹೊತ್ತು ಮುಳುಗುವುದರೊಳಗ | ಬಡ್ಡಿಗಂಟ ಸಾಲಾ
ಸದ್ಯಕ್ಕೆ ಎಲ್ಲಾ ಮಾಡು ಫೈಸಲಾ
ಇಲ್ಲದಿದ್ದರೆ ನಿನ್ನ ಒತ್ತಿಯ ಮಕ್ಕಳನ | ರಖಮ ಮಾಡುವೆ
ಕಬರದಾರನ ಸುಳ್ಳಲ್ಲಾ | ಅಂದಾನೋ ಸುಳ್ಳಲ್ಲಾ || ೪ ||

ಇ || ಸಾಹುಕಾರನ ವಾಕ್ಯವೆಲ್ಲಾ ಕೇಳಿ ಹಜರತ ಮೌಲಾ
ಅವಕಾಶ ಮಾಡದೆ ಕೇಳ್ಯಾರೋ ಊರಾಗ ಸಾಲಾ | ಎಲ್ಲೆಲ್ಲಿ ಹುಟ್ಟಲಿಲ್ಲಾ
ಏರು || ಕಬರು ಹಾರಿ ಕುತಗೊಂಡು ಮಂಚದ ಮೇಲಾ
ಅಬರು ಹೋಗುವದೆಂದು ಒಡೆದಾರೋ ಜಲ್ಲಾ
ಪತಿಮುಖ ಬಾಡಿದ್ದು ನೋಡಿ | ಫಾತಿಮಾ ಬಂದಾಳೋ ಓಡಿ
ಕ್ಷಿತಿಪಾಲಕ ಹೇಳಿದ ಮಕ್ಕಳ ತಪಶೀಲಾ | ಬಾಡಿತು ಮುಖಕಮಲಾ || ೫ ||

ಇ || ಮಕ್ಕಳ ತಪಶೀಲಾ | ಕೇಳಿ ಫಾತಿಮಾ ಲೋಲಾ
ಕಣ್ಣೀರು ಸುರಿಸ್ಯಾಳೋ ತತ್ಕಾಲಾ | ದುಃಖದ ಕೋಮಲಾ
ಏರು || ಅತ್ತಕೂಡಲೆ ಮುತ್ತು ಮಾಣಿಕ ನೀಲಾ
ಮುತ್ತು ವಜ್ರಗಳು ಬಿದ್ದಾವೋ ಅಳತಿಲ್ಲಾ
ಸ್ವಾತಿಕ ಬಳಕೊಂಡು ನೌರತ್ನ ತುಂಬಿಕೊಂಡು
ಒತ್ತರದಿ ಹೋಗಲು ಹೊತ್ತು ಮುಳುಗಿತಲ್ಲಾ | ಆದೀತು ಕತ್ತಲಾ || ೬ ||

ಇ || ಬುದ್ದಿಗೇಡಿ ಚೆನಿವಾಲಾ | ಸಾಲಾ ಹಿಡಿಯಲಿಲ್ಲಾ
ಮುದ್ದತು ಮೀರಿತೆಂದು ಅಂದನಲ್ಲಾ | ಅಲಿ ಆದ ಬೆಂಕಿಲಾಲಾ
ಏರು || ಭೂಮಿಯ ಮೆಟ್ಟಿದಾಗ ಸೂರ್ಯನ ಪ್ರಜ್ವಾಲಾ
ಮಹಾಪರಾಕ್ರಮಿ ಕೆಡವಿದ ಬಿಸಲಾ

ಗಾಬರಿಸಿ ಚೆನಿವಾಲಾ | ಬಡಕೊಂಡ ಗಲ್ಲಗಲ್ಲಾ ||
ತೋಬಾ ತೋಬಾ ಎಂದು ಕಲ್ಮಾ ಓದಿದಾ
ಪ್ಯಾಲಾ ಕುಡಿದಾನೋ ಚೆನಿವಾಲಾ || ೭ ||

ಇ || ಮೇಲಾದ ಕೌಲೂರು ಮಿಗಿಲಾ | ಜೀಲಾನಿ ಪ್ರಭೂಲಾ
ನೋಟೀಸ ಕೊಟ್ಟಾರೊ ಮೆರೆಯುವ ರಾಜ್ಯದ ಮೇಲಾ | ನಂಬರ ಪೈಲಾ
ಏರು || ಮೋಟಾರು ಬಿಟ್ಟಾಂಗ ಅಡಿಪ್ರಾಸ ರಂಗಲಾಲಾ
ಥೇಟ ನಾಟಕ ದಾಟಿ ಹೊಡಿದಾಂಗ ರೂಲಾ
ಕೋಟಿ ಪ್ಯಾಟಿಯ ಜನಾ | ಪೈಟಮಾಡಿ ಆಕ್ಷಣಾ
ರೈಟೆಂದು ಹಾಕುವರೊ ಕೊರಳಿಗೆ ಹೂವಿನ ಮಾಲಾ
ಕೊಟ್ಟಾರೊ ಬಂಗಾರ ಗೋಲಾ || ೮ ||

* * *

## ೧೦. ಹಸನೈನ ಹುಸನೈನರನ್ನು ದಾನ ಮಾಡಿದ ಪದಾ

ಬಯ್ಯಾನವೊಂದ ಧ್ಯಾನಕ ತಂದ | ಹೇಳುವೆ ಇಂದ ದೈವಕ ಸಾರಿ ||
ಏರು || ಮಕ್ಕಾ ಮದೀನಾ ಮುತ್ಯಾನ ಸ್ಥಾನಾ
ಇರುವ ಠಿಕಾಣಾ ನಬಿಸಾಹೇಬ ದೊರಿ
ಚ್ಯಾಲ || ಒಬ್ಬ ಫಕೀರ ಬಂದ ಶರಣರ ಮುಂದ ನಿಂತಾನ ಮಾಡ್ಯಾನ ಸವ್ವಾಲಾ
ಕಂದ ಹಸನೈನಗ ತಂದು ಕೊಡಬೇಕ್ರಿ ಇಂದು ದಾನ ತತ್ಕಾಲಾ
ಇ || ಕೇಳಿ ಶರಣಂತಾರ ಆಭವನ್ನಾ | ಹೋಗಿ ಕೇಳಬೇಕ್ರಿ ನೀವು ಮೌಲಾನಾ
ಮೌಲಾನಾ ಮುಂದ ನಿಂತ ಮಾಡ್ಯಾನರಿ ಮುಜರಿ || ೧ ||

ಅಂತಾನ ಮೌಲಾಗ ಫಕೀರ ಆಗ
ಹಸನೈನಗ ದಾನ ಕೊಡಬೇಕಂತಾನರಿ ಒದರಿ
ಏರು || ಕೇಳಿ ಅವನ ಸೊಲ್ಲ ತಾಸಮಿಸೇಲ
ಆಗಿ ಖುಷಿಯಾಲಾ ದಾನ ಕೊಟ್ರೊ ಸೊರದಾರಿ
ಚ್ಯಾಲ || ಬಾವಾ ತಗೊಂಡು ಹಸನೈನಗ ತನ್ನ ಹಿಂಬಾಲಾ
ಚಂದ ಫಾತಿಮಾನ ಮುಂದ ನಿಂತು ಅಲ್ಲೇ ಮಾಡ್ಯಾನ ಸವ್ವಾಲಾ
ಇ || ಮೌಲಾ ಹಸನೈನಗ ಮಾಡ್ಯಾರ ಸ್ವಾದೀನಾ
ನೀವು ಹುಸನೈನಗ ಮಾಡರಿ ಸ್ವಾದೀನಾ | ಖುಷಿಲಿಂದ ಕೊಟ್ಟಾರೋ ಅಂವಗ ವಚನಾ || ೨ ||

ನೋಡುವೆ ತೋರಸರಿ ಜರ ಹಸನೈನಗ್ಸ ಮಾರಿ
ಕರದು ಖಾತೂನಾ ಎರಡು ಮಕ್ಕಳನಾ
ಉಣಿಸ್ಯಾಳ ಅನ್ನಾ ಪ್ರೀತಿ ಮಾಡ್ಯಾಳ ಮಿತಿಮೀರಿ
ಏರು || ಕೇಳಿ ಅವನ ಸೊಲ್ಲಾ | ಮಾಡ್ಯಾಳ ಬಾವಾನಾ ಸ್ವಾದೀನಾ

ಎಂಥ ಹೈವಾನಾ ಹ್ವಾದಾನ ನಡಸೂತ ದಾರಿ
ಚ್ಯಾಲ || ಸುಡುವದು ತಾಳಲಾರದೆ ಸಣ್ಣ ಎರಡು ಕಮಲಾ
ಇ | | ಎರಡು ಮಕ್ಕಳಿಗೆ ಬಡಿದು ಬಾಸ್ಯಾನ ಗಲ್ಲಾ | ಚೂರಕರುಣ ಆತಗ ಬರಲಿಲ್ಲಾ
ಶಿವಸಾಂಬ ಕಳಿಸ್ಯಾನ ಬೇಗ ಜಿಬರೀಲ | ದೂರೈತ್ರಿ ಹೋಗರಿ ಮುಂದ ಜಮಶಾದ್ ನಗರಿ || ೩ ||

ದೂತರು ಆಗ ಬಂದಾರ ಬೇಗ ಜಗ್ಯಾರ ಭೂಮಿ
ಸನೇವ ಮಾಡ್ಯಾರ ಮಿತಿಮೀರಿ
ಏರು || ಜಮಶ್ಯಾನ ಊರನೋಡಿ ಫಕೀರಾ
ಸಂತೀಯ ಜುಮರ ಮಂದಿ ನೆರದೈತಿ ಮಿತಿಮೀರಿ
ಚ್ಯಾಲ || ಸೂರ್ಯ ಚಂದ್ರರಂತ ಪುತ್ರರನ ಬಂದು ನೋಡ್ಯಾರ ಜನರೆಲ್ಲಾ
ಜಮಶಾದನ ಅರಸು ಬಂದು | ಪರದಾನಿ ಕಂಡು ಆಗ್ಯಾನ ಕುಶಿಯಾಲಾ
ಇ || ಏನರೂಪ ಇವಂದು ಪೂರ್ಣಮಿ ಚಂದಿರಾ
ಕಂಡು ಬೋಳೀಕ ಬಂದು ಆಗಿ ನಿಂತಾನ ಸುಂದಾ ||
ಹೇಳೋ ಬೆಲಿ ಬೇಡಿದ್ದು ಕೊಡುವೆನು ನಾನಾ
ಅವರ ತೂಕ ಹಣ ಕೊಟ್ಟರ ಕೊಡತೇನಂತಾನರಿ || ೪ ||

ಕೊಟ್ವಾರಾಕ್ಷಣಾ ಕುಸಿಯಾಗೂತ ದೊರಿ
ಏರು || ಓದು ಮಕ್ಕಳನಾ ಅರಸರ ಸ್ವಾದೀನಾ | ನೋಡವರ ಗನಾ ಅಳತಾರ ಹೌಸಾನಾ ಹಾರಿ
ಚ್ಯಾಲ || ದೊರಿ ಅರಸನ ಮಕ್ಕಳು ಇದ್ದಾಳ್ರಿ ಕೇಳರಿ ನೀವು ಜನರೆಲ್ಲಾ
ಆಕಾರ ಇಲ್ಲ ಮಾರಿ ನೋಡಿದ್ರ ದೆವ್ವಿನಾಂಗ ಕಾಣೂದಲ್ಲಾ
ಇ || ಎರಡು ಮನುಷ್ಯಾರ ತಿನ್ನುವಳು ನಿತ್ಯಕಾಲಾ
ಅರಸ ಕೊಟ್ಟು ಬ್ಯಾಸತ್ತನಲ್ಲಾ | ಹಸನೈನ ಹುಸನೈನ ಎರಡು ಮಕ್ಕಳನಾ
ದಬ್ಬಿಕೋಲ್ಯಾಗ ಕೀಲಿ ಹಾಕ್ಯಾರ ದೆವ್ವಗ ಹಾರನಾ
ಕತ್ತಲದಾಗ ಹೋಗಿ ಮೂಲ್ಯಾಗ ಕುಂತಾರೋ ಆಗ ಅರಸನ ಹಾಂಗ || ೫ ||

ಸರೂ ರಾತ್ರಿ ಆಗ ಸಪ್ಪಳ ಮನಿಯಾಗ ಬಂತೋ ರಾಕ್ಷಸ ಮ್ಯಾಲ ಅಳತಾರೋ ಚೀರಿ
ಏರು || ಐದು ವರ್ಷದ ಚಿಕ್ಕ ಪ್ರಾಯದ ಹುಸನೈನಗ ಅಂತಾರಲ್ಲಾ
ಅಣ್ಣ ಕೇಳ ಸತ್ತ ಹೋಗ್ತೇವಿ ನಾವು ಈಗ ಉಳುವದಿಲ್ಲಾ
ಚ್ಯಾಲ || ಒಬ್ಬರೊಬ್ಬರು ಕೊರಳಿಗೆ ಅಪ್ಪಿ ಅಳತಾರಲ್ಲಾ
ಇಲ್ಲೇ ನಮಗ ದಿಕ್ಕು ಯಾರ್‍ಯಾರು ಇಲ್ಲಾ
ಇ || ಹಸನೈನ ಸಾಹೇಬ ದೀರ ಹೇಳ್ಯಾನೋ ||
ಮುತ್ಯಾ ನಬಿಸಾಹೇಬರ ವಚನಾ
ಆಗೈತ್ರಿ ಖಾತ್ರಿ | ಕೇಳ ಹುಸನೈನ ತುಸು ಇಟ್ಟ ಜ್ಞಾನಾ |
ಕರ್ಬಲದೊಳು ನಿಂದು ಮರಣಾ ಬರದಾನ ಶ್ರೀಹರಿ || ೬ ||

ಇಸಾಕುಡಿದು ನಾನು ಆಗುವೆ ಮರಣಾ | ಬರದಾನ ಬ್ರಹ್ಮ ಇಂಥ ಅದೃಷ್ಟದ ಬರಿ
ಏರು || ಸ್ವಾಮಿ ಕುಂತಾನೋ ಜ್ಞಾನ ಮಾಡುತ್ತಾ | ಬಿಟ್ಟು ತಾ ಮನದಾನ ಜಲ್ಲಾ

ದೆವ್ವ ಹೋಗಿ ಹೆಣ್ಣು ಆದೀತ ಹೊನ್ನ ಬಿದ್ದಾಂಗ ಬಿಸಿಲಾ
ಇ || ಬಂದ ಮಗ್ಗಲದಾಗ ಕುಂತಾಳೋ ಬಾಲಿ
ಹಣಿ ಇಟ್ಟಾಳೋ ಇಬ್ಬರ ಪಾದದ ಮ್ಯಾಲಿ
ಬೆಳಗಾಗಿ ಅರಸ ತಾ ಬಂದು ನೋಡ್ಯಾನೋ
ಗಾಬಾಗಿ ಕಂಡ ಅರಸ ಹೆಣ್ಣ ಸುಂದರಿ || ೭ ||

ಕರತಂದು ಆಗ ಗಾದಿಯ ಮ್ಯಾಗ ಕೂಡಿಸಿ | ಅರಸ ಬ್ಯಾಗ ಮಾಡ್ಯಾನ ಚಾಕರಿ
ಏರು || ಕಲ್ಮಾ ಓದ್ಯಾನರಿ ಶ್ರೇಷ್ಠರಸ ಬಿಟ್ಟು ತಾ ಮನದಾನ ಜಲ್ಲಾ
ಎರಡು ಮಕ್ಕಳಿಗೆ ಬೇಗ ಮದೀನಾಕ್ಕೆ ಕಳಿಸ್ಯಾನ ಆಗ ತಡಾಯಿಲ್ಲಾ
ಇ || ದೇಶದಲ್ಲಿ ದಸ್ತಗೀರ ದೈವಾನಾ
ಕೇಸುಪೀರ ಕೊಟ್ಟಾನೋ ಬುದ್ಧಿಯ ಜ್ಞಾನಾ
ಸೋಸಿ ಸಂಗ್ಯಾ ಗದಿಗ್ಯಾ ದೇಶಿ ಬಯಾನಾ
ಕಾಸಿ ವೈರಿ ಎದಿಯಾಗ ಬಡದಾಂಗ ಹಾರಿ || ೮ ||

* * *

## ೧೧. ಹಸೇನ ಹುಸೇನರನ್ನು ದಾನ ಮಾಡಿದ ಮೌಲಾನ ಪದಾ

ದೈವಾ ಸಂತ ಶಾಂತ ಕುಂತ ಕೇಳರಿ ಭಕ್ತಿಗೆ ಅನುಕೂಲ ಶರಣ ಮೌಲಾ
ಹಿಂಡ ವೈರಿ ಗಂಡ ನಾನು ಜಿಗದ್ಯಾಡ ಬ್ಯಾಡ ನೀನು
ನಿನ್ನ ಆಟ ನೋಡೂನು ಚಂದದಿಂದ ಹಾಡೂನು
ಇದರಾಗ ಅಹಾ ಇದರಾಗ | ತಿಳುತೈತಿ ಅಕಲಾ | ಭಕ್ತಿಗೆ ಅನುಕೂಲ ಶರಣ ಮೌಲಾ || ೧ ||

ನಮ್ಮ ಜೋಡಿ ಹೇಡಿ ಹಾಡಿಯೇನು ಖೋಡಿ ಹಾಡಪಾಡ ನೀನು ಆಗಾಕಿಲ್ಲ |
ಶರಣ ಮೌಲಾನ ಮುಂದ ಒಬ್ಬ ಯಹೂದಿ ಬಂದಾ | ನಿಂತಾನ ಕೈಯ ಮುಗದಾ
ದಾನಾ ಕೊಡರಿ ಇಂವಾ | ಅಂತಾನ್ಹಿಂಗ | ಅಂವಾ ಅಂತಾನ್ಹಿಂಗ
ನಮ್ಮ ಕಮಲಾ | ಭಕ್ತಿಗೆ ಅನುಕೂಲ ಶರಣ ಮೌಲಾ || ೨ ||

ಮೌಲಾ ಶರಣ ಕರುಣ ವರನುಳ್ಳ ತಾ ಎದ್ದ ಖುದ್ದ ಕೊಟ್ರೊ ಹಸನೈನ ಬಾಲಾ
ತಗೊಂಡ ನಡದಾನ ದಾನಾ | ಹಸನೈನಗ ಕೇಳ್ಯಾನ ತಾನಾ
ನಿಮ್ಮ ತಮ್ಮ ಹುಸನೈನಾ | ಎಲ್ಲಿರತಾರ ಹೇಳ ಖೂನಾ
ಹೇಳ್ಯಾರ್ಹಿಂಗ ಅವರು ಹೇಳ್ಯಾರ್ಹಿಂಗ | ಮಾಡಿ ಖುಲ್ಲಾ | ಭಕ್ತಿಗೆ ಅನುಕೂಲಾಶರಣಮೌಲಾ || ೩ ||

ಅಂವಾಕೆಟ್ಟದುಷ್ಟ ಭ್ರಷ್ಟ ಯಹೂದಿ ಸ್ಥಾನಾ ಮಾನಾ ಕರುಣಾ ಅಂವಗ ಇದ್ದಿದ್ದಿಲ್ಲಾ ||
ಖಾತೂನನ ಮನಿಮುಂದಾ | ನಿಂತಾನ ಅಂವಾ ಬಂದಾ | ಹೇಳತಾನ ಬಾಯಿಲಿಂದಾ
ದಾನಾ ಕೊಡ್ರಿ ನಿಮ್ಮಕಂದಾ | ಹೇಳ್ಯಾನ್ಹಿಂಗ | ದೈವಾ ಹೇಳ್ಯಾನ್ಹಿಂಗ | ನಿರವಾಯಿಲ್ಲಾ
ಭಕ್ತಿಗೆ ಅನುಕೂಲ ಶರಣ ಮೌಲಾ || ೪ ||

ಆಗವನ ಸೊಲ್ಲ ಗುಲ್ಲ ಎಲ್ಲ ಕೇಳಿ ಅಂದ್ರೊ, ನಿಂದ್ರೊ ಬಂದ್ರೊ ಕೊಡತಾರ ಮೌಲಾ
ಕೊಟ್ಟಾರ ಮೌಲಾ ದಾನಾ | ಹಿರೇಮಗಾ ಹಸನೈನಗ | ಕೊಡ್ರಿ ನಿಮ್ಮ ಹುಸನೈನಾ
ತಗೊಂಡು ಹೋಗುವೆ ನಾನಾ | ಕೊಟ್ಟರಾಗ ಖಾತೂನ | ಕೊಟ್ಟರಾಗ ತನ್ನ ಬಾಲಾ
ಭಕ್ತಿಗೆ ಅನುಕೂಲ ಶರಣ ಮೌಲಾ || ೫ ||

ಅಂವಾ ತಡದ ನಡದ ಹಿಡದ ದಾರಿ | ಹೇಸಿ ಸೋಸಿ ಖುಸಿ ಮನದಾಗ ಆದಾನಲ್ಲಾ
ನಡದಾನ ಅವುಸರಲಿಂದಾ | ಬರಗಾಲ ಎರಡು ಕಂದಾ | ಅಳತಾರ ಸಾಂಬಗ ನೆನದಾ
ಏನಾತ ದೈವಾನಮದಾ | ಮಾಡೂನ್ಹಾಂಗ
ಶಿವನೆ ಮಾಡೂನ್ಹ್ಯಾಂಗ ಯಾರ್‍ಯಾರಿಲ್ಲಾ | ಭಕ್ತಿಗೆ ಅನುಕೂಲ ಶರಣ ಮೌಲಾ || ೬ ||

ಅವರ ದುಃಖದಾ ಶೋಕ ಹೇಳುದಕ ನಂದ ಇಂದ ಒಂದ ಬಾಯಿ ಸಾಲೂದಿಲ್ಲಾ ||
ಭೂಮಿಮ್ಯಾಲ ಅಳತಾರ ಹೊರಳಿ | ಕಾಲಸುಟ್ಟ ಬಂದಾವ ಗುರಳಿ
ಇಷ್ಟ ನಮ್ಮ ಅದೃಷ್ಟದಲ್ಲಿ |
ಬೇಡಿಬಂದೆ ಶಿವನಲ್ಲಿ | ನಾವು ಹೇಳೂನ್ಹ್ಯಾಂಗ | ಕೇಳುವವರಿಲ್ಲಾ
ಭಕ್ತಿಗೆ ಅನುಕೂಲಾ ಶರಣ ಮೌಲಾ || ೭ ||

ಕರುಣ ಆಗ ಶಿವಂಗ ಬಂದು ಕೊಟ್ಟ ದಿಟ್ಟ ಶ್ರೇಷ್ಟ ಹುಕುಮ ತಡಾಯಿಲ್ಲಾ
ಸಾಂಬನ ಹುಕುಮಲಿಂದಾ | ಶಿವದೂತ ಜಿಬರೀಲ ಬಂದಾ
ಜಗ್ಯಾರ ಭೂಮಿಗೆ ಹಿಡಿದಾ
ಆತ ಆನಂದ ಕೇಳವರಿಗೆ | ಆಹಾ ಕೇಳವರಿಗೆ ಮುಟ್ಯಾರಲ್ಲಾ
ಭಕ್ತಿಗೆ ಅನುಕೂಲಾ ಶರಣ ಮೌಲಾ || ೮ ||

ಎರಡು ಕಂದ ಚಂದ ತಂದ ಮೂರ್ಖಾ | ಶರಣ ಕಿರಣ ವರಣ ಕೂಸಿಂದು ಹೇಳಾಂಗಿಲ್ಲಾ
ಜಮಶ್ಯಾದ ಅರಸನ ಶಾರಾ | ಪಟ್ಟ ಪಗಡಿ ಬಾಜಾರಾ | ಕರುಣ ಇಲ್ಲದೆ ಚೂರಾ
ನಿಂದರಶ್ಯಾನ ಪಾಮರಾ | ಎರಡು ಮಕ್ಕಳಿಗೆ ಮಾರುದಕ ಮೊದಲಾ
ಭಕ್ತಿಗೆ ಅನುಕೂಲಾ ಶರಣ ಮೌಲಾ || ೯ ||

ಸುದ್ದಿಕೇಳಿ ವಾಳಿ ಗೂಳಿ ಅರಸಾ | ದಯಾ ಭಯಾ ಮಾಯಾ ಅಂವುಗ ಇದ್ದಿದ್ದಿಲ್ಲಾ
ರೂಪಾಯಿ ಅವರ ತೂಕಿಗೆ ತೂಕಾ | ಕೊಟ್ಟವೋದ ಬೆಳಕಾ | ತಿಳಿಯದೆ ಮೂರ್ಖಾ
ಮಕ್ಕಳಿಗೆ ಹಾಕಿ ಡಾಕಾ | ಕೇಳ್ಯಾನ್ಹಿಂಗ | ಅಂವ ಕೇಳ್ಯಾನ್ಹಿಂಗ ಮಾಡರಿ ಖುಲ್ಲಾ
ಭಕ್ತಿಗೆ ಅನುಕೂಲ ಶರಣ ಮೌಲಾ || ೧೦ ||

ಹೇಳ್ಯಾರ ವಾರ್ತಿ ಕೀರ್ತಿ ಸಾರತೈತಿ ಹೀಂಗ | ಪುಂಡ ಹಿಂಡ ವೈರಿಗೆ ಗಂಡ ತಂದಿ ಮೌಲಾ
ಕೇಳ್ರಿ ನಬಿಸಾಹೇಬ ಶರಣಾ | ಆಗಬೇಕ ಮುತ್ತ್ಯಾ ನಮ್ಮನ್ನಾ
ಜಮಶ್ಯಾದ ಕೇಳಿದ ಜಾಣಾ
ಹೊಡಿಬೇಕ ಅಂತಾನ ಪ್ರಾಣಾ | ವೈರಿ ನನಗ | ಆಹಾ ವೈರಿ ನನಗ ರಸೂಲಿಲ್ಲಾ
ಭಕ್ತಿಗೆ ಅನುಕೂಲ ಶರಣ ಮೌಲಾ || ೧೧ ||

ಅರಸ ಸಿಟ್ಟ ಇಟ್ಟ ಭೃಷ್ಟ ಮಕ್ಕಳಿಗೆ ಜಲ್ದ | ಮ್ಯಾಲ ಬಾಕಲ ತೆರೆದು ನುಗಶ್ಯಾನಲ್ಲಾ |
ಅರಸನ ಮಗಳೀನಾ | ಕೈಯ ಕಾಲ ಇದ್ದಿಲ್ಲಾ ಕಣ್ಣಾ | ದಿನ ಎರಡು ಮನುಷ್ಯರನಾ
ನುಂಗತಿದ್ಲೊ | ಹೊಡದ ಪ್ರಾಣಾ | ಕೇಳರೀಗ | ಆಹಾ ಕೇಳರೀಗ
ಹೀಂಗ ಆಕಿ ಡೌಲಾ ಭಕ್ತಿಗೆ ಅನುಕೂಲ ಶರಣ ಮೌಲಾ || ೧೨ ||

ಮಕ್ಕಳ ನೋಡಿ ಕೂಡಿ ಜೋಡೀಲೆ ಅಂದ್ರು | ಸಾಯಾ ಮಾಯಾ ದಯಾ
ನಮಗ ಮಾಡವರಿಲ್ಲಾ |
ಅಂತಾರ ಹಸನೈನಾ | ಕೇಳೊ ತಮ್ಮಾ ಹುಸನೈನಾ | ಇಕಿ ಕೈಯಾಗ ಏನಾ ಹೋಗುದಿಲ್ಲಾ
ನಮ್ಮ ಪ್ರಾಣಾ | ಹೇಳ್ಯಾರ್ಥಿಂಗ | ಆಹಾ ಹೇಳ್ಯಾರ್ಥಿಂಗ | ನಾವು ಸಾವೂದಿಲ್ಲಾ
ಭಕ್ತಿಗೆ ಅನುಕೂಲ ಶರಣ ಮೌಲಾ || ೧೩ ||

ಅಕ್ಷಾರ ಜೋಡ ತೋಡ ಮಾಡೊ ಹೀಂಗ | ವಿದ್ಯೆ ಬುದ್ಧಿ ನಿಮಗ ದೊರಿಯುದಿಲ್ಲಾ |
ಆರತಾಸ ರಾತರ್ಯಾಗ | ದೆವ್ವ ಬಂತ ಮಕ್ಕಳ ಮ್ಯಾಗ | ನೆನದಾರ ಸಾಂಬಗ
ದಯಾಮಾಡೋ ನೀನು ನಮಗ | ನುಂಗುವಾಗ | ಮಕ್ಕಳ ನುಂಗುವಾಗ
ರೂಪಾತ ಬದಲಾ | ಭಕ್ತಿಗೆ ಅನುಕೂಲ ಶರಣ ಮೌಲಾ || ೧೪ ||

ನಾಜೂಕ ಹೆಣ್ಣ ಸಣ್ಣ ಬಣ್ಣ ಗುಲಾಬಿ ಸಾಗಿ ಹೋಗಿ ಬಾಗಿ ಹಿಡದಾಳ ಅವರ ಕಾಲಾ
ಜಮಕಾದ ಬೆಳಗಾದಿಂದಾ | ನೋಡ್ಯಾನ ಬಾಕಲ ತೆರದಾ | ರೂಪಾಗಿ ಹೆಣ್ಣಿಂದಾ
ಹಿಡದ ನಿಂತಾಳ ಪಾದಾ | ಓದ್ಯಾನಾಗ ಕಲಮಾ | ಓದ್ಯಾನಾಗ ಬಿಟ್ಟ ಜಲ್ಲಾ
ಭಕ್ತಿಗೆ ಅನುಕೂಲ ಶರಣ ಮೌಲಾ || ೧೫ ||

ಸತ್ತೆ ನೋಡಿ ಕೂಡಿ ಮಾಡಿ ಶರಣಾ | ಬಿಟ್ಟ ಸಿಟ್ಟ ಇಟ್ಟ ಮಮತಿ ಅವರ ಮ್ಯಾಲಾ
ಮುಸಲ್ಮಾನ ಆದಾನ | ಮಕ್ಕಳಿಗೆ ಕಳಿಸ್ಯಾನಾ | ನೋಡಿ ಆಗ ಖಾತೂನಾ
ಮಾಡ್ಯಾಕ ಸಾಂಬನ ಧ್ಯಾನಾ | ಇದ್ದರಾಗ | ಕೂಡಿ ಇದ್ದರಾಗ ಖುಷಿಯಾಲಾ
ಭಕ್ತಿಗೆ ಅನುಕೂಲ ಶರಣ ಮೌಲಾ || ೧೬ ||

ನಮಗ ವರಗುರು ಸರುವ ಕೊಟ್ಟಾ | ಸುಳ್ಳ ಮುಳ್ಳ ಕಳ್ಳ ಬಂದು ಹಿಡಿಕಾಲಾ ||
ದೇಶಕ ಜಾಹೀರಾ ಪೀರ ನಮ್ಮ ದಸ್ತಗೀರಾ ಕರುಣುಳ್ಳ ಕೇಶುಪೀರಾ
ನಾಗು ಗೌಸುಗ ಪೂರಾ | ಕೊಟ್ಟರ್ಥಿಂಗ | ದೈವಾ ಕೊಟ್ಟಾರ್ಥಿಂಗ
ಹಿಂತಾ ಅಕಲಾ | ಭಕ್ತಿಗೆ ಅನುಕೂಲ ಶರಣ ಮೌಲಾ || ೧೭ ||

* * *

## ೧೨. ಭೂಮಿ ಹಿಂಡಿ ಎಣ್ಣೆ ತೆಗೆದ ಮೌಲಾಲಿ ಪದಾ

ಭಕ್ತಿವಂತರ ಶಕ್ತಿ ಶಿವನು ತಾನೇ ಬಲ್ಲಾ
ವಚನಕ್ಕೆ ತಪ್ಪಲಿಲ್ಲಾ ಹಜರತಲಿ ಮೌಲಾ
ಏರು || ಕೇಳರಿ ಮೌಲಾಲಿ ಇದ್ದಾರೊ ಮಕ್ಕಾದಲ್ಲಿ

ಸದಾಶಿವನ ಧ್ಯಾನ | ಭಾವಕ ಮೆಚ್ಚಿದ ಭಗವಾನಾ
ಅರುಬಿಟ್ಟು ಗರುವಿಲೆ ನಡೆದರೆ ನಡುಗಿತೊ ಭೂಮಂಡಲಾ || ೧ ||

ಒಂದಿನಾ ಮಕ್ಕಾದಲ್ಲಿ ಆದದ್ದು ಮೌಲಾ
ನಮಾಜು ಮಾಡಿ ಮೌಲಾ ಬರುತಿದ್ದರೊ ಖುಷಿಯಾಲಾ
ಏರು || ಅತ್ತೆಮನಿ ಸೊಸಿ ಪತಿವೃತಿ ಒಬ್ಬಾಕಿ | ಕಲ್ಲು ಎಡವಿ ಬಿದ್ದು
ಕೈಯಾನ ಎಣ್ಣಿಮಗಿ ಒಡದು ಅಳತಾಳೋ
ಮಣ್ಣಿನ ಬೋಕಿಗೆ ಎಣ್ಣಿಯ ಪರವಿಲ್ಲಾ || ೨ ||

ಹಾಡಾಡಿ ಅಳತಾಳೋ ಶಿವನೆ ಎನ್ನ ಗತಿಯೇನು ?
ಮನಿಗೆ ಹೋದರೆ ಬಂತೋ ಎನ್ನ ಕೊರಳಿಗೆ ಉರಲಾ
ಏರು || ಅತ್ತಿಮನಿಯಾಗ | ಮೊದಲು ಕಟಿಪಿಟಿ ಎನಗ
ಮತ್ತಷ್ಟು ಅದರಾಗ | ಸಿಟ್ಟು ಇದ್ರೊ ಎನ್ನಮ್ಯಾಲಾ
ಇಂದಿಗೆ ಹರಿದೀತೋ ನಂದು | ಸಂಸಾರದ ಹಂಬಲಾ || ೩ ||

ಬಡವಿ ಆಳಾಪು ನಿಂತು ಕೇಳಿದಾರೋ ಮೌಲಾ
ಕರುಣಿಟ್ಟು ಹೇಳ್ಯಾನ ಧೀರ ಅಂಜಬ್ಯಾಡ ಕಮಲಾ
ಏರು || ಸುಮ್ಮನಿರು ತಾಸೋತ್ತ | ಇಲ್ಲಿ ನೋಡೀಗ ಮಾತ
ಹ್ಯಾಂಗ ಆಗುವದು | ನಿನ್ನ ಎಣ್ಣಿ ಕೊಡತೇನಿ ತೆಗೆದು
ಹೇಳ್ಯಾನೋ ಭೂಮಿಗೆ ಜಬರಿಸಿ | ಶಿವನೆ ಪ್ರಭೂಲಾ || ೪ ||

ಬೈಯಾನ ಕೇಳರಿ ಒಂದ ಮುಂದೆ ಹೇಳುವೆ ಅಸಲಾ
ಹಮ್ಮಿಟ್ಟು ದಮ್ಮ ಹಿಡಿದರ ಮುರಿತೇನಿ ಮೀಸಲಾ
ಏರು || ಹೋಗೋ ಹೋಗೋ ಮುಲ್ಲಾ ಮಾಡಲಿಕ್ಕೆ ಬಂದಿದೇನೋ ಡೌಲಾ
ನಂದಿತ್ತು ನನಗ ಸಿಕ್ಕರ ನಿನ್ಯಾವ ಅಡಗೋಲಾ || ೫ ||

ಇ || ಹಿಡಿದಾರೋ ಭೂಮಿಗೆ ಒತ್ತಿಸುತ್ತಿ ಅಲಕಮೇಲಾ
ತಿರಿವ್ಯಾನೋ ಕಬ್ಬ ತಿರುವಿದಾಂಗ ಒಡಮುರಿದು ಒಗಲಾ
ಏರು || ಕಬ್ಬಿನ ಸಿಪ್ಪಿಗತಿ ತಿರಿವ್ಯಾರೋ ನರಗಳ ಒತ್ತಿ
ತಟಗ ತಟಗ ತೆಗೆದು ಎಣ್ಣಿ ಕೊಟ್ಟಾರೋ ಬಡವಿದಾ
ಹರಕಿ ಕೊಟ್ಟು ಮನಿಗೆ ಹೋದಾಳೋ ಖುಷಿಯಾಲಾ || ೬ ||

ಸಿಟ್ಟೀಲೆ ಹೋದಾರೋ ಮನಿಗೆ ಒಟ್ಟು ಮಂದಿ ಜುಮಲಾ
ಕರೆದಾನೋ ಹಸೇನ ಹುಸೇನಿಯರಿಗೆ ಬರ್ರೋ ಎನ್ನಬಾಲಾ
ಏರು || ನಾನು ಸತ್ತರ ನಿಮಗ ಹೇಳತೇನಿ ಮೊದಲಾಗ
ಹೇರಿ ಒಂಟಿಯ ಮೇಲಾ | ಭೂಮಿಗೆ ವೈರಿ ಎನ್ನಮೇಲಾ
ಅಂತರಲೆ ಇರತೇನಿ ನಾನು ವೈರಿ ಎದಿಯ ಮೇಲಾ || ೭ ||

ಇ || ದೇಶದೊಳು ಬಾಗಲಕೋಟಿ ಪ್ಯಾಟಿ ರಂಗಲಾಲಾ
ಹೂವಿನ ಗಲ್ಲೀಪ ಹಾಕರಿ ಮಡ್ಡಿಪೀರನ ಮ್ಯಾಲಾ
ಏರು || ಮುಗಿತರಿ ಬಯ್ಯಾನಾ ದೂರಲ ವಾಹಿನಾ
ಪೀರ ಮಲ್ಲೇಯಕಲ್ಲಾ ಮತಿ ನಮಗ ಕೊಟ್ರೋ ನಾಲಗಿ ಮೇಲಾ ||
ಸಯ್ಯದ ಮಹ್ಮದ ಅಕ್ಷರ ಹೊಯಿದಾಂಗ ರಂಗೋಲಾ || ೮ ||

* * *

## ೧೩. ಹಿಂಡ ವೈರಿಗಳ ಗಂಡ ಮೌಲಾಲಿ

ಏನಚಂದ ದೈವಾ ಬಂದ ಕೂಡಿರಿ ಇಂದ ಸಂಪನ್ನಾ | ಇಡರಿ ಧ್ಯಾನಾ
ಸರೂ ದೈವದ ಮುಂದ ಅರಜ ಮಾಡುವೆ ಕಂದ
ಭಕ್ತಿಗೆ ಅನುಕೂಲ ಆಗುವರೊ ಮೌಲಾ ಖಾತೂನ | ಇಡರಿಧ್ಯಾನಾ
ಪುಣ್ಯಕ ಪರ ಉಪಕಾರಾ | ಮೌಲಾವಲಿ ಶರಣರಾ
ಕೊಟ್ಟ ವಚನಕ ತಪ್ಪದಾತನು ಸೃಷ್ಟಿಗೆ ಮೌಲಾವಲಿ
ಶರಣ ಮೌಲಾನ ವರ್ಣನೆಯ ಎಷ್ಟಂತ ಮಾಡಲಿ ಬಾಯಲಿ
ಈ ಭೂಮಿಯಲ್ಲಿ | ಧರಣಿಪಾಲಕ ಕೊಟ್ಟಾ ಮಾಯಾಳು | ಮನಾ ಇಡರಿ ಧ್ಯಾನಾ || ೧ ||

ದೂರಲಿಂದ ಬಾವಾ ಬಂದಾ | ಮೌಲಾನ ಮುಂದ ಬ್ಯಾಗನಾ | ಮಾಡ್ಯಾನು ಶರಣು
ಮದವಿಯ ದಸಿಂದ ಐನೂರು ರೂಪಾಯಿ ಇಂದಾ | ಬಲಿಷ್ಟ ಸ್ವಾಮಿ
ಕೊಟ್ಟ ಮಾಡರಿ ಇಷ್ಟ ಲಗ್ನ | ಇಡರಿ ಧ್ಯಾನಾ
ಮೌಲಾವಲಿ ಶರಣರು ಬಡವಗ ಹೀಂಗ ಅಂತಾರು
ದಮ್ಮ ಹಿಡಿಯೋ ತಮ್ಮಾ | ಆ ಹರಿ ಬ್ರಹ್ಮನ ಕರುಣ ಆಗಲಿ |
ಶ್ಯಾರ ಭರಭರ ಊರ ಒಳಗ ಅಧಿಕಾರ ಅರಸ ಇರತಾನ ಅಲ್ಲಿ
ಬ್ಯಾಗ ಒಯ್ದು ನನಗ ಮಾರಂತ ಅಂವುಗ ನಾ ಇರತೇನಲ್ಲಿ
ಮದವಿದಸಿಂದ ಒಯ್ಯೋ ಐನೂರು ಹಣಾ | ಇಡರಿ ಧ್ಯಾನಾ || ೨ ||

ಇಬ್ಬರು ಕೂಡಿ ಹೊಂಟಾರ ಜೋಡಿಲಿಂದ ಮಾತಾಡಿ ವಚನಾ
ಕೊಟ್ಟ ಬಡವನ್ನಾ ಬಾಳ ಖುಷಿಯಲಿಂದ ಭರಭರಶಾರಕ ಬಂದ
ದರಬಾರ ನಡೆದಿತ್ತ ಬಾರ | ಪಾರೇದಾರ ಸಂಗೀನಾ ಹತ್ತಿರ ನೀಂತಾರಣ್ಣಾ
ಬಡವ ಮೌಲಾ ಶರಣರಾ | ನಿಂತ ಅರಸನ ಇದರಾ ಸಾರಿ ಮಾಡಿ ಮುಜರಿ
ಆ ಕಚೇರಿ ನಡೆದಿತ್ತ ಗರಿದೀಲಿ | ಒಂದ ಪೈಲವಾನ ಚಂದ ಮಾರುಕ
ಇಂದ ತಂದೀನಿ ನಿಮ್ಮಲಿ | ಎಷ್ಟ ಹತ್ತಿದಷ್ಟ ರೊಕ್ಕಾಕೊಟ್ಟರ ಬಿಡತೀನಿ ಇಲ್ಲಿ
ಹೇಳಿದ ಕೆಲಸಾ ಮಾಡಾಂವಾ ದೈರ್ಯವಾನಾ | ಇಡರಿ ಧ್ಯಾನಾ || ೩ ||

ನನ್ನ ಮೂರು ಸವಾಲಾ | ಯಾರ ಮಾಡ್ಯಾರ ಪಾರ ಬ್ಯಾಗನಾ | ಬಿಡತೇನಿ ಅವನಾ
ಐನೂರು ರೂಪಾಯಿ ತಂದ ಇಟ್ಟ ಬಡವನ ಮುಂದ | ತಗೊಂಡ ಬಡವ ಹೊಂಚಾ

ಮಾಡುಕ ಲಗ್ನಾ | ಇಡರಿ ಧ್ಯಾನಾ | ಫೈಲವಾನ ಅಂತಾನ ಅರಸಗ | ತಿಳಿಸೆ ಸವಾಲಾ ನನಗ
ಊರ ಒಳಗ | ನೀರ ಬಂದು ಮನಿಮಾರು ಬೀಳತಾವ ರಾತ್ರಿಯಲ್ಲಿ
ಬಂದ ಮಾಡೊ ಇಂದ ಸ್ವರೂಪನಿಂದ ತಿಳೂತೈತಿ ನನಗಿಲ್ಲಿ
ಮೊದಲ ಮಾಡೋ ನೀ ಕಬೂಲ | ಹರಕತ ಇಲ್ಲ ಇರ ಹೋಗೋ ಮನೆಯಲ್ಲಿ
ಮೌಲಾವಲಿ ಅಂತ ಗೊತ್ತ ಇದ್ದಿಲ್ಲ ಅರಸನ್ನ | ಇಡರಿ ಧ್ಯಾನಾ || ೪ ||

ಎಚ್ಚರ ಇದ್ದಿಲ್ಲ ಯಾರು ಪಾರೇದಾರ ಸರೂಜನಾ | ಮನೆಯಿಂದ ಶರಣಾ
ಹೊಂಟಾರೊ ಅಲ್ಲಿಂದ ನೋಡಿ ಪರ್ವತ ಒಂದಾ | ಒಡದ್ಹೋಳ ಮಾಡ್ಯಾರ ಕೇಳ
ಅದು ನಿಚ್ಚಳ ಒಂದ ಸವನಾ | ಇಡರಿ ಧ್ಯಾನಾ | ಸಮುದ್ರ ದಂಡಿಮ್ಯಾಗ
ತಂದ ಇಟ್ಟರೊ ಆವಾಗ | ಕೂಗಿ ಕೋಳಿ ಬೆಳಗಾಗಿ | ಅರಸಾಗ ಬಂದ ನಿಂತಾನಲ್ಲಿ
ಬಂದ ಆದಾವ ಇಂದ ನೀರ ಆನಂದ ಆದಾನೊ ಮನದಲ್ಲಿ
ನಗುತ ಆಡುವ ಮಾತ ಮನಸ್ಸಿಗೆ ಬಂತ | ಅಂತಾನ ಹೌದ ಹುಲಿ
ಎರಡನೆ ಸವಾಲಾ ಹೇಳುವೆ ಕೇಳೋ ಪೈಲವಾನಾ | ಇಡರಿ ಧ್ಯಾನಾ || ೫ ||

ಊರ ಹಿಂದ ಸರ್ಪೈತಿ ಒಂದ | ಅದಕ ಕೇಂದ್ರ ಬ್ಯಾಗನ
ಬರಬೇಕೋ ನೀನಾ ಕಂಡರ ಮನುಷ್ಯಾಗ ಸೂರ ಎಳುತೈತಿ ಒಳಗ
ಗಾಳಿಲಿಂದ ಬಾಯಾಗ ಬಂದ ಬೀಳತಾರಂತ ಸರೂಜನಾ | ಇಡರಿ ಧ್ಯಾನಾ
ಪೈಲವಾನ ಅಂತಾನ ಅರಸಗ | ನಿಂತ ತೋರಿಸೊ ನನಗ
ಎಂಥ ಸರ್ಪ ಐತಿ ಅಂತ ಹೊಂಟಾರೊ ಸ್ವಂತ ಆ ಮೌಲಾವಲಿ
ನೋಡಿ ಮೌಲಾಗ ಓಡಿ ಬಂತ ಲಗುಮಾಡಿ | ಸೂರ ಎಳದೀತಲ್ಲ
ಅಗದ ಮಾತೆಂದು ತಗದ ಕಲ್ಚನಾ | ಜಿಗದ ನಿಂತಾರ ತೆಲಿಮ್ಯಾಲ
ಹಿಂಬಡಲೆ ತುಳದು ಹೊಡದಾ ಸರ್ಪಿನ ಪ್ರಾಣಾ | ಇಡರಿ ಧ್ಯಾನಾ || ೬ ||

ಈಗೊಂದ ಸವಾಲನಿಂದ ಉಳದೈತಂದ | ಅರಸನ್ನಾ ಹೇಳಬೇಕ ನನ್ನಾ
ಅರಸ ಅಂತಾನ ಹೀಂಗ | ಏನ ಹೇಳಲಿ ನಿನಗ
ಜೀವಲಿಂದ ಮೌಲಾಗ ತಂದ ಮಾಡೊ ಇಂದ ಸ್ವಾದೀನಾ | ಇಡರಿಧ್ಯಾನಾ
ಅಂದ್ರೊ ಮೌಲಾ ಶರಣರಾ | ತಗಿಯಬ್ಯಾಡ ಅವನ ಹೆಸರಾ
ಹಿಂಡ ವೈರಿಗಳ ಗಂಡ | ಅನಸ್ಯಾನ ಪುಂಡ ಆ ಮೌಲಾವಲಿ
ಹೇಳಿ ಹಿಡಿಸಾವಾ ತಾಳಿ | ನಿನ್ನಂಥ ಕೋಳಿ ಕೂಗದು ಮನೆಯಲ್ಲಿ
ಏಟ ಬಿದ್ದರ ಪೆಟ್ಟ ರಾಜೀವ ಬಿಟ್ಟ ಹೋದಿಯಲ್ಲಿ
ಹಿಡತಂದು ನಿನಗ ಮಾಡಾವಾ ಮುಸಲ್ಮಾನಾ | ಇಡರಿ ಧ್ಯಾನಾ || ೭ ||

ಅಂದ ಷಂಡ ಅರಸ ಭಂಡ ಆ ಖೂಳದಂಡ ಮೌಲಾನ ಬಿಡೂದುಲ್ಲಾ | ನಾನಾ
ಎಷ್ಟ ಹೇಳಲಿ ನಿನಗ | ಸಿಟ್ಟೈತಿ ಮನದಾಗ ಅವನಂಶ ಮಾಡುದು ನಾಶ
ಇರುವದು ಧ್ಯಾನ ನಮ್ಮನ್ನಾ | ಇಡರಿ ಧ್ಯಾನ
ನಾನೆ ಮೌಲಾ ಅಂತಾನೊ | ಏನು ಮಾಡಲಿ ನನ್ನನ್ನು
ಹುಕುಂ ಕೊಟ್ಟಾ ಏಕದಂ ಬಿಡಬ್ಯಾಡರಿ ತಮ್ಮ ಅಂತ ಬಿದ್ದಾರ ಮ್ಯಾಲ

ಜೋಲಿ ಹೊಡದಾನ ತೂರಿ ಕೈಕಾಲ ಮಾರಿ ಒಡದಾಂವ ತೆಲಿ
ನೋಡಿ ಅರಸ ಓಡಿ ಹ್ವಾದಾ ಲಗುಮಾಡಿ ಹಿಡಿದ ತಂದರಲ್ಲಾ
ಕರುವನ್ನು ಮುಗದು ಆದೋನೊ ಮುಸಲ್ಮಾನಾ ಇಡರಿ ಧ್ಯಾನಾ || ೮ ||

ಅವನ ಪಟ್ಟ ಅವನಿಗೆ ಕೊಟ್ಟ | ಅಲ್ಲಿಂದ ಹೊಂಟ್ರೊ ಶರಣಾ | ದರಜಿಲ್ಲಾ ಏನಾ
ದೇಶಕ ಜಾಹಿರಾ | ಬಾಗಲಕೋಟ ಶಾರಾ | ದಸ್ತಗೀರ ಕೇಸುಪೀರ | ಆದ ಸಹಕಾರ
ನಮ್ಮನ್ನಾ ಇಡರಿದ್ಯಾನಾ | ನಾಗೂಗೌಸೂನ ಕವಿತಾ | ಸುರಿಸಿದಂತೆ ಅಮೃತಾ
ಅಡಿಪ್ರಾಸನುಡಿಗಳು ನಡಿಯಬೇಕ ಇದರಾಂಗಿಲ್ಲಾ | ಸೋತಬಳಿಕ | ಆತ ಹ್ವಾದಿಂದ ಮಾತ
ಬರುವೆದೇನಲ್ಲ | ಧ್ಯಾನ ಇಡೊ ಮೋದಿನಪೀರಸಾಬ ಜಾಣಾ ಹೇಳುವರೊ ಸಭೆಯಲ್ಲಿ
ಲಾಲಸಾಬ ಡೊಂಗ್ರಿ ಸಾಂಬನ ಶಾಣೇತನ | ಇಡರಿ ಧ್ಯಾನಾ || ೯ ||

* * *

## ೧೪. ದಾನ ಕೊಟ್ಟ ರೊಟ್ಟಿಯ ಪದಾ

ಚಿತ್ತಿಟ್ಟ ಕೇಳರಿ ದೈವಾ | ಇದು ಒಂದು ಅನುಭಾವಾ
ತಿಳಿಸುವೆ ಸಣ್ಣಾಂವಾ | ಜನಕೆಲ್ಲಾ | ಕುಂತ ಹಿರಿಯರ ಮುಂದಾ
ಬಯಾನ ಒಂದ ಬಿಚ್ಚಿ | ಹೇಳುವೆ ಶಾಸ್ತ್ರಲಿಂದ | ಮಾಡಿ ಮಿಗಿಲಾ
ಏರು || ಸಹಜ ಒಂದ ದಿನಾ ನಮಾಜ ಮಾಡಿ ನಬಿ ರಸೂಲಿಲ್ಲಾ
ಹರುಪೀಲಿ ಮಸೂತ್ಯಾಗ | ಸರಸಾದ ಮಿತ್ರರು ಕೂಡಿ ಜೋಡಿಗೆಲ್ಲಾ
ಕುಂತಾರ ಎಲ್ಲಾರು ಮಾತಾಡಿಕೊಂತಾ ಮಾಯಾ ಮಮತಾ ಇಟ್ಟನಗನಗತಾ |
ಅಷ್ಟರೊಳಗ ಬಂದಾನ ಬಾವಾ ಹೊಟ್ಟೆ ಹಸ್ತ | ಆಗಿ ಹಸವಾ |
ಮೂರದಿವಸ ಆತರಿ ದೈವಾ | ಉಂಡಿಲ್ಲಾ | ಹೋಗಿ ಪಾದಾ ಹಿಡಿದಾ ಘಟ್ಟ
ಅಬ್ದುಲ್ಲಾನ ಮನಿಯಾನ ರೊಟ್ಟ | ಉಣಸಿದರ ತುಂಬಿತ ಹೊಟ್ಟಿ ರಸೂಲಿಲ್ಲಾ |
ಕೇಳಿ ಈ ಬಾವಾನ ಮಾತಾ | ಎಲ್ಲಾರು ಕುಂತಾರೊ ಬೆವತಾ || ೧ ||

ನಬಿಸಾಬ ಶರಣರಿಗ್ಹೆಂತ ಬಿತ್ತೊ ದಿಗಲಾ | ನಬಿಸಾಹೇಬ ಹೇಳ್ಯಾರೊ ಪುನಃ
ಎಂಥ ಹುಚ್ಚ ಬಾವಾ ನೀನಾ | ಅಬ್ದುಲ್ಲಾಂದು ನಿನಗೇನ ಖೂನಾ ಹೇಳ ಮೊದಲಾ ||
ಏರು || ಅಂತಾನ ಬಾವಾ ಕೇಳರಿ ದೈವಾ ಮಾತೊಂದ ನಂದಿಷ್ಟಾ
ಭಿಕ್ಷಾ ಬೇಡತೇನಿ | ಲಕ್ಷಕ್ಕೆ ತರವಲ್ಲಾ | ಮೂವರು ದಿವಸ ಸುಟ್ಟಾ
ಹೇಳ್ಯಾರ ನೆರೆಮನಿ ಊರಾನ ಜನಾ | ಆತನ ಹೆಸರಾ | ಅಂವಾ ಮಹಾ ಜೀನಾ
ಧನ ದ್ರವ್ಯ ಸಂಪನ್ನಾ ಕೊಟ್ಟ ಮರೆತ ಭಗವಾನಾ
ಕೈ ಎತ್ತಿ ಕವಡಿ ದಾನಾ ಕೊಟ್ಟವನಲ್ಲಾ
ಹಿಂತಾಮಿತ್ರ ನೀತಿಯ ಕೆಟ್ಟಾ | ನಿಮ್ಮ ಮಂಡಳ್ಯಾಗ ಮುರಿಲಿವುದು ಜಿಬಟಾ
ಶರಣರು ನಿಮ್ಮ ಸಂಗಾಟಾ | ಥರವಲ್ಲಾ || ೨ ||

ಅಬ್ದುಲ್ಲಾ ಮಹಾ ಜೀನಂತಾ ಬಾವಾನು ಹೇಳಿದಂತಾ
ಶರಣರಿಗೆ ಇತ್ತರಿ ಗೊತ್ತಾ | ಅವನ ಕುಶಲಾ | ಅಂದ್ರೊ ಶರಣರು ಎಲ್ಲಾರ ಮುಂದಾ
ಅಬ್ದುಲನ ಮನಿಯಿಂದ ಬಾವಾಗ ಎರಡು ರೊಟ್ಟಿಯ ತಂದು ಕೊಡುವರಿಲ್ಲಾ
ಇಷ್ಟ ಮಾತಾ ಕೇಳಿ ಚಟ್ಟನೆ ಎದ್ದ ಅಬೂಬಕರ ಸಿದ್ದೀಕ
ನಾ ತರತೇನಂತ ಎದ್ದ ಹೋಗ್ಯಾರ ಅಬ್ದುಲ್ಲಾ ಮನಿತನಕ
ಅಬ್ದುಲ್ಲಾಗ ಕೇಳ್ಯಾರ ಹೋಗಿ | ರೊಟ್ಟಿ ಎರಡು ತಂದು ಕೊಡು ಲಗುಬಗಿ
ಹೇಳಿ ಕಳಿಸ್ಯಾರ ರಸೂಲಿಲ್ಲಾ | ಕುಂತಾನ ಒಬ್ಬ ಕಂಗಾಲಾ
ಕೊಡೊ ಶಿವನ ಹೆಸರಿನಮ್ಯಾಲಾ | ನಿರವಾ ಇಲ್ಲಾ
ಅಬೂಬಕರ ಸಿದ್ದೀಕ್ನಮುಂದ | ಹೇಳ್ಯಾನ ಅಬ್ದುಲ್ಲಾ ಬಂದ
ನಮ್ಮ ಮನ್ಯಾಗ ಅಡಗಿ ಇಂದ ಮಾಡೇಯಿಲ್ಲಾ || ೩ ||

ನಾನಾ ಪರಿ ಹೇಳಿದರೆಷ್ಟ | ರೊಟ್ಟಿ ಎರಡು ಕೊಡಲಿಲ್ಲ ದ್ರುಷ್ಟ
ಅಬೂಬಕರ ಸಿದ್ದೀಕ ಹೊಂಟ ಹೋಗ್ಯಾರಲ್ಲಾ | ಅಬೂಬಕರ ಬಂದಾಗ ತಿರುಗಿ
ಉದಾಸಾಗಿ ಮನದಾಗ ಮರಗಿ | ನಬಿಸಾಬಗ ಹೇಳ್ಯಾರ ಹೋಗಿ | ಮಜಾ ತೋರಲ್ಲಾ
ಉಮರ ನಿಂತಾನ ಜರಬೀಲೆ ಅಂತಾನ | ನಾ ಹೋಗಿ ಬರತೇನಿ
ನಾ ಹೋಗಿ ಬೇಶಕ್ಕಾ ಅಬ್ದುಲ್ಲಾನ ಹಂತೇಕ | ರೊಟ್ಟಿ ತರತೇನಿ
ಬಂದಾರ ಅಬ್ದುಲ್ಲಾನ ಮನಿತನಕ | ಬಾವಾನ ದಸಿಂದ ರೊಟ್ಟಿ ಬೇಡುದಕ
ಅಬ್ದುಲ್ಲಾ ತಿಳಿದು ನೋಡೊ ಧರ್ಮಾ | ಜರಾ ದಾನಾ ಮಾಡೋ
ಬಾವಾಗ ಎರಡು ರೊಟ್ಟಿ ಕೊಡೊ | ತತ್ಕಾಲಾ
ನಬಿಸಾಹೇಬ ಕಳಿಸ್ಯಾರ ಹೇಳಿ | ನಿನ್ನ ಮನಿಗೆ ಬಂದೇನಿ ಮರಳಿ
ಸುಮ್ಮನ ಕುಂತಾ ಮಾತಕೇಳಿ ಅಬ್ದುಲ್ಲಾ || ೪ ||

ಉಮರ ಎಷ್ಟು ಮಾಡಿ ಅರಜಾ | ನಾನಾ ಪರಿ ಹೇಳ್ಯಾರ ಸಮಜಾ
ಅಬ್ದುಲ್ಲಾ ಮಾತಿನ ದರ್ಜಾ | ಇಡಲಿಲ್ಲ | ಅಬ್ದುಲ್ಲಾ ಹೇಳಿದ ಚಂದಾ
ತಿರುಗಿ ಉಮರ ಮಸೂತಿಗೆ ಬಂದಾ | ಹೇಳತಾರ ಶರಣರ ಮುಂದಾ | ಮಾಡಿಖುಲ್ಲಾ ||
ಏರು || ಶರಣರು ಕುಂತಾರ | ಉಸ್ಮಾನ ಅಂತಾರ | ಅಪ್ಪಣಿ ಕೊಡರಿ ನನಗ
ನಾ ಹೋಗಿ ಘಟ್ಟಿ | ತರತೇನಿ ರೊಟ್ಟಿ | ಕೊಡುದಿಲ್ಲಾ ಅಂವಾ ಹ್ಯಾಂಗ |
ಇಬ್ಬರ ಕೈಲೆ ತರೂದಾಗಲಿಲ್ಲಾ | ನಾಹ್ವಾದ ಬಳಿಕ ಅಂವಗ ಬಿಡೂದಿಲ್ಲಾ
ಎದ್ದ ಹ್ವಾದ್ರೊ ಉಸ್ಮಾನಾ | ಅಬ್ದುಲ್ಲಾನ ಮನಿತನಾ
ಹೋಗೂತನಕ ತಿನ್ನುತ ಅನ್ನಾ | ಕುಂತಾನಲ್ಲಾ |
ಉಸ್ಮಾನ ಹೊರಗ ನಿಂತಾ | ರೊಟ್ಟಿ ಎರಡು ಬೇಡ್ಯಾರ ತುರತಾ
ಹೇಳತಾನ ಒಳಗ ಕುಂತಾ | ಅಬ್ದುಲ್ಲಾ || ೫ ||

ಊರಾಗ ಮನಿಯೋನ ಹಾಳ ಆಗಿಲ್ಲಾ | ತಿರುತಿರುಗಿ ಬರತೀರಿ ಇಲ್ಲೆ
ಬೇಡೂದು ಬಿಟ್ಟು ಮಂದಿಯಲ್ಲೆ | ರೊಟ್ಟಿ ಇಲ್ಲ ನನ್ನ ಹಂತೇಲಿ | ಕೊಡೂದಿಲ್ಲಾ ||
ದೊಡ್ಡಿಸ್ತನಾ ಮಾಡಿ ಉಸ್ಮಾನ ಕೇಳಿದರ ಹೋಗಿ | ಕೊಡಲಿಲ್ಲಂತ
ಬಲು ಬೇಸತ್ತು ಬಂದ್ರೊ ಉದಾಸಾಗಿ |

ಕೇಳರಿ ಶರಣರು ಹಿಂತವನನ್ನು ದೇಶದ ಮ್ಯಾಲೆ ಕಂಡಿಲ್ಲ ನಾನು
ಕುಂತ್ರೊ ಶರಣರು ಗಪ್‌ಚುಪ್ಪಾ | ಇಂಥಾ ಶಬ್ದಾ ಕೇಳಿ ಸ್ವಲ್ಪಾ
ಅಂತಾರ ಏರಿ ತೋಪಾ | ಅಲಿ ಮೌಲಾ | ಕಳಸರಿ ಶರಣರು ನನ್ನಾ
ರೊಟ್ಟಿ ಎರಡು ತರುವೆನಾ | ಮಾರಿ ತೋರ್ಯಾರಲ್ಲರಿ ಪುನಃ | ಇನ್ನ ಮ್ಯಾಲಾ || ೬ ||

ಇಷ್ಟ ಕೇಳಿ ನಿಷ್ಠರ ಮಾತಾ | ಮೌಲಾ ಅಲಿ ಮಾಡಿ ಶರ್ತಾ
ರೊಟ್ಟಿ ಎರಡು ತರತೇನಂತಾ | ಹೊಂಟಾರಲ್ಲಾ | ಹಾತೊರೆದು ಜರಬಿಲಿಂದಾ
ಅಬ್ದುಲ್ಲಾನ ಮನಿಗೆ ಬಂದು ನಿಂತಾರೊ ಬಾಕಲಮುಂದಾ | ಅಲಿ ಮೌಲಾ ||
ಏರು || ಅಬ್ದುಲ್ಲಾಗ ಹೇಳ್ಯಾರೊ ಬ್ಯಾಗ | ಕೇಳೋ ನನ್ನ ಮಾತಾ
ರೊಟ್ಟಿ ಎರಡು ತಾ ಇಟ್ಟ ಅದರ ಮ್ಯಾಲ ಪದಾರ್ಥ ಸಹಿತಾ
ನಿನ್ನ ಮನಿಗೆ ನಬಿರಸೂಲಿಲ್ಲ ಕಳಸ್ಯಾರ | ನಾ ಬಂದೇನಿ ಅಲಿ ಮೌಲಾ
ಅಬ್ದುಲ್ಲಾ ಅಂದಾ ಬಾಯಿಲಿ | ನನ್ನ ಕೂಡ ಹಚ್ಚಿರಿ ನಕಲಿ
ಎದ್ದಹೋಗಿರಿ ಮೌಲಾ ಅಲಿ | ಕೊಡುದುಲ್ಲಾ
ಮೌಲಾಹೇಳ್ಯಾರ ಬೇಶಕ್ಕ | ತಂದ ರೊಟ್ಟಿ ಕೊಡುತನಕ
ಹೋಗುದಿಲ್ಲ ಹಿಂದಕ್ಕೆ | ನಾ ಬಿಡೂದಿಲ್ಲಾ || ೭ ||

ಉಪವಾಸ ಕುಂತಾನ ಶರಣಾ | ನೋಡೂತ ಆತನ ಧರಣಾ
ಅಬ್ದುಲ್ಲಾಗ ಸ್ವಲ್ಪ ಕರುಣಾ | ಬರಲಿಲ್ಲಾ | ಮುಚ್ಚಿಕೊಂಡ ಬಾಗಿಲಾ
ಒಳಗ ಕುಂತು ಉಂಡಾನಲ್ಲಾ | ಮೌಲಾ ಅಲಿಗೆ ಕರಿಯಲಿಲ್ಲಾ | ಹಂತಾಕುಲ್ಲಾ ||
ಏರು || ಮೀರಿತ ಹೊತ್ತಾ | ರಾತ್ರಿ ಅವತ್ತಾ | ಆಗತಾನ ಅಮಲಾ
ಖುದ್ದ ಮೌಲಾಅಲಿ ಎದ್ದ ಹೋಗಿ ತಂದಾರೊ ದೊಡ್ಡಕಲ್ಲಾ
ತಂದ ಅಬ್ದುಲ್ಲಾನ ಬಾಕಲಕ್ಷಚ್ಚೆ | ಅಳತಿ ಬರೋಬರಿ ಬಿಟ್ಟಾರೊ ಮುಚ್ಚಿ
ಅಬ್ದುಲ್ಲಾ ಮಲಗಿದ್ದ ಒಳಗ ಅಷ್ಟರೊಳಗ ಆತರಿ ಬೆಳಗ
ಎದ್ದ ಬಂದಾನ ನೋಡ್ಯಾನ ಹೊರಗ | ಬಾಗಿಲಾ
ಒತ್ತರತಿ ಹೊರಕಡಗಿ ಉಚ್ಚಿ ಬಂದೀತ ಹಿಡಕೊಂಡಾ ಅಂವಚಿ
ಹ್ವಾದೇನಂದ್ರ ಬಾಗಿಲ ಬಿಚ್ಚಿ | ಹಾದಿ ಇಲ್ಲಾ || ೮ ||

ಅಬ್ದುಲ್ಲಾಗ ಒತ್ತರಿ ಅಗಾದಾ | ಮನಸಿನೊಳಗ ತಿಳಕೊಂಡಾ ಬೇಗ
ಮೌಲಾವಲಿ ಮಾಡಿ ಜಿದ್ದಾ ಕುಂತಾರಲ್ಲಾ | ಒದರಿ ಹೇಳ್ಯಾನ ಅಬ್ದುಲ್ಲಾ
ರೊಟ್ಟಿ ಎರಡು ಕೊಡುತೀನಿ ಮೌಲಾ | ತಗೀರಿ ಮನಿಗೆ ಹಚ್ಚಿದ ಕಲ್ಲಾ ಬೀಳುವೆಕಾಲಾ |
ಏರು || ನಿಂತಾರ ಹೊರಗ ಅಂತಾರ ಮೌಲಾನಿಂದ ಭರೋಸಿಲ್ಲಾ
ಖೊಟ್ಟಿ ಮನುಷಾ ನೀ ಇಟ್ಟಿಸಿ ಮನದಾಗ ರೊಟ್ಟಿ ತಾರೊ ಮೊದಲಾ
ಗದಗದ ನಡುಗುತ ಹೋಗಿ ಅಬ್ದುಲ್ಲಾ |
ರೊಟ್ಟಿ ಎರಡು ತಂದ ಆಗಿ ಖಜೀಲಾ ||
ಯಾರಿಗ್ಹಾರೆ ಹದಿನಾರ ಗಂಟ ತಂದಾ | ಅಲಿಗೆ ರೊಟ್ಟಿಯ ಕೊಟ್ಟಾ
ಮೌಲಾ ತಗೊಂಡ ಹೋಗ್ಯಾರ ಹೊಂಟ | ತಗದ ಕಲ್ಲಾ
ಖುಷಿಲಿಂದ ರೊಟ್ಟಿಯ ತಂದಾ ಇಟ್ಟಾರೊ ಶರಣರ ಮುಂದಾ | ಅಲಿಮೌಲಾ || ೯ ||

ಮೌಲಾವಲಿ ಹೇಳ್ಯಾರೊ ಹಿಗ್ಗಿ | ಮೂರು ಮಂದಿ ಬಂದಾರೊ ತಿರುಗಿ
ತಂದೇನಿ ನಾನು ಹೋಗಿ | ಬಿಡಲಿಲ್ಲಾ | ಈಗ ನಿಮ್ಮ ಕಡಿಗೆ ಐತಿ |
ಬಿಡಿಸಿದವಗ ಕೆಟ್ಟ ನೀತಿ | ಕೊಡುವಂತೆ ಮಾಡಿರಿ ಭಕ್ತಿ | ರಸೂಲಿಲ್ಲಾ
ಏರು | ನಬಿ ರಸೂಲಿಲ್ಲಾ ಆಗಿ ಖುಷಿಯಾಲಾ | ತಂದಿದಂತಾ ಬುತ್ತಿ
ಕರದ ಬಾವಾಗ ಕೊಟ್ಟಾರೊ ಆಗ | ತಮ್ಮ ಕೈಲೆ ಎತ್ತಿ
ನಬಿಸಾಬರು ತಿಳಿದಾರೊ ಆಗ | ಸುದ್ಧಿ ಮಾಡ್ಯಾರೊ ಊರಾನ ಜನಕ
ಹಳೇದೊಂದ ಗೋರಿ ತಗಸಿ | ಹವಳ ಮುತ್ತು ಮಾಣಿಕ ತರಿಸಿ
ಗೋರಿ ತುಂಬ ಬಿಟ್ಟಾರೊ ಹಾಸಿ ರಸೂಲಿಲ್ಲಾ |
ಇದರಾಗ್ಯಾಂವಾ ಮನಗೀದಂವಂಗ ಕೊಡತೇವಿ ತಗದ ಅವಗ
ಸುದ್ದಿಕೇಳಿ ಬಂದಾನ ಬ್ಯಾಗ ಅಬ್ದುಲ್ಲಾ || ೧೦ ||

ಅಬ್ದುಲ್ಲಾ ಹೇಳ್ಯಾನೊ ಹೀಂಗ | ಮಲಗೂವೆ ನಾ ಗೋರ್‍ಯಾಗ
ಹವಳ ಮುತ್ತು ಕೊಡಬೇಕ ನನಗ ತುಂಬಿದೆಲ್ಲಾ
ಶರಣರು ಆಗ್ಯಾರೊ ಕಬೂಲಾ | ಆಸೇಕ ಬಿದ್ದ ಅಬ್ದುಲ್ಲಾ
ಗೋರ್‍ಯಾಗ ಹೋಗಿ ಮಲಗಿದ ಮ್ಯಾಲಾ | ಹೋತೋ ಉಸಲಾ ||
ಏರು || ತಾಸಿನ ಮ್ಯಾಲ ನಬಿ ರಸೂಲಿಲ್ಲಾ | ಗೋರಿಹಂತೇಲಿ ಹೋಗಿ
ಗೋರಿಯ ಒಳಗಿಂದ ತಗದಾರೊ ಆಗ | ಸತ್ತ ಹೆಣಕ ಬಗ್ಗಿ
ಮಂತರ ಓದಿ ಜೀವಾ ತುಂಬಿಸಿ | ಕೇಳ್ಯಾರ ಅಬ್ದುಲ್ಲಾಗ ರಂಬಿಸಿ
ಮಲಗಿದಲ್ಲೆ ಗೋರ್‍ಯಾಗ ಏನ ಕಾಣ ಬಂತೊ ನಿನಗ
ಅದು ಎಲ್ಲಾ ಹೇಳೊ ನಮಗ ಬಿಚ್ಚಿಖುಲ್ಲಾ ||
ಏನು ಹೇಳಲಿ ಗೋರ್‍ಯಾನ ಗೋಳಾ | ಬರುವಾಗ ಬೆಂಕಿ ಝಳಾ
ಹಂಚ ಎರಡು ಬರತಿದ್ವು ನಿವ್ವಳಾ | ಎಡಾ ಬಲಾ || ೧೧ ||

ಅಂದ್ರೊ ನಬಿ ರಸೂಲಿಲ್ಲಾ | ಹಂಚಿಲ್ಲೊ ಕೇಳೋ ಅಬ್ದುಲ್ಲಾ
ಅದು ಒಂದು ಪುಣ್ಯದ ಫಲಾ | ಆಗಿ ಶಾಮೀಲಾ ಬರತಿದ್ವು ಎರಡು ರೊಟ್ಟಿ
ಬಾವಾಗ ದಾನಾ ಕೊಟ್ಟೆ | ಕೈಯೆತ್ತಿ ಮನಾ ಮುಟ್ಟೆ ತಂದ್ರೊ ಮೌಲಾ
ಏರು || ಹೇಳಿ ಅಬ್ದುಲ್ಲಾ ಆಗಿ ಖುಶಾಲಾ | ತನ್ನ ಮನಿಗೆ ಹೋದಾ
ಬಿಟ್ಟಾನ ಕರ್ಮಾ ಮಾಡ್ಯಾನ ಧರ್ಮಾ | ಸರೂ ಎಲ್ಲಾ ಜಿಂದಗಿ
ಬಿಟ್ಟ ಪರಪಂಚ ಎಲ್ಲಾ ಶರಣರ್ಹಂತೇಲಿ | ನಮಾಜ ಮಾಡುವಾ ರಾತ್ರಿಹಗಲಿ |
ಎತ್ತಿ ಬಾಗಿಲ್ಹಚ್ಚಿದ ಮೌಲಾ | ಹಮ್ಮ ಚೌಕ ಇತ್ತರಿ ಕಲ್ಲಾ
ಉದ್ದೆಷ್ಟು ಅಡ್ಡ ಅಗಲಾ ಇತ್ತೋ ತೋಲಾ | ಹೇಳೋ ಹೆಸರ ಕಲ್ಲಿನ ಒಡದಾ
ಮಡ್ಡಿ ಪೀರಾನ ಪಾದಾ ಹಿಡದಾ | ಹುಸೇನ ಮಿಯಾ ಬಿಟ್ಟಾರ ಜಡದ ಸವಾಲಾ || ೧೨ ||

* * *

## ೧೫. ಮೌಲಾಲಿಯ ಗರ್ವಭಂಗ

ಕೂಡಿ ಕುಂತಿರಿ ಪಂಡಿತರೆಲ್ಲಾ ಸಾರಿ ಹೇಳುವೆನಲ್ಲಾ
ಏನಚಂದ ಆನಂದದಿಂದ ಬಂದ ಕೂಡಿರಿ ದೈವೆಲ್ಲಾ ||
ಏರು || ಶೂರ ಮೌಲಾ ಅನಸ್ಯಾರಲ್ಲಾ ಕಸುವಿನೊಳಗ ಮೇಲಾ
ನನ್ನ ಸರಿ ಕಸುವಿನೊಳಗ ಯಾರು ಇಲ್ಲೊ ಜಗದೊಳಗ
ಭೂಮಿಗೆ ಸುತ್ತಿ ಸುರಳಿಮಾಡಿ ಅರವಿ ಒಗಿಬೇಕಂತಾನ್ರಿ ಮೌಲಾ
ನಿಂದ್ರಾಕ ಆಧಾರ ನನಗ ಇಲ್ಲ ಅಂತಾರ್ರಿ ಮೌಲಾ || ೧ ||

ಇ || ಗರುವ ಮೌಲಾಗ ಬಂದೀತಲ್ಲಾ ನಾನೇ ಜಗಕ ಮಿಗಿಲಾ
ಅವನ ಗರುವ ಮುರಿಯುದಕ ಶಿವಾ ಒಂದ ತಗದಾನೊ ಅಕಲಾ ||
ಏರು || ಜಿಬ್ರಾಯಿಲ ಕರದಾನೊ ಅಲ್ಲಾ ಲಗುಹೋಗು ನೀ ಮೊದಲಾ |
ಭೂಮಿ ಆಕಾಶ ತೂಕಾ ಹಣ್ಣು ಮಾಡೊ ಹದಿನಾಲ್ಕಾ
ಬುಟ್ಟಿಗೆ ಹಾಕಿ ಬೇಗ ಒಯ್ಯೊ ಮರ್ತ್ಯೇಕ ಈಗ
ನಾನೇ ಮೇಲ ಅಂತಾನೊ ಮೌಲಾ | ಈಗ ಲಗು ಹೋಗೊ ಮೊದಲಾ || ೨ ||

ಇ || ಜಿಬ್ರಾಯಿಲ ಹೊಂಟಾನಲ್ಲಾ | ಬುಟ್ಟಿತಲಿಯ ಮೇಲಾ
ಮುದಕಿ ರೂಪಾ ಆಗಿ ಜಿಬ್ರಾಯಿಲ ಇಳದಾನಿ ಅಸಲಾ |
ಏರು || ಅಲಿಮೌಲಾ ಹೊಂಟಾನಲ್ಲಾ ಯಾರ್‍ಯಾರ ಕಬರಿಲ್ಲಾ
ಬುಟ್ಟಿ ಇಟಗೊಂಡ ಜಿಬ್ರಾಯಿಲ ನಿಂತಾನ್ರಿ ದಾರಿಯ ಮೇಲಾ |
ಬುಟ್ಟಿ ಹೊರಸ ಬಾರೊ ಮೌಲಾ ನನಗ ಹೊರಸವರ್‍ಯಾರಿಲ್ಲಾ ||
ಮೌಲಾ ನೋಡಿ ಹೋದಾನ ಓಡಿ ಆಗ ಕೇಳರಿ ದೈವೆಲ್ಲಾ || ೩ ||

ಇ || ಎಡಗೈಲಿ ಎತಿವ್ಯಾನೊ ಬುಟ್ಟಿ ಅಗಳಾಡಲಿಲ್ಲಾ ||
ಗಾಬಾಗಿ ಹೌಹಾರಿ ಮೌಲಾ ನಿಂತಾನ್ರಿ ಅಸಲಾ ||
ಏರು || ಎರಡು ಕೈಲೆ ಬುಟ್ಟಿ ಮೌಲಾ | ಹಿಡಿದು ಎತಿವ್ಯಾನಲ್ಲಾ
ಒಳಕಸುವಿಲೆ ನೆಗವ್ಯಾನಲ್ಲಾ | ಮೊಣಕಾಲ ಮೇಲೆ ಬಂತಲ್ಲಾ
ಮೂರ್ಚೆ ಬಂದು ಬಿದ್ದಾನೊ ಮೌಲಾ | ಬಿದ್ದಿತೊ ಮೌಲಾಗ ದಿಗಿಲಾ
ಲಗುಮಾಡಿ ಕೈಊರಿ ಒದ್ದಾಡಿ ಎದ್ದಾನೊ ಮೌಲಾ || ೪ ||

ಇ || ನಗತಾಳೊ ಮುದುಕಿ ಮೌಲಾನ ನೋಡಿ | ಕಸುವ ತಿಳಿದಿತೊ ಮೌಲಾ
ನಾನೇ ಮೇಲಾ ಅಂತಿದ್ದಿ ಮೌಲಾ ನೀನ ಜಗದೊಳಗ ಮೇಲಾ ||
ಏರು || ಎಡಗೈಲೆ ಎತಗೊಂಡ ಮುದುಕಿ | ಬಡಗಿ ಊರೂತ ಹೊಂಟಾಳಲ್ಲಾ
ಹೌಹಾರಿ ಮೌಲಾ ನಿಂತಾನಲ್ಲಾ | ಮುದುಕಿ ನೋಡೂತ ಅಸಲಾ
ಮನಸಿಗೆ ಕೆಟ್ಟ ಆಗಿ ಹೊಂಟಾ | ನಾನು ಜಲ್ಮಾ ಇಡೂದಿಲ್ಲಾ ||
ತಲಿಕಟ್ಟಿ ಮಲಗ್ಯಾನೊ ಮೌಲಾ ಕೇಳರಿ ದೈವೆಲ್ಲಾ || ೫ ||

ಬೀಬಿ ಖಾತೂನ ನೋಡಿ ಗಂಡನ್ನ ಊಟಕ್ಕ ಏಳ್ರಿ ನೀವಿನ್ನಾ |
ಅಂದೊ ಮೌಲಾ ಊಟಾ ಮಾಡುದುಲ್ಲಾ ಅಂತಾನ್ರಿ ಖುಲ್ಲಾ |

ಏರು || ಫಾತಿಮಾಗ ಬಿದ್ದಿತೊ ದಿಗಿಲಾ ಗಾಬಾಗಿ ನಿಂತಾಳಲ್ಲಾ ||
ಹಸೇನ ಹುಸೇನರ ಕರದಾಳಲ್ಲಾ ಬರ್ರಿ ನನ್ನ ಕಮಲಾ ||
ನಿಮ ತಂದಿ ಉಣವಲ್ಲಾ ಅಜ್ಜನ ಕರೀರೊ ನೀವು ಮೊದಲಾ
ಎರಡು ಬಾಲಾ ಹೊಂಟಾರಲ್ಲಾ | ಶರಣರಿಗೆ ಕರಿಯುದಕ ಅಸಲಾ || ೬ ||

ಇ || ನಬಿರಸೂಲಿಲ್ಲಾ ಕುಂತಾರಲ್ಲಾ ಜಪಾ ಮಾಡೂತ ಅಸಲಾ
ಬಾರೋ ನಾನಾ ಅಂತಾರೊ ಹಸೇನ ಹುಸೇನ ಅಪ್ಪ ಉಣವಲ್ಲಾ
ಏರು || ನಬಿರಸೂಲಿಲ್ಲಾ ಹೊಂಟಾರಲ್ಲಾ ಮೊಮ್ಮಕ್ಕಳ ಹಿಂಬಾಲಾ
ಬೀಬಿ ಫಾತಿಮಾ ನಿಂತಾಳಲ್ಲಾ ದಾರಿ ಕಾಯುತ ಅಸಲಾ
ಬಾರೋ ನನ್ನ ಪ್ರೇಮದ ಬಾಲಾ | ನಿನ್ನ ಅಳಿಯ ಉಣವಲ್ಲಾ
ರಸೂಲಿಲ್ಲಾ ಕೇಳ್ಯಾರಲ್ಲಾ ಯಾಕ ಮಲಗಿಯೊ ಮೌಲಾ || ೭ ||

ಇ || ಅಂತಾರೊ ಮೌಲಾ ಭೂಮಿಯ ಮೇಲಾ ಜಲ್ಮಾ ನಾನು ಇಡೂದಿಲ್ಲಾ
ಈಗ ಶೂರ ಮೌಲಾ ಅನಿಸಿದ್ದನಲ್ಲಾ | ನಾನು ಜಗದೊಳಗ ಮೌಲಾ
ಏರು || ಬುಟ್ಟಿ ಇಟಗೊಂಡ ದಾರಿಯ ಮೇಲಾ | ಮುದುಕಿ ಕುಂತಿದ್ಲು ಅಸಲಾ
ಬಾರ ಮೌಲಾ ನನ ಬುಟ್ಟಿ ಹೊರಸವರ್ಯಾರಿಲ್ಲಾ |
ಮುದುಕಿ ನೋಡಿ ನಾನು ಓಡಿ ಹೋಗಿ ನೋಡದರೊಳಗ
ಹದಿನಾಲ್ಕು ಹಣ್ಣು ಇದ್ದವು ಬುಟ್ಟಿಯೊಳಗ ಅಸಲಾ || ೮ ||

ಇ || ಎರಡು ಕೈಲೆ ನೆಗವಿದನಲ್ಲಾ | ಮೊಣಕಾಲ ಮೇಲೆ ಬಂತಲ್ಲಾ
ಮೋರ್ಚ ಬಂದು ಬಿದ್ದೆಲ್ಲಾ | ನನ್ನ ಕಸುವು ನಡಿಯಲಿಲ್ಲಾ
ಕೂಡಿದಜನಾ ನಕ್ಕರಲ್ಲಾ | ಕಸುವು ಮೌಲಾಂದು ತಿಳಿದೀತಲ್ಲಾ ||
ನಬಿರಸೂಲಿಲ್ಲಾ ಅಂತಾರಲ್ಲಾ | ಜಗಕ್ಕೆ ನೀನೆ ಮೀಗಿಲಾ |
ಬುಟ್ಟಿಯೊಳಗಿನ ಹದಿನಾಲ್ಕು | ಹಣ್ಣಾ | ಭೂಮಿ ಆಕಾಶದ ವಜನಾ |
ಕಸುವು ನಿಂದು ನೋಡುವುದಕ್ಕೆ ಜಿಬ್ರಾಯಿಲಗ ಕಳಿಸಿದ್ನೊ ಅಲ್ಲಾ || ೯ ||

ಇ || ಭೂಮಿ ಆಕಾಶ ತೂಕಾ | ತೂಕ ಮೊಣಕಾಲ ಮೇಲೆಬಂದ ಬಳಿಕ
ನೀನೆ ಮೇಲಾ ಅನಿಸಿದಿ ಮೌಲಾ | ಏಳೊ ಊಟಕ್ಕ ಮೊದಲಾ ||
ಏರು || ರಸೂಲಿಲ್ಲಾಂದು ಕೇಳಿ ಮೌಲಾ | ಮೌಲಾನ ಮನ ಶಾಂತಾ
ಎಲ್ಲರೂ ಕೂಡಿ ದುಆ ಬೇಡಿ ಊಟ ಮಾಡ್ಯಾರಲ್ಲಾ
ಸ್ವಲ್ಪ ಸಂದ ಮುಗಿಸಿನಿ ಚಂದ ಕವಿ ಮಾಡಿ ಕಟಿ ಬಂದ
ತಪ್ಪ ತಡಿ ಆದರ ನುಡಿ ನೀವು ಕ್ಷಮಿಸಿ ದೈವೆಲ್ಲಾ || ೧೦ ||

ಇ || ಬಟಕುರ್ಕಿ ಐತಿ ವಾಹಿನಿ ಇರುವದು ಗುರುವಿನ ಸ್ಥಾನ
ದಾವಲಪೀರಾನ ನೆನೆದಾರಲ್ಲಾ ಬಂದ ಬಹುಚಂದ ಅಸಲಾ ||
ಏರು || ಜರದ ಸೇಲಾ ಹೂವಿನ ಮಾಲಾ | ಸದರಿಗೆ ಹಾಕುವೆನಲ್ಲಾ
ಬೇಡಿದ ವರವ ಕೊಡುವನಲ್ಲಾ ಭಕ್ತ ಜನರಿಗೆಲ್ಲಾ

ಬಂದಗಿಸಾಹೇಬ ಪೀರಾ ಕವಿ ಅನಿಸ್ಯಾರ ದೇಶದ ಮ್ಯಾಲಾ
ಜಾಹೀರ ಅವರ ಇರುವತನಕ ನಮಗ ಏನು ಭಯವಿಲ್ಲಾ || ೧೧ ||

* * *

## ೧೬. ಫಾತಿಮಾ ಕಂಠಿ ಸರ ದಾನ ಮಾಡಿದ ಪದಾ

ಚಿತ್ತಿಟ್ಟ ಕೇಳರಿ ನೀವು ಕುಂತಿರು ದೈವೆಲ್ಲಾ
ಆ ಮೌಲಾನಕ್ಕಿಂತ ಭಕ್ತಿ ಹೆಚ್ಚಿನ ದಿನ್ ಮೌಲಾ
ಏರು || ಬಡವ ಒಬ್ಬ ಕಂಗಾಲಾ | ಭೂದಿ ಹಚ್ಯಾನ ಮೈಯೆಲ್ಲಾ
ಬಾವಾನ ಹಂಗಾ ಜಪಮಣಿ ಹಿಡಿದಾನ ಕೈಯಾಗ
ಶಿವಶಿವ ಅನ್ನುತ ನಡಿದಾನೋ | ಶಿವ ಮಾರ್ಗದ ಮೇಲಾ || ೧ ||

ಮದೀನಾದ ಪ್ಯಾಟಿಯೊಳು ಬಂದು ನಿಂತನಲ್ಲಾ
ಮುಂದಕ್ಕ ಫಾತಿಮಾನ ಮನಿಯು ಕಾಣತಿತ್ರಿ ಖುಲ್ಲಾ ||
ಏರು || ಬಂದು ನಿಂತಾನೊ ಬಾಗಿಲದಾಗ | ಸವ್ವಾಲ ಮಾಡ್ಯಾನೋ ಆಗ
ಖಾತೂನಗ ಕೊಡರೆನ್ನುತ ಭಿಕ್ಷಾ | ಆಸೆಮಾಡಿ ಬಂದೇನಿ ಈಗ
ಹೇಸಿ ಜನ್ಮಕ ಉಣಲಾಕ ಅಸನವೇನಿಲ್ಲಾ || ೨ ||

ಬಾವಾ ಒದರೀದ ಸಲ್ಲಾ | ಕಾತೂನ ಕೇಳ್ಯಾಳಲ್ಲಾ
ಹುಡಿಕ್ಯಾಳೊ ಮನಿಯನೆಲ್ಲಾ | ಏನೇನು ಸಿಗಲೆಲ್ಲಾ
ಚಿಂತಿಯ ಮಾಡುತಲಿ | ನೋಡ್ಯಾಳೋ ಕೊರಳಲ್ಲಿ
ಇತ್ತೊಂದು ಮುತ್ತಿನ ಕಂಠಿಸರಾ ತೆಗೆದುಕೊಟ್ಟಾಳಲ್ಲಾ ||
ಏರು || ಕಂಠಿಯ ಚಲುವಿಕಿ ಮಾಡಿದ್ಹಾಂಗ ಚಂದ್ರನ ಜ್ಯೋತಿ
ಬೆಳಕ ಭೂಮಿಯ ಮ್ಯಾಲಾ | ನೋಡಿ ನಾಚಿತೋ ಮುಗಲೆಲ್ಲಾ ||
ಇಂಥ ರತ್ನದ ಬೆಲೆಯ ಮಾಡುವರ‍್ಯಾರಿಲ್ಲಾ || ೩ ||

ಕಂಠಿಸರ ಬಾವಾ ಕೊರಳಲ್ಲಿ ಹಾಕಿಕೊಂಡನಲ್ಲಾ
ಇಂದಿಗೆ ಬಡತನ ನಂದು ಆದಿತೋ ನಿರ್ಬಯಲಾ
ಏರು || ಬಂದಾನೋ ಓಡಿ ಓಡಿ ಪ್ಯಾಟ್ಯಾಗ ಲಗುಮಾಡಿ
ಕಂಠಿಸರ ಈಗ ಮಾರತೇನಿ | ಇಂದಿಗೆ ಸಾವುಕಾರ ಆಗತೇನಿ
ಮಕ್ಕಳ ಮದುವಿ ಮಾಡಿ ಇರತೇನಿ ರಂಗಲಾಲಾ || ೪ ||

ಬಾವಾನ ಆಕಾರ ಶಿವಗ ತಿಳಿದೀತಲ್ಲಾ
ಸಮುದ್ರಕ ಅಪ್ಪಣೆ ಮಾಡಿ ಅಡ್ಡಗಟ್ಯಾನಲ್ಲಾ
ಏರು || ಬಂದಣ ಆದ ಜಿಬರಾಯಿಲ | ತಿರುವ್ಯಾನೋ ಸಮುದ್ರದ ಕೀಲಾ

ಸಮುದ್ರವು ಆಗ ಹೊರಳುತಲಿ | ಬಾವಾ ಬಂದಾನೋ ದಂಡಿಮ್ಯಾಲಾ
ತಲಿಬಾಗಿಸಿ ಮಾರಿ ತೊಳುವಾಗ ಮಾಲಿ ಬಿದ್ದಿತಲ್ಲಾ || ೫ ||

ಗಾಬರ್‍ಯಾಗಿ ಬಾವಾ ಆಗ ಹುಡುಕಿದ ಲಗುಬ್ಯಾಗ
ಎಷ್ಟು ಹುಡುಕಿದರೂ ಕಂಠಿಸರ ಪತ್ತೆ ಆಗಲಿಲ್ಲಾ
ಏರು || ನೀ ನನ್ನಮಾಲಿ ಮೀನ ಬಂದು ನುಂಗಿತೋ ಹಾಲಿ
ಆದನೊ ಹುಚ್ಚಪ್ಯಾಲಿ ಆಶಾ ನಿರಾಶಾತ್ರಿ ಖಾಲಿ
ಹುಚ್ಚನ ಗತಿ ಬಾವಾ ನೋಡತಾನ್ರಿ ಮುಗಲಾ || ೬ ||

ಬ್ಯಾಟಿಯ ಆಡಾಕ ಒಬ್ಬ ಅಂಬಿಗ ಬಂದಾನಲ್ಲಾ
ಉದ್ದ ನೀರ ನೋಡಿ ಒಗಿದಾನೋ ಅದ ಜಗದ ಮ್ಯಾಲಾ
ಏರು || ನೂಲಿನ ಜಾಲಾ ನೀರಾಗ ಇಳಿದೀತೋ ತೋಲಾ
ಜಾಲದೊಳು ಸೇರಿತೋ ಮೀನಾ | ಬ್ಯಾಟೆಗಾರ ಆದಾನೋ ಖುಷಿಯಾಲಾ
ಮೆಲ್ಲಕ ಎಳತಂದು ಜಾಲಾ | ಒಗದಾನೋ ದಂಡಿಮ್ಯಾಲಾ || ೭ ||

ಮೀನಕ್ಕ ನೋಡಿ ಅಂಬಿಗ | ಆದಾನೋ ಖುಷಿಯಾಲಾ
ಪ್ರೀತೀಲೆ ಬುಟ್ಯಾಗ ತುಂಬಿ | ಅರಬಿ ಮುಟ್ಯಾನ ಮ್ಯಾಲಾ
ಏರು || ಬಂದಾನಲ್ಲಿ ಓಡಿಓಡಿ ಪ್ಯಾಟ್ಯಾಗ ಲಗುಮಾಡಿ
ಮೀನವ ಮಾರುದಕ ಅಲಿಮೌಲಾ ಬಂದಾನೋ ಅದಕ
ಬೆಲಿಮಾಡಿ ಕೊಂಡಾನ ಮೀನಾ | ಮನಿಗೆ ತಂದಾನಲ್ಲಾ || ೮ ||

ಅಂದಾರೋ ಖಾತೂನಗ ಬೇಗನೆ ಅಲಿಮೌಲಾ
ಅಡಗೀಯ ಮಾಡರಿ ನೀವು ತೊಳೆದು ಇದನ್ನು ಅಸಲಾ
ಏರು || ಅಂದಾರೋ ಬಿಸಮಿಲ್ಲಾ ಮೀನಕ್ಕ ತೊಳೆದಾರೊ ಅಸಲಾ
ಕಂಠಿ ಬಂದಿತರಿ ಮ್ಯಾಲಾ ಖಾತೂನ ನೋಡ್ಯಾಳರಿ ಇದನೆಲ್ಲಾ
ಅಂದಾರೋ ನೆನನೆನಸಿ ಶಿವಕೊಟ್ಟ ಮಾಲಿ || ೯ ||

ಬಾಗಲಕೋಟಿ ಪ್ಯಾಟಿ ಇರುವದು ರಂಗಲಾಲಾ
ಹೂವಿನ ಹಚ್ಚಡ ಹೊಚ್ಚಿರಿ ಮಡ್ಡಿಪೀರನ ಮ್ಯಾಲಾ ||
ಭಕ್ತಿಗೆ ಒಲಿದಾರಲ್ಲಾ | ಹುಸೇನಮಿಯಾ ನಮ್ಮ ಮ್ಯಾಲಾ

* * *

## ೧೭. ಫಾತಿಮಾನ ಬಡತನದ ಲೀಲಾ

ನೀವು ಕೂಡಿರಿ ದೈವವೆಲ್ಲಾ | ಎಷ್ಟು ಆನಂದ ಖುಷಿಯಾಲಾ
ದಯವಿರಲಿ ನಮ್ಮ ಮ್ಯಾಲಾ | ಕೈಯ್ಯ ಮುಗಿದು ಬೇಡುವೆನಲ್ಲಾ ||
ಏರು || ಅಕ್ಕ ತಂಗಿಯರು ಅಣ್ಣ ತಮ್ಮಂದಿರು ಬಂದು ಕೂಡಿರಿ ಪಂಡಿತರು |

ಪ್ರೇಮದಿಂದಾ ಆನಂದದಿಂದಾ | ಕುಂತ ಕೇಳರಿ ಶಾಂತದಿಂದಾ |
ಸಂದ ಒಂದ ಹೇಳುವೆ ಇಂದಾ | ಕವಿ ಮಾಡಿ ಕಟ ಬಂದಾ |
ತಪ್ಪ-ತಡಿ ಆದರ ನೋಡಿ ಮಾಫಿ ಮಾಡಿರಿ ದೈವವೆಲ್ಲಾ || ೧ ||

ಏರು || ಬೀಬಿ ಫಾತಿಮಾ ಕುಂತಾಳಲ್ಲಾ | ಮಕ್ಕಳನು ಹಾಕಿಕೊಂಡು ತೊಡಿಮ್ಯಾಲಾ
ಎರಡು ಬಾಲಾ ಅಳತಾವಲ್ಲಾ | ಮಲಗಿ ತಾಯ ತೊಡಿಮ್ಯಾಲಾ |
ಸಣ್ಣ ಸಣ್ಣ ಕಮಲಾ ಹೊಟ್ಟಿಗೆ ಕೂಳಿಲ್ಲಾ |
ತಾಯಿ ಮುಕಾ ನೋಡಿ ಕಮಲಾ | ಅಳತಾವೊ ಅಳತಿಯಿಲ್ಲಾ || ೨ ||

ಏರು || ಬೀಬಿ ಫಾತಿಮಾ ಅಂತಾಳಲ್ಲಾ | ಅಳಬ್ಯಾಡ್ರೋ ನನ್ನ ಕಮಲಾ
ಮಾಡೂನು ಊಟಾ ಮಾಡಬ್ಯಾಡ್ರಿ ಹಟಾ | ಉಣ್ಣಾಕ ಕೊಡತೇನಿ ಮಾಡಿ ತಾಟಾ
ತಾಯಿ ಮಾತ ಕೇಳಿ ಕಮಲಾ | ಹರುಷಾಗಿ ಮಲಗುವರಲ್ಲಾ
ಮಕ್ಕಳ ನೋಡುತ ನಮಾಜ ಮಾಡುತ ಶಿವಧ್ಯಾನದಲ್ಲಿ ಕುಂಡ್ರುವಳಲ್ಲಾ | ೩ ||

ಏರು || ಎಷ್ಟೋ ಕಷ್ಟಾ ಬಂದರ ಸಹಿತಾ | ನಮಾಜ ಮಾಡುರೊ ಐದು ಹೊತ್ತಾ
ಬೀಸುವ ಕೆಲಸಾ | ಕುಟ್ಟುವ ಕೆಲಸಾ | ದಿನಾ ನಿತ್ಯ ಮಾಡುವ ಕೆಲಸಾ |
ಬೀಸಿ ಬೀಸಿ ಕೈಯಲ್ಲಿ ದಡ್ಡು | ದೊಡ್ಡ ದೊಡ್ಡ ಕೂಲಿಯ ಕೆಲಸಾ |
ಮಾಡುರೊ ದಿವಸಾ | ಕೌದಿ ಹೊಲಿತಿದ್ರೊ ರಾತ್ರಿ ಹಗಲಾ || ೪ ||

ಏರು || ದೀಪಾ ಹಚ್ಚುದಕ ಎಣ್ಣಿ ಮನಿಯಾಗ ಇದ್ದಿದ್ದಿಲ್ಲೊ ಫಾತಿಮಾಗ
ಕತ್ತಲದೊಳಗ ಕುಂಡ್ರುವರೊ ಒಳಗ ಮೂರು ಮೂರು ದಿನಾ |
ಕತ್ತಲಕಾಳಗ | ಅಂಥವರಿಗೆ ಇಂಥಾ ಹೊತ್ತಾ ತಂದಿದ್ನೊ ಭಗವಂತಾ |
ಎಂಥಾ ಹೊತ್ತು ಬಂದರು ಸಹಿತ ಸಾಂಬನ ನೆನಿಸೋರೊ ರಾತ್ರಿ ಹಗಲಾ || ೫ ||

ಏರು || ಉಡತೊಡಲಾಕ ಅರಿಬಿ ಮನಿಯಾಗ ಹೆಚ್ಚಿಗೆ ಏನು ಇರತಿದ್ದಿಲ್ಲಾ |
ತ್ಯಾಪಿಸೀರಿ ಉಡತಿದ್ರೊ ನೋಡ್ರಿ ನಬಿಸಾಹೇಬ್ರ ಪ್ರೇಮದ ಪುತ್ರಿ
ಫಾತಿಮಾಂದು ಕಷ್ಟ ನೋಡಿ ಅಳತಿದ್ರೊ ಶಿವದೂತರು ಕೂಡಿ
ಎಷ್ಟೋ ಕಷ್ಟ ಬಂದರ ಸಹಿತಾ | ದಾನ ಧರ್ಮಾ ಮಾಡುವಳಲ್ಲಾ || ೬ ||

ಏರು || ಊಟ ಮಾಡುದಕ ಪಾತ್ರಿ ಇರ್‍ಲಿಲ್ಲಾ | ಮಣ್ಣಿನ ಪಾತ್ರಿ ಒಳಗ ಉಣ್ಣುವರಲ್ಲಾ |
ಚಾಪಿ ಹುಲ್ಲಿಂದು ಮಾಡದೊಳೊಂದ | ನೋಡಿರಿ ಬಡತನ ಫಾತಿಮಾಂದು
ಬಹಳ ಕಷ್ಟ ಸೋಸ್ಯಾರಲ್ಲಾ | ನಬಿಸಾಹೇಬರ ಪ್ರೇಮದ ಕಮಲಾ |
ಎಷ್ಟು ಬರದರು ತೀರೂದಿಲ್ಲಾ | ಫಾತಿಮಾಂದು ಬಡತನ ಲೀಲಾ || ೭ ||

ಏರು || ಎಷ್ಟು ಕಷ್ಟ ಬಂದರ ಸಹಿತಾ | ಕುಂದರ ಬಾರದೊ ಸಾಂಬನ ಮರತಾ
ನಮಾಜ ರೋಜಾ ಮಾಡೊ ಮನುಜಾ | ಸಿಗತೈತಿ ನಿನಗ ಸ್ವರ್ಗದ ಮಜಾ
ಅಹಂಕಾರ ಚೆಲೊದಲ್ಲಾ ನಾ ಅಂಬುದು ನರಕದ ಫಲಾ |
ಎಷ್ಟೊ ಜನರಾ ಮಾಡಿ ಅಹಂಕಾರಾ | ಹೋಗ್ಯಾರೊ ನರಕದ ಫಲಾ || ೮ ||

ಏರು || ಕವಿ ಕಟಬಂದ ಬರದಾರೋ ಚಂದಾ | ಬಂದಗಿ ಸಾಹೇಬರು ಖುಷಿಲಿಂದಾ
ಅವರ ವರಣಾ ಹೇಳಲಿ ಏನಾ | ತಾಲೂಕದೊಳಗ ಕವಿರತನಾ |
ಹಚ್ಚತಾರೊ ಹೊಸ ಹೊಸ ಚ್ಯಾಲಾ | ಕೇಳಿದವರು ಖುಷಿಯಾಲಾ |
ಅವರಿಗೆ ಶರಣಾ ಮಡುವೆ ನಾನಾ | ಪ್ರೇಮದಿಂದ ಖುಷಿಯಾಲಾ || ೬ ||

* * *

## ೧೮. ಮಹಮ್ಮದರ ಶಿಷ್ಯರಿಗೆ ಸ್ವರ್ಗ

ಇ || ಪ್ರೇಮದಿಂದ ಬಂದು | ನೀವು ಕೂಡಿರಿ ಏನು ಚಂದಾ ||
ಕೈಮುಗಿದು ಬೇಡುವೆ ಇಂದಾ | ಕಂದಾ |
ಏರು || ಪ್ರೇಮ ಇರಲಿ ನಮ್ಮ ಮೇಲೆ | ಬಂದೇನಿ ನಿಮ್ಮಲಿ
ಹರುಷದಿಂದಲಿ ಹೇಳುವೆ ಇಂದಾ | ಆಖ್ಯಾನ ಒಂದಾ
ಕೇಳರಿ ಕುಂತ ಆನಂದದಿಂದಾ || ೧ ||

ಇ || ಹಸೇನಿ ಹುಸೇನಿ ಸಂದಾ | ಹೇಳುವೆ ನಿಮ್ಮ ಮುಂದಾ
ಮುತ್ತು ರತ್ನಾದಂಥಾ ಕಂದಾ ಚಂದಾ ||
ಏರು || ತೊಟ್ಟಿಲದೊಳಗ ಮಲಗಿದರಲ್ಲಾ | ಮುತ್ತು ರತ್ನಾ ಕೆಚ್ಚಿದಂಥಾ ತೊಟ್ಟಿಲಾ
ಫಾತಿಮಾ ಬಂದು ತೂಗ್ಯಾರೆ ಚಂದಾ | ಜೋಗುಳ ಹಾಡಿ ಆನಂದದಿಂದಾ || ೨ ||

ಇ || ಎಚ್ಚರಾಗಿ ಎದ್ದ ಅಳತಾರೊ ಹಟಾ ತಗದು ರಂಭಸ್ತಾಳ್ರಿ
ಫಾತಿಮಾ ಬಂದಾ ಚಂದಾ ||
ಏರು | ಎಷ್ಟು ತೂಗಿದರು ಕೇಳಲಿಲ್ಲಾ | ಚಿಟ್ಟ ಚಿಟ್ಟ ಚೀರಿ ಅಳತಾನಲ್ಲಾ
ಬಗಲೊಳಗೆ ಎತ್ತಿಕೊಂಡು | ಗಲ್ಲಾ ತುಟಿ ಹಿಡಿದು
ಗಾಬಾಗಿ ಅಳತಾಳ್ರಿ ದುಃಖದಿಂದಾ || ೩ ||

ಇ || ಭೂಮಿ ಆಕಾಶದಿಂದಾ | ಸಪ್ಪಳ ಬಂದಿತೋ ಒಂದಾ
ಹಸೇನ ಹುಸೇನಿ ಅಳತಾರಲ್ಲಾ ಇಂದಾ
ಏರು || ಹಸೇನ ಹುಸೇನಿ ಅಳುವುದು ನೋಡಿ
ಯಮದೂತರೆಲ್ಲರೂ ಅಳತಾರೊ ಕೂಡಿ | ಪರಮಾತ್ಮನ ಹುಕುಮ ಆದೀತೊ ಏಕದಮ್ಮಾ ||
ಯಮದೂರತೆಲ್ಲರೂ ಹೋಗಿರಿ ಇಂದಾ || ೪ ||

ಇ || ಜಿಬ್ರಾಯಿಲ್ ಬಂದಾ ಶಿವಲೋಕದಿಂದಾ |
ಬಂದು ತೊಟ್ಟಿಲು ತೂಗತಾರೊ ಚಂದಾ ಆನಂದಾ ||
ಏರು || ಜಿಬ್ರಾಯಿಲ್ ತೂಗಿದರೂ ಮಲಗಲಿಲ್ಲಾ
ದುಃಖಮಾಡಿ ಅಳತಾವ್ರಿ ಅಳತಿ ಇಲ್ಲಾ
ಜಿಬ್ರಾಯಿಲ ಅಂತಾನ ನಿಮಗ ಬೇಕೇನಾ | ನನ್ನ ಮುಂದ ಹೇಳ್ರಿಕೊಡಿಸುವೆ ಇಂದಾ || ೫ ||

ಇ || ಹಸೇನಿ ಹುಸೇನಿ ಕಂದಾ | ಅಂತಾರೊ ಜಿಬ್ರಾಯಿಲ ಮುಂದಾ
ನಮ್ಮ ಮಾತಾ ಕೇಳು ಇಂದಾ | ಚಂದಾ
ಏರು || ಮಹಮ್ಮದರ ಕಲಮಾ ಓದಿದ ಜನಕ | ಸ್ವರ್ಗದ ಬಾಗಿಲು ಖುಲ್ಲಾ ಕೊಡಬೇಕ
ಅವರದಸಿಂದ ಅಳತೇವು ಇಂದಾ | ವಚನ ಕೊಡಬೇಕು ನಮಗ ಇಂದಾ || ೬ ||

ಇ || ಜಿಬ್ರಾಯಿಲ್ ಅಂದಾ | ಕೇಳುವೆ ಶಿವಗ ಇಂದಾ
ಶಿವಗ ಅರ್ಜಿ ಮಾಡ್ಯಾರೊ ಅಂದಾ ಚಂದಾ |
ಏರು || ಶಿವಲೋಕದಿಂದಾ ಬಂದಿತೊ ಶಬ್ದಾ
ಬೇಡಿದ ವರವ ಕೊಟ್ಟೇನಿ ಇಂದಾ
ಮುಹ್ಮದರ ಶಿಷ್ಯರಿಗೆ ಕೊಡುವೆನು ಸ್ವರ್ಗಾ
ಹಟಾ ಬಿಡರಿ ಇಂದಾ ಪ್ರೇಮದ ಕಂದಾ || ೭ ||

ಇ || ಶಿವಲೋಕದ ಶಬ್ದಾ ಕೇಳಿ ಎರಡು ಕಂದಾ
ಹರುಷಾಗಿ ಮಲಗುವರು ಅಂದಾ | ಆನಂದಾ ||
ಏರು || ಹಸೇನಿ ಹುಸೇನಿ ಮಲಗ್ಯಾರಲ್ಲಾ
ಜಿಬ್ರಾಯಿಲ ಖುಷಿಯಾಗಿ ಹೊರಟಾನಲ್ಲಾ
ಫಾತಿಮಾ ಬಂದು ಹರುಷ ಮನದಿಂದ | ತೊಟ್ಟಿಲ ತೂಗ್ಯಾಳಲ್ರಿ ಆನಂದದಿಂದಾ || ೮ ||

ಇ || ಹಸೇನಿ ಹುಸೇನಿ ಸಂದಾ ಮುಗಿಸಿನಿ ಬಹು ಚಂದಾ
ತಪ್ಪಿದರ ಕ್ಷಮಿಸಿರಿ ನಮಗ ಇಂದಾ
ಏರು || ಬಂದಗಿಸಾಹೇಬ ಕವಿ ಒಳ್ಳೆ ಖುಲ್ಲಾ
ಬಟಕುರ್ಕಿ ಊರಾಗ ಇರತಾರಲ್ಲಾ
ದಾವಲಮಲಿಕನ ನೆನದಾರೊ ಟೀಕ | ದರಗಾಕ ಹೋಗಿ ಬರತೇನಿ ಇಂದಾ ಚಂದಾ || ೯||

* * *

## ೧೯. ಸಾಂಬನ ಹುಕುಮು

ಚಂದದಿಂದ ಕೂಡಿರಿ ದೈವಾ ಬಂದ ಸಂಪನ್ನಾ
ದ್ಯಾಸ ಇಡರಿ ಇತಿಹಾಸ ಶಾಸ್ತ್ರವನಾ || ಪಲ್ಲ ||

ಇಡಬೇಕ ಖ್ಯಾಲಾ ಮಾಡಬ್ಯಾಡರಿ ಗುಲ್ಲಾ | ತಿಳಿಸುವೆ ಎಲ್ಲಾ
ಮರ್ತ್ಯದೊಳಗ ಬರತಾರ ಹುಸನ್ನೈನಾ ||
ಶಾಬಾನಾ ತಿಂಗಳಾ | ಕೇಳಬೇಕೋ ನಿಚ್ಚಳಾ | ಹೇಳತೇನಿ ಝುಳಾ ಝುಳಾ
ಇಟ್ಬಾಂಗ ಹರಳಾ | ಪೃಥ್ವಿಯಲ್ಲಿ | ನಾಲ್ಕು ತಾರೀಖು ಲೆಕ್ಕ ಬರಿದಾರೋ
ಲೆಕ್ಕ ಶಾಸ್ತ್ರರಾ | ದಿವಸಿತ್ತೋ ಐತವಾರಾ |
ಸೃಷ್ಟಿಯೊಳಗ ಹುಟ್ಟಿ ಬಂದಾರೋ | ಘಟ್ಟ ಶರಣರಾ ||

ಹುಸನ್ಯೆನ ಸಾಹೇಬರಾ | ಬೆಳಕ ಬಿದ್ದೀತ ಎಳತ ಸೂರ್ಯನ ಕಿರಣ ||
ಹವಳ ನಿವಳ ಸುರದಾಂಗ ಮುತ್ತುಗಳನಾ || ೧ ||

ಇ || ಸುದ್ದಿಕೇಳಿ ಬುದ್ದಿವಂತ ನಬಿಸಾಹೇಬ ಶರಣಾ | ಬಾಗಿ ತಲೆದೂಗಿ
ನೆನೆದಾರೊ ಸಾಂಬನ್ನ | ಮಿತ್ರರ ಸಂಗ | ಕರಕೊಂಡ ಬ್ಯಾಗ
ನಬಿಸಾಬರು ಆಗ ಸಾಗಿ ಮೌಲಾನ ಮನಿಗೆ ಹೋಗಿ ಕುಂತ್ರಣ್ಣಾ
ಏರು || ಕೂಸಿಗೆ ಎರದಾರೊ | ಎದೆಗ್ಹಚ್ಚಿ ತಂದಾರೊ
ನಬಿಸಾಬ ಶರಣರೊ | ಕಿವಿಯೊಳಗ ಊದ್ಯಾರೊ | ತಗೊಂಡು ಅವರೊ
ತಮ್ಮ ಕೈಯಲ್ಲಿ ಕೇಳ ಮಾತ ಬಂಗ್ವಾತ ಸಲ್ವಾತ ಮಾಡ್ಯಾರೋ ಆಗ ಶರಣರಾ
ನಮ್ಮ ಧರ್ಮ ಹೇಳಿದ ಬ್ರಹ್ಮ ಅದರಂತೆ | ನೇಮ ನಡದಾರೊ |
ನಬಿಸಾಬ ಶರಣರು | ಬ್ಯಾಗ ಗಂಟಲ ಮ್ಯಾಗ |
ಮುದ್ದ ಕೊಟ್ಟರೊ ಶರಣ | ಹುಕುಂ ಆದೀತೊ ಏಕದಮ್ಮ ಜುಬರೀಲನ || ೨ ||

ಇ || ನಡಿಬೇಕ ಇದರ ಸರಿ ಪಡಿಬೇಕ ಜ್ಞಾನ |
ಮರತ ಬಿಟ್ಟಿಂದ ಇದು ವ್ಯರ್ಥ ಜಲ್ಮವನಾ ||
ಕೈಯಾಗ ತಂದ | ಶರಣರ ಮುಂದ | ತಿಳಿಸ್ಯಾರೊ ಬೇಧ
ಘಾಯಾಗುರು | ಮಾಯಾ ಮಾಡಿದಂತ ಜಾಗವನಾ
ಯಜೀದರ ಜನರಾ | ಹಿರದಾರೊ ಹತಿಯಾರಾ
ಕುತ್ತಗಿ ಕರಕರಾ | ಕೊಯ್ದಾರೋ ಒತ್ತರಾ ||
ಹೋಗೂದ ತೆಲಿ ಏನ ಘಾತ ಮಾಡಿದಿ ಮಾತ
ಸಾಂಬ ವ್ಯರ್ಥ ಆದೀತೊ ಕೂಸೇನ ಮಾಡಿತೋ | ಬಾಳ ದುಃಖ ಇಟ್ಟೆಲ್ಲಾ
ಶೋಕ ಸಾವೂತನಕ | ಈ ಮಾತು ಮರೆಲಾರದಾಂಗ ಆತು ||
ಬಂದ ಶರಣರ ಮುಂದ ಮಗಳ ಖಾತೂನ | ಸಣ್ಣ ಆಗ್ಯೆತಿ ಮಾರಿ ಏನಕಾರಣಾ || ೩ ||

ಮಗಳ ನೀ ಕೇಳ ಬುದ್ಧಿಯುಳ್ಳ ಖಾತೂನಾ | ಏನು ಹೇಳಲಿ ಈಗ ನಾನು ನಿಮ್ಮನ್ನಾ
ಸಾಂಬನ ಹುಕುಮಾ ಆತ ಏಕದಮ್ಮಾ | ಅದೃಷ್ಟ ತಮ್ಮಾ
ಖೊಟ್ಟಿ ಅದರುಷ್ಟ ಆತ ಹುಟ್ಟಿದಾ ಹುಸನ್ಯೆನಾ |
ಹುಸನ್ಯೆನ ಮಡದಾನೊ | ಕೈ ಬಿಟ್ಟು ಹೋದಾನೊ | ದೇವಜ್ಞ ಆದಾನೊ |
ಸಾಂಬ್ಹಂಗ ಬರದಾನೊ | ಅದರುಷ್ಟದಲಿ | ಏನ ಘಾತ ಮಾಡಿದಿ ಮಾತ |
ಏ ಭಗವಂತನೆ ಇಂದ | ಕರುಣೆಲ್ಲೆನೊ ನಿಂದ | ಜಗದೀಶ ನನ್ನ
ಕೂಸೇನ ಮಾಡ್ಯೆತಿ | ನಾಶ ನಿನ್ನದಾ | ಹೇಳಬೇಕ ಯಾರ ಮುಂದಾ
ತಂದೆಯ ಮುಂದ ಹೀಗಂದ ಅಳತಾರೊ ಖಾತೂನಾ
ಧೈರ್ಯ ಹೇಳ್ಯಾರ ನಬಿಸಾಬ ಶರಣಾ || ೪ ||

ಇರಾಕಿಲ್ಲ ನಾವು ನೀವು ಮೌಲಾವಲಿ ಶರಣಾ |
ಮಡದ ಹೋದಿಂದ ಹಿರಿಯಣ್ಣ ಹುಸನ್ಯೆನಾ
ಇರತಾರೊ ಒಬ್ಬರು ಹುಸನ್ಯೆನ ಸಾಹೇಬರು ಮಕ್ಕಳು ಹೆಂಗಸರು

ಮೋಸ ಮಾಡ್ಯಾನ ಜಗದೀಶ ಅವರು ಬಿಟ್ಟಾರೊ ವತನಾ | ಹೋದಾರೊ ಹುಸನ್ನೈನಾ
ಯಜೀದರ ಜನಾ ಹೊಡದರೊ ಅವರನ್ನ | ಆಗ ರಣದಲ್ಲಿ
ಹಿಂಡವೈರಿಯ ಗಂಡಾ ಬಂದಾನೊ ಮುಹ್ಮದ ಹನೀಫಾ | ನಾ ಹೇಳತೇನಿ ಸಾಪಾ
ಹಿಂಡ ವೈರಿಗೆ ಕಡದ ಆಗ ಯಜೀದರ ದೀಪಾ | ಮಾಡಿ ಬಿಟ್ಟಾರೋ ಲೋಪಾ
ಪಟ್ಟ ಅವರಿಗೆ ಕೊಟ್ಟ | ನಬಿಸಾಬರು ತಿಳಿಸಿ ಹೇಳ್ಯಾರ | ಸರು ಸೋಸಿ ಬಯಾನ || ೫ ||

ಮಾತ ಕೇಳಿ ಆತ ಖುಷಿ ಖಾತೂನನ ಮನಾ | ಹೋಗಿ ಶಿರಬಾಗಿ ನೆನದಾರೊ ಶಿವನ್ನ
ಇದರಂತೆ ಅಕ್ಷರಾ | ತಂದ ಶಾಹೀರಾ | ಆಗೋ ಜಾಹೀರಾ |
ಕೆಟ್ಟ ಗುಣಗಳ ಸರು ಬಿಟ್ಟು ನಡಿರಣ್ಣಾ
ಮನಿಮನಿಗೆ ಒಬ್ಬರಾ | ಆಗ್ಯಾರೊ ಶಾಹೀರಾ
ಜ್ಞಾನವಿಲ್ಲದ ಪಾಮರಾ | ಬೆಳದೀನಿ ಅನ್ನುವರಾ
ತಮ್ಮ ಬಾಯಲಿ ಬೇದ ತಿಳಿಯದೆ | ವಾದ ಹಾಕತಿ ಸ್ವಾದೇನ ಬಲ್ಲಿ | ನೀ ಕಡಿದಾಡಿ ಖಾಲಿ |
ಪ್ಯಾಟಿ ಬಾಗಲಕೋಟಿಯೊಳಗ | ದಸ್ತಗೀರವಲಿ ಅವರ ಪಾದದ ಮ್ಯಾಲಿ
ಕೇಸುದ ರಾಜ ಗೌಸು ನಾಗ್ಯಾಗ | ಹಸ್ತ ತಲಿಯಮ್ಯಾಲೆ | ಇಟ್ಟಾರೋ ಪ್ರೀತೀಲಿ
ಇ || ಬುದ್ದಿ ಕೊಟ್ಟಾನೊ ಸರುವಿದ್ಯೆ ಅವರನಾ | ಮೋಲ ಇಲ್ಲದೆ ಈ ಲಾಲ ಡೋಂಗ್ರಿನಾ || ೬ ||

* * *

## ೧೦. ಫಾತಿಮಾರ ಮರಣದ ಪದಾ

ಇಂದ್ರ ಸಭಾದಾಗ ಚಂದದಿಂದ ಹೇಳುವೆ ಖುಲ್ಲಾ
ಏರು || ಹಸೇನ ಹುಸೇನ ಇದ್ದಾರೋ ಸಣ್ಣ ಬಾಲಾ
ಶಿವಾ ಮಾಡಿದ ಲೀಲಾ ಕೇಳರಿ ತಪಶೀಲಾ ||
ಇ || ಬೀಬಿ ಫಾತಿಮಾನ ಮರಣಾ ಒದಗಿ ಬಂದಿತಲ್ಲಾ
ಅವರ ಬಾಗಿಲದಾಗ ಬಂದು ಇಳದಾರ ಇಜರಾಯಿಲ್ಲಾ
ಫಾತಿಮಾನ ಕನಸಿನ್ಯಾಗ ಬಂದು ಹೇಳ್ಯಾರಲ್ಲಾ || ೧ ||

ಬರಬೇಕರಿ ಸ್ವರ್ಗಕ ಪ್ರೀತಿಯಿಂದ ಕುಷಿಯಾಲಾ
ಶೇರೆ ಮೌಲಾಗ ಒಪ್ಪಿಸಿ ಎರಡು ಬಾಲಾ
ಏರು || ಆದ್ರೊ ಹುಶಿಯಾರಾ ನೋಡ್ಯಾರ ಯಾರ್‍ಯಾರಿಲ್ಲಾ
ಅದರ ಚಿಂತ್ಯಾಗ ಬೆಳಗ ಆದೀತಲ್ಲಾ
ಇ || ಬೆಳಗಾದ ಮ್ಯಾಲಾ ಹೇಳ್ಯಾರೋ ಅಲಿ ಮೌಲಾನ ಮುಂದಾ
ಸೊಂತ ನಿಮ್ಮ ಕೈಲಿ ಮಣ್ಣ ನಮಗ ಹಾಕಬೇಕಲ್ಲಾ
ವಸ್ತಿ ಮಾಡಬೇಕರಿ ಮೂರು ದಿನಾ ಗೋರಿಯ ಮೇಲಾ || ೨ ||

ಎರಡು ಮಕ್ಕಳ ಕರೆದು ಎರೆದಾರೋ ಪೈಲಾ
ಪೋಷಾಕ ತೊಡಸ್ಯಾರೋ ಹಸೇನ ಹುಸೇನಗ ತಾಸಕಾಲಾ

ಏರು || ಬೆಳಕ ಬಿದ್ದಿತ್ರಿ ಚಂದ್ರನಕ್ಕಿಂತಾ ಮಿಗಿಲಾ
ಅಜ್ಜ ಮುತ್ಯಾನ ಗೋರಿ ಹಂತೇಲಿ ಕಳಿಸ್ಯಾರಿಬ್ಬರಿಗೆ
ಇ || ಗಳ ಗಳ ಅಳವೂತ ಮೌಲಾಗ ಹೇಳ್ಯಾರಲ್ಲಾ
ಎರಡು ಮಕ್ಕಳನ ಸಂಬಾಳಿಸಿ ಇರಬೇಕಲ್ಲಾ || ೩ ||

ಇ || ಇಷ್ಟು ಕೇಳಿ ಮೌಲಾನ ತೊಡಿಮ್ಯಾಲಾ | ಮಗ್ನಳಾಗಿ ಮಲಗ್ಯಾಳಲ್ಲಾ
ಏರು || ಕಲ್ಮಾ ಓದಿ ಜಲ್ಮಾ ಬಿಟ್ಟಾರೋ ಹೋತರಿ ಉಸಲಾ
ತಾಯಿ ಸತ್ತಿದ್ದು ಹಸೇನ ಹುಸೇನಗ ಗೊತ್ತ ಇದ್ದಿಲ್ಲಾ
ಇ || ಆಟದ ಮ್ಯಾಲ ಬಾಳಿತ್ತರಿ ಅವರ ಖ್ಯಾಲಾ
ಅಜ್ಜನ ಗೋರ್‍ಯಾಗಿಂದ ಸಪ್ಪಳ ಬಂತರಿ ಖುಲ್ಲಾ || ೪ ||

ಏರು || ಇಷ್ಟು ಕೇಳಿ ಹಸೇನ್ಹುಸೇನ ಹೊರಳಿ ಧರಣಿಗೆ ಬಿದ್ದರಲ್ಲಾ
ಎದ್ದು ಥಗಾ ಥಗಾ ಹಾದಾರೋ ಗೋರಿಯ ಮೇಲಾ
ಇ || ಓಡಿ ಓಡಿ ಮನಿಗೆ ಬಂದಾರೋ ಜೀವದ ಕಬರಿಲ್ಲಾ
ದುಕ್ಕ ಮಾಡೂತ ಅಳತಾರೋ ಲೆಕ್ಕವಿಲ್ಲಾ || ೫ ||

ಎರಡು ಮಕ್ಕಳನು ಸಂಬಾಳಿಸುವವರು ಯಾರ್‍ಯಾರಿಲ್ಲಾ
ಸ್ವರ್ಗದಿಂದ ಪ್ಯಾಲಾ ತಂದು ಕುಡಿಸ್ಯಾರಿಬ್ಬರಿಗೆ
ಆಗ ಅಳುವುದು ಬಿಟ್ಟು ಸುಮ್ಮನ ಕುಂತಾರಲ್ಲಾ
ಏರು || ಹಸೇನ ಹುಸೇನ ಇವರು ಸಣ್ಣ ಬಾಲಾ
ತಯ್ಯಾರ ಮಾಡ್ಯಾರ ತಾಬೂತ ಹೇರ್‍ಯಾರ ಒಂಟೆಯ ಮೇಲಾ
ಇ || ಕಲ್ಮಾ ಓದೂತ ಕುರಾನ ಓದೂತ ಏನ ಸುದ್ದ ಹೊಂಟಾರಲ್ಲಾ
ಮಣ್ಣ ಆಗೇತ್ರಿ ಆರತಾಸ ರಾತ್ರಿಯ ಮೇಲಾ || ೬ ||

ಇ || ಗೋರಿ ಮ್ಯಾಲೆ ಡೇರೆ ಹೊಡೆದಾರ ಹಜರತ ಅಲಿ ಮೌಲಾ
ಕಲ್ಮಾ ಓದೂತ ಕುರಾನ ಓದೂತ ಮೂರು ದಿನ ಕುಂತಾರಲ್ಲಾ
ಏರು || ಸ್ವರ್ಗದ ದಾರಿ ಫಾತಿಮಾಗ ಸಿಗಲಿಲ್ಲಾ
ಗಂಡನ ಕನಸಿನ್ಯಾಗ ಫಾತಿಮಾ ಬಂದು ಹೇಳ್ಯಾರಲ್ಲಾ
ಇ || ನೆರಮನಿ ಸೂಜಿ ಸಲುವಾಗಿ ಸ್ವರ್ಗ ಸಿಗಲಿಲ್ಲಾ
ಓಡಿ ಓಡಿ ಮನಿಗೆ ಬಂದಾರೋ ಜೀವದ ಕಬರಿಲ್ಲಾ || ೭ ||

ನೆರೆಮನಿ ಸೂಜಿ ತಗದ ಕೊಟ್ಟಾರೋ ತಾಸಕಾಲಾ
ಬೀಬಿ ಫಾತಿಮಾ ಸ್ವರ್ಗಕ್ಕೆ ಹ್ವಾದಾರಲ್ಲಾ
ಏರು || ಧರೆಯೊಳು ಹುಬ್ಬಳ್ಳಿ ಅಸಲಾ | ಹಸೇನಿಹುಸೇನಿ ಪೀರ ಮಿಗಿಲಾ
ಅವರ ದಯಾ ಕರುಣಾ ಇರುವುದು ನಮ್ಮ ಮ್ಯಾಲಾ
ಇ || ಉಸ್ತಾದ ಮೀರಾ ಶಾಹೀರಾ ಹೀಂಗ ಕವಿ ಮಾಡಿ ಹೇಳ್ಯಾರಲ್ಲಾ

ಇಂದ್ರ ಸಭಾದಾಗ ಚಂದದಿಂದ ಹೇಳುವೆ ಖುಲ್ಲಾ
ಹಸೇನ ಹುಸೇನ ಇದ್ದಾರೋ ಸಣ್ಣ ಬಾಲಾ ||

* * *

## ಪೈಗಂಬರರಿಗೆ ಸಂಬಂಧಿಸಿದ ಪದಗಳು

### ೧. ನಬಿ ರಸೂಲಿಲ್ಲಾರ ಪದಾ

ದೈವಾ ಕೂಡಿ ಕುಂತಿರೊಳೆ ಅಸಲಾ | ಮಾಡದೆ ಗುಲ್ಲಾ ಕೇಳರಿ ಖುಲ್ಲಾ
ನಬಿ ರಸೂಲಿಲ್ಲಾ ಜಗದೊಳು ಮೇಲಾ | ದುಷ್ಟ ಅಬೂಜೈಲಾ ಅವರನು ಕಾಡಿದನಲ್ಲಾ
ಕಾಡಿ ಕಾಡಿ ಕಾಡಿ ಕಡಿಗೆ ನಾಶಾದನಲ್ಲಾ | ಶಾರ ಕುಸೂಗಲ್ಲಾ ಐತ್ರಿ ರಂಗಲಾಲಾ
ರೈಮಾನಶಾವಲಿ ಅವರ ದಯಾ ನಮ್ಮ ಮೇಲಾ ||

### ೨. ಇದ್ದರ ಇರಬೇಕು ಎಂತವರಾ

ಮಗ ಇದ್ದರ ಇರಬೇಕು ಎಂತವರಾ
ಇಸ್ಮಾಯಿಲ ಜಬೀರುಲ್ಲಾನಂಥವರಾ ||
ತಂದಿ ಇದ್ದರ ಇರಬೇಕು ಎಂತಾಂವಾ
ಇಬ್ರಾಹೀಮ ಕಲೀಲುಲ್ಲಾನಂತಾಂವಾ
ತಾಯಿ ಇದ್ದರ ಇರಬೇಕು ಎಂತಾವರು
ಬೀಬಿ ಫಾತಿಮಾನಂತಾವರು
ಅಣ್ಣ ತಮ್ಮರು ಇರಬೇಕು ಎಂತಾವರು
ಹಸೇನಿ ಹುಸೇನಿ ಅಂತಾವರು
ಶೂರ ಇದ್ದರ ಇರಬೇಕು ಎಂತಾವರು
ಮಹ್ಮದ ಹನೀಫನಂತಾವರು
ಧೀರ ಇದ್ದರ ಇರಬೇಕು ಎಂತಾವರು
ಮೌಲಾಲಿ ಶರಣರ ಅಂತಾವರು
ಗುರು ಇದ್ದರ ಇರಬೇಕು ಎಂತಾವರು
ಮೈಬೂಬ ಸುಬಾನಿ ಅಂತಾವರು

ಶರಣರಿದ್ದರ ಇರಬೇಕು ಎಂತಾವರು
ಮಹ್ಮದ ಪೈಗಂಬರ ಅಂತಾವರು

* * *

## ಹ|| ಮುಹ್ಮದ ಪೈಗಂಬರರಿಗೆ ಸಂಬಂಧಿಸಿದ ಪದಗಳು

## ೧. ಮುಹ್ಮದ ಪೈಗಂಬರರು ಹುಟ್ಟಿದಾಗ ಹಾಡಿದ ಜೋಗುಳ ಪದಾ

ಹೊಸ ಸಂದಾ ಕೇಳರಿ ಮುಂದಾ ಮತ್ತೊಂದಾ || ಪಲ್ಲವಿ ||

ಗುರು ನಬಿಸಾಹೇಬ ಮಕ್ಕೆ ಶಾರದಾಗ ಹುಟ್ಟಿ ಬಂದದ್ದು
ಏರು || ಅಬ್ದುಲ್ಲಾನ ಹೊಟ್ಟೀಲೆ ಹುಟ್ಟಿ ಉತ್ಪನ್ನಾದರೋ
ಆರತಾಸ ರಾತ್ರಿಯಿತ್ತೊ ಸುದ್ದಾ | ಬೀಬಿ ಅಮೀನಾರು ಬ್ಯಾನಿಯ ಎದ್ದು
ಇದು ಶರಣರ ಸಂದಾ ಕೇಳರಿ ಮುಂದಾ ಮತ್ತೊಂದಾ || ೧ ||

ಇ|| ಗಾಡ ಗಂಧರ್ವರು ದೇವಗನ್ಯಾರು ಇಳಿದು ಬಂದಾ
ಅವರು ಸ್ವರ್ಗದಿಂದ ನೀರು ತಂದು ಬಾಣತಿಗೆರೆದದ್ದು
ಏರು || ಮುತ್ತಿನಾ ತೊಟ್ಟಿಲಾ ಕಟ್ಟಿ ಅವರು ಜೋಗುಳ ಪಾಡಿದ್ದು
ನಬಿಸಾಹೇಬನ್ನ ತೂಗ್ಯಾರ ಹಿಡಿದು
ಜೋ ಜೋ ಎನ್ನೀರೆ ಜೈತುನ್ನಬಿಕೋ ಜೋ ಜೋ
ಅಲ್ಲಾಕು ಪ್ಯಾರೇ ಪೈಗಂಬರೀ ನಬಿ ನೂರೇಕು ಜೂಲಾ ಜೂಲಾರೇ ಜೋ ಜೋ
ಏಳು ಲೋಕಕ್ಕೆ ಅಧಿಪತಿ ನೀನು
ಶಿವನ ಕರುಣದಿಂದ ಹುಟ್ಟಿ ಬಂದವನೋ | ಜಗದ ಗುರುವಿನಂತೆ ನಬಿಸಾಹೇಬನೊ
ನಿನ್ನ ಜನ್ಮದ ನಾಮ್ದೆಸರು ಮಹ್ಮದ ಹೌದೇನೋ ಜೋಜೋ || ೨ ||

ಇ|| ಅಬ್ದುಲ್‌ಸಾಬ ಕಾರ್ಯೇದಾಗ ಮಲಗಿದ್ದೊ
ಅವರು ಏಕಾಏಕಿ ಎಚ್ಚರಾಗಿ ಎದ್ದು ಕುಂತೋ
ಏರು || ಬಿಚ್ಚುಗತ್ತಿ ಪಾರಾ ಇತ್ತೊ ಶಿವದೂತರದೋ
ನಿಂತ ನೋಡಿದಾರೋ ದೂರದಲಿಂದೋ
ನಾಲ್ಕು ತಾಸು ರಾತ್ರಿಯಿತ್ತೋ ಕಾರ್ಯೇಕ ಬಂದದ್ದೋ
ಯಾರು ನೋಡಿದ್ದಿಲ್ಲಾ ಊರಾನ ಮಂದಿ ಅವರು ಬಂದಿದ್ದಾ
ಮುಂಜಾನೆದ್ದು ನೋಡಿದಾರೋ ಸ್ವಾಮಿ ಹುಟ್ಟಿದ್ದಾ
ತೂಗುತಿತ್ತೋ ತೊಟ್ಟಿಲಾ ಒಂದಾ |
ಕಲ್ಲ ದೇವರೆಲ್ಲಾ ಹೋಗಿ ಬಾವ್ಯಾಗ ಬಿದ್ದಾ || ೩ ||

ಇ|| ರಮಲಶಾಸ್ತ್ರ ಹೇಳಾವೊಬ್ಬ ಮುಂಜಾಲೆದ್ದೊ
ಅಂವಾ ನವಸಾರೆಂಬ ಅರಸನಂತೇಲಿ ನಡೆದುಬಂದಾ
ಏರು || ಮುಂದ ಆಗುದೆಲ್ಲಾ ಅಂವಾ ಬಿಚ್ಚಿಹೇಳಿದ್ದು
ಇಂದ ನಿನ್ನವೈರಿ ಹುಟ್ಟಿ ಬಂದಾ |
ಇನ್ನು ಮೂರು ತಿಂಗಳಿಗೆ ನೀನು ಸಾಯುವದೋ
ಹೀಂಗ ರಮಲಶಾಸ್ತ್ರ ಹೇಳಿದಾಂವ ತಿಳಿಸಿಬಂದದ್ದೋ
ಜೋ ಜೋ ಎನ್ನೀರೆ ಜೈತುನ್ನಬಿಕೋ ಜೋ ಜೋ
ತಾಯಿಯಿಲ್ಲದವನೋ ನಬಿಸಾಹೇಬನೋ ||
ಹುಟ್ಟಿದ ಐದು ದಿವಸಾತೋ ಮಕ್ಕಳ ಹಾಲು ಕುಡಿದವನೋ || || ೪ ||

ಹುಟ್ಟೂತ ಸತ್ತಳೋ ತಾಯಿ ಅಮೀನನೋ
ನಿನಗೆ ಹಾಲು ಕುಡಿಸಿದಾಕೆ ದಾಯಿ ಹಲೀಮನೋ
ಜೋ ಜೋ ಎನ್ನಿರೆ ಜೈತುನ್ನಬಿಕೋ ಜೋ ಜೋ
ಶಾರ ಸವದತ್ತಿ ಊರ ಮುಂದೆ ಕಿಲೇವ ಕಟ್ಟಿತೋ
ಈ ಕಿಲ್ಲೇದ ಮುಂದ ಪ್ಯಾಟಿಲೈನಾ ಬಂಗಲೆ ಹುಟ್ಟಿದ್ದಾ
ಅಪ್ಪಾ ಸುಲ್ತಾನಿ ವಸ್ತಾದಿ ಮಾಡಿ ಬುದ್ಧಿ ಕೊಟ್ಟಿದ್ದಾ
ಹಸ್ತ ಇಟ್ಟಿರೋ ತಲಿಮ್ಯಾಲೆ ತಂದಾ
ಅಜ್ಜ ಅಡವ್ಯಾ ಹೇಳಿದಾರೋ ಹೊಸಾ ಸಂದಾ ||
ಹೊಸಾ ಸಂದಾ ಕೇಳರಿ ಮುಂದಾ ಮತ್ತೊಂದಾ || ೫ ||

* * *

## ೧. ನಬಿಸಾಬರು ಮುಟ್ಟಿ ಜಗ್ಗಿದ ಪದಾ

ಸರೂ ದೈವಕ್ಕ ನಾ ನಿಮ್ಮ ಸೇವಕ ಮಾಡುವೆ ಶರಣಾ ನಿಮ್ಮ ಕರುಣಾ
ಇಡಬೇಕರಿ ಶ್ರೀಹರಿ ಐಶ್ವರ್ಯ ನಬಿಸಾಬ ಶರಣಾ || ಪಲ್ಲವಿ ||

ಏರು || ಪರಂಜ್ಯೋತಿ ಪ್ರಕಾಶ ನಿಮ್ಮಲಿಂದ ಹುಟ್ಟಿಸಿದಾನೋ ಜಗದೀಶಾ
ಓಂಕಾರ ಶಬ್ದ ಝೇಂಕರಿಸುವ ಸಮಯದಲ್ಲಿ ನಿಮ್ಮಾ
ನೌಖಂಡ ಮಂಡಲ ನಡಗತಿದ್ದಾವ್ರಿ ಸಾರೂತ ಕಲ್ಮಾ
ಬ್ರಹ್ಮಾಂಡ ಭೂಮಿಗಳಾದವ್ರಿ ನಿಮ್ಮ ನಗುತದ ಅಲ್ಮಾ
ನಿಮ್ಮದಸಿಂದಾ ಸಾಂಬಾ ತ್ರಿಲೋಕ ಜಗತುಂಡಾ
ಪ್ರೀತೀಲೆ ನಿಮ್ಮ ಜ್ಯೋತಿ ಜರಬೀಲೆ ಮಾಡ್ಯಾರ ಮಂಡಲನಾ || ೧ ||

ಇ|| ನಿಮ್ಮ ಕೌತೂಕ ಮಕ್ಕೇ ಮದೀನಕ ಆತರಿ ಭೂಷಣಾ
ಚಂದ್ರನ ವರಣಾ ತುಂಬಿ ತುಳುಕೂತ ಜಗಭರಿತ ಅದ್ಭುತ ಕಿರಣಾ
ಏರು || ಒಂದಾನೊಂದಿವಸಾ ಶರಣರದೋ ಆತರಿ ಮನಸಾ

ಶೃಂಗಾರ ವನಾವನಾಂತರ ತಿರುಗಾಡಿ ಹೋಗುದಕ
ಹೊಂಟಾರೋ ತಿಳಿದ ಬೆಳೆದ ತ್ವಾಟದ ತಾರೀಫ ನೋಡುದಕ
ಸಾಕ್ಷಾತ್ ಕೈಲಾಸ ಕಂಡಾಂಗ ಹೋಯ್ತಾವು ಹೊಳುವುದು ಮನಕ
ಹೋಗಿ ನಿಂತಾರೋ ಹಿಂದಾ ನೋಡೂತಾ ಕಣ್ಣ ತುಂಬಾ
ಗಿಡಾಗಂಟಿ ತಪ್ಪಲಾ ಅಂತಿದ್ದವು ನಬಿಸಾಬ ಶರಣಾ
ನಿಮ್ಮ ಕರುಣಾ ಇಡಬೇಕರಿ ಶ್ರೀಹರಿ ಐಶ್ವರ್ಯ ರಸೂಲಿಲ್ಲಾ ಶರಣಾ || ೧ ||

ಇ|| ಉತ್ತತ್ತಿ ನೋಡುದಕ ಆತರಿ ತಿನ್ನೂದಕ ಮನಾ
ಪೈಗಂಬರನಾ ಮಟ್ಟಿ ಹೊಡುವವಗ ಕೇಳ್ಯಾರಾಗ
ಏರು || ಮಟ್ಟಿ ಹೊಡುವವ ಅಂತಾನರಿ
ಒಂದು ಮಟ್ಟಿ ಹೊಡೆದರ ಒಂದು ಉತ್ತತ್ತಿ ಕೊಡತೇನರಿ
ಹೀಂಗ ಮಟ್ಟಿ ಹೊಡಿಲಾಕ ಗಟ್ಟಿ ಹಚ್ಚಿದಾನೋ ಶರಣರಿಗೆ
ಮಟ್ಟಿ ಹೊಡುವಾಗ ಕುಲುಕುಲು ನಗಿ ಬಂತೋ ಸೃಷ್ಟಿಕರ್ತನಿಗೆ
ಜಗ್ಯಾರ ಕಸುವೀಲೆ ಗಟ್ಟಿ ಹರದ ಬಿತ್ತರಿ ಮುಟ್ಟಿ
ಗಾಬಾಗಿ ನಿಂತಾರಾ ಮನಸ್ಸಿಗೆ ಅಂತಾರಾ ಧೋರಣಾ
ನಿಮ್ಮ ಕರುಣಾ ಇಡಬೇಕರಿ ಶ್ರೀಹರಿ ಐಶ್ವರ್ಯಾ ನಬಿಸಾಬ ಶರಣಾ || ೩ ||

ಇ|| ಮಟ್ಟಿ ಸಪ್ಪಳಾ ಕೇಳಿಕ್ಯಾಸ ಬಂದಾನೋ ಅಡರಾಶಿ ತರುಣಾ
ಮಟ್ಟಿ ಜಾಣಾ ದೂರದಿಂದ ಓಡುತ ಬಂದಾ
ಶರಣರಿಗೆ ಹೊಡೆದ ಬೇಮಾನಾ
ಏರು || ಗಡಾಗಡಾ ಗದ್ದರಿಸಿ ಆಕಾಶ ಥರಾಥರಾ ಥರಗುಡತಿತ್ತರಿ
ಮೇರುಮಂಡಲ ಬೇಹೋಶಾ
ಬೆಂಕಿದೇವ ಬಂದ ಲಂಕಾ ಸುಟ್ಟಾಂಗ ನಾ ಇಂವಗ ಸುಟ್ಟು ಬಿಡುವೆ
ಕ್ರೂರ ಕೋಪ ತಾಳಿ ವೈವರ್ಣಾ ಹೇಳತಾನ | ಗಾಳೀಲೆ ಹಾರಿಸುವೆ
ಲಗು ಅಪ್ಪಣಿ ಕೊಡರಿ ಭೂಪತಿ ಭೂಕಾಂತ ಬುಜಬಲ ಗುರುವೆ
ಬ್ಯಾಡಂತಾರೋ ಶರಣಾ ಮಾಡರಿ ಅಂತಃಕರುಣಾ
ತಪ್ಪ ನಂದಾಗೈತಿ ಗಪ್ಪನೆ ಹೋಗರಿ ಸುಮ್ಮನಾ
ನಿಮ್ಮ ಕರುಣೆ ಇಡಬೇಕರಿ ಶ್ರೀಹರಿ ಐಶ್ವರ್ಯ ನಬಿಸಾಬ ಶರಣಾ || ೪ ||

ಇ|| ಶರಣರಿಗೆ ಹೊಡೆದಿದಕ ಮಹಿಮೆ ಸತ್ತುಳ್ಳತನದ ಬಾಣಾ ಹೊಡೆದಾಕ್ಷಣಾ
ಕೈ ಒಣಗುತಾ ನಡೆದೀತು ಬ್ಯಾನಿ ಬಯಂಕರ ಬಾಧನಾ
ಏರು || ಉರುಪ ತಾಳದೆ ಹೊರಡುವಾ | ಬಳಲೂತ ಬೋರ್ಯಾಡಿ ಅಳಾಂವಾ
ತ್ವಾಟಾ ಮಾಟಾ ಎಲ್ಲಾ ಪಾಟಾ-ಪೋಟಾ ಕುಲ್ಲಾ ಬಂತ ಒಣಗುದಕ
ಗಿಡಗಂಟಿ ಎಲ್ಲಾ ಗಂಟಿ ಬಾರಿಸತಾವ ನೀರ ಅರಬಾಗಿದಕ
ತಾಯಿ ಬುತ್ತಿ ತಂದ ಮುತ್ತಿನಂತ ತ್ವಾಟಾ ಹೀಂಗ್ಯಾಕಾತ್ರಿ ಕಾಯಿಕ
ಚಿಂತಿ ಮಾಡುಳೋ ಮೋಹನಾ ನೋಡಿ ತನ್ನ ಮಗನ್ನಾ

ನಿಂತ ಕೇಳತಾಳ ತಾಯಿ ತ್ವಾಟ ಆಗಿದ್ದ ಹಾಳ ಕಾರಣಾ
ನಿಮ್ಮ ಕರುಣಾ ಶ್ರೀಹರಿ ಐಶ್ವರ್ಯ ನಬಿಸಾಬ ಶರಣಾ || ೫ ||

ಇ|| ದುಃಖ ಸಾಗರದಲ್ಲಿ ಅಂತಾನ ಬಾಯಿಲಿ ಕಥನಾ ನನ್ನವರನಾ
ಒಬ್ಬ ಮುದುಕಗ ಹೊಡೆದಲ್ಲಿ ಹೀಂಗಾತ ಕೇಳಿ ತಾಯಿ ನೀನಾ
ಏರು || ಛೀ ದುಷ್ಟ ಮಗನೆ ತಿಳಿಯದೆ ಖೊಟ್ಟಿ ಆದರುಷ್ಟದವನೆ
ಸಾಕ್ಷಾತ್ ಸೃಷ್ಟಿಕರತಾ ಮಾಡಿದ ಸೃಷ್ಟಿ ಅವತಾರೋ
ಮುದುಕ ಅಲ್ಲ ಅವರೋ ಪ್ರಗುಣಾ ಆಗುವರೋ ಪ್ರೇಮ ಪೈಗಂಬರರೋ
ನಮ್ಮ ಮೋಕ್ಷ ಮಾರ್ಗದಿ ದೀಕ್ಷಾ ಕೊಡುವ ಸಾಕ್ಷಾತ್ ಬಂದಿದ್ದರೋ
ಅಂಧಕಾರ ದುಂದಿನಲ್ಲಿ ಹೀಂಗಾತ ಕೇಳಪ್ಯಾಲಿ
ನಡಿಪಾದಕ ಬಿದ್ದು ಕ್ಷಮಾ ಬೇಡಿಕೊಂಡ ಬರೂಣಾ
ನಿಮ್ಮ ಕರುಣಾ ಇಡಬೇಕರಿ ಶ್ರೀಹರಿ ಐಶ್ವರ್ಯ ನಬಸಾಬ ಶರಣಾ || ೬ ||

ಇ|| ಶರಣರ ಪಾದಕ ಬಿದ್ದು ಹೇಳತಾನೋ
ಕೈಮುಗಿದು ಪ್ರಾಣಕೊಡುವೆ ನಾನಾ
ಗರ್ವ ಅಹಂಕಾರದಲ್ಲಿ ಪೂರಾ ಹೊಡೆದಲ್ಲಿ ಕ್ಷಮಿಸರಿ ನನ್ನಾ
ಏರು || ಶರಣರು ಆಗಿ ಬಹು ಪ್ರೇಮಾ ಕ್ಷಮಿಸಿ ಓದಸ್ಯಾರೋ ಶ್ರೀಕಲ್ಮಾ
ಕಲ್ಮಾ ಓದಿದ ಬಳಿಕ ಆದೀತೋ ಎಲ್ಲಾ ಬೆಳಕ ಹೋದೀತೊ ಓ ಪೂರಾ
ಶ್ರೀಮಂತರೆಲ್ಲರು ಊರಾನ ರೈತರು ಬಂದು ನಿಂತಕ್ಯಾರಾ
ಶಿರಬಾಗಿ ಸಾಷ್ಟಾಂಗ ಹಾಕಿದರೋ ನೋಡಿ ಕಲ್ಮೆದ ಹುಜೂರಾ
ತ್ವಾಟಾ ಆತರಿ ಹಸರಾ | ತ್ವಾಟದ ಗ್ರಾಮ ಮಿಸರಾ
ನೋಡಿ ಭಕ್ತರು ಮುಕ್ತಿಗೆ ಹೊಂದ್ಯಾರೋ ರತನಾ
ನಿಮ್ಮ ಕರುಣ ಇಡಬೇಕರಿ ಶ್ರೀ ಹರಿ ಐಶ್ವರ್ಯ ನಬಿಸಾಬ ಶರಣಾ || ೭ ||

ಇ|| ಶಾರ ಬಾಗಲಕೋಟಿ ಐತಿ ಮೋಜಿನ ಪ್ಯಾಟಿ ಸಜ್ಜನಾ ಪಟ್ಟಣಾ
ಕೇಸುಪೀರಾ ಶ್ರೀ ದಸ್ತಗೀರಾ ವರಾ ಕೊಟ್ಟು ಸಲುವ್ಯಾರ ನಮ್ಮನ್ನಾ
ಏರು|| ಭರ ಬಾಜಾರದಲ್ಲಿ ಅವರ ದರಗಾ | ನೋಡರಿ ಪವಿತ್ರದ ಜಾಗಾ
ಶಾಹೀರ ಶಾಣ್ಯಾನಾಗಿ ಬಂದೀತ ಮನಸಾಗಿ ಜಾಹೀರ ಸಭಾದೊಳಗ
ಹುಲಿ ಹೂಂಕರಿಸಿತ್ತ ಹುರುಪಾಗಿ ಬಂದಿತ್ತ ಬಿತ್ತ ಬಲಿಯೊಳಗ
ಇಲಿಯಾಗಿ ಬಂದದ್ದು ಬಲಿಯೆಲ್ಲಾ ಹರದದ್ದು ಗೊತ್ತಿಲ್ಲೇನೋ ನಿನಗ
ನೆನಪ ಹಿಡಿಯೋ ಇಲಿದಾ | ಮರತೇನೋ ಬಿಡಿಸಿದ್ದಾ
ಅಂಬಗ್ಯಾರನಾಗಿ ಕ್ಯಾರಾ ಹೊರಬೇಕ ಜೋಕುಮಾರ ನೀನಾ
ತೂರ ಬೂದಿನಾ ಓಣಿ ತಿರುಗಾಡಿ ಕುಣಿದಾಡಿ ಜ್ವಾಳ ತಗೊಂಡ ಬಾಗಿದ್ದನಾ || ೮ ||

* * *

## ೩. ಮುಹ್ಮದ ಪೈಗಂಬರರು ಮಾಡಿಸಿದ ಮದುವಿ ಪದಾ

ಕುಂತಿರು ದೈವಾ ಕೂಡಿರಿ ಸರ್ವರು ಸಂಪೂರ್ಣ | ಮಾಡಿ ಕರುಣಾ
ಏರು || ಅಜ್ಞಾನಿ ನಿಮ್ಮ ಕಂದಾ | ಅರಜ ಮಾಡುವೆ ಒಂದಾ
ಭೂಮಿಗೆ ಅಧಿಕಾರಾ | ಸ್ವಾಮಿ ನಬಿಸಾಬ ಶರಣಾರ
ಓದಿ ಹೇಳ್ಯಾರೋ ಶಾಸ್ತ್ರಾ | ಅಬೂಬಕರ ಉಮರಾ
ಉಸ್ಮಾನ ಅಲಿ ಹೈದರಾ | ಶಾಸ್ತ್ರಾ ತಿಳಿ ವಿಸ್ತಾರ ||೧||
ಇಳು || ಒಬ್ಬ ಬಡವಾ ಬಂದಾ | ಅಂವಾ ಅರಜ ಮಾಡ್ಯಾನಾ
ಸಹಜ ಸ್ವಾಮಿ ಶರಣರ ಮುಂದಾ | ಸವಾಲೈತರಿ ನಂದಾ
ಏರು || ನನ್ನ ಲಗ್ಗನಾ ಆಗಿಲ್ಲಾ | ನೀವೇ ಮಾಡರಿ ಅಂತಾ
ಹಿಡಿದನೋ ಪಾದಾ | ಸರುವ ಹೇಳ್ಯಾನೋ ಬೇದಾ
ಯಾರ್‍ಯಾರಿಲ್ಲರಿ ನಮಗಿನ್ನಾ | ಸತ್ತುಳ್ಳ ಶರಣಾ
ಕೇಳಿ ಬಡವನ ವಚನಾ | ಮಾಡ್ಯಾರಿ ಕರುಣಾ || ೧ ||

ಇ|| ಧರಣಿಯ ಪಾಲಕ ಶಿವದೂತ ಜಿಬ್ರಾಹಿಲನಾ | ತಿಳಿಸ್ಯಾರೋ ವಚನಾ
ಹೋಗಿ ಭೂಮಿಮ್ಯಾಗ ಹೇಳೋ ನಬಿಸಾಹೇಗ
ಸಾವುತನಾ ಬಡವಾ ಲಗ್ನ ಆಗಿದ್ದ ದಿನಾ | ಮಾಡರಿ ಕರುಣಾ
ಏರು || ಹರುಷಾಗಿ ಜಿಬ್ರಾಹಿಲನಾ | ತಡಮಾಡದೆ ನಡದಾನೋ
ಮರತೆದೊಳಗ ಬಂದನೋ | ಸ್ವಾಮಿಗೆ ಹೀಂಗ ಅಂದನೋ
ಮಜಕೂರ ಹೇಳಿ ತೀವ್ರಾ | ಜಿಬ್ರಾಹೀಲ ಹೊಂಟಾ
ಮಿತ್ರರಿಗೆ ತಿಳಿಸಿ ಹೇಳ್ಯಾರೋ ನಬಿಸಾಹೇಬ ಶರಣಾ || ೩ ||

ಇ|| ಯಾರ ಕೊಡತೀರಿ ಹೆಣ್ಣಾ | ಕುಸಿಲಿಂದ ಮಾಡುವೆ ಲಗ್ಗನಾ
ಕೇಳಿ ಕುಂತಾರ ಸುಮ್ಮನಾ | ಸರ್ವರು ಸಂಪನ್ನಾ
ಒಬ್ಬಾಂವ ಅಂತಾನಾ | ಕೇಳಿ ಬರತೇನಿ ಸತಿಯಳನಾ
ಏರು || ನಬಿಸಾಹೇಬ ಶರಣಾ | ತಿಳಿಸಿ ಹೇಳ್ಯಾರ ಮಿತ್ರರನಾ
ಬಡವನ ಮರಣಾ | ಮದುವಿ ಆಗಿದ್ದ ರಾತ್ರಿ | ಇಂದಾ ಸಾವೂದು ಖಾತ್ರಿ
ಜಿಬ್ರಾಹಿಲ ಬಂದು ಹೇಳಿ ಹೋದ ವರ್ತಮಾನ || ೪ ||

ಇ|| ಕೇಳಿ ಸರ್ವರು ಮಜಕೂರಾ | ಮಾಡಿ ಹೊಂಟಾರೋ ಅಂವಸರಾ
ಬಂದು ಮನಿಗೆ ತೀವರಾ | ಹೇಳ್ತಾರ ಹೇಣ್ತಿಗೆ ವಿಸ್ತಾರಾ
ಕಬೂಲ ಆಗೇನಿಲ್ಲಾ | ನಿರವಾಯಿಲ್ಲಾ
ಏರು || ಒಂದೈತಿ ವರಾ | ಮಗಳಿಗೆ ನೀ ಕೇಳ ಅವಸರಾ
ನನ್ನ ಮದನ ಸುಂದರ ಪತಿರಾಜ | ನಿಮ್ಮ ವಚನಕ್ಕೆ ನಾನು ಇಲ್ಲ ಬ್ಯಾರಿ
ಇರತೇನ ತಾಬೇಸರಿ | ಹೇಳ್ಯಾನ ಸರ್ವಸಾರಿ
ಲಗ್ನದ ರಾತ್ರಿ ಆಗೂದು ಅವನ ಮರಣಾ || ೫ ||

ಇ|| ಈ ಮಾತಕೇಳಿ ಅಂತಾಳ ತನ್ನ ಗಂಡನ್ನಾ | ಕೊಡುವದಿಲ್ರಿ ಹೆಣ್ಣಾ
ನನ್ನ ಹರೆಯದ ಮಗಳು | ಎದಿಮ್ಯಾಗ ಕುಂತಾಳು

ಏರು || ಮುಂದ ಎಷ್ಟು ದಿವಸ ಹಾಕ್ಯಾಳು ರಂಡಿತನಾ
ಹ್ಯಾಂಗ ಆಗಿರಿ ಕಬೂಲಾ | ಹಂತವಗ ಕೊಟ್ಟೇನು ಫಲಾ
ನಿಮಗ ಯಾಕ ತಿಳಿಲಿಲ್ಲಾ | ನಾನು ಏನು ರಾಜಿ ಇಲ್ಲಾ
ಉರಲಾ ತಂದಿಟ್ಟೇರಲ್ಲಾ | ಮಗಳು ಕೇಳ್ಯಾಳಲ್ಲಾ || ೬ ||

ಇ|| ತನ್ನ ತಂದಿಗೆ ಅಂತಾಳ ವಚನ ನೀವು ಕೊಟ್ಟಿರೇನವಗ
ಮಾಡಿ ಕೊಡಬೇಕ ನನಗ | ನಬಿಸಾಬ ಶರಣರ
ವಚನ ಮೀರುವದು ಹ್ಯಾಂಗ
ಏರು || ಕೇಳೂನು ಹೇಳಿದಾಂಗ | ಕೊಡ್ರಿ ಸಾವುವಂವಗ
ಬಡವನ ಕೂಡ ಆಗಲಿ ನನ್ನ ಲಗ್ಗನಾ
ಅಂತಾಳ ತಾಯಿ ನಿಂದೇನ ಮಗಳ ದೈವಾನಾ | ನಾನು ಮಾಡಲೇನಾ || ೭ ||

ಇ|| ಸಾವುವವನ ಕೂಡಾ ಲಗ್ಗನಾ ನೀ ಆಗಬ್ಯಾಡಾ
ಮುಂದ ಎಷ್ಟು ದಿವಸ ಕಳದಿ ಮಗಳ ನೀನಾ | ಮಾಡರಿ ಕರುಣಾ
ಏರು || ಬ್ರಹ್ಮಾ ಬರದದ್ದ ಬರಿ | ಯಾರಿಗೆ ತಪ್ಪಿದಲ್ಲರಿ
ನನ್ನ ಹೊಟ್ಟೇಲೆ ಶ್ರೀಹರಿ ಕೊಟ್ಟಾರ ಮಕ್ಕಳ ಮರಿ
ಪುತ್ರರ ಹುಟ್ಟಿ ಸತ್ತರ ದುಃಖ ಸಾವೂತನಾ || ೮ ||

ಇ|| ಹೀಂಗ ಇದ್ದರ ಅವನ ಕೂಡ ಆಗೂವೆ ಲಗ್ಗನಾ
ಇದಕ್ಯಾರ ಇಲ್ಲೋ ಬೇರೆ ಯತನಾ
ಏರು || ನನ್ನ ಹೊಟ್ಟೇಲೆ ಕಂದ ಹುಟ್ಟಿ ಸತ್ತರ ನಂದೀತೋ ಮನಾ
ಕೇಳ ತಾಯವ್ವಾ ನೀನಾ | ನನ್ನ ಬರದಂತೆ ದೈವಾನಾ
ಬಡವನ ಕೂಡ ಆಗಲಿ ಲಗ್ಗನಾ || ೯ ||

ಇ || ಈ ಮಾತು ಕೇಳಿ ಸಂತೋಷ ಆದೀತು ಮನಾ | ಮಾಡರಿ ಕರುಣಾ
ದೈವದಾಗ ಅಂವಾ ಬಂದಾ ಕೈಮುಗಿದ ಹೀಂಗ ಅಂದಾ
ಆಗಲಿ ಮಗಳ ಲಗ್ಗನಾ | ಮಾಡರಿ ಕರುಣಾ
ಏರು || ಕೂಡಿದಂತಾ ಭಕ್ತರಾ | ಪ್ರೀತಿಯುಳ್ಳ ಮಿತ್ರರಾ
ಮನಿಗೆ ಬಂದಾರು ತೀವ್ರ | ಮಾಡಲಿಕ್ಕೆ ಲಗ್ಗನಾ
ಹೇಳರಿ ಮಗಳಿಗೆ ತಿಳಿಸಿ ನಬಿಸಾಬ ಇದ್ದಂತಾ ಬುಯಾನಾ || ೧೦ ||

ಇ|| ಲಗ್ನದ ರಾತರಿ | ಅಂವಾ ಸಾವೂದು ಖಾತ್ರಿ
ಏರು || ಇದಕ ಯಾರಿಲ್ಲೊ ಯತನಾ | ಐತಿ ಸಾಂಬನ ವಚನಾ
ಅಂತಾಳೋ ನನ್ನ ದೈವಾನಾ | ಮಾಡಲಿನ್ನೇನಾ
ಬಪ್ಪರೆ ಮಗಳಂತ ಮಾಡ್ಯಾರೋ ಲಗ್ಗನಾ | ಮಾಡರಿ ಕರುಣಾ || ೧೧ ||

ಇ|| ಬ್ಯಾರೊಂದು ಮನಿಯಾಗ ಇಟ್ಟಾರೋ ಕೂಡಿ ಸತಿ ಪತಿನ್ನ
ಆದಿಂದ ಲಗ್ಗನಾ | ತುಂಟಿ ಎರಡು ‘ಆಗಲೆ’ ಸಂಗತಿಲೆ

ಏರು || ಕೊಟ್ಟಾರ ಮುಸಲ್ಮಾನಿ ಧರ್ಮಾ
ಐತಿ ಶಾಸ್ತ್ರ ದಾನಾ | ಮಾಡರಿ ಕರುಣಾ
ಗಂಡ ಮಾಡತಾನೋ ವಿಚಿತ್ತರಾ | ಮರಣ ಬರದಾನೋ ಶಂಕರಾ
ನಬಿಸಾಬ ಶರಣರಾ | ಹೇಳಿದಂತಾ ಅಕ್ಷರಾ
ಸತಿ ನಾ ಮಾಡಲೇನಾ | ಹ್ಯಾಂಗ ಬರುವುದು ಮರಣಾ || ೧೨ ||

ಇ|| ತಿಳಿದಾವ ಆಗ ಮನಸಿನ್ಯಾಗ ಮಾಡಿಕೊಂಡ ಮಲಕೊಂಡ ಸುಮ್ಮನಾ
ಮಾಡಿ ಸಾಂಬನ ಧ್ಯಾನಾ || ಸತಿ ಆಗ ಅಂತಾಳ
ಆಗ ಹ್ಯಾಂಗ ಬರುವುದು ಗಂಡನ ಮರಣಾ
ಏರು || ನೋಡಬೇಕು ಅಂತಾಳ ಇನ್ನಾ | ಇಟ್ಟಾಳ ಏಕ ನಿಷ್ಠಿನಾ
ಬಾವಾ ಆಗಿ ಬಂದಾರೋ ಜಿಬ್ರಾಹಿಲ ಆಕ್ಷಣಾ | ಮಾಡರಿ ಕರುಣಾ
ಮೂರು ದಿವಸ ಆತೋ ಇಲ್ಲ ಹೊಟ್ಯಾಗ ಅಸನಾ | ಹೋಗೂದು ಪ್ರಾಣಾ || ೧೩ ||

ಇ || ಮದುಮಗಳು ಕೇಳಿ ಬ್ಯಾಗ ಕರದಾಳ ಬಾವಾಗ ಮುಂದಾ
'ಆಗಲೆ' ಇಟ್ಟು ಆಗಲಿ ಭೋಜನಾ | ಮಾಡರಿ ಕರುಣಾ
ಏರು || ಊಟ ಆದಿಂದ ಸಂತುಷ್ಟ | ಹಸ್ತ ತಲಿಮ್ಯಾಲೆ ಇಟ್ಟಾ
ಬಾವಾ ಹೀಂಗ ಹರಕಿ ಕೊಟ್ಟಾ | ತೆರದೀತೋ ನಿನ್ನ ಅದರುಷ್ಟಾ
ಮುತ್ತೈದಿತನಾ ಇರಲಿ ಕಡಿತನಾ | ನೋಡ ನನ್ನ ಭಕ್ತಿನಾ || ೧೪ ||

ಇ|| ಒಂದ ಹಾವು ಬಂತು ನುಂಗಬೇಕಂತ ಬಡವಗ ಸರೂರಾತರಿನ್ಯಾಗ
ಆ ಉಂಡ 'ಆಗಲೆ' ಅಡ್ಡ ಬಂದಾವು ನುಂಗೀತೋ ಅದಕ
ಏರು|| ಸಿಕ್ಕಿತೋ ಗಂಟಲದಾಗ | ಮರಣ ಬಂತೋ ಹಾವಿಂದಾ
ಕಸುವೀಲೆ ನುಂಗಿ ತುಣುಕಾಗಿ ಬಿಟ್ಟಿತೋ ಪ್ರಾಣಾ ಮಾಡರಿ ಕರುಣಾ
ಬೆಳಗಾದಿಂದ ಕರಕೊಂಡು ಮಿತ್ರರನ್ನಾ | ಬಂದರೋ ಶರಣಾ || ೧೫ ||

ಇ|| ಶರಣರು ಅಂತಾರೋ ಹೋಗಿ | ಆ ಮದುಮಗಳಿಗೆ ಬಾಕಲ ತೆರಿಹೊರಗ
ತರತೇವಿ ಆ ಹೆಣಾ | ಮಾಡರಿ ಕರುಣಾ
ಏರು || ಕೊಟ್ಟಾಳ ಹೀಂಗ ಉತ್ತರಾ | ಮಲಗ್ಯಾರ ನಮ್ಮ ಹಿರಿಯರಾ
ನಬಿಸಾಹೇಬ ಶರಣಾ | ತಿಳಿದು ಆಗ ವಿಚಿತ್ರಾ
ಕರದಾರೋ ಆಗ ಎಲ್ಲರೂ | ತಿಳಿದಾರೋ ಆದ ಮಜಕೂರಾ
ನಬಿಸಾಹೇಬ ಶರಣಾ | ಮಾಡಿ ಸಾಂಬನ ಧ್ಯಾನಾ || ೧೬ ||

ಇ|| ತೆರದೀತೋ ದೈವಾನಾ | ಅವರು ಜೋಡಿಲಿಂದ
ಕೂಡಿ ಮಾಡುವರೋ ಬಾಳೇವನಾ
ತೆರದೀತೋ ದೈವಾನಾ | ತಿಳಿಯದೆ ಅವನ ತಂತರಾ
ಏರು || ಇಟ್ಟು ಅಡಿಪ್ರಾಸ ಮಾಡಿ ಹಾಡುವವನೋ ಜಾಣಾ

ಮಾಡರಿ ಕರುಣಾ | ನೀನು ಸಾಂಬನ ಧ್ಯಾನಾ | ಮಾಡೋ ಕಡಿತನಾ
ಲಚಮನಸಿಂಗ ಹೀಂಗ ಹೇಳಿ | ಮುಗಸ್ಯಾರೋ ಪುರಾಣಾ || ೧೭ ||

* * *

## ೪. ಮುಹ್ಮದ ಪೈಗಂಬರರು ಮೊಮ್ಮಕ್ಕಳನ್ನು ಹೊತ್ತು ನಮಾಜು ಮಾಡಿದ ಪದಾ

ಕೈಜೋಡಿ ದೈವಕ ಬೇಡಿಕೊಂಬುವೆ
ಇಟ್ಟ ತಮ್ಮ ಪ್ರೇಮಾ ಕುಂತ ಕೇಳರಿ ಸುಮ್ಮಾ || ಪಲ್ಲವಿ ||

ಏರು || ತಿಳಿಸುವೆ ಸೊಲ್ಪ ಅಲ್ಪಾ ಕಂದಾ
ತಪ್ಪಾ ಆದರ ನಂದಾ | ಕ್ಷಮಿಸರಿ ಇಂದಾ
ಚಂದದಿಂದ ಪ್ರೀತಿಯಿಂದ | ನಾನು ಓದುವೆ ಕಲ್ಮಾ | ಕುಂತ ಕೇಳರಿ ಸುಮ್ಮಾ || ೧ ||

ಇ|| ದುರ್ಗದ ಬೈಲಾಗ ಹೋದಬ್ಯಾರೆ ಜಗಳಾಡಿ ತಮ್ಮಾ
ಹೋಗಿದ್ದೀಯೋ ಹುಮ್ಮಾ
ಏರು || ಸಾಂಬಗ ಸಲಾಮ | ದಿವಾನಿ ಸುನ್ಯಾಗ ತೋರಸತೇನಂತಾ
ಒಳ್ಳೆ ಇಟ್ಟೇದಿ ಪಂತಾ | ಅದು ಬಿಟ್ಟು ಕೈಜೋಡಿ ಬೇಡಿಕೊಂತೇನಂತ
ಹಡಸಿ ತಮ್ಮಾ | ಕುಂತಕೇಳರಿ ಸುಮ್ಮಾ | ಬಿಡೂದಿಲ್ಲ ಸಭಾದಲ್ಲಿ || ೨ ||

ತುಳದ ಮಾಡುವೆ ನರಮಾ | ಕಿತ್ತೇನೋ ನಿನ್ನ ಚರಮಾ
ಏರು || ನಬಿಸಾಹೇಬರಿಗೆ ಮೇ ಅರಾಜು ಮೂರು ಸರತಿ ಆಗಿತ್ತು
ಸಲಾಮ ಶಿವನ ಕಡಿಲಿಂದ ಬಂದಿತ್ತು
ಅತ್‌ಹಿಯ್ಯಾತ್ ಓದಿ ನೋಡೋ ಪೂರ್ಣಾ
ಶಾಸ್ತರ ನಮ್ಮಾ | ಕುಂತ ಕೇಳರಿ ಸುಮ್ಮಾ || ೩ ||

ಹುಚ್ಚನಾಯಿ ಬೊಗಳಿದಂಗ ಬೊಗಳತಿ ಬಿಟ್ಟ ಧರ್ಮಾ
ಮೆಚ್ಚಲಿಕ್ಕಿಲ್ಲಾ ಹರಿಬ್ರಹ್ಮಾ
ಏರು || ನಬಿಸಾಬರ ಮೊಮ್ಮಕ್ಕಳು ಹಸೇನ ಹುಸೇನಾ
ಮುತ್ತಿನಂಥ ರತನಾ ಜೋಡಿಲೆ ಕೂಡಿ ಆಡುವರೋ
ಮಸೂತಿ ಹೊರಗ ಅಣ್ಣಾ ತಮ್ಮಾ ಕುಂತ ಕೇಳರಿ ಸುಮ್ಮಾ || ೪ ||

ಇವರ ಇಬ್ಬರಮ್ಯಾಲೆ ಮುತ್ಯಾ ನಬಿಸಾಹೇಬ ಬಹು ಪ್ರೇಮಾ
ಹುಟ್ಟಶ್ಯಾನ ಹರಿಬ್ರಹ್ಮಾ
ಏರು|| ರಸೂಲಿಲ್ಲಾ ದೈವದ ಸಂಗತೀಲೆ ನಮಾಜು ಮಾಡತಿದ್ರೋ ಕೂಡಿ
ಅಂತಾ ವ್ಯಾಳೇಕ ಓಡಿ ಹೋಗಿ ಕುಂತಾರ ಮುತ್ಯಾನ ಬೆನ್ನಿನ ಮ್ಯಾಲೆ
ಜೋಡೀಲೆ ಅಣ್ಣ ತಮ್ಮಾ | ಕುಂತ ಕೇಳರಿ ಸುಮ್ಮಾ || ೫ ||

ಇ|| ಮನದಲ್ಲಿ ವಿಚಾರ ಮಾಡುವರೋ ನಬಿಸಾಹೇಬರು ನಮ್ಮಾ
ಕುಂತಾರ ಅಂತ ಅಣ್ಣ ತಮ್ಮಾ
ಏರು || ತನ್ನ ಬೆನ್ನ ಮ್ಯಾಲಿಂದ ಇಬ್ಬರಿಗೆ ಇಳಿಸಬೇಕಂತಾ
ಶಿವನ ಧ್ಯಾನದಲ್ಲಿ ಕುಂತಾ
ಅಂತಾರ ನಮಾಜ ಅಪಮಾನ ಆಗೂದು ಅಂತಾ
ಬಿತ್ತ ಗುಮ್ಮಾ | ಕುಂತ ಕೇಳರಿ ಸುಮ್ಮಾ || ೬ ||

ಶಿವನ ಅಪ್ಪಣಿಯಿಂದ ಆಕಾಶವಾಣಿ ನುಡಿತರಿ ನೇಮಾ | ಆಗೂದಿಲ್ಲಾ ಅಧರ್ಮಾ
ಏರು || ಈ ಸಪ್ಪಳ ಕೇಳಿ ಬಂತರಿ ರಸೂಲಿಲ್ಲಾ ಕಿವ್ಯಾಗ | ಖುಷಿ ಆಗ್ಯಾರ ಆಗ
ಮುಗದಿಂದ ನಮಾಜ ಮೊಮ್ಮಕ್ಕಳಿಗೆ ಮಾಡ್ಯಾರ ಪ್ರೇಮಾ | ಕುಂತ ಕೇಳರಿ ಸುಮ್ಮಾ || ೭ ||

ಸುಲೇಮಾನ ಶರಣರೊಳಗ ಹೆಚ್ಚಿಗೆ ಅಂದಿದ್ದಿ ಉತ್ತಮಾ
ನೀ ಎಂಥಾ ಗುಲಾಮಾ ||
ಏರು || ನಬಿಸಾಹೇಬರಕ್ಕಿಂತ ಪದವಿ ಹೆಚ್ಚಿಗೆ ಯಾವ ಶರಣರನಾ
ಕೊಟ್ಟಿಲ್ಲಾ ಆ ಭಗವಾನಾ | ನಾ ನಬಿಸಾಹೇಬರ ಓದುವೆ ಕಲ್ಮಾ
ಕೊಡುವೆ ಈ ಜಲ್ಮಾ | ಕುಂತ ಕೇಳರಿ ಸುಮ್ಮಾ || ೮ ||

ಇ|| ತಿಳೂತೈತಿ ಎಷ್ಟೈತಿ ನಿಂದು ನೋಡುವೆ ದಮ್ಮಾ | ಬೇದಿಬಿಟ್ಟ ಶ್ರಮಾ
ಏರು || ಆಡಿ ನೀ ಆಟಾ ಕೆತ್ತಿಗೂಟಾ ಬಡದಾಂಗ ನಿಮ್ಮನ್ನಾ
ನೀ ಕೇಳೋ ಮೋದೀನಾ | ಬಣ್ಣ ಕುಂಕುಮ ಹಣೆಗೆ ಹಚ್ಚಿದಲ್ಲೆ
ಕಾಣಸತಿದಿ ನೀ ಚಂದ್ರಮಾ | ಕುಂತ ಕೇಳರಿಸುಮ್ಮಾ || ೯ ||

ಇ|| ನಾ ಆಟ ಆಡಿದ್ದು ತಗದಿ | ಹಣೆಗೆ ಹಚ್ಚಿದ ಕುಂಕುಮಾ
ಅಂದಿ ಧೇಟ ಹರಾಮಾ |
ಏರು || ನೀ ಆಡಿ ಆಟಾ ಮುದುಕ ಆದಿ ಹಚ್ಚಿ ಕುಂಕುಮಾ
ನಿಂದು ಬ್ಯಾರೇ ಐತೇನ ಧರ್ಮಾ | ನಾನೇನು ಮುಸಲ್ಮಾನ ಇದ್ದು
ನಮದ್ವ್ಯಾಂಗ ಹರಾಮಾ | ಕುಂತ ಕೇಳರಿ ಸುಮ್ಮಾ || ೧೦ ||

ಇ|| ಕವಿಕಲ್ತ ಹಾಡಾಂವಾ ಅಂತ ಬೊಗಳತಿ
ಇಟ್ಟ ವರಮಾ | ನೀ ಥೇಟ ಹಜಾಮಾ
ಏರು || ಶಾರ ಬಾಗಲಕೋಟ್ಯಾಗ | ಪೀರ ಮಲ್ಲೆಕಲ್ಲಾ
ನೆನದಾರೊ ಘಟ್ಟಿ | ಹಾಡುವೆ ಕವಿಕಟ್ಟಿ
ಹುಸೇನಮಿಯ್ಯಾನ ಕೂಡ ವಾದ ಹಾಕಬ್ಯಾಡೋ ಸುಧಾಮಾ
ಕುಂತ ಕೇಳರಿ ಸುಮ್ಮಾ

* * *

## ೫. ಮುಹ್ಮದ ಪೈಗಂಬರರು ಮೇ ಅರಾಜಕ್ಕೆ ಹೋಗಿ ಬಂದ ಪದಾ

ಸಾಕ್ಷಾತ್ ಶಿವನ ನೇಮಾ ಮಾಡುವೆನು ಜನಕ ಕ್ಷೇಮಾ

ಇ|| ಭೂಮಿಮ್ಯಾಲೆ ಮನುಷ್ಯರ ಜಲ್ಮಾ | ಮುಕ್ತಿ ಆಗಮಾ

ಮುಹ್ಮದರ ನಾಮ ನುಡಿದು

ಭಕ್ತಿಯನ್ನು ಹಿಡಿಯಿರಿ ತಿಳಿದು | ಮರತೇಕ ಬಂದರು ಇಳಿದು

ಏರು || ಒಂದಾನ ಒಂದು ದಿವಸ | ಪರಮಾತ್ಮನಿಗೆ ಆದೀತೋ ಧ್ಯಾಸ

ಜಿಬರೀಲಗ ತಿಳಿಸಿ ಕಾಸ | ಆಗೇತಿ ನನ್ನ ಮನಸ

ಚ್ಯಾಲಿ || ನೀ ಭೂಮಿಗೆ ಹೋಗು ಲಗುಮಾಡಿ

ಶರಣರನು ತರಬೇಕು ಕೂಡಿ

ಅಂದಾನೋ ಅಲ್ಲಮಾ | ಶ್ಯಾಮಾ ಪ್ರೇಮಾ || ೧ ||

ಇ || ಜಿಬರೀಲ ಸನೇಕ ಬಂದು ಕಾಮಜಾನಿ ಸ್ವರ್ಗದಿಂದ ತಂದಾ

ಎಷ್ಟು ಹೇಳಲಿ ಅದರ ವರ್ಣನಾ ಶಕ್ತಿ ಪಾವನಾ

ಏರು || ಪಂಚವಜ್ರ ಹೊಳಪಿನ ದೇಹಾ || ಮುತ್ತು ರತ್ನ ಬೆಳಕಿನ ಛಾಯಾ

ಗೋಮೇಧಿಕ ಗರಿಗಳು ಪಾಯಾ | ಪಂಚವರ್ಣ ಮುಖದಲಿ ನಾಮಾ

ಲಾ ಇಲಾಹಾ ಬರೆದತ್ತೋ ಕಲ್ಮಾ | ಸೃಷ್ಟಿಗೆ ಅಪರೂಪ ಜಲ್ಮಾ

ಹುಟ್ಟಿಸಿದ ಪರಮಾತ್ಮಾ ||

ಚ್ಯಾಲಿ | ಈ ಧರಣಿಗೆ ಬಂದಿತೋ ಜೋಡಿ | ಶರಣರನು ಎಬ್ಬಿಸಿಬೇಡಿ

ನಡಿಬೇಕ್ರಿ ಶ್ಯಾಮಾ ಕಲ್ಮಾ ಅಲ್ಮಾ || ೨ ||

ಇ|| ಜಿಬರೀಲ ಮಾಡಿದನಾ ಮೇ ಅರಾಜ ನಿಮ್ಮ ವಚನಾ

ತರುವುದಕ್ಕೆ ಮಾಡಿ ಜತನಾ

ದೇವ ಶಾಸ್ತ್ರನಾ | ಕೂಡಿಕೊಂಡು ಹೊಂಟಾರೋ ಚಂದ |

ಜಿಬರೀಲ ಇರತಿದ್ದ ಮುಂದಾ

ಏರು || ಶಬ್ದ ಬಂತೋ ಎಡಬಲದಿಂದಾ

ನಿಂದರಬೇಕೋ ಶರಣರು ತುಸಾ | ಕೇಳರಿ ಮಾತ ನಮ್ಮದು ಖಾಸಾ

ಕೇಳದ್ಹಾಂಗ ಹೊಂಟ್ರೊ ರವಸಾ | ಮುಂದ ಮಾಡ್ಯಾರೋ ವಾಸಾ |

ಚ್ಯಾಲಿ || ಮುದುಕಿಗೆ ಕಂಡ್ರೋ ಲಗುಮಾಡಿ

ಎದ್ದು ನಿಂತು ಶರಣರನು ನೋಡಿ ಅಸಲಾ ಪದ್ಮಿನಾ ಹೊನ್ನಾ ಚೆನ್ನಾ || ೩ ||

ಇ|| ಹೆಣ್ಣ ಅನತೈತಿ ಮದನಾ | ಮಾತಾಡಬೇಕ್ರಿ ಮೌನಾ

ಮಾರಿ ತಿರುವಿ ನೋಡಲಿಲ್ಲ ಶರಣಾ | ಸಾಗಿ ಮೋಹನಾ

ಶರಣರು ಜಿಬರೀಲ ನೋಡಿ ಕೇಳತಾರೋ ಮಾತಿನ ತೋಡಿ

ಕೇಳಬೇಕ್ರಿ ವಿಸ್ತಾರ ಮಾಡಿ

ಏರು || ಎಡಬಲಕ ಆದ ಶಬ್ದಾ | ನಸರಾಣಿ ಯಹೂದೀದ | ಉತ್ತರ ಕೊಡದೆ ಇದ್ದಾ

ನಿಮ್ಮ ಉಮ್ಮತ ಉಳಿದ | ನುಡಿದಿದ್ದು ಉಮ್ಮತ ಹೋಗಿ

ಹಾಳಾಗಿತ್ತೋ ನಸುರಾಣಿಯಾಗಿ | ಕೇಳಿದ ಶರಣಾ | ದೀನಾ ಮಾನಾ

ಚ್ಯಾಲಿ || ದಾರಿಯೊಳಗ ನಿಂತ ಹೆಣ್ಣಾ | ಪರಪಂಚ ಮಾಯಾ ಜಾಣಾ
ಸತ್ಯವಾಗಿ ಕೊಡಲಿಲ್ಲ ವಚನಾ | ಮುಕ್ತಿ ಪಾವನಾ || ೪ ||

ಇ|| ಹೊನ್ನು ಹೆಣ್ಣು ಮಾಯದಿಂದಾ
ಮಣ್ಣು ಕೂಡಿ ಹೋಗೂದು ಚಂದಾ
ನರಕದೊಳು ಸುಡುವುದು ದುಂದಾ
ಏರು || ಶಾಂತದಿಂದಾ ತಿಳಿಸಿದ ಮಾತಾ | ಶರಣರ ಮನಸಾದೀತ ಶಾಂತಾ
ದೇವರ ಧ್ಯಾನಾ ಮಾಡೂತ | ಮಕ್ಕೇಕ ಮುಟ್ಟಿ ತುರತಾ
ಗದುಗು ಇರುವುದು ದೇಶಕ ಭರತಿ | ಮಾಬೂಬರದು ಕರಣಾತು ಪೂರ್ತಿ
ಚ್ಯಾಲಿ || ಜಂಗಲಿ ಚಮನಾ ನೇಮಾ ಹೇಮಾ
ಸಾಕ್ಷಾತ್ ಶಿವನ ನೇಮಾ | ಮಾಡುವೆನು ಜನಕ ಕ್ಷೇಮಾ || ೫ ||

* * *

## ೬. ಚಂದ್ರನನ್ನು ಮತ್ತೆ ಹೋಳು ಮಾಡಿ ಕೂಡಿಸಿದ ಪದಾ

ಏನ ಚಂದಾ ಸಬಾ ಬಂದ ಕೂಡಿರಿ ಅಸಲಾ
ಇತ್ತ ಇಡಬೇಕರಿ ನಿಮ್ಮ ಖ್ಯಾಲಾ |
ಏರು || ಪುರಮಾಸಿ ತಳಸೋಸಿ ಚೌಕಾಸಿ | ಮಾಡರಿ ಮನಸಿಗೆ ತಂದ
ಬಿಡೆ ಇಲ್ಲದೆ ಯಾರ್ಯಾರದಾ | ಅಡಿ ಪ್ರಾಸ ಕಡಿತನಾ ಸುದ್ದಾ
ನುಡಿಗಳು ತಪ್ಪದ ಬಂದಾ | ಬರಲಿ ಅಕ್ಷರ ಹಿಡಿದ ಸಾಲಾ || ೧ ||

ಇ|| ಬಲುಮಂದಿ ಕವಿ ಮಾಡೂಂದು ಸುಳ್ಳ ದೌಲಾ
ಸಿಕ್ಕಿಲ್ಲವರಿಗೆ ಗುರುಕೀಲಾ |
ಏರು || ಹೆಚ್ಚಿನಾ ಎಸನಾ ಹಾಕಿ ನಾನಾ ತಗದೇನಿ ಬಯಾನಾ
ಇಟ್ಟಕೇಳರಿ ಧ್ಯಾನಾ ನಬಿಸಾಹೇಬ ಶರಣಾ
ತೋರಿಸಿವಿ ಸತ್ಯವನಾ ಬಾಲಾ ಹೇಳುವೆ ಅವರ ಲೀಲಾ || ೨ ||

ಇ|| ಮಸಲತ್ತು ಮಾಡಿ ಬಂದಾನ ಅಬೂ ಜೈಲಾ
ಕರಕೊಂಡು ಯಹೂದಿಗೆ ಹಿಂಬಾಲಾ
ಏರು || ದೃಷ್ಟಾ ಬೃಷ್ಟಾ ಅಡಮುಟ್ಟಾ | ಅಬೂಜೈಲಾ ಯಹೂದಿಗೆ ಅಂದಾ
ನಬಿಸಾಬ ಕುಂತಾನ ಬೆಳೆದಾ | ಕಣ್ ಕಣ್ ವಿದ್ಯೆದಿಂದಾ
ಮಂದಿಗೆ ಹಟ್ಯಾನ ಫಂದಾ | ಬಾಳ ನಡಸ್ಯಾನ ಬೋಲಭಲಾ || ೩ ||

ಇ|| ಈ ಭೂಮಿ ಬಿಟ್ಟ ಮಾಡೂನು ಒಂದು ಸವ್ವಾಲಾ
ಮುಗಿಲಮ್ಯಾಗ ಜ್ಯಾದು ನಡಿಯೂದಿಲ್ಲಾ |
ಏರು | ಹತಿಯಾರಾ ಹಿಡದಾರಾ ಪಾಮರಾ | ಅಂತಾರ ನಬಿಸಾಹೇಬರಾ

ಸವಾಲೈತ್ರಿ ನಿಮ್ಮ ಮ್ಯಾಗ ಬಿಟ್ಟ ಈ ಭೂಮಿ ಮ್ಯಾಗ
ತೋರಸಬೇಕ ಆಕಾಶ ಮ್ಯಾಗ ಇಲ್ಲಂದರ ಜಲ್ಮಾ ಉಳಿಯಾಕಿಲ್ಲಾ || ೪ ||

ಇ|| ಎರಡು ತುಣಕಮಾಡಿ ಚಂದ್ರಗ ರಸೂಲಿಲ್ಲಾ
ಕಾಣೂಹಾಂಗ ಸರೂ ಜನಕೆಲ್ಲಾ
ಏರು || ಶರಣರಾ ನೆನೆದಾರ ಶಂಕರಾ | ನಮಾಜ ಮಾಡಿ ವರವ ಬೇಡಿ
ಚಂದ್ರಗ ಸನ್ನಿಯ ಮಾಡಿ | ಆದೀತ ಎರಡು ತುಕಡಿ
ಅಬೂಜೈಲಾ ಅಂತಾನ ನೋಡಿ | ಮತ್ತೆ ಕೂಡಸರಿ ರಸೂಲಿಲ್ಲಾ || ೫ ||

ಚಂದ್ರಗ ಒಂದ ಆಗಂದ್ರ ರಸೂಲಿಲ್ಲಾ | ಅಂತಾನ ದುಷ್ಟ ಅಬೂಜೈಲಾ
ಏರು || ಮತ್ತ ತಂದು ಹಚ್ಯಾನ ಪಂಟಾ | ಮಾಡಿ ನಮ್ಮ ಕಣ್ಕಟ್ಟಾ
ತೋರಿಸಿದ ಹಾಂವಗಾರಾಟ  ಸಾಕ್ಷಿ ಇದಕ ಯಾರೂ ಇಲ್ಲಾ || ೬ ||

ನುಡದಾರ ಬಂದ ನೋಡಿದಾರ ಜನರೆಲ್ಲಾ
ಯಾರೂ ಹೇಳಿದರೂ ಕೇಳವಲ್ಲಾ
ಏರು || ಜಾರಾ ಜೋರಾ ಬದ್ದ ಖೋರಾ | ಅಬೂಜೈಲಾ ಹ್ವಾದಾನ ಓಡಿ
ಕಲ್ಮಾ ಓದ್ಯಾನ ತೀಡಿ | ಹೋತ ಅವನ ಮನಸಿನ್ಯಾಗ ಜಲ್ಲಾ || ೭ ||

ಇ|| ನಾಡಿನೊಳಗ ಬಾಗಲಕೋಟೆ ಸೇಲಾ
ಅಲ್ಲಿ ಇರುವದು ಗುರುಕೀಲಾ
ಏರು || ಧೀರಾ ಪೀರಾ ದಸ್ತಗೀರಾ
ಕೇಸುಪೀರ ಕೊಟ್ಟಾ ಅಕಲಾ | ನಾಗೂ ಗೌಸೂನ ಕವಿಗಳು ಮಿಗಿಲಾ
ಜಿದ್ದ ಆಡಿ ಅವರ್ಥಿಂಬಾಲಾ | ಕಳಕೊಂಡಿ ರುಂಬಾಲಾ
ಕೊಟ್ಟಾರ ಮುಕಳಿಮ್ಯಾಗ ಗುಲ್ಲಾ  || ೮ ||

* * *

## ೭.  ಯೆಮನ್ ಅರಸನನ್ನು ಮುಸಲ್ಮಾನನಾಗಿಸಿದ ಪದಾ

ಶ್ರೀ ಸಭಾ ನೆರದಿರಿ ಗರದಿ | ಗುರು ಹಿರಿಯರ ಪಾದಕ ಹೊಂದಿ
ಇದ್ದ ಮಾತ ಶ್ರೀ ಸುದ್ದ ತಿಳಿಸುವೆ ಸುದ್ದಿ | ಶಾಸ್ತ್ರರ ಸರಿಯಾಗಿ
ಏರು || ಅರುಹಿಡದು ನಡದಾವ ಶ್ರೇಷ್ಠಾ | ಗರು ಇಟ್ಟಾಂಂವ ಕಡಿತನಾ ಕೆಟ್ಟಾ
ಇಟ್ಟ ಗುರಿಯ ಸೃಷ್ಟಿಯೊಳು ಸಟ್ಟಾ ಆಳುತ್ತಿದ್ದ ಯೆಮನ್‌ದ ಅರಸಾ
ಅವನ ಕಿರೆ ಸಾರುವೆ ಸಭೆದಾಗ | ಇತ್ತ ಇಟ್ಟ ಕೇಳರಿ ತುಸಾ
ವರಮ ನಬಿಸಾಹೇಬರ ಸಂಗತೀಲೆ ಇಟ್ಟ | ಕಡಿಗೆ ಆದ ಕಾಲ ಕಸಾ
ನಡಿಬೇಕ್ರಿ ಧರ್ಮದ ಸರಿ
ಭಕ್ತಿಲೆ ನಡಕೊಂಡವನಿಗೆ ಮೆಚ್ಚುವಾ ಆ ಶ್ರೀಹರಿ

ಕರಿಣ ಐತಿ ಕಾಣೂದು ಸ್ವರ್ಗಾ | ಬುದ್ದಿವಂತರ ಮುಕ್ತಿಯ ಮಾರ್ಗ
ಹಿಡಿದ ನಡದಲ್ಲೆ ಕಂಡಾರ ಸೊರ್ಗ ಆಗ ತಿಳಿಮನ ಮರಿಗಿ || ೧ ||

ಇ || ಸೃಷ್ಟಿಕರ್ತನ ಕೃಪಾ ಅರ್ಪಿಸುವೆ ದೈವಕ ಸೊಲ್ವಾ
ವಲ್ಲತ ಬ್ರಹ್ಮ ನಬಿಸಾಹೇಬರಿಗೆ ಹಿಡಿ ನೆನಪಾ ಅವನಿಗೆ ಪ್ರೀತಿ ಆಗಿ
ಏರು || ಶಿವನ ಅಪ್ಪಣೆಯಿಂದ ಜಿಬರೀಲ ಇಳಿದಾರ ತತ್ಕಾಲಾ
ಬಂದ ಶರಣರ ಮುಂದ ತಿಳಿಸಿದಾರ ಸಾಂಬನ ಕೌತೂಕ ಸರೂಯೆಲ್ಲಾ
ಚಂದದಿಂದ ಮನದಿಂದ ಇಂದ ನೀವು ಖುದ್ದ ಹೋಗಬೇಕರಿ ಮೊದಲಾ
ಯೆಮನ್ ಅರಸ ಅರಿವಿಷ್ಟ ಮಹಾಸಿಟ್ಟ | ಇಟ್ಟಾನ ಮನದಲ್ಲಿ ನಿಮ್ಮ ಮ್ಯಾಲಾ
ಕೇಳರಿ ತುರ್ತಾ ಹೋಗರಿ ಮುಸಲ್ಮಾನ ಮಾಡರಿ ಅವನಿಗೆ ಬಿಡಬಾರದು
ಕೇಳಿ ತಾ ಒಬ್ಬನೆ ಸ್ವತಾ ಕುದುರಿಯ ಕುಣಿಸುತಾ
ಹೊಂಟಾರ ದಾರ್‍ಯಾಗ ತ್ವಾಟ ಕಂಡಾರ | ವಿಪರೀತ ಕುಂತಾರ ಬೆರಗಾಗಿ || ೨ ||

ಆ ತೋಟಯಿತ್ತ ಒಳೆ ಭರ್ತಿ | ಶರಣರಿಗೆ ಆಗಿ ಪ್ರೀತಿ
ತ್ವಾಟ ನೋಡಬೇಕಂತ ಆಗಿ ಅಕ್ಕರತಿ | ಒಳಗ ಹೋಗ್ಯಾರ ಸಾಗಿ
ಏರು || ಶ್ರಿಂಗಾರ ತೋಟೆಲ್ಲಾ ತಿರುಗಿ | ನೋಡಿದಾರ ಮನಸ ಹರುಪಾಗಿ
ಒಬ್ಬ ಪುರುಷ ಅಲ್ಲೆ ಸೊಂತಾ | ತಿರುವುತಾನ ಹರದ ಹೋಗುವ ಕಾವಲಿ ನೀರಾ
ಆತಗ ಶರಣರು ಬ್ಯಾಗ ಹೋಗಿ ಹೀಂಗ ನಿಂತ ಕೇಳತಾರ ಅವನ ಇದಿರಾ
ಏನಚಂದ ಈ ತ್ವಾಟಕ್ಯಾರ ಅಧಿಕಾರ ಹೇಳೋ ಕೇಳುವೆ ಹೆಸರಾ
ಆ ಪುರುಷ ಆಗಿ ಹರುಷ ಅಂತಾನ ಮಹಾ ಶ್ರೇಷ್ಟಾ | ಇಟ್ಟಾನ ಕೇಳರಿ ಯೆಮನರಸ
ದಂಗ ಆಗಿ ಅಂತಾರ ಶರಣಾ | ಏನ ಸಾಂಬನ ಅಂತಃ ಕರುಣಾ
ತಡಮಾಡದೆ ನಾ ಬಂದೆ ಇಲ್ಲಿತನಾ | ಗುಡ್ಡಗಂವಾರ ತಿರುಗಿ || ೩ ||

ನೀರಿನ ಕಾವಲಿ ನೋಡಿ ಮಲಕೊಂಡಾರ ನಮಾಜಮಾಡಿ
ನಿದ್ರಿ ವ್ಯಾಳೇಕ ಪಾದ ಕಾವಲಿನೊಳ ಕೂಡಿ | ನೀರ ಹರೂತಿತ್ತ ಸಾಗಿ
ಏರು || ತೊಳತೊಳೆದ ಪಾದ ನೀರಾ | ಹೋಗೂದು ಗಿಡಗಂಟಿಗೆ ಪೂರಾ
ಮತ್ತಿಷ್ಟ ತ್ವಾಟಾ ಚಿಗೀತ ಹೆಚ್ಚಿಗೆ ಹತ್ತಿದ್ವೊ ಹಣ್ಣು ಹಂಪಲಾ
ಏನ ಹೇಳಲಿ ಕೇಳರಿ ದೈವಾ ಚಿತ್ತಯಿಟ್ಟ | ಆ ತ್ವಾಟೆಲ್ಲಾ ಗಟ್ಟಿ ಗಿಡಾಗಂಟಿ
ಒಟ್ಟಿಗೆ ನುಡಿತಿದ್ವೊ ಅಂತ ನಬಿ ರಸೂಲಿಲ್ಲಾ |
ಒಳ್ಳೆ ಭರಪೂರಾ ಗಾಬರ್‍ಯಾಗಿ ಬಿಟ್ಟ ತೋಟ | ಓಡಿ ಹ್ವಾದಾ ಮಾಡಿ ಅವಸರಾ
ಜೀವದಯಾಯಿಲ್ಲದ ಖಬರಾ | ಕಂಡಾನ ತನ್ನ ಊರಾ
ಮುಟ್ಟಿ ತ್ವಾಟದ ತಿಳಿಸ್ಯಾನ ಎಲ್ಲಾ ಮಜಕೂರಾ | ಅರಸಗ ಭೆಟ್ಯಾಗಿ || ೪ ||

ಕೇಳಿ ಅರಸ ಆಗಿ ಸಿಟ್ಟ | ದಂಡ ದರಬಾರ ಪುಂಡ ಶ್ರೇಷ್ಟಾ
ಮುತ್ಯಾರ ಸಂಗತಿಲೆ ಹೊರಟಾನ ಜರ್ಬಾ | ಬಳೆಯಿಟ್ಟ ಅವರ ಕೊಲ್ಲೂವುದಕ್ಕಾಗಿ
ಏರು || ಆ ತ್ವಾಟದ ಸುತ್ತಮುತ್ತ ದಂಡ ದರಬಾರ ಇಟ್ಟಾನ ಶಿಸ್ತ
ಹತಿಯಾರ ಸಂಗೀನ ಬಾಕ ಕರಾಬಿನ ಹಿಡಿದ ನಡಾಕಟ್ಟಿ ಜರ್ಬಿಲೆ

ನಿಂತಾರ ಅವರಿಗೆ ಅಂತಾನ ಅರಸ ಹೋಗುವೆ ನಾಯಿನ್ನಾ ತೋಟದಲ್ಲೆ
ಹೋದವನ ಬಿಡೂದಿಲ್ಲಾ ಓಡಿಹ್ವಾದರ ಪಾರಮಾಡರಿ ಒಳ್ಳೆಯೆಚ್ಚರಲೆ
ಬಿಚ್ಚುಗತ್ತೀಲೆ ಮಹಾಸಿಟ್ಟೇಲೆ | ಖೋಡಿ ಅರಸ ಓಡಿ ಒಳಗ ಹೋಗಿ
ಶರಣ್ಣಂತೇಲಿ | ಅಂತಾನ ಬಿಡೂದಿಲ್ಲಯಿಲ್ಲಿ | ಸಿಕ್ಕಿರಿ ನನ್ನ ಕೈಯಾಗ ಬಂದ
ಮಾಡುವೆ ಸಂದಾರ ಇದೆ ಹತಿಯಾರಲಿಂದ ಬೀಳುಹಾಂಗ ತುಣಕಾಗಿ || ೫ ||

ಇ|| ಹೊಡಿಯಂತ ಹಿಡಿ ಸಮಾಧಾನ | ಅಂತಾರ ನಬಿಸಾಹೇಬ ಶರಣಾ
ಪೃಥ್ವಿಪಾಲಕ ನನ ಮ್ಯಾಲೆಯಿಟ್ಟ ಕರುಣಾ | ಮಣೂದಿಲ್ಲ ಯಾರ್‍ಯಾರಿಗೆ
ಏರು || ಜಯಸಂಗರ ಜಗಭರಿತರ ಭಜಿಸೋ ಭಜನಿ ಮಾಡೋ ಹೀಂಗ
ನಡಿನಡಿ ನಮ್ಮ ಧರ್ಮಾ ಓದಿ ನೀ ಕಲ್ಮಾ ಆಗೋ ಮುಸ್ಲಿಮಿನಾ
ಸಿಟ್ಟು ತಾಳಲಾರದೆ ಅರಸ ಹತಿಯಾರ ಹಸ್ತದಿಂದ ಎತ್ತಿ ಆ ಕ್ಷಣಾ
ಹೊಡಿಬೇಕಂತ ಹೋಗುವಷ್ಟರಲ್ಲಿ ಕೈ ಅಲ್ಲಿಗೆ ನಿಂತು ಎರಡು ಸವನಾ
ಗಾಬಾದನು ಯೆಮನ್ ಅರಸನು ನಡಗ ಹುಟ್ಟಿ ಕಡದ ತನ್ನ ತುಟಿ
ಎಡವಿ ನೆಲಕ ಬಿದ್ದನು | ಬಿದ್ದಲ್ಲೆ ಅಂತಾನ ಕುಲ್ಲಾ
ಖರೇ ಇದ್ದರ ನಬಿರಸೂಲಿಲ್ಲಾ
ಕೇಳರಿ ಮಾಡುವೆ ನಾನಾ ನಿಮಗೆ ಸವ್ವಾಲಾ | ಮಾತೊಂದು ನೆನಪಾಗಿ || ೬ ||

ಇದರಿಗೆ ಕಾಣೂದು ಗೋರಿ | ಅದರೊಳಗಿನ ಹೆಣದ ಮಾರಿ
ನೋಡುವೆ ಹೆಣಕ ಜೀವಾ ತುಂಬಿಸಬೇಕರಿ ಅಂತಾನ ಒಳೆ ಹಿಗ್ಗಿ
ಏರು || ಹೀಂಗ ಆತ ಮಗಳ ಅವಸ್ತಿ ಅರಸ ಅಲ್ಲೆ ಶರಣರ ಸಂಗತಿ
ವಾದ ಹಾಕಿ ಹೀಂಗಾ ಅಂದಾ ನನ್ನ ಮುಂದಾ | ನಡೂದಿಲ್ಲಾ ಯಾತಾಳ ಮಂತರಾ
ಸುದ್ದಿಕೇಳಿ ಬಾ ಮನಿಗೆ ಹೋಗಿ ಅಂತ ಹೇಳ್ಯಾರ ಪೈಗಂಬರಾ
ಅಷ್ಟರೊಳಗೆ ಅರಸನ ಮುಂದಾ | ಮನಿಸುದ್ದಿ ತಿಳಿಸಿದಾರ ಬಂದ ಜನರಾ
ಕೇಳಿ ಅವುಸರಾ ಹಾಕಿ ಉಸರಾ | ದುಃಖ ತಾಳದ ಮಿಕ್ಕಿ ಓಡಿದಾ
ಜೀವವಿಲ್ಲದೆ ಖಬರಾ | ಅರಸ ತನ್ನ ಮಗಳಿಗೆ ಮಾರಿ
ಕಂಡ ಹೌಹಾರಿ ಅಳತಾನ ಎತ್ತಿಕೊಂಡ ಬಗಲಾಗ ಒಳೆ ಮಿತಿಮೀರಿ
ಸಣ್ಣ ಮಾರಿ ಮಾಡಿ ಕೂಗಿ || ೮ ||

ಏನ ಹೇಳಲಿ ಸಾಂಬನ ಆಟ | ಆ ಕನ್ನಿಕೆಗೆ ಆಗಿ ಕಷ್ಟ
ಹಡದಾಳ ತೊಂಬತ್ತು ವರ್ಷದ ಮಗಾ | ಒಳ್ಳೆ ಶ್ರೇಷ್ಟ ಕುಂತಾನ ಡೌಲಾಗಿ
ಏರು || ಇತ್ತು ಗಡ್ಡಾ ಬಿಳೇ ಕೂದಲಾ | ತ್ರಾಣ ತುಸು ಇದ್ದಿದ್ದಿಲ್ಲಾ
ಕುಂತಾನ ಹಂತೇಲಿ ಮುತ್ಯಾಗ ತೊಡಿಮ್ಯಾಲ ತಗೊಂಡ
ಆಡಿಸುವಂತ ಮುದುಕ | ಹುಟ್ಯಾನಂತ ಊರ ತುಂಬ ಸುದ್ದಿಕೇಳಿ
ಓಡಿ ಬಂದಾರ ಜನರೆಲ್ಲ ನೋಡುದಕ
ಕಂಡ ಮುದುಕ  ಅಂತಾನ ಮುಂದಿಗೆ ನೆರದಿರಿ | ಬಂದ ಇಲ್ಲೆ ಯಾತಕ
ಯೆಮನ್ ಅರಸನು ಹೀಂಗ ನುಡಿದನು ನಾ ಏನ ಚಮತ್ಕಾರ ಆತ
ಇದು ಅಂತ ಹಣಿಹಣಿ ಬಡಕೊಂಡನು | ಮುತ್ಯಾಗ ಮುದಕ ಹೀಂಗ

ಅಂದಾ ಶರಣರ ಕೂಡ ಹಾಕಿದಿ ವಾದಾ | ಅಲ್ಲೊ ಬುದ್ದಿಗೇಡಿ
ಹಿಡಿನಡಿ ಅವರ ಕಾಲಾ | ಅಂತಾನ ತಲಿಬಾಗಿ || ೯ ||

ಕೇಳಿ ಏಕಂದ್ರಾ ಜನಾ ಹೊಂಟಾರ ಅರಸ ಆಕ್ಷಣಾ
ಮುಂದ ಮುದುಕ ಹಿಡಕೊಂಡ ಬಡಗಿ ಒಂದೇ ಸಮನಾ
ಹೀಂಗ ನಡುತಿದ್ದಾ ನಡಗಿ ||
ಏರು || ನೋಡಿ ಜನರೆಲ್ಲಾ ಅವನ ನಕ್ಕೊಂತ ಬೆನ್ನ ಹಿಂದೆ ಹಿಂದ
ನಡದಾರ ಮುದಕ ಮುಂದ ಇದ್ದಾ ಬೆಟ್ಟಾಗಿ ಶರಣರಿಗೆ ಕೈಮುಗಿದಾನ
ಇರಲಿ ಕರುಣಾ ಓದುಸರಿ ಕಲ್ಮಾ ಓದುವೆ ಪ್ರೀತೀಲೆ ನಾ ಖುದ್ದಾ
ಕೇಳಿ ಶರಣರು ಅಂತಾರ ಆತಗ | ಯಾರೋ ಹೇಳೋ ನೀ ನನಗ ಒಡದಾ
ಆ ಮುದುಕನು ಹೀಂಗ ಅಂದನು | ಇದೇ ಗೋರಿ ತಪಶೀಲ
ಅರಸ ನಿಮಗ ಕೇಳಿದನು | ನಾನೇ ಇದ್ದೇನಿ | ಬೇಶಕ್ ಶೀಸ ಪೈಗಂಬರ ಕಾಲಕ
ನಾ ಇದ್ದೆ ಜೀವಂತ ಸತ್ತ ಬಿದ್ದಿದ್ದೆ ಇನ್ನೂ ತನಕ | ಅಂತಾನ ತಲಿಬಾಗಿ || ೧೦ ||

ಕೇಳಿ ಕೂಡಿದಂತ ಜನರು | ಹೌದಂತ ಖರೇ ಶರಣರು
ರಾಜಾ ಪ್ರಜಾ ಪ್ರೀತೀಲೆ ಕಲ್ಮಾ ಓದ್ಯಾರು ಅವರ ಚರಣರ ಎರಗಿ
ಏರು || ಬಾಗಲಕೋಟಿ ಬರ್ತಿ ಬಹಾರ || ಸುತ್ತ ನಾಡಿಗೆ ಜಾಹೀರ
ಮಿಕ್ಕಿ ಮ್ಯಾಗಿನ ಓಣಿ ಗಂಡ ಮೆಟ್ಟ ಚಲ್ಲಾಟ ಮಾಡಿ ಹಚ್ಚೇವಿ ಬಿರದಾ
ಕರದ ವೈರಿಗೆ ಹುಸೇನಮಿಯ್ಯಾ ಅಂತಾರ ತುಳಿತಾರ ಸರಸರದಾ
ಕಾಸಿ ಕೆಬ್ಬಣಾ ಕೊಟ್ಟರ ಬರಿ ಉಳ್ಳಾಡಿ ಹ್ವಾದೀರೋ ಜರಜರದಾ
ನಮ್ಮ ಸರಿ ಹಚ್ಚಿ ವರಿ ಅಕ್ಷರ ಅಡಿಪ್ರಾಸ ಹೊಂದಿ ಮಾಡೋ
ನೋಡೂನು ಶಾಯರಿ ಮಲ್ಲೇಕಲ್ಲಾನ ದಯಾದಿಂದಾ
ಸಭಾದಲ್ಲಿ ವೈರಿಗೆ ಇಂದ | ಬಿಡೂದಿಲ್ಲಾ ಹೊಡೂತೇನಿ
ಕೆತ್ತಿಗೂಟಾ ಬಿಗಿ ಬಂಧ ಪುನಃ ಬರದಾಂಗ ತಿರುಗಿ || ೧೧ ||

*** * ***

**೮. ನಬಿಸಾಬರ ಪಾದಧೂಳಿಯ ಪವಾಡ ಪದಾ**

ಗರ್ದಿ ಸಭಾ ನೆರೆದಿರಿ ಜನಾ ಜಾತ್ರಿ ಜುಮರಾ
ಏರು || ಸುತ್ತಮುತ್ತ ಕುಂತೀರಿ ಬುದ್ಧಿವಂತ ಬರಿ ಬಲ್ಲವರಾ
ಚಿತ್ತಯಿಟ್ಟ ಕೇಳಿರಿ ಚೌಕಾಸಿ ಮಾಡಿರಿ ಹಿರಿಯರಾ
ಕಸರ ಇಲ್ಲದಾಂಗ ಕುಶಲ ಕೇಳಿ ನಿನ್ನ ಉಸಲಗಟ್ಟಿತೋ ಶಾಹೀರಾ
ಜಿಗದಾಡಿ ಕುಣಿದಾಡಿದಕ ಮಾರಿ ಮಾಡಿಕೊಂಡಿ ಕಿಂಕರಾ || ೧ ||

ಇ|| ತೋಡಿಗೆ ತೋಡಿ ಹಾಡಿ ಅನಿಸಿಕೊಳ್ಳೊ ಬಹಾದ್ದೂರಾ
ಏರು || ಬುದ್ದಿಗೇಡಿ ಒಬ್ಬ ಯಹೂದಿ ಇದ್ದಾನಾ ಮಹಾಬೇಮಾನ
ನಬಿಸಾಬರ ಹೆಸರು ಹೇಳಿದರ ಹಲ್ಲ ತಿಂತಿದ್ದ ಮುಡದಾರಾ

ಆತನ ಹೊಟ್ಟೀಲೆ ಹುಟ್ಯಾಳ ಏನ ಹೇಳಲಿ ಮನೋಹರಾ
ಕಾಮಿನಿ ಸಹಧರ್ಮಿಣಿ ಚಲುವಿಕೆ ಹೆಣ್ಣ ಸುಂದರಾ || ೨ ||

ಇ|| ಕೋಮಲಿ ಹೆಣ್ಣು ಬಾಲಿ ಗುಣಗಳು ಇದ್ದು ಗಂಭೀರಾ
ಏರು || ನೇಮಿ ನಬಿಸಾಹೇಬರ ಕಲ್ಮಾ ಓದುಳೋ ತನ್ನ ಮನಸೀಲೆ
ತಂದಿಗೆ ತಿಳಿಗೊಡದೆ ನೆನಸುವಳೋ ರಾತ್ರಿ ಹಗಲಿ
ಭಕ್ತೀಲೆ ನಡುವುಳೋ ನುಡಿವಳೊ ಬಾಯಿಲಿ ಅತಿ ಪ್ರೀತಿಲಿ
ಭಾವಕ ಬೇಶಕ್ ಮೆಚ್ಯಾನ ಶ್ರೀಹರಿ ಶಂಕರಾ || ೩ ||

ಇ|| ಶರಣರಗೂಡ ವರ್ಮಾ ಇಟ್ಟಿದ್ದಾ ಭಯಂಕರಾ
ಏರು || ಆ ಯಹೂದಿ ಒಮ್ಮಿಂದೊಮ್ಮೆ ಕಣ್ಣ ಕಾಣದೆ ಕುಂತರಿ
ಬ್ಯಾನಿ ತಾಳಲಾರದೆ ಉಳ್ಯಾಡುವ ಹಗಲಿ ರಾತರಿ
ಏನ ಹೇಳಲಿ ಶಿವನ ಆಟಾ ಯಾರಿಗೆ ತಿಳೂದಿಲ್ಲರಿ
ವೈದ್ಯರು ಬರುವರು ಕೊಡುವರು ಔಷಧ ನೀರಾ || ४ ||

ಇ|| ಔಷದ ಹಾಕಿದಾಂಗ ಕಣ್ಣ ಬ್ಯಾನಿ ಬಹುಜೋರಾ
ಏರು|| ಕೊಟ್ಟ ಔಷದ ಬ್ಯಾಸತ್ತ ಹೊಂಟ ಹೋಗ್ಯಾರ ಬಹುಜನಾ
ಸೊಚ್ಚ ಆಗವಲ್ಲವು ಕಣ್ಣಾ ಮಗಳ ಕಂಡ ಆಕ್ಷಣಾ
ನಿಂತಾಳ ತಂದಿಗೆ ಅಂತಾಳ ಕೊಡುವೆ ಔಷಧ ತಂದ ನಾ
ಅಪ್ಪಣಿ ಕೊಡಬೇಕ ನೀ ಹೇಡಿ ಮನಸ ಆಗೈತಿ ಬ್ಯಾಸರಾ || ೫ ||

ಇ|| ಇಷ್ಟು ಕೇಳಿ ಅಪ್ಪಣಿ ಕೊಟ್ಟಾ ಮಾಡಿ ಮನಕ ವಿಚಿಯಾರಾ
ಏರು || ಹೊಂಟಹೋಗಿ ಬೆಟ್ಟಿ ಆಗಿ ಶರಣರ ಮುಂದ ತಿಳಿಸ್ಯಾಳ ಮಜಕೂರಾ
ಕೇಳಿ ತಗದ ಕೊಟ್ಟಾರ ತನ್ನ ಪಾದ ಬುಡಕಿನ ಮಣ್ಣಾ
ಹಾಕುಹೋಗು ನಿಚ್ಚಳ ಆಗತಾವ ಎರಡು ಕಣ್ಣಾ
ನಕ್ಕೊಂತ ಕುಣಕೊಂತ ಬಂದಾಳ ಮಾಡಿ ಅವಸರಾ || ೬ ||

ಇ|| ಹಾಕ್ಯಾಳ ತಂದ ಮಣ್ಣ ಕಣ್ಣಿನೊಳಗ ಮನಪೂರಾ
ಏರು || ನಿಚ್ಚಳ ಆದಾವು ಕಣ್ಣು ಎರಡು | ಎದ್ದು ಕುಂತಾನ ಆಕ್ಷಣಾ
ನಗತಾನ ನಗಿ ಮುಗುಳ ಮಗಳಿಗೆ ಕೇಳತಾನ ಹೌಹಾರಿ
ಹಿಂತಾ ಔಷದ ತಂದಿ ನೀ ಎಲ್ಲಿಂದಾ ತಿಳಿಸವ್ವಾ ಹಾತೊರಿ
ಬೆದರಿ ಚದುರಿ ನಿಂತಾಳ ಹೈಪಾಗಿ ಸುಂದರಾ || ೭ ||

ಇ|| ಪ್ರಚಂಡ ಈ ಭೂಮಂಡಲಕ ನಬಿಸಾಹೇಬ ಶರಣರಾ
ಏರು || ಅವರ ಪಾದ ಬುಡಕಿನ ಮಣ್ಣತಂದ ಹಾಕೇನಿ ಕಣ್ಣಿನೊಳಗ
ಇಷ್ಟು ಕೇಳಿದ ಕ್ಷಣಕ ಬೆಟ್ಟನೆ ಬೇರಿ ಸಿಟ್ಟೀಲೆ ನಿಂತಾನ
ಸರದ ಮುಂದಕ ಹಿರದ ಹತಿಯಾರ ಹಿಡದ ಮಗಳಿಗೆ ಅಂತಾನ
ನೋಡವ್ವಾ ಕೇಳವ್ವಾ ಬಿಡೂದಿಲ್ಲಾ ಮಾಡುವೆ ಸಂಹಾರಾ || ೮ ||

ಇ|| ಶರತ ಇಟ್ಟ ಸಿಟ್ಟೀಲೆ ಹರತ ಚೂರಿ ಹಿಡಿದ ಗಂದಾರಾ
ಏರು || ತನ್ನ ಕಣ್ಣಿನೊಳಗ ಬಡಕೊಂಡ ಕಣ್ಣಗುಡ್ಡಿ ತಗತಗದಾನರಿ
ಹೇಸಿ ಯಹೂದಿ ಬೀಸಿ ಕಣ್ಣಗುಡ್ಡಿ ಒಗಿತಿದ್ದಾ ತಗತಗದಾ
ಹ್ಯಾಂಗ ಒಗೂತಿದ್ದಾ ಮತ್ತ ಪುನಾಬಂದು ಹತ್ತಿ ಕಣ್ಣ ಜೊತೆ ಹೆಚ್ಚಿಂದಾ
ಜಿಗದ ತಗತಗದ ಬ್ಯಾಸತ್ತ ಹಾಕ್ಯಾನು ಉಸರಾ || ೯ ||

ಇ|| ತಿಳಕೊಂಡಾ ತನ್ನ ಮನಸಿನೊಳಗ ದಿಕದಿಗಂಬರಾ
ಏರು || ಬಿಟ್ಟ ತನ್ನ ಧರ್ಮಾ ಕಲ್ಮಾ ಓದ್ಯಾನ ಶರಣರ ಹಂತೇಲಿ
ನಿಂತಾನ ಅಂತಾನ ಇಂದಿಗೆ ಆದೆ ನಾ ಮುಸಲ್ಮಿನಾ
ಸಂಗತಿಲೆ ನಿಂತ ಮಗಳು ನಗತಾಳ ರೂಪ ಸುಂದರ ಹೆಣ್ಣಾ
ಅನ್ನುವಳೋ ನೆನಸುವಳೋ ಮನಸಿನಲಿ ಶ್ರೀಹರಿ ಶಂಕರಾ || ೧೦ ||

ಇ || ಬಾಗಲಕೋಟಿ ಪ್ಯಾಟಿ ಪಟ್ಟಣಾ ಮಿಕ್ಕಿ ಜಾಹೀರಾ ||
ಏರು || ಗಂಡಮೆಟ್ಟ ಮ್ಯಾಗಿನ ಓಣಿ ಉಸ್ತಾದ ಹುಸೇನಮಿಯ್ಯಾಗ
ಕೊಟ್ಟಾರ ಮತಿ ಪೀರ ಮಲ್ಲೇಕಲ್ಲ ಇಟ್ಟಾರ ಹಸ್ತ ತಲಿಮ್ಯಾಲಾ
ಕೇಳರಿ ವೈರಿಗೆ ಎಷ್ಟು ಉಗಳಿದರ ನಾಚಿಕೆ ಏನಿಲ್ಲಾ
ಮುದಕ ಸುಮಕ ಮಾಡತಾನ ಗೊತ್ತಿಲ್ಲದೆ ಮಂತರಾ

*** * ***

**೯. ಜಾಬೀರನ ಮಕ್ಕಳನ್ನು ಬದುಕಿಸಿದ ಪದಾ**

ಮಹಾ ಪಂಡಿತ ಪಂತರು ಕುಂತಾ | ಚಿತ್ತಿಯಿಟ್ಟ ಕೇಳಿರಿ ಬುದ್ಧಿವಂತಾ | || ಪಲ್ಲವಿ ||

ಏರು | ಸಾರಿ ಪೇಳುವೆ ಸೂರಿ ಮಿಕ್ಕಿ ನುಡಿ ಕವಿ ಮಾಡಿ
ಹಾಡುವೆ ಹೊಸ ಧರತಿ ಬಲ ಭರತಿ | ಕೂಡಿರಿ ಚಂದದಿಂದಾ
ಬಂದ ದೈವೆಲ್ಲಾ ಮುಂದ | ಕೇಳಿ ಆಗರಿ ಸನಮಂತಾ || ೧ ||

ಇ|| ಜಾಬೀರ ಅಂಬುವರು ಹೊಂಟಾರ ಸಾಕ್ಷಾಂತಾ
ನಬಿಸಾಹೇಬ ಶರಣರಿಗೆ ಔತಣಾ ಹೇಳಬೇಕಂತಾ
ನಬಿಸಾಹೇಬ ಶರಣರಿಗೆ ಔತಣ ಹೇಳಬೇಕಂತಾ
ಏರು || ಹಿಡಿದ ನಡದಾರ ದಾರಿ | ಹೋಗಿ ಕಂಡಾರ ದಾರಿ
ಕುಂತಿದ್ದರೋ ನಬಿರಸೂಲಿಲ್ಲಾ ಖುಲ್ಲಾ | ತಿಳಿಸ್ಯಾರ ಅವರಿಗೆ ಹೀಂಗ |
ಔತಣ ಇಂದ ನಿಮಗ | ಅಂತ ಹೇಳ್ಯಾರ ನಾಳಿಗೆ ಬರಬೇಕಂತಾ || ೨ ||

ಔತಣ ಕಬೂಲ ಮಾಡ್ಯಾರ ನಕ್ಕೊಂತಾ | ನಬಿಸಾಹೇಬ ಶರಣರು ಕುಂತಾ
ಏರು || ಪರತ ಜಾಬೀರ ಹೊಂಟ ಹೋಗಿ | ಮುಟ್ಯಾರ ಮನಿಗೆ

ಕಟ್ಟಿತ್ತ ಉತ್ತಮ ಒಂದು ಬ್ಯಾಟಿ | ಮನಕ ನಟ್ಟಿ | ಕೋದಾರ ಬಿಸಮಿಲ್ಲಾ ಅಂತಾ
ಮಕ್ಕಳು ಇಬ್ಬರು ನಿಂತಾ | ನೋಡಿ ಮಸಲತ್ ಮಾಡ್ಯಾರ ಸೊಂತಾ || ೩ ||

ಇ|| ಅಡಗಿ ಅವಸರಲಿ ಮಾಡು ಚಿಂತಾ | ಒಲಿ ಹೊತಸ್ಯಾರ ಸತಿಪತಿ ಕುಂತಾ
ಏರು || ಬಿಟ್ಟು ಮಕ್ಕಳ ವ್ಯಸನಾ | ಇದ್ದಿಲ್ಲಾ ಅವರಿಗೆ ಚೈನಾ
ಮಕ್ಕಳು ರಂಗಮ್ಹಾಲ ಏರಿ | ಹಿಡಿದ ಚೂರಿ | ತಂದಿ ಕೋದಾಂಗ ಬ್ಯಾಟಿ
ಆಡೂನು ಇಬ್ಬರು ಘಟ್ಟಿ | ಕೂಡಿ ನಾವು ಆಡೂನು ಕುಣಕೊಂತಾ || ೪ ||

ಅಂದಾ ಹಿರೇ ಅಣ್ಣ ಇದರಿಗೆ ನಿಂತಾ | ಕೇಳ್ಯಾನ ತಮ್ಮ ಮುಹಮ್ಮದ ಶಮರಂತಾ
ಏರು || ಒಳ್ಳೇದಾದೀತ್ತಣ್ಣಾ ಮಲಗುವೆ ಈ ಕ್ಷಣಾ | ಕೋದಾಂಗ ಕೊಯ್ಯು ಬ್ಯಾಟಿ ನನ್ನಾ
ಹಿರೇ ಅಣ್ಣಾ | ಹಿಡಿದ ಕೈಯಾಗ ಚೂರಿ |
ಎಳದಾನ ಹಾತೊರಿ ಗೋಣ ಕಡಿಗೆ ಆತ ಕಂಡಾ | ಬಲವಂತಾ || ೫ ||

ಇ|| ಇಂತ ಬವಳಿಕೆ ಇದು ಏನು ತಂತಾ | ಬಿದ್ದಾನ ಮಾಲಿನಕೆಳಗೆ ಗುಣವಂತಾ
ಏರು || ಪೆಟ್ಟ ನೆತ್ತಿಗೆ ಹತ್ತಿ | ಹಾರಿತ್ತ ಅವನ ಉಸಲಾ
ಬಿತ್ತ ಭೂಮಿಮ್ಯಾಲೆ ಹೆಣಾ | ಆಕ್ಷಣಾ | ಬಂತ ನೆನಪ ಆಗ
ತಾಯಿ ತಂದಿಗೆ ಬ್ಯಾಗ | ನಮ್ಮ ಮಕ್ಕಳು ಕಾಣುದಿಲ್ಲಾಂತಾ || ೬ ||

ಬಂದಾರ ಹೊರಗ ಹುಡಿಕ್ಯಾಡಿ ಕೊಂತಾ
ಕಂಡ ಗುರ್ತ ಹಿಡದಾರ ಮಗನು ಹೌದಂತಾ
ಏರು || ಗಾಬರ್ಯಾಗಿ ತಾಯಿ | ಅಳತಾಳ ದುಃಖಿಸಿ
ಏನಾತ ಎನ್ನ ಮಗನೆ ನಿನ್ನಾ | ಬಿಟ್ಟಿ ಪ್ರಾಣಾ | ಹಾರಿತ್ತ ಹೌಸಾನಾ
ಹುಡುಕವರೋ ಸಣ್ಣ ಮಗನಾ | ದಿಕ್ಕತಪ್ಪಿ ಸತಿಪತಿ ಅತಗೊಂತಾ || ೭ ||

ಇ|| ಕಾಣವಲ್ಲದು ಮಾರಿ ಇನ್ನೇನು ಮಾಡೋಣಾಂತ ಕರೆ
ಹತ್ಯಾರ ರಂಗಮಾಲ | ಹಣಿ ಹಣಿ ಬಡಕೊಂತಾ
ಏರು || ನೆತ್ತರ ನೋಡಿ ಮಗನ ರುಂಡ ಕಂಡಾಕ್ಷಣಕ
ತಾಯಿತಂದಿ ಅಳತಾರ ಅಳತಿಲ್ಲಾ | ಅಂತಾರಲ್ಲಾ ಕೆಟ್ಟ ಅದರುಷ್ಟ
ಮನಿತನಾ | ಆತ ನಷ್ಟ ಇನ್ನಾ | ಇಂದ ಮುನದಾನ ನಮ್ಮ ಮ್ಯಾಲೆ ಭಗವಂತಾ || ೮ ||

ಇ|| ದುಕ್ಕ ಮಾಡಬೇಡ ತಡಿ ಸನಮಂತಾ | ಅಂತಾನ ಪತಿ ಮಡದಿಗೆ ತಿಳಿಸಿ ಇರಲೆಂತಾ
ಏರು || ಮುಚ್ಚಿ ಇಡಬೇಕ ಹೆಣಾ | ಸುದ್ದಿ ಮಾಡದೆ ಇನ್ನಾ | ತಿಳಿಗೊಡದೆ ಶರಣರನಾ
ಔತಣಾ ಹೇಳೇವಿ ಅವರಿಗೆ ಬರಲಿಕ್ಕಿಲ್ಲಾ ನಮ್ಮ ಮನಿಗೆ
ಮೋಹನಾ | ಕೇಳ ಮೋಹನಾ | ಹೇಳುವೆ ಸಾಕ್ಷಾಂತಾ || ೯ ||

ಇ || ಮುಚ್ಚಿ ಇಟ್ಟಾ ಹೆಣಾ | ಜಾಬೀರ ನಕ್ಕೊಂತಾ ಹೋಗಿ ಕರದಾರ ಶರಣರಿಗೆ  ಸೊಂತಾ
ಏರು || ಇಟ್ಟಾರ ಎಡಿತಂದ | ಆಗ ಶರಣರ ಮುಂದಾ

ಇಳದಾರ ಬ್ಯಾಗ | ಜಿಬ್ರಾಯಿಲ ತತ್ಕಾಲಾ | ಜಾಬೀರನ ಚಿರಂಜೀವ
ಸರೂ ಹಕೀಕತಿಯೆಲ್ಲಾ | ಎಲ್ಲಾ ತಿಳಿಸ್ಯಾರ ಇಬ್ಬರು ಸತ್ತರಂತಾ || ೧೦ ||

ಇ|| ಊಟಾ ಒಬ್ಬನೆ ನಾ ಹ್ಯಾಂಗ ಮಾಡಲೆಂತಾ
ಶರಣರು ಜಾಬೀರಗ ಅಂತಾರ ಕೇಳ ಗುಣವಂತಾ
ಏರು || ನಿನ್ನ ಮಕ್ಕಳು ನೀನು | ನನ್ನ ಸಂಗತೀಲೆ ಊಟ ಮಾಡಬೇಕ
ಅವರಿಗೆ ಕರಿತಾ | ಈಗ ತುರ್ತಾ ಕೇಳಿ ಜಾಬೀರ ಬೆರೆತಾ
ನಿಂತ ಅಂತಾರ | ಪುತ್ರ ಹೊರಗ ಹೋಗ್ಯಾರ ಆಡಲಿಕ್ಕೆಂತಾ || ೧೧ ||

ಇ|| ಮಕ್ಕಳು ಬರೂತನಾ ಎಡಿಮ್ಯಾಲೆ ಕುಂತಾ
ಹೇಳ್ಯಾರ ಶರಣರು ಸಾಪ ಉಣ್ಣೂದಿಲ್ಲಂತಾ
ಏರು || ಅಡರಾಶಿ ಎದ್ದ ಆಗ | ಜಾಬೀರ ಹೋಗ್ಯಾರ ಹೊರಗ
ತಿರುಗಿ ಬಂದ ಅಂತಾರ ಸಿಗಲಿಲ್ಲಾ | ಹುಡುಕಿದೆ ಎಲ್ಲಾ |
ಊಟ ಮಾಡರಿ ಶರಣಾ | ಕೇಳಿ ಅಂತಾರ ಪುನಾಃ | ಖರೇ ಹೇಳ ಹಕೀಕತಿ ಇದ್ದಂತಾ || ೧೨ ||

ಇಷ್ಟು ಕೇಳಿ ಜಾಬೀರ ಎದಿಎದಿ ಬಡಕೊಂತಾ
ತಿಳಿಸ್ಯಾರ ಸಾರಾಂಶ ಮಕ್ಕಳಿಗೆ ಆದಂತಾ
ಏರು || ಹೊಕ್ಕಿ ಕೋಲ್ಯಾಗ ತೆಕ್ಕಿ ಬಡದ ಮಕ್ಕಳ ಹೆಣಾ
ತಂದ ಇಟ್ಟಾರ ಶರಣರ ಮುಂದಾ | ದುಕ್ಕಲಿಂದಾ
ತಾಯಿ ನೋಡ್ಯಾಳ ಹಣಕಿ ಶರಣರು ಮಿಕ್ಕಿ
ಮಂತರಾ | ಮಂತರಾ ಓದಿ ಊದ್ಯಾರ ಸತ್ಯವಂತಾ || ೧೩ ||

ಇ|| ಮಕ್ಕಳು ಎದ್ದು ಕುಂತ್ರೋ ಚೆನ್ನ ರೂಪದಂತಾ
ಕುಂತ ಕೂಡಿ ಊಟ ಮಾಡ್ಯಾರ ಏಕಂತಾ
ಏರು || ಕಾರ ಬಾಗಲಕೋಟೆ | ಊರ ಮೋಜಿನ ಪ್ಯಾಟಿ
ನೆನೆದಾರ ಮಲ್ಲೇಕಲ್ಲಾ ಹುಸೇನಾ ಗಾದಿ ರತನಾ
ಅಂತಾರ ಹುಸೇನಮಿಯಾ | ವೈರಿಯ ಸಂದ ನೋಡಿ ಒದುವೆ
ಒದುವೆ ಬೀಳುಹಾಂಗ ಮುಕಳಾನ ಜಂತಾ || ೧೪ ||

*** * ***

**೧೦. ಯಹೂದಿಯರ ಮೇಲಾದ ಪೈಗಂಬರರ ಪ್ರಭಾವ**

ಬಂದ ಬಂದ ಚಂದದಿಂದ ಕುಂತೀರಿ ದೈವೆಲ್ಲಾ
ತಿಳಿಯ ಪಡಿಸುವೆ ಶಾಸ್ತರ ಲೀಲಾ ||
ಏರು || ಪ್ರೀತಿಲೆ ಇಟ್ಟ ಚಿತ್ತಾ | ಸೊಂತ ಬುದ್ದಿವಂತಾ
ಕೇಳದೆ ಮಾಡದೆ ಗುಲ್ಲಾ |

ಪ್ರಖ್ಯಾತ ನಬಿರಸೂಲಿಲ್ಲಾ | ಪೃಥ್ವಿಗೆ ಅನಸ್ಯಾರಲ್ಲಾ
ಸಾರತೈತಿ ದೇಶದ ಮೇಲಾ | ಕೊಟ್ಟ ಪದವಿ | ಶ್ರೇಷ್ಠ ಪ್ರಭು ಪಾಲಾ || ೧ ||

ಇಳು || ಒಂದು ದಿನಾ ಯಹೂದೇರು ಹೊಂಟಾರು
ದಾರಿಲಿ ದಂಡೆಲ್ಲಾ ಕಂಡ ತರಬ್ಯಾನ ಅಬೂಜೈಲಾ
ಏರು || ಕೇಳ್ಯಾನ ಅವರಿಗೆ ಆಗ ಬ್ಯಾಗ ಈಗ | ಹೊಂಟಿ ಕೂಡಿ ಇಂದ
ಎಲ್ಲಿಗೆ ಹೋಗತೀರಿ ಹೇಳರಿ ಒಡದ | ಕೇಳಿ ಅವರು ಆತನ ಮುಂದಾ
ತಿಳಿಸ್ಯಾರ ಸುದ್ದಿ ಮುಟ್ಟೇತ ಬಂದ | ಸತ್ಯವಂತ ಅಂತ ರಸೂಲಿಲ್ಲಾ || ೨ ||

ಇ|| ಮನಸು ಆಗೇತಿ ಕಲ್ಮಾ ಓದಿ ಮುಸಲ್ಮಾನ ಆಗಿ ಮೊದಲಾ
ಬರತೇವಿ ಹೋಗಿ ಇನ್ನಮ್ಯಾಲಾ ||
ಏರು || ಅಬೂಜೈಲಾ ಕೇಳಿ ಅಂದಾ | ಬೇಧ ನಿಮಗ ತಿಳಿಯದಾ
ಏನ ಬಲ್ಲಿರಿ ಅವನ ತಂತರಾ | ದರನೇಮಿ ನೋಡಿ ನಕ್ಷತ್ತರಾ
ಮಾಡಿ ಯಾತಾಳ ಮಂತರಾ | ತೋರಸ್ತಾನ ತನ್ನ ಪವಿತ್ರಾ
ಕಂಡ ದಂಗ ಆಗತಾರ ಜನರೆಲ್ಲಾ || ೩ ||

ಇ|| ನಾ ನಿಮಗೂಡ ಬರುವೆ ನಡಿರಿ ನೋಡೂನು ಕೂಡಿ ಎಲ್ಲಾ
ಅಂತ ಹತ್ಯಾನ ಹಿಂಬಾಲಾ |
ಏರು || ನಡೂತಾನ ನಡಗಿ ಮೀರಿ ಜಾರಿ ಹಾರಿ ||
ಮುಂದ ಇದ್ದಾ ಎಲ್ಲರಕ್ಕಿಂತಾ
ನಗುನಗುತಾ ಒಳೆ ಕುಣಕೊಂತಾ | ಮುಟ್ಟಿ ಶರಣರ ಹಂತೇಲಿ ಸೊಂತ
ಅಂತಾನ ಇದರಿಗೆ ನಿಂತ ಮಾಡುವೆ ನಿಮಗೆ ಸವ್ವಾಲಾ || ೪ ||

ಇ|| ಕೇಳಿ ಶರಣರು ಅಂತಾರ ತಿಳಿಸ ಅದು ಮಾತ ಏನು ಖುಲ್ಲಾ
ಅಂತಾನ ಆಗ ಅಬೂಜೈಲಾ
ಏರು || ಇದರಿಗೆ ಕಲ್ಲಪಡಿ | ನೋಡಿ ಅಂದಾ ಖೋಡಿ |
ಕಲ್ಲಿನ ಬಣ್ಣಾ ಕೆಂಪಾಗಿ ಮೊದಲಾ
ಅದರೊಳಗೆ ಗಿಡಾವೊಂದ ಅಸಲಾ | ಹುಟ್ಟಿಬರಬೇಕರಿ ಮ್ಯಾಲಾ
ಕಲ್ಮಾ ಸರೂ ತಪ್ಪಲ ಮ್ಯಾಲಾ | ಬರೆದಿರಬೇಕ ನಬಿರಸೂಲಿಲ್ಲಾ || ೫ ||

ಆ ಕಲ್ಲಿನ ಮ್ಯಾಲಾ | ಬೀಳಬಾರದು ತುಸು ಬಿಸಲಾ
ಹತ್ತಿರಬೇಕರಿ ಹಣ್ಣುಹಂಪಲಾ
ಏರು || ಗಿಡದ ಮ್ಯಾಲೆ ಪಕ್ಷಿ | ಸೋಸಿ ನಿಮ್ಮ ಸಾಕ್ಷಿ
ನುಡಿಬೇಕ ಖರೇ ಅಂತ ಶರಣಾ
ಅಂದರ ಆಗ ಆಗುವೆ ಮುಸಲಮೀನಾ | ಆ ಗಿಡದ ಒಂದೊಂದ ಹಣ್ಣಾ
ತಿಂದು ನೋಡಿದರ ನಮ್ಮನ್ನಾ | ಬ್ಯಾರೆ ಬ್ಯಾರೆ ರುಚಿ ಇರಬೇಕಲ್ಲಾ || ೬ ||

ನಬಿಸಾಹೇಬ ಶರಣಾ ಕೇಳಿ ದಂಗ ಆಗಿ ಕುಂತಾರಲ್ಲಾ
ಇಳಿದು ಬಂದಾರ ಜಿಬರಾಯಿಲಾ
ಏರು || ಶಿವನ ಅಂತಃ ಕರಣಾ | ಶರಣಾ ನಿಮ್ಮನ್ನಾ | ಆಗೇತಿ ಬಂದೇನಿ ನಾ
ತಿಳಿಸುವೆ ಕಲ್ಲಿನ ಸೂಚನಾ | ಆಗತೈತಿ ಕೇಳರಿ ಶರಣಾ
ಚಿಂತಿ ಮಾಡಬ್ಯಾಡರಿ ಇನ್ನಾ | ಸಂತೋಷ ಪಡಿರಿ ಬಿಟ್ಟಜಲ್ಲಾ || ೭ ||

ತೋರಸ್ಯಾರ ಮೊದಲಿಗೆ ಕೇಳಿದ್ದು ಕಲ್ಲ ಹೌದೇನಿಲ್ಲಾ
ಕುಂತಲ್ಲೆ ನಬಿರಸೂಲಿಲ್ಲಾ
ಏರು || ಅಬೂಜೈಲಾ ನೋಡತಾನಾ ಬಣ್ಣಾ | ಆಕ್ಷಣಾ
ಆಗ ಕೆಂಪ ಸೀಳಿ ಕಲ್ಲಾ
ಗಿಡಾ ಚಿಗಿತ ಬಂತರಿ ಮ್ಯಾಲಾ | ಹೇಳಿದಂತೆ ಹಣ್ಣು ಹಂಪಲಾ
ಕುಂತ ಗುಬ್ಬಿ ಗಿಡದ ಮ್ಯಾಲಾ | ನುಡಿತ ಸಾಕ್ಷಿ ಖರೇ ರಸೂಲಿಲ್ಲಾ || ೮ ||

ಇ || ಇಷ್ಟೆಲ್ಲಾ ಕಂಡ ಓಡಿ ಹೋಗ್ಯಾನ ಅಬೂಜೈಲಾ
ಕಡಿತನಾ ಕಲ್ಮಾ ಓದಲಿಲ್ಲಾ |
ಏರು | ಯಹೂದೇರು ಎಲ್ಲಾ | ಮೊದಲಿಗೆ ಹೂಲಿಗೆ ಹೂಲಾ
ಕಂಡ ಕಲ್ಮಾ ಆಗಿನ ಕ್ಷಣಾ | ಓದ್ಯಾರ ಸರೂ ಸಂಪೂರ್ಣಾ
ಆಗ್ಯಾರ ಮುಸಲ್ಮೀನಾ ಕೇಳರಿ ಕುಂತ ವಿದ್ವಾನಾ
ತಿಳಿಸಿ ನೀ ಖುಲ್ಲಾ ತಪಶೀಲಾ || ೯ ||

ಇ|| ಇರತಾರ ಪೀರ ಮಲ್ಲೇಕಲ್ಲ ಹೊಳಿದಂಡೆ ಸಾಲಾ
ನೆನದಾರ ನೋಡು ಮಡ್ಡಿಯ ಮ್ಯಾಲಾ ||

*** * ***

**೧೧. ಗುಣವಂತ ಶರಣ ನಬಿಸಾಹೇಬರು**

ಶರಣಾ ನಬಿಸಾಬ ಸಾಕ್ಷಾತ್ ತನಯಾ | ನಾ ||
ವರಣನ ಮಾಡಲಿ ಎಷ್ಟು ಅಂತಾ || ಚಾಲ ||
ಏರು || ಕೇಳಿರಿ ಒಂದಿನಾ ಬೀಬಿ ಖಾತೂನ ಜನ್ನಾ
ಕುಂತ್ರು ಸಾಂಬನ ಸ್ತೋತ್ರ ಮಾಡುತ | ಇತ್ತ ವ್ಯಾಖ್ಯಾ ಕಠಿಣಾ |
ಕಷ್ಟ ನಾನೆಷ್ಟಂತ ಹೇಳಲಿ ಇಟ್ಟಿದ್ದ ಆ ಭಗವಾನಾ |
ಹಸುವಾಗಿ ಶಿಶು ಮುಖ ಬಾಡಿ ಚಿನ್ನಾ || ೧ ||

ಚಾಲ || ತಿನ್ನಲಾಕ ಮನಿಯಾಗ ಇಲ್ಲ ಏನೇನೂ
ಮರಮರ ಮರಗುವರು ಒಂದ ಸವನಾ
ಶಿವನೆ ನೀ ಇಷ್ಟ ಯಾಕ ತಿಂದ ಇಟ್ಟೆ ವಿಪರೀತಾ |
ಮೂರು ದಿವಸ ಆಯಿತೋ ಹಾಕಿಲ್ಲೊ ತುತ್ತಾ

ಅನ್ಯಾಯ ನ್ಯಾಯ ಏನರ ಮಾಡಿದಿವೊ ನಿನಗ ಗುರತಾ
ಏರು || ನಬಿಸಾಬ ಶರಣರೊ ಅಷ್ಟರಲ್ಲಿ ಬಂದರೊ ಕೇಳಿ ವರ್ತಮಾನಾ ||
ಮನಸಿನ್ಯಾಗ ಉದಾಸ ಆದಾರ
ಊರಬಿಟ್ಟ ಆರ್‍ಯಾಣದಾರಿ ಹಿಡಿದ ಅವರು ನಡಿದಾರೊ || ೧ ||

ಚ್ಯಾಲ || ಅಲ್ಲಿ ಒಂದಾ ಭಾವಿ ಇತ್ತ ಸೇದೂದ | ಒಂಟಿ ಸವಾರ ಅಲ್ಲಿ ಇಳದಿದ್ದ
ಆತಗ ಕೇಳತಾರ ತಾವು ಖುದ್ದ | ನನಗ ನೀ ಏನರ ಕೂಲಿ ಹಚ್ಚ ಅಂತಾ
ಹೇರಾಬ ಹೇಳ್ಯಾನೊ ನಗನಗತಾ | ಜಗ್ಗಿ ಜಗ್ಗಿ ಒಂಟಿಗೆ ನೀರ ಕುಡಿಸ ಅಂತಾ ||
ಮೂರ ಉತ್ತತ್ತಿ ಕರಾರಾ
ಕಬೂಲ ಮಾಡಿ ನಬಿಸಾಹೇಬರು ಜಗ್ಗ ಹತ್ಯಾರೊ ನೀರಾ || ೩ ||

ಚ್ಯಾಲ || ಎಂಟು ಡೋಲಿ ಜಗ್ಗುದರೊಳಗ
ಹರಕೊಂಡ ಬಿದ್ದಿತೊ ಬಾವ್ಯಾಗ | ಸಿಟ್ಟು ಬಂದಿತೋ ಹೇರಾಬಗ
ಶರಣರಿಗೆ ಹೊಡದ ಕಪಾಳಕ ಬಡಭಕ್ತ
ಶಾಂತ ಮನದಿಂದ ಗುಣವಂತ ಶರಣರೆ | ಇಳದ ಬಾವ್ಯಾಗ ಸ್ವಂತ ತಗದಾರೊ ||
ಏರು || ಕರಾರ ಪ್ರಕಾರ ಇಸಗೊಂಡ್ರೂ ಪಗಾರಾ
ಎಂಟು ಡೋಲಿಗೆ ಒಟ್ಟು ಉತ್ತತ್ತಿ ಖಜೂರ
ತಂದ ಮಗಳಿಗೆ ಅಂದರೊ ಇದ ಅಷ್ಟ ತಿಂದ ಕುಡಿ ಅವ್ವಾ ನೀರಾ || ೪ ||

ಚ್ಯಾಲ || ಹೇರಾಬಗ ಬಹು ಕೆಡಕ | ಶರಣರ ಕಪಾಳಕ ಹೊಡೆದಿದಕ
ಕೈ ಕಡದ ಮಾಡಿಕೊಂಡ ತುಣತುಣಕ
ಬಹು ಬ್ಯಾನಿ ಬ್ಯಾನಿ ಬ್ಯಾನಿ ಮಾಡಿತ ಕುತ್ತ
ಅನಕೊಂತ ಶರಣರ ಪ್ರತಾಪ ವಿಪರೀತ |
ಇದ್ದಾಂಗ ಗುಮ್ಮ ನೀರಿನ ನೆಲ ಇಲ್ಲದಂತ
ಏರು || ಹೇರಾಬನ ಕೈಯ್ಯಾಮುರದ ಆದೀತೊ | ಘಾಯಾ
ತಾಳಲಾರದ ಒದರಿ ಬಿಕ್ಕಿ ಬಿಡತಾನೊ ಬಾಯಾ
ಹಿಂದ ಮುದಕಗ ಹೊಡೆದ ನಾನು ಸುಮ್ಮನಾದೊ ಮಾರಾಯಾ || ೫ ||

ಚಾಲ || ಹುಡುಕುತ ಹೊಂಟಾನೊ ಶರಣರಿಗೆ
ಮಕ್ಕೇದ ಬೇಡ ಒಳಗ | ಮಕ್ಕೆದೊಳಗ ಹತ್ತಿತೊ ಶರಣರ ಗುರತಾ |
ಏರು || ತಿಳಿಗೆಟ್ಟ  ಬಡದೇನಿ ಪಶ್ಚಾತ್ತಾಪ  ಪಡೆದೇನಿ
ಅಂದಿನ ಹಿಡದು ಇಂದಿನ ತನಾ ಒದರಿ ಸಾಯತೇನಿ |
ಕ್ಷಮಿಸಿ ನನಗ ಉಳಿಸಬೇಕರಿ ತಾಳಲಾರೆನೊ ಬ್ಯಾನಿ || ೬ ||

ಚಾಲ || ಕರುಣ ಹುಟ್ಟಿತೊ ನಬಿಸಾಬಗ
ಮಂತ್ರ ಓದಿ ಊದಿದ್ರೊ ಅವನ ಮ್ಯಾಗ
ಸಾಬೀತ ಕೈಯಾ ಆದಿತೊ ಆಗಿಂದಾಗ

ಹೇರಾಬ ಖುಷಿಯಾಲಾ ಆದಾನೊ ಅತ್ಯಂತಾ
ಬಿಟ್ಟ ಕಾಫರ ಹಿಡದ ಇಸ್ಲಾಮಿ ಪಂತಾ
ಹಿಡದಾನೊ ಜರೆ ಧರ್ಮಾ ಇದು ಸಿದ್ಧಾಂತಾ ||
ಏರು || ಓದ್ಯಾನೊ ಕಲಮಾ ಪಾವನತೊ ಅವನ ಜಲ್ಮಾ
ತಗಲ ಮಾತಿಲ್ಲ ಮಿಗಿಲ ಬಾಗಲಕೋಟ ಮುಕ್ಕಾಂ
ಶಿಸ್ತ ದಸ್ತಗೀರಸಾಬ ಕೇಸುಪೀರ ಇಟ್ಟೊ ನಮಮ್ಯಾಲ ಪ್ರೇಮಾ || ೭ ||

ಚ್ಯಾಲ || ನಾಗುಗೌಸುನ ಕವಿ ಒಳೆ ಖಡಕ
ವೈರಿ ಎದಿಯಾಗ ಜಡದಾಂಗ ಮೇಕ
ಇಂವಾ ಒಂದ ಹಾಡಿದ ಕವಿ ಹರಕ |
ಸದಾ ಹೇಳಂದಾ ಇಂವಾ ಅತಗೊಂತ ||

* * *

**೧೨. ನಬಿಸಾಬರಿಂದ ಆಕಾಶ ಮುಸ್ಲೀಮರಾದದ್ದು**

ಸಭಾ ಬಂದ ಕೂಡಿರಿ ಸೊಂತಾ | ಹೇಳತೇನಿ ಬೇಧ ಏಕಂತಾ
ಕೇಳಬೇಕ ಶಾಸ್ತ್ರ ಸಿದ್ಧಾಂತಾ ಸರೂವೆಲ್ಲಾ || ಪಲ್ಲವಿ ||

ಏರು || ನಬಿಸಾಬ ಶರಣಾರಾ ಜಗತೇಕ ಅಧಿಕಾರಾ
ಅವರ್ಹಾಂಗ ಯಾರ್‍ಯಾರ ಆಗೂದಿಲ್ಲ ಕರುಣ ಸಾಗರಾ
ಅವರ ಮ್ಯಾಲೆ ಹರಿಬ್ರಹ್ಮಾ | ಇಟ್ಟಿದ್ದಾನೋ ತನ್ನ ಪ್ರೇಮಾ
ನೋಡೋ ಶಾಸ್ತ್ರ ಸುಳ್ಳಲ್ಲೋ ತಮ್ಮಾ ಖುಷಿಯಾಲಾ || ೧ ||

ಇ|| ಊರ ಒಳಗ ಸಾರಿ ಡಂಗೂರನಾ | ಬಂದ ಕೂಡ್ಯಾರೊ ಸರೂಜನಾ
ಇಂದ ಆಗೂದು ನನ್ನ ಮರಣಾ ಅಂತಾರಲ್ಲಾ
ಏರು || ಲಕ್ಷ ಇಪ್ಪತ್ತು ನಾಲ್ಕು ಸಾವಿರಾ | ಶರಣರಾದ್ರೋ ಎಂತೆಂಥವರಾ
ಸರವರ ಮ್ಯಾಲೆ ಅಧಿಕಾರಾ | ಇಟ್ಟ ನಡೆಸಿದ್ದಾ ಆ ಶಂಕರಾ
ಕೂಡಿದಂತ ಭಕ್ತರವೊಳಗ | ನಬಿಸಾಬ ಅಂತಾರೋ ಹೀಂಗ
ಹೊಡೂದಿದ್ದರ ಹೊಡದು ನನಗ | ತಗೋ ಬದಲಾ || ೨ ||

ಕೇಳಿ ಆಕಾಶ ಈ ಸುದ್ದಿ | ತಡಾಯಿಲ್ದ ಬಂದಾನ ಜಲ್ದಿ
ನಬಿಸಾಬಗ ಅಂತಾನ ಗುದ್ದಿ ಮಾಡಿ ಸವಾಲಾ
ಏರು || ಹೊಡಿರೊಮ್ಮೆ ನೀವು ನನಗ | ಹೊಡೂತೇನಿ ನಾನು ನಿಮಗ
ನಟ್ಟ ನಡು ಬೆನ್ನಿನ ಮ್ಯಾಗ | ನಿಂತ ಬಾಯಿಲೆ ಅಂತಾನ ಹೀಂಗ
ನಬಿಸಾಬ ಕುಂತಾರ ಮುಂದಾ ಹೊಡಿ ಅಂತಾರ ಬಾಯಿಲಿಂದಾ
ಛಡಿ ಹಿಡಿದ ಆಕಾಶ ಹಿಂದಾ ನಿಂತಾನಲ್ಲಾ || ೩ ||

ಇ|| ಕೈಯ ಮುಗದ ಅಬೂಬಕರಾ | ನಿಂತ ಆಕಾಶಾನ ಇದರಾ
ಮಾಡೋ ನೀನು ದಯಾಸಾಗರಾ | ಅವರಮ್ಯಾಲಾ
ಏರು || ಬಾಯಿಲಿಂದ ಅಂತಾನೋ ಹೀಂಗ | ನೀವು ಏನ ಹೊಡುದಿಲ್ಲ ನನಗ
ನಬಿಸಾಬ್ರ ಹೊಡದಾರ ಹ್ಯಾಂಗ ಹೊಡೂತೇನಿ ನಾನು ಅಂವಗ
ಅಬೂಬಕರ ಆದ್ರೋ ಹಿಂದಕ | ಪುತ್ರ ಉಮ್ಮರ ಬಂದ ಮುಂದಕ
ಆಕಾಶಾಗ ಅಂತಾರ ಯಾಕ | ಕೇಳೂದಿಲ್ಲಾ || ೪ ||

ಇ|| ಅಂತಾರ ಉಮರ ಆಕಾಶಾಗ | ಸಿಟ್ಟ ಇದ್ದರ ನಿನ್ನಮನದಾಗ
ಹೊಡಿ ನನ್ನ ಬೆನ್ನಿನ ಮ್ಯಾಗ | ಆದಿ ನಿ ಖುಬೂಲಾ
ಏರು || ನಬಿಸಾಬ ಸತ್ತುಳ್ಳ ಶರಣಾ | ಸಾರಿ ಡಂಗೂರ ಕೊಟ್ಟಾರ ವಚನಾ
ಯಾರಿಗೇನ ಮಾಡಲಿ ನಾನಾ | ಹೊಡದಾರ ಹೊಡುವೆ ಅವರನಾ
ಕೇಳಿ ಉಮರ ಹ್ವಾದಾನೋ ತಿರುಗಿ | ಬಹಳ ಚಿಂತಿ ಮನದಲ್ಲೆ ಆಗಿ
ಬಂದ ಉಸ್ಮಾನ ಮುಂದಕ ಸಾಗಿ | ತಡಾಯಿಲ್ಲಾ || ೫ ||

ಇ|| ಆಕಾಶಾಗ ಅಂದ್ರೋ ಉಸಮಾನ | ಇಲ್ಲ ನಮ್ಮ ಜೀವದಾಗ ಚೈನಾ
ಕರುಣ ಮಾಡಿ ಬಿಡ ಶರಣರನಾ | ತಿಳಿಯಾಕಿಲ್ಲಾ
ಏರು || ಇವರ ವಾರ್ತೆ ಬಂದೇನಿ ಕೇಳಿ | ನಬಿಸಾಹೇಬ ಕಳಿಸಿದ್ರೊ ಹೇಳಿ
ನಿನ್ನ ಮನಸಿನ್ಯಾಗ ತಿಳಿ | ಬಂದ ಹಟಾ ಹಿಡದಾನ ವಾಳಿ
ಬಿಡೂದಿಲ್ಲಾ ನಬಿಸಾಹೇಬನಾ | ಹೊಡೂತೇನಿ ಒಡೂಹಾಂಗ ಚಿನ್ನಾ
ಯಾರು ಹೇಳಿದರ ಕೇಳೂದಿಲ್ಲಾ ನಾನಾ | ಅಂತಾನಲ್ಲಾ || ೬ ||

ಇ|| ದುಃಖ ಶೋಕ ಆಗಿ ಉಸಮಾನಾ | ಸಾಂಬ ನಿನಗ ಇಲ್ಲೇನೋ ಕರುಣಾ
ಹೇಳಿ ಹೀಂಗ ಹ್ವಾದಾರಣ್ಣಾ | ತಡಾಯಿಲ್ಲಾ
ಏರು || ತಿಳಿಯದು ಸಾಂಬನ ನೆಲಿ | ಧರಣಿಪಾಲನ ಹುಲಿ
ಬಂದಾರೋ ಮೌಲಾ ಅಲಿ | ನಿಂತ್ರೋ ಆಕಾಶಾನ ಬದಿಲಿ
ಬಿಟ್ಟ ನಿನ್ನ ಮನದಾನ ಕೋಪಾ | ಇಟ್ಟ ನಿನ್ನ ಮನಸಾ ಸಾಪಾ
ಮಾಡೋ ನೀ ಶರಣರಿಗೆ ಮಾಪಾ | ಅಂತಾರಲ್ಲಾ || ೭ ||

ಇ|| ಮೌಲಾ ಅಲಿ ಹೇಳ್ಯಾರೋ ನಿಂತಾ | ಕೇಳೋ ಆಕಾಶ ನನ್ನ ಮಾತಾ
ಯಾರೂ ಹೇಳಿದರ ಕೇಳೂದಿಲ್ಲ ಅಂತ | ಅಂತಾರಲ್ಲಾ
ಏರು ||| ಅಣ್ಣಾ ತಮ್ಮಾ ಹಸೇನ ಹುಸೇನಾ | ತಡಾಯಿಲ್ದ ಬಂದಾರಣ್ಣಾ
ಹೇಳತಾರೋ ಆಕಾಶಾನ್ನ | ಹೊಡಿಬ್ಯಾಡೋ ಬಿಡೋ ಮುತ್ಯಾರಿನ್ನಾ
ಅಲ್ಲೊ ಆಕಾಶ ನಿನ್ನ ಧರ್ಮಾ | ಅವರಗೂಡ ಕಟ್ಟಿದಿ ವರ್ಮಾ
ಸಿಟ್ಟಿಲಿಂದ ಅಂತಾನೋ ತಮ್ಮಾ | ಬಿಡೊದಿಲ್ಲಾ || ೮ ||

ಇ|| ಆಕಾಶ ಅಂತಾನೋ ಹೀಂಗ | ಅಂಗಿ ಸರಿಸರಿ ಬ್ಯಾಗ
ಹೊಡೂತೇನಿ ಬೆನ್ನಿನ ಮ್ಯಾಗ | ತಡಾಯಿಲ್ಲಾ

ಏರು || ಸರಿಸಿ ಅಂಗಿ ಹಿಡಿದಾರೋ ಮ್ಯಾಕ | ಬೆನ್ನಿನವೊಳಗ ಬಿದ್ದೀತ ಬೆಳಕ
ಬಂದಾ ಬಿದ್ದಾ ಅವರ ಚರಣಕ | ಸಂತೋಷಾತ ಸ್ವಾಮಿ ನನ್ನ ಮನಕ
ಓದಿ ಕಲ್ಮಾ ಮುಸಲ್ಮೀನಾ | ಮಾಡಿ ಬಿಟ್ರೋ ಆಕಾಶನ್ನ
ಹಗಲಿ ಇರುಳು ಸಾಂಬನ ಧ್ಯಾನಾ | ಮಾಡೂನಲ್ಲಾ || ೯ ||

ಇ|| ಮುಕ್ಕಾಮ ಬಾಗಲಕೋಟಿ ಶಾರಾ | ಅಲ್ಲಿ ಇರುವರೋ ದಸ್ತಗೀರಾ
ಕರುಣುಳ್ಳ ಕೇಸುಪೀರಾ ಒಲಿದಾನಲ್ಲಾ | ನೋಡೂ ನಾಗೂ ಗೌಸೂನ ಕವಿತಾ
ಏರು || ಗುರಿಯಿಟ್ಟು ಹೊಡೆದಾಂಗ ನಿರತಾ | ಅವರಗೂಡ ಕಟ್ಟಿದಿ ಶರತಾ
ಬ್ಯಾಡೋ ತಮ್ಮಾ ಆದಿ ಅನರ್ಥಾ | ಲಾಲಡೋಂಗರಿ ಅಂತಾರೋ ಹೀಂಗ
ನಮ್ಮ ಉಸ್ತಾದ ಲಚಮನ ಸಿಂಗ | ಅವರಲಿಂದ ಸರೂ ಅಂತರಂಗ | ತಿಳಿಯಿತಲ್ಲಾ || ೧೦ ||

* * *

### ೧೩. ಶೈರಮ್ಮರಸನಿಗೆ ಕಲ್ಮಾ ಓದಿಸಿದ ನಬಿಸಾಬರು

ಮಹಾಶಿವನು ಕುಳಿತು ಜುಬರಾಹಿಲ ಎಂಬ ಶಿವದೂತನಿಗೆ ಹೇಳಿದನು
ಏರು|| ಮರಿಯಬ್ಯಾಡ ಮದೀನಾಕ್ಹೋಗಿ ನಬಿಸಾಬರಿಗೆ ತಿಳಿಸೆಂದನು
ಶೈರಮ್ಮರಸಗ ಮುಸಲ್ಮಾನ ಮಾಡಿ ಕಲ್ಮಾ ಓದಿಸಿ ಬಿಡೆಂದನು
ಆ ದೂತನು ಬಂದು ಹೇಳಿದನು ಸ್ಪಷ್ಟ ನಬಿಸಾಬರು ಕೇಳಿದರು ಕಿವಿಗೊಟ್ಟಾ
ಪ್ರಚಾರಕನ ಮಾತು | ಇತ್ತ ಕಡಿಗೆ ಕೇಳೋ ಮಹ್ಮದನು ಮದೀನ ಶ್ಯಾರ ಬಿಟ್ಟಾ
ಮನಯೋಗದಿಂದ ಹೊಂಟಾ | ಶೈರಮ್ಮರಸನ ಪಟ್ಟಣಕ್ಕೆ
ಚ್ಯಾಲ | ಯುಕ್ತಿ ಕಡಿ ಶಕ್ತಿಯಿಂದ ಶೈರಮ್ಮನ ಪಟ್ಟಕ್ಕೆ ಹೊರಟಾನು
ಮುಂದಕ್ಕೆ ದಾರಿ ಹಿಡಿದಾನು | ಹೋಗಿ ಅವನ ತೋಟದಲ್ಲಿ ಇಳಿದಾನು
ತೋಟದಾನ ಮರದ ಬುಡಕ ಮಲಗಿಕೊಂಡನು
ಕಾವಲಿ ಹರಿಯುವದು ಕಂಡನು | ಕಾಲಿಟ್ಟು ಪಾದ ತೊಳೆದಾನು
ಪಾದ ತೊಳೆದ ನೀರು ಹರಿದು ಹೋಗಿ ಪುರಕ ತತ್ಕಾಲಾ || ೧ ||

ಇ|| ಗುರುವಿನ ನೆನಸಿ ಮರಗಳಾ ಎಲ್ಲ ಸೊರಣಿ ಮಾಡಿದವು
ಏರು|| ಸ್ವಾಮಿ ದಯಾದಿಂದ ಉದ್ಧಾರಾದೆವೆಂದು ಮರಗಳು
ಮಾತಾಡಕ ಹತ್ತಿದವು | ಅಲ್ಲಾ ಎಂಬುವ ಕಲ್ಮಾ ಓದಿ ದೀನೆಂದವು
ತೋಟ ಕಾಯವ ಮರದ ಸೊರಣಿ ಕೇಳಿ ಬೆರಗಾದನು
ಇದು ಏನು ಕೌತುಕ ದೇವರ ಆಟ ನನಗ ತಿಳಿಯದು ಎಂದನು
ಎಲ್ಲೆಲ್ಲಿ ನೋಡಿದರು ಅಲ್ಲಾ ಎಂಬ ಶಬ್ದ ಕಲ್ಮಾ ಓದಾಕ ಹತ್ತಿದವು
ಆ ತೋಟ ಕಾಯುವ ಚಾರನು | ನಬಿಸಾಹೇಬರಿಗೆ ನಮಸ್ಕಾರ ಮಾಡಿ
ನೀವು ಯಾರೆಂದು ಕೇಳಿದನು | ಈ ಚಾರನೆ ನಾನು ಮದೀನಾ ಶಾರದವನು
ಶೈರಮ್ಮ ಅರಸನಿಗೆ ಮುಸಲ್ಮಾನನು ಮಾಡಲಿಕ್ಕೆ ಬಂದಿದ್ದೇನೆಂದು ಹೇಳಿದನು
ಚ್ಯಾಲ || ದೂತ ಹೋಗಿ ಶೈರಮ್ಮರಸನಿಗೆ ಶರಣ ಮಾಡಿದನು

ಲಗು ಮಾಡಿ ಸುದ್ದಿ ಹೇಳಿದನು | ಜಲ್ದಿ ತೀವ್ರ ಹೊರಡೆಂದನು
ಸುದ್ದಿಕೇಳಿ ಅರಸು ಬಹಳ ಸಿಟ್ಟಿಗೆದ್ದನು | ಹೊರಟ ತಯಾರಾದನು
ಸುತ್ತ ಚೌಕ ತನಗೆ ಪಾರಾಯಿಟ್ಟನು
ಬೃಷ್ಟ ಶೈರಮ್ಮ ಕತ್ತಿ ಹಿಡಕೊಂಡು ಕಡಿಯಾಕ ಹೊರಟನು ‖ ೧ ‖

ಇ‖ ನೋಡಿ ನಬಿಸಾಹೇಬ ಸ್ವಾಮಿ ಮರಳೆಂದು ಸುಮ್ಮನೆ ನಿಂತನು
ಏರು ‖ ಶೈರಮ್ಮ ಅಂತಾನು ಯಾವ ದೇಶದವ ಇಲ್ಯಾಕ ಬಂದಿರಿ ತೋಟದಲ್ಲಿ
ಸ್ವಾಮಿ ಶಿವನ ಅಪ್ಪಣೆಯಿಂದ ಮುಸಲ್ಮಾನ ಮಾಡಿ ಹೋಗುವೆನು
ಇಷ್ಟು ಕೇಳಿ ಅರಸು ಕೋಪದಿಂದ ಖಡ್ಗ ನೆಗವಿದನು
ನೆಗವಿದಂತ ಖಡ್ಗ ಸ್ವಾಮಿ ನೋಡಿ ಅಂತರಲೆ ನಿಲ್ಲಿಸಿದನು
ಎರಡು ಕೈಯಾಗ ಅಂತರಲೆ ನಿಂತಾವು ಮಂತ್ರ ಮಾಡಿದ ಗಿಡಗಾರನು
ಆ ನಬಿಸಾಹೇಬ ಸ್ವಾಮಿ ನಾನು ಗಿಡಗಾರನಲ್ಲ ನನ್ನ ಕರ ತತ್ವವನ್ನು ನೋಡಿ
ವಿಚಾರ ಮಾಡಿ ಮನಸಿಗೆ ತಿಳಿಯೆಂದನು | ಎಲೋ ನೀನು ಸತ್ಯಕ್ಕೆ ಹೌದಾದರೆ
ಈ ಗೋರಿಯೊಳಗಿನ ಹೆಣವನ್ನು ಮೇಲಕ್ಕೆ ಎಬ್ಬಿಸೆಂದು ಹೇಳಿದನು
ಚ್ಯಾಲಿ ‖ ಇಷ್ಟು ಕೇಳಿ ಸ್ವಾಮಿ ಶಿವನ ಸೊರಣಿ ಮಾಡಿದನು
ಗೋರಿಯ ಮಣ್ಣ ತಗೊಂಡನು | ನಿಂತು ಮೇಲಕ್ಕೆ ತೂರಿದನು
ತೂರಿದಂತ ಮಣ್ಣು ಮೇಲಕ್ಕೆ ನೀರು ಕಾವಲಾಗಿ ಹರಿಸಿದನು
ಒಣಗಿದ ಮರವ ಚಿಗಿಸಿದನು | ತನ್ನ ಮಹಿಮೆ ತೋರಿಸಿದನು
ಒಣಗಿದ ಮರವು ಚಿಗಿತು ಹಣ್ಣು ಕಾಯಾಗಿ ನಿಂತವು ‖ ೩ ‖

ಇ‖ ಈ ಮಹಿಮಾಸ್ವಾಮಿ ಹೊರತು ಯಾರಿಗೆ ತಿಳಿಯದೆ ಹೋಯಿತು
ಏರು ‖ ಶೈರಮ್ಮ ಅರಸನ ಮಗಳು ಬಂದು ವನದೊಳಗೆ ನಿಂತು
ನೋಡಿದಳು | ಹಣ್ಣು ಕಾಯಿ ಆದದ್ದು ನೋಡಿ ಹರದು ತಿಂದಳು
ಹೊಟ್ಟೆಕಡತೆದ್ದು ತಾಳಲಾರದೆ ಮನಿಗೆ ಹೋದಳು
ಆಕಿಯ ದೂತಿ ಹೋಗಿ ಶೈರಮ್ಮರಸಗ ಸುದ್ದಿ ಹೇಳಿದಳು
ಸುದ್ದಿ ಕೇಳಿ ಶೈರಮ್ಮ ತೋಟಕ್ಕೆ ಹೋಗಿ ನಿಂತನು
ಆ ಸ್ವಾಮಿಯವರು ನನ್ನ ಮಗಳ ಹೊಟ್ಟೆ ಕಡತ ನಿಂತಿತೆಂದು
ಮನೆಗೆ ಹೋಗೆಂದು ಹೇಳಿದರು | ಈ ಶೈರಮ್ಮ ಅರಸು ಸ್ವಾಮಿ
ಆಡಿದ ವ್ಯಾಖ್ಯೆವನ್ನು ಕೇಳಿ ಮನೆಗೆ ಹೋಗುವುದರಲ್ಲಿ
ಒಂಬತ್ತು ವರುಷದ ಕೂಸನ್ನು ಹಡೆದಿದ್ದಳು
ಚ್ಯಾಲಿ ‖ ವಿಚಿತ್ರ ನೋಡಿ ಶೈರಮ್ಮರಸು ಸ್ವಾಮಿಗೆ ಹೇಳಿದನು
ಲಗುಮಾಡಿ ಮನಿಗೆ ಕರೆತಂದನು | ಕೂಸಿನ್ನ ಭೆಟ್ಟೆ ಮಾಡಿಸೆಂದನು
ಎದ್ದು ನಿಂತು ಕೂಸು ಹೇಳಿತು ಉದ್ದಾರಾದೆನು | ಹಿಂದಿನ ಜಲ್ಮಕಳೆದನು
ನಿಮ್ಮ ಪಾದಕ್ಕೆ ಹೊಂದಿದೆನು | ಕೂಸು ಮಾತಾಡುದು ಕೇಳಿ
ಎಲ್ಲ ಜನರು ನೋಡಿ ಬೆರಗಾದರು ‖ ೪ ‖

ಇ|| ನಬಿಸಾಹೇಬರು ಕುಂತು ನೀವು ಯಾರೆಂದು ವಿಚಾರ ಮಾಡಿದರು
ಏರು || ಕೂಸು ಹೇಳಿತು ಆದ ಮಾತು ಗೋರಿಯ ಒಳಗ ಇದ್ದೆನು
ನಬಿಸಾಹೇಬರ ಕರುಣದಿಂದ ಇಲ್ಲಿಗೆ ಬಂದೆನು
ಇಷ್ಟು ಕೇಳಿ ಕೂಸು ನಬಿಸಾಬರ ಪಾದಕ್ಕೆ ಬಿದ್ದಿತು
ಎಲ್ಲ ಜನರು ನೋಡಿ ಶರಣು ಮಾಡಿ ಎದ್ದು ನಿಂತರು
ಕೂಸಿನ್ನ ನೋಡಿ ಕುಶಿಯಾಗಿ ಸ್ವಾಮಿ ಆದ ಮಾತು ಕೇಳಿದರು
ಆ ಕೂಸು ಹೇಳಿತು ಹಿಂದಿನ ಈಸಾ ಪೈಗಂಬರ ಆಳಿಕೆ
ಉಮೇದ್ವಾರಿಯಲ್ಲಿ ಎಂಬತ್ತು ವರ್ಷದವನಾಗಿ ಸತ್ತಿದ್ದೆನು
ಈ ಏಳು ನೂರಾ ಎಂಬತ್ತು ವರ್ಷದವರೆಗೆ ಗೋರಿ ಒಳಗ ಇದ್ದು
ಅಂತಃಕರಣದಿಂದ ಹುಟ್ಟಿ ಬಂದು ಮಂದಿಯೊಳಗ ಸಂತೋಷದಿಂದ ಇರುವೆನು
ಚ್ಯಾಲಿ || ಈ ಸುದ್ದಿ ಕೇಳಿ ಶೈರಮ್ಮರಸು ಹರುಷವಾದನು
ಸ್ವಾಮಿ ಕೌತುಕ ನೋಡಿದನು | ಸತ್ಯಕ ಶರಣರು ಹೌದೆಂದನು
ಸ್ವಾಮಿಯ ಮಹತ್ವ ನೆನಸಿ ತಿಳಿದು ಗಿಡಗಾರ ಅಲ್ಲೆಂದನು
ಕಲ್ಮಾ ಓದಿಸಿ ಬಿಡೆಂದನು ಮುಸಲ್ಮಾನನಾಗಿ ಇರುವೆನು
ಸ್ವಾಮಿ ಕೂಸಿನ್ನ ಕರಿದು ನೂರೊರಷ ಆಯುಷ್ಯಕೊಟ್ಟರು
ಶೈರಮ್ಮರಸಗ ಮುಸಲ್ಮಾನನ ಮಾಡಿ ಸ್ವಾಮಿ ಮದೀನಕ್ಕೆ ಹೋದರು
ಪೊಡವಿಯಲ್ಲಿ ಮೆರೆಯುವಂತ ಒಡೆಯ ನರಗುಂದ ಪೀರನು
ಧೃಡಭಕ್ತಿಲಿಂದ ಕಮಾಲಸಾಹೇಬ ತೋರಿದರು || ೫ ||

* * *

## ೧೪. ಜೈಕುಮನ ಗರ್ವಭಂಗ

ಈ ಸಂದ ದೈವದ ಮುಂದ ಹೇಳುವೆ ಒಂದ ಬಯಾನ
ನಮಗ ಮೂಲ ಆಗಿ ನಿಂತಾನ ಗೂಗಿ ಇಂವಾ ಪತ್ರ್ರೋಳಿ
ಹಾರಿ ಬಂದರ ತೂರಿ ಒಗೂತೇನಿ ವೈರಿಗೆ ಈ ಪಡದಾಗ
ಬುದ್ದಿ ಇಲ್ಲದೆ ಗೆದ್ದೇನಂದರ ಗುದ್ದಿ ಕಟ್ಟೇನಿ ಕೊರಳಾಗ
ಗೇನಿಸಿ ಅಕ್ಷರ ಎಣಿಸಿ ತರಬೇಕ ತೊನಸಿ ಹೊಡಿಬ್ಯಾಡ ಮನದಾಗ
ಶಾಹೀರ ಮುಡದಾರ ಇಂವಗ ಇಲ್ಲೊ ಕಾಣೇತನಾ || ೧ ||

ಬಿಟ್ಟ ಗುಲ್ಲ ಇಡಬೇಕ ಖ್ಯಾಲಾ | ಕೇಳ ತಪಶೀಲ ಸಂದಾನಾ
ಸಾರಿ ಜೈಕುಮ ಜಗದ ಒಳಗ ಮೀರಿ ನಿಂತಾನ ಮುಡದಾರಾ
ಯಾಂವಾ ಇದ್ರ ಬೆಳದಾಂವಾ ಕೊಡಲಾಕ ಜೀವಾ ಬರಬೇಕ ನನ್ನಲ್ಲಿ
ಆಗ ಡಂಗುರ ಬ್ಯಾಗ ಸಾರ್ಯಾನ ಹೀಂಗ ಅರಸ ಊರಲ್ಲಿ
ಹಿಂಡ ವೈರಿಯ ಗಂಡ ನಾನು ಪುಂಡ ಅನಿಸಿನಿ ಜಗದಲ್ಲಿ
ಎದಿಗಾರಾ ಗಂಭೀರಾ ಯಾರದು ಇಟ್ಟಿಲ್ಲಾ ಅನುಮಾನಾ || ೨ ||

ಕೇಳಿ ವರದಿ ನಬಿಸಾಹೇಬ ಸುದ್ದಿ ಹೊಂಟಾರೋ ಬುದ್ಧಿ ಅದಿನಾ
ಜೋಡಿಲಿಂದ ನಾಲ್ವರು ಮಿತ್ರರು ಕೂಡಿ ನಬಿಸಾಬ ಸಂಗತೀಲೆ
ಬ್ಯಾಗ ಮಾಡೂಕ ಜಂಗ | ನಡದಾನೋ ಸಂಗ ಮೌಲಾ ಶರಣರಾ
ತಡದ ದಾರಿ ಹಿಡದ ಶರಣರು ಹ್ವಾದಾರೋ ಮಾಡಿ ಅವುಸರಾ
ಈಗ ಆ ಜೈಕುಮಗ ಮಾಡೂನು ಹ್ಯಾಂಗ ಮುಂದಿನ ಹುನ್ನಾರಾ
ರಣಶೂರ ಬಹಾದ್ದೂರಾ ಜೈಕುಮಗ ಕೊಟ್ಟಾರ ವಶರೀನಾ || ೩ ||

ಕಳಿಸ್ಯಾರ ಹೇಳಿ | ಜೈಕುಮ ಕೇಳಿ | ಬಂದಾನ ವಾಳಿ ಬೇಗನಾ
ಡೌಲ ಮಾಡಿ ಬಂದಾನ ಜನಾಬಲ ಅಂಬಾವಾ ಬಲಿಷ್ಠಾ
ಚಂದ ಮೂವತ್ತೊಂದ ಗಜಾ ಇದ್ದ | ಇಂದ ಕೇಳರಿ ಖುಷಿಯಾಲಾ
ರಾಜಾ ಇದ್ದಾನ ಸೇಜ ಅಂವಾ ಹನ್ನೊಂದು ಗಜಾ ಅಂವಾ ಅಡ್ಡಗಲಾ
ಐನೂರು ಮಣದ ಧೀರ ಇಟ್ಟಾನ ಟೊಪ್ಪಿಗಿ ತೆಲಿಮ್ಯಾಲಾ
ಸಾವಿರ ಆಕಾರಾ ಮಣದ್ದಿತ್ತ | ಮೈಯಾಗ ಅಂಗಿಯಾನಾ || ೪ ||

ಒಂಬತ್ತು ನೂರ ಮಣದ್ದಿತ್ತ ಗದಾ ಶಿಸ್ತ ಕೇಳರಿನ್ನಾ
ಮೂವತ್ನಾಲ್ಕ ಮಣದ್ದಿತ್ತ ಒಂದೇ ಹಸ್ತ ಕೈಯಾನ ಹತಿಯಾರಾ
ಆರನೂರ ಮಣದ್ದಿತ್ತ ಕಡ್ಲಿದೀರ ಹಿಡಕೊಂಡ ಕೈಯಲ್ಲಿ
ಒದರಿ ಅಂತಾನ ಹೆದರಿಕೆ ಇಲ್ಲದ ವೈರಿ ಬಂದರ ರಣದಲ್ಲಿ
ಯಾಂವ ಇದ್ದಾನ್ಹಂತಾವಾ ಕೊಡಲಾಕ ಜೀವಾ ಬರತಾನ ನಮ್ಮಲ್ಲಿ
ಹಂಕಾರ ಇದ್ದರಾ | ಮಾಡಲಿಕ್ಕೆ ಬರಬೇಕು ಕದನಾ || ೫ ||

ಸೈಯ್ಯದ ಅಂಬಾವಾ ಖುದ್ದ ಮಾಡೂಕ ಯುದ್ಧ ಬ್ಯಾಗನಾ
ಸಿಟ್ಟಿಲಿಂದ ಸೈಯ್ಯದ ಸರದಾರ ಕಟ್ಟಿ ನಡಾ ಹೊಂಟಾರು
ಒದರಿ ಅಂತಾನ ಬರ್ರಿ ಬಂದಾರ ವೈರಿ ಆ ಜನಾಬಿಲಾ
ಜಂಗ ಆದೀತ ರಂಗ ಆತನ ಸಂಗ ಆದೀತ ಗಾಲಮೇಲಾ
ಸತ್ತ ಸೈಯ್ಯದ ಘಾತ ಆದೀತ ಮಾತ ಮುಂದೇನ ಉಳಿಯಲಿಲ್ಲಾ
ಶರಣರಾ ಹೈದರಾ ಕೇಳ್ಯಾರೋ ಸೈಯ್ಯದನ ಮರಣಾ || ೬ ||

ಸುತ್ತ ಹಿಂಡ ವೈರಿಗಂಡ ಅನಸ್ಯಾರ ಪುಂಡ ಮರವಾನಾ
ತಡಾಯಿಲ್ಲದ ಹೊಂಟಾರೋ ಕಟ್ಟಿನಡಾ ಆ ಮೌಲಾವಲಿ
ತಡದ ಹೊಡದಾರ ಗುಡಗ ಹುಟ್ಟಿ ನಡುಗಿ ಬಿದ್ದಾರೊ ಸರುವೆಲ್ಲಾ
ಜೇರ ಆಗಿ ಸತ್ತಾರ ಕಾರಿ ನೆತ್ತರ ಜನಾ ಅಳತಿ ಇಲ್ಲಾ
ಡೌಲಮಾಡಿ ಜನಾಬಿಲಾ ಬಂದಾ ಕಂಗಾಲಾ ಅವನಿಗೆ ತಿಳಿಲಿಲ್ಲಾ
ಜಂಗಬಾರಾ ಜಮ್ಮರಾ ಮಾಡ್ಯಾರ ಮೌಲಾ ಶರಣಾ || ೭ ||

ಕೈಚಾಚಿ ಜನಾಬಿಲ ಕ್ವಾಚಿ ಹಿಡದಾನ ಅಂವುಚಿ ಮೌಲಾನಾ
ಎತ್ತಿ ಒಗೂತೀನಿ ಮೌಲಾ ನಿಮಗ ಒತ್ತಿ ಆ ಭೂಮಿಯ ಮ್ಯಾಗ

ನಗುತ ಆಡ್ಯಾರೋ ಮಾತ ಮನಸಿಗೆ ಬಂತ ಏನ ಹರಕತ ಇಲ್ಲಿ
ಅಲಿ ಹೀಂಗ ಬಾಯಲಿ ಹೇಳಿ ತೆಲಿಮ್ಯಾಲ ಎತ್ಯಾರ ತಡಾಯಿಲ್ಲಾ
ಶರಣರಾ ಅವುಸರಾ ಒಗದ ಜನಾಬಿಲನಾ || ೮ ||

ನೋಡಿ ಜನಾಬಿಲ ಆದಾನ ಗಾಬಾ ಕೊಡಲಿಲ್ಲ ಜವಾಬ ಏನೇನಾ
ಎದ್ದ ಜನಾಬಿಲ ಮಾಡಿ ಅವಸರ | ಬಿದ್ದಾನೊ ಪಾದದ ಮ್ಯಾಲ
ಕರುಣ ನಬಿಸಾಬ ಶರಣ ಮುಸಲಮಾನ ಮಾಡ್ಯಾರೋ ಆವಾಗ
ಗುರು ದಸ್ತಗೀರ ಮರವ ಬೀಳದ್ಹಾಂಗ | ವರವ ಕೊಟ್ಟಾರ ನಮಗ
ಶಿಸ್ತ ಕೇಸುಪೀರ ಮಸ್ತ ಬುದ್ಧಿಕೊಟ್ಟ ಹಸ್ತ ಇಟ್ಟ ನಾಗೂ ಗೌಸುಗ
ಮಿತ್ರರಾ ಇಬ್ಬರಾ ಲಾಲಡೋಂಗ್ರಿ ಶಾಣೇತನದಿಂದ ರಿವಾಯಿತ ಕಟ್ಯಾರ || ೯ ||

*** * ***

**೧೫. ನಬಿಸಾಬರು ಗಿಡುಗನಿಗೆ ಬುದ್ಧಿ ಹೇಳಿದ್ದು**

ಅತಿ ಸುಂದ್ರ ಚಂದ್ರನಂತೆ ದೇವಿಂದ್ರ ಸಭಾ ಶಾಂತ
ಕೇಳರಿ ಇಟ್ಟು ಚಿತ್ತ | ಮಾಡದೆ ಗುಲ್ಲಾ
ಏರು || ಪ್ರೀತಿಯಿಂದ ಹುಟ್ಟಿಸಿದ ಸದ್ಗುರು ಪ್ರೇಮಿ | ಅಂತರ್ಯಾಮಿ
ಅನಿಸ್ಯಾರೋ ನಬಿಸಾಬರು ಇರುವ ಠಿಕಾಣಿ | ಮಕ್ಕಾ ಮದೀನಾ
ಪರಮ ಪಾವನ ಸರ್ವ ಸಂಪನ್ನಾ | ಮಾಡಿದ ಲೀಲಾ
ಖ್ಯಾತ್ರದ ದಾಖಲ ತಿಳಿಸ್ಯಾರೋ ಖುಲ್ಲಾ || ೧ ||

ಕುಂತಿದ್ರೊ ಮಸೀದಿಯೊಳಗೆ | ನಬಿಸಾಹೇಬರು ಆವಾಗ
ಶಿವನ ಧ್ಯಾನಾ ಮನದಾಗ ಮಾಡುತ್ತ ಖ್ಯಾಲಾ ||
ಏರು || ಒಂದು ಬೆಳವ ಬಂದು ಶರಣರ ಮುಂದಾ ಮಾಡೀತು ಅರಜಾ
ಗಿಡಗ ನನಗ ಹಿಡಿದು ತಿನತೈತಿ ಉಳಿಸಬೇಕರಿ ಸರಜ
ಹಿಡಿದೀತು ಚರಣಾ | ಉಳಿಸಬೇಕರಿ ಪ್ರಾಣಾ
ದಯವಂತ ಶರಣಗ ಬಂತು ಅಂತಃಕರುಣಾ
ಬಿಡು ನಿನ್ನ ಜಲ್ಲಾ ಬೆನ್ನಿಗೆ ಬಿದ್ದ ಮೇಲಾ | ನಾನು ನಿನಗೆ ಕೊಡುವುದಿಲ್ಲಾ || ೨ ||

ನಬಿಸಾಬ ಶರಣರು ಗಿಡಗಕ್ಕೆ ಅಂದರು
ನನ್ನ ಮಾತು ಕೇಳ ಗಬರು | ಬಿಡು ಇದರ ಹಿಂಬಾಲ ||
ಏರು || ಗಿಡಗ ಅಂದೀತು ಬಿಡಲಿ ಹ್ಯಾಂಗ | ಹೊಟ್ಟೆ ಹಸ್ತು ಸಾಯತೇನಿ
ಮೂರು ದಿವಸ ತುಸು ಅನ್ನ ಇಲ್ಲಾ | ಘೋರ ಬಿಟ್ಟು ಹಿಡಿದೀನಿ
ಅಂತಾರೋ ಶರಣಾ | ಹಿಡಿ ಸಮಾಧಾನ
ಹೊಟ್ಟೆತುಂಬ ಅನ್ನ ಉಣಿಸುವೆ ಗಿಡಗನ ಪಾಲ
ಉಂಡ್ಹೋಗೋ ಖುಷಿಯಾಲಾ | ಅನುಮಾನಾ ಇಲ್ಲಾ || ೩ ||

ಶರಣರಿಗಂತೋ ಗಿಡುಗ
ನಿಮಗ ಗೊತ್ತಿದ್ದ ನಾ ಮಾಂಸ ಹೊರ್ತು ಏನು ಮುಟ್ಟೂದಿಲ್ಲಾ
ಏರು || ವಹಾರೆ ಗಬರು ಖರೇ ಮಾತು ಬಾರೋ ಮಾಂಸ ಕೊಡತೇನಿ
ಊಟ ಮಾಡೋ ಹೊಟ್ಟೆ ತುಂಬಾ | ಬಿಟ್ಟು ಬಿಡೋ ಬೆಳವನಿಗೆ
ಶರಣರಿಗೆ ಗಿಡಗ ಹೀಂಗ ಅಂತು
ಮುಟ್ಟೋದಿಲ್ಲಾ ಪರತ ಹೊಡೆದು ತಿನ್ನುವೆ ಸ್ವಂತಾ
ನಮ್ಮದಿಂಥಾ ಕುಲಾ | ತಗದಾರೋ ರಸೂಲಿಲ್ಲಾ ಮತ್ತೊಂದು ಅಕಲಾ || ೪ ||

ನಬಿಸಾಬ್ರು ಗಿಡಗಗ ಅಂದ್ರೊ ತಗೋ ನನ್ನ ಮಾಂಸ
ಬೆಳವನದು ಬಿಡೊ ದ್ಯಾಸ | ಅದು ಚಲೋದಲ್ಲಾ ||
ಏರು || ಗಿಡಗ ಅಂದೀತು ಕಡಿದುಕೊಡರಿ ಬಿಟ್ಟು ಬಿಡುವೆ ಬೆಳವನ್ನ
ಸುದ್ದಿಕೇಳಿ ಬಂದ್ರೊ ನಾಲ್ಕು ಮಂದಿ | ಸಾಹೇಬರು ಆ ಕ್ಷಣದಾಗ
ಅಬೂಬಕರ | ಉಸಮಾನ ಅಲಿ ಹೈದರ | ಗಿಡಗಕಂತಾರ
ಶರಣರ ಬದಲಾ ನನ್ನ ಮಾಂಸ ಸವಿ ಬೆಲ್ಲಾ | ಉಂಡ್ಹೋಗೋ ಖುಷಿಯಾಲಾ || ೫ ||

ಗಿಡಗ ಅಂದೀತು ಏನಿದು ನನಗೆ | ಶರಣರ ಮಾಂಸ ಹೊರ್ತು
ಯಾರ್‍ಯಾರದು ಮಾಂಸ ನನಗೆ ಬೇಕಾಗಿಲ್ಲಾ ||
ಏರು || ದಿಕ್ಕ ತಪ್ಪಿ ಚಿಕ್ಕ ಮೊಮ್ಮಕ್ಕಳಾ ಹಸೇನಹುಸೇನ ಬಂದ ಗಿಡಗಕ್ಕ
ವಂದಿಸ್ಯಾರೋ ಪರಿ ಪರಿ ಮಾಡಿ | ರೋಧನ ಮತ್ತೊಬ್ಬನ
ಮುದಕ ಬಿರಸ ಮಾಂಸ ಯಾಕ ನನ್ನ ಮಾಂಸ ತಿಂದು | ನೋಡಬೇಕ ರುಚಿ
ಬಹಳ | ಗಿಡಗ ಎಬ್ಬಿಸು ಗದ್ದಲ | ನಾ ಕೇಳೂದಿಲ್ಲಾ || ೬ ||

ಶರಣರಿಗೆ ಗಿಡಗ ಖುಲ್ಲಾ | ಹುಡುಗಾಟ ಚಲೋದಲ್ಲ
ನನ್ನ ಬೆಳವ ಕೊಡರಿ ಮೊದಲಾ | ನಾ ನಿಂದ್ರೂದಿಲ್ಲಾ ||
ಏರು || ವಚನದ ಸರಿಯಾಗಿ ಶರಣರು ಚೂರಿ ತಗೊಂಡರೊ ಕೈಯೊಳಗೆ
ಆಕಾಶ ಭೂಮಿ ನಡುಗಿತು ಆಕ್ಷಣದಾಗ | ನೋಡಿ ಅವರಿಷ್ಯಾ
ಗಿಡಗ ಸಂತುಷ್ಟ ಆಗಿ ಅಂತೋ ಶ್ರೇಷ್ಠಶರಣರು ಉತ್ಕೃಷ್ಟ |
ನಿಮ್ಮಂತವರು ಸೇಲಾ | ಎಲ್ಲಿ ಇಲ್ಲಾ | ಈ ಪೃಥ್ವಿಯ ಮೇಲಾ || ೭ ||

ಖರೇ ಮಾತು ಇದು ಕಾಣೆ ನೋಡುವುದಕ್ಕ
ನಿಮ್ಮ ಮನಸ್ಸ ಕಳಿಸ್ಯಾನೋ ಜಗದೀಶ | ಗಿಡಗ ಆದಾವ ಇಜರಾಹಿಲಾ
ಏರು || ಕಳವು ಯಾತಕ ಬೆಳವ ಆದಾವ ಈ ಜಿಬ್ರಯಿಲಾ
ಪ್ರೇಮಯಿಟ್ಟು ಶಾಹೀರ ನಮಗೆ
ಧರೆಯೊಳು ಬಾಗಲಕೋಟಿ ಶಾರ | ಪೀರ ದಸ್ತಗೀರ ನಮಗೆ ಆದಾರ
ಪಿತಾಂಬರಪ್ಪನಾ ಗುಣ ಸಣಕಲ್ಲ ಬಯಾನ | ಕುಲ್ಲಾ ಹೇಳ್ಯಾರೋ ಅಸಲಾ || ೮ ||

* * *

## ಪೂರ್ವದ ಪೈಗಂಬರರಿಗೆ ಸಂಬಂಧಿಸಿದ ಪದಗಳು

### ೧. ಹ| ಅಯ್ಯೂಬರಿಗೆ ಇಬ್‌ಲೀಶ ಕಾಡಿದ ಪದಾ

ಏನ ಚಂದ ಸಭಾ ಪಸಂದ ಕೇಳರಿ
ಇದು ಒಂದ ಕೇಳರಿ ಜುಳಕ || ಪಲ್ಲವಿ ||

ಏರು || ಅಯ್ಯೂಬ ಶರಣಾ ಮಹಾ ಪುಣ್ಯವಾನಾ | ದೇಶದಲ್ಲಿ ಬೆಳಕ
ಮಕ್ಕಳು ಮರಿ ಮನಸಿನ ತಕ್ಕ | ದನ ದೌಲತ್ತಿಗೇನು ಕಡಿಮಿ ಇದ್ದಿಲ್ರಿ ಶಿವಕೊಟ್ಟ ಬಳಿಕ | | ೧ ||

ಇ|| ದಿನಾ ದಿನಾ ನಮಾಜ ನಿತ್ಯ ನೇಮ ನಿರಕ
ಏರು || ಕತಾಪದ ಮಾರ್ಗ ಹ್ಯಾಂಗ ಇದ್ದೀತು ಹಾಂಗ ನಡಿಯೋ ತರಕ ||
ಮಾಡಲಿಲ್ಲ ಚೂರು ಅದರಾಗ ಪರಕ
ಪಂಡಿತ ಶಾಣ್ಯಾ ತಿಳಿದಾನೋ ಮನ ಏನುಬಲ್ಲ ಮೂರ್ಖ || ೨ ||

ಇ|| ಬಡವರಿಗರಿಬಿ ಕೊಡತಿದ್ರೋ ಪೋಷಾಕ | ಉಡಲಾಕ ತೊಡಲಾಕ
ಏರು || ದೀನ ದಯಾಳು ಅನಾಥರಿಗೆ ದಿನಾಲು ಉಣಿಸುವತನಕ
ಹಾಕಲಿಲ್ಲೊ ಬಾಯಾಗ ಒಂದ ತುಣಕ
ಇಂಥವರ ಪಂಥ ಕೆಡುಸುದುಕ ಇಬ್ಲೀಸ ಹತ್ಯಾನೋ ಕಾಡುದಕ || ೩ ||

ಇ|| ಗುಪ್ತದಿಂದ ಬೆಂಕಿ ಹತ್ತಿ ಮನಿಸುಟ್ಟು ಆಗಿಹೋತ್ರಿ ಪಾಕ
ಏರು|| ಆನಿ ಕುದುರೆಗಳು ಏನು ಉಳಿಯಲಿಲ್ಲ ಸುಟ್ಟುರಿಯಿತೋ ಜಳಕ
ಉಳಿಯಲಿಲ್ಲ ಚೂರ ಬಾಳೇ ಬದುಕ
ಭಸ್ಮಾಗಿ ಹೋತೋ ನಿಮಿಷ ಹತ್ತಲಿಲ್ಲ ತಟಕ || ೪ ||

ಇ|| ಮೂರು ಮಂದಿ ಹೆಂಡಿರು ಸತ್ತು ಒಬ್ಬಾಕಿ ಉಳದಾಳೋ ತಳಕ
ಏರು || ಉಳಿದಂತಾಕಿ ರಹಿಮಾ ಎಂಬಾಕಿ | ಐಯ್ಯೂಬನ ನಸೀಬಕ
ಏಳುಮಂದಿ ಮಕ್ಕಳು ಕಲಿಯಲಿಕ್ಕೆ ಸಾಲಿಗೆ ಹೋದಲ್ಲಿ
ಮೇಲಿನ ದಬಾಸು ಬಿದ್ದಿತು ಸುಮಸುಮಕ || ೫ ||

ಇ|| ಸತ್ತ ವರ್ತಮಾನ ಕೇಳಿ ಅಯ್ಯೂಬ ಅಳತಾನೋ
ಏರು | ಅವರ ಹೆಂಡತಿ ಮಹಾಗುಣವಂತಿ | ಧೈರ್ಯ ಹೇಳ್ಯಾಳೋ ಮನಕ
ಪತಿ ನೀವು ಚಿಂತಿ ಮಾಡುವುದ್ಯಾತಕ
ಹ್ಯಾಂಗ ಇಡತಾನಾ ಶಿವ ಹಾಂಗ ನುಡಿಯಬೇಕ | ಇರುವದು ಮನಪಾಕ || ೬ ||

ಇ|| ಶರಣರ ಕಾಲಿಗೆ ಹುಣ್ಣಾಗಿ ಬಹುಬ್ಯಾನಿ ಮಾಡಿತು ಜೀವಕ
ಏರು || ಏನು ಹಚ್ಚಿದರೂ ಮಾಯಲಿಲ್ಲ ಹೆಚ್ಚಾದೀತು ದಿನದಿನಕ | ಸುರುವಾತು
ಮೈತುಂಬ ಹಬ್ಬುವದಕ | ಸುಲದಿತೊ ಎಲ್ಲ ಮೈಯಾನ ತೊಗಲು ಉಳಿಲಿಲ್ಲ ತಟಕ || ೭ ||

ಇ|| ಕೀಂವ ರಕ್ತಸೋರಿ ಹುಳಬಿದ್ದಾವು ಮೈಹತ್ತಿ ನಾರುದಕ
ಏರು|| ಅವನ ಹೆಂಡತಿ ಮಹಾಗುಣವಂತಿ ಹೇಸಲಿಲ್ಲೊ ಅದಕ | ಹಗಲಿ ರಾತ್ರಿ
ಬೆಳತನಕ ಗಂಡನ್ನ | ಜೀಂವದಕ್ಕಿಂತ ಹೆಚ್ಚು ಮಾಡ್ಯಾಳೋ ಜೋಪಾನ || ೮ ||

ಇ|| ಊರಮಂದಿ ಬೇಜಾರು ಮಾಡ್ಯಾರೋ ಮೈನಾರುದಕ
ಏರು| ಹೊರಗ ಹಾಕಿದರೋ ಊರಿಂದ ಐಯ್ಯೂಬನ ನಸೀಬಕ್ಕ
ಉಪಾಯವಿಲ್ಲ ಶಿವಾ ತಂದ ಬಳಿಕ | ಗಂಡನ ಕರಕೊಂಡ
ಹೆಂಡತಿ ಹೊಂಟಾಳೋ ಪರ ಊರಿಗೋಗುದಕ || ೯ ||

ಇ|| ಶರಣರಿಗೆ ಇಬ್ಬರು ಶಿಷ್ಯರು ಬಂದಾರೋ ಕಳಿಸುದಕ
ಏರು || ಹೊತಗೊಂಡ ನಡದಾರೊ ಮುಂದಿನ ಊರಿಗೆ |
ಮಂದಿ ಕಂಡಾಕ್ಷಣಕ ನಿಂದರಗೊಡಲಿಲ್ಲ ಒಂದಕ್ಷಣಕ |
ಸತ್ತ ಹೆಣಾಹೊತ್ಯಾಕ ತಂದಿರಿ ಏನು ಕಾರಣ ಎಲ್ಲಿಯ ತನಕ || ೧೦ ||

ಇ|| ಹೀಂಗ ಏಳೂರು ತಿರುಗಿದರು ಸಿಗಲಿಲ್ಲ ಜನ ತಟಕ
ಏರು || ಹೊತ್ತೊತ್ತು ಶಿಷ್ಯರು ಬ್ಯಾಸತ್ತು ಬಿಟ್ಟಾರ ನಡಬರಕ
ಅಡವಿಯೊಳು ಯಾರು ಇಲ್ಲ ಹಂತೇಕ | ಬೀಬಿ ರಹಿಮಾನ ದೈವಕ
ಹೇಳಿಕೊಂತ ಕುಂತಾಳೋ ಮಗ್ಗಲಕ || ೧೧ ||

ಇಮಾಮಿನ ಮೋಜು ಬಿಡಲಿಲ್ಲ ಇಷ್ಟಾದ್ರು ಮನಕ
ಏರು || ಐದು ಹೊತ್ತು ಆಗದಾಂಗ ಚೂಕ | ನಮಾಜು ಮಾಡ್ಯಾರೋ
ಹೆಂಡತಿ ತಲಿಯಾನ ಕೂದಲ ಹಿಡಕೊಂಡು ತ್ರಾಣ ಇಲ್ಲದಕ
ಇದೇ ಪರಿ ಹದಿನೆಂಟು ವರ್ಷದ ತನಕ || ೧೨||

ಇ|| ಸನೇದ ಹಳ್ಳಿಗೆ ರಹಿಮಾನ ಹೋದಾಳು ಕೂಲಿಯ ಮಾಡುದಕ
ಏರು || ರೊಟ್ಟಿ ಎಬ್ಬಿಸಿಕ್ಯಾರ ಹೊಟ್ಟಿ ತುಂಬಿಸತಾಳೋ |
ಶಿವತಂದ ಬಡತನಕ ಯಾರೇನು ಕೊಟ್ಟಾರೊಂದ ರೊಟ್ಟಿತುಣಕ |
ಗಂಡ ತಿಂದ ಬಳಿಕ ಉಣ್ಣುವಳೊ ಮನಪಾಕ || ೧೩ ||

ಇ|| ಇಷ್ಟಾದರೂ ಬಿಡಲಿಲ್ಲೊ ಮತ್ತ ಹಾಕಿದಾನೋ ತೊಡಕ
ಏರು || ಎಲ್ಲೆಲ್ಲಿ ಹೋದರೂ ಸಿಗಲಿಲ್ಲ ಕೂಲಿ ಒಬ್ಬರ ಹಂತೇಕ |
ಬೇಡುವುದಕ ಹೊಂಟಾಳೋ ರೊಟ್ಟಿ ತುಣಕ |
ನಾಳಿಗೆ ಬಂದ ನಿಮ್ಮ ಸಾಲಾ ಮುಟ್ಟಸತೀನಿ ಹಿಡದ ಬೀಸಾಕ || ೧೪ ||

ಇ|| ಹೆಣ್ಣುಮಗಳು ಅಂತಾಳೊ ತಲಿಯನ ಕೂದಲ ರೊಟ್ಟಿಯದುಸಕ
ಏರು|| ರಹಿಮಾ ಅಂತಾಳೋ ತಲಿಯನ ಕೂದಲ ಗಂಡನ ಕೆಲಸಕ್ಕೆ |
ಬೀಳಾತಾವೋ ನಮಾಜ ಮಾಡುದಕ |
ಇಷ್ಟ ಕೇಳಿ ಆದುಷ್ಟ ಹೆಣ್ಣು ಸಾಗಂದಾಳೋ ಮುಂದಕ್ಕೆ || ೧೫ ||

ಇ|| ಬೇದವಿಲ್ಲದೆ ಕೊಟ್ಟಾಳೋ ಕೂದಲ ರೊಟ್ಟಿಯದುಸಕ
ಏರು || ತಡವಿಲ್ಲದೆ ಗಡಬಂದಾನೋ ಇಬ್ಲೀಸಾಗ ಅಯ್ಯೂಬನಂತೇಕ
ಇಲ್ಲದ್ದೊಂದು ಮಾಡಿ ಹೇಳತಾನೋ ಮಲಕ | ನಿಮ್ಮ ಹೆಂಡತಿ
ಬಾಳ ಪರಿಣಿತಳು ತುಡುಗು ಮಾಡಲಾಕ || ೧೬ ||

ಇ|| ಸಿಕ್ಕಾಳಿಂದು ಪುರಮಾಸಿ ತಲೆ ಕತ್ತರಿಸಿ ಮಾಡ್ಯಾರ ಮಂಡಕ
ಏರು || ಕೇಳಿ ಅಯ್ಯೂಬಗ ಸಿಟ್ಟುಬಂತು ಹೆಂಡತಿ ಕೃತ್ಯೇಕ |
ಜಿಬರಾಯಿಲ ಬಂದಾನೋ ಆ ಕ್ಷಣಕ |
ನಿಮ್ಮ ಹೆಂಡತಿ ಪತಿವೃತಾ ಇದ್ದಾಳೋ ಇಬ್ಲೀಶನ ಮನಕ || ೧೭ ||

ಇ|| ಸ್ವರ್ಗದಿಂದ ನೀರುತಂದು ಕೊಟ್ಟಾರು ಮಾಡಿದರೋ ಜಳಕ
ಏರು|| ಜಳಕ ಮಾಡಿದ ಬಳಿಕ ಕೊಳಕ ಹೋಗಿ ಆದೀತೋ ಠೀಕ
ಕೊಟ್ಟಾರೋ ಜರತಾರಿ ಪೋಷಾಕ |
ಎಷ್ಟು ಮಾಡಿದರೂ ಆಟ ನಡಿಯಲಿಲ್ಲೋ ಇಬಲೀಶಂದು ಕಡಿಕ || ೧೮ ||

ಮುಂಚಿನಕ್ಕಿಂತ ಹೆಚ್ಚಿನ ಧನದೌಲತ್ತು ಶಿವಕೊಟ್ಟ ಮನಕ
ಏರು || ಆನೆ ಕುದುರೆಗಳು ಏನು ಹೇಳಲಿ ಬಹಳ ಬಾಳೇಬದಕ
ಸತಿಪತಿ ಇದ್ದಾರೊ ಮನಪಾಕ |
ಅಂತಾರೋ ಶರಣ ನಿಮ್ಮ ತಕ್ಕಗುಣ ಯಾರಿಗಿರಬೇಕ || ೧೯ ||

ಇ|| ಜರಬಿನ ವಸ್ತಿ ಬಾಗಲಕೋಟಿ ಜಾಹೀರ ದೇಶಕ
ಏರು|| ದಸ್ತಗೀರ ಕೇಸುಪೀರಾ ಮತಿ ನಮಗ ಕೊಟ್ಟಾನೋ ಕಡಕ
ನಾಗೂ-ಗೌಸೂನ ಕವಿ ಕಡಕ
ಹಾಡೋ ಶಾಹೀರಾ ಹೋಗಬ್ಯಾಡೋ ನಿಲ್ಲೋ ನನ್ನ ಎಡಕ || ೨೦ ||
* * *

## ೧. ಹ| ಸುಲೇಮಾನರ ಅಂತರಗಮನದ ಪದಾ

ಚಿತ್ತಯಿಟ್ಟ ಕೇಳರಿ ಜನಾ | ಸತ್ಯವಂತ ಸುಲೇಮಾನಾ || ಪಲ್ಲವಿ ||

ಹಾರೂದು ಅಂತರಗಮನಾ | ಅವರ ಸಿಂಹಾಸನಾ
ಏರು || ಪಡೆದಿದ್ರೋ ಸಾಂಬನಲ್ಲಿ | ಉಂಗುರೊಂದು ಬೆರಳಿನಲ್ಲಿ
ಏನು ಹೇಳಲಿ ಉಂಗುರದ ಮಹಿಮೆ | ಅದರಿಂದ ಸಿಂಹಾಸನ ನೇಮಿ

ಹಾರೂದು ಸುಲೇಮಾನ ಸ್ವಾಮಿ | ಮಾಡಿಕೊಂಡ ಸ್ವಾದೀನಾ
ಹಕ್ಕಿ ಪಕ್ಕಿ ಭೂತ ಪಿಶಾಚಿ ಜಿನ್ನಾ | ನಾಗನ್ನೆಕ್ಕರನಾ || ೧ ||

ಇ|| ತಾಬೇದಾಗ ತಪ್ತ ಶರಣಾ | ಹುಕುಮ ಕೊಟ್ಟಾಕ್ಷಣಾ
ತಂದು ಕೊಡುರೋ ಬೇಡಿದ ಸ್ವಾಮಾನಾ | ಮುರುತ್ತಿದ್ದಿಲ್ಲಾ ವಚನಾ
ಏರು || ಸಕ್ರದೇವ ಅಂಬಾವಾ ಜಟ್ಟಾ | ಇಟ್ಟಿದ್ದಾ ಮನದಾಗ ಕಪಟಾ
ಉಂಗುರ ಎಬಿಸಬೇಕಂತಾ | ಏನಾರಮಾಡಿ ಮಸಲತ್ತಾ
ವ್ಯಾಳೆ ಬಂದಾಗ ನೋಡಬೇಕಂತಾ | ಹುಟ್ಟಿತ ದುರ್ಗುಣಾ
ಹಗಲಿಯಿರುಳ ಬೇಗು ಬೆಳಗಾನಾ | ಚಿಂತ್ಯಾಗ ಹೈರಾಣಾ || ೨ ||

ಇ|| ಬರದಿದ್ದು ಹಣಿಬಾರದನ್ನಾ | ಯಾರಿಗೆ ತಪ್ಪದಣ್ಣಾ
ಒಂದಿನಾ ಸುಲೇಮಾನಾ | ಕರದಾರ ಸತಿಯಳನಾ
ಏರು || ಕೈಯಾನ ಉಂಗುರ ತಗದ | ಕೊಟ್ಟ ಹ್ವಾದ್ರೊ ಹೊರಗ ಬಿದ್ದ
ಸಕ್ರದೇವ ಕುಂತಿದ್ದಾ ಜಪಿಸಿ | ಬಂದಾನ ಖೂನಾ ತಪ್ಪಿಸಿ
ಶರಣರ ರೂಪ ತೋರಿಸಿ ಉಂಗುರ ಎಬಸ್ಯಾನಾ
ಸಮುದ್ರದಾಗ ಹೋಗಿ ಒಗದಾನಾ | ಬಿಡಿಸಿದ ಬಂಧಾನಾ || ೩ ||

ಇ|| ಬಂದಾರ ಹೊರಗಿಂದ ಶರಣಾ | ಉಂಗುರ ಬೇಡತಾರ ಸತಿಯಳನಾ
ಮತ್ತೊಂದು ಎಲ್ಲಿಂದ ತರಲಿನ್ನಾ | ಕಾಡಬ್ಯಾಡ್ರಿ ಸುಮ್ಮನಾ
ಏರು || ಉಂಗುರದು ಹತ್ತಲಿಲ್ಲ ಪತ್ತೆ | ಶರಣರದು ನಿಂತಿತು ಸತ್ತೆ
ದೆವ್ವ ಭೂತ ಪಿಶಾಚಿ ಮಲಾಯೇಕ | ಹಕ್ಕಿ ಪಕ್ಕಿ ಬರವಲ್ಲು ಸನಿಯಾಕ
ಸಿಂಹಾಸನ ಹಾರವಲ್ದು ಯಾಕ | ಹಾರೀತ ಹೌಸಾಣಾ
ಇಷ್ಟ ಕಷ್ಟ ತಂದಿಟ್ಟೊ ಭಗವಾನಾ | ಸಿಗವಲ್ಲದು ಅಸನಾ || ೪ ||

ಇ|| ಹೊಟ್ಟಿ ಸುಡಲಾರದ ಶರಣಾ ಬಿಟ್ಟಾರ ತಮ್ಮ ಠಿಕಾಣಾ
ಯಾರಿಗೆ ಸ್ಥಿರವಲ್ಲಾ ದೌಳತನಾ | ಇದ್ದಾಂಗ ಮಧ್ಯಾನಾ
ಏರು || ಇದಿ ಬೆನ್ನು ಹತ್ತಿದ ಬಳಿಕ | ಅದು ಹ್ಯಾಂಗ ಬಿಟ್ಟಿತು ಸುಮಕ
ಎಲ್ಲೆಲ್ಲಿ ಹತ್ತುವಲ್ದು ಕೂಲಿ | ಹೋಗಿ ಕುಂತಾರ ಸಮುದ್ರ ದಂಡಿಲಿ
ಒಬ್ಬ ಮೀನಗಾರ ಬಂದಾನ ಅಲ್ಲಿ | ಅಂವಾ ಹಿಡುತಿದ್ದಾ ಮೀನಾ
ಆತಗ ಕೇಳೀತಾರ ಸುಲೇಮಾನಾ | ಕೂಲಿ ಕರಕೋ ನನ್ನಾ || ೫ ||

ಇ|| ಮೀನಗಾರ ಅಂತಾನ ಜಾಣಾ | ರೊಕ್ಕರೂಪಾಯಿ ಸಿಗಲಾರದಣ್ಣಾ
ನಂದು ಐತಿ ಹೆಚ್ಚಿನ ಬಡತಾನಾ | ಮಾಡುವೆ ಜ್ವಾಪಾನಾ
ಏರು || ನಿರವಾಯಿಲ್ಲದ ಮಟ್ಟಿಗೆ | ಹೂಂ ಅಂದಾರ ತಮ್ಮ ಹೊಟ್ಟಿಗೆ
ಬಲಿ ಜಗ್ಗತಾರ ಕೂಲಿಗಿ | ಮೀನಾ ತಗದ ಸನೇದ ಹಳ್ಳಿಗೆ
ವೋದು ಮಾರತಿದ್ರೋ ಕಾಳಿಗಿ | ಹೀಂಗ ಎಷ್ಟೋ ದಿನಾ
ಮೀನಗಾರನ ಮನ್ಯಾಗ ಕಾಲ್ಹರಣಾ | ಮಾಡತಿದ್ರೊ ಶರಣಾ || ೬ ||

ಇ|| ದಿನದಿನಕ ಹೆಚ್ಚಿನಾ | ಸಿಗಲಾಕ ಹತ್ಯಾವ ಮೀನಾ
ಮೀನಗಾರ ಹಿಡದ ಪಟ್ಟಣಾ | ಆದಾನೋ ದೈವಾನಾ
ಏರು || ಮೀನದ ಮೀನಗಾರತಿ | ಮಾತಾಡತಾರ ಗಂಡಾ ಹೆಂಡತಿ
ಈ ಮನುಷ್ಯಾನ ಬಂದಾನ ಹಿಡಿದು | ಹಣೇಬಾರ ತೆರಿತ ನಮ್ಮ ನಿಮದು
ಇವನ ಕಾಲಗುಣಾ ಒಳೆ ಚಲೋದು | ಬಿಡಬಾರದು ಇವನಾ
ನಮ್ಮ ಹೊಟ್ಟೀಲೆ ಇದ್ದ ಒಂದ ಹೆಣ್ಣಾ | ಮಾಡೂನು ಲಗ್ಗನಾ || ೭ ||

ಇ|| ಮಾಡಿ ಕೊಟ್ಟಿಂದಾ ಲಗ್ಗನಾ | ಹೋಗೂದಿಲ್ಲಾ ಬಿಟ್ಟ ನಮ್ಮನ್ನಾ
ಖಬೂಲ ಮಾಡಿ ಸುಲೇಮಾನಾ | ಅಲ್ಲೇ ಆದಾರ ಲಗ್ಗನಾ
ಏರು || ದಿನದಂತೆ ತಗೊಂಡ ಪಾಟಿ | ಆಡಲಿಕ್ಕೆ ಹೊಂಟಾರ ಬ್ಯಾಟಿ
ಸಕ್ರದೇವ ಉಂಗುರ ಒಗದಿದ್ದ | ಒಂದ ಮೀನ ಕಂಡಕ್ಯಾರ ಛಂದ
ನುಂಗಿ ಬಲಿಯಾಗ ಬಿದ್ದೀತ ಬಂದ | ಕಳಿಸ್ಯಾರ ಆ ಕ್ಷಣಾ
ಕಳಿಸ್ಯಾರ ಮನಿಗೆ ಅದೇ ಮೀನಾ | ಮಾಡೂನು ಪಕವಾನಾ || ೮ ||

ಇ|| ಮೀನಗಾರ ಮಗಳ ಮೋಹನ್ನಾ | ಕುಂತಾಳ ಮಾಡುಕ ಹಸನಾ
ಹೊಟ್ಟೆಯೊಳಗ ಉಂಗುರದ ಕಿರಣಾ | ಕಂಡ ಮುಚ್ಯಾವ ಕಣ್ಣಾ
ಏರು || ಇಟ್ಟಾಳ ಕಡಿಯಾಕ ತಗದ | ಕೊಟ್ಟಾಳ ಗಂಡ ಬಂದಿದ್ದ
ಖುಷಿ ಆದ್ರೋ ಸುಲೇಮಾನ ಮನಕ | ಸತ್ತೆ ನಡದೀತ ಮೊದಲಿನ ತನಕ
ಸರೂ ಜಿನ್ನಾ ಆದಾವೋ ತಾಬೇಕ | ಅತ್ತಿ ಮಾಂವಾ ಹೆಣತಿನ್ನಾ
ಕುಂಡರಿಸಿಕೊಂಡ ಸಿಂಹಾಸನಾ | ಹಾರಶ್ಯಾರೋ ಸ್ವಾಮಿ ಶರಣಾ || ೯ ||

ಇ|| ಅರು ಹಿಡಿ ಗರು ಬ್ಯಾಡೋ ಜಾಣಾ | ವರು ಪಡಿ ಗುರುವಿನ ಕರುಣಾ
ಧರೆಯೊಳು ದಸ್ತಗೀರ ಸುಬಹಾನಾ | ಬೊಗದಾದ ಠಿಕಾಣಾ
ಏರು || ಕೇಸುಪೀರ ವಸಧಿಯೊಳಗ | ಲೇಸ ಮಾಡುರೋ ಗೌಸು – ನಾಗೂಗ
ಸುತ್ತ ದೇಶಕ ಬಾಗಲಕೋಟೆ | ಬಲಬರ್ತಿ ಬಾಜಾರ ನಾಲ್ಕು ಪ್ಯಾಟಿ
ನಡು ಊರಾಗ ಪೀರನ ಕಟ್ಟಿ | ವರುಷಕ ಒಂದಿನಾ | ಗಂಧಗಲೀಪ
ಮಕರಂದ ನಿಶಾನಾ ರಬಿಲಾಖರ ಮಹಿನಾ || ೧೦ ||

* * *

## ೩. ಹ| ಸುಲೇಮಾನರು ಜೀವರಾಶಿಗೆ ನೀಡಿದ ಔತಣದ ಪದಾ

ಮಹಾಪಂಡಿತರು | ಬುದ್ದಿಬಲ್ಲಾಂತರು | ದೈವೆಲ್ಲಾ ಗಲಬಲಾ
ಮಾಡಬ್ಯಾಡ್ರಿ ಕೇಳರಿ | ಶ್ರೀಹರಿ ಸಾಂಬನ ಲೀಲಾ || ಪಲ್ಲವಿ ||

ಏರು || ಮನುಷ್ಯಾನ ಜಲ್ಮಕ | ಹುಟ್ಟಿ ಬಂದ ಸಾರ್ಥಕ
ಮಾಡಬೇಕ ದುಡಿಬೇಕ | ಮನದಾನ ವಹಿಲಾ

ಸದಾಶಿವನ ಭಜನಿವೊಳಗ ಕಳಿಬೇಕ ಕಾಲಾ
ಚ್ಯಾಲ | ಶರ್ತ ತುರ್ತಗುರ್ತ ಹಿಡಿಬೇಕ ಮಾತಿಗೆ ಮೊದಲಾ
ಅರುವಿನ ಗುರು ಶ್ರೇಷ್ಠ | ಗರು ಮನುಷ್ಯಾಗ ಕೆಟ್ಟಾ
ಅಹಂಕಾರ ಇಟ್ಟಾರು ಬಲುಮಂದಿ ಕೆಟ್ಟಾರು ಮೊದಲಾ ಸುಳ್ಳಲ್ಲಾ
ಇದಕ್ಕ ಸಾಷ್ಟಾಂತ | ದೃಷ್ಟಾಂತ | ಸಿದ್ದಾಂತ | ತಿಳಿಸುವೆ ಖುಲ್ಲಾ || ೧ ||

ಇ|| ಒಮ್ಮೆ ಶರಣರು ಸುಲೇಮಾನ ಅಂಬಾವರು | ಪ್ರಭೂಲಾ
ಕುಂತ ಗ್ಯಾನಶ್ಯಾರು | ಉಣಿಸಬೇಕ ಅಂತಾರು | ಜೀವರಾಶಿಗೆಲ್ಲಾ
ಏರು || ಅರಜ ಶಿವನ ಕಡಿಗೆ ಮಾಡ್ಯಾರು | ನನಗ ಕೊಡ ಅಪ್ಪಣಿ
ಹಾಕತೇನಿ ಸರೂ ಪ್ರಾಣಿಗೆ ಊಟಾ | ಇರುವಿ ಎಂಬತ್ತು ಕೋಟಿ ಜೀವರಾಶಿಗೆ ಸಗಟಾ
ಶಿವಾ ಅಂದಾ ಜೀಂವಕ ತೊಂದ್ರಿ ನಿಮಗ ಯಾತಕ ಇಷ್ಟಾ
ಚ್ಯಾಲ | ಸಿರಿ ಬಂದ ಕಾಲಕ್ಕೆ ಮರಿಮಾಡಿ ಉಣಬೇಕ
ಬಿಡ ನಿನ್ನ ಹವ್ಯಾಸ | ಕುಂತಿಯೋ ಉಪವಾಸ | ಎಲ್ಲಾ ಸುಳ್ಳಲ್ಲಾ
ಅವಕ ಕರಸೂದು ಉಣಿಸೂದು ಯಾರಿಂದ ಆಗೂದಿಲ್ಲಾ || ೨ ||

ಇ|| ಮತ್ತ ಶರಣರು ಸುಲೇಮಾನರು ಅಂತಾರ
ಎಷ್ಟು ಬಂದಾವು ತಿಂದಾವು ಹ್ವಾದಾವು ವನ ಚರ ಎಲ್ಲಾ
ಏರು || ಶಿವನು ಮತ್ತ ಅಂದನು ಖಾಲಿ ಕೆಡಬ್ಯಾಡ ನೀನು
ಬಿಡು ದಿಮಾಕ ಸುಮಕ ಯಮಕ ನಿಂದು ಎದ್ದೀತು ಗೋಳಾ
ಅಂಡಜಾ ಮತ್ತ ಪಿಂಡಜಾ ಜಲಜಾ ಮರಿಬಹಳ
ಶರಣಂದ್ರೊ ತುಸು ತೊಂದರಿ ಇಲ್ಲದೆ ಉಣಿಸುವೆ ನಿವ್ವಳಾ
ಚ್ಯಾಲ || ಈ ಮಾತಿಗೆ ಶಿವನು ಕುಲುಕುಲು ನಕ್ಕಾನು
ಕಾಮಾಂಧ ಮದಾಂಧ ಮನುಷ್ಯಾಗ ಹೇಳಿದರಕಲಾ | ತಿಳೂದಿಲ್ಲಾ
ಎಲ್ಲಾ ಬಿಟ್ಟಾನ ಅಪ್ಪಣಿ ಕೊಟ್ಟಾನ ತಡಾಯಿಲ್ಲಾ || ೩ ||

ಇ|| ಆಯಿತು ಆನಂದ ಹುಕುಮ ಆದಿಂದ ಶರಣರು ಸೇಲಾ | ತತ್ಕಾಲಾ
ಸುರು ನಡಸ್ಯಾರ ಹಂಡೆಬಂಡೆ ತರಸ್ಯಾರ ಸಾಮಾನು ಎಲ್ಲಾ
ಏರು || ಪಕವಾನಾ ಸಾಹಿತ | ಮಾಡುಕ ತಾಕೀತ
ಕೊಟ್ಟಾರು ನಡಾ ಕಟ್ಯಾರು ಸರುದೇವತಾ ಜನಾ
ಓಡ್ಯಾಡಿ ಅಡಗಿ ಮಾಡಿದಾರೋ ಅಳತಿಲ್ಲದ ಅನ್ನಾ
ಪಕವಾನ ರಾಶಿ ನೋಡಿ ಖುಷಿ ಸುಲೇಮಾನ
ಚ್ಯಾಲ | ಬೇಕಾದಷ್ಟು ಬರಲಿ | ಮನಾ ಬಲ್ಲಾಂಗ ಉಣಲಿ
ಅನುಮಾನ ಯಾಕಿನ್ನಾ ಔತಣಾ ಕೊಟ್ಟಾರಲ್ಲಾ | ಜಗಪಾಲಾ
ಕಳಿಸಿಕೊಡಬೇಕ ಬೇಶಕ್ಕ ಊಟಕ್ಕ ಜೀವರಾಶಿಗೆಲ್ಲಾ || ೪ ||

ಇ|| ಶಿವನ ಕೌತೂಕ | ಮೀನವೊಂದ ಊಟಕ್ಕ | ಬಂತ ಅಕ್ರಾಳ ವಿಕ್ರಾಳ
ಬಹಳ ಹಸ್ತೇನಿ | ಇಲ್ಲಂದ್ರ ಸಾವುತೇನಿ | ಹಾರತೈತಿ ಉಸಲಾ

ಏರು|| ನೋಡಿ ಮೀನದ ಗಡಿಬಿಡಿ | ಶರಣರಂದ್ರೋ ಅರಬೂತಗೇಡಿ
ಬಂದೈತಿ ಒದರತೈತಿ ಮುಂಚ ಉಣಸರಿ ಇದಕ
ತಿಂತ ಒಂದ ತುತ್ತ ಆತ ಮಾಡಿದೆಲ್ಲಾ ಬದಕ |
ಹೊಟ್ಟಿ ತುಂಬ ಉಣಸ | ಊಟ ಮಾಡಿಸಿದಿ ಎದಕ
ಚ್ಯಾಲ | ಶ್ರೀಹರಿ ಭಗವಂತಾ ಹಿಂತಾವು ಮೂರ ತುತ್ತಾ
ದಿನಾನಮಗ ಉಣಸಾಂವಾ | ಸರೂ ಬೀಂವಕ್ಕ ಸಲುವಾವಾ
ಅಕೇಲಾ ಹೀಂಗ ಅನ್ನಾನಾ | ಸುಲೇಮಾನ ಶರಣರು ನಾಚಿದರಲ್ಲಾ || ೫ ||

ಬಾಗಲಕೋಟ್ಯಾಗ ಸುತ್ತ ನಾಕ ಪ್ಯಾಟ್ಯಾಗ | ನೆನೆದಾರಲ್ಲಾ ಪ್ರಭೂಲಾ
ದಸ್ತಗೀರಂದು ಪೀರಂದು | ಇರುವದು ನಮಗ ಅನುಕೂಲಾ
ಏರು || ಧೀರಾ ಕರುಣಾ ಸಾಗರಾ ಕೃಪೆವಂತ ಕೇಸುಪೀರಾ
ಹಸ್ತಿಟ್ಟ ಮಸ್ತ ಬುದ್ಧಿ ಜ್ಞಾನ ಕೊಟ್ಟಾರೋ ನಮಗ
ನಾಡಿನ್ಯಾಗ ನಾಗೂ-ಗೌಸುನ ಕವಿ ಕಸರಿಲ್ಲದಾಂಗ
ಹಿಂಡ ವೈರಿಯ ಗಂಡ ಕವಿ ಗುಂಡ ಹೊಡದಾಂಗ
ಚ್ಯಾಲ | ಕಡಿ ನುಡಿ ಅಡಿ ಪ್ರಾಸಾ | ರಣಹೇಡಿ ಇಡು ಧ್ಯಾಸಾ
ಇಲ್ಲದೊಂದು ಬಾಯಿಗೆ ಬಲ್ಲಾಂಗ ಬೊಗಳಿದರಲ್ಲಾ ಕಿಸ್ತ ಹಲ್ಲಾ
ಇಲ್ಲಿ ಕುಂತವರು ನಿಂತವರು ಉಗಳ್ಯಾರ ಮಾರಿಮ್ಯಾಲಾ || ೬ ||

* * *

## ೪. ಸುಲೇಮಾನ ಪೈಗಂಬರರು ಇರುವೆಗೆ ನೀಡಿದ ಔತಣದ ಪದಾ

ಕುಂತ ದೈವದವರು ಕೇಳರಿ ಇಟ್ಟಧ್ಯಾನಾ
ನಿಮಗೆ ತಿಳಿಸುವೆ ಶಾಸ್ತರ ಸಂಧಾನಾ ||
ಏರು || ಶಿವನ ಆಟ ಶಿವನಿಗೆ ಠಾವಿಕಿ
ಅವನ ತಂತ್ರ ತಿಳಿಯದು ಯಾರಿಗೆ
ಶರಣ ಸುಲೇಮಾನರ ವರಣ ಹೇಳುವೆ ತಿಳಿಯಬೇಕ ಇದರ ಬಗಿ
ಒಂದು ದಿವಸ ಶರಣರು | ದಂಡ ತಗೊಂಡು ತೀವ್ರಾ
ಪಟ್ಟ ಮ್ಯಾಲಕ ಕಟ್ಟಿ ನಡದಾರ | ಎಷ್ಟ ಹೇಳಲಿ ಶ್ರಿಂಗಾರ
ಚ್ಯಾಲ || ದೇವಗನ್ನಕ್ಯಾರು ಕೊಟ್ಟಾರ ತಮ್ಮ ಹೆಗಲಾ
ಪಟ್ಟ ಅಂತರಲೆ ನಡಿತಿತ್ತೋ ಮೇಲಾ
ಕಂಡಾರ ದಾರ್‍ಯಾಗ ಒಂದ ಇರುಬಿ ಸಾಲಾ
ಅಂತಾರ ದಂಡಿಗೆ ತುಳದ ಹೊಡದಿರಿ ಪ್ರಾಣಾ || ೧ ||

ಇ|| ಇರಬಿ ಅಂತೈತಿ ಸುಲೇಮಾನ ಶರಣಾ
ನಿಮ್ಮಂತವರು ಅನೇಕ ಹ್ವಾದಾರಣ್ಣಾ
ಏರು || ಅದರುಷ್ಟದಲಿ ಬರದದ್ದು ಬರಿ ಯಾರಿಗೇನ ತಪ್ಪೂದಿಲ್ಲಾ

ಸಾವೂ ಜೀವಾ ಬದುಕಸಾಂವಾ ಮ್ಯಾಲೆ ಇರತಾನ ಆ ಶಿವಾ
ಕೇಳ್ಯಾರ ಸುಲೇಮಾನ ಶರಣರು | ಇರಬಿ ಬಾಯಿಲೆ ನುಡಿ
ನಿನ್ನ ಮಹಿಮೆ ತಿಳಿಯದು ಯಾರಿಗೆ ತಪ್ಪಯಿಲ್ಲ ನಮ್ಮ ಕಡಿ
ಚ್ಯಾಲ || ಇರಬಿ ಅಂತ್ಯೆತಿ ಸುಲೇಮಾನ ಶರಣರಿಗೆ | ನನ್ನ ಔತಣ ನಿಮ್ಮ ದಂಡಿಗೆ
ಮಾಡ್ರಿ ದಯಾ ಕರುಣಾ ನೀವು ನಮ್ಮ ಮ್ಯಾಗಾ
ಇರಬಿ ಹೇಳಿತೋ ದಂಡಿಗೆ ಔತಣಾ || ೧ ||

ಇ|| ಸಾಂಬಗ ಅಂತಾರ ಸುಲೇಮಾನ ಶರಣಾ
ಬಾಳ ವಿಚಿತ್ರ ಕಾಣುದು ಮಾತ ನಾನಾ
ಏರು || ಇರಬಿ ಹೇಳಿತೋ ದಂಡಿಗೆ ಔತಣಾ
ಉಣಿಸುವ ಆಕಾರ ಕಾಣುದಿಲ್ಲಾ
ಎಷ್ಟ ಬಿಟ್ಟಿತು ಕಷ್ಟ ಉಣಸಾಕ | ಉಣಿಸುದು ಇದರ ತ್ರಾಣಲ್ಲಾ
ಶರಣಾರು ಅಂತಾರ ಕಣ್ಣಿಗೆ ಕಾಣೂದು ಸಣ್ಣ ಜೀಂವಾ
ತಂದ ಬೇಕಾದ್ದು ಮುಂದ ಇಟ್ಟರ ತಿಂದ ಬಿಡತಾನ ಒಬ್ಬಾಂವಾ
ಚ್ಯಾಲ || ಇಷ್ಟ ಅನ್ನುದರೊಳಗ ಇರಬಿ ಲಗುಬಂತು
ಊಟ ಮಾಡಬೇಕ್ರಿ ಆದೀತು ಬಾಳ ಹೊತ್ತು
ಇರಬಿ ಮುಂದ ನಡೀತು ಹಿಂದ ಹತ್ಯಾರ ಬೆನ್ನಾ || ೩ ||

ಇ|| ಹೋಗಿ ಮುಂದ ಕುಂತಾರ ಸರೂ ಸೈನ್ಯಾ
ಶಿವನ ಮುಂದ ಆಟ ನಡೂದಿಲ್ಲಾ ಯಾರದೇನಾ
ಏರು || ಶ್ರೇಷ್ಟವಾದ ಅಕ್ರೋಟ ಬದಾಮ ಒಟ್ಟಿದಾರ ಅಳತಿಯಿಲ್ಲಾ
ಶ್ರೇಷ್ಟಾ ಸ್ರಿಂಗಾರ ಶಿಸ್ತಕಾರಿಕ ಮಸ್ತ ಮುಣಕ್ಕ ಅಳತಿಲ್ಲಾ
ಬೆಲ್ಲ ಸಕ್ಕರಿ ಮೊದಲು ಮಾಡಿಕೊಂಡು ತಗಲ ಇದರಾಗ ಏನಿಲ್ಲಾ
ಶಾಸ್ತ್ರ ಸಿದ್ಧಾಂತ ಮಾತಿದು ಚಿತ್ತ ಇಡರಿ ದೈವೆಲ್ಲಾ
ಚ್ಯಾಲ || ಕುಂತಾರ ಸರೂಜನಾ ಮಾಡಾಕ ಊಟಾ
ಯಾವ ಮಾತಿನದು ಕಡಿಮೆ ಆಗಿಲ್ಲ ಏನಾ || ೪ ||

ಇ|| ಶರಣರ ಊಟ ಆದಿಂದ ಸಂತೋಷಾದಿತ ಮನಾ
ತಿರುಗಿ ಹೋದಾರೋ ತಗೊಂಡು ತಮ್ಮ ಸೈನ್ಯಾ
ಏರು || ಶರಣರ ಮನಸಿಗೆ ಬಡದಿತ ಈ ಮಾತಿನ ಪೆಟ್ಟಾ
ಇರಬಿ ಎಂಬತ್ತು ಜೀವರಾಶಿಗೆ ಉಣಿಸುವೆ ಊಟಾ ||
ಶರಣರಂದರು ಸಾಂಬ ಹುಕುಂ ಕೊಡಬೇಕ ತೀವರಾ
ಭಯಾ ಇಲ್ಲದೆ ಉಣಿಸುವ ನಿನ್ನ ವಿಸ್ತಾರುಣಾ |
ಸಂಭಾ ಶರಣಾರಿಗೆ ಹೀಂಗ ಉತ್ತರ ಕೊಟ್ಟಾ
ಚ್ಯಾಲ || ನಿನ್ನ ಕೈಲೆ ಆಗೂದಿಲ್ಲೊ ಎಳ್ಳಷ್ಟಾ
ಉಪವಾಸ ಹೊಡಿದಿ ಔತಣಾ ಕೊಟ್ಟಾ
ಶಿವನ ಮಾತ ಮೀರಿ ತಿರುಗಿ ಹೊಂಟಾರ ಶರಣಾ || ೫ ||

ಇ|| ದೈತ್ಯರಿಗೆ ಹೇಳ್ಯಾರ ಸುಲೇಮಾನ ಶರಣಾ
ಗಿಡಾಗಂಟಿ ಕಡದ ಜಾಗಾ ಮಾಡರಿ ಹಸನಾ
ಏರು || ಹೇಳಿದ ಪ್ರಕಾರ ಕೇಳಿ ದೈತ್ಯರೆಲ್ಲಾ
ಹಸನ ಅಡವಿ ಜಾಗ ಮಾಡ್ಯಾರ ಧ್ಯಾಸ ಇಡರಿ ದೈವೆಲ್ಲಾ
ಎಪ್ಪತ್ತು ಸಾವಿರ ಕುರಿ ಕೋದಾರಲ್ಲಾ
ಅಕ್ಕಿಗೋಧಿ ಕುಟ್ಟಿ ಚೀಲಾ ಒಟ್ಟಿದಾರ ಅಳತಿಯಿಲ್ಲಾ
ಬೆಲ್ಲ ಸಕ್ಕರಿ ಮೊದಲು ಮಾಡಿಕೊಂಡು ತಗಲ ಇದರಾಗ ಏನಿಲ್ಲಾ
ಶಾಸ್ತ್ರ ಸಿದ್ಧಾಂತ ಮಾತ ಐತಿದು ಧ್ಯಾಸ ಇಡರಿ ದೈವೆಲ್ಲಾ ||
ಚ್ಯಾಲಿ || ಏಳು ಲಕ್ಷ ಹಂಡೆಗಳ ತಂದಾರಲ್ಲಾ
ಒಂದೊಂದು ಹಂಡೆದ್ದು ಕೇಳಬೇಕ ತಪಶೀಲಾ
ಇಪ್ಪತ್ತು ಗಜಾ ಉದ್ದ ಅಷ್ಟ ಅಡ್ಡಗಲಾ | ಅಡಗಿ ಮಾಡ್ಯಾರವರು ಆಕ್ಷಣಾ || ೬ ||

ಇ|| ಔತಣಾ ವರ್ತಮಾನ ಕೇಳಿ ಒಂದ ಮೀನಾ
ಹಸದ ಅಡರಾಶಿ ಬಂದೀತೋ  ಮೀರಿ ಯತನಾ
ಏರು || ಬಂದ ಮೀನ ಶರಣರಿಗೆ ಅಂದಿತು ಮೊದಲ ನನಗ ಉಣಸರಿ
ಹೊಟ್ಟೆಯೊಳಗ ಕೂಳ ಇಲ್ಲದ ಸಂಗಟಾಗೂದು ಈ ಪರಿ
ಶರಣರಂತಾರ ಮೀನಕ ಉಣಸ ಅಂತೇನಿ ನಿಂದ್ರ ಜರಾ
ಹೇಳಿದ ಔತಣಕ ಬರಲಿಲ್ಲ ಜನಾ | ಕಳಿಸುವ ಉಣಿಸಿಕ್ಯಾರಾ
ಚ್ಯಾಲಿ || ಅವರು ಬರೂತನಾ ನಿಂದ್ರುದಿಲ್ಲೊ ನಾನಾ
ನಿಮ್ಮ ಮ್ಯಾಲೆ ಜುಲುಮಿ ಜಾಸ್ತಿ ಏನಾ
ಔತಣ ಹೇಳಿದಲ್ಲೆ ಬಂದೇನಿಲ್ಲಿತನಾ || ೭ ||

ಇ|| ದೈತ್ಯರಿಗೆ ಹೇಳ್ಯಾರ ಸುಲೇಮಾನ ಶರಣಾ
ಮುಂಚೆ ಉಣಸರಿ ಉಂಡು ಹೋಗಲಿ ಮೀನಾ
ಏರು || ಹೇಳಿದ ಪ್ರಕಾರ ಕೇಳಿ ಹೊಂಟಾರೋ ದೈತ್ಯರೆಲ್ಲಾ
ಉಣಿಸುದಕ ತಂದಾರಾಗ | ಹೆಂಗ ತಂದ ಹಾಕಿದಂಗ
ಅಂತೈತಿ ಹಿಂದ ಹೊಟ್ಟೆ ತುಂಬುವುದಿಲ್ಲ ತೆರದ ಬಾಯಿ ಹಂಗ
ದೊರೆದು ಹಿರದು ಹೊಡೆದಿತು ಅನ್ನ ಎಲ್ಲಾ
ಶರಣರು ಅಂತಾರ ಅನ್ನಾ ಉಣಿಸುದಕ ಏನು ಇಲ್ಲಾ
ಚ್ಯಾಲಿ || ಮೀನ ಅಂತೈತ್ರಿ ಕೇಳರಿ ನನ್ನ ಮಾತಾ
ಸಂಭಾ ಕೊಡತಿದ್ದಾ ದಿನಾ ಮೂರು ತುತ್ತಾ
ಹೊಟ್ಟೆ ತುಂಬಲಿಲ್ಲೋ ಹೋಗತೇನಿ ಪರತಾ
ನೋಡಿ ಶರಣರು ಕಟ್ಟಿಕೊಂಡ್ರೋ ತಮ್ಮ ಬೊಟ್ಟವನಾ || ೮ ||

ಇ|| ಶರಣರ ಶರತ ಆತ ಮೀರತ ನಡಿಲಿಲ್ಲ ಏನಾ
ಕಡಿಗೆ ಸೋತ ಹೋತ ಮಾತವ ಮೀರಿ ವಚನಾ
ಏರು || ಶರಣರು ಅಂತಾರ ಸಂಭಗ ನಿನ್ನ ಆಟ ಯಾರಿಗೆ ತಿಳೂದಿಲ್ಲಾ

ಸರ್ವ ಜೀವಾ ಸಲುವುವಾಂವಾ ನಿನ್ನ ಮುಂದ ಯಾರ ಆಟ ನಡೂದಿಲ್ಲಾ
ಶಾರ ಬಾಗಲಕೋಟಿಯೊಳಗ ಇರುವ ಪೀರ ದಸ್ತಗೀರಾ
ಕರುಣ ಮಾಡ್ರಿ ಚರಣ ಹಿಡಿಯೂವೆ ಕೇಸು ಪೀರಾನ ಆಧಾರಾ
ಚ್ಯಾಲಿ || ನಾಗೂ-ಗೌಸೂನ ಕವಿ ರಂಗಲಾಲಾ
ಹನ್ನೊಂದು ಅಡಿ ಪ್ರಾಸ ತರಬೇಕ ಸಾಲಿಗೆ ಸಾಲಾ
ತಮ್ಮಾ ಇದರಾಗ ತಿಳೂತೈತಿ ನಿನ್ನ ಅಕಲಾ
ಲಾಲಸಾಬ ಡೋಂಗ್ರಿಮುಂದ ಓಡಿ ಹೋದಿ ಎಲ್ಲಿತನಾ || ೬ ||

* * *

## ೫. ಇರಬಿ ಸುಲೇಮಾನರಿಗೆ ನೀಡಿದ ಔತಣಾ

ಜಾತ ಮುತ್ತಾ ಶಾಸ್ತ್ರ ಲಿಖಿತಾ ಇಟ್ಟ ಚಿತ್ತಾ
ಸರೂಜನಾ ಕೇಳರಿ ಇರಬಿ ಬಯಾನಾ || ಪಲ್ಲವಿ ||

ಏರು || ಸರೂ ವಿದ್ಯೆ ಹಂತೇಕ ಇದ್ದರ ಫಡಕ
ಇಲ್ಲಂದರ ಯಾತಕ ಬರಬೇಕ ಜಕಸಾಕ
ಶಾಹೀರಾಗಿ ಸಣ್ಣದೊಡ್ಡ ದೈವಕ ತಿಳೂಹಾಂಗ ಹೇಳಬೇಕ
ಹೌದ ಹೌದ ಅನ್ನೂಹಾಂಗ ಎತ್ತರ ಮಣೂತಿದಿ
ಕೈಮಾಡಿ ಕುಣೂತಿದಿ ಕಲಬುರ್ಗಿ ಕೊಜ್ಯಾರಂಗ
ಖಾಲಿ ಹಮ್ಮ ಬ್ಯಾಡೋ ತಮ್ಮಾ ಇಟ್ಟ ನೇಮಾ
ಕಡಿತನಾ ಹಾಡೋ ಇಂಥ ಬಯಾನಾ || ೧ ||

ಇ|| ದರುಣಿ ದಾತಾ ಮರಣ ರಹಿತಾ
ಕರುಣವಂತ ಭಿಗವಾನಾ ಸೃಷ್ಟಿಕರತಾ ಜೀವನಾ
ಕೊಟ್ಟಿದ್ದಾ ಬಲ್ಲಾಂಗ ಅಷ್ಟ ಐಶ್ವರ್ಯ ಹೀಂಗ
ಚ್ಯಾಲಿ || ಏನು ಹೇಳಲಿ ಅರಸ ಅನಸ್ಯಾರ ತಮ್ಮಾ
ನಡಸ್ಯಾರ ಸರೂ ಹುಕುಮಾ ಮೂಡು ಮುಣುಗು ತನಕಾ
ತಾಬೇಕ ಯಾವತ್ತ ಇರತಿದ್ದ ದೇವಭೂತ
ಜಿನ್ನ ಪರಿ ಮತ್ತು ಮಲಾಯಿಕಾ
ಹಕ್ಕಿ ಪಕ್ಕಿ ತೆರೆದ ರೆಕ್ಕಿ ನೆರಳಹಾಕಿ | ಬಿಸಿಲಿನ ತ್ರಾಸ || ೨ ||

ಆಗದಾಂಗ ಕರುಣ ಲಹರಿ ತಾ ಶ್ರೀ ಹರಿ ಪೈಗಂಬರಿ
ಪದವಿನ ಕೊಟ್ಟಾ ಸುಲೇಮಾನಾ ಶರಣಾ
ಏರು || ಸುಲೇಮಾನ ಶರಣರು ಬಲು ಬುದ್ಧಿವಂತರು
ಹಕ್ಕಿ-ಪಕ್ಕಿ ವನಚರ | ಮಾತಾಡಿದರೂ ತಿಳುತ್ತಿದ್ದರು
ಶರಣರು ಒಂದು ದಿನಾ ತಮ್ಮ ಸಿಂಹಾಸನ ಹಾರಿಸಿ ಗಾಳಿಮ್ಯಾಗ

ಕೊಂಡ ತಂಡ ತಂಡ ಖುದ್ ಸಾವಿರ ದಂಡ ಹೋಗುವ ಹಾದಿವೊಳಗ
ಅಲ್ಲಿ ಒಂದ ಜಾಗಾ ಚಂದ | ಇರಬಿ ಇದ್ದ ಮೈದಾನಾ | ಇತ್ತ ಒಂದರಿ ಠಿಕಾನಾ || ೩ ||

ಇ|| ಇರಬಿಯ ಅರಸ ಶಾಮೂರ ಖಾಸಾ | ಹುಕುಮ ಅರಸಾ
ಕೊಟ್ಟಾನ ತನ್ನ ಇರಬಿ ದಂಡನಾ
ಏರು|| ಲಗು ಹೋಗರಿ ನಿಮ್ಮ ಹೊರತಾ || ಬರತಾನ ಶಮರಂತಾ
ಚ್ಯಾಲ || ಕೇಳಿ ಶರಣಾ ಈ ಮಾತ ಇಳಿಸಾರ | ತಖ್ತಾ ಸಿಂಹಾಸನಾ
ಇರಬಿಯ ಅರಸಗ ಹಿಡಕೊಂಡ ಕೈಯಾಗ
ಹೇಳಿದ ಘಟ್ಟಿಮುಟ್ಟಿ ನಿಮಗೇನು ಅಂತಾದ್ದು ಮಾಡಿದ್ದು
ಯಾಕ ಹೀಂಗ ಹುಕುಮ ಕೊಟ್ಟ ಅಂದಿತ್ತ ಇರುಬಿ
ನಾವು ಸಣ್ಣ ಜೀವಿ | ನಮ್ಮ ನಮ್ಮ ಸಾವಿಗೆ ಅಂಜಿ
ಪೂರ್ಣ ಇಲ್ಲಿಂದ ನೀವು ಹೋಗುತಾನಾ || ೪ ||

ಇ|| ಕುದುರಿ ಕುಣತಾಗ ಕಾಲಾಗ ಸಿಕ್ಕ ಹುಗದ ಹಕನಾಕ ನಮ್ಮ ಪ್ರಾಣಾ
ಕೇಳರಿ ಇರಬಿಯ ಶಾಣೇತನಾ
ಏರು || ಕೇಳಿ ಇರಬಿಯ ಮಾತಾ | ಶರಣರಂದ್ರೋ ಚಕಿತಾ
ಹೇಳಂದ್ರಾ ಖಚಿತಾ | ಸದ್ಯಕ ತುರತಾ
ನಿನ್ನ ಹಂತೇಲಿ ದಂಡಾ ಇರತೈತಿ ಎಷ್ಟು ಮಾಡತಾರ ಹುಡುಗಾಟಾ
ಇರಬಿ ಅಂದಿತ ಹೀಂಗ | ನಾಲವತ್ತು ಸಾವಿರ ಇರತಾರ ಸರದಾರ
ಐದು ಸಾವಿರ ದಂಡು ಒಬ್ಬೊಬ್ಬಗ ಅವರ ಜಲ್ಮಾ
ನನ್ನ ಆತ ಇಟ್ಟ ಪ್ರೇಮ ಹೆಚ್ಚೆನಾ ಬಲ್ಲೆ ನಾನು ನಿಮ್ಮ ಗುಣಾ || ೫ ||

ಇ|| ಇರಬಿ ಅಂತ ಖಾಲಿ | ಮಾಡಬ್ಯಾಡ್ರಿ ನಕಲಿ
ನಿಮ್ಮ ಹಂತೇಲಿ ಇಲ್ಲ ಗ್ನಾನ | ಬಿಲ್‌ಕುಲ್ ಕಡಿಮಿ ನಮ್ಮಲ್ಲೇನಾ
ಏರು || ಹ್ಯಾಂವ ಐತಿ ಬಹಳ ನಿಮಗ | ಬೇಡಿಕೊಂಡರ ಸಾಂಬಗ
ಅರಸಕಿ ಜಗದಾಗ | ಇರಬಾರದು ನನ್ನಾಂಗ ಯಾರ್‍ಯಾರಿಗೆ
ಈ ಮಾತು ಅಂತಾದ್ದು ಶರಣರಿಗೆ ಸಲ್ಲದು
ಶರಣರಿಗೆ ಬಂದೀತ ಸಿಟ್ಟು | ಇರುಬಿ ಅಂತ ತಿಳಿದ ನೋಡರಿ
ಸಿಟ್ಟಿಗೆ ಬರಬ್ಯಾಡ್ರಿ ತಿಳಿಸುವೆ ಮತ್ತೊಂದು ಇಸಮಾ
ನಿಮ್ಮ ಕೈಯ್ಯಾನ ಉಂಗುರ ಬೇಧ ಒಡದ ಹೇಳರಿ
ನೋಡಿ ಅದನಾ ಗೊತ್ತಿಲ್ಲಂದಾರ ಸ್ವಾಮಿ ಸುಲೇಮಾನ || ೬ ||

ಇ|| ಹಿಂತ ಅನೇಕ ಮಾತಿನ ಮಲಕ
ಹತ್ತಲಿಲ್ಲ ಡಾಳ ಶರಣರನಾ | ಇರಬಿಗೆ ಅಂತಾರ ಸುಲೇಮಾನ
ಏರು || ನೀ ಬಾಳಾ ಶಾಣ್ಯಾ ಆಗಿ ಇರತೀದಿ ಬಲ್ಲಾಂವಾ
ಬಂದೀತ ತಿಳುವಳಿಕಿ ಕೂಡ ಅಪನಿಕಟಕಿ ಹೋಗುತ್ತಿದ್ದನು
ಇರಬಿ ಅಂದೀತ ಆಗ ಉಪವಾಸ ನಿಮಗ ಇಲ್ಲಿಂದಾ

ಕಳಿಸುವದಿಲ್ಲಾ ಇದ್ದಷ್ಟು ನಿಮ್ಮ ದಂಡ | ಸಂತುಷ್ಟ ಆಗಲಿ ಉಂಡ
ಹೋಗರಿ ಖುಷಿಯಾಲಾ ಇರಬಿ ಔತಣಾ ಕಬೂಲ ಬಿನ್ನ
ಮಾಡ್ಯಾರ ಶರಣ ಸುಲೇಮಾನ | ಬಿದ್ದೀತು ಮತ್ತ ಗುಮಾನ || ೭ ||

ಇ|| ಭಯಂಕರ ಚಮತ್ಕಾರ ನನ್ನ ಲಷ್ಕರ
ಭಲೇ ಜನಾ ಮಾಡತಾರ ಹ್ಯಾಂಗ ಪಕವಾನಾ
ಏರು || ಪಕವಾನಾ ಗಡಿಬಿಡಿ ಕಾಣವಲ್ಲದು ಯಾವ ಕಡಿ
ಸಾವಿರಾರು ಇರಬಿ ಕೂಡಿ ಹೊತಗೊಂಡು ತಂದವು ತೋಡಿ
ಒಂದ ಮಿಡಚಿ ಇರುಬಿಗೆ ಅಂತೈತಿ ನೋಡಿ
ಉಣಿಸರಿ ದಂಡಿಗೆ ಕರದು ಶರಣಂದ್ರೋ ಹೈಪಾಗಿ
ನನ್ನ ದಂಡ ಬಹಳೈತಿ | ಇದು ಹ್ಯಾಂಗ ಸಾಲತೈತಿ
ಇರುಬಿ ಅಂದೀತ ಕೂಗಿ ಇದರ ಬರಕತ ನಿಮಗೇನ ಗೊತ್ತ
ಇರತಾನ ಸಾಕ್ಷಾತ್ ಭಗವಾನಾ | ಕೂಡಿ ಮಾಡ್ರಿ ಭೋಜನಾ || ೮ ||

ಇ|| ಸ್ವಾಮಿ ಶರಣರು ದಂಡಿಗೆ ಕರೆದರು ಕುಂತು ಉಂಡರು
ಸರೂಜನಾ | ತೀರಲಿಲ್ಲಾ ಮಿಡಚಿ ತೋಡಿದ್ದು ಇತ್ತ ಇನ್ನು
ಏರು|| ಸುಲೇಮಾನ ಶರಣರು | ಮನಸಿಗೆ ತಿಳಿದರು
ಒಬ್ಬರ ಮ್ಯಾಗ ಒಬ್ಬರು ಹೆಚ್ಚು ಕಡಿಮೆ ಇರತಾರ
ಈ ಮಾತು ಘನ ಶಾರ ಬಾಗಲಕೋಟೆ | ಊರ ಮೋಜನ ಪ್ಯಾಟಿ
ಜಾಹೀರ ದೇಶದೊಳಗ | ದಸ್ತಗೀರ ಕೇಸು ಪೀರ ಹಸ್ತ ಇಟ್ಟಾರ
ನಾಗು-ಗೌಸುಗ ತಲಿಮ್ಯಾಗ | ಲಚಮನಸಿಂಗ ಉಸ್ತಾದಂದ್ರೋ ಹೀಂಗ
ವೈರಿಯ ಮೂಗಿನ್ಯಾಗ ಪೋಣಶಾರೋ ಮೂಗುದಾರಾ || ೯ ||

* * *

## ೬. ಈಸಾ ಪೈಗಂಬರರು ಪವಾಡ ಮಾಡಿದ ಪದಾ

ನಾಸಾರಿ-ದೊರಿ-ಮೀರಿ ಹೇಳು ಪ್ರೇಮನೆ
ಏರು || ಕೂಡಿಟ್ಟು ಅಡಿಪ್ರಾಸ | ನುಡಿ ಹೀಂಗ ಸಾರಾಂಶ
ಖೋಡಿ ನಿನಗ ತಿಳಿಯುವುದಿಲ್ಲ ಹುಡಿಮಣ್ಣಾ
ಈ ದಾಟಿಯಲ್ಲಿ ಜೋಡಿ ಬರಬೇಕೋ ಸವನೆ || ೧ ||

ಇ|| ನೀ ಲಜ್ಜಿ ಕೊಜ್ಜಿ ಗೆಜ್ಜೆ ಕಟ್ಟಿದೋ ಜೋಡನೇ
ಏರು || ನಾಚಿಕಿಲ್ಲದೆ ಬಾಯಿ ತೆರುವುತೀದಿ ಮುಗಿದ ಕೈಯ
ಕಚ್ಚಿಬಿಚ್ಚಿ ಹೊಡದರ ಗಿಚ್ಚಿ ಮುಚ್ಚಿ ಕಣ್ಣ
ಛೀ ಹೋಗಲೇ ಸುಗುಡಿ ತೆರದೀತು ಮುಕಳಿ ಆಸನ || ೨ ||

ಇ|| ನಾ ಸೋಸಿ ಬೇಸಿ ಖಾಸಿ ಆ ಇಸಾ ಶರಣನೆ
ಏರು|| ಪ್ರಾಂತಕ್ಕೆ ಅವರ ಬೆಳಕ ಹೊಳೆಯುವುದು ಜನರಿಗೆ ತಕ್ಕ
ಅದೇ ಕಾಲದಲ್ಲಿ ಸತಿಪತಿ ಜಾಣಾ
ಆ ಸತಿ ಪತಿ ಮಾಡಿ ತಮ್ಮಲ್ಲಿ ನೇಮನೆ || ೩ ||

ಇ || ತಾ ಸತಿಯು ಕುಂತು ಪತಿಗೆ ಅಂತಾಳೊ ಪ್ರೇಮನೆ
ಏರು || ಇಬ್ಬರಲ್ಲಿ ಸತ್ತವರನ್ನಾ ಒಯ್ಯಬೇಕೋ ಗೋರಿಯ ತನಾ
ಮಾಡಬೇಕ್ರಿ ಜೋಪಾನ ದಿನಾ
ಸ್ಮಶಾನಕ ಹೋಗಿ ಮಾಡಬೇಕ್ರಿ ಗೋರಿ ಹಸನಾ || ೪ ||

ಇ|| ಹಿಂಗ್ಹೇಳಿ ಸತಿ ಮರಣ ಹೊಂದ್ಯಾಳೋ ಒಂದಿನ
ಏರು || ಗಂಡನು ಸಂಪೂರ್ಣ ಮಾಡ್ಯಾನು ಸತಿಯ ಮಣ್ಣಾ
ಮನದಾಗ ತಿಳಿದ ಸತಿಯ ಆಜ್ಞವನಾ
ಇದರಂತೆ ನಡಸಿ ಯಾವತ್ತು ವರುಷ ಅವಧಿಯನಾ || ೫ ||

ಇ|| ತಾ ಇದರಂತೆ ನಡಸ್ಯಾನು ವನವಾಸನೇ
ಏರು || ಸತ್ಯ ಶರಣ ಈಸಾ ಬಂದು ನಿಂತಾರೊ ಅವನ ಮುಂದ
ಏನು ಕಾರಣ ಹೇಳೋ ನಿನ್ನ ಕಷ್ಟವನಾ
ಅಂವ ಹೇಳಿದ ಆಗ ತನ್ನ ಮನದನ ಭೇದನೆ || ೬ ||

ಇ|| ನೀ ಶರಣಾ ಕರುಣಾ ಮಾಡಿ ಎಬಸರಿ ಸತಿಯನ
ಏರು || ಶರಣರು ಮಾಡಿ ಕೃಪಾ | ಹೆಣ್ಣ ಸುಂದರ ಅಪರೂಪ
ಎಬಸ್ಯಾರ ಮಾಡಿ ಜಾಪ | ಈಸಾ ಶರಣಾ
ಹಿಂಗ್ಹೇಳಿ ಶರಣಾ | ಮಾಯಾ ಆಕ್ಷಣಾ ಆದನೆ || ೭ ||

ಇ|| ಆ ಸತಿಯು ನೋಡಿ ಪತಿಗೆ ಅಂತಾಳೋ ಯಾವನೆ
ಏರು|| ಸತಿಮಾತ ಕೇಳಿ ತಾನ | ತಿಳಿಸ್ಯಾನೊ ಪತಿಯು ನಾನ
ಸಿಟ್ಟಾಗಿ ಅಂದಾಳೊ ಅಲ್ಲೋ ಗಂಡ ನೀನಾ
ಛೀ ಹೋಗೋ ನೀನು ಯಾವನೋ || ೮ ||

ಇ|| ಆ ಕಾಲದಲ್ಲಿ ಅರಸು ಬ್ಯಾಟಿಗೆ ಬಂದನೆ
ಏರು|| ಹಿಡಿದು ಅವರಿಬ್ಬರಿಗೆ ನಡಸ್ಯಾನ ನ್ಯಾಯ ಆವಾಗ
ತಿಳಿಸ್ಯಾಳೋ ಅವನ ಸತಿ ಅರಸನಿಗೆ ಪೂರ್ಣ
ಇವನಲ್ಲ ಗಂಡ ನಡಸ್ಯಾನು ಸುಳ್ಳ ಭಂಡನೇ || ೯ ||

ಇ|| ನಾ ನಿಮ್ಮ ಕೂಡ ಬರತೇನಿ ಮಾಡೋ ಪ್ರೇಮನೆ
ಏರು|| ಅರಸಾಗ ಸಂತೋಷ | ಮನದಾಗ ಬಹು ಹರುಷ

ಗಂಡಗ ಮಾಡಿ ಮೋಸ ಹೊಂಟಾಳ ಜಾಣಿ
ತಾ ಲಗುಬಗಿ ಬಂದರ ಈಸಾ ಶರಣನೆ || ೧೦ ||

ಈ ರೂಪ ನೋಡಿ ಕೋಪ ಆದಾನು ಶರಣನೆ
ಏರು || ಶರಣರು ಆಗಿ ಕೋಪ | ಮಾಡ್ಯಾರು ಮಾಯದ ರೂಪ
ಹೇಣತಿಗೆ ಮಾಡ್ಯಾರು ಗಪ್ಪ ಕೂಡಿ ಮಣ್ಣ
ಮಣ್ಣಿಗೆ ಮಣ್ಣ ಕೂಡಿ ಹೋಯಿತೋ ದೇಹನೆ || ೧೧ ||

ಈ ಸೃಷ್ಟಿಯಲ್ಲಿ ಶ್ರೇಷ್ಠ ಬಾಗಿಲಕೋಟಿನೆ
ಏರು || ಧರಣಿಗೆ ಧೀರ ದಸ್ತಗೀರ | ಕರುಣುಳ್ಳ ಕೇಸುಪೀರಾ
ನಾಗೂ-ಗೌಸು ಹಾಡಿ ತೋಡಿ ಕವಿ ರಚನಾ
ನಿಂತಗಲ ಮಾಡಿ ಇಟ್ಟಾರು ಅಗಳಿನೆ || ೧೨ ||

*** * ***

## ೭. ಹ| ಈಸಾರು ಡೋಗಿ ಬದುಕಿಸಿದ ಪದಾ

ಧ್ಯಾನಿಟ್ಟ ಕೇಳರಿ ದೈವಕ ನಾ ಮಾಡತೇನಿ ಖುಲ್ಲಾ
ಈಶನ ಸರಿ ಇಲ್ಲಾ ಈ ಪೃಥ್ವಿಯ ಮ್ಯಾಲಾ |
ಏರು || ದೈವಕ್ಕೆ ಸಾರಿ ಅಂತೇನೋ ಮಿತಿ ಮೀರಿ | ಈಸಾ ಪೈಗಂಬರಾ
ಒಂದಿನ ಹೊಂಟಾರೊ ಅನಂತರ | ಹಾದ್ಯಾಗ ಹೋಗುವಾಗ ಒಂದು ಡೌಗಿ ಕಂಡರಲ್ಲಾ || ೧ ||

ಶರಣರು ನಿಂತು ಸಾಂಬಗ ಬೇಡಿಕೊಂಡಾರಲ್ಲಾ |
ಇದು ಯಾರದು ಡೌಗಿ ನೆಲದ ಮ್ಯಾಲಾ
ಏರು || ಆಗಿ ಕರ್ಮಿಷ್ಟ ಬಿದ್ಯೈತ್ರಿ ಎಂದಿನ ಸುಟ್ಟಾ | ಒಣಗಿ ಆಗೇತ್ರಿ ಸೆಕ್ಕೆ
ಜೀವ ತುಂಬಿಸಬೇಕ ಹರಕಿ | ಮಾತಾಡಿಸು ಮನಸು ಆಗೇತಿ ನಂದು ಇದರಮೇಲಾ || ೨ ||

ಇ|| ಈಸಾನ ಅರ್ಚನೆ | ಶಿವ ಮಾಡ್ಯಾನೋ ಕಬೂಲಾ
ಕೊಟ್ಟಾನೋ ಹುಕುಮಾ ಅವರಿಗೆ ಮಾತಾಡಲಾಕ ಖುಲ್ಲಾ
ಏರು || ಶರಣರಿಗೆ ಡೌಗಿ ಅಂದಿತು ಕೂಗಿ | ಬಿಚ್ಚಿ ಹೇಳುವೆ ಒಡದಾ
ಹೆಂಗಸು ಗಂಡಸು ಇದ್ದಿದ್ದಾ | ಶರಣರ ಸ್ವರಕೇಳಿ ಡೌಗಿ ಅಂದಿತೋ ಬಿಸಮಿಲ್ಲಾ || ೩ ||

ಇ|| ಶಿರಬಾಗಿ ಅಂದಿತು ಡೌಗಿ ಈಸಾ ರಸೂಲಿಲ್ಲಾ |
ಕೇಳಿದರೆ ಹೇಳುವೆನು ಬಿಟ್ಟು ಮೈಯಾನ ಜಲ್ಲಾ
ಏರು || ಈಸಾ ಶರಣರು ಡೌಗಿಗೆ ಅಂತಾರೊ ನಿನ್ನ ಹೆಸರೇನ
ಜಗದಲ್ಲಿ ಏನೇನ ಉದ್ಯೋಗ ಮಾಡತಿದ್ಯೋ ಈ ಭೂಮಿ ಮೇಲಾ || ೪ ||

ಇಳು || ಶರಣರಿಗೆ ಅಂದಿತು ಡೌಗಿ ಸರ್ವ ಜಗತ್ತಕ್ಕೆಲ್ಲಾ
ಮೀರಿದ ಅರಸು ನಾನು ಎನಿಸಿದ ಪ್ರಭೂಲಾ
ಏರು || ಮತ್ತ ನನ್ನಂಥ ಗಂಡಸು ಸುತ್ತ ನಾಡಿನೊಳಗ | ಯಾರ್‍ಯಾರು ಇದ್ದಿಲ್ಲಾ
ಜಮ್ ಜಮ್ ನನ್ನ ಹೆಸರು | ನನ್ನ ಕೂಡ ಯುದ್ಧ ಮಾಡಾಕ ಯಾರ್‍ಯಾರು ಇದ್ದಿಲ್ಲಾ || ೫ ||

ಇ || ನಾನೂರು ವರುಷ ನಾನು ನಡಸೀದೆ ನನ್ನ ಹಾವಳ
ದೌಲತ್ತು ಕೊಟ್ಟಿದ್ದೊ ಶಿವಾ ಏನ ಕಡಿಮೆ ಇಲ್ಲಾ ||
ಏರು || ಹಿಂಡಿಗೆ ಹಿಂಡಾ ಮತ್ತ ಮನಗಂಡ ದಂಡು ದರ್ಬಲಕ್ಕೆಲ್ಲಾ
ಕುದುರಿ ಕೊಟ್ಟಿದ್ದೊ ಶ್ರೀಹರ | ಹಿಂಡ ಹಿಂಡ ಅರಸರೊಳಗ ನಾ ಪುಂಡನಾಗಿದ್ದೊ ಮೇಲಾ ||೬||

ಇ|| ಬಂದ ಬಂದ ಬಡವರಿಗೆಲ್ಲಾ ಅರಬಿ ಕೊಡುತ್ತಿದ್ದೆ ಹಗಲೆಲ್ಲಾ
ವನವಾಸ ಅದೇನಂದರ ಕಿವಿಲೆ ಕೇಳಲಿಲ್ಲಾ
ಏರು || ತ್ರಿಜಗ ಜೀವ ಇರತಾನೋ ಭಗವಾನಾ | ನಡೆಯಲಿಲ್ಲೊ ಅಂಜಿ
ಕಲ್ಲ ಇಟ್ಟಿ ಮಾಡತಿದ್ದೊ ಪೂಜೆ | ಇಷ್ಟ ತಪ್ಪಿಗೆ ಕಷ್ಟ ತಂದ ನನ್ನ ಮ್ಯಾಲಾ || ೭ ||

ಇ|| ತೀರಿಕೊಂಡು ನೂರು ವರುಷ ಏಸು ಕಡಿಮೆ ಇಲ್ಲಾ
ಸುಡತೇನಿ ಸತ್ರನ ಸುಟ್ಟ ಚೂರ ಚೈನವಿಲ್ಲ
ಏರು || ಶರಣರಿಗೆ ಡೌಗಿ ಅಂದಿತು ಕೂಗಿ | ನಿಮ್ಮ ಹೊರತ ಇಲ್ಲ ಯಾರ |
ಮಾಡಿದಿಲ್ಲ ನನಗ ಪಾರ ಶರಣರಿಗೆ ಡೌಗಿ ಮರಗ ಕೇಳಿ ಕರುಣ ಬಂದಿತಲ್ಲಾ || ೮ ||

ಇ|| ಆತನದುಸಕ ಸಾಂಬನ ಕಡಿಗೆ | ಅರ್ಜ ಮಾಡ್ಯಾರಲ್ಲಾ
ಬಗವಾನ ಈ ಸಾರ ಮಾತು ತಂದ ಮನಸಿನ ಮೇಲಾ
ಏರು || ಎಬಸ್ಯಾರೋ ತೀವ್ರದಿಂದ ಜಮ್ ಜಮ್ ಜೀವದಿಂದ | ಹ್ಯಾಂಗ ಇದ್ದಂಗ ಮುಂಚೆ
ಎಲಬು ತೊಗಲು ಶಿರಹಚ್ಚಿ | ಜಮ್ ಜಮ್‌ಗ ಕಲ್ಮಾ ಓದಿಂದ ಅಂತಾರೋ ಬಿಸಮಿಲ್ಲಾ || ೯ ||

ಇ|| ಶರಣರ ಚರಣಕ್ಕೆ ಅಂದ ಸ್ವಾಮಿ ಸೇಲಾ
ನಿಮ್ಮಿಂದ ಪಾರ ಆದೇನು ಪೂರಾ ಹೊತ್ತ ಜಲ್ಮಾ
ಏರು || ಎಂಬತ್ತು ವರುಷ ಇರುತ್ತಿದ್ದ | ಖಾಸ ಮಾಡತಿದ್ದೊ ಜಿಂದಗಾನಿ
ನಡತಿ ಇಟ್ಟಿದ್ದ ಮುಸಲ್ಮಾನಾಗಿ | ಎಲ್ಲಾನು ಬಿಟ್ಟು ಭಕ್ತಿ ಇಟ್ಟಿದ್ದ ಶಿವನ ಮೇಲಾ || ೧೦ ||

ಇ|| ಅಷ್ಟರೊಳು ಜಮ್ ಜಮ್ ಬಾದಶಹಾಗ | ಮರಣ ಬಂದಿತಲ್ಲಾ
ಸತ್ತನೋ ಉಮಾಯದಿಂದ ಕಂಡ ಸ್ವರ್ಗಸ್ಥಲಾ
ಏರು || ದೈವಾನ ದಸ್ತಗೀರ ಶಿಸ್ತುಳ ಕೇಸುಪೀರ | ಬಾಗಲಕೋಟ್ಯಾಗ
ನಾಗು – ಗೌಸೂನ ರಿವಾಯಿತ | ದೇಶಕ್ಕ ರಂಗಲಾಲಾ || ೧೧ ||

* * *

## ೮. ಹ| ಈಸಾ ಅವರು ಜೇಲಿನಿಂದ ಪಾರಾದ ಪದಾ

ಎಂಥೆಂತವರು ಇಟ್ಟ ಪಂಥ | ಮುಕ್ಯಾರ ಮಣ್ಣ ನಾ ಶ್ರೇಷ್ಟಂತ
ಶರಕಸ ಅಂಬು ಅರಸನ ಸುದ್ದಿ ಎಷ್ಟಂತ | ತಿಳಿಸಲಿ ಸರ್ವರಿಗೆ
ಏರು | ಮಹಾ ಪಂಡಿತ ಬುದ್ದಿವಂತರು ಅನೇಕ ಬರಿ ಬಲ್ಲವರು
ಕುಂತಕೇಳಿ ಸಂತೋಷ ಪಡಿರಿ | ಶ್ರೀಮಂತ ಸಭಾ | ಕೂಡಿರಿ ಬಂದಾ
ಅಡಿಪ್ರಾಸ ನುಡಿ ಕಡಿತನಕ | ಲಕ್ಷ ಇಡಿರಿ | ಮುಗುವೆ ಕೈ ನಾ ಇಂದಾ
ಬೀಬಿ ಮರಿಯಮ್ಮಗ ವಲ್ಲತ್ ಬ್ರಹ್ಮಗಂಡ ಇಲ್ಲದೆ | ಕೊಟ್ಟಾನ ಪುತ್ರ ಒಂದಾ
ಏನ ಹೇಳಲಿ | ಸಭಾದಲ್ಲಿ | ಈಸಾ ಪೈಗಂಬರ ಅಂತಾ ಪದವಿ ಕೊಟ್ಟಾ
ಈ ಜಗದಲ್ಲಿ | ಶಿವನ ಅಪ್ಪಣಿ ಪೈಗಂಬರರಿಗೆ | ಆತರಿ ಸರಕಸ ಅರಸನಿಗೆ
ಹೋಗಿ ಉಪದೇಶ | ಮಾಡಬೇಕರಿ ಅವನಿಗೆ ಧರ್ಮದ ಸರಿಯಾಗಿ || ೧ ||

ಈಸಾ ಪೈಗಂಬರ ಶರಣಾ ಹೊಂಟಾರ ಆಕ್ಷಣಾ | ಹುಟ್ಟಿ ಮನಸ್ಸಿನಲ್ಲೆ
ಅವರಿಗೆ ಅಂತಾನ ಕರುಣಾ | ಅಲ್ಲೆ ಮುಟ್ಯಾರ ಹೋಗಿ
ಏರು || ಸರಕಸ ಅರಸನ ದರ್ಬಾರ | ನೆರೆದಿತ್ತ ಒಳ್ಳೆ ಗರದಿ ಬಹಾರ
ಈಸ ಪೈಗಂಬರ | ಸರಕಸ ಅರಸಗ | ಹೋಗಿ ತಿಳಿಸಿದಾರ ಮಜಕೂರ
ಕರುಣಾದಿ ಕರುಣಾ ಈಶ್ವರನ | ನೀ ಭಜಿಸೋ ಬಿಡೋ ನಿನ್ನ ಅಹಂಕಾರ
ಸೃಷ್ಟಿಕರ್ತನ | ಕರ್ತೃ ಆದ ವಸ್ತು | ನಾನೇ ಈಸಾ ಪೈಗಂಬರಾ | ತಿಳಿಮನಕ
ಬಿಡೋ ಯಮಕ | ಮೋಕ್ಷ ಆದವನಿಂದ | ಕಂಡಿ ಸ್ವರ್ಗಕ್ಕೆ
ಹೊಂದಿಯೋ ಬೇಶಕ್ | ಇಲ್ಲಂದರ ದೊರಕೀತೋ ನರಕ
ಸುಟ್ಟ ಹ್ವಾದಿ ಹಿಡಿಯೋ ತರಕ | ತಿಳಿಸಿರಿ ಇದರೊಳಗ
ಏನ ಇಲ್ಲದಾಂಗ ಪರಕ | ತಿಳಿ ನಿನ್ನ ಮನಸ್ಸಿಗೆ || ೨ ||

ಶಾಸ್ತರ ಸರಿಯಾಗಿ | ಮೂಸಾ ಪೈಗಂಬರ ಧರ್ಮಾ | ಬಿಟ್ಟು ನಂದು ಓದೋ ಕಲ್ಮಾ
ಅಂದರ ನಿನಗೆ ಮೆಚ್ಚುವಾ ಆ ಹರಿ ಬ್ರಹ್ಮಾ | ತಿಳಿಸ್ಯಾರ ಹರುಷಾಗಿ ||
ಏರು || ಕೇಳಿ ಅರಸ ಸಿಟ್ಟಿಗೆ ಬಂದಾ | ಇವರಿಗೆ ಹಾಕಬೇಕ ಕೊಂದಾ
ಅಂತ ಮನಸ್ಸಿನಲ್ಲೆ ಬಂತ ಕಪಟ ಹೀಂಗ | ಸಭಾದಲ್ಲಿ ಏನ ಹೇಳಲಿಲ್ಲಾ
ಎದ್ದ ಅಲ್ಲಿಂದಾ ಖುದ್ದ ಮನಿಗೆ | ಬಂದ ಮುಟ್ಯಾರ ಈಸಾ ರಸೂಲಿಲ್ಲಾ
ನೆರೆದಿತ್ತ ಮಂದಿ | ಮನಿಯಾಗ | ಶರಣರ ಸಂಗತಿಲೆ | ಕುಂತಾರ ಲೆಕ್ಕಿಲ್ಲಾ
ಒಳ್ಳೆ ಹರುಷ ಆಗಿ ಮನಸ ಅಂತಾರ ನನ್ನ ತರುವಾಯ
ಹುಟ್ಟುವರೋ ಒಂದಾನೊಂದ ದಿವಸ | ನಬಿಸಾಬ ಪೈಗಂಬರ
ಕೇಳರಿ ತಿಳಿಸುವೆ ಅವರ ಹೆಸರ | ಶರಣರವೊಳಗ
ಶ್ರೇಷ್ಟಪದವಿ ಆ ಶಂಕರ ಕೊಟ್ಟಾನ ಅವರಿಗೆ || ೩ ||

ನಬಿಸಾಹೇಬರ ಮ್ಯಾಲೆ ಇಟ್ಟ ಭಗತಿ | ನಡದ ಪಡಿಯಿರಿ ಮುಕ್ತಿ
ಅವರ ಹೊರ್ತು ಯಾರಿಗೆಯಿಲ್ಲಾ ಸದ್ಗತಿ | ತಿಳಿಸಿರಿ ಮನಸಾಗಿ
ಏರು || ಆ ಜನರ ಪೈಕಿ ಒಬ್ಬ | ಎದ್ದ ಹೋಗಿದ್ದಾನ ಬೇಖೂಬ್
ತಿಳಿಸ್ಯಾನ ಅರಸಗ ಈಸಾ ಪೈಗಂಬರ | ಅಡಗಿ ಕುಂತಾರ ಮನೆಯಲ್ಲಿ
ಕೇಳಿ ಅರಸ ಒಳೇ ಹರುಷಾಗಿ | ದಂಡ ತಯ್ಯಾರ ಮಾಡ್ಯಾನ ಕ್ಷಣದಲ್ಲಿ

ಕೊಟ್ಟ ಅರಸ ಮಹಾ ದ್ರುಷ್ಟ | ಮೊದಲಿ ಸಿಟ್ಟೆಯಿಟ್ಟಿದ್ದಾ ಮನದಲ್ಲಿ
ಹೊಂಟಾರಲ್ಲಾ ಸರೂಮಂದೆಲ್ಲಾ | ಹೋಗಿ ಈಸಾ ಪೈಗಂಬರ ಮನಿಗೆ
ಮುತ್ತಗಿ ಹಾಕ್ಯಾರಲ್ಲ | ಒಳಗ ಹೋಗಿ ಹಿಡಿದಾರ ಬ್ಯಾಗ | ಶರಣರಿಗೆ ತಂದಾರ ಹೊರಗ
ಇಟ್ಟಾರ ಒಯ್ದು ಮತ್ತೊಂದು ಮನಿಯಾಗ | ಒಳ್ಳೆ ಮನದಲ್ಲಿ ಹಿಗ್ಗಿ || ೪ ||

ಆ ಮನೆ ಸುತ್ತ ಮುತ್ತ | ಕಾವಲಿ ಬಂದೋಬಸ್ತ
ಹಸ್ತದೊಳಗ ಹತಿಯಾರ ಹಿಡಕೊಂಡ ಶಿಸ್ತಪಾರ ಮಾಡುರೋ ತಿರುಗಿ
ಏರು || ಆ ಕ್ಷಣಕ ಜಿಬರಾಯಿಲ ಬಂದಾರ ತತ್ಕಾಲಾ
ಮನಿ ಡಬಾಸ ಕಿತ್ತು ಒಗದ ತಡಮಾಡದೆ ತಗದಾರಲ್ಲಾ
ಈಸಾ ಪೈಗಂಬರಗ ತಗೊಂಡ ಹಾರಿ ಹೋಗ್ಯಾರ ಆಕಾಶಮ್ಯಾಲಾ
ಬೆಳಗಾದಿಂದ | ಅರಸ ಬಂದಾ | ಅಂತಾನ ತೆಗೆಯಿರಿ ಬಾಕಲಾ
ತೆಗಿರಿ ಹೊರಗ | ಆ ಈಸಾಗ | ಗಲ್ಲಿಗೇರಿಸಿ ಅಂವಗ
ಶಾಂತ ಪಡಸರಿ ನನಗ | ಅಂತ ಅಪ್ಪಣಿ ಕೊಟ್ಟಾನಲ್ಲಾ | ಒಳಗ ಒಬ್ಬಾಂವಹೋಗ್ಯಾನಲ್ಲಾ
ಈಸಾ ಪೈಗಂಬರ ಅವನಿಗೆ ಕಾಣಲಿಲ್ಲಾ | ನಿಂತಾನಹೈಪಾಗಿ || ೫ ||

ಒಳಗ ಹ್ವಾದ ಪುರುಷನ ಮಾರಿ ಆತ ಈಸಾನ ಸರಿ
ಸಾಂಬನ ಕೌತುಕ ಯಾರಿಗೆ ತಿಳುದಿಲ್ಲರಿ | ತಿಳಿಸುವೆ ಸುದ್ದಾಗಿ
ಏರು || ಬಂದ ಹೊರಗ ಅಂತಾನಲ್ಲಾ | ಈಸಾ ಪೈಗಂಬರ ಇಲ್ಲಾ
ಅಂತಾರ ಮಂದಿ ನೀನೇ ಈಸಾ | ಪಂಟ ಹಚ್ಚಬ್ಯಾಡ ನಮ್ಮ ಮುಂದಾ
ಕೇಳರಿ ಈಸಾ ನಾಯೇನ ಅಲ್ಲಾ | ಕಿರೇ ಮಾಡಿ ಹೇಳುವೆ ಖುದ್ದಾ
ಸಿಟ್ಟ ತಡಿಯದೆ ಎದ್ದು ಅರಸ ಬಂದಾ ಆತನ ಕೈಹಿಡಿದಾ |
ಎಳದ ಒಯ್ಯಿರಿ | ಬಿಡಬ್ಯಾಡರಿ | ಪಂಟ ಹಚ್ಯಾನ ಈಸಾ ಅಲ್ಲಂತಾ
ಗಲ್ಲಿಗೆ ಏರಸರಿ | ಕೇಳಿ ಹಣಿಹಣಿ ಬಡಕೊಂತ | ಅಳತಾನ ನಾ ಅಲ್ಲಂತಾ
ಮುಗುವೆ ಕೈಯಾ ಗಲ್ಲಿಗೆ ಏರಿಸಬ್ಯಾಡರಂತ | ಅಂತಾನ ಶಿರಾಬಾಗಿ || ೬ ||

ಎಷ್ಟು ಹೇಳಿದರ ಕೇಳಲಿಲ್ಲಾ | ಹಿಡದ ವೈದಾರ | ಆತಗ ಮೊದಲಾ
ಏರಿಸ್ಯಾರ ಗಲ್ಲಿಗೆ ಹಾರಿತ್ತ ಅವನ ಉಸಲಾ | ಹೊರಬಿತ್ತ ನಾಲಿಗಿ
ಏರು || ಗಲ್ಲಿಗೆ ಅವನಿಗೆ ಏರಿಸಿ | ಮಾಡಿದ್ದಾರ ಒಳ್ಳೆ ಚೌಕಾಸಿ | ಇವನೆ ಈಸಾ
ಖರೇ ಇದ್ದರ ನಮ್ಮ ಪೈಕಿ ಒಬ್ಬ ಬಹಾದ್ದೂರ | ಒಳಗ ಹ್ವಾದಾಂವ
ಬಂದಿಲ್ಲಾ ತಿರುಗಿ ಜನರೆಲ್ಲಾ ಹೀಂಗ ಅಂತಾರ
ಅರಸ ಕೇಳಿ ದಂಗ ಆಗಿ ಅಂತಾನ | ಇದುಯೇನ ಆತ ಚಮತ್ಕಾರಾ
ಹಾರೀತು ನೆನಪ ಆಯಿತು | ಈತನೆ ನಮ್ಮಾಂವಾ | ಆದರೆ ಈಸಾ ಎಲ್ಲೆ
ಹ್ವಾದಾಂಗ ಆಯಿತು | ಬಿತ್ತವರಿಗೆ ಎಲ್ಲರಿಗೆ ಗುಮ್ಮಾ | ಅಳತಾರ ಮೆಲ್ಲಕ ಸುಮ್ಮಾ ಸುಮ್ಮಾ
ಏನಯಿದು ಎಂಥಾ ಬುದ್ಧಿ ತಮ್ಮಾ | ಅಂತಾರ ಮರಮರಗಿ || ೭ ||

ಈಸುದ್ದಿ ಆತನ ಮನಿಗೆ | ಮಡದಿ ಮತ್ತು ಮಕ್ಕಳಿಗೆ | ಮುಟ್ಟಿತ
ಅತಕೊಂತ ಬಂದ ನೋಡ್ಯಾರ ಅಲ್ಲಿಗೆ ಹೆಣಾ ಬಿದ್ದಿತೊ ತೂಗಿ

ಏರು || ಅಂತಾಳ ಕಣ್ಣೀರು ಸುರಸಿ || ನನ್ನ ಮಕ್ಕಳ ಪರದೇಶಿ
ಅದು ಇಂದಿಗೆ ಈಸಾಪೈಗಂಬರ ಸಲುವಾಗಿ ಮಾಡಿ ಜಿದ್ದ
ಹಿಡಿಲಿಕ್ಕೆ ಹೋಗಿ ಕೊಟ್ಟಾನ ಪ್ರಾಣಾ | ನಮಗ ಒದಗಿತ್ತೊ ಪಾಪೆಲ್ಲಾ ಒಂದಾ
ಅಂತ ಎಲ್ಲಾರು ಕೂಡಿ ಎದ್ದ | ಹೋಗಿದ್ದಾರ ಅಲ್ಲಿಂದ | ಎಲ್ಲಾ ಜನಾ
ಕೇಳರಿ ವಿದ್ವಾನಾ | ಸುತ್ತ ನಾಡಿಗೆ ಜಾಹೀರಾ | ಬಾಗಲಕೋಟಿ ಪಟ್ಟಣಾ
ಇರತಾರ ಮಲ್ಲೆಕಲ್ಲ ಪೀರ | ಹುಸೇನ ಮಿಯ್ಯಾ ಗಂಭೀರ
ತರಬಿ ವೈರಿಗೆ ಜರಬಿಲೆ ಹೀಂಗ ಅಂತಾರ | ಎಂದ ಹಾಡಿದ್ಯೋಗೂಗಿ || ೮ ||

* * *

## ೯. ಹ ಶಮವೂನ ಪೈಗಂಬರರಿಗೆ ಒದಗಿದ ಕಷ್ಟ

ಪೇಳುವೆ ಬಾಲಾ ಸಾರಿ ಶಮವೂನ ಶರಣರ ಲೀಲಾ
ಏರು || ಸೃಷ್ಟಿ ಸರಿಯಾಗಿ ನಿಷ್ಟವಂತರಿಗೆ | ಕಷ್ಟ ಎಂದಿಗೆ ತಪ್ಪೂದಿಲ್ಲಾ
ಶ್ರೇಷ್ಟ ಸಾಂಬನ ಆಟ ತಿಳೂದಿಲ್ಲಾ | ಪರಮಾತ್ಮ ಶಮವೂನ ಶರಣರಿಗೆ
ಕೊಟ್ಟ ವಿಪರೀತ ಶರೀರ ಹುಟ್ಟಸ್ಯಾನ ಅವರಿಗೆ
ಶಕ್ತಿಗೆ ಮಿಗಿಲಾ | ಇದ್ದು ಮೈತುಂಬ ಉದ್ದ ಕೂದಲಾ || ೧ ||

ಇ|| ದೇಶದ ಮ್ಯಾಲಾ ಇತ್ತ ಅಮಜ ಅರಸನ ಅಮಲಾ
ಏರು || ಶರಣರದು ನೇಮಾ | ಇಸ್ಲಾಮದ ಧರ್ಮಾ
ಬೆಳಸುವಾ ಪ್ರೇಮಾ ಹಂಬಲಾ | ಇತ್ತ ಮನದಿ ರಾತರಿಹಗಲಾ
ನಾಕ ತಿಂಗಳ ಕಾಫರ ಮಂದಿಗೂಡ ಜಗಳಾ | ಮಾಡತಿದ್ರೂ ಸಾಂಬನ ಸ್ತೋತ್ರ ನಾಕ ತಿಂಗಳಾ
ಹೋಗುವರಲ್ಲಾ ನಾಕ ತಿಂಗಳ ದೇಶದ ಮ್ಯಾಲಾ || ೨ ||

ಇ|| ಶರಣರು ಸೇಲಾ || ಆಗಿ ಅಮಜ ಅರಸಗ ಅಮಲಾ
ಏರು || ಗಂಡ ಆಗಿದ್ದರು ದಂಡಕ ಇಡುತ್ತಿದ್ದರು | ಭಂಡ ಕಾಫರರು
ಜನಕಿಲ್ಲಾ ಯಾರು ಅವರಿಗೆ ಎಡ ಇದ್ದಿಲ್ಲಾ | ಅಮಲಜ ಅರಸ
ಕರಸಿ ತನ್ನ ಜನಕ | ಏನುಪಾಯ ಮಾಡುನು ನಾವು ಇದಕ
ಇಂವಾ ಇನ್ನ ಮ್ಯಾಲಾ | ಖಾಸ ನಮ್ಮದು ಓಸ ಇಡೂದಿಲ್ಲಾ || ೩ ||

ಇ|| ಸಣ್ಣ ದೊಡ್ಡವರಿಲ್ಲಾ | ಮಾಡಿ ಮಸಲತ್ ತಗದಾರೋ ಅಕಲಾ
ಏರು || ಶಮವೂನ ಶರಣರ ಸತಿ | ಇದ್ದಾಳರಿ ಮತಿ
ಇಲ್ಲದೊಂದೀಗತಿ | ಹಾಕಿ ಭುಗಿಲಾ | ಮಾಡಿ ಅವಳಿಗೆ ಹಾಕ್ಯಾರೋ ಜೇಲಾ

ಹಿಡದ ಕೊಡರಿ ನಿಮ್ಮ ಗಂಡಗ | ಮಾಡತೇವಿ ನಿಮಗ ನಮ್ಮ ಅರಸಗ
ಮಂಚದ ಮ್ಯಾಗ ತೂಗಿರೆಂತ | ಉಂಡ ಖುಷಿಯಾಲಾ || ೪ ||

ಇ|| ಬಹು ಸ್ಥಿರವಲ್ಲಾ | ಕೆಟ್ಟ ಹೆಂಗಸರ ಆಟ ತಿಳೂದಿಲ್ಲಾ
ಏರು || ಕಪಟ ಮನದಾಗ || ಹುಟ್ಟಿತರಿ ಹೀಂಗ | ಮಲಗಿಕೊಂಡಾಗ | ಕಯ್ಯಿಕಾಲಾ
ತನ್ನ ಗಂಡಗ ಕಟ್ಟಿದಾಳಲ್ಲಾ | ಶಮವೂನ ಶರಣರು ಎಚ್ಚರಾಗಿ ಯಾರ ಕಟ್ಯಾರಂತ
ಕೇಳತಾರ ಮಡದಿಗೆ | ಹೇಳತಾಳಲ್ಲಾ | ಶಕ್ತಿ ಪರೀಕ್ಷಾ ಮಾಡೇನಿ ನಾನೇ ಎಲ್ಲಾ || ೫ ||

ಇ|| ತಿಳಿಗೊಡಲಿಲ್ಲಾಕಿ ಜಗ್ಗಿ ಹರದಾರ | ಹಗ್ಗ ಸ್ವಾಮಿ ಸೇಲಾ
ಏರು || ಮರುದಿನಾ ಕಾಪೀರಾ | ತಂದ ಕೊಟ್ಟಾರಾ | ಕಬ್ಬಿಣ ಜಂಜಿರಾ | ಸಂಕೋಲಾ
ಹಾಕಿಗಂಡಗ ಹಾಸಿಗೆ ಮ್ಯಾಲಾ | ಎಚ್ಚರಾಗಿ ಶರಣರು ಜಂಜಿರಾ
ಮುರದ ತುಣಕ ಮಾಡಿ ಒಗದಾರಾ | ಹೇಳತಾಳಲ್ಲಾ ಶಕ್ತಿ ನಿಮ್ಮದು ಐತಿ ಬಹುತೋಲಾ || ೬ ||

ಇ|| ಕಿಡಗೇಡಿ ಕುಲಾ | ತನ್ನ ಕಪಟ ತಿಳಿಗೊಡಲಿಲ್ಲಾ
ಏರು || ಉತ್ತಮ ಥರದವಳು | ಮತ್ತು ಕೇಳಿದಳು | ಹೇಳು ಅಂತಾಳು ನಿಮ್ಮ ಕುಶಲಾ
ಶಕ್ತಿ ನಿಮ್ಮದು ಎದಕ ನಡುದಿಲ್ಲಾ | ತಿಳಿಲಿಲ್ಲಾ ಶರಣರಿಗೆ | ಕಪಟಾ
ತಿಳಿಸಿದಾರ ಸತಿಯಳಿಗೆ | ನನ್ನ ಕೂದಲಾ | ಕಟ್ಟ ಅದರಿಂದ ಆಟ ನಡೂದಿಲ್ಲಾ || ೭ ||

ಇ|| ಕೇಳಿ ನಿಜಕೀಲಾ | ಬಾಲಿ ಮನದಾಗ | ಆದ್ಲೋ ಕುಶಿಯಾಲಾ
ಏರು | ಮರುದಿನ ಗಂಡ | ಉಂಡ | ಮಲಕೊಂಡ | ಕಾಂತಿ ಕೊಯಕೊಂಡ ಕೂದಲಾ
ಕಟ್ಟಿದಾಳ ಕೈಕಾಲಾ | ಹರಿಲಿಲ್ಲ ಶರಣರದು | ಮೀರಿತು ಯತನಾ | ಸುದ್ದಿ ಕೇಳಿ ಬಂದಾರ
ಕೂಘಾರ ಜನಾ | ಹೊತ್ತ ವೈದಾರಲ್ಲಾ | ತಂದ ಅರಸನ ಮುಂದ ಖುಷಿಯಾಲಾ || ೮ ||

ಅರಸ ಜಾದಿಲಾ | ಒಟ್ಟ ಹುಕುಂ ಕೊಟ್ಟಿದ್ದಾ ಮೊದಲಾ
ಏರು || ಕೈಕಾಲ ಕಡಿಸಿ | ಕಿವಿಯಾಗ ಕೊಯಿಸಿ | ಎರಡು ಕಣ್ಣು ಕೀಳಸಿ
ದಿಮ್ಮ ದುಂಬಾಲಾ | ಮಾಡಿ ಸಮುದ್ರ ನೀರಿನ ಪಾಲಾ
ಹುಕುಮಿನ ಪರಕಾರಾ ದಿಂಬಕ | ಓದು ಒಗದಾರ ಸಮುದರದಾನ ಮಡಕ
ಹುಕುಮಿನ ಮ್ಯಾಲಾ | ಬಂದ ಸಾಂಬನ ದೂತ ಜಿಬರೀಲಾ || ೯ ||

ಇ|| ಶರಣರ ಮ್ಯಾಲಾ | ಆತ ಸಾಂಬನಕೃಪಾ ತತ್ಕಾಲಾ
ಏರು || ಬಂದು ಚಿಗಿತ ಕಣ್ಣ ಮೂಗೆಲ್ಲಾ | ಶರಣರು ಸಿಟ್ಟೇಲೆ | ಮನಿಗೆ ಹ್ವಾದ್ರ
ಹೊಡಿಬೇಕಂತ | ತಮ್ಮ ಸತಿಯಳಿಗೆ |
ಜುಬರಾಹಿಲಾ ಶಾಂತ ಮಾಡಿದಾರ ಸಾನುಕೂಲಾ || ೧೦ ||

ಇ|| ಜಿಬರಾಹಿಲಾ ಅಂದಾರಲ್ಲಾ | ಶಮವೂನ ಶರಣಗ ಮೊದಲಾ
ಏರು || ದುಷ್ಟ ಅರಸಿಂವಾ | ಕಷ್ಟ ಪಡಸ್ಯಾನ | ನಷ್ಟ ಮಾಡರಿ ತತ್ಕಾಲಾ
ಊರ ಇವಂದು ಹಾಕ್ರಿ ಬಾಕಲಾ | ಸತ್ಯವಂತ ಶರಣರು ಆ ಗ್ರಾಮಕ
ಕಿತ್ತಿ ಒಗದಾರ ಎತ್ತಿ ಅಲಕ | ಬಂತ ಅಂತ್ಯಕಾಲ | ಊರ ಗ್ರಾಮದ ಕೂನಾ ಉಳಿಲಿಲ್ಲಾ || ೧೧ ||

ಇ|| ದೇಶದ ಮ್ಯಾಲಾ | ಶಾರ ಬಾಗಲಕೋಟಿ ಪ್ರಭಲಾ
ಏರು || ಹಸ್ತ ತಲಿಮ್ಯಾಗ | ದಸ್ತಗೀರ ನಮಗ | ಮಸ್ತ ಕೊಟ್ಟಾರ ಅಕಲಾ
ಆದ್ರ ಕೇಸುಪೀರ ಅನುಕೂಲಾ | ನಾಗೂ-ಗೌಸುನ ಕವಿ ಕಡಕ | ಕಟಬಂದ
ಅಕ್ಷರ ಬಲು ತೊಡಕ | ಇಂವಾಯೇನ ಬಲ್ಲ ಪಿಚ್ಚು | ಮುಂಚೆ ಕೊಯ್ಯಾಂವ ಹುಲ್ಲಾ ||೧೨||

* * *

## ೧೦. 'ಸಾರಾ' ಅವರ ಪತಿವ್ರತಾ ಭಕ್ತಿಯ ಪದಾ

ಪತಿವ್ರತಾ ಬೀಬಿ ಕಾತೂನ ಸಾರಾ
ಹುಟ್ಯಾಳ ರಂಭಿ ಸೂತರದ ಗೊಂಬಿ || ಪಲ್ಲವಿ ||

ಏರು || ಸೂರ್ಯ ಪ್ರಕಾಶದಂತೆ ಜಗತುಂಬಿ | ವಯಾ ಇತ್ತ ಎಳಕ
ಬೆಳಕ ಬಿತ್ತ ದೇಶದ ಮ್ಯಾಲಿ | ಮದುವಿ ಇಲ್ಲದ ಮನಾ ಜಲ್ಲಾ ಆಗೂದು ರಾತ್ರಿಹಗಲ
ನನ್ನ ಮನಸಿಗೆ ಬಂದ ಪುರುಷ ಆಗುವೆ ಲಗ್ನ ಬಾಲಿ
ತಂದಿಗೆ ನಿಷ್ಠುರಾ ಅಂದಾಳಾ ಸುಂದರಾ || ೧ ||

ಇ|| ಇಷ್ಟ ಕೇಳಿ ತಂದಿ ಆಗ ಮಾಡಸ್ಯಾನಾ ಸ್ವಯಂವರಾ
ಹರಿದಿತ್ತ ಸುದ್ದಿ | ನೆರೆದಿತ್ತ ಮಂದಿ
ಏರು | ತೊಟ್ಟರು ತಕ್ಕಷ್ಟು ಪೋಷಾಕ ಗರದಿ
ಏಕಲಾಕ ರಾಜಲೋಕ ಸ್ಥಾನಿಕ ಜನರು
ಆಗಬಿಟ್ಟ ಇಬ್ರಾಹಿಮ ಶರಣರು
ಹೋಗುವಾಗ ಹಾದಿವೊಳಗ ಮಂದಿಗೂಡ ನಡೆದರು
ಕೂಡಿತ್ತ ಜುಮರಾ | ನಡೆದಿತ್ತ ಸ್ವಯಂವರಾ || ೨ ||

ಇ|| ಸ್ವಾಮಿ ಶರಣಾ ಹೋಗಿ ಕುಂತಾರ ಪರಭರಾ
ಕೈಯಾಗ ಹಿಡದಾಳೋ ನವರತ್ನ ಸರಾ
ಏರು || ಬಂದಾಳೋ ಮುಂದ ಮಾರಿಗೆ ಹಾಕಿಕೊಂಡು ಗೋಷಾ
'ಥಿ ದಿಲ್‌ಭರಿ ಓ ಪೈಗಂಬರಿ ನೂರ್ ಕಿ ಆಶಾ'
ನೋಡಿ ಇಬ್ರಾಹಿಮ ಶರಣರ ಮಾರಿ ಮನಾ ಆತ ಹರುಷಾ
ಕಂಡಾಳೋ ಚಹರಾ ಹಾಕ್ಯಾಳೋ ಹಾರಾ || ३ ||

ಇ|| ಗರ್ದಿಲಿಂದ ಮದುವಿ ನಡದೀತ ಜುಮರಾ
ಏರು || ಒಂದ ದಿನಾ ಶರಣಾ | ಸತಿಗೆ ಸಂಪೂರಣಾ
ತಿಳಿಸಿ ಹೇಳ್ಯಾರ ಮನಸಿನ್ಮಾನ ಧೋರಣಾ
ಕೊಡ ಅಪ್ಪಣಿ ಹೋಗ್ತೇನಿ ನಮ್ಮ ದೇಶಕ್ಕೆ ಹೊಂಟಾ
ಸತಿ ಅಂದ್ಲೊ ಪತಿಗೆ ಇಲ್ಲಗತಿ ನಿಮಗ ಬಿಟ್ಟಾ

ಬರತೇನಿ ನಾ ಇರತೇನಿ ನಡೀರಿ ನಿಮ್ಮ ಸಂಗಾಟಾ
ನಿಮ್ಮಲಿಂದಾ ಉದ್ದಾರಾ ಆಗೂದು ನಿರ್ಧಾರಾ || ೪ ||

ಇ|| ಕೊಟ್ವಾರ ಅಪ್ಪಣಿ ಅತ್ತಿ ಮಾಂವ ಎಲ್ಲಾರಾ
ಏರು || ಹಿಡದಾರ ಹಾದಿ ಬರು ಹೋಗು ಮಂದಿ
ತಿಳಿಸ್ಯಾರ ಮಿಸರ ದೇಶದ ಅರಸನ ಬಾಧಿ
ಬಾಳೈತಿ ನಿಮ್ಮ ಗೋಳ ಮಂದಿ ಇಟ್ವ ಜಕಾತಿ
ಬೇಡತಾರ ಅಲ್ಲಿ ಮಾಡತಾರ ಸರೂ ಮಾಲಿನ ಜಡತಿ
ಹೆಂಗಸರಗಿ ಹರುಷಾಗಿ ಒಯ್ದು ಅರಸನ ಹಂತಿ
ಹುಕುಮಿನ ಪರಕಾರ ಮಾಡುವರು ಹಾಜರಾ || ೫ ||

ಇ|| ಸ್ವಾಮಿ ಶರಣಾರು | ಆಗ ತಗದಾರ ಹುನ್ನಾರಾ
ಏರು || ಊರಿಗೆ ಹೋಗಿ ತಂದಾರ ಒಂದ ಪೆಟಗಿ
ಕುಂಡರಸಿ ಅದರಾಗ ಸತಿಯಳಗಿ
ಸುತ್ತಗಟ್ಟಿ ಬಿಗದ ಕಟ್ಟಿ | ಕೀಲಿ ಹಾಕ್ಯಾರ ಗಟ್ಟಿ
ಹೇರ್‍ಯಾರ ಆಗ | ಕುಂತಾರ ಆಗ | ಬಿಟ್ವಾರ ಒಂಟಿ
ನಡೆದಿತ್ತ ಮುಂದ ಬಂತ ಮಿಸರ ದೇಶದ ಕಟ್ಟಿ
ಕೇಳತಾನ ತಳವಾರಾ | ಯಾತರದು ಹೇರಾ || ೬ ||

ಇ|| ಅಂತಾರ ಶರಣಾ ಸಾಮಾನ ಐತಿ ಚಾರಚೂರಾ |
ಏರು || ಮಾಲಿಂದು ಜಡತಿ | ಮಾಡುದು ರೀತಿ
ಐತಿ ಅರಸಂದು ನಮಗ ತಾಕೇತಿ
ಶರಣರಂದ್ರೋ ಜೇಂವಕ ತೊಂದ್ರಿ ಯಾತಕ ಇಷ್ಟಾ
ಅಜಮಾಸ ಮಾಡರಿ ಖಾಸ ಕೊಡುವೆನು ಬೇಡಿದಷ್ಟಾ
ತಳವಾರ ಇಳವಿ ಹೊರಕೀಲಿ ತೆರದಾ ದುಷ್ಟಾ
ಕುಂತಿದ್ಲೋ ಸುಂದರಾ | ಮೂಡಿದಾಂಗ ಚಂದಿರಾ
ನಿಂದರಸ್ಯಾರ ಒಯ್ದು ಅರಸನ ಇದರಾ || ೭ ||

ಇ|| ಕಂಡ ಮದಾಂಧಾ ಕಾಮನ ಬಾಧಾ
ತಾಳಲಾರದಾ ಹಿಡಿಲಾಕಾ ಹ್ವಾದಾ
ಏರು || ಭಕ್ತರಿಗೆ ಬಂದ ರಕ್ಷಣ ಮಾಡಾಂವಾ ಸಮರ್ಥಾ
ಹಿಡಿಲಾಕ ಬಂದ ಅರಸನ ಕೈ ಒಣಗ್ಯಾವ ತುರತಾ
ಹುಗದಿತ್ತ ನೆಲಾ ಬಿಗದ ಹಿಡಿತ ಅತಿಗೊಂತ ಕುಂತಾ
ಸಿಗಬಿದ್ದ ಪಾಮರಾ ಆದಾನ ಗಾಬರಾ || ೮ ||

ಇ|| ಅಂತಾನ ಅರಸಾ | ಇದು ಜಾದೂದು ಆಕಾರಾ
ಏರು || ಕಾತೂನ ಸಾರಾ | ಅಂದಾಳೋ ಮುಡದಾರಾ

ನನ್ನಪತಿ ಸಾಂಬನ ಪ್ರೀತಿ ಪೈಗಂಬರರಾ
ಕೇಳಿ ಅರಸ ಹಿಂತ ಕೆಲಸ ಮುಂದ | ಮಾಡೂದಿಲ್ಲಾ ಅಂದಾ
ಬಿಟ್ಟೈತಿ ನೆಲಾ ಒಣಗಿದ ಕೈ ಆದಾವ ಚಂದಾ
ಮತ್ತ ಅರಸ ಕೆಟ್ಟಗಣ್ಣೀಲೆ ದಿಟ್ಟೀಸಿ ನೋಡಿದಾ
ಕಣ್ಣ ಹೋಗಿ ಮುಡದಾರಾ | ಆದಾನೋ ಬ್ಯಾಸರಾ || ೯ ||

ಇ|| ಮತ್ತ ಅರಸಾ ಜಲ್ಮಾ ಮಾಡಂದಾ ಉದ್ಧಾರಾ
ಏರು || ಸಾರಾ ಕಾತೂನಾ ಪತಿವೃತಾ ರತನಾ
ಮಾಫ ಮಾಡ್ಯಾಳ ಬಂದಾವ ಕಣ್ಣಾ
ಬೇಮಾನ ಅರಸ ಹೀನ ಮನಸ ಮಾಡ್ಯಾನ ಹೀಂಗ
ಕೈಯಾಗ ಸಿಕ್ಕಬ್ಯಾಟಿ ತಿರುಗಿ ಬಿಡಬೇಕ ಹ್ಯಾಂಗ
ಕಣ್ಣ ಹೋಗಿ ಕೈಯ ಒಣಗಿ ಕುಂತ ಮೊದಲಿನ ಹಾಂಗ
ಅಂತಾನ ಗಂವಾರಾ ಮಾಡವ್ವಾ ಉದ್ಧಾರಾ || ೧೦ ||

ಅಂತಾರ ಸಾರಾ ನಂದು ತೀರಿತ್ತು ಕಾರಭಾರಾ
ಏರು || ಕರೆಸಿ ಶರಣಗ ಬಿದ್ದ ಪಾದದ ಮ್ಯಾಗ
ಉದ್ಧಾರ ಮಾಡರಿ ಜಲಮಾ ನೀವು ನನಗ
ಈ ತಪ್ಪ ಮಾಡರಿ ಮಾಫ ನಿಮಗ ಕೊಟ್ಟೇನಿ ತಾಪಾ
ವಹಿತಂದ ಜಿಬ್ರಾಯಿಲ ಬಂದ ಶರಣರಿಗೆ ಅಂತಾನ ಸಾಪಾ
ಈ ಅರಸ ತನ್ನ ದೌಲತ್ತ ಸರೂ ಕೊಟ್ಟರ ಮಾಪಾ
ಮಾಡರಿ ಶರಣರಾ ಹುಕುಮಿನ ಪರಕಾರಾ || ೧೧ ||

ಇ|| ತಿಳಿಸ್ಯಾರ ವಚನಾ ತಂದ ಇಮಾನಾ
ಇಟ್ಟಾನ ಮುಂದ ತನ್ನ ಖಜಾನಾ
ಸಾಂಬನ ಹುಕುಮಿಲಿಂದ ಅರಸ ಆದ ಸಾಬೀತಾ
ಶರಣರು ಎರಡು ಭಾಗ ಮಾಡ್ಯಾರ ಇದ್ದ ದೌಲತ್ತಾ
ಅರಸಗ ಅರ್ಧ ಕೊಟ್ಟಾರು ತಮ್ಮ ಕೈಮುಟ್ಟಿ ಹಸ್ತಾ
ಮಾಡ್ಯಾರ ಉಪಗಾರಾ ಕರುಣ ಸಾಗರಾ || ೧೨ ||

ಇ|| ಮಾಡತಾನ ಅರಸಾ ಬೇಬಿ ಸಾರಾನ ವಿಸ್ತಾರಾ
ಏರು || ಈ ಭೂಮಿಮ್ಯಾಗ ಬೇಗು ಬೆಳಗು ಹಾಲಿ
ಆಗೂದು ನಿಮ್ಮಂತವರು ಇದ್ದಲ್ಲಿ
ಪತಿವ್ರತಾ ಅಂತ ಪ್ರಾಂತದೊಳಗ ಆದ ಅಸಕರಿ
'ಖಿದ್‌ಮತ್‌ಕು ಬೀಬಿ ಹಾಜರಾ ಕಿಯಾ ತಾಬೇದಾರಿ'
ಕುಶಿಲಿಂದ ಅರಸಾ ತಂದ ಸಾರಾಗ ಕೊಟ್ಟ ಉಡಗರಿ
ಹೊಂಟಾರ ಶರಣರ ಬಿಟ್ಟಾರ ಆ ನಗರಾ || ೧೩ ||

ಇ|| ಬಾಗಲಕೋಟೆ ಸುತ್ತ ದೇಶಕ ಜಾಹಿರಾ
ಏರು || ಗುರು ದಸ್ತಗೀರಾ | ಕರುಣ ಸಾಗರಾ
ಹಸ್ತ ಇಟ್ಟ ತೆಲಿಮ್ಯಾಗ ಭರಪೂರಾ
ನಮ್ಮ ಕೇಸುಪೀರ ಲೇಸ ಮಾಡ್ಯಾರ ನಾಗೂ-ಗೌಸೂಗ
ಕಟಿಬಂದ ನುಡಿಚಂದ ತುಸು ತಗಲಿಲ್ಲದಾಂಗ
ಪ್ರಸಿದ್ಧ ಆದ ಉಸ್ತಾದ ನಮ್ಮ ಲಚಮನಸಿಂಗ
ಕಟಬಂದ ಅಕ್ಷರಾ | ಕವಿಗಳು ಬಂಗಾರಾ || ೧೪ ||

* * *

## ೧೧. ಸ್ವಾಲೆಹಾ ಪೈಗಂಬರರ ಸೇಬು ಹಣ್ಣಿನ ಬಯಾನಾ

ದೈವಾ ಕೇಳರಿ ನೀವು ಕೈಮುಗಿದು ಹೇಳುವೆವು
ಚಿತ್ತ ಇಡಬೇಕು ತಾವು ನಮ್ಮ ಮೇಲಾ ||
ಏರು|| ಅಬು ಸ್ವಾಲೆಹಾ ಎಂಬ ಶರಣರ ಬಯಾನಾ
ಬಿಚ್ಚಿ ಹೇಳುವೆನು ಏನು ಕಸರಿಲ್ಲಾ ||
ಇ || ಒಂದಾನ ಒಂದಿನ ಅಬುಸ್ವಾಲೆಹಾ ಶರಣಾ ಹೊಳಿದಂಡಿಮೇಲೆ
ಕುಂತಿದ್ದರಾಗ ಸೇಬುಹಣ್ಣು ತೇಲಿ ಬಂತೋ ಅಲ್ಲೆ
ದಿಟ್ಟಿಸಿ ನೋಡಿ ಕಯ್ಯಾಗ ತಗೊಂಡ ಆ ಹಣ್ಣಾ
ಅದು ಇತ್ತೋ ಪಂಚವರಣಾ
ಶರಣಾ ಹಸುವು ಆಗಿ ಆ ಹಣ್ಣು ತಿಂದಾರಲ್ಲಾ || ೧ ||

ಇ|| ಹಣ್ಣು ತಿಂದಗಳಗಿ ಮ್ಯಾಗ | ಚಿಂತಿ ಹತ್ತಿತು ಆಗ
ತಿನಬಾರದಿತ್ತು ಹಣ್ಣು ತಿಂದೇನಲ್ಲಾ
ಏರು || ಪರಮಂದಿ ಮಾಲಾ ತಿಂದ ಹಾಸಿಲಾ
ತೀರಿಸಿ ಬಿಡತೇನಿ ನಾನು ಬಿಡುವದಿಲ್ಲಾ
ಚ್ಯಾಲ || ಕುಂತರ ನಡುದಿಲ್ಲ ಅಂತಾ ಹೇಳಿ ಮುಂದಕ ಸಾಗಿದಾ
ಗುರತ ನೋಡಿಕೊಂತ ನಡದಾನೋ ಶರಣಾ ಹೊಳಿದಂಡಿ ಹಿಡದಾ
ಹೋಗು ಹೋಗೂತ ಕಂಡಾರೋ ಸೇಬುಹಣ್ಣಿನ ಮರಾ
ಇದ್ದಾನೋ ತೋಟದ ಸಾಕಾರಾ
ಹೋಗಿ ಗಾಟ್ಯಾಗಿ ಅವರಿಗೆ ಕೇಳತಾನಲ್ಲಾ || ೨ ||

ಇ|| ಕಣ್ಣೀಲೆ ಕಂಡು ನಾನು ತಿಂದೇನು ಆ ಹಣ್ಣಾ
ಹ್ಯಾಂಗ ತೀರೀತು ರಿಣಾ ಹೇಳರಿ ಮೊದಲಾ
ಏರು || ಕೇಳರಿ ಸಾಹುಕಾರಾ | ನನ್ನ ಮಾತ ಪೂರಾ

ನಿಮಗ ಬಿಡುವುದಿಲ್ಲಾ ||
ಚ್ಯಾಲ || ಯಾರ ಬದಕ ಯಾರ ತಿನಬೇಕ
ಮಾಡಿರಿ ವಿಚಿಯಾರಾ ಭೂಮಿ ಮ್ಯಾಲೆ ಹುಟ್ಟಿ
ಹೀಂಗ ಮಾಡಿಕೊಂತ ಹೋದರ ಶಿವನಲ್ಲಿ
ಆದೀತ ಹ್ಯಾಂಗ ಬೆಟ್ಟಿ
ಏನ ಹಚ್ಚತಿರಿ ನೀವು ಹಚ್ಚರಿ ಬದಕ | ಸರಿಯಾಗಿ ಹಣ್ಣಿನ ರಿಣಕ
ನೀವು ಬಿಟ್ಟೇನೆಂದರ ನಾನು ಬಿಡುವುದಿಲ್ಲಾ || ೩ ||

ಸಾವುಕಾರ ಅಂತಾನೋ ಆಗ | ಎಂಥಾಭಕ್ತಿ ಭಾವ ಇಂವಗ
ಏಕ ನಿಷ್ಠಾ ಶಿವಾ ಇವಗ ಕೊಟ್ಟಾನಲ್ಲಾ
ಏರು || ನನ್ನ ಮಗಳಾ ರತ್ನದ ಹರಳಾ
ಅಂತಾಕಿ ಇಂವಗ ನಾನು ಕೊಡಬೇಕಲ್ಲಾ
ಚ್ಯಾಲ || ಇವನ ಏಕನಿಷ್ಠಿ ನೋಡಬೇಕಾದರ ಸುಳ್ಳ ಸುಳ್ಳ ನಾನು ಹೇಳಿ
ಮಗಳ ರೂಪ ವಿಚಾರಗೆಡಿಸಿ ಮಾತಿಲಿಂದಾ
ಹೇಳಿ ಕೇಳಿದ ಅವನ ಮುಂದಾ
ಕಣ್ಣ ಇಲ್ಲದ ಕುರುಡಿ | ತಲಿ ಇದ್ದಾಂಗ ಹಿಟ್ಟಿನ ಜರಡಿ
ಕಿವುಡಿ ಮೊದಲ ಕಿವಿ ಕೇಳುವುದಿಲ್ಲಾ || ೪ ||

ಕಾಲಿಲ್ಲದ ಕುಂಟಿ ಕೈಯಿಲ್ಲದ ಸೊಟ್ಟಿ
ಗಟ್ಟಿ ಆಕಿ ಮೂಕಿ ಬಾಯಿ ಮೊದಲಿಲ್ಲಾ ||
ಏರು || ಮದುವಿ ಆಕಿಯನಾ | ಮಾಡಿಕೋ ನೀನಾ
ತೀರುವದು ಹಣ್ಣಿನ ರಿಣಾ ಉಳಿಯುದಿಲ್ಲಾ
ಚ್ಯಾಲ || ಆಕಿಯ ಕೂಡ ಬಾಳೇವ ಮಾಡಿ ಹೌದ ಅನಿಸಿಕೋ ಬೇಕ
ಹೌದು ಅಲ್ಲಾ ನಿನ್ನ ಮನಸಿಗೆ ತಿಳಿಯಬೇಕ ತಂದು ಕೇಳು ನನ್ನ ಮಾತ
ಇದು ಬ್ರಹ್ಮನ ಲಿಖಿತ ಮುಂದ ನಿನ್ನ ಹಣೇಬಾರ ನಾನು ಬರೆದಿಲ್ಲಾ || ೫ ||

ಇ|| ಅಬೂ ಸ್ವಾಲೆಹಾ ಶರಣಾ ಕಬೂಲಾದಾರಣ್ಣಾ
ನಡೆದೀತೊ ಲಗ್ಗನಾ ಒಳ್ಳೆ ಪ್ರಭೂಲಾ
ಏರು || ಮದುವಿ ಆದಾಕ್ಷಣಕ ಅಂತಾನೋ ಬೇಶಕ್
ಮುಂದಿನ ತೂಕಾ ನನಗ ತಿಳಿಯೂದಿಲ್ಲಾ
ಚ್ಯಾಲ || ಅಬೂ ಸ್ವಾಲೆಹಾ ಶರಣಾ ನಿಂತಾರೋ
ಸುಮ್ಮನಾ ಆಗ ದಿಂಗಬಡದಾ
ಶರಣರ ನೋಡಿ ಅಂತಾನೋ ಸಾಹುಕಾರಾ ಮುಂದ ಕರದಾ
ಹೋಗರಿ ಹೇಣತಿ ಮನಿಗೆ ಬಾಳೇವ ಮಾಡೂದಕ ಆಗಲಿ ನಿಮ್ಮ ಸುಖದುಃಖಾ
ಯಾಕ ನಿಂತೀದಿ ನಿನಗೇನು ಭಯವಿಲ್ಲಾ || ೬ ||

ಇ|| ಹೋಗಿ ಅಬೂಸ್ವಾಲೆಹಾ ನಿಂತಾರೋ ಬಾಗಿಲಲ್ಲಿ
ಅಲ್ಲಿ ಹೆಣತಿನ ನೋಡಿ ದಿಕ್ಕ ತಪ್ಪಿತಲ್ಲಾ
ಏರು || ಹೆಣ್ಣಿನ ತಾರೀಫಾ ಹೇಳುದಕ ನೆಪ್ಪಾ
ದಿಕ್ಕು ತಪ್ಪಿ ಅವಂದು ಅಂವಗ ನೆನಪಿಲ್ಲಾ
ಚ್ಯಾಲ || ಓಡಿ ಬಂದು ಸಾವಕಾರನ ಕಡೆಗೆ ಹೇಳತಾನೋ ಒದರಿ
ಕಣ್ಣು ಕಾಲು ಬಾಯಿ ಇಲ್ಲಂತ ಹೇಳದಿರಿ
ಪರಹೆಣ್ಣಿನ ನೋಡಿ ಮಾಡಿದೆ ಬಹು ಪಾಪಾ
ಹೀಂಗ ಹೇಳಬಾರದು ಬೂಪಾ
ಕೋಪಾ ಏನಾರ ಇದ್ದರ ಹೇಳರಿ ನನ್ನ ಮೇಲಾ || ೭ ||

ಶ್ರೇಷ್ಠಾ ಸಾವುಕಾರ ಅಂದಾ ಅಬೂ ಸ್ವಾಲೆಹಾ ಶರಣರ ಮುಂದಾ
ಏನು ಇಲ್ಲೊ ಬಿನ್ನಬೇದ ನಿನ್ನ ಮೇಲಾ ||
ಏರು || ಮೂಕಿ ಅಂದೆನಿಲ್ಲಾ | ಆಕಿ ಯಾರಗೂಡ ಮಾತಾಡುದಿಲ್ಲಾ ||
ಕಣ್ಣೀಲೆ ಯಾರನು ನೋಡೂದಿಲ್ಲಾ
ಚ್ಯಾಲಿ || ಬಾಯಿಲ್ಲಂದರ ಮಂದಿಗೆ ನಿಂದೆ ಎಂದಿಗೂ ಆಡ್ಯಾಳು
ಶಿವಧ್ಯಾನ ಮಾಡತಾಳೋ ನಿತ್ಯ ಹಗಲಿ ಇರುಳು
ಬಾಗಲದಾಟಿ | ಹೊರಗ ಮೊದಲ ಬಂದಿಲ್ಲಾ | ಅದಕ ಅಂದೇನು ಕಾಲಿಲ್ಲಾ
ಕೈಲೆ ಮಂದಿ ಬದುಕ ಮುಟ್ಟೂದಿಲ್ಲಾ || ೮ ||

ಅಬೂಸ್ವಾಲೆಹಾ ಆಗ ಚಿಂತೆ ಬಿಟ್ಟಾರಾಗ
ಸಂತೋಷಾಗಿ ಮನದಾನ ಬಿಟ್ಟ ಜಲ್ಲಾ
ಏರು || ಮನಿಗೆ ಹೋದನೋ ಶರಣಾ | ಮುಗದೀತೋ ಬಯ್ಯಾನಾ
ಹೆಸರಾದಾವಾಗ ಏನೇನಿಲ್ಲಾ ||
ಚ್ಯಾಲ || ಗಟ್ಟಿ ಬಾಗಲಕೋಟಿ ಪ್ಯಾಟಿ ಇರುವದು ಸೇಲಾ
ದಸ್ತಗೀರ ಕೇಸುಪೀರ ಹಸ್ತ ಇಟ್ಟರಲ್ಲಾ
ನಾಗೂ-ಗೌಸೂನ ಪದಕ ಅನ್ನುವರೋ ಸೈ ಸೈ
ಗೆಜ್ಜೆ ಕಟ್ಟಿ ಕುಣಿಯೂದು ಥೈ ಥೈ
ವೈರಿ ನೋಡಿ ನಾಯಿಹಾಂಗ ಕಿಸ್ತಾನೋ ಹಲ್ಲಾ || ೯ ||

* * *

## ೧೨. ಇಸ್ಮಾಯಿಲ ಪೈಗಂಬರರ ಕಾಲಿನ ತುದಿಯಿಂದಾದ ನೀರಿನ ಪವಾಡ

ಜಗದಲ್ಲಿ ಜಾಹೀರ ಈ ಮಾತು ಕೇಳರಿ ಜನರೆಲ್ಲಾ
ಪ್ರಪಂಚದ ತಾಪ ಒಳ್ಳೊಳ್ಳೆ ಶರಣರಿಗೆ ತಪ್ಪಿಲ್ಲಾ
ಇಬ್ರಾಹಿಮ ಪೈಗಂಬರ ಆತನ ಇಬ್ಬರ ಹೆಂಡರಾ

ಸಾರಾ ಹಾಜರಾ ಹೆಸರು ಆವಾಗ ಒಂದು ಹುಟ್ಟಿತೋ ಪುತ್ತರಾ
ಆರೇಳು ತಿಂಗಳದ ಇಸ್ಮಾಹಿಲ ಇದ್ದ ಸಣ್ಣ ಕಮಲಾ || ೧ ||

ಇಬ್ಬರು ಹೆಂಗಸರ ಒಳಗ ನಡೀತ್ತೊ ಜಗಳ
ಅವರಿಬ್ಬರ ಹೆಂಡರು ಇಬ್ರಾಹಿಮನ ಜೀವಕ್ಕ ಆಗಿದ್ದರೋ ಮೂಲ
ಏನು ಹೇಳಲಿ ಮನಿಯಾನ ಕದನಾ | ಕೇಳಿ ಬೇಜಾರ ಆದ ಬಗವಾನಾ
ತಗದಾನೋ ಒಂದ ಇಕ್ಕಿ | ಇಬ್ರಾಹಿಮಗ ಹೇಳ್ಯಾನೋ ಹಿಕಮತಿ
ಮಗ ಹೆಂಡತಿನ ಮಾಡೆಂದ ಸಾಂಬ ಒಯ್ದು ಅಡವಿ ಪಾಲಾ || ೨ ||

ಶಿವಸಾಂಬನ ಆಜ್ಞಾ ಶರಣ ಎಂದು ಮೀರೂದಿಲ್ಲಾ
ಸತಿಸುತನ ಕರಕೊಂಡ ಆರ್ಯಾಣಹಾದಿ ಹಿಡಿದನಲ್ಲಾ
ಮಕ್ಕಾದಲ್ಲಿ ಬಿಡುವೆನೆಂದು ಮಡದಿಗೆ ಹೇಳಿ ಸನಮಂತು
ಕರಕೊಂಡ ನಡೆದಿದ್ದ ಸುದ್ದಿ ಏನು ಹೇಳಲಿ ಅರಣ್ಯದಾ
ಮನುಷ್ಯ ಪ್ರಾಣಿ ಏನು ಹಕ್ಕಿ ಪಕ್ಕಿ ಸುಳುವು ಇಲ್ಲಾ || ೩ ||

ಅಂತ ಜಾಗದಲ್ಲಿ ಇಬ್ರಾಹಿಮ ಕರದೊಯಿದಾನಲ್ಲಾ
ಆರು ತಾಸು ಮೀರಿತೋ ಹೊತ್ತು ಕೆಟ್ಟ ಬ್ಯಾಸಿಗಿ ಬಿಸಲಾ
ಮೊದಲೆ ಅಮೃತ ಅರಸನ ಮಗಳ ರೂಪದಲ್ಲಿ ಇದ್ದಳೋ ನಿವ್ವಳಾ
ಬಿಸಲಮಾರಿ ಎಂದು ಕಂಡಿದ್ದಿಲ್ಲೊ ಯಾವಾಗ ಹೊರಬಿದ್ದ |
ಅಂತಾಕಿನ ಕರಕೊಂಡು ನಡದಾನೋ ಶಿವನ ಹುಕುಮ ಮೇಲಾ || ೪ ||

ಬ್ಯಾಸಗಿ ಬಿಸಲಾಗ ನಡೆದು ಒಣಗಿತೋ ಗಂಟಲಾ
ಮೈಯೆಲ್ಲಾ ಕಾವೇರಿ ಸೇದಿಕೊಂಡಿತೋ ಮೊಲೆಹಾಲಾ
ಗಂಡಗ ಅಂತಾಳೋ ಈಗ ನೀರು ತಂದು ಕೊಡಬೇಕು
ನನಗ ಉಳಿಯದಿಲ್ಲೊ ಪ್ರಾಣಾ ವ್ಯರ್ಥ ಸಾಯತೇನಿ ಸುಮ್ಮನಾ
ಮೊಲೆಯಾಗ ಹಾಲು ಇಲ್ಲದ ಕೂಸು ಅಳತಿತ್ತೊ ಸಣ್ಣ ಕಮಲಾ || ೫ ||

ಇಬ್ರಾಹಿಮಗ ಇಷ್ಟ ನೆವನ ಬೇಕಾಗಿತ್ತಲ್ಲಾ
ಹುಡುಕಿ ನೀರು ತರುವೆನೆಂದು ಮನಿಹಾದಿ ಹಿಡಿದನಲ್ಲಾ
ಒಂದು ಮರದ ಕೆಳಗ ನಾರಿ ನೋಡೂತ ಕುಂತಾಳ ತನ್ನ ಗಂಡನ ಹಾದಿ
ಆಯಿತೊ ಬಹುತ ದೇರ ಯಾವಾಗ ತರತಾರೋ ನೀರ
ಕೂಸಿನ ಗಿಡದ ಕೆಳಗ ಹಾಕಿ ತಾನೇ ನಡದಾಳಲ್ಲಾ || ೬ ||

ಹುಡುಕ್ಯಾಳೋ ಅರಣ್ಯ ತಿರುಗಿ ನೀರ ಸಿಗಲಿಲ್ಲ ಮತ್ತೊ
ಕೂಸಿನ ಕಡಿ ಆಯಿತೋ ಅಮಲಾ
ಅದೇ ಮರದ ಟೊಂಗಿಯ ಮೇಲಾ ಮಧುವಂದು ಇಟ್ಟಿತ್ತೋ
ಆಸರ ಆದಿತ್ತೋ ಸಾಂಬನ ಆಜ್ಞ ಸುರುವಿ ಬೀಳತಿತ್ತೊ ಹನಿಹನಿ
ಕೂಸು ನೆಕ್ಕಿ ಸಮಾಧಾನಲಿಂದ ಬಿದ್ದಿದ್ದ ಕುಶಿಯಾಲಾ || ೭ ||

ತಾಯಿ ನೋಡಿ ಬಿಟ್ಟಳೋ ಚಿಂತಿಲ್ಲಾ
ಕೈಕಾಲು ಆಡೂತ ಬಡಿಯಾಂತ ಬಿದ್ದಿದ್ದ ಇಸ್ಮಾಯಿಲ
ಕಾಲಾಡೋ ಜಾಗದಲ್ಲಿ ಉಸುಕೆಲ್ಲಾ ಬೈಲಾಗಿ ಕಾಣತಿತ್ತೋ ಕೆಸರಾ
ಕುಂತ ನೋಡ್ಯಾಳೋ ಹಾಜರಾ ||
ಕಟಗಿ ಒಂದು ಕೈಯಾಗ ತಗೊಂಡು ಕೆದರತಾಳ್ರಿ ನೆಲಾ || ೮ ||

ತೋಡ್ಯಾಳೋ ಗೇಣುದ್ದ ತೆಗ್ಗ ಹೊಂಟಿತೋ ನೀರಜಲ
ಪೂಜೆ ಮಾಡಿ ಅದೇ ನೀರ ಶಿವನಧ್ಯಾನಾ ಮಾಡಿದಳಲ್ಲಾ
ನಮಾಜ ಓದಿ ನೋಡ್ಯಾಳೋ ಬಂದ
ತೆಗ್ಗ ತುಂಬಿ ನೀರಿನಿಂದ ಕುಡಿದಾಳೋ ನೀರಕುಂತಾ
ಮನಸಿಗೆ ಆಯಿತೊ ಸನುಮಂತ
ಏಸೋ ವರ್ಷ ಏಸೋ ದಿವಸ ಅಲ್ಲಿ ಕಾಲ ಕಳೆದರಲ್ಲಾ || ೯ ||

ಎಷ್ಟೋ ವರ್ಷದ ಮೇಲೆ ಇಬ್ರಾಹಿಮ ಕಲಿಲುಲ್ಲಾ
ಸತಿಸುತರ ಹುಡುಕುತ್ತ ಅಡವಿಹಾದಿ ಹಿಡಿದರಲ್ಲಾ
ಸತಿಸುತನ ನೋಡಿ ಕುಶಿಯಾದ ಕಾಯುವ ನೀ ಸಾಕ್ಷಾತ್ ಸ್ಮರಣಿ ಮಾಡಿದರಲ್ಲಾ
ಮೂವರು ಕುಂತಾರ ಕುಶಿಯಾಲಾ
ಎಷ್ಟಂತ ಹೇಳಲಿ ಮಾಫಮಾಡರಿ ದೈವೆಲ್ಲಾ || ೧೦ ||

ಸಗರಗಡ್ಡಿ ಸಂಸ್ಥಾನದಲ್ಲಿ ಶಹಪುರ ಮಿಗಿಲಾ
ಮೋದಿನ ಪೀರನ ಕರುಣ ಶೇಖ-ನಬಿ ಮೇಲಾ
ಅಬ್ದುಕಾಸೀಮನ ವಾಸದಲಿ ಹುಡುಗರು ಜಮ್ಮೆತಿ ಹಾಡೂದು ಒಳ್ಳೆ ನಿವ್ವಳಾ
ಮುತ್ತಿನಾಗ ಪೋಣಿಸಿದಂಗ ಹವಳಾ
ಶಾಹೀರ ಕೇಳಿ ಓಡಿ ಹೊದನೋ ದಿಕ್ಕಪಾಲಾ || ೧೧ ||

* * *

## ೧೨. ಇಬ್ರಾಹಿಮ್ ಖಲೀಲುಲ್ಲಾರ ಪದಾ

ಮೊದಲಿಗೆ ಎನ್ನುವುದು ಬಾಯಲಿ ಬಿಸಮಿಲ್ಲಾ
ಬಿಸಮಿಲ್ಲಾನ ಹೊರತಾವ ನುಡಿಯಿಲ್ಲಾ || ಪಲ್ಲವಿ ||

ಏರು || ಅಲ್ಲಾನ ಹೊರತು ಯಾವ ಮಾತಿಲ್ಲಾ
ಸಲ್ಲು ಸಲ್ಲಿಗೆ ಅಂತಾರ್ರಿ ಬಿಸಮಿಲ್ಲಾ
ಇಬ್ರಾಹಿಂ ಖಲೀಲುಲ್ಲಾ ಕೇಳಬೇಕಲ್ಲಾ
ಕಾಬಾ ಕಟ್ಟಾಕ ಹತ್ಯಾರ ಸುಳ್ಳೇನಲ್ಲಾ

ದರದಿವಸ ಕಾಬಾ ಕಡಕೊಂಡು ಬೀಳುವುದಿಲ್ಲಾ
ಅದು ಎಲ್ಲಾ ಶಿವನಿಗೆ ತಿಳಿದೀತಲ್ಲಾ || ೧ ||

ಇ|| ಜುಬರಾಹಿಲ ದೂತರಿಗೆ ಆಗ ಹೇಳಿ ಕಳಿಸಿದನಲ್ಲಾ
ಅವರಿಗೆ ಹೋಗಿ ನೀವು ಈ ಸುದ್ದಿ ಹೇಳಬೇಕಲ್ಲಾ
ಏರು || ನಿಮ್ಮ ಮಗಾ ಇರುವನು ಇಸ್ಮಾಯಿಲಾ
ಅವನಿಗೆ ಮಾಡಬೇಕರಿ ಹಲಾಲಾ
ಹಂಗಾದರೆ ಕಾಬಾದ ಪಾಯಾ ನಿಲ್ಲುವದಲ್ಲಾ
ಚಿಂತಿ ಮಾಡುತ ಹೋದರು ಮನಿಗೆ ಖಲೀಲುಲ್ಲಾ
ಆಮೇಲೆ ಬಂದು ಕೇಳಿದ ಇಸ್ಮಾಯಿಲಾ
ಯಾಕ ಚಿಂತಿ ಮಾಡತೀರಿ ನನಗೆ ಹೇಳಬೇಕಲ್ಲಾ || ೨ ||

ಇ|| ಆಗ ಹೇಳಿದಾರೋ ಇಬ್ರಾಹಿಂ ಖಲೀಲುಲ್ಲಾ
ನೀನೊಬ್ಬ ನನಗೆ ಮಾಡಬೇಕು ಹಲಾಲಾ
ಏರು || ಹಂಗಾದರೆ ಪಾಯಾ ನಿಲ್ಲುವದಿಲ್ಲಾ
ಅಷ್ಟು ಮಾತಿಗೆ ಒಪ್ಪಿಕೊಂಡಾರೋ ಇಸ್ಮಾಯಿಲ
ನಾನು ಆಗತೇನಿ ಕಾಬಾದ ಮೇಲೆ ಹಲಾಲಾ
ಸಂಗತೀಲೆ ಕರಕೊಂಡು ಹೊರಟಾರೋ ಖಲೀಲುಲ್ಲಾ
ಪಾಯಾದ ಮೇಲೆ ಆಗ ಮಗನಿಗೆ ಮಲಿಗ್ಯಾಸರಲ್ಲಾ
ಚೂರಿ ತಗೊಂಡು ಮಾಡತಾರೋ ಹಲಾಲಾ || ೩ ||

ಇ|| ಏನಾದರೂ ಆಗಲಿಲ್ಲರಿ ಹಲಾಲಾ ||
ಚೂರಿ ಆಗ ಹೇಳತಿರಿ ಖಲೀಲುಲ್ಲಾ
ಏರು || ಹಂಗ ನಿಮ್ಮ ಮಗ ಆಗೂದಿಲ್ರಿ ಹಲಾಲಾ
ಕಣ್ಣಿಗೆ ಈಗ ನೀವು ಪಟ್ಟಿ ಕಟ್ಟಬೇಕಲ್ಲಾ
ಪಟ್ಟಿಕಟ್ಟಿ ಮಗನಿಗೆ ಮಾಡರಿ ಹಲಾಲಾ
ಕಣ್ಣಿಗೆ ಪಟ್ಟಿ ಕಟ್ಯಾರೋ ಖಲೀಲುಲ್ಲಾ
ಪಟ್ಟಿಕಟ್ಟಿ ನುಡಿದಾರೋ ಬಿಸಮಿಲ್ಲಾ
ಸ್ವರ್ಗದಿಂದ ದುಂಬಾ ಬಕರಾ ಇಳಿದೀತಲ್ಲಾ || ४ ||

ದುಂಬಾ ಬಕರಾ ಆದೀತಲ್ರಿ ಹಲಾಲಾ
ಆಗ ಸಿಟ್ಟೀಲೆ ಕೇಳ್ಯಾರ್ರಿ ಖಲೀಲುಲ್ಲಾ
ಖಡ್ಗ ಸಮುದ್ರದೊಳಗ ಬೀಸಿದರಲ್ಲಾ
ಸಿಗಡಿ ಸೆಟೆದು ಬಿದ್ದೀತು ಸುಳ್ಳೇನಲ್ಲಾ
ಏಡಿ ಅಡ್ಡ ನಡೆದೀತೋ ಕೇಳಬೇಕಲ್ಲಾ
ಮೀನು ಆದಿತ್ರಿ ಸಿಕ್ಕೂ ಹಲಾಲಾ
ಅಂದಿಂದ ಆತು ಮೀನ ಹಲಾಲಾ || ೫ ||

ಕುರ್ಬಾನಿ ಮಾಡೂದು ಅಲ್ಲಿಂದ ಜಾಹೀರ ಆದೀತಲ್ಲಾ
ಧರೆಯೊಳು ಕಾಗಿನೆಲ್ಲಿ ಕವಿಗಳಾ
ಕವಿ ಮಾಡಿ ಹೇಳಿದಾರೊ ಹುಡುಗುರಾ
ಅವರ ಮಾನಕ್ಕೆ ಕಾಯಪ್ಪಾ ಶಂಕರಾ ||

* * *

## ೧೪. ಶಿವನಾಗಬಯಸಿದ ಫರವೂನನಿಗೆ ಬುದ್ಧಿ ಕಲಿಸಿದ ಮೂಸಾ ಹಾರೂನ್ ಪೈಗಂಬರರು

ಪಂಡಿತ ಪಂತರ ಮುಂದ ಶಾಸ್ತ್ರ ತಗದೇನಿ ಒಂದ ಕೇಳರಿ ಧ್ಯಾನಕ ತಂದ ಜನರೆಲ್ಲಾ
ಮೂಸಾ ಹಾರೂನ ಇವರು ಖಾಸ ಅಣ್ಣ ತಮ್ಮರು | ಸಾಂಬನ ಸ್ಮರಣಿ ಇವರು ತಪ್ಪದೆ ಮಾಡುವರು
ಫರವೂನ ಅಂಬಾವಾ ಹೀನ ಮನುಷ್ಯ ಇದ್ದ ನಿಕಮ್ಮಾ | ತುಸು ಕೇಳರಿ ಕಲ್ಮಾ
ನನ್ನಾಂಗ ಈ ಜಗದಾಗ ಯಾರಿಲ್ಲಂತಾನ್ರಿ ಹುಮ್ಮಾ | ನಾನೇ ಹರಿಬ್ರಹ್ಮಾ
ಏಕಭಾವದಿಂದ ಸೇವಾ ಮಾಡರಿ ತಪ್ಪದೆ ನೇಮಾ | ನನ್ನ ಮ್ಯಾಲಿಟ್ಟ ಪ್ರೇಮಾ
ಹ್ಯಾಂವಕ ಬಿದ್ದಾನಂವಾ ಅಂತಾನ್ರಿ ನಾನೇ ಶಿವಾ
ನನ್ನ ಹೊರ್ತು ಇಲ್ಲ ಯಾಂವಾ ಭೂಮಿಮ್ಯಾಲಾ || ೧ ||

ಒಂದಾನ ಒಂದ ದಿವಸ ಸಾಂಬನ ಆದೀತ ಮನಸ | ಅಳಿಬೇಕ ಇವನ ವಂಶ ಅಂತಾರಲ್ಲಾ
ಗರುಬಂತ ಫರವೂನಗ ಕರದುದಾ ಮೂಸಾಗ | ತಿಳಿಸಿ ಹೇಳ್ಯಾರ ಅಂವಗ
ಬಿಡಬ್ಯಾಡರಿ ಫರವೂನಗ ಲಗುಬಗಿ ನೀವು ಹೋಗಿ ಹೇಳರಿ |
ಆತನ ಹುಜುರಾ | ಆದಂತಾ ಮಜಕೂರಾ |
ನಡಕಟ್ಟಿ ಹೊಂಟಾರ ಭೆಟ್ಟಿ ಆಗೂಕ ಬಿಟ್ಟಾರೋ ನಗರಾ
ಮೂಸಾ ನಡೆದಾನೋ ತೀವರಾ | ಆ ಶ್ಯಾರ ಒಳಗ ಯಾರೂ ಹೋಗಿ ಆಗಿಲ್ಲ ಪಾರಾ
ಇತ್ತ ಬಾಳ ಬಯಂಕರ ಬ್ಯಾಸಿಗಿ ಬಿಸಲಾಗ
ಮೂಸಾ ಹಾರೂನ ಆಗ | ಫರವೂನನ ಸೀಮ್ಯಾಗ ಬಂದಾರಲ್ಲಾ ||೨||

ಮೂಸಾ ಫರವೂನಗ ಕರದಾ | ಶಿವಾ ಅಂಬುದು ಬಿಡೋ ಶಬ್ದಾ
ನಡಿ ಏಕಭಾವದಿಂದಾ ಇಟ್ಟ ಖ್ಯಾಲಾ ||
ಫರವೂನಗ ಬಂತ ಸಿಟ್ಟ ಮನಸಿಗೆ ಹತ್ತಿತ ಪೆಟ್ಟಾ
ಈ ಬುದ್ಧಿಯಾಂವಾ ಕೊಟ್ಟಾ | ಶಿವಾ ನಾ ಅನಿಸಿನಿ ಬಂಟಾ
ಪುಂಡ ಫರವೂನ ತನ್ನ ದಂಡಿಗೆ ಕರೆಸಿ ಕೊಡಬೇಕಂದಾ ಫಾಸಿ
ಪರವಾನಿ ಅವನ ಗ್ಯಾನಿ ಇದ್ದ ಆತನ ಕರಸಿ | ಮಾಡಂದಾ ಚೌಕಾಸಿ
ಕೈಕಾಲ ಕಟ್ಟಿ ಮೇಲಮಾಳಗಿ ಮ್ಯಾಲ ಏರಿಸಿ ಒದಿಟ್ಟಾನೋ ಹೇಸಿ
ಅಂತಾರೋ ಮೂಸಾ ಹಾರೂನಾ | ಕಾಯಬೇಕೋ ನಮ್ಮ ಮಾನಾ
ರಾತ್ರಿ ಹಗಲಿ ಶಿವನ ಧ್ಯಾನಾ ಮಾಡುವರಲ್ಲಾ || ೩ ||

ಪರದಾನಿ ಮರು ದಿವಸ | ಕೇಳತಾನೊ ಯಾಕೋ ಮೂಸಾ | ಏನೈತಿ ನಿಮ್ಮ ಮನಸಾ
ಹೇಳೋ ಖುಲ್ಲಾ | ಮೂಸಾ ಹಾರೂನ ಸಿಟ್ಟಿಗೆ ಬಂದಾ | ಆಗಲಿ ನಿಮ ನಮ್ಮದಾ
ಪಾರಾಗಿ ಹೋಗೋ ಬೆಳದಾ | ಅಂತೇನಿ ನಾ ಮರದಾ
ನಿನ್ನ ಶಿವಗ ಹೇಳು ಹೋಗೋ ನೋಡೂನು ಬರಲಿ ಕದನಕ
ತಿಳೂತೈತಿ ನಿಮ್ಮ ಬೆಳಕ | ಮಳ್ಳ ಶಿವಗ ನೀವು ಸುಳ್ಳ ಬೆಳಸುವದು ಯಾತಕ
ಅನಬಾರದ ದೃಷ್ಟ | ಇಷ್ಟ ಕೇಳಿ ಪರದಾನಿ ಹೊರಳಿ ಹೋದ ಅರಸನ ಹಂತ್ಯಾಕ
ಸಿಟ್ಟು ಹತ್ತಿತೋ ಮನಕ | ಮೂಸಾ ಹಾರೂನ ಕೂಡಿ | ಶಿವಾ ಯಾಕ ಅಂತೀರಿ ಖೋಡಿ
ನೋಡೂನು ಇವನ ನಾಡಿ ಅಂತಾರಲ್ಲಾ || ೪ ||

ಫರವೂನ ಪರದಾನಿ ಮಾತಕೇಳಿ ಅಂತಾನೋ ತುರತ
ಅಂವಾಯಾವ ಪಂಡಿತಾ | ಇದ್ದಾನಲ್ಲಾ | ದಂಡ ದರಬಾರ ಮಾಡಹೋಗ ತಯ್ಯಾರಾ
ಏನು ಮಾಡ್ಯಾರೋ ಅವರಿಬ್ಬರಾ | ಕೊಯ್ಯಬೇಕೋ ಅವರ ಶಿರಾ
ಹೇಳಿ ಪರದಾನಿ ಓಡಿ ಹೋಗಿ ದಂಡ ತಂದಾ | ಬಾಳ ಹರುಷಾಗಿ ಹೋದಾ
ನಿಮ್ಮ ಮರಣಾ ಶರಣ ಮೂಸಾಗ ಹೇಳ್ಯಾನ ಕರದಾ | ಈಗ ತಿಳೂತೈತಿ ನಿಮ್ಮದಾ
ಮೂಸಾ ಹಾರೂನ ಹಿಗ್ಗಿ ಕೈಯಾಗಿತ್ತ ಊರುವ ಬಡಗಿ
ಭೆಟ್ಟಿ ಆಗ್ಯಾರ ಅರಸಗ ಹೋಗಿ ತತ್ಕಾಲಾ || ೫ ||

ಪರಮಾತ್ಮಾ ನಾ ಅನಿಸಿನಿ ಮೂಡು ಮುಣುಗುವಲ್ಲಿ ವಾಹಿನಿ
ಸುಳ್ಳ ಅಂದರ ಸುಲುತೀನಿ ಮೈಯ್ಯಾನ ತೊಗಲಾ | ಮೂಸಾ ಅಂತಾರ ಅಂವಗ
ಮರತೇನ ಹುಟ್ಟಿಸಿದವಗ | ಯಾಕಿಷ್ಟ ಹಮ್ಮ ನಿನಗ | ಹೇಳ್ಯಾರ ಫರವೂನಗ
ಸಿಟ್ಟೇರಿ ಫರವೂನ ವೈರಿ ಮೂಸಾಗ ತೂರಿ | ಒಗಿಯಬೇಕ | ದಂಡ ಬಂತ ಆಕ್ಷಣಕ
ಸ್ವರ್ಗದಿಂದ ಸಪ್ಪಳ ಒಂದ ಮೂಸಾಗ ಬಂದಿದ ಬಳಿಕ | ಖುಷಿ ಆಗ್ಯಾರೋ ಮನಕ
ಊರುವ ಬಡಗಿ ಒಗದಾರೋ ಜಗ್ಗಿ | ಸರ್ಪಾಗಿ ಆ ಜನಕ | ದಂಡ ಅಂಜಿತೋ ಜೀವಕ
ಎಪ್ಪತ್ತು ಸಾವಿರ ಜನಾ | ನುಂಗಿತೋ ಆ ಕ್ಷಣಾ | ಮಾಡಲಿಲ್ಲೊ ಅನುಮಾನಾ ತಡಾಯಿಲ್ಲಾ || ೬ ||

ಅರಸಗ ಬಂದಿತ್ತೊ ಅಗಾದಾ | ಹಾಳಾತೋ ಪಟ್ಟಣಾ ನಂದಾ |
ನೆಲಾ ಅವಾ ಬರುತಿದ್ದಾ ಹೊಕ್ಕ ಬುಗಿಲಾ |
ಮೂಸಾ ಹೇಳ್ಯಾರೋ ಅಂವಗ ಫರವೂನ ಅರಸಗ
ಸಿಟ್ಟು ಹತ್ತಿ ಪರದಾನಿ ಯುಕತಿ ತಗದಾನ
ಚಿಂತಿಸಬ್ಯಾಡಾ | ತರತೇನಿ ದಂಡಾ | ಬಂಗಾಲಿ ದೇಶದಲ್ಲಿ | ಇರತಾರೋ ಅಲ್ಲಿ
ಮುಖಂಡಾ | ತಂದ ಎಬಸೂನು ಬಂಡಾ | ತೊಟ್ಟ ದೀರ | ಹೋದ ಶೂರ
ಮಹಾ ಗಂಭೀರ ತಾಯಿಗಂಡ | ಜಾದು ಮಂದಿಗೆ ತಂದಾ
ಎಪ್ಪತ್ತು ಸಾವಿರ ಗಾರುಡಿ ಜನರಾ | ಅರಸನ ಇದರಾ ತಂದಾನಲ್ಲಾ || ೭ ||

ಬಾಳ ಬಾಳ ನೀ ಬೆಳಸಿದ್ದೆ | ನನ್ನ ಮುಂದ ತೋರಿಸು ಸಧ್ಯೆ
ನೋಡೂನು ಇವರ ವಿದ್ಯೆ | ಬುದ್ದಿ ಅಕಲಾ | ಮಾಡ್ಯಾರ ಬಂಗಾಲಿ ಆಟಾ | ನೋಡ್ಯಾನ ಕಣ್ಣಮುಟ್ಟಾ
ಅರಸ ಅಂದಾ ಬಲಿಷ್ಟಾ | ನಿಮ್ಮ ಹೊರ್ತು ಯಾರಿಲ್ಲಾ ಶ್ರೇಷ್ಟಾ

ತಿರುವ್ಯಾರೋ ಮೋಡಿ ಯಾರೂ ಇಲ್ಲ ನಮ್ಮ ಸಮಾನ | ಖರೆ ಗುರುವಿನ ವಚನಾ
ಮಂತ್ರಿಸಿ | ನೀರ ಸಿಂಬಡಿಸಿ | ಒಗದಾರೋ ಗಾರುಡಿ ಜನಾ | ಮೂಸಾಗ ಆಗಲಿಲ್ಲ ಏನಾ
ಸಿಟ್ಟಾಗಿ | ಒಗದಾರೋ ಬಡಗಿ | ಹಾವ ಆದಿತೋ ಆಕ್ಷಣಾ | ನುಂಗಿತೋ ಎಲ್ಲರನಾ |
ಫರವೂನ ಕಯ್ಯಾನ ಕಬ್ಜಾ ಕಳಕೊಂಡಾನೋ ಆ ದುರಬೀಜಾ
ಜಗದಾಗ ಆದಾನೋ ಲಜ್ಜಾ ಫರವೂನಾ || ೮ ||

ಏನಂತ ತೋರಸಲಿ ಮಾರಿ | ಪಾಪಕ ಆದೇನೋ ಗುರಿ
ಸಮುದ್ರದೊಳಗ ಬಿದ್ದಾನೋಹಾರಿ | ಹೋತೋ ಉಸಲಾ | ಮೂಸಾ ಹಾರೂನ ಇವರಾ
ಪಟ್ಟಣಕ ಆದ್ರೋ ಅಧಿಕಾರಾ | ಗುರು ನಮ್ಮ ದಸ್ತಗೀರ ಕರುಣುಳ್ಳ ಕೇಸುಪೀರಾ
ರಾಗರಂಗ ಲಕ್ಷ್ಮಣಸಿಂಗ | ಹೇಳ್ಯಾರ ಹೀಂಗ ಕವಿಮಾಡಿ
ಅಕ್ಷರ ಬರಬೇಕ ಕೂಡಿ
ಲಾಲಡೋಂಗ್ರಿ ಮಾಡ್ಯಾರ ಸೂರ | ನಾಚಿವೈರಿ ಹೋದ ಓಡಿ | ನೀ ಅಲ್ಲ ಅವರ ಜೋಡಿ
ಅಡಿ ಪ್ರಾಸ ಮಾಡಿ ಸರಸ | ಹಾಡ ತೋಡಿಗೆ ತೋಡಿ
ಸುಮ್ನ್ಯಾಕ ಕುಂತೀದಿ ಲವುಡಿ | ಶಾಹೀರ ಆಗಿ ಗಾಬಾ
ಕುಂತಾನ ಮಳ್ಳ ಕುರುಬಾ | ಕೊಯಿದೇನ ನಿನ್ನ ತುರಬಾ | ಬಿಡಲಾರೆ || ೯ ||

* * *

## ಮಾಬುಸುಬಾನಿ ಮತ್ತು ಇತರ ಸೂಫಿ ಸಂತರಿಗೆ ಸಂಬಂಧಿಸಿದ ಪದಗಳು

### ೧. ಕಾಮುಕ ಹೆಣ್ಣಿಗೆ ಕ್ಷಮಿಸಿದ ಮಾಬುಸುಭಾನಿ

ಧರಣಿಪಾಲಾ ಕರುಣವಿರಲಿ | ಚರಣಕ್ಕೆ ಎರಗುವೆ ನಾ || ಪಲ್ಲವಿ ||

ಏರು || ಕಂದಾ ಇಂದ ಬಂದಾ ಮುಂದಾ | ಹುರಷದಿ ಸಾರುವೆ ನಾನಾ
ಕುಶೀಲೆ ಕೇಳರಿ ಜನಾ | ವೈಬೂಬರ ಬೈಯಾನಾ | ಸ್ವಾಮಿ ಶರಣಾ
ಇವರ ವರಣಾ | ಒಬ್ಬ ಬಾಲಿ ನೋಡಿದಾಳೊ ತಾನ | ಮರುಳಾಗಿ ನಿಂತಳಲ್ಲಾ || ೧ ||

ಇ|| ಸುಂದರ ಹೆಣ್ಣಾ ಬಂದು ತಾನಾ | ಮಾಡಿ ಯೋಚನಾ
ಏರು|| ಧನಿ ಮುನಿ ಮೌನಿ ಕರುಣಿ | ಬಿನ್ನಪಾ ಲಾಲಿಸೋ ಶರಣಾ
ಮನಿಗೆ ನಡಿರಿ ಇನ್ನಾ ಸ್ವಾಮಿ ಶರಣಾ | ಉಣಿಸುವೆನಾ ಕರಕೊಂಡು
ಹೊರಟಾಳೋ ಹೆಣ್ಣಾ | ಆಗ ತಾನಾ ಮನಿತನಾ || || ೨ ||

ಇಳು|| ಮಂಚದ ಮ್ಯಾಲೆ ಹೂವಿನ ಮಾಲೆ | ಹಾಸಿ ತಕ್ಷಣಾ
ಏರು|| ಶರಣಾ ಜಾಣಾ ಸುಗುಣಾ ಕರುಣಾ | ಕುಂತಾರೋ ಮಂಚದ ಮೇಲಾ
ಇಟ್ಟಾಳೋ ಎಲಿ ಅಡಕಿ ತರಿಸಿ | ನಗುವಳುಕಿಲಿ ಕಿಲಿ | ಅಂಗನಿತಾ | ಮುರುಕಾ
ಮಾಡೂತಾ | ಕರುಣ ಮಾಡಬೇಕ ನೀವು ಶರಣಾ | ಬಿದ್ದಾಳೋ ತೆಕ್ಕಿ ತಾನಾ || ೩ ||

ಇ|| ಶರಣರು ಸೋಸಿ ತಿಳಿದಾರೋ ಬೇಸಿ ಮಾಡಿ ಯೋಚನಾ
ಏರು|| ಭೃಷ್ಟಿ ದುಷ್ಟಿ ಮುಟ್ಟಿ ಕೆಟ್ಟಿ | ಬಿಡು ಬಿಡು ಕೈಯ ನೀನಾ
ಊಟ ಸಾಕು ಹೋಗುವೆ ನಾನಾ | ಬೆಂಕಿ ಹಚ್ಚು ಊಟಕ್ಕೆ ನಿನ್ನ | ಛೀ ಬಂಡಿ ಹುಚ್ಚ ರಂಡಿ
ದೃಢ ಇಡು ನನ್ನ ಮೆಲೆ ನೀನಾ | ತೋರಿಸುವೆ ಸ್ವರ್ಗವನಾ || ೪ ||

ಇ|| ಅಂದಾಳೊ ಬಾಲಿ | ತನ್ನ ಬಾಯಿಲಿ | ಕೇಳರಿ ಶರಣಾ
ಏರು|| ಇಂದ ಬಂದ ಚಂದ ಆನಂದ | ಮಾಡಿರಿ ಸೋಬತಿ ಶರಣಾ |
ಮಾಡದಿದ್ರ ನೋಡರಿ ಇನ್ನಾ | ಗಂಡಗ ಹೇಳಿ ಬಿಗಿಸುವೆ ನಾನಾ | ಕೇಳಿ ಶರಣಾ
ಆಕ್ಷಣಾ | ಹೊರಟು ಹೋದರು ಮಾಯವಾಗಿ ತಾನಾ | ಮಾಡೂತ ಶಿವ ಧ್ಯಾನಾ || ೫ ||

ಇ|| ಭಂಡ ನಾರಿ ತುಂಡ ಚಾಡಿ ಮಾಡಿ ಕಲ್ಪನಾ
ಏರು|| ಕಳ್ಳಿ ಮಳ್ಳಿ ಸೂಳಿ | ತುಂಡ ಕಂಡಿ ಮಾಡ್ಯಾಳ ಗತ್ತ
ಗಂಡ ಬಂದಾಗ ಹೇಳ್ಯಾಳ ಅತ್ತಾ | ಮೈಬೂಬರು ಇವತ್ತ ಬಂದು ನನಗ ಮಾನಭಂಗ
ಮಾಡಿದಾರ ನನಗ | ಹೇಳತೇನಿ ನಾನ ಕೇಳರಿ ಗಂಡ ಇನ್ನಾ || ೬ ||

ಇ|| ಗಂಡ ಬೇಸಿ ತಿಳಿದ ಸೋಸಿ | ಸತಿಯಳ ವಚನಾ
ಏರು|| ಗಂಡ ಕಂಡಾ ಪುಂಡಾ ಆದ ಕೆಂಡಾ | ಸುತ್ತುಳ್ಳ ಶರಣರ ವಂಶ
ಮಾಡಲಾರೆ ನಾನು ಸಂಶಾ | ಬಂದೀತೋ ನನಗ ದೋಷ | ಸತಿಯಳನ್ನ
ಬಡಿದ ತಾನು | ಕಲಿ ಹಚ್ಚಿದೆಲೆ ಶರಣಗ ಇನ್ನಾ | ತವರ ಮನಿಗೆ ನಡಿಯ ನೀನಾ || ೭ ||

ಇ|| ದೋಷದಿಂದ ಆಕೆಗೆ ಬಂದ ಹುಣ್ಣ ಉತ್ಪನ್ನ
ಏರು|| ಗೂಗಿ ಕಾಗಿ ರೋಗಿ ಆಗಿ | ತಗಿಸ್ಯಾಳೋ ಹೊತ್ತಗಿ ನೋಡಿ ಪ್ರಶ್ನೆ
ಹೇಳುವರೋ | ಮೈಬೂಬರ ಕಾಟ ತಪ್ಪದವ್ವಾ ಪರಿಪಾಟ | ಹೋಗ ಪ್ಯಾಲಿ
ಶರಣರಲ್ಲಿ | ಹೋಗಿ ಹಿಡಿದಾಳೋ ಅವರ ಚರಣಾ ಉದ್ದಾರ ಮಾಡ್ರಿ ನನ್ನಾ || ೮ ||

ಇ|| ನೋಡಿ ಶರಣಾ ಮಾಡ ಕರುಣಾ | ಏಳು ತಾಯಿ ನೀನಾ
ಏರು|| ಪಾಪ ತಪ್ಪ ಮಾಪ ಲೋಪ | ಮಾಡಿದೆವು ಉದ್ದಾರ ನಿನ್ನಾ
ಗಂಡನ ಮನಿಗೆ ಹೋಗವ್ವಾ ನೀನಾ | ಹಿಡಿದು ಪಾದವನಾ | ಕೆಟ್ಟ ಗುಣಾ ಬಿಡು ನಿನಾ
ಕೊಡುವನು ಮುಕ್ತಿ ಭಗವಾನಾ | ಆಶೀರ್ವಾದ ಮಾಡುವೆ ನಾನಾ || ೯ ||

ಇ|| ಕವಲೂರ ಕವಿ ದೈವಕ್ಕ ಸವಿ | ವೈರಿಗೆ ಬಂಧನಾ
ಏರು|| ಹಾಡಿ ತೋಡಿ ಜೋಡಿ ಮಾಡಿ ಓಡಬ್ಯಾಡ ನೀ ತಮ್ಮಾ
ಅಡಬರಿಸಿ ಹತ್ತಿ ದಮ್ಮಾ | ಕಡಿಗೆ ನೀ ನಿಕಮ್ಮಾ | ಛೀ ಲವಡಿ
ಹೆಣ್ಣ ಸುಗಡಿ | ಹೂವಿನ ಹಾರ ಹಾಕೋ ನೀನಾ | ಬಿಟ್ಟ ಪಂಥ ನೀನಾ || ೧೦ ||

* * *

## ೨. ಸುಂದರಿಯ ಮಾನ ಕಾಪಾಡಿದ ಮಾಬುಸುಬಾನಿ

ಬುದ್ಧಿವಂತ ಸಭೆಯೊಳು | ನಿಂತ ಹೇಳುವೆ ಬಯ್ಯಾನಾ
ಕವಿ ಮಾಡೂದು ಹುಡುಗಾಟಲ್ಲಾ | ಈ ಮೂರ್ಖಗ ತಿಳುದಿಲ್ಲಾ
ಕಡಿಗೆ ಹೋಗತಾನ ಕೊಯ್ಯಾಕ ಹುಲ್ಲಾ | ಇಲ್ಲಿಂವಗ ಗ್ನಾನಾ || ೧ ||

ಇ|| ಮನಗಂಡ ಪುರುಷವೊಬ್ಬ ಪುಂಡ | ಆದಾನೋ ಲಗ್ಗನಾ
ಆಕಿ ನಾಸಿಕ ಸಂಪಗಿ ಅರಳಾ | ಕಣ್ಣು ಗಲ್ಲ ಕನ್ನಡಿ ಹರಳಾ
ಮುಖ ಹೊಳವತಿತ್ತೊ ಥಳಾ ಥಳಾ | ಸೂರ್ಯನ ಕಿರಣಾ || ೨ ||

ಇ|| ಗಂಡ ಆಗ ಮನಸಿನವೊಳಗ ಹಾಕ್ಯಾನೋ ಯೋಚನಾ
ಈಕೀಗಿಟ್ಟರ ಊರಿನವೊಳಗ | ಬಾಳ ಮಂದಿ ಕಣ್ಣ ಈಕಿಮ್ಯಾಗ
ಅಂಜಿಕಿತ್ತ ಜೀಂವದವೊಳಗ | ತಿಳಿಸ್ಯಾನೋ ಸತಿಯಿಗೆನಾ || ೩ ||

ಇ|| ಪತಿ ಮಾತ ಮನಸಿಗೆ ಬಂತ | ಖುಸಿಯಾದ್ಲೋ ಮೋಹನ್ನಾ |
ಏರು|| ಗಂಡಗುರು ನನ್ನ ತಲಿಮ್ಯಾಲಿ | ನಾ ಇರತೇನಿ ನೀವು ಇಟ್ಟಲ್ಲಿ
ಪತಿರಾಜಗ ಬಿಟ್ಯಾಂಗಿರಲಿ | ಹತ್ಯಾಳೋ ಬೆನ್ನಾ || ೪ ||

ಇ|| ಪತಿ ಮುಂದ ಸತಿಯೊಳು ಹಿಂದ | ನಡದಾಳೋ ಆ ದಿನಾ
ಇತ್ತ ಅಡವಿ ಗುಡ್ಡಗಂವಾರಾ | ಮನುಷ್ಯರದು ಇಲ್ಲೋ ಸಂಚಾರಾ
ಆ ಜಾಗದಲ್ಲಿ ಗಂಡ ಹೆಂಡಿರಾ | ಮಾಡೋರೋ ಬಾಳೇವನಾ || ೫ ||

ಇ|| ಗಂಡ ಹೀಗ ತಾಕಿತ ಆಗ | ಕೊಟ್ಟಾನೋ ಸತಿಗಿನ್ನಾ
ಏರು | ದರದಿನ ಊರಾಗ ಬಂದ ಬೇಗಿ ದುಡದ ಸಂಜಿಕ
ಹೋಗತಿದ್ದಾ ತಿರುಗಿ ತನ್ನ ಮನಸಿನೊಳಗ | ಖುಸಿ ಆಗಿ ನೆನೆವುತಿದ್ದಾ ಮೈಬೂಬನಾ || ೬ ||

ಇ|| ಒಂದು ದಿವಸ ಬಂದ | ಒಬ್ಬ ಅರಸ ಆಡೂತ ಬ್ಯಾಟಿನಾ
ಏರು | ಹವಾಖೋರಿಗೆ ಬಂದಿದ್ದಾಳೋ ಹೊರಗ | ಕಂಡಕಣ್ಣೀಲೆ ಅರಸಾವಾಗ
ಬಂದ ಬವಳಿಕಿ ಬಿದ್ದಾನೋ ತೆಳಗ | ಹಾರಿತೋ ಹೌಸಾನಾ | | ೭ ||

ಇ|| ಖಬರ್ದಾರಿ ಆಗಿ ಅವಿಚಾರಿ | ಕೇಳ್ಯಾನೋ ಆಕಿನಾ
ಏರು|| ದೇವಗನ್ನಕಿಯಂತ ರಂಬಿ | ಕಾಮ ಕ್ರೋಧ ತುಳಕತೈತಿ ತುಂಬಿ
ಖರೇ ಹೇಳ ಸೂತ್ರದಾನ ಗೊಂಬಿ | ಅಡಿವ್ಯಾಗೇನ ಕಾರಣ || ೮ ||

ಇ|| ಆಕಿ ಉತ್ತರ ಕೊಟ್ಟಾಳೋ ವತ್ರ | ಗಂಡ ತಂದಾನ ನಮ್ಮನಾ
ಏರು|| ನನಗಿಟ್ಟ ಈ ಅಡವಿಯೊಳಗ | ದುಡಿಲಿಕ್ಕೆ ಹೋಗ್ಯಾರೋ ಊರಾಗ
ಅರಸಂದಾ ಬಿಡುದಿಲ್ಲ ನಿನಗ | ಒಯ್ಯುತೇನಿ ಬ್ಯಾಗನಾ || ೯ ||

ಇ|| ಆರಸಾಗ ಕುದುರಿಮ್ಯಾಗ | ಕುಂಡರಿಸಿ ಆಕಿನಾ
ಏರು|| ಬಲ್ಲಬರಾಟೆ ಬಿಟ್ಟಾನ ಕುದುರಿ | ಮಹಾಬೂಬಗ ನೆನದಾಳೋ ಒದರಿ
ಎಲ್ಲಿದ್ದೀರಿ ಸ್ವಾಮಿ ಬರ್ರೀ | ಬಿಡಿಸುದಕ ಬಂದಾನ || ೧೦ ||

ಇ|| ಸಂಕಷ್ಟ ಮಾಡುತ ನಷ್ಟ | ಮಹಾಬೂಬ ಶರಣಾ
ಏರು|| ಮೆಚ್ಚಿ ಬಾವುಕ ಕುದುರಿ ಹತ್ತಿ | ಕೈಯಾಗ ಹಿಡಿದ ಬಿಚ್ಚುಕತ್ತಿ
ತಮ್ಮ ಕುದುರಿಗೆ ತಂದರ ಒತ್ತಿ | ಹೊಡದಾರೋ ದುಷ್ಟನಾ || ೧೧ ||

ಇ|| ಪಾದದ ಮ್ಯಾಲಿ ಬಿದ್ದಾಳೋ ಬಾಲಿ | ಹಿಡಿದವರ ಚರಣಾ
ಏರು|| ಸ್ವಾಮಿ ಏನ ಹೇಳರಿ ನಿಮ್ಮ ಹೆಸರಾ | ನನ್ನ ಸಂಕಷ್ಟ ಮಾಡಿರಿ ಪಾರಾ
ನಾ ಮಹಬೂಬ ನನ್ನ ಅಧಿಕಾರಾ | ನಡಿಸ್ಯಾನೋ ಭಗವಾನಾ || ೧೨ ||

ಇ|| ಉಪದೇಶ ತಗೊಂಡಾಳ ಖಾಸ | ಇಟ್ಟ ಏಕಧ್ಯಾನಾ
ಮಾಬೂಬನ ಸೊರಣಿ ಮಾಡಿ | ಗಂಡ ಹೆಂಡರು ಎದ್ದಾರ ಕೂಡಿ
ಶಿವಾ ಗಂಟು ಹಾಕಿದಾನ ಜೋಡಿ | ಮುತ್ತೈದಿತನಾ || ೧೩ ||

ಹಸ್ತ ಇಟ್ಟ ಮತಿ ಹೀಂಗ ಕೊಟ್ಟಾರೋ ದಸ್ತಗೀರ ದೈವಾನಾ
ಕೇಸು ಪೀರಾನ ಸೇವಾದಲ್ಲಿ | ನಾಗು-ಗೌಸು ಇರತಾರ ಅಲ್ಲಿ
ಲಾಲ-ಡೋಗ್ರಿನ ಕವಿಗಳ ಮ್ಯಾಲಿ | ಇಟ್ಟಾಂಗ ಕುಂದನಾ || ೧೪ ||

* * *

## ೩. ಏಳು ಮಕ್ಕಳ ಫಲ ನೀಡಿದ ಮಾಬುಸುಬಾನಿ

ಹಕೀಕತ್ತಾ ದೈವಾ ಕೇಳರಿ ಕುಂತಾ | ಜ್ಯಾತ ಮುತ್ತು ಹುಡುಕಿ ತಗದೇನಿ ಸಿದ್ದಾಂತಾ |
ಏರು | ಹ್ಯಾಂವಕ ಬಿದ್ದಿ | ಹಾಡಲಿಕ್ಕೆ ಬಂದಿ | ಶಾಹಿರಿ ಮಾಡೂದು ನಿನಗ ಸಿಕ್ಕಿಲ್ಲ ಹಾದಿ
ನಿಂತಗೊಂಡ ಬೇದಿ ಪುಗಸೆಟ್ಟಿ ದಣಿದೆ | ಹೇಳಿ ಕೇಳಿ ನಿಂದು
ಹರೂತೀನಿ ಪರಿದಿ | ಸನಮಂತಾ | ಇದ್ದಾಂಗ ಮೈಮ್ಯಾಲೆ ಬಂತಾ
ಡೊಗ್ಗಿಸಿ ನಿಂತಾ | ಇಡತೇನಿ ಮುಕಳಾಗ ಕಿಸ್ತಾ || ೧ ||

ಇ|| ಸಾಕೇನ ಮತ್ತಾ | ಬೇಕ ಬೇಗಳ ಬಡತಾ | ತಗಿಬಾರದಿತ್ತಾ
ತಗದ ದೋತರದಾಗ ಹೇತಾ || ಹಕೀಕತ್ತಾ ದೈವಾ ಕೇಳರಿ ಕುಂತಾ ||
ಏರು|| ಕುಂತಿರು ಜನಕ ಬರೂ ಹಾಂಗ ಮನಕ
ಹಾಡೂದ ಬಿಟ್ಟನಿಂತಿ ಬೇದಾಡಲಾಕ | ಇನ್ನಾರ ತರ್ಕ
ಹಿಡದ ಹಾಡೋ ಮೂರ್ಖ | ಪರತ ಕಲ್ತ ಬಂದ ಗುರುವಿನ್ಹಂತೇಕ
ಜಾಣರ ಜತ್ತಾ ಮಾಡಿದರೆ ರೀತ ಕಿಮ್ಮತಾ
ಅಡತರ ಮಾತಾ | ಕೇಳಿದರ ಹೋದಿ ಹೋಯಿಕೊಂತಾ || ೨ ||

ಇ|| ಹೇಳವನಕ್ಕಿಂತಾ ಕೇಳಾಂವ ಇರಬೇಕ ಪಂಡಿತಾ
ಆದೀತೋ ಸ್ವಾರ್ಥಾ ಇಲ್ಲಂದರ ಹೇಳೂದು ವ್ಯರ್ಥಾ
ಏರು|| ಬಂದ ಹೆಣ್ಣ ಬಾಲಿ ಮಾಬೂಬನಂತೇಲಿ
ಅತಗೊಂತ ನಿಂತಾಳ ಬಂದ ಬಿದ್ದಳು ಪಾದದ ಮ್ಯಾಲೆ
ಅಂತಾರೋ ಶರಣಾ ಹೇಳವ್ವಾ ನೀನಾ | ಏನು ಘೋರ ದಿನಗ ಬಂದದ್ದು ಹಾಲಿ
ಧನ ದೌಲತ್ತು ಮಸ್ತಕೊಟ್ಟಾನ ಭಗವಂತಾ | ಮತ್ತಿನಂತ ಐತಿ ಮಕ್ಕಳ ಚಿಂತಾ || ೩ ||

ಇ|| ಸತ್ಯಮಂತ ಶರಣಾ ಮಾಬೂಬ ಪ್ರಖ್ಯಾತ | ಅನುಮತಾ ಕೇಳಿ ಬಂದೀತ ಮಮತಾ
ಏರು|| ಶಿವಶರಣರು ಅರಜ ಮಾಡ್ಯಾರೋ | ಕೊಡಬೇಕ ಈ ಹೆಣ್ಣ ಮಗಳಿಗೆ
ನಿಂತನ ತೀವ್ರ ಸಾಂಬನ ಉತ್ತರಾ | ಬಂದೀತು ಉತ್ತರಾ
ಅರಜ ಮಾಡ್ಯಾರೋ ಪರತಾ | ಒಂದರಕ್ಕಿಂತಾ ಎರಡು ಕೊಟ್ಟರ ಸಾಕಂತಾ || ೪ ||

ಇ|| ಜಗಭರಿತಾ ಜವಾಬಯೆಲ್ಲಿಂದಾ ಕೊಡಲೆಂತಾ
ಬಿಡಬೇಕ ಶರತಾ ಇಲ್ಲ ಹೆಂಗಸಿನ ಕಿಸಮತಾ
ಏರು|| ಇಲ್ಲಂದ್ರ ಮೂರು ಕೊಡಂದ್ರ ಶರಣರು | ಎಲ್ಲಿಂದ ಕೊಡಲಿ
ಅಂತಾನ ಪರಮೇಶ್ವರಾ | ಕೊಡಬೇಕ ನಾಕ ತಡವು ಯಾಕ
ಸಾಂಬನ ಕೂಡ ನಡಿಸ್ಯಾನ ತಕರಾರಾ | ಜಗನ್ನಾಥ ಅಂದಾ | ಹೆಚ್ಚೆಂದು ಬಂತಾ
ಮಾಬೂಬ ಮತ್ತ ಬೇಡ್ಯಾರ ಐದು ಕೊಡಂತಾ || ೫ ||

ಇ|| ಸೃಷ್ಟಿಕರತಾ ಎಷ್ಟು ಹೇಳಿದರ ಸನಮಂತಾ |
ಹಟಹಿಡಿದು ಕುಂತಾ ಮೆಹಬೂಬ ಆರ ಬೇಕಂತಾ ||
ಏರು|| ಶಿವಾ ಅಂದಾ ಕೇಳು | ಇಲ್ಲಂತ ಹೇಳು | ಮಹಬೂಬ ಆದ್ಯಾಕಯೇಳು
ಅಂತಾನ ಸಾಂಬಾ | ಆಗ ಅಬಬಾ | ಸಾಕ ಮಾಡ ಇಷ್ಟ್ಯಾಕ ತಕ್ಕ ಗೋಳು
ಮೆಹಬೂಬ ಸ್ವಂತಾ ಕೈಮುಟ್ಟಿ ಹಸ್ತಾ
ಕೊಟ್ಟ ವಿಭೂತಾ ಕಟ್ಟಿಗೋ ಕೊರಳಾಗ ತಾಯಿತಾ || ೬ ||

ಇ|| ಕಳಿಸ್ಯಾರ ತುರತಾ | ಬಾಲಿಗೆ ಮಾಡಿ ಸನಮಂತಾ
ಪತಿವೃತಾ ಹೋದಾಳೋ ನಕ್ಕೊಂತಾ
ಏರು|| ಶರಣರ ಭಾಷೆ | ಆಗಲಿಲ್ಲ ಹುಸಿ
ಹಡದಾಳೋ ಏಳೋ ಮಕ್ಕಳಾ ಒಂದೊಂದು ಎಣಿಸಿ
ಆಗ ಸುಂದರಾ | ಮಾಡ್ಯಾಳೋ ಘೋರಾ | ಕೊಟ್ಟಾ ಶಂಕರಾ
ಜಗದೀಶ ಮೆಹಬೂಬಗ ಮರತಾ ನೆನಸುವಳೋ ಭಗವಂತನಾ
ಹೋದಾವೋ ಸತ್ತು ಏಳು ಮಕ್ಕಳು ಅನರ್ಥಾ || ೭ ||

ಇ|| ಅತಗೊಂತಾ ಆ ಶರಣರಂತೇಲಿ ಮತ್ತಾ
ಹಕೀಕತ್ತ ತಿಳಿಸಿ ಹೇಳ್ಯಾಳೋ ಆದಂತಾ
ಏರು|| ಮೆಹಬೂಬ ಶರಣರು ಸಿಟ್ಟು ಮಾಡ್ಯಾರು | ಆದಮ ಶಹರದಿಂದಾ

ಮಕ್ಕಳು ಕರಿಸ್ಯಾರು | ಕಳಿಸ್ಯಾರ ಮನಿಗೆ ಸೋಡತಾಳ ಹೋಗಿ
ಆಡುತ್ತಿದ್ದವು ತನ್ನ ಏಳು ಪುತ್ರರಾ | ಸತ್ಯವಂತಾ | ಕೊಟ್ಟ ಹುಟ್ಟಸ್ಯಾನ ಭಗವಂತಾ
ಕರಾಮತಾ | ಮೆಹಬೂಬ ಶರಣರದು ಪ್ರಖ್ಯಾತಾ || ೮ |||

ಇ|| ನಾಡಿಗೆ ಗೊತ್ತಾ ಬಾಗಲಕೋಟೆದು ಕವಿತಾ ರಿವಾಯಿತಾ
ಸುತ್ತ ದೇಶಕ ಪ್ರಖ್ಯಾತಾ | ಗುರು ದಸ್ತಗೀರ ಕರುಣ ಸಾಗರಾ
ಏರು|| ಕೇಸು ಪೀರಂದು ನಮಗ ಐತಿ ಆಧಾರಾ
ಅಂದ್ರೋ ನಾಗೂ-ಗೌಸು | ರಿವಾಯಿತು ಖಾಸು | ಹೆದರಿ ವೈರಿ ಬರುದಿಲ್ಲ ಅವರ ಇದಿರಾ
ಬಂಗಾರದಂತ ಅಕ್ಷರಾ | ಸುರದಾಂಗ ಮುತ್ತಾ
ಇನ್ನಾ ಇವರಂತಾ | ಶಾಹೀರ ಹುಟ್ಟೂದು ಕಿಂಚಿತ್ತಾ || ೯ ||

* * *

## ೪. ಕುರೂಪದ ಗುರುವಿಗೆ ಸುರೂಪ ಕರುಣಿಸಿದ ಮಾಬುಸುಬಾನಿ

ಅರ್ಥಬಲ್ಲವರು ಬುದ್ಧಿವಂತರು | ಕುಂತ ಕೇಳರಿ ಮಾಡದೇ ಗುಲ್ಲಾ
ಏರು|| ಇಂದ ಪ್ರೀತಿಲಿಂದ ಚಂದದಿಂದ ಸಾರಿ ಪೇಳುವೆ
ಚಿತ್ತಯಿಡರಿ ಮಿತಿಮೀರಿ ನೆರದಿರಿ ಗರದಿ ಸಭಾ ಶೃಂಗಾರ ಜನಾ ಜಾತರಿ
ಸರೂದೈವಕ ಮಾಡುವೆ ಶರಣಾ | ಇರಲಿ ಬಡವನ ಮ್ಯಾಲೆ ಅಂತಃಕರಣಾ
ಸರಸ ಹರುಷ ಸೋಸಿ ನಾ ಪುರಮಾಸಿ ಕವಿ ಮಾಡಿನಿ ರಚನಾ
ಹಿಂತ ನುಡಿ ಕೇಳೋ ಶಾಯೀರ ಕೆಂವು ತುಜೆ ಇಡಬೇಕೋ ಗಮಜಾ
ಮಾಡೂನು ಪೂಜಾ | ತರಕ ಹಿಡಿ ತಿಳಿಸುವೆ ಖುಲ್ಲಾ || ೧ ||

ಇ|| ಮೆಹಬೂಬ ಶರಣ ಹಿಡಿದ ಕುರಾನ | ಓದುತ್ತ ಕುಳಿತಿದ್ರೋ ಮಾಲಿನಮ್ಯಾಲಾ
ಏರು|| ಹಾದ ನೀರಿಗೆ ಹೋಗುಳೋ ಒಬ್ಬಾಕಿ ದಾಸಿ ಅಲ್ಲಿಂದ
ಕೇಳಿ ಸೊರಾ | ತನ್ನ ಮನಪೂರಾ | ನಿಂತಾಳ ಹೈಪಾಗಿ ಅಷ್ಟರೊಳಗ ಆಕಿ ಪುತ್ತರಾ
ಓಡಿಕೊಂತ ಅಲ್ಲಿಗೆ ಬಂದ ನಿಂತಾ | ಕೇಳ ತಾಯವ್ವಾ ನಾ ಬರತೇನಂತಾ
ಕೇಳಿ ಹೊರಳಿ ಸೋಸಿ ಕಂದಗ | ದಾಸಿ ಅಂತಾಳ ತಿಳಿಸುವೆ ನಿನಗ
ಹೊಡದರ ಅತಕೊಂತ ಹ್ವಾದಿ ಮೆಹಬೂಬ ಅತ್ತಾಂಗ
ಹೀಂಗ ಬೆದರಿಸಿ ಆ ಹುಚ್ಚದಾಸಿ ನೀರ ತರಲಿಕ್ಕೆ ಹೊರಟ ಹೋಗ್ಯಾಳಲ್ಲಾ || ೨ ||

ಇ|| ದಾಸಿಯ ಶಬ್ದಕೇಳಿ ತಾ ಖುದ್ದ ಸಿಟ್ಟೇಲೆ ಮೆಹಬೂಬ ಇಳದಾರಲ್ಲಾ
ಏರು|| ಚಿಕ್ಕ ವಯಸಯಿತ್ತ ಬಂದ ನಿಂತ ನೋಡ್ಯಾರ ಹೊರಗ
ಕಾಣಲಿಲ್ಲ | ನಿಂತಾರಲ್ಲ | ನೀರ ತುಂಬಿಕೊಂಡ ದಾಸಿ ಅಲ್ಲಿಗೆ ಬಂದಾಳಲ್ಲಾ
ಕಂಡ ಮಹಬೂಬ ಜರಬೀಲ್ ಹೋಗಿ | ತರಬಿ ದಾಸಿಗೆ ಅಂತಾರ ಸಿಟ್ಟಾಗಿ
ಕೇಳ ನಿವ್ವಳ | ನಾ ಮಾಲಿನ ಮೇಲೆ | ಕುರಾನ ಓದುತ್ತಿದ್ದೆ ಕೂತು

ಅಳತಾನಂತ ನಿನ್ನ ಕಿವಿಗೆ ಹ್ಯಾಂಗ ಕೇಳಿ ಬಂತು
ದಾಸಿ ಕೈಮುಗದ | ಅಂತಾಳ ಖುದ್ದ | ಏನ ಹೇಳಲಿ ಇದರ ತಪಶೀಲಾ || ೩ ||

ಇ|| ಓದುವ ಪರಿ | ಕೇಳರಿ ದೊರಿ | ನಮ್ಮ ದೊರೆಸಾನಿ ಓದುಕ ಮಿಗಿಲಾ
ಏರು|| ಓದುವಾಗ ಪಕ್ಷಿ ಹರುಷದಿಂದ ಕೇಳತಾವಲ್ಲಾ
ಕೇಳಿ ಶರಣ ದಾಸಿಯನಾ | ಅಂತಾರ ತಿಳಿಸವ್ವಾ ಹೋಗಿ | ನಿನ್ನ ದೊರಿಸಾನಿಯನ್ನಾ
ನಾಳೆ ಬರತೇನಿ ಪ್ರೀತಿಲಿಂದ | ಕೇಳಿದಾಸಿ ಹೊಂಟ ಹೋಗ್ಯಾಳ ಅಲ್ಲಿಂದ
ಇಟ್ಟ | ಬೆಟ್ಟ ಆಗಿ ದೊರಿಸಾನಿ ಮುಂದ ತಿಳಿಸ್ಯಾಳ ಬ್ಯಾಗ
ಸತ್ಯವಂತರು ಮೆಹಬೂಬ ಹೇಳಿ ಕಳಿಸ್ಯಾರ ಹೀಂಗ
ನಿನ್ನ ಮನೆತನಕ | ನಾಳೆ ಉದಯೇಕ | ಬರತಾರ ಕೇಳವ್ವಾ ತಿಳಿಸಿನಿ ಖುಲ್ಲಾ || ೪ ||

ಇ|| ಕೇಳಿ ದೊರಿಸಾನಿ ಸುಖಜಾಣಿಪಿಣಿ ಸುಂದರ ಮಣಿ ಹರುಷಾಗ್ಯಾಳಲ್ಲಾ
ಏರು | ಗಂಧ ಕಸ್ತೂರಿ | ತರಿಸಿ ಸಾರಸಿದಾಳ ರಂಗಮಾಲ | ಮರುದಿವಸ
ಆಗಿ ಮನಸ | ಬಂದಾರ ದೊರಿಸಾನಿ ಮನಿಗೆ ಮೆಹಬೂಬ ಆಗಿ ಹರುಷ
ಕಂಡ ದೊರಿಸಾನಿ ಎರಡು ಕೈಮುಗದ | ಕುಂಡ್ರಸ್ಯಾಳ ಮಂಚದಮ್ಯಾಲೆ
ಮೆಹಬೂಬಗ ಒಯ್ದು | ಕುಂತ | ಸೊಂತ | ಅಂತಾರ ಮೆಹಬೂಬ
ದೊರಿಸಾನಿಯ ಮುಂದ | ಓದವ್ವಾ ಕುರಾನ ಕೂತ ನೀ ನನ್ನ ಮುಂದ
ದೊರಿಸಾನಿ ಖುದ್ದ ಆಗಿ ಆನಂದ | ಓದುಕ ಆರಂಭ ಮಾಡಿದ್ದಾಳಲ್ಲಾ || ೫ ||

ಇ|| ದೊರಿಸ್ವಾನಿ ಸೊರಾ ಕೇಳಿ ಪಕ್ಷಿ ಆಧರಾ ಹಾರಾಡತಿದ್ವೊ ಸುತ್ತಮುತ್ತೆಲ್ಲಾ ||
ಏರು | ಕಂಡ ಪಕ್ಷಿ ಮನಗಂಡ ಮೆಹಬೂಬ ಆನಂದ ಆದರು
ಎದ್ದಾರಲ್ಲಾ | ನಿಂತಾರಲ್ಲಾ | ಅಂತಾರ ದೊರಿಸಾನಿಗೆ ಮೆಹಬೂಬ ಆಗಿ ಶಾಮಿಲಾ
ಹಿಂತಾ ವಿದ್ಯೆ ನನಗ ಕಲಸವ್ವಾ | ನಾನು ಮನದಿಂದ ಮಾಡುವೆ ಸೇವಾ
ಸಾಸಿ | ಸೊರಣಿ | ಮಾಡ ಶಿವನ ಮೆಹಬೂಬಗ ಬಂದು ಹಿಡಿತಾಳ ಕಾಲಾ
ಸತ್ಯವಂತರು ಇದ್ದೀರಿ ಈ ಪೃಥ್ವಿಗೆ ಮಿಗಿಲಾ
ನನ್ನ ಮಾಸ್ತರ ಇದ್ದಾರಾ ಗಂಭೀರ ಮಿಕ್ಕ ನನಕ್ಕಿಂತ ಓದುತಾರಲ್ಲಾ || ೬ ||

ಇ|| ಬರದ ಪತ್ತರಾ ಕೊಡುವೆ ವತ್ತರಾ ಹೋಗಿ ತೋರಿಸಿ ಕಲ್ತುಬರ್‍ರಿ ಮೊದಲಾ
ಏರು | ಇರತಾರ ಮಾಸ್ತರ ಅರಬಸ್ತಾನ ಪಟ್ಟಣದಲ್ಲಿ | ಕೇಳಿ ಹರುಷ ಆಗಿ ಮನಸ
ಪತ್ರ ಬರಸಿಕೊಂಡ ದೊರಿಸಾನಿ ಕಡಿಂದಾ | ಆ ದಿವಸ ತಮ್ಮ ತಾಯಿಗೆ
ತಿಳಿಸ್ಯಾರ ಬಂದಾ | ವಿದ್ಯೆ ಕಲಿಲಿಕ್ಕೆ ಹೋಗುವೆ ನಾನು ಇಂದಾ
ಜನನಿ ಅಪ್ಪಣೆ ಕೊಟ್ಟಾರ | ಹಸ್ತಯಿಟ್ಟ ಪ್ರೀತಿಲೆ ಚುಮ್ಮಿದಾರ ಗಲ್ಲಾ
ತಗದ ಹದಿನೈದು ರೂಪಾಯಿ ಕೊಟ್ಟಿದಾರಲ್ಲಾ | ಮುಟ್ಟಿತಾಯಿ ಪಾದಾ
ಹೊಂಟಾರ ಖುದ್ದಾ | ಸಂಗಲೀಲೆ ಯಾರ್‍ಯಾರ ಇದ್ದಿಲ್ಲಾ || ೭ ||

ಇ|| ಪುಂಡ ಮನಗಂಡ ತುಡಗರ ದಂಡ | ಕಂಡ ಮೆಹಬೂಬಗ ಕೇಳಿದಾರಲ್ಲಾ
ಏರು|| ಯಾರ ನೀ ನಿನ್ನ ಹಂತೇಲಿ ಪ್ರೀತಿ ತೋರಸ ಮೊದಲಾ

ತಗದಾರಲ್ಲಾ | ಒಗದಾರಲ್ಲಾ ಹದಿನೈದು ರೂಪಾಯಿ ಹೊರ್ತು ಮತ್ತು ಏನೇನು ಇಲ್ಲಾ
ನಾನು ಎಂದಿಗೆ ಸುಳ್ಳ ಹೇಳುವುದಿಲ್ಲಾ | ನನ್ನ ಹೆಸರ ಮೆಹಬೂಬ ಕೇಳರಿ ಖುಲ್ಲಾ
ಕೇಳಿ | ಟೋಳಿ ಎಲ್ಲಾ | ಕಳ್ಳರು ಕೂಡಿ ಬೇಡಿಕೊಂತಾರ ನಿಂತ
ಇಂದ ಹರಿಬ್ರಹ್ಮ ಕೂಡಿಸಿಕೊಟ್ಟಾನ ಅಂತ | ಹೋಗಿ ಮುಂದಕ ಬಿದ್ದಾರ ಪಾದಕ
ಇದ್ದೀರಿ ಮೆಹಬೂಬ ಕ್ಷಮಿಸಿರಿ ಮೊದಲಾ || ೮ ||

ಇ|| ಮೆಹಬೂಬ ಶರಣ ಆ ಮಂದಿಯನಾ ಭಕ್ತರು ಮಾಡಿ ಹೊಂಟ ಹೋಗ್ಯಾರಲ್ಲಾ
ಏರು|| ಮುಟ್ಟಾರು ಮೆಹಬೂಬ ಅರಬಸ್ತಾನ ಪಟ್ಟಣಕ ಹೋಗಿ ಕಂಡಾರಲ್ಲಾ
ಮಾರಿಯ ಮ್ಯಾಲಾ ಇತ್ತರಿ ಮಕನಾ | ಮಾಸ್ತರ ಕೈಯಾಗ ಪತ್ತರ ಕೊಟ್ಟಾರಲ್ಲಾ
ಮಾಸ್ತರ ಪತ್ತರಾ ಓದಿ ನೋಡ್ಯಾರು | ಮೆಹಬೂಬಗ ವಿದ್ಯೆವ ಕಲಿಸ್ಯಾರು
ಕಲ್ತ ಸೊಂತ | ಹೋಗ್ಯಾರ ಒಂದ ದಿವಸ ಸಮುದ್ರ ದಂಡಿಯ ಮ್ಯಾಗ
ಆಗಿ ಪ್ರೀತಿ ಕುಂತಾರ ಬಟಾಬೈಲದಾಗ | ಓದುಕ ಆರಂಭ ಮಾಡ್ಯಾರ ಮೆಹಬೂಬ
ಅಲ್ಲೆ ಅವರ ಹೊರತು ಯಾರ್ಯಾರ ಇದ್ದಿಲ್ಲಾ || ೯ ||

ಇ| | ಓದುವ ಸೊಲ್ಲಾ ಮೀನಾ ಮಸಳಿಯಲ್ಲಾ | ಮೃಗ ಪಕ್ಷಿಕೇಳಿ ಕುಣುತಿದ್ವು ನವಲಾ
ಏರು|| ಮೆಹಬೂಬ ಮನದಲ್ಲಿ ಹಿಗ್ಗಿ ತಿರುಗಿ ಬಂದಾರ ಸಾಲಿಗೆ
ಮಾಸ್ತರರಿಗೆ ಆ ಹೊತ್ತಿಗೆ ಕೇಳತಾರ ಅಪ್ಪಣಿನಾ ಹೋಗುವೆ ನಮ್ಮ ಊರಿಗೆ
ಮಾಸ್ತರ ಮೆಹಬೂಬಗ ಅಪ್ಪಣೆ ಕೊಟ್ಟಾರಲ್ಲಾ | ಪ್ರೀತೀಲೆ ಹಸ್ತಯಿಟ್ಟ
ತಲಿಯಮ್ಯಾಲಾ | ಹೋಗರಿ | ಹಾತೊರಿ | ಮಹಬೂಬ ಮಾಸ್ತರಿಗೆ
ಮಾರಿ ನೋಡಬೇಕಂತ ಮಕನಾ ಎತ್ತಿದಾರ ತಮ್ಮ ಕೈಲಿಂದ ಸೊಂತ
ಮಾಸ್ತರ ಮಾರಿ ಇತ್ತ ಹಂದಿಸರಿ | ಕಂಡ ಮೆಹಬೂಬ ದಂಗ ಆಗ್ಯಾರಲ್ಲಾ || ೧೦ ||

ಇ|| ನಿಂತ ಇದರಿಗೆ ಮೆಹಬೂಬ ಮಾಸ್ತರಿಗೆ ಬಾಗಿ ಶಿರಾ ಕೇಳಿದ್ದಾರಲ್ಲಾ
ಏರು|| ಹಂದಿಸರಿ ನಿಮ್ಮ ಮಾರಿ ಆಗಿದ್ದೇನ ಕಾರಣ | ಒಡದ ಹೇಳರಿ
ಬಂತ ಬಿರಿ | ಅಂತ ಮನಕ ತಿಳಿದ ಮಾಸ್ತರ ಮೆಹಬೂಬ ಅಂತಾರ ಕೇಳರಿ
ತಾಯಿನಿಂದೆ ಮಾಡಿದ್ದ ತಪ್ಪು ನಂದು | ಕೇಳಿ ಮೆಹಬೂಬ ಧ್ಯಾನಕ ತಂದು
ಬಿಟ್ಟ | ಮೆಟ್ಟ | ಹೊಂಟ ಹೋಗಿ ಶಿವನಲ್ಲಿ ಬೇಡಿದ್ದ ಕ್ಷಣಕ
ಏನೇ ಹೇಳಲಿ ಮಾಸ್ತರ ಮಾರಿ ಆತರಿ ಚೊಕ್ಕ | ಅವಸರ ಮಾಡಿ
ಮಾಸ್ತರ ಕೈಗೂಡಿ ತೋರಸ್ಯಾರ ಕನ್ನಡಿ ಮೆಹಬೂಬ ಪ್ರಭೂಲಾ || ೧೧ ||

ಇ|| ಮಾಸ್ತರ ಕನ್ನಡವೊಳಗ ಮುಖಾನೋಡಿ | ಹಿಗ್ಗಿ ಮೆಹಬೂಬನ ಹಿಡಿದಾರ ಕಾಲಾ
ಏರು | ಅಂತಾರ ಮೆಹಬೂಬಗ ತಮ್ಮ ದಯಾ ಕರುಣದಿಂದ | ಸ್ವಚ್ಛಾತರಿ
ನನ್ನ ಮಾರಿ ಅಂತ ಮಾಸ್ತರ ತಾರೀಫ ಮಾಡ್ಯಾರ | ಯಾರಿಲ್ಲ ನಿಮ್ಮ ಸರಿ
ಪ್ಯಾಟಿ ಪಟ್ಟಣ ಬಾಗಲಕೋಟೆ ಶಹರ | ಸುತ್ತ ದೇಶಕ ಹೆಸರ
ಜಾಹೀರ | ಧೀರ | ಗಂಭೀರ | ಇರತಾರ ಮಲ್ಲೆಕಲ್ಲ ಹುಸೇನಾ | ಮಡ್ಡಿಯಮ್ಯಾಲಾ
ವೈರಿಗೆ ಹುಸೇನಮಿಯ್ಯಾ ಹೇಳಿ ಹಿಂಗ ಅಂತಾರಲ್ಲಾ | ಮಾರಿ ಹಂಜಿಪುಟ್ಟಿ
ಮಾಡಿಕೊಂಡ ಹೊಟ್ಟೆ ಬಂದಿ | ಸಭೇದಾಗ ಬಿಡೋ ನಿನ್ನ ಡೌಲಾ || ೧೨ ||

* * *

## ೫. ಮಾಬುಸುಬಾನಿಗೆ ಮರುಳಾದ ಹೆಣ್ಣಿನ ಪದಾ

ಬೈಯಾನ ಕೇಳರಿ ದೈವೆಲ್ಲಾ ತಿಳಿಸುವೆ ಖುಲ್ಲಾ
ಉತ್ತರ ದೇಶದ ಅರಸರ ಸತ್ಯವಂತರ ದೇಶಾ
ಬಗದಾದ ಪಟ್ಟಣ ಸ್ಥಳ ತಿಳಿಸುವೆ ಖುಲ್ಲಾ ||
ಚಿಕ್ಕ ಪ್ರಾಯದ ಮಾಬೂಬ ಬಾಲಾ
ಚಂಡು ಬಗರಿsನಾ ಆಡುವ ಖ್ಯಾಲಾ
ಅವರ ವರಣಾ ಚಂದರ ಕಿರಣ
ಚ್ಯಾಲಿ|| ಚಲುವಿsಕಿ ಚಾಲಾಕಿ ಹೋಲಿsಕಿ ರೂಪ
ಥಳಥಳ ಹೊಳೆಯುವ ತುಟಿಗಲ್ಲಾ ಕೇಳರಿ ಖುಲ್ಲಾ || ೧ ||

ಒಬ್ಬ ಬಾಲಿ ಕಂಡಾಳ ನಿರ್ಮಾಲಿ ಮರುಳಾದಳಲ್ಲಾ
ಮಾಬೂಬ ಸುಬಾನಿ ಮನಿಗೆ ಬರಬೇಕ ಧನಿ
ಅಡಿಗಿ ಮಾಡೇನಿ ಭಿನ್ನ ಮೌಲಾ ಉಣಿಸುವೆನಲ್ಲಾ
ಕರಕೊಂಡ ಹೋಗಿ ತನ್ನ ಮನಿಗೆ ಬಾಲಿ
ಶ್ರೇಷ್ಟ ಶರಣರಿಗೆ ಮಾಡುವಳು ನಕಲಿ
ಚ್ಯಾಲಿ|| ಮಂಚದ ಮ್ಯಾಲೆ ಹೂವಿನ ಮಾಲಿ
ವಿಸ್ತಾರ ತಯ್ಯಾರ ಶ್ರಿಂಗಾರ ಮಾಡಿ ಕೈಹಾಕಿ ಶರಣರ ಎಳೆಯುವಳಲ್ಲಾ || ೨ ||

ಗಾಬ ಆದಾರೋ ಗುಣಶೀಲಾ ಹೇಳುವರಲ್ಲಾ
ಇಂಥ ಪಾಪದ ಕೆಲಸಾ ಸೇರಲಾರದೋ ಮನಸಾ
ದೃಢಭಕ್ತಿ ಇಡೋ ನನ್ನ ಮೇಲಾ ಭಿನ್ ಮೌಲಾ
ಬಾಲಿ ಹೇಳುವಳೋ ತನ್ನ ಕಷ್ಟ ಕೇಳರಿ ಮಾಬೂಬ ಶ್ರೇಷ್ಟಾ
ಹೆಣ್ಣಿನ ಕಷ್ಟ ಮಾಡಿ ನಷ್ಟ ಮಾಡದೆ ನೋಡದೆ ಕೊಡದೆ
ಹೋದರ ಗಂಡಗ ಹೇಳಿ ಮುರಿಸುವೆ ಹಲ್ಲಾ | ಕೇಳರಿ ಖುಲ್ಲಾ || ೩ ||

ಓಡಿ ಹೋದರ ಕೈಗೆ ಸಿಗಲಿಲ್ಲಾ ನೋಡರಿ ಮೊದಲಾ
ದೈವಾ ಕೇಳರಿ ಸೊಲ್ಪಾ ಹೆಣ್ಣಿನ ತಾರೀಫಾ
ಹರವಿಕೊಂಡು ತನ್ನ ಕೂದಲಾ ಕುಂತಿದ್ದಳಲ್ಲಾ
ಚ್ಯಾಲಿ || ಆಕಿ ಗಂಡ ಬಂದ ಹೊರಗಿಲಿಂದ
ಬಾಲಿ ಹೇಳುವಳೋ ತನ್ನ ಗಂಡನ ಮುಂದಾ
ಮಾಬೂಬ ಇಂದ ಮನಿಗೆ ಬಂದ
ಎಳೀದ ಎಳಿದ ಕಳೀದ ಮಾನ ಬೇಡಿಕೊಂಡರ
ದಯಾ ಬರಲಿಲ್ಲಾ ಕೇಳರಿ ಖುಲ್ಲಾ || ೪ ||

ಇ|| ಗಂಡಗ ಹೇಳಿ ಹಿಡಿದಾಳೋ ಕಾಲಾ ತಿಳಕೊಂಡ ಮೂಲಾ
ಸತ್ಯ ಶರಣರ ಕೂಡ ಮಾಡಬಾರದ ವಿಶ್ವಾಸ
ತಿಳಿಯದು ಸ್ತ್ರೀಯರ ಜಾಲ ಕೇಳರಿ ಖುಲ್ಲಾ
ಕೆಟ್ಟ ಕೆಲಸ ಮಾಡಿದಿ ಹೊಯ್ಮಾಲಿ
ಶ್ರೇಷ್ಟ ಶರಣರಿಗೆ ಹಚ್ಚಿದಿ ಗಿಲ್ಲಿ ಇರಬ್ಯಾಡ ಇಲ್ಲಿ ನನ್ನ ಮನೆಯಲ್ಲಿ
ಆತೂರ ಚಾತೂರ ಪ್ರಚೂರ ಹೇಳಿ
ಹಚ್ಚಿ ಹೊಡದಾನೋ ಬಾರಕೋಲಾ ಕೇಳರಿ ಖುಲ್ಲಾ || ೫ ||

ತವರ ಮನಿಗೆ ಹೋದಾಳೋ ತತ್ಕಾಲಾ ನೋಡರಿ ಮೊದಲಾ
ಬಾಲಿ ತಲಿಯೊಳಗ ಹುಣ್ಣ ಹುಟ್ಟಿತೋ ಆಗ
ಹುಳಬಿದ್ದು ಬಳಲುವಳಲ್ಲಾ ರಾತರಿ ಹಗಲಾ
ಚ್ಯಾಲಿ|| ಹೋಗಿ ಕೇಳುವಳೋ ಜೋಹಿಸನೋಟ
ಪ್ರಶ್ನೆ ಹೇಳುವರೋ ಮಾಬೂಬರ ಕಾಟ
ನನ್ನ ಪಡಿಪಾಟ ಹೆಚ್ಚಿನ ಪಾಟ
ಮಾರ್ಗಕ್ಕೆ ತಡವ್ಯಾಕೆ ಕೊಡಲಿಕ್ಕೆ ಹೋಗಿ
ನನ್ನ ಕಷ್ಟ ಆದೀತೋ ನಿರ್ಬಯಲಾ ಎಲ್ಲ ಹೇಳಿದರಲ್ಲಾ || ೬ ||

ಕೇಳಿ ಬಾಲಿ ಮರುಳಿ ತತ್ಕಾಲಾ ಹೊರಳಿದಳಲ್ಲಾ
ಬಗದಾದ ಮುಖಾಮಕ ಬಂದು ಬಿದ್ದಾಳೋ ನೆಲಕ
ಹಿಡಕೊಂಡು ಶರಣರ ಕಾಲಾ ಬೀಳುವಳಲ್ಲಾ
ಟ್ಯಾಲಿ|| ನನ್ನ ತಪ್ಪು ಕ್ಷಮಿಸಿರಿ ಸುಬಹಾನಿ
ಮಾಬಾಬರು ಹೇಳುವರೋ ಗಂಡನ ಮನಿ
ಜಿದ್ದು ಬಿಡು ನೀನು ಕೊಡುವೆನು ನಾನು
ಆದಾರ ಪರಿಹಾರ ಕೌಲೂರು ಗ್ರಾಮ
ಚಿಕ್ಕ ಮಸೂತಿ ಸಕ್ಕರಿಬೆಲ್ಲಾ ನಿನಗನುಕೂಲಾ || || ೭ ||

* * *

## ೬. ನೇಕಾರನಿಗಾಗಿ ಮೆಹಬೂಬರು ಮಾಡಿದ ಪವಾಡ

ಚಿತ್ತ ಇಟ್ಟ ಕೇಳರಿ ದೈವಾ ಇತ್ತ ಜರಾ
ಸತ್ಯವಂತ ಪ್ರಖ್ಯಾತ ಸ್ವಾಮಿ ದಸ್ತಗೀರಾ || ಪಲ್ಲವಿ ||

ಏರು|| ಒಂದು ದಿನ ಮಾಬೂಬ ಶರಣರು ಸೈಲ ಮಾಡೂತ  ನಡೆದರು
ಪಿರತಾ ಸಂಚಾರ ಮಾಡುತ ಒಂದ ಊರಿಗೆ ಬಂದರು
ಇದ್ದ ಅಲ್ಲಿ ಪ್ರಸಿದ್ದ ಅರಸಾ ಬುದ್ದಿವಂತ ರೈತಾ
ಅವನ ಹಂತೇಲಿ ಇದ್ದಾ ಒಬ್ಬಾ ನೇಕಾರ || ೧ ||

ಕಂಡ ಮೆಹಬೂಬ ಶರಣರಿಗೆ ಈ ನೇಕಾರಾ
ತನ್ನ ಮನಿವೊಳಗ ಕರಕೊಂಡು ಹೋದಾ ಖಿದ್‌ಮತಗಾರಾ
ಏರು|| ಖಾಸ ಅಂದಾ ದರದಿವಸ ನೇಯ್ದು ಒಂದ ಥಾನ ಅರಸಗ
ಕೊಡತಿದ್ದಾ ಸುಖಾಪಡುತಿದ್ದಾ ಅರಸ ತನ್ನ ಮನದಾಗ
ಎರಡು ನೇಯಾಕ ಸುರುಮಾಡ್ಯಾನ ಶರಣ ಮೆಹಬೂಬ ಬಂದಮ್ಯಾಗ
ಮುಂಚೆ ನೇಯ್ದಿದ್ದು ಇಡತಿದ್ದಾ ತಂದ ಶರಣರ ಹುಜುರಾ || ೧ ||

ಇ|| ಎರಡನೆಯ ಸರತಿ ನೇಯ್ದಿದ್ದು ಅರಸಗ ಕೊಡತಿದ್ದಾ ದೀರಾ
ಸುದ್ದಿ ಕೊಟ್ಟಾನ ಅರಸಗ ಒಬ್ಬಾ ಚಾಡಿಕೋರಾ
ಏರು|| ಕೇಳಿ ಅರಸಾ ನೇಕಾರಗ ಸಿಟ್ಟ ಮಾಡ್ಯಾನ ಜಟಕಾಸಿ
ಸಣ್ಣ ಮಾರಿ ಮಾಡಿ ನಿಂತ ನೇಕಾರ ಶರಣರಂತೇಲಿ ಬಂದಕ್ಯಾಸಿ
ಕೆಟ್ಟ ಅರಸ ಬಿಟ್ಟ ನನಗ ಬೈಯ್ದು ಬಾಯಿಲೆ ಬೆದರಿಸಿ
ಇವಗ ತೋರಿಸಬೇಕ ಸ್ವಾಮಿ ನಿಮ್ಮ ಸುತ್ತೇದ ಜೋರಾ || ೩ ||

ಇ|| ಕೇಳಿ ನೇಕಾರಗ ಜವಾಬ ಕೊಟ್ಟಾರ ಶರಣರಾ
ನಿಮ್ಮ ಹಂತೇಲಿ ಏನ ಐತಿ ಸದಾ ಫಕೀರಾ
ಏರು|| ಕರುಣ ಮಾಡಬೇಕ ಶರಣಸ್ವಾಮಿ ಬಡವನಿಗಾಗಿ ಅನುಕೂಲಾ
ಗೌಸಲಾಜಮ್ ಗ್ಲಾಸ ತಂದ ಬಹಾರಂಥಾರಲ್ಲಾ
ಗಪ್ಪ ಆದೀತ ಗ್ಲಾಸಿನೊಳಗ ಭೂಪ ಅರಸನ ರಾಜೆಲ್ಲಾ
ಅವನ ತಾಯಿ ಹೋಗಿದ್ದಳು ಮೊದಲಾ ಹಜ್ಜಕ ದೂರಾ || ४ ||

ಇ|| ಹಜ್ ಮಾಡಿ ಸರಹದ್ದಿಗೆ ಬಂದು ನೋಡತಾಳ ಊರಾ
ದಂಡು ದರಬಾರ ಸಂಪತ್ತು ಮಗಂದು ಕಾಣವಲ್ದೊ ಜರಾ
ಏರು|| ಮುದುಕಿ ಮನದಾಗ ಮಿಡುಕಿ ಅಂತಾಳ ಸುರಿಸಿ ಕಣ್ಣೀರ ಅತಗೊಂತಾ
ಅಷ್ಟರೊಳಗ ಒಬ್ಬ ದರವೇಶಿ ಮುದುಕಿ ಮುಂದ ಬಂದ ನಿಂತಾ
ಕೇಳಿ ಮಜಕೂರ ಬಂದ ದರವೇಶಿ ಕೊಟ್ಟಾ ಒಂದ ತಾಯಿತಾ
ಇಟ್ಟ ಮಲಕೋ ತಲೆಗುಂಬಿಲಿ ಇದಕ ತಿಳಿತೈತಿ ಸಾರಾ || ೫ ||

ಕನಸಿನ್ಯಾಗ ಮುದುಕಿಗೆ ಆತ ಒಂದು ಇಶಾರಾ
ನಬಿಸಾಹೇಬರ ರೋಜೇಕ ಹೋಗನೀ ಆಗೂದು ಜಾಹೀರಾ
ಏರು|| ಹುಕುಮಿನ ಸರಿ ಹೋದಳು ಮುದುಕಿ ಮೌಲಾಲಿ ರೋಜೇಕ
ಅಲ್ಲಿ ಒಂದ ಕನಸ ಕಂಡಾಳ ಹೋಗ ಉಸಮಾನ ರೋಜೇಕ
ಉಸ್ಮಾನಗನಿ ರೋಜೇದಾಗ ಕನಸಕಂಡಾಳ ಬೇಶಕ್
ಹೋದಾಳ ಉಮರನ ಗಮಜಿನೊಳಗೆ ಆತ ಇಶಾರಾ || ೬ ||

ಕನಸಿನ್ಯಾಗ ಅಬೂಬಕರ ರೋಜೇಕ ಹೋಗಂತಾರಾ
ನಬಿಸಾಬರ ರೋಜೇಕ ಮುದುಕಿ ಬಂದಾಳ ತೀವ್ರಾ

ಏರು|| ಧ್ಯಾನ ಮಾಡಿ ಮಲಗಿದಾಳ ರಸೂಲಿಲ್ಲಾಗ ನೆನಸಿ
ಕನಸಿನ್ಯಾಗ ಕಂಡಾಳಾಗ ಪೈಗಂಬರ ಪುರಮಾಸಿ
ಸಫಿವುಲ್ಲಾ ಸಾಂಬಗೆಲ್ಲಾ ತಿಳಿಸಿದಾರ ಸಾರಾಂಶಿ
ಏನಾತ ಈ ಮುದುಕಿ ಮಗಂದು ಸಂಸಾರಾ || ೭ ||

ಇ|| ಸಿದಾ ಬಂತ ಮೆಹಬೂಬನ ಹಂತೇಲಿ ಹೋಗಂತಕ್ಯಾರಾ
ಹೊಂಟಾರ ಪೈಗಂಬರ ಮೆಹಬೂಬಗ ನೋಡು ಉಮ್ಮೇದಾರಾ
ಏರು|| ಅಂತರ್ಯಾಮಿ ಮೆಹಬೂಬಗ ತಿಳಿತ ಹಜರತ ಬರುವುದಾ
ಅವರಕ್ಕಿಂತ ಮುಂಚೆ ನಾನು ಸ್ವಂತ ಹೋಗಬೇಕ ಇಲ್ಲಿಂದಾ
ಮುತ್ಯಾನ ರೋಜೇಕ ಮೆಹಬೂಬ ಮುಟ್ಟಿದಾರ ಖುಷಿಲಿಂದಾ
ಏನ ಕಾರಣ ನಿಂತೀರಿ ಹೊಂಟ ಹೇಳರಿ ತೀವ್ರಾ || ೮ ||

ತಿಳಿಸಿ ಹೇಳ್ಯಾರ ಪೈಗಂಬರ ಮುದುಕಿ ಮಜಕೂರಾ
ಸ್ಪೈಷ್ಟ ಮಾಡರಿ ಮುದುಕಿ ಮ್ಯಾಗ ಉಪಕಾರಾ
ಏರು|| ಮುತ್ಯಾನ ಮಾತಿನ ಮ್ಯಾಗ ಮಾಪ ಮೆಹಬೂಬ ಮಾಡ್ಯಾರ
ಖಾಸ ಹೋಗಿ ಗ್ಲಾಸ ತಿರುವುಣಾ ಹೊರಗ ಬಿದ್ದೀತ ಆ ಊರಾ
ಮುದುಕಿ ಮಗಾ ಕೂಡಿ ಮೆಹಬೂಬಗ ನೋಡಿ ಚರಣಕ ಎರಗ್ಯಾರಾ
ದಸ್ತಗೀರ ಕೇಸುಪೀರನ ನಾಗೂ-ಗೌಸು ಶಿಷ್ಯರಾ || || ೯ ||

* * *

## ೭. ಹನ್ನೊಂದು ಮಕ್ಕಳ ಫಲಾ ನೀಡಿದ ಮೆಹಬೂಬ

ಮೇಧಿನಿಯೊಳು ಮೆಹಬೂಬ ಶರಣರು
ಸತ್ಯದಲ್ಲಿ ಪ್ರಖ್ಯಾತ ಅನಿಸಿದರು
ಬಹು ಪ್ರೇಮ ಇಟ್ಟ ಭಕ್ತರ ಮ್ಯಾಲಾ
ಏರು|| ಬಗದಾದ ಪಟ್ಟಣಾ ಇರುವಂತ ಠಿಕಾಣಾ
ಅಬೂ ಸಾಲೆಹಾನ ಪುತ್ರ ಮಹಾಮುದ ಮೋಹನಾ
ಎಳಕ ವಯದಾಗ ಬೆಳಕ ಆದ್ರ ತಮ್ಮ ಜುಳಕ ತೋರಸ್ಯಾರ ಶರಣಾ.
ಚ್ಯಾಲಿ | ಶಿವಾ ಬರೆದಿದ್ದು ತುದಿ ನಾಲಿಗೆ ಮ್ಯಾಲಿ
ಹುಸಿ ಬೀಳಲಿಲ್ಲ ನುಡಿದಿದ್ದು ಬಾಯಿಲಿ
ಗುರಿಇಟ್ಟ ನಿಂತ ಒಗದಾಂಗ ಬಾಲಾ || ೧ ||

ಇ|| ಪತಿವೃತಾ ಗರತಿ ಗಂಡುಳ್ಳ ಬಾಲಿ
ಯಾವ ಮಾತಿಗೆ ಕಡಿಮಿಲ್ಲ ಮನೆಯಲ್ಲಿ
ಒಂದ ಕೂಸ ಮಾತ್ರ ಇದ್ದಿದ್ದಿಲ್ಲಾ
ಏರು|| ರಾತ್ರಿ ಹಗಲಿ ಚಿಂತಿ ಮಾಡತಾಳ ಪತಿವೃತಿ

ಕಂಡ ಮಂದಿ ನನಗ ಬಂಜಿ ಅಂತ ಮಾರಿ ತಿರುವತೈತಿ
ಇಷ್ಟಯಿದ್ದ ಏನ ಸುಟ್ಟ ಬಿಡಬೇಕ ಕಷ್ಟಬಾಳ ಐತಿ
ಚಾಲಿ|| ಹೀಂಗ ಮನಿ ಬಿಟ್ಟಾಳ ಮೋಹನ್ನಾ
ಹೋದಾಳ ಅಲ್ಲಿ ಒಬ್ಬ ಇದ್ರೋ ಶರಣಾ
ಶಿರಬಾಗಿ ಬಾಗಿ ಬಾಗಿ ಗಟ್ಟಿ ಹಿಡಿದಾಳ ಕಾಲಾ || ೧ ||

ಇ|| ಬಂದೇನಿ ಕೇಳಿ ನಿಮ್ಮ ವಾಹಿನಾ
ಏನ ಬೇಡಿದ್ದ ಕೊಡತಾರಂತಾ ಶರಣಾ
ಕೊಡಬೇಕ ಬೇಕ ಬೇಕ ನನಗ ಒಂದು ಪುತ್ರಫಲಾ ||
ಏರು|| ಕೇಳಿ ಆ ಹೆಣ್ಣುಮಗಳ ಬಿನ್ನಾ
ಶಿವನ ಕಡಿಗೆ ಅರ್ಜ ಮಾಡ್ಯಾರ ಶರಣಾ
ಬಂತ ಉತ್ತರಾ ಈಕಿ ನಸೀಬದಾಗ ಇಲ್ಲ ಸಂತಾನ
ಅಂದ್ರೋ ಶರಣಾ ಅದಕ ಏನ ಮಾಡಲಿ ನಾನಾ
ಚ್ಯಾಲಿ|| ದಾರಿ ಹಿಡದಾಳ ಅತಗೊಂತ ಅಲ್ಲಿಂದಾ
ನಾಯೇನ ಮಾಡಿದ್ದೇನ ಅಂತಾದಾ
ಈ ಕೆಟ್ಟ ಜಲ್ಮಾ ಹುಟ್ಟೇನು ಫಲಾ || ೩ ||

ಇ|| ಕರಕೊಂಡ ಹುಡುಗರಿಗೆ ಸಣ್ಣಾ ಸಣ್ಣಾ
ಆಡುತ್ತಿದ್ದರು ಅಲ್ಲಿ ಮೆಹಬೂಬ ಶರಣಾ.
ಆಗ ಬಿತ್ತ ನಜರ ಬಂಜೆಯ ಮೇಲಾ
ಏರು|| ಆಡೂದು ಬಿಟ್ಟ ಬಂದಾ ಕೇಳತಾರ ಮೆಹಬೂಬ ಪ್ರೇಮದಿಂದಾ
ಹೇಳಬೇಕ ನೀ ಯಾಕ ಅಳತೀದಿ ದುಃಖ ಮನಸಿನಾಂದಾ
ದಾರಿ ಬಿಡ ನಿನಗ ಏನ ಹೇಳುದೈತಿ ಅದಿ ಸಣ್ಣ ಕಂದಾ
ಚ್ಯಾಲಿ|| ಹಟ ಹಿಡಿದಾರ ಮೆಹಬೂಬ ಕೇಳಲಿಲ್ಲಾ
ಒಂದ ಹೆಜ್ಜಿ ಮುಂದಕ ಬಿಡಲಿಲ್ಲಾ
ಇಷ್ಟ ಜುಲುಮಿ ಯಾಕಪ್ಪಾ ನನ್ನ ಮ್ಯಾಲಾ || ೪ ||

ಇ|| ನಾ ಹೋಗಿದ್ದೆ ಶರಣರಂತೇಕ ಮನಸಾಗಿ ಮಕ್ಕಳ ಬೇಡುದಕ
ಅವರು ಇಲ್ಲ ಇಲ್ಲ ಇಲ್ಲ ಅಂದ್ರ ನನಗ ಫಲಾ
ಅದಕಾಗಿ ದುಃಖದಾಗ ಹೋಗತಿದ್ದೆ ಚಿಂತಿವೊಳಗ
ಆಡೂದು ಬಿಟ್ಟುಬಂದ ತರಿಬಿರಿ ನೀವು ನನಗ
ಅಂದ್ರೋ ಮೆಹಬೂಬ ಒಂದಾ ಮಗಾ ಕೊಟ್ಟೇನಿ ನಾನು ನಿನಗ
ಚ್ಯಾಲಿ|| ಕೇಳಿ ಮೆಹಬೂಬಗಂತಾಳ ಹೆಣ್ಣಬಾಲಿ
ದುಃಖ ನಂದು ನಿನಗ ಆಗೈತಿ ನಕಲಿ
ಥರಾ ಅಲ್ಲಾ ಅಲ್ಲ ಅಲ್ಲ ಹುಡುಗಾಟ ಚಲೋದಲ್ಲಾ || ೫ ||

ಇ|| ಮತ್ತ ಮೆಹಬೂಬ ಅಂತಾರ ಮುಂದ ಬಂದಾ
ತಗೋ ಒಂದೇನ ಮಾಡತಿದಿ ಹನ್ನೊಂದಾ,
ಒಂದೊಂದಾ ಒಂದ ಬಂದ ಒಂದರಕ್ಕಿಂತ ಒಂದ ಮಿಗಿಲಾ
ಏರು|| ಇಷ್ಟು ಹೇಳಿ ಬಿಟ್ಟ ದಾರಿ ಮನಿಗೆ ಹೋದಾಳ ಬಿರಿಬಿರಿ
ಅದೇ ತಿಂಗಳದಾಗ  ಬಸರ ಆದಾಳ ಆ ಗಂಡುಳ್ಳ ನಾರಿ
ಹನ್ನೊಂದು ಮಕ್ಕಳ ಹಡದಾಳ ಕೂಸಿನರೂಪ ಚಂದ್ರ ಸರಿ
ಚ್ಯಾಲಿ|| ಹೌದ ಹೌದ ನಮ್ಮ ಮೆಹಬೂಬ ಶರಣಾ
ನನ್ನ ಹೊಟ್ಟೀಲಿ ಕೊಟ್ಟಾರ ಸಂತಾನಾ
ದಿಡ ಇಟ್ಟ ಇಟ್ಟ ಇಟ್ಟ ನಡದ ರಾತ್ರಿ ಹಗಲಾ || ೭ ||

ಇ|| ಈ ಸುದ್ದಿ ಕೇಳಿ ಅಲ್ಲಿ ಶರಣಾ ಕೇಳತಾರ ಸಾಂಬಗ ಆಕ್ಷಣಾ
ನನಗಿಲ್ಲ ಇಲ್ಲ ಇಲ್ಲ ಇಲ್ಲ ಅಂದಿರಿ ರಬ್ಬೀಲಲಾ
ಏರು|| ಇಲ್ಲಂತ ನನಗ ಹ್ಯಾಂಗ ಕೊಟ್ಟಿ ಮೆಹಬೂಬಗ
ಶಿವಾ ಅಂದಾ ಇದು ಮೆಹಬೂಬರ ವಚನಾ ಇಲ್ಲ ನನ್ನ ಕೈಯಾಗ
ಹುಸೆ ಹೋಗದಾಂಗ ಮೊದಲಿಗಿ ಬರದಿನಿ ತುದಿನಾಲಿಗಿ ಮ್ಯಾಲ
ಚ್ಯಾಲಿ|| ಹೀಂಗ ಕೇಳಿ ಶರಣಾ ಸುಮಕ ಕುಂತಾ
ದಸ್ತಗೀರ ಕೇಸುವೇರ ನಮಗ ವಲಿತಾ
ಏನು ಚಂದ ಚಂದ ಚಂದ ನಾಗೂ-ಗೌಸೂನ ಅಕಲಾ

* * *

## ೮. ನೀರಿನಲ್ಲಿ ಮುಳುಗಿ ಸತ್ತ ಮದುಮಗನನ್ನು ಬದುಕಿಸಿದ ಮೆಹಬೂಬರ ಪದಾ

ನೀತಿ ಮಾತು ಸಾರಿ ಹೇಳತೇನಿ ಕೇಳರಿ ದೈವೆಲ್ಲಾ
ಮೆಹಬೂಬರು ಮೀರಿ ತೋರಿದರು ಮರ್ತ್ಯದಾಗ ಲೀಲಾ || ಪಲ್ಲವಿ ||

ಏರು|| ಮೆಹಬೂಬ ಕರುಣಾ ಹೊಂಟಾಗ ಒಂದು ದಿನಾ ಭೆಟ್ಟಿ ಆದಾಳಲ್ಲಾ
ಅಳತಿತ್ತೊ ಮುದುಕಿ ಹಗಲೆಲ್ಲಾ ಮೆಹಬೂಬರು ವಿಚಾರ ಮಾಡಿ ಕೇಳತಾರ ಖುಲ್ಲಾ || ೧ ||

ಇ|| ಮುದುಕಿ ಅಳತಿದ್ದಳು ತನ್ನ ಮಗನ ನೆನಸಿ ಪೈಲಾ
ಯಾರ್ಯಾರು ಬಂದು ಹೇಳಿದರೂ ಬಿಡಲಿಲ್ಲಾ
ಏರು|| ಮೆಹಬೂಬ ಪೀರಾ ಮಾಡತಾರ ವಿಚಾರ ಹೇಳಬೇಕೋ ಬಂದುದೆಲ್ಲಾ
ಮುದುಕಿ ಜವಾಬ ಕೊಡಲಿಲ್ಲಾ | ಹಂತೇಲಿ ಇದ್ದೊಬ್ಬ ಹೇಳತನ ತಪಸೀಲಾ || ೨ ||

ಇ|| ಮುದುಕಿಗೆ ಒಬ್ಬ ಮಗ ಇದ್ದಾನೋ ಪ್ರಭೂಲಾ
ಮಗನ ಮೇಲೆ ಪ್ರೀತಿ ಬಹಳ ಇತ್ತೊ | ಬಿಟ್ಟ ಕ್ಷಣ ಇರತಿದ್ದಿಲ್ಲಾ

ಏರು|| ಮಗನ ಮದುವಿನಾ ಮಾಡಬೇಕಂತಾ ಮನಿಮಂದಿ ಕೊಡಸ್ಯಾಳಲ್ಲಾ
ನಿಬ್ಬಣ ಹೊಂಡಿಸ್ಯಾಳ ತತ್ಕಾಲಾ ಹಡಗದ ಮೇಲೆ ಪಯಣ ಮಾಡಿ ಮುಟ್ಯಾರಲ್ಲಾ || ೩ ||

ಇ|| ಲಗ್ನ ಮಾಡ್ಯಾರಾ ಅವರು ಗರ್ದಿಲೆ ಖುಷಿಯಾಲಾ
ಧನ ದೌಲತ್ತು ಕೊಟ್ಟಿದ್ದಾ ದೇವರು ಕಡಿಮೆ ಏನು ಇದ್ದಿಲ್ಲಾ
ಏರು|| ಊಟ ಉಪಚಾರ ಮಾಡಸ್ಯಾರೋ ಬಹು ಜನರಿಗೆಲ್ಲಾ
ದಾನ ಧರ್ಮ ಕೊಟ್ಟಾಳೋ ಮುದುಕಿ ಬಡಜನರಿಗೆಲ್ಲಾ || ೪ ||

ಇ|| ಲಗ್ನ ಮಾಡಿಕೊಂಡು ಮಂದಿ ತಿರುಗಿ ಬಂದೀತಲ್ಲಾ
ಹಡಗ ಏರಿ ಕುಂತಾರೋ ಜನರು ಬಂತು ಕಾಡು ಕಾಲಾ
ಏರು|| ನೀರು ಏರೇತಿ ಭರತಿ ನಡುವೆ ಒಂದ್ಯೆತಿ ಹಡಗ ಮುಣುಗಿತಲ್ಲಾ
ಜನರು ಆದಾರೋ ಬುಡಮೆಲಾ | ಎಲ್ಲಾರು ಮುಣಗಿ ಹೋದರು ಆದೀತೊ ಗಾಲಮೇರಾ
ಇ|| ಮುದುಕಿ ದೈವಾ ನೋಡರಿ ಎಂತಾದು ಇದ್ದಿತಲ್ಲಾ
ಅದರೊಳು ಉಳದೀತೊ ಕಷ್ಟ ಪಡುವ ಕಾಲಾ.
ಏರು|| ಮುದುಕಿ ದೈವಾ ಇತ್ರಿ ಸಿಂಗಡಿ ಹತ್ತೈತಿ
ದೇವ ಉಳಿಸ್ಯಾನಲ್ಲಾ ನೀರು ದಾಟಿ ಬಂದಾಳಲ್ಲಾ
ಹಡಗ ಹೋತೋ ಗಾಲಮೇಲಾಗಿ ಕಾಣದಾಂಗ ಎಲ್ಲಾ || ೬ ||

ಇ|| ದಂಡಿ ಮೇಲೆ ಕುಂತು ಮುದುಕಿ ಶೋಕ ಮಾಡ್ಯಾಳಲ್ಲಾ
ದೇವರ ಧ್ಯಾನ ಮಾಡೂತ ಮನಸಿನ್ಯಾಗ ಹೊಂಟಾಳಲ್ಲಾ
ಏರು|| ದಿನಾ ಒಂದು ಸರತಿ ನೀರಿಗೆ ಬರತೈತಿ
ಕುಂತ ದಂಡಿಯ ಮೇಲೆ ಅಳತೈತಿ ಹೇಳಿದರೂ ಕೇಳಲಿಲ್ಲಾ
ಬಹು ಘೋರ ದುಃಖಾ ಒದಗೀತೋ ಬಂದು ಆಕಿಯಮ್ಯಾಲಾ || ೭ ||

ಇ|| ಇದರಂತೆ ಎಲ್ಲ ವಿಚಾರ ಒಡೆದು ಹೇಳ್ಯಾನಲ್ಲಾ
ಕೇಳಿ ಆಗ ಮೆಹಬೂಬರಿಗೆ ಕರುಣ ಬಂದಿತಲ್ಲಾ
ಏರು|| ಮುದುಕಿ ಮುಂದ ಹೇಳತಾರ ಬಂದ ಅಳಬ್ಯಾಡ ಹಗಲೆಲ್ಲಾ
ನಿನ್ನ ಮಗನ ಕೊಡುವೆನಲ್ಲಾ
ಹರುಷಾದ ಮುದುಕಿ ಆವಾಗ ಪಾದ ಹಿಡಿದಾಳಲ್ಲಾ || ೮ ||

ಇ|| ಹಡಗವು ಮುಣುಗಿ ಆಗಿತ್ತು ಇಪ್ಪತ್ತು ವರ್ಷಕಾಲ
ಆವಾಗ ಶರಣರು ಎಬಸಿದರು ತೋರಿ ಲೀಲಾ
ಏರು|| ಮೂರು ಸರತಿ ಧ್ಯಾನಾ ನೆನೆದಾರ ದೇವರನಾ
ಹಡಗ ಬಂದಿತಲ್ಲಾ ನಿಬ್ಬಣ ಸಹಿತ ಇತ್ತ ಅಸಲಾ || ೯ ||

ಇಂಥ ಕೌತೂಕ ಜಗದೊಳು ಯಾರು ತೋರಲಿಲ್ಲಾ
ಮದುಮಗನ ಕರಕೊಂಡು ಅವರು ದಾರಿ ಹಿಡಿದಾರಲ್ಲಾ

ಏರು|| ನಿಬ್ಬಣ ಬಂದೀತು ಊರಾಗ ಜನರು ನೋಡ್ಯಾರಲ್ಲಾ
ಹುರುಷಾಗಿ ಜನರೆಲ್ಲಾ | ಕೂಡಿ ಎಲ್ಲಾರು ಅಸಲಾ || ೧೦ ||

ಬಾಗಲಕೋಟ ರಂಗಲಾಲಾ | ಪೀರ ದಸ್ತಗೀರನ ಬಂಗಾರಗೋಲಾ
ನಾಗೂ-ಗೌಸು ಕವಿಗಳ ಮಿಗಿಲಾ | ವೈರಿಗೆ ಸೀರಿ ಉಡಿಸ್ಯಾರಲ್ಲಾ

* * *

## ೯. ಸತ್ತವನನ್ನು ಬದುಕಿಸಿದ ಮಾಬೂಬರ ಪದಾ

ಪಂಡಿತ ಪಂತರೆಲ್ಲಾ ಇಟ್ಟ ಕೇಳರಿ ಖ್ಯಾಲಾ
ತಿಳಿಸಿ ಹೇಳುವೆ ಖುಲ್ಲಾ ಸರೂಜನಕೆಲ್ಲಾ | |
ಏರು|| ಅಕ್ಷರ ನುಡಿ ಕಟಬಂದ ಬರಲಿ ಶ್ಯಾಹಿರ ಒಂದಕ ಒಂದ
ತಪ್ಪ ಆದರ ಪಡದೊಳು ನಂದು ಮಾಫ ಮಾಡರಿ ದೈವಾ ಇಂದಾ || ೧ ||

ಇ|| ಜಿಲಾನಿ ಊರಾಗ ಜೋಡಿ ಇದ್ದಾರು ಸತಿ ಪತಿ ಕೂಡಿ
ಮಾಬೂಬರ ಧ್ಯಾನ ಮಾಡಿ ನಿತ್ಯ ನಿರಕ
ಏರು|| ಮುತ್ತುಮಾಣಿಕ ಮನಿತುಂಬ ರತ್ನಾ ಕೊಟ್ಟಿದ್ದ ಆ ಭಗವಾನಾ
ಅವರಿಗೆ ಇದ್ದಿಲ್ಲೋ ಸಂತಾನಾ ನಿತ್ಯ ಮಾಡುವರೋ ಸಾಂಬನ ಧ್ಯಾನಾ
ಬಿಡದೆ ತೀವ್ರಾ ಬಿಟ್ಟ ಹೊಂಟಾರೋ ನಗರಾ
ಮಾಬೂಬರ ಪಾದಕ ಎರಗಿ ಸಂತಾನ ಬೇಡೂನು ಹೋಗಿ
ಬರೂನ ಮೂರು ದಿನದಾಗ ತಿರುಗಿ || ೨ ||

ಹೋಗುವಾಗ ಹಾದಿವೊಳಗ ಕೆಟ್ಟ ಬ್ಯಾಸಿಗಿ ಬಿಸಿಲ ಅಡವ್ಯಾಗ
ಸುರೂತ್ತಿತ್ತೊ ತೆಲಿಮ್ಯಾಗ ತಕ್ಷಣಕ
ಏರು|| ಉತ್ಪತ್ತಿ ವನದೊಳಗ ಹೋಗಿ ಕುಂತಾರೋ ಆಗ
ನಿದ್ದಿ ಬಂತೋ ಪತಿರಾಜಾಗ ಮಲಗ್ಯಾನ ತನ್ನ ಸತಿ ತೊಡಿಮ್ಯಾಗ
ನಿದ್ದಿ ಭರಪೂರ ಆಗ ಹತ್ತಿತೋ ತೀವ್ರಾ
ವನದೊಳು ಆಡೂತ ಚಂದ ಬಂದಿತ್ರಿ ಸರಪ ಒಂದ
ಕಡಿದಿತೋ ಆ ಪುರುಷಗ ಬಂದ ತಿಳಿಮನಕ || ೩ ||

ಇ|| ನೋಡ್ಯಾಳೋ ಆತನ ಮಡದಿ ಬಡಕೊಂತಾಳೊ ಎದಿ ಎದಿ
ಪತಿರಾಜಾ ಬಿಟ್ಟು ನಡದಿ ನಡಬರಕ
ಏರು|| ಅಳತಾಳೋ ಆ ಮೊಹನ ವ್ಯಾಳೇ ಬಂತು ಎಂಥ ಕಠಿಣಾ
ಹತ್ತಿ ದುಃಖದಲ್ಲೆ ಹೋಗುವ ಜನ ಬಂದು ಮಾಡ್ಯಾರೋ ಆತನ ಮಣ್ಣಾ
ಗೋರಿ ಹಂತೇಲಿ ಹಾಕ್ಯಾಳೋ ಚಪ್ಪರಾ

ದರದಿನಾ ಅಳತಾಳಲ್ಲಾ ಕುಂತಗೊಂಡ ಗೋರಿ ಹಿಂಬಾಲಾ
ಮಬೂಬರ ಮಾರಿ ನೋಡಲಿಲ್ಲ ಸುಡಲೀ ಮನಕ || ೪ ||

ಕುಡಿತ್ತಿತ್ತೊ ಕಣ್ಣೀನ ನೀರ ಉತ್ತತ್ತ ಗಿಡದ ಬೇರ
ಒಣಗಿ ಹೋಗಿತ್ರಿ ತಾರಾ ನೋಡಿ ದುಃಖಾ
ಏರು|| ಆಗ್ಯಾವ ಎಂಬತ್ತು ವರ್ಷಾ ದೈವಾ ಕೇಳರಿ ಇಟ್ಟ ಧ್ಯಾಸಾ
ಧೀರ ಪೀರ ಮಾಬುಬರ ಮನಸಾ ಬಿಟ್ಟ ಹೊಂಟಾರೋ ಬಗದಾದ ಖಾಸ
ಹಾದಿವೊಳಗ ಗೋರಿ ಕಂಡಾರೋ ಆಗ
ಇದು ಏನೋ ಚಮತ್ಕಾರಾ ನೋಡತಾರೋ ದಸ್ತಗೀರಾ
ಕುಂತಿದ್ದಳು ಹೆಣ್ಣು ಸುಂದರ ಬಾಡಿ ಮುಖವಾ || ೫ ||

ಇ|| ಯಾರವ್ವಾ ತಾಯಿ ನೀನು ಅಳೂದು ಏನು ಕಾರಣಾ
ಇದು ಯಾರದು ಐತಿ ವ್ಯಸನಾ ಹೇಳಬೇಕ
ಏರು|| ಇಷ್ಟು ಕೇಳಿ ತಗದಾಳೋ ಕಣ್ಣಾ | ಹೋಗಿ ಹಿಡಿದಾಳೋ ಚರಣಾ
ಸಂಗಲೀಲೆ ಕರಕೊಂಡು ನನ್ನ ಗಂಡನ್ನಾ
ಸಂತಾನ ಬೇಡಲಾಕ ಹೊಂಟಿದ್ದೆ ನಾನಾ
ಹೋಗುವಾಗ ದಾರಿವೊಳಗ ಬಿಸಲಹತ್ತಿ ನನ್ನ ಗಂಡಗ
ಉತ್ತತಿ ವನದೊಳಗೆ ನಿದ್ರಿ ಜುಳಕ || ೬ ||

ಇ|| ವನದೊಳು ಆಡೂತ ಚಂದ | ಬಂದಿತ್ರಿ ಸರ್ಪವೊಂದ
ಕಡದೀತೋ ಪುರುಷಗ ಬಂದ ತಿಳಿಮನಕ
ಏರು|| ಇಷ್ಟು ಕೇಳಿ ಮಾಬೂಬರಾಗ | ನೆನೆದಾರೋ ಸಾಂಬಗ
ಎಬಿಸಬೇಕೋ ಈಕಿಯ ಗಂಡಗ ಬ್ಯಾಗ
ಪಂತ ಹಾಕ್ಯಾರೋ ದಸ್ತಗೀರ ಆಗ
ಮಾಬೂಬರ ವಚನ ಕೇಳಿ ಮೆಚ್ಚಾನೋ ಶಿವನು
ಎರಡು ಹೋಳು ಆದೀತೋ ಗೋರಿ | ಹೊರಗ ಬಂದಾನೋ ದೊರಿ
ಎರಗಿ ಮಾಡ್ಯಾನೋ ಮುಜರಿ ಬಿದ್ದ ಪಾದಕ || ೭ ||

ಇ|| ಸತಿ ಪತಿ ಹೇಳ್ಯಾರೋ ತೀವ್ರಾ ಕೊಡಬೇಕ್ರಿ ಒಂದ ಪುತ್ರಾ
ಇಡತೇವರಿ ನಿಮ್ಮ ಹೆಸರಾ ಬಿದ್ದ ಪಾದಕ
ಏರು|| ಇಷ್ಟು ಕೇಳಿ ಮಾಬೂಬರಾಗ
ಕೊಟ್ಟೇನೋ ಹೋಗು ಸಂತಾನ ನಿಮಗ
ದೇಶದಲ್ಲಿ ದಸ್ತಗೀರನ ಬೆಳಕ
ಎರಗಿ ಹಾಡುವರೋ ಸಭಾದೊಳು ಕಡಕ
ಹಡಕ ಶಾಹೀರಾ ಹುಡಕ ಇಂಥ ಅಕ್ಷರಾ
ಬಾಗಲಕೋಟೆ ಕಡಕ ಲಚ್ಚಮನಸಿಂಗನ ಕವಿಗಳ ತೊಡಕ
ಶಾಹೀರಿ ನಿಂದರೋ ಎಡಕ ತೊಟ್ಟ ಬುಲಾಕ || ೮ ||

* * *

## ೧೦. ಮೆಹಬೂಬ ಸುಬಹಾನಿಯವರು ಮಾಡಿದ ಪವಾಡ ಪದಾ

ಕಂದ ಬಾಲಕ ಇಂದ ಮಾಡುವೆ ಶರಣಾ
ಖ್ಯಾಲ ಇಡರಿ ಬಾಲ ಲೀಲಾನ ವರಣಾ ||
ಏರು|| ಪಂಚರೆಲ್ಲರೂ ಕೂಡಿರಿ ಚೌಕಾಸಿ ಮಾಡಿರಿ
ಮಿಕ್ಕಿಪಡದೊಳು ಸಿಕ್ಕಿಶಾಹಿರಾ | ಬಲ್ಲೆನು ನಾನು ನಿನ್ನ ಅಡಗೇರಿ
ಚ್ಯಾಲಿ|| ಕಲಿಸಾಲಿ ಹುಚ್ಚಪ್ಯಾಲಿ | ತಿಳಿವಲ್ಲಿ ಮನದಲ್ಲಿ ನೀ ಜಿಗದಾಡಿ ಖಾಲಿ
ಬಂದ ಫಡಕ ಆಗೀದಿ ಎಡಕ | ನಿಂದರೋ ಏ ಹುಚ್ಚಪ್ಯಾಲಿ
ನಿನಗ ಎಷ್ಟು ಹೇಳಲಿ ದರವರ್ಷ ಆಗಿ ಹೊಲಸ ಕಳಕೊಂತಿ ಮಾನಾ || ೧ ||

ಮುಖ್ಯ ಮುಸಲ್ಮಾನಿ ಬಗದಾದ ವತನಾ
ಧೀರ ಪೀರಗುರು ದಸ್ತಗೀರ ಮೆಹಬೂಬ ಶರಣಾ
ಏರು|| ಮುಕ್ತಿ ಕೊಡುವರೋ ಭಕ್ತರಿಗೆ ಸಮಸ್ತ ಆ ಮೆಹಬೂಬವಲಿ
ಹುಟ್ಟ ಬಂಜಿಗೆ ಕೊಟ್ಟ ಫಲಗಳು ಎಷ್ಟು ಹೇಳಲಿ ಬಾಯಲಿ
ಮಹಾಶಮರಂತ ಭೂಕಾಂತ ಸದಾ ಸಂಬರಾದರೊ
ಚ್ಯಾಲಿ || ಆ ಮೆಹಬೂಬ ಶರಣರು ಜಗಪಾಲ ಜಗಭರಿತ
ಜಗದಲ್ಲಿ ಆದಾರೋ ಆ ಸತ್ಯಶರಣರೋ
ಒಂದು ದಿನಾ ಆಗಿ ಮನಾ ಹೊಂಟಾರೋ ಶರಣಾ || ೨ ||

ಶಾರ ನೋಡೂತ ಹೊಂಟಾರ ಶರಣರು ಒಂದಿನಾ
ಧೀರ ಶುಕ್ರವಾರ ದಿನಾ ಮಾಡಿ ನಮಾಜನಾ ||
ಏರು|| ಹಿಡಿದ ದಾರಿ ನಡದಾರೋ ನೆನಸಿ ಸಾಂಬನ ಮನದಲಿ
ಒಂದ ಮುದುಕಿ ಬಂದು ಅಂತಾಳೋ ಬಿದ್ದು ಅವರ ಪಾದದ ಮ್ಯಾಲೆ
ಬಂದ ಕಷ್ಟ ಮಾಡ್ಯಾರೋ ನಷ್ಟ ಸೃಷ್ಟಿಕರ್ತ ಸಾಂಬನೋ
ನನ್ನ ಮ್ಯಾಲೆ ಮುನದಾನೋ ಹನ್ನೆರಡು ಕೂಸು ಆಗ್ಯಾವೋ
ಮೋಸ ಹೊಂದೇನೋ ನಾ ಏನು ಹೇಳಲಿ ಇನ್ನ
ಇ|| ನನ್ನ ಗೋಳ ಶಿವಬಲ್ಲ ಅವನೇ ಭಗವಾನಾ || ೩ ||

ನನ್ನ ಸಂಗ ನಡೀರಿ ಹೀಂಗ ತೋರಿಸುವೆ ನಾನಾ
ಕೇಳಿ ವಚನಾ ಹತ್ತಿ ಬೆನ್ನಾ ಹೊಂಟಾರೋ ಶರಣಾ
ಏರು|| ಹೋಗಿ ನೋಡ್ಯಾರೋ ಶರಣಾ ನಿಂತ ಆ ಮುದುಕಿ ಮನೆಯಲ್ಲಿ
ಶ್ರೇಷ್ಟ ಸಾಂಬನ ಆಟ ನಾ ಎಷ್ಟಂತ ಹೇಳಲಿ ಬಾಯಲಿ
ಸುತ್ತಮುತ್ತ ನೋಡ್ಯಾರೋ ನಿಂತ ಹೆಣ ಬಿದ್ದಾವೋ ಸಾಲಾ
ಆ ಹನ್ನೆರಡು ಬಾಲಾ ತುಂಡಾಗಿ ಬಿದ್ದಾವೋ ರುಂಡ ಕಡಕ

ಮುರದ ಕೈಕಾಲಾ ಚೆಲ್ಲಿ ಹೋಗ್ಯಾರೋ ಮೊದಲಾ
ಇ|| ನನ್ನ ಗೋಳ ಶಿವ ಬಲ್ಲಾ ಅವನೇ ಭಗವಾನಾ || ೪ ||

ಕೇಳಿ ಮುದುಕಿ ಹೇಳ್ಯಾರಾಗ ಆದಂತ ಕಥನಾ
ಈ ಊರ ಅರಸ ಬಂದು ಕೊಂದಾನ ಕೂಸಿನ್ನಾ
ಏರು|| ಕೈಯ್ಯ ಜೋಡಿಸಿ ನಾನು ಹೇಳಿದೆ ಕೊಲಬ್ಯಾಡ್ರಿ ಕೂಸಿನ್ನಾ
ಕಡದ ಹ್ವಾದಾನೋ ನಡದ ಹ್ವಾದಾನೋ ಸುಮ್ಮನಾ
ಎಷ್ಟಂತ ಹೇಳಲಿ ನಾನಾ ಆ ಅರಸ ಹಂತೇಲಿ ಏನು ಕಾರಣಾ
ಇ|| ಕೊಂದಿ ಕೂಸಿನ್ನ ಹೇಳಬೇಕೊ ನೀನಾ || ೫ ||

ಕೇಳಿ ಅರಸಾ ಆಗಿ ರೌಸಾ ಹೇಳ್ಯಾನ ಬೇಮಾನಾ||
ನನ್ನ ರಾಜೇಕ ನಾನು ಇದ್ದಾಂಗ ಭಗವಾನಾ
ಏರು|| ಮುಸಲ್ಮಾನರ ಅಂಶ ಇಡುವುದಿಲ್ಲ ನನ್ನ ಊರಲ್ಲಿ
ಆದಕಾರಣ ಕೊಂದೇನಿ ನಾನ ಏನ್ಮಾಡತೀದಿ ನನ್ನ ಮ್ಯಾಲಿ
ಸಂತಾಪ ಕೋಪಲಿಂದ ಶ್ರಾಪ ಕೊಟ್ವಾರೋ ಶರಣಾ
ಸರಪಾ ಆದ ಹೈವಾನ ಅವನ ರಾಜ್ಯದೊಳಗ
ಬೆಂಕಿಮಳೆ ಸುರಿಸ್ಯಾರೋ ಶರಣಾ ಮಾಡಿ ಬಿಟ್ವಾರೋ ಹಸನಾ
ಇ|| ಹೇಳ್ಯಾರೋ ಮುದುಕಿಗೆ ಧೈರ್ಯ ಅಂಜಬ್ಯಾಡವ್ವಾ ನೀನಾ || ೬ ||

ಹನ್ನೆರಡು ಕೂಸಿಗೆ ಆಗ ಜೋಡಿಸಿ ಶರಣಾ
ಶ್ಯಾಲ ಹೊಚ್ಯಾರೋ ಮ್ಯಾಲೆ ನೆನಸುತ್ತಾ ಶಿವನಾ
ಏರು|| ಅರಜಮಾಡ್ಯಾರೋ ಸಾಂಬಗ ಸತ್ಯವಂತ ಆ ಮೆಹಬೂಬವಲಿ
ಜೀವತುಂಬಿ ಕಂದ ಎದ್ದಾವೋ ಬಿದ್ದಾವೋ ಅವರ ಪಾದದ ಮ್ಯಾಲೆ
ಶ್ರೇಷ್ಟ ಬಾಗಲಕೋಟೆವೊಳಗ ದಸ್ತಗೀರವಲಿ
ಬೀಳ ಅವರ ಪಾದದ ಮ್ಯಾಲಿ ಕೊಡತೇವಿ ರಣಹೇಡಿ
ಹುಡಿಕ್ಯಾಡಿ ಪಡದಲ್ಲಿ ಇಂದ ತೀರಿ ಹೋಗಲಿ
ಲಚಮನಸಿಂಗ ಕವಿ ಹೊಡದಾಂಗ ಬಾಣ || ೭ ||

* * *

## ೧೧. ಹಸನ ಬಸರಿ ಮತ್ತು ಚೋಳಿನ ಪದಾ

ಶ್ರೀಮಂತ ಸಭಾ ಕುಂತಿರಿ ಬುದ್ಧಿವಂತೆಲ್ಲಾ
ಕೇಳರಿ ಮಾಡದೆ ನೀವು ಗುಲ್ಲಾ || ಪಲ್ಲವಿ ||

ಏರು|| ತಿಳಿಸುವೆ ಶಾಸ್ತರ ಸರಿ ಸಾರಿ ಸಭೆದಾಗ ಮಿತಿಮೀರಿ
ಅಕ್ಷರ ನುಡಿ ಕಟಬಂಧಾ | ಕವಿ ಮಾಡಿ ಹಾಡುವೆ ದುಂದಾ

ತಗೋ ತೋಡಿ ಶಾಹೀರ ನಿಂದಾ | ಎಷ್ಟ ಹಾಡಿ ನನ್ನ ಮುಂದಾ
ಜಿಗಿಬ್ಯಾಡ ಹುಗದೇನೋ ಮುರದ ಹಲ್ಲಾ || ೧ ||

ಇ|| ಖ್ವಾಜಾ ಹಸನ ಬಸರಿ ಹೊಂಟಾರ ಮನಸ ಆಗಿ ಮೊದಲಾ
ಹವಾಸೀರಿ ಸಮುದ್ರ ದಂಡಿ ಮ್ಯಾಲಾ
ಏರು|| ತಿರುಗುವರೋ ಅತ್ತ ಇತ್ತ ನಿಂತ ನೋಡ್ಯಾರ ಸೊಂತ
ಬಿಟ್ಟಿದ್ದು ಹೆಂಟೆಯ ಬಿರಕ | ಅದರ ಒಳಗಿಂದ ಬಂತರಿ ಮ್ಯಾಕ
ಚೋಳ ಒಂದು ಒಳೇ ನಾಜೂಕ | ಕಣ್ಣೀಲೆ ಕಂಡಾಕ್ಷಣಕ
ಸಿಟ್ಟೇಲೆ ಹೆಂಟಿ ಒಗದಾರಲ್ಲಾ || ೨ ||

ಇ|| ತಪ್ಪಿತ್ತ ಏಟ ಬಿತ್ತ ಹೊಟ್ಯಾಗ ಭುಗಿಲಾ
ಮತ್ತ ಬೆನ್ನ ಹತ್ಯಾರ ಬಿಡಲಿಲ್ಲಾ
ಏರು|| ಚೋಳ ಕೊಂಡಿಯೆತ್ತಿ ಒತ್ತಿ ನಡಿತೋ ಹತ್ತಿ ಭ್ರಾಂತಿ
ಒಗುವತಾರ ಹೆಂಟೆಯ ಒಗತಾ | ತಾಕಲಿಲ್ಲ ನಿಂತಾರ ಬೆರತಾ
ನಡಿತೋ ಚೋಳ ಹರದಾಡಿಕೊಂತಾ | ಪೆಟ್ಟೆಲ್ಲಾ ತಪ್ಪಸಿಕೊಂತಾ
ಶಿವನ ಆಟ ಯಾರಿಗೆ ತಿಳೂದಿಲ್ಲಾ || ೩ ||

ಇ|| ಬಂತರಿ ಚೋಳ ಸಮುದ್ರ ದಂಡಿಯಮ್ಯಾಲಾ
ಹಸನ ಬಸರಿ ಹಿಂದ ಉಳಿದಾರಲ್ಲಾ ||
ಏರು|| ಅಂತಾರ ಮನಸಿನ್ಯಾಗ ಈಗ ಹೋಗಿ ಬ್ಯಾಗ
ಬಿಡೂದಿಲ್ಲಾ ಹೊಡುತೇನಿ ತುಳದ | ನನ್ನ ಕೈಯಾಗ ಹೋಗಲೇ ಉಳದ
ಎಲ್ಲಿ ಹ್ವಾದರ ತಗೋತೇನಿ ಎಳದ | ಅಂತ ಓಡಿ ಬಂದಾರ ಹಿಂದಾ
ಜಿಗಿತ ಚೋಳ ಕುಂತ ಕಪ್ಪಿಯ ಮ್ಯಾಲಾ || ೪ ||

ಇ|| ಆ ಕಪ್ಪಿ ದಿಕ್ಕು ತಪ್ಪಿ ಸುತ್ತ ನಡಿತಲ್ಲಾ
ಕುಂತ ಚೋಳ ಮ್ಯಾಲೆ ಆಗಿ ಡೌಲಾ
ಏರು|| ಕಂಡಾರ ಹಸನ ಬಸರಿ ಮೀರಿ ಹೌಹಾರಿ
ಜೀವದ ಕಬರಿಲ್ಲಾ | ಸಮುದ್ರ ಜಿಗಿದಾರಲ್ಲಾ
ನಡದಾರ ನೀರಿನ ಮ್ಯಾಲಾ ಅಂತಾರ ಬೆನ್ನ ಹತ್ತೇನಿ ಮೊದಲಾ
ಹೊಡೂತೇನಿ ಪ್ರಾಣಾ ಬಿಡೂದಿಲ್ಲಾ || ೫ ||

ಇ|| ಆ ಚೋಳ ಆಚೆ ದಂಡಿಗೆ ಹೋಗಿ ಬಿಟ್ಟ ಜಲ್ಲಾ
ಕಪ್ಪೆ ನೀರಾಗ ಉಳಿತಲ್ಲಾ
ಏರು|| ಚೋಳ ದಂಡಿಯೇರಿ ಹಾರಿ ಹಿಡಿದ ದಾರಿ
ಹೋಗುತ್ತಿತ್ತ ಅವಸರಲಿಂದ ಹಸನ ಬಸರಿ ಉಳದಾರ ಹಿಂದ
ಓಡುತ್ತ ದಂಡಿಗೆ ಬಂದ ಅಂತಾರ ನನಕ್ಕಿಂತ ಮುಂದ
ಹೋಗತೈತಿ ಚೋಳ ಬಟಾಬೈಲಾ || ೬ ||

ಇ|| ಒಬ್ಬ ಪುರುಷ ಶೆರೆಸಿಂಧಿ ಕುಡದ ಆಗಿ ಅಮಲಾ
ಬಿದ್ದಾನ ಜೀವದ ಕಬರಿಲ್ಲಾ ||
ಏರು|| ಚೋಳ ಪುರುಷನಲ್ಲೇ ಅಲ್ಲೆ ಅವನ ಬದಿಯಲ್ಲೇ
ತಿರಗತಿತ್ತ ಸುತ್ತಮುತ್ತ ಅಷ್ಟರೊಳಗ ಸರ್ಪ ಒಂದ ಬಂತ.
ಚೋಳ ಡಂಕ ಸಿಟ್ಟೇಲೆ ನಿಂತ ಹೊಡೆದ ಕ್ಷಣಕ ತುಣಕ ಆಗಿ ಬಿತ್ತ
ಹಸನ ಬಸರಿ ಕಣ್ಣೇಲೆ ಕಂಡಾರಲ್ಲಾ || ೭ ||

ಇ|| ಕಂಡ ಹಸನ ಬಸರಿ ದಂಗ ಆಗಿ ನಿಂತಾರಲ್ಲಾ
ಅಂತಾರ ಕಾಣಬಾರದೆ ಕಂಡೆನಲ್ಲಾ ||
ಏರು|| ಚೋಳ ಆಗ ಪುನಾ ಆದಿನಾ ಹಸನ ಬಸರಿನಾ
ಮಾತಾಡಿ ಹೀಂಗ ಅಂತು | ಶಿವನ ಅಪ್ಪಣೆ ನನಗ ಆಗಿತ್ತು.
ಅಂದಲ್ಲೆ ತಪ್ಪಿಸಿಕೊಂತ ಬಂದು ಕೊಂದೆ ಸರಪಿಗೆ ನಿಂತು
ಅಂದಲ್ಲೆ ಪುರುಷ ಉಳದಾನಲ್ಲಾ || ೮ ||

ಇ|| ನಾ ತಪ್ಪಿಸಿಕೊಂತ ಬಂದಿದಕ ಸಿಟ್ಟಾಗಿರಲ್ಲಾ
ಬಂದಿsರಿ ಬೆನ್ನಹತ್ತಿ ಬಿಡಲಿಲ್ಲಾ
ಏರು|| ಬೇಕಾದಾಂಗ ನನ್ನ ಇನ್ನಾ ಹೊಡಿರಿ ಪ್ರಾಣಾ
ಕೇಳಿ ಹಸನಬಸರಿ ಆಗ ನೆನಸ್ಯಾರ ಶಿವ ಸಾಂಬಗ
ನಿನ್ನ ಮಹಿಮಿ ಒಪ್ಪುದು ನಮಗ | ಉಳಿಸಿದಿ ಈ ಪುರುಷಗ
ಹರುಷಾದೆ ಕಂಡ ಇಷ್ಟೆಲ್ಲಾ || ೯ ||

ಆ ಕುಡುಕ ಅಲ್ಲೆ ಬಿದ್ದಲ್ಲೆ ಕೇಳಿ ಇಷ್ಟೆಲ್ಲಾ
ಅಡರಾಶಿ ಎದ್ದ ನಿಂತಾನಲ್ಲಾ |
ಏರು|| ಹಾವಿನ ಮೂರು ನಾಲ್ಕು ತುಣಕ | ಕಂಡಾಕ್ಷಣಕ
ಅಂತಾನ ನೆನಸಿ ಶಿವನಾ ಎಷ್ಟ ನಿನ್ನ ಅಂತಃಕರುಣಾ
ಕೆಟ್ಟ ಇದ್ದು ನನ್ನ ಗುಣಾ | ಉಳಿಸಿದಿ ನನ್ನ ಪ್ರಾಣ
ಬಿಟ್ಟ ಇಂದಿಗೆ ಕುಡೂದಿಲ್ಲಾ || ಪಲ್ಲವಿ || ೧೦ ||

ಇ|| ಹೊಡೆಯುವನಕ್ಕಿಂತ ಉಳಸಾಂವಾ ಶಿವನ ಹೊರತಿಲ್ಲಾ
ಅಂತಾನ ಬಡಕೊಂಡ ಗಲ್ಲಾ ಗಲ್ಲಾ
ಏರು|| ಬಾಗಲಕೋಟೆ ಶಾರ-ಹೆಸರ-ಜಾಹೀರ
ಪೀರ ಮಲ್ಲೇಕಲ್ಲ ಹುಸೇನಾ | ಹುಸೇನ ಮಿಯ್ಯಾನ ಕವಿ ಒಳೇ ರಚನಾ
ತಿಳಿದಾಂವಾ ಅವನೆ ಜಾಣಾ | ವೈರಿಗೆ ಬಡದಾಂಗ ಬಾಣಾ
ಕ್ಯಾಚೆನಾಚಕಿ ನಿಮಗ ಇಲ್ಲಾ || ೧೧ ||

* * *

# ೧೨. ಹಸನ ಬಸರಿ ಮತ್ತು ರಾಬಿಯಾ ಬಸರಿ ನಮಾಜು ಮಾಡಿದ ಪದಾ

ಹರುಷದಿಂದ ದೈವದ ಮುಂದಾ | ತಿಳಿಸುವೆ ಮಾಡಿ ಆದ ಸೂಚನಾ || ಪಲ್ಲವಿ ||

ಏರು|| ಮಿಸರದೇಶ ಇರುವುದು ಖಾಸ | ವಲಿಗಳ ವಚನಾ |
ಹಸನ ಬಸರಿ ವಿದ್ಯೆದಲ್ಲಿ ಭಾರಿ | ದೈವಕ ಮೀರಿ | ಹೇಳುವರೋ ಸಾರಿ |
ನನ್ನ ಹತ್ತಿರ ಕಲಿಬೇಕು ಉತ್ತರ | ವಿದ್ಯೆದ ಮಟ್ಟಿ |
ಕೊಡತೇನಿ ಘಟ್ಟಿ | ಮಾಡಿ ಪೂರ್ಣಾ | ಕೇಳಿ ವಚನಾ |
ರಾಬಿಯಾ ಬಸರಿ ಬಂದ್ರೋ ಆಕ್ಷಣಾ || ೧ ||

ಇ|| ಆ ದೇಶದೊಳಗ ಸಮುದ್ರದಾಂಗ | ಇದ್ರೋ ಹಸನ ಬಸರಿಯುವರು ||
ಆ ವ್ಯಾಳೇಕ ವಿದ್ಯೆ ಕಲಿಯಾಕ | ರಾಬಿಯಾ ಬಸರಿ ದರ್ಶನವಾದರು |
ಚ್ಯಾಲಿ|| ಗುರುಶಿಷ್ಯೆ ಕೂಡಿ ಸೂಚನಾ | ಕಲಿತ ವಿದ್ಯೆ ಹೇಳಲಿಯೇನಾ
ಮಾಡಿ ಕಲ್ಪನಾ | ನೀವು ಹರುಷದಿಂದ | ಮನಕ ತಂದ ಕೇಳಿ ಯೋಚನಾ
ಗುರು ಹೇಳಿ ಶಿಷ್ಯೆ ಕೇಳಿ | ಮನನ ಮಾಡಿ ಮುಟ್ಟಿದ ವರ್ತಮಾನಾ
ಏರು|| ಆತ್ಮಧ್ಯಾನಾ ತಿಳಿಸಿ ದಿನಾ ಮುಕ್ತಿ ಮಾರ್ಗನಾ
ಗುರುವಿನ ದಾರಿ | ಶಿಷ್ಯಳಿಗೆ ತೋರಿ | ಪರಮಾತ್ಮ ಸೇರಿ
ಆಗಿ ಓಂಕಾರಿ | ಸರ್ವ ದೈವಕ ತಿಳಿಸಿ ಚುರುಕ
ವಿದ್ಯೆದ ಮಟ್ಟಿ | ಕಟ್ಯಾಳೋ ಘಟ್ಟಿ | ಮಾಡಿ ರಚನಾ
ತಿಳಿ ಜತನಾ | ರಾಬಿಯಾ ಬಸರಿ ಆಗಿದಾರೋ ಪಾವನಾ || ೨ ||

ಇ|| ಗುರು ಶಿಷ್ಯೆಯರು ಮಾತನಾಡಿದರು | ಹೊರಗ ದಾರಿ ಹಿಡಿದರು
ಆ ವ್ಯಾಳೇಕ | ನಮಾಜ ಮಾಡಾಕ | ಸಮುದ್ರದ ದಡಕ ಮುಟ್ಟಿದರು
ಚ್ಯಾಲಿ|| ಗುರುವು ಹೇಳತಾನ ಮಥನಾ | ನಮಾಜ ಮಾಡುವ ಯತನಾ
ನೀರ ಮ್ಯಾಲಿನ್ನಾ | ಗುರು ಶಿಷ್ಯೆಯರು | ಕೂಡಿ ಮಾಡ್ಯಾರು
ನಮಾಜ ಮಾಡಿ ಪರಮಾತ್ಮನಾ | ಶಿಷ್ಯಳು ಚಂದ
ಅಂತರದಿಂದ | ನಮಾಜ ಮಾಡಿ ಪಾರಗಾಣುನಾ
ಏರು|| ಗುರುವು ನೀರಿನ ಮೇಲೆ | ಶಿಷ್ಯಳು ಅಂತರಲಿ
ನಡೆಸಿದ ಧ್ಯಾನಾ | ನೋಡಿ ಭಗವಾನಾ
ಮೆಚ್ಚಿದ ತಾನಾ | ಸತ್ಯದ ಸವನಾ | ಆಗುವದೇನಾ
ಗುರುವು ಶಿಷ್ಯರು ನಡಿದು ಉತ್ತರ ಎದ್ದು ಬಂದಾರು
ಮಾಡಿ ವಿಚಾರಾ | ಇಲ್ಲ ಸವನಾ | ಗುರುವಿನ ಮನಾ ||
ರಾಬಿಯಾ ಬಸರಿ ತಿಳಿಸಿ ಸತ್ಯವನಾ || ೩ ||

ಆ ನೀರೊಳಗಿನಾ | ಕಪ್ಪಿ ಮನಾ | ಮಾಡತಾವು ಧ್ಯಾನಾ
ಎಂದರು ಆ ಅಂತರದಲಿ ಗುಬ್ಬಿ ಕಾಗಿ ಮ್ಯಾಲೆ
ಹಾಡುಗಳ ಬಾವಲಿ ಮಾಡುವುದು ತಿಳಿಸಿದರು

ಚ್ಯಾಲಿ || ಗುರುವಿಗೆ ಶಿಷ್ಯ ಭಕ್ತಿ ಬೇಡಿ | ಗುರುವಿನ ಮನ ಆತ ಮಾಡಿ
ಪ್ರೀತಿ ಪಾವನಾ | ಗದಗ ಶ್ಯಾರ
ಮೆಹಬೂಬ ಪೀರ ದಯವು ಮಾಡಿಕೊಟ್ಟ ಬುದ್ದಿಯನ್ನಾ || ೪ ||

* * *

## ೧೩. ರಾಬಿಯಾ ಬಸರಿ ಅವರು ರೊಟ್ಟಿ ದಾನ ಮಾಡಿದ ಪದಾ

ಪೈಲೇಕ ಪೃಥ್ವಿಪಾಲಕ ಸಾಂಬಗ ಶರಣಾ
ಏರು|| ಸೃಷ್ಟಿಕರ್ತನ ಆಟ ನಾ ಎಷ್ಟಂತ ಮಾಡಲಿ ವರ್ಣನಾ
ಪ್ರೀತಿಲಿಂದ ಉತ್ಪತ್ತಿಮಾಡಿ ಕಳುವ್ಯಾನಾ ನಮ್ಮ ನಿಮ್ಮನಾ
ಹಲವು ತರದಿಂದ ಸಲುವತಿಹನೋ ಕೇವಲಾ ಜಗಜೀವನಾ
ಸರ್ವ ಜೀವರಾಶಿಗೆ ಇರುವಿ ಎಂಬತ್ತಕೋಟಿಗೆ ಆ ಭಗವಾನ
ಆತನ ಪ್ರಾರ್ಥನಾ ಇಂದ ಮಾಡುವೆ ಕಂದ ನಾ || ೧ ||

ಇ|| ಸಭೆಯೊಳು ನಬಿಸಾಬಗ ಅದಬಿಲೆ ಶರಣಾ
ಏರು|| ಅಲಿ ಸಾಂಬನಹುಲಿಗೆ ಮಾಡುವೆ ಶರಣಾ
ಬೀಬಿ ಖಾತೂನನ ಪಾದಕ ಶಿರಬಾಗಿ ಮಾಡುವೆ ವಂದನಾ
ಹಸನ ಮನಾ ಇಟ್ಟ ಹಸನ್ನೈನ ಹುಸನ್ನೈನ ಅಣ್ಣ ತಮ್ಮಗ ಶರಣಾ.
ನಂಬಿಗಿಟ್ಟು ವಂದಿಸುವೆ ಪಂಜತನ್‌ರಿಗೆ ದರದಿನಾ
ಠಿಕಾಣಾ ವತನಾ ಮುಖ್ಯೆ ಮಕ್ಕಾ ಮದೀನಾ || ೨ ||

ಇ|| ಸಜ್ಜನ ಸರೂ ಸಭಾಜನಕ ಮುದದಿಂದ ಶರಣಾ
ಏರು|| ಖಾಸ ಮಾತಿದು ಸೋಸಿ ಕೇಳರಿ ಧ್ಯಾಸ ಇಟ್ಟ ಸರೂಜನಾ
ತಪ್ಪ ಆದರ ಮಾಫ್ ಮಾಡರಿ ಕೋಪಬಿಟ್ಟು ಮನದಾನಾ
ನಿತ್ಯ ಐದಹೊತ್ತ ನಮಾಜ ಮತ್ತ ಮಾಡರಿ ದರದಿನಾ
ದುಡ್ಡ ದುಗಾಣಿ ಹತ್ತುದಿಲ್ಲ ಖರ್ಚು ಅದಕ ಏನೇನಾ
ಇಮಾನಾ ಕುರಾನಾ ಮ್ಯಾಗ ಇಟ್ಟ ಸಂಪೂರ್ಣ || ೩ ||

ಭಕ್ತೀಲೆ ಶಕ್ತಿ ಸರಿಯಾಗಿ ಕೊಡಬೇಕ ದಾನಾ
ಏರು|| ನಿಷ್ಟಾ ಇಟ್ಟ ಕೊಟ್ಟ ದಾನಾ ಮುಟ್ಟತೈತಿ ಸಾಂಬನ್ನಾ
ಮತ್ತ ಒಂದಕ ಹತ್ತು ಕೊಡತಾನಾ ಗುಪ್ತದಿಂದ ಭಗವಾನಾ
ಮಾಡಿ ಅನುಭವ ನೋಡಿ ಹ್ವಾದರ ರೂಢಿಯೊಳಗ ಬಹುಜನಾ
ಬೀಬಿ ರಾಬಿಯಾ ಬಸರಿ ಅನಶ್ಯಾರ ದಾನದಲ್ಲಿ ನಿಪುಣಾ
ಒಂದಿನಾ ಗುರುವಿನಾ ಹಸನ ಬಸರಿಗೆ ಔತಣಾ || ೪ ||

ಇ|| ರಾಬಿಯಾ ಬಸರಿ ಬೀಬಿದು ಬಹಳಿತ್ತ ಬಿಡತಾನಾ |
ಏರು|| ಹುಡುಕಿ ಮುನಿಯೆಲ್ಲಾ ಆಡಿಸಿ ಕೈ ಅಡಕಲಾ ನೋಡು ತನಾ
ತಳಕ ಗಡಿಗ್ಯಾಗ ಹುಳಕಗೋದಿ ಕಂಡ ಹರುಷ ಆದೀತ ಮನಾ
ಹಸನ ಮಾಡಿ ಬೀಸಿದಾರೋ ನೆನಪಿ ನೆನಸಿ ಶಿವನಾ
ಹಿಟ್ಟನಾದಿ ರೊಟ್ಟಿ ಮಾಡಿದಾರ ದೋಚಹುವೆ ಜಾಸ್ತಿ ಕಹಾ ಆನಾ
ಏಕಮನಾ ಗುರುವಿನಾ ಮುಂದ ಇಟ್ಟಾರ ಬರ್ತನಾ || ೫ ||

ಅಷ್ಟರೊಳಗ ನೀಡ ಅಂತ ಬೇಗ ಒಬ್ಬ ಬಾವಾ ಬಂದಾನ
ಏರು|| ದಾನವಂತಿ ಎರಡು ರೊಟ್ಟಿ ಎತ್ತಿ ನೀಡ್ಯಾರ
ಆಕ್ಷಣಾ ಹೋದ ಬಾವಾ ಅಂದ ಒಂದಕ ಹತ್ತಕೊಡಲಿ ಭಗವಾನಾ
ಬುದ್ಧಿವಂತರು ಬಂದ ಕೂಡಿರಿ ಬೇಧಕೇಳರಿ ಮುಂದಿನ್ನಾ
ಬೀಬಿ ರಾಬಿಯಾ ಬಸರಿ ಭಾವಕ ಮೆಚ್ಚಿ ಆ ಜಗಜೀವನಾ
ಮಹಾಘನಾ ದೈವಾನಾ ಸಾಹುಕಾರ ಒಬ್ಬಿದ್ದಾ ಕೃಪಣಾ || ೬ ||

ಇ|| ಆತನ ಹೆಂಡತಿ ಹೊಟ್ಟೆವೊಳಗ ಹುಟ್ಟಿತ್ತ ಕಲ್ಪನಾ
ಏರು|| ಇಂದ ಬೀಬಿರಾಬಿಯಾಗ ಕಳಿಸಿಕೊಡಬೇಕ ಪಕವಾನಾ
ಖಾಸ ಗೋದಿ ಬೀಸಿ ಮಾಡ್ಯಾರ ರೊಟ್ಟಿ ಇಪ್ಪತ್ತು ಆಗೋಣಾ
ಥರಾ ಹಚ್ಚಿ ಬುತ್ತಿ ಕಟ್ಟಿ ಕರದ ಬಾಣಗಿತ್ತಿನಾ
ಜಲ್ದಿ ಹೋಗಿ ಕೊಟ್ಟ ಬೀಬಿಗೆ ಹೇಳ ನನ್ನ ವಂದನಾ
ಪಕವಾನಾ ವಾಸನಾ ಕಂಡ ದಾಸಿಯದು ಹರಿದೀತು ಮನಾ || ೭ ||

ಇ|| ಉಸ್ ಘಡಿ ಉಸ್‌ಮೇಸೆ ಕಾಡಿ ಏಕರೋಟಿ ಸಾಲನಾ
ಏರು|| ಬಿಚ್ಚಿ ಇಟಗೊಂಡ ಬಾಕಿ ಬುತ್ತಿ ಬೀಬಿ ಆಕ್ಷಣಾ
ಎಣಿಸಿ ನೋಡ್ಯಾರ ಹತ್ತೊಂಬತ್ತು ಇದ್ದು ಬಂದೀತು ಅನುಮಾನಾ
ಕರದ ದಾಸಿಗೆ ತಿರುಗಿ ಒಯ್ಯೋ ಅಂದ್ರೋ ನಮ್ಮದಲ್ಲಾ ಈ ಭಾಸನಾ
ಆಶೆಬುರುಕಿ ದಾಸಿಗಾಗ ಹಾರಿಹೋದೀತ ಹಲ್ಲಣಾ
ವ್ಯಸನಾ ಹೌಸಾನಾ ಹಾರಿ ನಿಂತಾಳ ಸುಮ್ಮನಾ || ೮ ||

ಗಬರಾಸಿ ಮನದಾಗ ದಾಸಿ ಅಂತಾಳ ಮಾಡಲಿ ಇನ್ನೇನಾ
ಏರು|| ಹೊರಗ ತಂದ ತಾ ತಗದ ರೊಟ್ಟಿ ಹಾಕಿ ಕಟ್ಟಿದಾಳ ಪುನಾಃ
ಪರತ ತಂದ ಸಾಬೀತ ಬುತ್ತಿ ಇಟ್ಟ ಮಾಡ್ಯಾಳು ವಂದನಾ
ಬುತ್ತಿ ಬಿಚ್ಚಿ ಬೀಬಿ ರಾಬಿಯ ಎಣಿಸಿ ನೋಡ್ಯಾರ ಆಕ್ಷಣಾ
ಒಂದಕ್ಕ ಹತ್ತರಂತೆ ಇಪ್ಪತ್ತು ಕಂಡ ಪುರುಷ ಆದೀತ ಮನಾ |
ಗುರುವಿನಾ ಉಣಿಸೋಣಾ ತಾವು ಮಾಡ್ಯಾರ ಭೋಜನಾ || ೯ ||

ಇ|| ಮಹಾ ಶ್ರೇಷ್ಟ ಗಂಡಮೆಟ್ಟ ಬಾಗಲಕೋಟಿ ಠಿಕಾಣಾ
ಏರು|| ದಸ್ತಗೀರವಲಿ ಮಸ್ತ ಬುದ್ಧಿ ಕೊಟ್ಟ ಹಸ್ತ ತಲಿಮ್ಯಾಗ ಪೂರ್ಣಾ

ಕೇಸುಪೀರ ಹೀಂಗ ಲೇಸ ಮಾಡ್ಯಾರ ಸೋಸಿ ನಾಗು-ಗೌಸುನಾ
ಕಸರ ಇಲ್ಲದಾಂಗ ಹೆಸರ ನಡುತೈತಿ ದೂರದೂರದಿಂದ ನತನಾ
ತೋಡಿ ಮಾಡಿ ಹಾಡ ಇಲ್ಲಂದ್ರ ಓಡ ನಿನ್ನ ಮನೆತನಾ
ಗುರುವಿನ ಚರಣಾ ಹಿಡಿದ ಪಡಿಬೇಕ ಗ್ನಾನಾ || ೧೦ ||

* * *

## ೧೪. ಖಾದಿರಶ್ಯಾವಲಿಯವರು ಮಾಡಿದ ಪವಾಡ ಪದಾ

ಬುದ್ಧಿವಂತಾ ದೈವಾ ಕುಂತ ಚೌಕಾಸಿ ಮಾಡಿರಿ
ಇವಂದು ಹೆಚ್ಚಾತ ಕಿರಿಕಿರಿ ಕೊಡತೇನಿ ಬ್ಯಾನಿ ನೋಡಿ ಬರಿ
ಏರು|| ಕರುಣಾ ಭರಣಾ ಶರಣಾ ಸಯ್ಯದೀ ಘರಾಣಾ
ಚ್ಯಾಲಿ|| ಖಾಸ ಮೆಹಬೂಬರ ದೋಸ್ತ ಅನಿಸ್ಯಾರ ಶರಣರು
ಹುಟ್ಟಿ ತಿಮ್ಮನಟ್ಟಿ ಗ್ರಾಮದೊಳಗ ಬೆಳೆದರು
ಧೀರ ದಾದೇ ಪೀರ ಆದ ಇವರ ಹಿರಿಯರು
ಹನುಮಸಾಗರ ಐತೆ ಜಹಗೀರಾ ವಂಶ ಪರಂಪಾರಾ
ಭಕ್ತರ ಮ್ಯಾಗ ದಯಾಭಾರಿ ಸ್ವಾಮಿ ಮುರುತುಜಾ ಖಾದರಿ || ೧ ||

ಇ|| ಇತ್ತ ಭಕ್ತ ಜನಾ ಸುತ್ತ ಇಪ್ಪತ್ತ ಹರದಾರಿ
ನಿತ್ಯ ಮಾಡತಿದ್ರೊ ಪೇರಿ ಸ್ವಾಮಿ ಸ್ವಂತ ಹತ್ತಿ ಕುದುರಿ
ಏರು|| ಸ್ವಾಮಿ ನೆಹಮಿ ಮಹಿಮಿ ತೋರಿ ಪರಾಕ್ರಮಿ
ಚ್ಯಾಲಿ|| ಬಂದ ಪಾದಕ ಬಿದ್ದ ಭಕ್ತಗ ಪ್ರೀತಿಲಿ
ಕಷ್ಟ ಪರಿಹಾರ ಮಾಡಿ ಬಿಟ್ರ ಕ್ಷಣದಲ್ಲಿ
ಗಾಳಿ ಪಿಶಾಲಿ ಉಳ್ಳಿ ಶಿಳ್ಳಿ ಹೋಗುವ ನಿಖಾಲಿ
ಬಾಗಲಕೋಟೆಗೆ ಬಂದ ಭಕ್ತ ಜನರ ಮುಂದ
ತೋರಿಸಿ ಪರಾಕ್ರಮಿ ಹುಲಿ ಆಗಿ ಗುಡುಗ ಹೊಡದ ಚೇರಿ
ಭಕ್ತರು ಆದರು ಗಾಬರಿ || ೨ ||

ಇ|| ನೋಡಿ ಭಕ್ತರೆಲ್ಲ ಓಡಾಡುತಿದ್ರ ಬೆದರಿ
ಸ್ವಾಮಿ ಮರತುಜಾ ಖಾದರಿ | ನಿಮ್ಮ ನಿಜರೂಪ ತೋರಿರಿ
ಏರು|| ಆಗ ಬ್ಯಾಗ ಲಗ್ಗ ಕ್ಷಣದಾಗ
ಚ್ಯಾಲಿ|| ಭೂಪ ತದ್ರೂಪ ಹುಲಿರೂಪ ಅಡಗಿಸಿ
ಮೋಜ ಸ್ವಾಮಿ ನಿಜರೂಪ ತೋರಿಸಿ
ಭಕ್ತರೆಲ್ಲ ನಿಂತ್ರ ಮುಂದ ಕೈಯ್ಯ ಜೋಡಿಸಿ
ಸತ್ಯ ಮನಗಂಡಾ ಹಿಂದಿಗೆ ಹಿಂಡಾ ಸ್ವಾಮಿಗೆ ಬೇಡಿಕೊಂಡಾ
ಎಷ್ಟೋಜನಾ ಮಾಡಿಕೊಂಡ್ರೊ ಖಾತ್ರಿ ಭಕ್ತರ ಆದರು ಮಿತಿಮೀರಿ || ೩ ||

ಇ|| ಬಾಗಲಕೋಟೆ ಬಿಟ್ಟು ಹೊಂಟ್ರೋ | ನಡದಾರ ಕುದುರಿಯೇರಿ
ಊರೂರ ಮಾಡುತ ಸಂಚಾರಿ | ಕೆಂಬಾವಿಗೆ ಬಂತ ಸವಾರಿ
ಏರು|| ಬಂದರು ಅಲ್ಲಿ ಭಕ್ತರು ಕೂಡ್ಯಾರು ಕರಕೊಂಡ ನಡದರು
ಚ್ಯಾಲಿ|| ಸಾಲ ಕರಡಿ ಮ್ಯಾಳ ತಾಳ ಬಾಜಾ ಭಜಂತ್ರೀ
ಬಂತ ಬಾರಸಿಗೊಂತ ನೌ ಬತ್ತ ನಗಾರಿ
ನಡುವೆ ಪಾತರಮ್ಯಾಳ ಕುಣಿತಾಳ ಶಾಪರಿ
ಸಡಗರದಿಂದ ಶರಣರ ಮುಂದ ಬಾಜಾರ ಹಿಡಿದಾ
ಎಡಬಲ ಹಿಡಿದ ಆಪ್ತಾಗಿರಿ ಭಕ್ತರು ಹಾರಸತಿದ್ರೋ ಚೌರಿ || ೪ ||

ನಡದೀತ ಸರತಿಮ್ಯಾಗ ದಿನಾ ಒಂದ ಓಣಿ ಬೀದಿಗೇರಿ
ಸಣ್ಣ ದೊಡ್ಡ ತವಂಗರಿ ಅಷ್ಟು ಮನಿ ಹೋದಾವ ತೀರಿ
ಏರು|| ಓರ್ವ ಬಡವಾ ಇರಾವಾ ಏಕನಿಷ್ಠಿ
ಬಂದ ಶರಣರ ಮುಂದ ನಿಂತ ಮಾಡಿ ವಂದನಾ
ಏಕನಿಷ್ಟೆಯಿಂದ ಕೊಟ್ಟ ಹೋದಾ ಔತಣಾ
ಬಂದ ಮಡದಿಗೆಂದ ಇಂದ ಮಾಡ ಪಕವಾನಾ
ಪ್ರೀತಿಲಿಂದ ಆಗಿ ಆನಂದ ಬೇಧ ಇಲ್ಲದಾ
ಮನಿಗೆ ಬರತಾರ ಮನೋಹರಿ | ನಮ್ಮ ಮರತುಜಾ ಖಾದರಿ || ೫ ||

ಇ|| ಕೇಳಿ ಗಂಡನ ಮಾತ ಪತಿವ್ರತಾ ಆದಾಳ ಗಾಬರಿ
ಬಡತಾನ ಐತಿ ನಮ್ಮದು ಭಾರಿ | ತಿನ್ನಲಾಕೆ ಜ್ವಾಳಾ ಇಲ್ಲ ಸೆರಿ |
ಏರು|| ಸತಿ ಪತಿ ಚಿಂತಿ ಇಲ್ಲ ಗತಿ
ಚ್ಯಾಲಿ|| ಅಷ್ಟೊತ್ತಿಗೆ ಔತಣ ಹೊತ್ತ ಮೀರಿ ಹೋದೀತು
ಅಂತ್ರ ದೃಷ್ಟಿ ಕುಂತ್ರ ಸ್ವಾಮಿಗೆ ತಂತ್ರ ತಿಳಿದೀತು.
ಇಲ್ಲ ಅಡಗಿ ಬರೇ ಗಡಗಿ ಎಲ್ಲ ಕಂಡೀತು.
ಕರುಣವಂತ ಶರಣಾ ಬೇಕಂತಾ | ತಾವೇ ನಡಕೊಂತಾ |
ಸಂಗತಿಲೆ ಭಕ್ತಜನಾ ಐತ್ರಿ | ಬಂದಾರೆ | ಮರತುಜಾ ಖಾದರಿ || ೬ ||

ಇ|| ಬಂದ ಬಡವನ ಮನಿಗೆ ಕುಂತಾರ | ಮರತುಜಾ ಖಾದರಿ
ಸತಿಗೆ ಹುಟ್ಟೀತ ಥರಥರಿ | ನೋಡತಾಳ ತನ್ನ ಗಂಡನ ಮಾರಿ
ಏರು|| ಖ್ಯಾಲಾ ಮನಿಯೆಲ್ಲಾ ನೋಡ್ಯಾಳಲ್ಲಾ ಏನು ಇದ್ದಿಲ್ಲಾ
ಚ್ಯಾಲಿ|| ಅಬರು ಹೋಗಿ ಜೀವಾ ನಂದು ಇಟ್ಟೇನು ಫಲಾ
ಸತ್ತ ಹೋಗಬೇಕಂತಾಳ ಹಾಕಿಕೊಂಡ ಉರಲಾ
ಚಿಂತಿವೊಳಗ ಜಂತಿಗೆ ಹಗ್ಗ ಹಾಕ್ಯಾಳಲ್ಲಾ ಮತ್ತು ಬಂದಖ್ಯಾಲಾ
ಇಳಿಸ್ಯಾಳ ಅಡಕಲಾ ಹಾತೊರಿ ಕಮಲಾ
ತುಂಬಿದ್ದವು ಅಡಕಲದಾನ ಸ್ವಾರಿ | ಶ್ಯಾಂವಿ ಗುಳಗಿ ತುಪ್ಪ ಸಕ್ಕರಿ || ೭ ||

ಇ|| ಮನ ಸಂತೋಷಾಗಿ ಕರದಾಳ ಗಂಡಗ ನಾರಿ
ತೋರಿಸಿ ಅಷ್ಟು ಸಾಮಗ್ರಿ ಕೊಟ್ಟಾರ ಮರತುಜಾ ಖಾದರಿ
ಏರು|| ಮನಸಾ ಹರಷಾ ಪುರಷಾ ಆಗಿ ಸಂತೋಷಾ
ಚ್ಯಾಲಿ|| ಬಂದ-ಮಂದಿ ಉಂಡ ಸಂತ ಆದರೂ
ಸ್ವಾಮಿ ಶರಣರ ಮಹಿಮೆ ಕಣಗಂಡ ಕಂಡರೂ
ಗಂಡ ಹೆಂಡತಿ ಎದ್ದ ಸ್ವಾಮಿ ಚರಣ ಹಿಡಿದರೂ
ಸ್ವಾಮಿ ಶರಣ ಉಳಿಸೀರಿ ಅಬರೂ ಬೇಡಿಕೊಂಡರೂ
ಇನ್ನು ಮುಕ್ತಿ ಕೊಡಿಸರಿ ಸ್ವಾಮಿ ಮರತುಜಾ ಖಾದರಿ || ೮ ||

ಇ|| ಬಾಗಲಕೋಟಿವೊಳಗ ಲಚಮನಸಿಂಗನ ಶಾಹೀರಿ
ಬಂಗಾರ ಚೇಪ ಗಟ್ಟಿವರಿ ಕಸರ ಬಂದರ ತಗಿಯೋ ಭೀಮಾರಿ
ಏರು|| ಧೀರಾ ಪೀರಾ ದಸ್ತಗೀರಾ ಕರುಣಸಾಗರಾ
ಚ್ಯಾಲಿ|| ಕೆಸುಪೀರ ಗೌಸು ನಾಗುಗ ಲೇಸ ಮಾಡ್ಯಾರೋ
ಪಡಕ | ಬಂದ ಖಡಕ | ವೈರಿ ಹೆಡಕ | ಮುರದಾರೋ
ಮುರುಕ | ನೀ ಅಳಬುರಕ | ನಿನಗೆ ಕೇಳೂದಿಲ್ಲ ಯಾರೂ
ನೀ ನಮ್ಮ ಜೋಡಿ ಬರೂದಿಲ್ಲ ಹೇಡಿ ಪೋಣಿಸಿ ಮೂಗಿನ್ಯಾಗ ಕವಡಿ
ಬೇದಾಡಬ್ಯಾಡೋ ನಿಗನಿಗರಿ ಮುಕಳಾಗ ಜಡೊತೇನಿ ಹಾರಿ.

* * *

## ೧೫. ಖಾದಿರ ಶ್ಯಾವಲಿಯವರ ಚರಿತ್ರೆ

ಉಲ್ಲಾಸದಿ ಕೇಳಬೇಕರಿ | ದೈವಾ ಇಟ್ಟು ಕರುಣಾ
ತಿಳಿದಷ್ಟು ಶರಣರ ಕಥನಾ ಸಾರುವೆ ಸರ್ವರ ಮುನ್ನಾ
ಏರು|| ಅಲ್ಲಾ ಉದ್ದೀನ ಶಾ ಖಾದರಿಯು ಬಿಟ್ಟರು ಸೈಡೂರನ್ನ
ಬಂದು ಸೇರ್ಯಾರೋ ಬಂಕಾಪುರದ ಒಂದು ಆರ್ಣ್ಯಾ
ಒಂದಿತ್ತು ಬೇವಿನ ಮರವನ ಛಂದದಿ ಅಲ್ಲಿ ಮಾಡ್ಯಾರ ಠಾಣಾ
ಕುಂದದಿ ಮನದಿ ಹಗಲು ಇರುಳು ಮಾಡೂತ ಶಿವನ ಧ್ಯಾನಾ
ಬದಿಯಲ್ಲಿ ಒಬ್ಬ ಗೋಸಾದಿ ಇದ್ದನು ಮಾಡೂತ ಜಾದೂನಾ
ಸಾಧು ನೆನಸೂತಲವನ ಬೋಧವ ಮಾಡೂತಲಿ ವನ
ಇವರು ಇದ್ದರ ನನ್ನ ಆಟವು ನಡೆಯುವುದಿಲ್ಲಣ್ಣಾ
ತಿಳಿದು ಜಾದೂಮಾಡಿ ಕಲ್ಲುಗಳನ್ನು ತಲೆಮ್ಯಾಲೆ ಸುರಿಸೋಣ
ಕಲ್ಲು ಬಡಿಯದೆ ಶರಣಾ ಅಲ್ಲಮನ ಧ್ಯಾನದಿ ಶರಣರು ಸುಮ್ಮನೆ ಕೂಡ್ರೋಣಾ
ಅಲ್ಲೆ ಬಿಟ್ಟು ಗೋಸಾವಿ ಯಾವಲ್ಲೋ ಕಾಣದಾಂಗ ಹೋಗೋಣಾ || ೧ ||

ಜಾಲವು ತಿಳಿಯದೆ ಶರಣಾ ಭಾವಿಯಲ್ಲಿ ದೂಡೋಣಾ
ನಿಲ್ಲದೆ ಗೋಸಾವಿ ಬಂದು ಕೇಳಿದನ ತನ್ನ ಬಂಗಾರ

ನೋಡಿಲ್ಲ ನಾನ ಕಾಣೆನೆನ್ನಲು ಕೇಳಲಿಲ್ಲ ದುಶ್ಮನ್
ಮೂಡನೆ ತಡಿಯೊಂದು ಕ್ಷಣ ಕೊಡತೇನಿ ನಿನ್ನ ಬಂಗಾರದ
ದೊಡ್ಡದೊಂದು ಕಲ್ಲಿನ ಮೇಲೆ ಶರಣರು ಉಗುಳೋಣ
ಉತ್ತಮವಾದ ಬಂಗಾರವಾದೀತು ಕಲ್ಲು ಆಕ್ಷಣಾ
ಶರಣರ ಕೌತುಕವನ್ನು ನೋಡಿ ದುಶ್ಮನ್
ಸತ್ಯ ಶರಣರೆಂದು ತಿಳಿದು ಅವರಿಗೆ ಮಾಡಿದ ವಂದಿನ || ೨ ||

(ಆತುರದಿಂದ ಕುಳಿತು ಕೇಳುವ ಸರ್ವ ಸಭಿಕರೆ ಅಲ್ಲಾ ಉದ್ದೀನ್ ಖಾದ್ರಿಯ ಮಹಿಮಾ ಸುತ್ತಲೂ ಹಬ್ಬುತ್ತಾ ಬಂತು. ಆದರೆ ಅದೇ ಊರಿನಲ್ಲಿ ಹಸನ ಮಿಯಾ ಎಂಬುವನು ಅವರ ಸತ್ಯವನ್ನು ಪರೀಕ್ಷಿಸಿ ಶಿಷ್ಯನಾದನು ಬಳಿಕ ಎಷ್ಟೋ ಜನ ಶಿಷ್ಯರಾದರು. ಆಮೇಲೆ ಗುರುಗಳು ಎಲ್ಲಾ ಶಿಷ್ಯರಿಗೆ ತಮ್ಮ ಬಳಿಗೆ ಕರೆದು ಹೀಗೆ ಹೇಳುತ್ತಾರೆ. ಎಲೈ ಶಿಷ್ಯರೇ ನನ್ನ ಮರಣವು ಇದೇ ಶುಕ್ರವಾರ ದಿವಸವೆ ಅಂದು ನಾನು ಸ್ವರ್ಗಸ್ಥನಾಗುವೆನು. ನೀವು ನನ್ನ ಸ್ರವಕ್ಕೆ ಮೈ ತೊಳಿಸದೆ ಕಫನ್ ತೊಡಿಸದೆ ದಫನ್ ಮಾಡಿರಿ ಎಂದು ಹೇಳಿ ಶುಕ್ರವಾರ ದಿನದಂದು ಸ್ವರ್ಗಸ್ಥರಾದರು. ಗುರುಗಳು ನಮ್ಮನ್ನು ಬಿಟ್ಟು ಹೋಗುತ್ತಾರೆಂದು ತಿಳಿದು ಎಲ್ಲ ಶಿಷ್ಯರು ಕೂಡಿಕೊಂಡು ದುಃಖಮಾಡುತ್ತಾರೆ)

ಏರು|| ಭುವನ ಬಿಟ್ಟು ಇಂದಿಗೆ ಹೊರಟಾರಿ ಗುರುವೆ
ಇಂದಿಗೆ ನಿಮ್ಮ ಚರಣಾ ನಂದಿಸಿದ ಭಗವಾನಾ
ವಂದನೆ ಮಾಡುವೆನು ಇನ್ನಾರಿಗೆ ಗುರುವೆ
ಒಡೆಯರೆ ಗಂಡಾಂತರ ಮಾಡೆಂದು ಪರಿಹಾರ
ಬೇಡೋಣಿನ್ನ ಯಾರಿಗೆ ಗುರುವೆ | ಹಾಂ | ಹಾಂ |
ಸೇರ್‍ಯಾರು ಬಂದು ಊರಿನ ಜನ ಮಾಡಲಿಕ್ಕೆ ದಫನ
ಮೀರದೆ ಶಿಷ್ಯರು ಗುರುವಚನ ಅರಿಯದೆ ಕೇಳಿದರು ಪಂಡಿತರನ್ನ
ವಿರುದ್ಧಾಗುವುದು ಎಂದು ಶಾಸ್ತ್ರಕ್ಕೆ ಸರಿಯಾಗಿ ಮೈತೊಳಿಸಿರಣ್ಣಾ
ಒಡನೆ ಕಫನ್ ತೊಡಸಿ ಒಯ್ದಾರ ಸ್ರವ ಗೋರಿಯ ಬಳಿಕಿನ್ನಾ
ಮಾಡ್ಯಾರ ನಮಾಜ ಕೂಡಿದ ಜನಾ ಇಡಲು ಗೋರಿಯ ಒಳಗೆ
ಹೇಗೆ ದೂಡಬೇಕೆಂದು ಎನ್ನುವುದರೊಳಗ
ಕೂಡಲೆ ಎದ್ದರು ಕೊಡವಿಕೊಂಡು ಶರಣಾ || ೩ ||

ಇ|| ದುಷ್ಟ ಶಿಷ್ಯರೇ ಎಷ್ಟು ಹೇಳಿದರೂ ನಿಮಗೆ
ಭ್ರಷ್ಟಗೆಡಿಸಿದಿರಿ ಕೊಟ್ಟಂತ ವಚನ
ಏರು|| ಒಟ್ಟಾಗಿ ಬಂದೀರಿ ಹುಗಿಲಿಕ್ಕೆ ನನ್ನ
ಪಟ್ಟಣದಿ ನಿಮಗೆಂದಿಗೂ ದಫನ್ ಆಗಲಾರನೆಂದು ಸಿಟ್ಟೀಲೆ ಶರಣಾ
ಇ|| ಕಿಡಿಕಿಡಿ ಉಗುಳುತ್ತಾ ದುಡುಕಿಲೆ ಹೋಗಿದ್ದು ನೋಡಿದಾರೋ ಜನಾ
ಏರು|| ಕಡು ದುಃಖದಿ ಹಿಡಿದು ಚರಣಾ
ಒಡೆಯರೆ ಕ್ಷಮಾ ಮಾಡಿರಿ ನಮ್ಮ ತಪ್ಪನ್ನಾ
ಒಡನೆ ಬಂತು ಶರಣರಿಗೆ ಕರುಣಾ | ಕೂಡಿ ಶಿಷ್ಯರು ಮನಿಗೆ ಹೋಗೋಣಾ || ೪ ||

ಇ|| ಪ್ರೀತಿಯ ಶಿಷ್ಯಾ ಹುಸೇನಮಿಯಾ ಮಾಡಿದಾನೋ ಒಂದು ಹವನಾ
ಏರು|| ಸತ್ಯಶರಣರು ಹೀಗೆ ಇದ್ದರೆ ಚಿತ್ತಕ್ಕೆ ಬಂದಾಂಗ ಹೋಗುವುದಣ್ಣಾ

ಉತ್ತಮ ಹೆಣ್ಣು ತೆಗೆದು ಲಗ್ನ ಮಾಡಿದರೆತ್ತ ಹೋಗುವರಣ್ಣಾ
ಇ|| ಮಾಡಿ ಮನದಿ ಒಂದಿನ ಶರಣರದು ಹಿಡಿದು ಪಾದವನು
ಏರು|| ಒಡೆಯರೆ ಮಾಡಬೇಕರಿ ಇಚ್ಛಿತಾ ಪೂರ್ಣಾ
ಕೊಡದಲೆ ಭಾಷೆ ಬಿಡೂದಿಲ್ಲ ಚರಣಾ
ಗೂಡತನ ತಿಳಿಯದ ಶರಣಾ ಮಾಡುವೆನೆಂದು ವಚನ ಕೊಡೋಣ || ೫ ||

ಇ|| ಕೇಳರಿ ಶರಣಾ ಪ್ರಯಾಣ ಮಾಡಬೇಕೆಂಬ ಮನ
ಏರು|| ಹಲವು ತರದಿ ಹೇಳ್ಯಾರೋ ಶರಣಾ | ಕೇಳೂತ ಹೊಂಟಾರು ಹುಡುಕೂತ ಹೆಣ್ಣಾ
ಒಲಿದಿರುವುದು ಚುಟಗೇರಿ ಪಟ್ಟಣಾ | ಅಲ್ಲೊಂದು ಇತ್ರಿ ಖಾದ್ರಿ ಮನೆತನಾ
ಇ|| ನೋಡಿ ವರ ಹೆಣ್ಣು ಕೊಡುವೆನೆನ್ನಲು ಬಂದ ಶರಣರನ್ನ
ಏರು|| ಗಾಡಧಿ ಕರೆದೊಯ್ದು ಮಾಡಿ ದರ್ಶನ
ನೋಡಬೇಕರಿ ನಿಮ್ಮ ವಂಶ ಪರೀಕ್ಷೆಯನು
ಒಡನೆ ಕಿತ್ತರೊಂದು ಮೀಸೆ ಕೂದಲವನಾ
ನೋಡದೆ ಬೆಂಕಿಯೊಳಗ ಒಗಿಯೋಣ || ೬ ||

ಇ|| ಕೂದಲು ಸುಡದೆ ಇರಲು ನೋಡಿ ಆ ಹೆಣ್ಣಿನ ಜನ
ಏರು|| ಆಗ ನೋಡಿರಿ ಹೆಣ್ಣಿನ ಜನ ತಮದೊಂದು ಕೂದಲ ಕಿತ್ತರು ಆಕ್ಷಣಾ
ಅದೇ ಬೆಂಕಿಯೊಳಗ ಒಗಿಯೋಣ | ಎರಡು ಬಿದ್ದಾವ ತಳಿಕೆಯನಾ
ಇ|| ಒಂದೇ ಮನೆತನವೆಂದು ಪರಿಮಾಣ ಮಾಡಿ ಕೊಡಲು ಆಕ್ಷಣಾ
ಏರು|| ಚಂದದಿ ಸತಿಗೂಡಿ ಬಂಕಾಪುರನಾ | ಬಂದು ಸೇರ್ಯಾರೋ ಸತ್ತುಳ್ಳ ಶರಣಾ
ಮುಂದ ಇರುವುದಿವರ ಚರಿತ್ರೆಯನ | ಒಂದಿಷ್ಟು ಕೊಡರಿ ಸಮ್ಮತಿನ || ೭ ||

ಏರು|| ಶರಣ ಅಲ್ಲಾ ಉದ್ದೀನ ಶಾ ಖಾದ್ರಿಯ ಹೊಟ್ಟೆಯಲಿ
ಮಹ್ಮದ ಹಯ್ಯತನೆಂಬುವ ಹುಟ್ಯಾನು ಬಾಲಾ
ಏರು|| ಮಿರಿ ಮಿರಿ ಮಿಂಚುವ ರೂಪ ಮಿಗಿಲಾ
ಹರನು ತೋರ್ಯಾನೊಂದು ಲೀಲಾ | ತರಳ ಹುಟ್ಟಿದ ಐದನೆಯ ದಿವಸದ ಮೇಲಾ
ಹರುಷದಿ ತಾಯಿಯ ಮಲಿಹಾಲ | ಕುಡಿಸಬೇಕೆಂದು ಮಗನಿಗೆ ಮಲಿಗೆ ಹಚ್ಚಾರಲ್ಲಾ
ನೋಡಿ ತಾಯಿಗೆ ಹೇಳುವುದು ಆ ಬಾಲಾ
ಏರು|| ಕುಡಿ ಕುಡಿ ಎಂದು ಮಲಿಹಾಲ ಕುಡಿಸಬೇಡವ್ವ ನನಗ ವಿಫಲಾ || ೮ ||

ಇ|| ಕಡು ಹಸುವು ಆದಾಗ್ಗೆ ನಿನಗೆ ಕರೆಯುವೆ ನಾ
ಒಡನೆ ಬಂದು ಕಡಿಸವ್ವ ಮಲಿಹಾಲಾ
ಒಂದು ಕೋಲಿಯೊಳಗಿನ್ನ ಮಲಗಿಸವ್ವ ಎನಗೆ ಮುನ್ನಾ
ಒಂದು ಮಾತವ್ವ ನಾನಿದ್ದ ಕೋಲಿ ಬಾಗಿಲ ತೆಗೆಯಬೇಡಾ ನೀನಾ
ಹೀಗೆ ಹೇಳುವುದು ಕೇಳಿ ತಾಯಿ ಅಕಲಾ
ನುಡಿದರ ಪತಿಯ ಮುಂದ ಬಾಲನಾಡಿದ ಸಲ್ಲ
ನಡಸೂತ ಇದರಂತೆ ಇದ್ದರಲ್ಲ || ೯ ||

ಏರು|| ಒಂದಿನ ಪ್ರಾತಃಕಾಲ ದಡಲ್ಲೆಂದು ಆತುಗುಲ್ಲಾ
ಚಂದದಿ ತಾಯವ್ವಾ ಬಂದು ಕೋಲಿಯೊಳು ಮೊದಲಾ
ಹುಡುಕಲು ಇದ್ದಿದಿಲ್ಲಾ ಮಲಗಿದ ಬಾಲಾ ಕಂದ ಮಲಗಿದ ಹತ್ತರ
ಗೋರಿಯಂತೆ ಇತ್ತು ಚಂದದಿ ತೋರಿತು ಜನಕೆಲ್ಲಾ
ತಂದೆ ತಾಯಿ ಅಂದರಲ್ಲಾ | ನಿಂದು ತಿಳಿಯದು ಶಿವನಲೀಲಾ
ಇ|| ಕಂದಾ ಕೊಟ್ಟಿದ್ದು ಒಯ್ದಾ ತೋರಿಸಿ ಕಮಲಾ
ಕುಂದದಿ ಕೊಡು ಮತ್ತೊಂದು ಫಲಾ || ೧೦ ||

(ಮಾತು : ಆತುರದಿಂದ ಕೂತು ಕೇಳುವ ಸರ್ವ ಸಭಿಕರೆ ಅಲ್ಲಾ ಉದ್ದೀನ್ ಶಾ ರವರಿಗೆ ಹುಟ್ಟಿದ ಮಗನು ಮಾಯವಾಗಲು ಪುನಃ ಹರನಿಗೆ ಮೊರೆಯಿಟ್ಟು ಅರಿಕೆ ಮಾಡಲು ಅವರ ಉದರದಲ್ಲಿ ಅಬ್ದುಲ್ ರಜಾಕ ಶಾ ಖಾದ್ರಿ, ಅಹ್ಮದ ಶಾ ಖಾದ್ರಿ, ಯಾಸೀನ ಶಾ ಖಾದ್ರಿ ಮತ್ತು ಹಜರತ್ ಫಾತಿಮಾಬಿ, ಹಜರತ್ ಹಲೀಮಾಬಿ ಎಂಬೆರಡು ಹೆಣ್ಣು ಮಕ್ಕಳನ್ನು ಕೊಟ್ಟರು ಹಜರತ್ ಹಲೀಮಾಬಿ ಅವರಿಗೆ ಬಿಜಾಪುರಕ್ಕೆ ಮದುವೆ ಮಾಡಿಕೊಟ್ಟರು ಅಷ್ಟರಲ್ಲಿ ಹಲೀಮಾಬಿ ಅವರಿಗೆ ಆರು ತಿಂಗಳು ಗರ್ಭವಿತ್ತು ಇವರ ತಂದೆ ತಾಯಿಗಳ ಮರಣದ ಸುದ್ದಿ ಕೇಳಿ ಬಂಕಾಪುರಕ್ಕೆ ಬಂದರು ಮುಂದೆ...)

ಕುಂದದಿ ನವಮಾಸ ತುಂಬಿ ಬ್ಯಾನಿ ಎದ್ದಾವು ಒಂದಿನಾ |
ಚಂದದಿ ಕೂಸು ಆಗಲು ಜನನ | ಹಿಂದಕ ತಾಯಿ ಬಿದ್ದು ಹೊಂದ್ಯಾಳೋ ಮರಣಾ
ನೋಡಿ ಮನ ಅಬ್ದುಲ್ ರಜಾಕ್ ಮುಂದ ಗತಿಯೇನಾ ಎಂದು
ಎತ್ತಿ ಕಂದನ್ನಾ ಒಂದು ತೆಗ್ಗಿನೊಳು ಅದನ ಒಗಿದಾರಣ್ಣಾ
ಸತ್ತು ಬಕ್ಕಳು ಆದಾವು ಇಂದಿಗೆ ಮೂರು ದಿನಾ
ಏರು|| ಫಾತಿಮಾ ಮಾಡತಾರೋ ರೋಧನಾ |
ಹಿತ್ತಲದೊಳಗ ಹೋದಾರಣ್ಣಾ
ಸೀತಾಪರಿಯ ಗಿಡದ ಬುಡದಲ್ಲಿ ಆಡುವ ರತನಾ
ಒತ್ತರದಿ ಹೋಗಿ ನೋಡೋಣ || ೧೧ ||

ಇ|| ಪ್ರೀತೀಲೆ ಆಡುವ ಕಂದನ್ನಾ
ಓಡುತ ಬಂದು ಹೇಳ್ಯಾಳೋ ಅಣ್ಣ ತಮ್ಮರ ಮುಂದಿನ್ನಾ
ಏರು|| ಮಡಿದು ಹೋಗಲೆಂದು ಒಗೆದ ಕೂಸನ್ನಾ
ಕುಡದಲಿ ಮರಣ ಉಳಿಸಿದಿ ಪ್ರಾಣಾ
ಮೃಡನೆ ನಿಂದು ತಿಳಿಯದು ಯಾರಿಗೆ ಮಹಿಮಾವನ್ನ
ಕಂದಗ ಮಾಡಲಿಕ್ಕೆ ಜೋಪಾನ ಗೌಡರಿಗೆ ಕರಿಶ್ಯಾರಾಕ್ಷಣಾ || ೧೨ ||

ಇ|| ಯಾರ ಮಲಿಗೆ ಹಚ್ಚಲು ಕೂಸು ಕುಡಿಯದೆ ಹಾಲನ್ನಾ
ಏರು|| ಪರಿಪರಿಯಿಂದ ನೋಡ್ಯಾರೋ ಜನಾ
ಬೋರ್ಯಾಡಿ ಕೂಸು ಅಳುವುದಣ್ಣಾ
ತರಳನ ಸೋದರಮಾವ ಅಬ್ದುಲ್ ರಜಾಕನಾ
ತ್ವರಿತದಿ ಎತ್ತಿ ಕಂದನ್ನಾತಿರುಗೂತ ಮಾಡೂತ ಸಮಾಧಾನ

ಆಡಿಸುತ ಎದಿಗೆ ಹಚ್ಚಲು ಕೂಸು ಆಕ್ಷಣಾ
ಏರು|| ಒಡನೆ ಪಿಡಿದು ಮಾವನ ಮಲಿಯನ || ೧೩ ||

ಗಟಗಟ ಕುಡಿಯಿತು ಹಾಲನ್ನ | ಒಡಲು ತುಂಬಿ ಹರುಷದಿ ಆಡುವುದಣ್ಣಾ
ನೋಡಿ ಕೌತುಕ ಜನ ಮಾಡ್ಯಾರೋ ಕಂದನ ವರುಣಾ
ಹಜರತ ಶಾ ಖಾದ್ರಿ ಎಂದು ಇಟ್ಟಾರು ಹೆಸರನ್ನಾ
ಮೋಜಿಲಿ ಕುಡಿಯೂತ ಮಾವನ ಮಲಿಯನ್ನಾ
ಸೋಜಿಗದಿ ಬೆಳೆದರು ಸುಗುಣಾ
ಬಿಜಾಪುರಕ್ಕೆ ಬಂದರು ಖಾದರಿ ಮುಂದಿನ ಕಥನಾ
ಸಹಜ ಕೊಡರಿ ಸುಮ್ಮತಿನಾ ರಾಜದಿ ಕಾಗಿನೆಲ್ಲಿ ವಾಹಿನಾ || ೧೪ ||

* * *

## ೧೬. ಮೆಹಬೂಬರು ಜೀವದಾನ ಮಾಡಿದ ಪದಾ

ಚಂದದಿಂದ ದೈವಕ ಮಾಡುವೆ ಶರಣಾ
ತುಸು ಕಂದನ ಮ್ಯಾಲೆ ಇಡಬೇಕ ಕರುಣಾ ||
ಏರು|| ದೀರ ಪೀರಾನೆ ಪೀರ ದಸ್ತಗೀರ ಮೈಬೂಬ ಅನಿಸ್ಯಾರು
ಭಕ್ತಿಪಾಲಕ ಮುಕ್ತಿದಾಯಕ ಸತ್ಯವಂತ ಶರಣರು
ಕೊಟ್ಟ ವರಗಳ ಹುಟ್ಟಿಸಿದ ಸೃಷ್ಟಿಕರ್ತ ಸದ್ಗುರು
ಬರದ ನಾಲಿಗೆ ಮ್ಯಾಲ ಸರೂ ಸಂಪೂರಣಾ || ೧ ||

ಚ್ಯಾಲ|| ಬಂದ ಪಾದಕ ಬಿದ್ದ ಭಕ್ತನ ಮನಸ್ವಂತ ಶಾಂತ
ಮಾಡಿಸಿ ಕಳಿಸುವರೋ ಸತ್ಯವಾನಾ||
ಏರು|| ಕಿವುಡಗ ಕಿವಿ, ಕುರುಡಗ ಕಣ್ಣು ಮೂಕಗ ಮಾತಾಡಿಸಿ
ಹುಟ್ಟು ಬಂಜಿಗೆ ಕೊಟ್ಟು ಫಲಗಳ ಎತ್ತಿ ಇಳುವಿ ಅಡಿಸಿ
ಶಾಂತ ಪಡಿಸ್ಯಾರ ಸತ್ಯವಂತ ಗಂಡ ಹೆಂಡತಿನ ಕೂಡಿಸಿ
ಬಾಯಿ ಸಾಲದು ಮಾಡಲಿಕ್ಕೆ ವರಣನಾ || ೨ ||

ಚ್ಯಾಲ|| ಶಹರ ಬಗದಾದಲ್ಲೆ ಇರುವ ಠಿಕಾಣಾ
ಮೈಬೂಬ ಸುಬಹಾನ ಅನ್ನೊ ಸಣ್ಣ ಪುತ್ರ ರತನಾ||
ಏರು|| ಮಡಿ ಹುಡಿಯಿಂದ ಹೆಸರಗೊಂಡರ ಜನ್ಮ ಆಗೂದ ಪಾವನಾ
ಮೈಲಿಗೆ ಮುಡಚಟ್ಟ ನಡೂದಿಲ್ಲಾ ಕಷ್ಟ ಬಿಡಲಾರದು ಮನಾ|

ಅವರ ಗುಮಜದ ಮ್ಯಾಲೆ ಪಕ್ಷಿ ಹಾರೋದಿಲ್ಲಾ ಇಂದಿನ ತನಾ
ಸುಳ್ಳ ಅಂದೀ ಶಾಹೀರ ಕಿತ್ತೇನೋ ಕಣ್ಣಾ || ೩ ||

ಚ್ಯಾಲ|| ಸೇಲ ಮಾಡುತ್ತ ಶರಣರು ಒಂದು ದಿನಾ
ಹವಾಸಿರಿ ಹೊಂಟಾರೋ ಹೊಳಿ ದಂಡಿತನಾ||
ಏರು|| ಒಂದ ಮುದುಕಿ ಬಂದ್ಲು ತುಂಬಿ ನೀರು ಕೊಡದಲ್ಲಿ
ಹೊತ್ತ ಕೊಡ ಅತಿಗೂಂತ ಬರತಿದ್ಲು ಸ್ವತಃ ನೋಡಿ ದಸ್ತಗೀರವಲಿ
ಕರೆದು ಮುದುಕಿಗೆ ತರಬಿ ಕೇಳತಾರ ಒಡೆದು ಹೇಳ ನಿನ್ನ ಬಾಯಿಯಲಿ
ದುಃಖ ಯಾಕ ಮಾಡತೀದಿ ಏನ ಕಾರಣಾ || ೪ ||

ಚ್ಯಾಲ|| ಮುದಕಿ ಹೇಳ್ಯಾಳೊ ಶರಣರಿಗೆ ಅದೃಷ್ಟಹೀನ ಗೋಳಬಾಳ
ನಂದೈತರಿ ಹೇಳಲೇನಾ||
ಏರು|| ನನ್ನ ಹೊಟ್ಟೆಲಿ ಇತ್ತೊಂದಾ ಮುತ್ತಿನಂಥ ರತನಾ
ಅವನ ಮದುವಿಗೆ ಕಳಿಸಿದೆ ನಾ ಕೂಡಿ ಬೀಗರ ಬಿಜ್ಜರಾ
ಕಾರ್ಯ ತೀರಿಸಿ ಬರುವಾಗ ನಂದಿಯು ಬಂದೀತು ಭರಪೂರಾ
ಮುಳುಗಿ ಹರಗೋಲಾ ಸತ್ತಾರ ಮುನಿದು ಭಗವಾನಾ || ೫ ||

ಸತ್ತು ಹನ್ನೆರಡು ವರ್ಷವಾಯಿತು ಒಂದೇ ಸವನಾ
ಅತ್ತು ಅತ್ತು ಮಂಜು ಆಗ್ಯಾವೋ ಕಣ್ಣಾ | ಇಲ್ಲೋ ತ್ರಾಣಾ
ಏರು|| ಬೀಗ ಬಿಜ್ಜರು ನೀಗಿ ಹೋದರು ಮುಳುಗಿ ನೀರಾಗ
ಮಗಾ ಸೊಸಿ ಚಿಕ್ಕಮಕ್ಕಳಿಗಿಕ್ಕಿ ಆದೆ ದಿಕ್ಕಿಲ್ಲದ ಪರದೇಶಿ
ನದಿ ನೀರಿನ ಹಾದಿ ಹಿಡಿದರೆ ಎದಿ ಹಾರೂದು ಡಬಕಾಸಿ
ನೆಪ್ಪ ಆಗತೈತಿ ಗಪ್ಪನೆ ನನಗೆ ಇಲ್ಲಿ ಬರೂದರೊಳಗ || ೬ ||

ಚ್ಯಾಲ|| ಕೇಳಿ ಬಡವಿ ಮುದುಕಿದು ಎಲ್ಲ ವರ್ತಮಾನಾ
ದಯಾವಂತ ಶರಣರಿಗೆ ಆಗಬಂತೋ ಕರುಣಾ
ಏರು|| ಸರಜಸ್ವಾಮಿ ಅರಜ ಮಡ್ಯಾರೋ ಶಿವನ ಕಡಿಗೆ ಧ್ಯಾನಿಸಿ
ಕಳಿಸಿ ಕೊಡಬೇಕ ಮುದುಕಿ ಬಳಗಕ ಜೀವಕಳೆ ತುಂಬಿಸಿ
ಅಂದ್ರ ಮುದುಕಿಗೆ ನಿಂದ್ರ ಸ್ವಲ್ಪ ಬಂದ್ರ ನಿನ್ನ ಮಗ ಸೊಸಿ ||
ಬೀದ ಬಿಜ್ಜರು ಬರತಾರ ಹಿಡಿ ಸಮಾಧಾನಾ || ೭ ||

ಚ್ಯಾಲ|| ಮುದುಕಿ ತೆಲಿಮ್ಯಾಲಿನ ಬಿಂದಿಗಿ ಇಳಿಸಿ
ಸುತ್ತಮುತ್ತ ಕಣ್ಣು ತೆರೆದು ನೋಡ್ಯಾಳ |
ಎಲ್ಲಿದ್ದಾರೋ ಸ್ವಾಮಿ ಕಾಣವಲ್ಲರೋ ನನ್ನ ಬಳಗ |
ಏರು|| ಅಲ್ಲ ನೀವು ಹೀಂಗ ಸುಳ್ಳ ಹೇಳಿ ಕಲ್ಲಮನಸ ಮಾಡುವುದು
ಬೆಂಕಿ ಮ್ಯಾಲೆ ಹುಲ್ಲು ಒಗೆದಂಗ ಕಿಚ್ಚು ಹೊಟ್ಯಾಗ ಏಳುವುದು

ಕೆಟ್ಟ ನನ್ನ ಅದೃಷ್ಟ ಚಲೋದಲ್ಲ ಕಷ್ಟ ಹತ್ತಿತು ಬೆನ್ನಿನಿಂದ |
ದುಃಖ ಶೋಕ ತಪ್ಪದು ನನಗ ಸಾವುತನಾ || ೮ ||

ಚ್ಯಾಲ|| ಎರಡನೆ ಸರತಿ ಸಾಂಬಗ ವರದಿ ಕೊಟ್ಟಾರ ಶರಣಾ
ಜಲ್ದಿ ಕಳಿಸಿ ಕೊಡಬೇಕ ಯಾಕ ಅನುಮಾನಾ |
ಏರು|| ಸ್ವಂತ ಆ ಭಗವಂತ ಮೈಬೂಬನ ಮಾತ ಮನಸಿಗೆ ತಂದನು
ಜೀವದೊಳು ಜೀವ ತುಂಬಿಸಿ ಸರುವ ಮಂದೀನ ಕಳಿಸ್ಯಾನೋ
ಬೀದರು ಬಿಜ್ಜರು ಚಂದದಿಂದ ಬಂದ ಮುದುಕಿಯ ಕಂಡಾರು
ಮುದುಕಿ ಶರಣರ ಪಾದಕ ಎರಗಿ ಮಾಡಿ ವಂದನಾ || ೯ ||

ಚ್ಯಾಲ|| ಸುತ್ಯದೇಶಕ ಗೊತ್ತ ಬಾಗಲಕೋಟಿ ಠಿಕಾಣಾ
ಶಿಸ್ತ ದಸ್ತಗೀರನ ವಸ್ತಿ ಐತಿ ವತನಾ |
ಕೇಸುಪೀರ ಹಿಂಗ ನಾಗು ಗೌಸುಗ
ಏರು|| ತಿಳಿಸಿ ಹೇಳ್ಯಾರ ಹಂಚಿಕೆ |
ರಂಗ ಲಚಮನಸಿಂಗನ ದಯದಿಂದ ಇಲ್ಲ ಹೆದರಿಕೆ
ಡುರುಕಿ ಹೊಡುತಾನ ಪರಕಿ ವೈರಿಗೆ ತಿಕ್ಕತೇನಿ ನೆಲಕ ಹಾಕಿ
ಈತನ ಮುಕಳಿಗೆ ಬಡೂತೇನಿ ಕ್ಯಾಮಂಣ್ಣಾ || ೧೦ ||

* * *

## ೧೭. ಮೆಹಬೂಬ – ಮಕಬೂಲರ ಚಿಣಿಪಣಿಯಾಟ

ಹದಿನಾರು ಸಾವಿರ ಶರಣರೊಳಗ ಶರಣ ಮಿಗಿಲಾ
ಹುಟ್ಟಿದ್ದಾ ತಂದಿ ಹೊಟ್ಟೀಲಿ ಮೆಹಬೂಬ ಪ್ರಭೂಲಾ
ಆತನ ತಾರೀಫಾ ಆಗೇತಿ ಅಪರೂಪಾ ಕುಂತ ಕೇಳರಿ ದೈವಾ
ಚಿತ್ತ ಇಟ್ಟು ಏಕಭಾವಾ | ಸಂತೋಷದಿಂದ ಪಂತರೆಲ್ಲಾ ಮೆಹಬೂಬನ ಮಜಲಾ || ೧ ||

ಮೆಹಬೂಬನ ಕಾಲಕೀರ್ತಿ ಕೇಳಿರಿ ಇನ್ನೂ ಮೇಲಾ
ಹುಚ್ಚಾಗಿ ಮುಚ್ಚೆ ಇಡುವುದಿಲ್ಲೊ ಬಿಚ್ಚಿ ಹೇಳುವೆ ಕುಲ್ಲಾ
ಶಾಸ್ತ್ರದ ಮಾರ್ಗ ಹಿಡಿದು ಹೇಳುವೆ ಜನದಾಗ ಒಡೆದು ವಹವ್ವಾರೆ ಗೌಸಾಲಿ
ಮಿಕ್ಕಿ ತಾ ಚಿಕ್ಕ ಪ್ರಾಯದಲ್ಲಿ | ಮೆಹಬೂಬ ತನ್ನ ಸತ್ಯ ತೋರಿದಂತಾ ಮಜಲಾ || ೨ ||

ಐದಾರು ವರ್ಷದ ಕಂದಾ ತೀರ ಸಣ್ಣ ಬಾಲಾ
ಶೆಡವಿಲಿಂದ ಮೆಹಬೂಬರಿನ್ನು ಕುಡಿಯುತಿದ್ರೋ ಹಾಲಾ
ಆತನ ವರಣಾ ಸೂರ್ಯನ ಕಿರಣಾ ಹೊಳೆದಂಗ ಥಳಾಥಳಾ
ಮಾರಿ ನೋಡಿದರೆ ಚೆನ್ನದರಳಾ | ಕಂದನಾ ನೋಡಿದರೆ ವಿಚಿತ್ರದ ಕಮಲಾ || ೩ ||

ಸಣ್ಣ ಸಣ್ಣ ಹುಡುಗರ ಸಂಗತೀಲೆ ಆಡುವರೋ ಹಗಲೆಲ್ಲಾ
ಸಂಗತಿಲೆ ಬಡವನ ಮಗ ಒಬ್ಬ ಇರೂತಿದ್ದ ಮಕಬೂಲಾ
ಬಗದಾದ ಪಟ್ಟಣದಲ್ಲಿ ಇಬ್ಬರೂ ಜೋಡಿಲಿ
ಸೂರ್ಯಚಂದ್ರನಾಂಗ ಪ್ರೀತೀಲೆ ಇದ್ದರೋ
ಇದ್ದಂಗ ಒಂದಿನಾ ಚಿಣಿಮಣಿಯ ಆಟಾ ಹೂಡ್ಯಾರೋ ಮಿಗಿಲಾ || ೪ ||

ಅಂಜಿಕಿ ಇಲ್ಲೊ ಸಂಜೀತನಾ ಆಡ್ಯಾರೋ ಖುಷಿಯಾಲಾ
ಮೆಹಬೂಬನ ಆಟ ಏರಿತೋ ಮಕಬೂಲನ ಮೇಲಾ
ಮಕಬೂಲನ ತಾಯಿ ಬಂದು ಮಾಡ್ಯಾಳೋ ಬಾಯಿ ಆಟ ಬಿಡೋ ಕಂದಾ
ಊಟಕ ಮನಿಗೆ ನಡಿಯೋ ಕಂದಾ
ಮಕಬೂಲ ಅಂತಾನೋ ತಾಯಿ ನನಗ ಹಸುವಿಲ್ಲಾ || ೫ ||

ಮಕಬೂಲನ ತಾಯಿ ಕಲಾ ಕಲಾ ಮಾಡ್ಯಾಳೋ ಗುಲ್ಲಾ
ಹೊತ್ತೆಲ್ಲಾ ತೀರಾ ಮುಳುಗಿ ಆದೀತೋ ಕತ್ತಲಾ
ಹಸುಹ್ಯಾಂಗ ಇಲ್ಲೊ ನಿನಗ ಕರದಾಳೋ ತನ್ನ ಮಗ್ಗಾ
ಅಂತಾನೋ ಮೆಹಬೂಬಾ ಮುಂಗೈ ಹಿಡಿದಾನೋ ಜಿಗದಾ
ಬಾ ನನ್ನಾಟ ಕೊಡುವತನಕ ನಿಮ್ಮ ಅಪ್ಪಗ ಬಿಡುದಿಲ್ಲೊ || ೬ ||

ಹಸುವಾದ ತುಸು ಹೊತ್ತಿಗೆ ಅಂತಾನೋ ಮಕಬೂಲಾ
ಕೈಬಿಡೋ ಮೆಹಬೂಬ ನಿನಗ ಬೀಳತೇನಿ ಕಾಲಾ
ನಾಳಿಗೆ ನಾನು ಬಂದು ಕೊಡತೇನಿ ಆಟಾ ನಿಂದು ಹೇಳತೇನಿ ಖುಲ್ಲಾ |
ನನ್ನ ಮೇಲೆ ಇರಲಿ ಹಂಬಲಾ ರಾತ್ರಿಗೆ ಎದ್ದರೆ ಮತ್ತೆ ಅದೇ ಆಟದ ಖ್ಯಾಲಾ || ೭ ||

ಮೆಹಬೂಬ ಅಂತಾನೋ ತಮ್ಮಾ ನಿಂದು ಭರವಸೆ ಇಲ್ಲಾ
ಬೆಳಗಾಗ ಬರತೇನಂತ ಭಾಷೆ ಕೊಡು ಮೊದಲಾ
ಮಕಬೂಲಾ ಮನಸೋಸಿ ನೀತಿಲಿ ಕೊಟ್ಟನೋ ಭಾಷೆ
ಕೈ ಮೇಲೆ ಕೈ ಹಾಕಿದ ಮಕಬೂಲ ಮನಿಗೆ ನಡದನಲ್ಲಾ
ಕಾಳಾಗಿ ಕಂದಗ ಮರಣ ಹತ್ತಿತೋ ಹಿಂಬಾಲಾ || ೮ ||

ಐದಾರು ತಾಸು ರಾತ್ರಿಗೆ ಮೀರಿತೋ ಅಮಲಾ
ಮಕಬೂಲನ ಏಕಾಏಕಿ ಹಾರಿಹೋಯಿತೋ ಉಸರಾ
ಅಳತಾರೋ ತಾಯಿ ತಂದಿ ಬಡಕೊಂಡು ಎದಿ ಎದಿ
ಸಾಂಬ ಮಾಡಿದ ಘಾತ ಕಾಜಿನಾ ಕಂಬಾ ಹೊಡೆದಂಗ
ವ್ಯರ್ಥ ಮಾಡಿದ್ದೊ ಮಹಾದೇವನ ಮಗ ಎಂಥಾ ಕೆಡಕಾ || ೯ ||

ಮೆಹಬೂಬ ಸತ್ತ ಸುದ್ದಿ ಮೆಹಬೂಬಗ ಠಾವಿಕಿಲ್ಲಾ
ಬೆಳಗಾಗಿ ಎದ್ದರೊ ವ್ಯಸನಾ ಅದೇ ಆಟದ ಖ್ಯಾಲಾ
ಎದ್ವಾರೋ ತಾಸೊತ್ತೇರಿ ಹೊಂಟಾನೊ ಬಿರಿ ಬಿರಿ ಮಕಬೂಲ ಮನಿತನಾ

ಮಕಬೂಲಗ ಆಟಕ ಕರಿಲಾಕ ಅವನಾ
ಮಕಬೂಲನ ಮನಿಯಾಗ ಮಂದಿ ನೆರೆದಿತ್ತೊ ಗದ್ದಲಾ || ೧೦ ||

ಸರ್ವಸಾಹಿತ್ಯ ಮಾಡ್ಯಾರೋ ಮಕಬೂಲಗ ತಂದು
ಮಂಚದ ಮೇಲೆ ಮಲಗಿದ್ದ ನೋಡಿ ಅಳತಾರ ಸರ್ವಮಂದಿ ಎಲ್ಲಾ
ಅಂತಾರೋ ನಾಲ್ಕುಮಂದಿ ಬಿಟ್ಟು ಹೋಗತಾನೋ ತಂದೆತಾಯಿಗೆ ಮಕಬೂಲಾ
ಕಲ್ಮಾ ಅಂದ್ರೋ ರಸೂಲಿಲ್ಲಾ
ತರಿಬ್ಯಾನೋ ಮೆಹಬೂಬ ನಂದು ಆಟಾ ಬಿಡೂದಿಲ್ಲಾ || ೧೧ ||

ಮಕಬೂಲಾ ಸತ್ತಾವ ಉಳದಾ ಏನ ಭಯಾವಿಲ್ಲಾ
ಬಂದೀನಿ ಮೆಹಬೂಬ ನಿಂದು ಆಟಾ ಮರಿಯುದಿಲ್ಲಾ
ಇಬ್ಬರು ಗೆಳೆಯರಾ ಆಟದ ಜುಮ್ಮರಾ ಆಟಕೊಟ್ಟನಲ್ಲಾ
ಬಾಕಿ ಏನೇನು ಉಳಿಯಲಿಲ್ಲಾ |
ಕೈಮುಗಿದು ಬೇಡಿಕೊಂಡರೊ ಸರ್ವಮಂದಿಯೆಲ್ಲಾ || ೧೨ ||

ಸತ್ತವಗ ಎಬಿಸ್ಯಾರೊ ಮೆಹಬೂಬಗ ಕಂಡಾರೋ ದೈವೆಲ್ಲಾ
ಆಗ್ಯಾರೊ ಶಿಷ್ಯಾರು ಆತನ ಸೇವಾ ಮಾಡಿದರಲ್ಲಾ
ಶ್ಯಾರ ಬಾಗಲಕೋಟಿ ಊರ ಹಾದೋ ಮೋಜಿನ ಪ್ಯಾಟಿ
ಪೀರ ಮಲ್ಲೇಕಲ್ಲ ಭಕ್ತಿಲಿಂದ ಹೋಗಿ ಹಿಡಿಯೋ ಕಾಲಾ
ಹುಸೇನ ಮಿಯ್ಯಾನ ಹಾಡಕಿ ಚಂದಾ ಕುಣಿದಾಂಗ ನವಲಾ || ೧೩ ||

* * *

## ೧೮. ಅಡ್ನೂರ ಸಾಹೇಬರ ಪದಾ

ಇದು ಒಂದ ಸಂದ ಕೇಳರಿ ಮುಂದ ಅಡ್ನೂರ ಸಾಯಿಬಂದಾ
ಸ್ವಾಮಿ ರಾಮದುರ್ಗಕ ನೇಮಿಸಿ ಇಳಿದಾರೋ ಸ್ವರ್ಗಸ್ಥಳದಿಂದಾ || ಪಲ್ಲವಿ ||

ಇ|| ಸರ್ಪಿನ ಪಾವುಡ ಶಿರಸಕ ಸುತ್ಯಾರೋ ಸರ್ವೆಸಾಹಿಬಂದಾ
ಛತ್ತಿಸಕೊಟಿ ದೇವ ದೇವತ್ಯಾರು ಬೆನ್ನ ಹತ್ಯಾರಿಂದಾ
ಪಡಕೋಟ್ಯಾಗ ಪಾಯಾ ಹಾಕ್ಯಾರೋ ಕೀಳದಾಂಗ ಎಂದೆಂದಾ
ರಾಮದುರ್ಗದಾಗ ಸದರಿನ ಮೇಲೆ ಶಿವ ಇಳಿದಾನೋ ಬಂದಾ
ಸ್ವಾಮಿ ಬಂದಾನಲ್ಲಿ ಬೈಲಿ ಮಾಡಿದರೂ ಬಾಳ ಸಾಯಿ ಬಂದಾ
ಏರು|| ಒಮ್ಮನರಾವ ಎರಿಗ್ಯಾನ ಪಾದಕ ಸ್ವಾಮಿ ಭಕ್ತಿಲಿಂದಾ
ಸ್ವಾಮಿಪಾದಕ ಸಲ್ಲಿತೊ ಭಕ್ತಿ ಒಮ್ಮನರಾವಂದಾ
ಪಾದದೊಳಗಿನ ಹುಣ್ಣ ಪರಿಹಾರ ಮಾಡ್ಯಾನು ಸ್ವಾಮಿ ಬೂದಿಲಿಂದಾ || ೧ ||

ಇ|| ಮುನ್ನಾರಾರವತ್ತು ರೋಗ ಅಳಿತಾರೋ ಸ್ವಾಮಿ ಬೂದಿಲಿಂದಾ
ಸ್ವಾಮಿ ಕೈಲಾಕ ದೆವ್ವಿನ ಕಾಲಾಗ ತಿಳಿದಾರೋ ಭೂತಗಳೊಂದೊಂದಾ
ಗಿರಿಯ ಮೇಲೆ ಭಟ್ಟಂಗಿ ಹಾರಿತೊ ಸ್ವಾಮಿ ಹೆಸರಿಲಿಂದಾ
ಇಷ್ಟು ದೆವ್ವಿನ ಮೇಲೆ ಸರದಾರ ಇಬಲೀಸ ಹಿಡಿತಂದಾ ಹಾಂ
ಕೈಲಾಕ ದೆವ್ವಿನ ಕಾಲಾಗ ತುಳಿದಾರೋ ಭೂತಗಳೊಂದೊಂದಾ
ಏರು|| ಬಂದ ಭಕ್ತರಿಗೆ ಮುಂದಕ ಕರಿದಾರೋ ಗುರುಮಾರ್ಗದಿಂದಾ
ಸ್ವಾಮಿ ಹಸ್ತ ಎತ್ತಿ ಹಣ್ಣು ಕಾಯಿ ಕೊಟ್ಟಾರೋ ಕಾರೀಕ ಉಡಿಯೆಂದಾ
ಬಹುಮಂದಿ ಬಾಲ್ಯಾರ ಬಂಜಿತನ ಹಿಂಗಿತು ಸ್ವಾಮಿ ಕಾರೀಕ ತಿಂದಾ || ೧ ||

ಇ|| ಮುಂದಿನ ವರ್ಷಕ ಕಂದನ ಎತ್ತಿಕೊಂಡು ಬಂದ್ರೋ ಹರುಷದಿಂದಾ
ಗುಡಿಯ ಮುಂದ ಜಡಿ ಇಳಿಸ್ಯಾರೋ ಹರಕಿ ಮುಟ್ಟಿತೋ ನಿಂದಾ
ಶಿರಸಂಗಿ ಎಂಬುದು ಶ್ರೀರಂಗಪಟ್ಟಣ ಆಗುದೈತ್ರಿ ಮುಂದಾ
ಸ್ವಾಮಿ ಸಾಧು ಸಂತರ ಪಾದ ಬಿದ್ದಿತೋ ಊರ ಒಳಗ ಬಂದಾ
ಏರು|| ಹುಬ್ಬಳ್ಳಿ ದೇಶಕ ಹೊಂಟಿತೋ ಸವಾರಿ ಜಾತ್ರಿ ಆರೂಢಂದಾ
ಆಗ ಗಾಡಿಗೆ ಯೋಗಿ ಹತ್ಯಾರೋ ಹತ್ತು ಪ್ರೀತಿಲಿಂದಾ
ಹಾಸಿಲು ಕೊಟ್ಟು ಹತ್ತರಿಗಾಡಿ ನುಗಸಿಕೊಟ್ಟಾರೋ ಇಂದಾ || ೩ ||

ಇ|| ಹಾಸಿಲಕೊಟ್ಟು ಸ್ವಾಮಿ ತಗೊಂಡ ಸರಪೀಟ ಸಾಯಿಬಂದಾ
ಪಾದಾನಿಟ್ಟು ಬೇಗ ಹತ್ತಿದಾರೋ ಗಾಡಿ ಸಾಗಿತೋ ಮುಂದಾ
ಹೋಗು ಗಾಡಿಗೆ ಯೋಗಿ ನಿಲ್ಲಿಸ್ಯಾರೋ ಸತ್ಯದ ಬಲದಿಂದಾ
ಅಣ್ಣಿಗೇರಿ ದುಂದೂರ ನಡುವೆ ಗಾಡಿ ಆತೋ ಬಂದಾ
ಏರು|| ಗೋರಬಿಟ್ಟು ಮಾಡಿತಾರ ಬಡಿದಾರೊ ಕಲಕತ್ತಾಕ ಮುಂದಾ |
ಸ್ವಾಮಿ ಉದೇಹಾವುದರಾಗ ಹುಕುಮ ಬಂದಿತೋ ಕಲಕತ್ತಾಲಿಂದಾ
ಅಪ್ಪತಪ್ಪ ಅಪರಾಧ ಮಾಡರಿ ಮಾಫ ತಪ್ಪಾದೀತು ನಂದಾ
ಗಲ್ಲ ಗಲ್ಲ ಬಡಕೊಂತಾನೋ ಸಾಹೇಬ ಸ್ವಾಮಿ ಮುಂದಾ || ೪ ||

ಇ|| ಗಾಡ್ಯಾನ ಜನರು ನೋಡಿ ನಗತಾರೋ ಯವಸ್ಥಾ ಸಾಹೇಬಂದಾ
ಹುಚ್ಚ ಫಕೀರನ ಮುಚ್ಚೇದ ಕಣ್ಣು ತೆರಿವಲ್ಲ ತಂದಾ
ಸ್ವಾಮಿ ಪಾದಕ ಬಿದ್ದು ಸಾಹೇಬ ಉಳುತಾನ ದಿಂಡರಕಿಯ ಮುಂದಾ
ಏಳು ಮಂದು ಕೂಡಿ ವಿಚ್ಯಾರ ಮಾಡ್ಯಾರ ಸರದಾರಗ ಬಂದಾ
ಪುಂಡ ಬೆಳವಲಕ ಮುಂಬಯಿಲಿಂದಾ ಗೌವರ್ನರ ಸಾಹಿಬಂದಾ ||
ಏರು|| ಹಾಂ ವರುಷಕ್ಕೊಮ್ಮೆ ಉರುಸ ಮಾಡತೇನಿ ಕರಣ ಇರಲಿ ನಿಂದಾ
ಬಂದ ಭಕ್ತರಿಗೆ ಮುಂದಕ ಕರಿದಾರೋ ಗುರುಮಾರ್ಗದಿಮದಾ
ಸ್ವಾಮಿ ಅರಿವುಳ್ಳವರಿಗೆ ಅರಿಕಿಯಾದೀತೋ ಗಾಡಿಸಾಗಿತೋ ಮುಂದಾ
ನರೇಗಲ್ಲರಿಗೆ ನಗಿ ಬಂದೀತೋ ತಾರೀಫ ಅಣ್ಣಂದಾ || ೫ ||

ಇ|| ಅಡ್ನೂರ ಉರುಸಿನ ಅರ್ಭಟ ನಡದೈತೋ ನಡರಿ ಹೋಗೂನಂದಾ
ಬಾಯಾನ ಮಾತು ಬಾಯಾಗಿತ್ತರಿ ಪತ್ರ ಮುಟ್ಟಿತೋ ಬಂದಾ
ಮೂಡಲ ಸೀಮಿಗೆ ಮುಕ್ಕಣ್ಣ ಬರತಾನೋ ನೆರೆಗಲ್ಲಿನಿಂದಾ
ಸ್ವಾಮಿ ಅಡ್ನೂರ ಜನರು ಅಡ್ಡಾಗಿ ನಿಂತಾರೋ ನಡುಹಾದಿಗೆ ಬಂದಾ
ಏರು|| ಅಣ್ಣ ತಮ್ಮಗಳ ಬೆಟ್ಟಿ ಆದೀತೋ ಶಿವ ಇಳಿದಾಂಗ ಬಂದಾ
ಶಿವದೂತರು ಸೆರಗೊಡ್ಡಿ ನಿಂತಾರೋ ಹಿಂದಾ ಮುಂದಾ
ಹಾಂ ಬೆಳವಲದೇಶಕ ಬೆಳಕ ಬಿದ್ದೀತೋ ಹಂದರ ಉರಸಿಂದಾ || ೬ ||

ಇ|| ಬಂದ ಭಕ್ತರಿಗೆ ಮುಂದಕ ಕರಿದಾರೋ ಗುರುಮಾರ್ಗದಿಂದಾ
ಸ್ವಾಮಿ ಅರುವುಳ್ಳವರಿಗೆ ಅರಕಿಯಾದೀತೋ ಕಣ್ಣಮುಂದಾ
ಗಂಧ ರಾತ್ರಿ ದಿನ ಮಂದಿ ಕೂಡ್ಯೆತೋ ಸದಾ ದೇವಿಂದ್ರಂದಾ
ಉದಿನ ಹೊಗಿಯಾಗ ಯೊಗಿ ಕುಂತಾರೋ ಮುಡಪ ಸುರವ್ಯಾರ ಮುಂದಾ
ಕರ್ತನ ಹೆಸರೀಲೆ ಕಾರ್ತಿಕ ಹಚ್ಯಾರೋ ಉರುಸ ಆತೋ ದುಂದಾ ||
ಏರು|| ಉರುಸಿನ ಮರುದಿನ ಕರಿಸಿ ಕೇಳತಾರೋ ಭಕ್ತರ ಬಾಯಿಲಿಂದಾ
ಸ್ವಾಮಿ ಇಂಥಾ ಊಟಾ ಉಂಡಿದಿಲ್ಲಾ ನಾವು ಹುಟ್ಟಿ ಎಂದೆಂದಾ
ಹಾಲುತುಪ್ಪದೊಳು ಕೈಯಾ ತೊಳದೇವು ಸ್ವಾಮಿ ನಿಮ್ಮ ದಯದಿಂದಾ
ಹರಕಿ ಕೊಟ್ಟು ಹಸ್ತ ಇಟ್ವಾರೋ ಸ್ವಾಮಿ ಎದ್ದು ಬಂದಾ
ನರೇಗಲ್ಲರು ತುರಾಯಿ ಇಟ್ವಾರೋ ತಲಿಮ್ಯಾಗ ಮೀರಂದಾ || ೭ ||

* * *

## ಸವಾಲ್-ಜವಾಬ್ ಪದಗಳು

## ೧. ಮೌಲಾಲಿ ಎತ್ತದ ಪುಟ್ಟಿಯ ಉದ್ದಗಲ ಎಷ್ಟು?

ಭಕ್ತಿವಂತ ಸರೂ ಜಗತ್ತಕ್ಕೆಲ್ಲಾ ಅವನಂಗ ಭೂಮಿಮ್ಯಾಲೆ ಯಾರ್‍ಯಾರ ಇದ್ದಿಲ್ಲಾ
ಏರು || ನವಖಂಡ ಪೃಥ್ವಿ ಹದಿನಾಲ್ಕು ಆಕಾಶ ಭೂಮಿ
ಮೀರಿ ಆಗಿದ್ದ ಪುಂಡ | ಮೈಯಾಗ ಕಸವಿತ್ತೊ ಬ್ರಹ್ಮಾಂಡ
ಕಂಡರೆ ವೈರಿಗೆ ಕರಕರ ತಿಂತಿದ್ದಾನೋ ಹಲ್ಲಾ || ೧ ||

ಪುಂಡಾದ ದೈತ್ಯರ ದಂಡಿಗೆ ಮಾಡಿ ಮಣ್ಣಿನ ಪಾಲಾ
ಕಂಡ ಕಂಡಲ್ಲೆ ಕಾಳಗ ವೈರಿದು ಅಡಗಿಸಿ ಬಿಟ್ಟಾ ಸೊಲ್ಲಾ
ಏರು || ಬಲವಾನ ಬಲಿಷ್ಠಾ ಜಗತ್ತೇಕ ಶ್ರೇಷ್ಟ
ಮೂಡು ಮುಣುಗುವಲ್ಲಿ ಹೆಚ್ಚಿನ ಹೆಸರಾದ
ದೊಡ್ಡ ದೊಡ್ಡ ಪರ್ವತಗುಡ್ಡಾ ತಿಳಿದಿದ್ದ ಕೂದಲಾ || ೨ ||

ಮೈಯಾಗ ಬಹಳ ಗರ್ವ ಇತ್ತು ಅಂತಾನೋ ಯಾರಿಲ್ಲೋ ಈ ಪೃಥ್ವಿಮ್ಯಾಲಾ
ಮೌಲಾನ ಕಸವೀನ ಮಹಿಮಾ ಕೇಳರಿ ಜನರೆಲ್ಲಾ
ಶಾಸ್ತ್ರಕ ಸರಿಯಾಗಿ ನಿಮಗ ವಡದ ಹೇಳುವೆ ಕುಶಲಾ
ಸ್ವರ್ಗ ಲೋಕದಿಂದ ಶಿವಧೂತ ಇಳಿದು ಬಂದ ಆಗಿ ಮುದುಕಿ ರೂಪ || ೩ ||

ಪ್ಯಾಟ್ಯಾಗ ಕುಂತಿದ್ದ ತದ್ರೂಪ ತುಂಬಿದ್ದ ಪುಟ್ಟಿ ತಗೊಂಡ ಹಸೆ ಟಿಸೆ ಹುಲ್ಲಾ
ಆದಿನ ಸಾಧಿಸಿ ಪ್ಯಾಟ್ಯಾಗ ಬಂದಿದ್ದಾರೋ ಮೌಲಾ
ದಿಟ್ಟಸಿ ನೋಡ್ಯಾರ ಕಣ್ಣೀಲೆ ನೆದರ ಎತ್ತಿ ಮೇಲಾ
ಏರು || ಹೊಡದಾಳೋ ಹೊಕಿ ಕರದಾಳೋ ಮುದುಕಿ
ಬಾ ಅಂತ ಮೌಲಾಗ ಪುಟ್ಟಿ ಹೊರಸೋ ತಲಿಮ್ಯಾಗ
ಮುಪ್ಪಿನ ಮುದಕಿ ನನಗ ಮೈಯಾಗ ತ್ರಾಣಿಲ್ಲಾ || ೪ ||

ಹಾತೋರಿ ಹೋಗ್ಯಾರ ಮೌಲಾ | ಕೇಳಿ ಮುದುಕಿ ಸೊಲ್ಲಾ
ಯಾಕ ಹೇಳ ಟೊಂಕ ಬಗ್ಗಿಸಿಕೊಂಡ ಎಷ್ಟಮಾಡತಿ ಗುಲ್ಲಾ
ಏರು || ಹಂತೇಲಿ ಹೋಗಿ ಹಿಡಿದಾರೋ ಪುಟ್ಟಿ ಮೊದಲು ಒಂದು ಕೈಲಿ
ಹೊರಸಬೇಕಂತ ತಲಿಮ್ಯಾಲೆ. ಮ್ಯಾಲಕ ಎಬಿಸ್ಯಾರ ಪುಟ್ಟಿ ನೆಲಬಿಟ್ಟು ಅಗಲಲಿಲ್ಲಾ || ೫ ||

ಹಮ್ಮಿಟ್ಟ ದಮ್ಮದಣಿಯಾಗಿ ಮೊಣಕಾಲಮೇಲೆ ನೆಗವ್ಯಾರೋ ಹುಲ್ಲಿನ ಪುಟ್ಟಿ
ಹೆಚ್ಚಿಗೆ ಕೀಳಲಿಲ್ಲಾ ಬಿಟ್ಟಾರ ಅನ್ನನೀರಾ | ಖಿನ್ನಾಗಿ ಬಾದ್ದೂರಾ
ಮೂರು ನಾಲ್ಕುದಿವಸ ಉಂಡಿಲ್ಲ ಕುಂತಾರ ಉಪವಾಸ
ಮನಿಗೆ ಬಂದ್ರೋ ರಸೂಲಿಲ್ಲಾ ಹೇಳ್ಯಾರ ಸರ್ವ ಹಕೀಕತ || ೬ ||

ಮಾದೇವನ ಲೀಲಾ ತುಂಬಿದ್ದ ಪುಟ್ಯಾಗ ಬಾಕೀದು ಏನೇನ ಉಳಿದಿದ್ದಿಲ್ಲಾ
ಏರು || ಬಂದಿದ್ರೋ ಜುಬರಾಯಿಲಾ ತಂದಿದ್ರೋ ಮುದುಕಿ ಡೋಲಾ
ಏನು ಠಾವಿಕಿ ನಿಮಗ ಇಂಬಾಗಿ ತುಂಬಿದ್ದವು ಪುಟ್ಯಾಗ
ಆಕಾಶ ಭೂಮಿ ವಿಶೇಷಗಳು ಮೇರು ಮಂಡಲಾ || ೭ ||

ನಬಿಸಾಹೇಬ ಬಾಯಿಲೆ ಕೇಳಿ ಕುಶಿ ಆಗ್ಯಾರ ಮೌಲಾ
ಕಸುವು ಬಂದೀತೋ ಮೈಯಾಗ ಮೊದಲಿನ ನಾಲ್ಕು ಪಾಲಾ
ಏರು || ಕಸುವ ಮಾಡಿ ಮೌಲಾ ಎದ್ದಾರೋ ಮೇಲಾ
ಹದಿನಾಲ್ಕು ಆಕಾಶ ಭೂಮಿ ನಿಮ್ಮಷ್ಟು ಹೆಚ್ಚಿನ ಪರಾಕ್ರಮಿ
ಜನದೊಳು ನಿಮ್ಮ ಹೊರ್ತು ಮತ್ತಾರು ಇಲ್ಲಾ || ೮ ||

ಏಳು ಭೂಮಿ ಏಳು ಆಕಾಶ ಕೂಡಿ ಒಟ್ಟಿಗೆ ಜುಮಲಾ
ಹಾಂಗಿದ್ದ ಚಟ್ಟನೆ ಹೇಳೋ ಪುಟ್ಟಿ ತುಂಬಿದ್ದಿಲ್ಲಾ ||
ಏರು || ಯಾತರ ಪುಟ್ಟಿ ತೋರಿಸೋ ಘಟ್ಟಿ
ನೋಡೂನು ನಿನ್ನ ಅಕಲಾ ಪುಟ್ಟಿ ಇತ್ತೋ ಎಷ್ಟು ಅಡ್ಡಗಲಾ
ಉದ್ದೆಷ್ಟು ಇತ್ತೋ ಹೇಳರಿ ತುರ್ತ ತತ್ಕಾಲಾ || ೯ ||

ಜವಾಬೇಳೋ ಗಾಬಾಗಬ್ಯಾಡ ಕಟ್ಟೇನಿ ಕೈಕಾಲಾ
ಎಬಿಸ್ಯಾರೋ ಪುಟ್ಟಿಗೆ ಪೋಲಾ ನಿಂತ ಎದರ ಮೇಲಾ
ಏರು || ಒಂದು ವರುಷದಿನ ಮುದ್ದತ್ತ ಕೊಡತೇನಿ
ಹುಡಿಕ್ಯಾಡಿ ತರಬೇಕು ನಿನಮ್ಯಾಲೆ ಒಗದೇನು ಬಲಿ ಸರಕ್ಕ
ಹದಿನೆಂಟು ಪಾಲ ಗಂಟಲಕ ಹಾಕಿ ಬಿಟ್ಟೀನೋ ಉರಲಾ || ೧೦ ||

ಜವಾಬೇಳೋ ಗಾಬಾಗಬ್ಯಾಡ ಕಿತ್ತೇನೋ ಹಲ್ಲಾ
ಸಾಂಬನ ಮುಂದ  ಜಂಬ ಮಾಡಬ್ಯಾಡ ನಡುವುದಿಲ್ಲಾ
ಏರು || ಪೀರಮಲ್ಲೇಕಲ್ಲಾ ಹಸ್ತಿಟ್ಟ ತಲಿಮ್ಯಾಲಾ
ಕೊಟ್ಟ ಮತಿ ನಮಗ ಸೊಸ್ತ ನಿಮಗ
ಹುಸೇನ ಮಿಯ್ಯಾ ಮಾಡ್ಯಾನೋ ರಿವಾಯಿತ ರಂಗಲಾಲಾ || ೧೧ ||

* * *

## ೨. ಹ | ಅಯ್ಯೂಬನ ಹೆಂಡರ ಹೆಸರು ಹೇಳೋ

ಇಂದ್ರ ಸಭಾ ದೇವಿಂದ್ರ ಕೂಡಿರಿ ಸೂರ್ಯ ಚಂದ್ರನಂತ ಬೆಳಕ
ಏರು || ಮಾಡಿ ರಿವಾಯಿತ ಹೇಳುವೆ ಪಡದಾಗ ದೈವಾ ಕೇಳಬೇಕ
ಬರೂಹಾಂಗ ನಿಮ್ಮ ಮನಸಿನ ತಕ್ಕ ಅಯ್ಯೂಬ ಶರಣರ ಕೌತೂಕ
ಚ್ಯಾಲಿ | ಹೇಳೂವೆ ಖುಲ್ಲಾ ಕೇಳಿ ಜನರೆಲ್ಲಾ ಹೌದೌದನಬೇಕ
ಇ || ಹುಟ್ಟಿದ್ದು ಅಯ್ಯಾಬ ಸ್ಪಷ್ಟ ಸಮಾಚಾರ ತಲ್ಲೇ ಮರತೇಕ
ಶರಣ ಅಯ್ಯೂಬಗ ಕರುಣ ಇಟ್ಟಿದ್ದಾ ಮಹಾದೇವ ಬೇಶಕ
ಕೇಳ್ಯಾನ ಏನ ಬೇಡತಿ ಬೇಡಬೇಕ ವರುವಾಗಿ ಕೊಡುವುದು ನನಹಕ್ಕ
ಬೇಡಿದ್ದ ದೀನಸಾ ಕೊಡುವೆನು ಸರಸಾ ನಿನ್ನ ಮನಸಿನ ತಕ್ಕ || ೧ ||

ಕಯ್ಯ ಜೋಡಿ ಬೇಡಿಕೊಂಡ್ರೋ ಅಯ್ಯೂಬಾ ನರಜಲ್ಮದ ದುಸಕಾ
ಏರು || ಗರುವ ಬ್ಯಾಡ ನರಜಲ್ಮಕ ಬಂದಿಂದ ಸುಖಾಏನ ಸುಡಬೇಕ
ಅರುಇಟ್ಟ ಹಾದಿಯ ಹಿಡಿಬೇಕ ಮರಿಯಬಾರದು ಮೂರುಲೋಕ
ಚ್ಯಾಲ || ಭೋಗಿ ಸುಖಾ ದುಃಖಾ ತಿರುಗಿ ಮತ್ತೆ ನಿಮ್ಮ ಹಂತೇಕ ಬರಬೇಕ
ಇ || ಸ್ವಂತಾ ಮನಾ ತಿಳಿ ಬಂತೋ ಅಯ್ಯೂಬನ ಮಹದೇವನ ಮನಕ
ಇಟ್ಟಿದ್ದಾ ಮಮತಾ ಕೊಟ್ಟಿದ್ದಾ ಮಸ್ತಾ ಅಂವಾ ಬೇಡಿದ್ದ ಬದಕ
ಹೆಣ್ಣ ಒಂದ ಹುಟಸ್ಯಾನೋ ನಾಜೂಕ ಅಯ್ಯೂಬನ ಲಗ್ಗನ ಮಾಡೂದಕ
ನಷ್ಟ ಜಲುಮಕ ಶಿವಗಂಟ ಹಾಕ್ಯಾನೋ ಸಂಗಟ ಸೋಸಲಾಕ || ೨ ||

ಧನ್ನ ದೌಲತ್ತ ಮನ ಮಸ್ತ ಕೇಳಿ ಕೊಟ್ಟಿದ್ದಾ ಹೆಂಡರಿದ್ರೋ ನಾಲ್ಕ
ಏರು || ಅಯ್ಯೂಬಸ್ವಾಮಿ ಹಂತೇಲಿ ನೇಮಿ ಸಂಸಾರ ಮಾಡುದಕ
ಚೊ ಇತ್ತೋ ಬಕ್ಕಳ ಬಾಳೇ ಬದುಕ ಏಳುಮಂದಿ ಮಕ್ಕಳ ಜಲುಮಕ್ಕ

ಚ್ಯಾಲಿ || ಸಣ್ಣ ಕೂಸೋ ಮೂರ ಹೆಣ್ಣ ಇದ್ದವರಿ ಗಂಡ ಮಕ್ಕಳ ನಾಲ್ಕ
ಇ || ಎಷ್ಟ ಅಯ್ಯೂಬ ಕಷ್ಟ ಪಡುವುತಾನ ಸುಖಾ ಇಲ್ಲ ಜಲುಮಕ್ಕ
ನಿತ್ಯನಮಾಜಿ ಮಾಡುರೋ ಸೇಜಿ ಬೇಗು ಬೆಳತನಕ
ಸಂಬನ ಧ್ಯಾನಾ ಹಿಡದ ಮನಕ ಹತ್ತು ಮಂದಿ ದಿನಾ ಉಣಿಸುತನಕ
ಬಾಳ ಇಟ್ಟಿದ್ದಾ ತಾ ಉಣತ್ತಿದ್ದಿಲ್ಲ ಒಂದ ರೊಟ್ಟಿ ತುಣಕ || ೩ ||

ಇ || ಬಡವರ ನೋಡಿ ಅರಿಬಿ ಅಂಚಡಿ ದಾನ ಮಾಡೂರು ದಿನಕ
ಏರು || ಅಂತವರಾ ಮಾನಾ ಸಮಾಧಾನಾ ತೋರಿಸಿ ಕೋಡುತನಕ
ತೋಡುವರೋ ತಾವು ಅರಬಿ ಹರಕ ಇದರೊಳಗ ಏನೂ ಇಲ್ರಿ ಫರಕ
ಚ್ಯಾಲಿ || ಸಾಧಿಸಿ ಪ್ರೇಮಾ ಮಾಡೂರು ಧರಮಾ ಕರಮ ಮಾಡಿದ ತರಕ
ಪ್ರಾಂತದೊಳಗ ಭಗವಂತಾ ಅಯ್ಯೂಬನ ಮರ್ಜಿ ನೋಡೂದಕ
ರೋಗ ಹಾಕಿದಾನೋ ಭೋಗಿಸುವಂತ ಹದಿನೆಂಟು ರಸತನಕ
ಐಯ್ಯೂಬ ಸೋಸ್ಯಾರೋ ದುಃಖಾ | ಮೆಯ್ಯಾ ತಂದು ಮೇಸತಿದ್ರೋ ಹುಳಕ
ಹುಣ್ಣು ಒಡದ ಸಣ್ಣ ತೂತಬಿದ್ದ ಕೀವ ನಾರುತಿತ್ತೊ ಕೊಳಕ || ೪ ||

ಮೋಸಗಾರ ಶಿವ ನಾಶ ಮಾಡಿದಾನೋ ಅಯ್ಯೂಬನ ಬದಕ
ಏರು || ಮರಿಯ ಮಕ್ಕಳೆಲ್ಲ ತೀರಿ ಹೋದಾವೋ ಕಾಡುವ ಕಾಲಕ್ಕ
ಯಾರು ಯಾರು ಉಳಿಯಲಿಲ್ಲ ದಿಕ್ಕ ಹೆಣ್ಣ ಒಂದ ಕುಂತಾಳೋ ಹಂತೇಕ
ಇ || ಲಗ್ಗನ ಹೆಂಡತಿ ಬ್ಯಾಗನ ಬಂದಾಳೋ ಸೇವಾ ಮಾಡೂದಕ
ಅನ್ನಾ ಅಸನಾ ತಿಂದೇನಂದರ ಏನೂ ಇಲ್ಲೋ ಹಂತೇಕ
ಮಹಾ ಪತಿವರತಿ ಉಳದ ಹೆಣತಿ ತಿಳಿದ ತನ್ನಮನಕ
ಗಂಡಗ ಗಂಜಿ ಕುಡಸಲಾಕ ಹೋಗ್ಯಾಳಪ್ಪಾ ಬಿಕ್ಕಿ ಬೇಡಲಾಕ || ೫ ||

ಇ || ಹೋಗಿ ದುರೋಷ್ಣದಲ್ಲಿ ತುರುಬಾ ಕೊಯ್ದು ಕೊಟ್ಟು ಅಕ್ಕಿತಂದಾಳೋ ಮುಕ್ಕ
ಏರು || ನೋಡಿ ಅಯ್ಯೂಬಾ ಆಗ್ಯಾನೋ ಗಾಬಾ ಹೆಣತಿ ಹೋಗಲಕ
ಪಾಪ ಇಲ್ಲದಿ ಕೋಪದಿ ಹೆಣತಿಗೆ ಅಂತಾನೋ ಬೇಶಕ್
ಚ್ಯಾಲಿ || ನನ್ನ ಬ್ಯಾನಿ ನೆಟ್ಟಗಾದ ಬಳಿಕ ನಿನಗ ನೂರ ಪೆಟ್ಟಹೊಡುವ ತನಕ
ಇ || ಹೊಡುವೆನು ಬಾಲಿ ಬೆನ್ನಿನ ಮ್ಯಾಲಿ ಬಾರ ಮೂಡುವ ತನಕ
ಸುರಿಸಿ ಕಣ್ಣೀಲೆ ನೀರ ಅಳತಾರೋ ಶರಣರು ಮಾಡಿ ಅತೀಶೋಕ
ಬಿಟ್ಟ ಹೆಣತಿಗೆ ಚಟ್ಟನೆ ಅಯ್ಯೂಬಾ ಹೋಗಿ ಗಿಡದ ಬುಡಕ
ಕಣ್ಣಿಗೆ ನಿದ್ದಿಇಲ್ರಿತಟಕ ಮಾರಿ ಮ್ಯಾಲೆ ಹಾಕಿ ಕುಂತಾರೋ ಮುಸಕ || ೬ ||

ಇ || ಬ್ಯಾನಿ ಸೋಸಲಾರೆ ಹಾನಿ ಜಲ್ಮ ಇದು ಲಗು ಹೋಗಬೇಕ
ಏರು || ಮರಗ ನೋಡದೆ ಸ್ವರಗ ಲೋಕದಿಂದ ಇಳದ ಶರಣರದುಸಕ
ಬಂದಾನೋ ಶಿವದೂತ ನಿಂತಾನೋ ಇದರಿಗೆ ಸಹಿ ಅಂತಾನೋ ಮುಸಕ
ಚ್ಯಾಲಿ || ನಜರ ಎತ್ತಿ ನೋಡಬೇಕ್ರಿ ಯಾಕ ನೀರ ತಂದ ಇಟ್ಟ ಪಾದ ಬುಡಕ
ಇ || ತಿಳಿಸ್ಯಾನೋ ಶಿವದೂತ ರಂಬಿಸಿ ಸರೂ ಮಾತ ಸಂಬನ ಕೌತೂಕ

ಸುದ್ದ ಕಾಲೀಲೆ ಒದ್ರೋ ಶರಣರು ಗುದ್ದ ಬಿತ್ತೊ ನೆಲಕ
ಸೆಲಿಯ ಒಡದು ನೀರ ಮ್ಯಾಲೆ ಬಂದಾವರಿ ಅದರಾಗಾತೋ ಜೆಳಕ
ಮಾದು ಹುಣ್ಣ ಮೈಯ್ಯ ಆತ್ರಿ ಚೊಕ್ಕ ಮೊದಲಿನಕ್ಕಿಂತ ಹೆಚ್ಚು ಜುಳಕ || ೭ ||

ಮಾರಿಯ ವರಣಾ ಸೂರ್ಯನ ಕಿರಣಾಕ್ಕಿಂತ ಹೆಚ್ಚು ಠಳಕ
ಏರು || ಮುಂದ ಉಳಿತಿ ಅಯ್ಯೂಬನ ಕತಿಯ ಸಂದಿಗ್ಧಾಕೇನಿ ಸರಕ
ಪಂಡಿತ ಶ್ಯಾಣ್ಯಾರು ಖಂಡಿತ ಕೂಡಿರಿ ಅಲಾಪಿ ಆಡೂದಕ
ಚ್ಯಾಲ || ಬಲ್ಲಾಂವಾ ದಾರ ಹಿಡಿಯೋ ತರಕ ಅರೇದಾಂದ ಏನಬಲ್ಲಮೂರ್ಖ
ಇ || ಯಾತಕ ನೀರ ಹೇಳೋ ಶಾಹೀರಾ ನೋಡೂನು ನಿನ್ನ ಬೆಳಕ
ಒಂಬತ್ತು ಮಂದಿ ಅಯ್ಯೂಬನ ಹೆಂಡರ ಹೆಸರ ಹೇಳಬೇಕ
ನೆಫ್ಷೀಲೆ ಹೇಳೋ ತಪ್ಪದೆ ಲಗ್ಗನ ಯಾವ ಯಾವ ಮೂರ್ತಕ್ಕ
ಆಗಿದ್ದೂ ಬ್ಯಾರೆ ಬ್ಯಾರೆ ತೋರಸಬೇಕ ಸವಾಲ ಮಾಡೇನಿ ಬಹುಕಡಕ || ೮ ||

ಇ || ಗಾಬ ಆಗಬ್ಯಾಡೋ ಇದರ ಜವಾಬ ಹೇಳ ನಿನಗ ಹಾಕೇನಿ ತೊಡಕ
ಏರು || ಏಳುಮಂದಿ ಮಕ್ಕಳ ಹೆಸರ ಬ್ಯಾರೆಬ್ಯಾರೆ ತೋರಸಬೇಕ
ಯಾರ‍್ಯಾರ ಹೊಟ್ಟೀಲೆ ಯಾರ‍್ಯಾರು ಹುಟ್ಟಾರೋ ಮಾಡಿಹೇಳೋ ಲೆಕ್ಕ
ಚ್ಯಾಲ || ಮುದ್ದತ್ತ ಕೊಟ್ಟೇನಿ ಸಾವೂತನಕ ಎರಗಿ ಮಡ್ಡಿ ಪೀರಾನ ಚರಣಕ್ಕ
ಇ || ಹುಸೇನಮಿಯ್ಯಾ ಉಸ್ತಾದನ ರಿವಾಯಿತ ಹೊಡದಾಂಗ ಚಾಬೂಕ
ಇಂದ್ರಸಭಾ ದೇವೀಂದ್ರಕೂಡಿರಿ ಸೂರ್ಯಚಂದ್ರನಂತ ಬೆಳಕ
ಮಾಡಿ ರಿವಾಯಿತ ಹೇಳುವೆ ಪಡದಾಗ ದೈವಾ ಕೇಳಬೇಕ
ಬರೂಹಾಂಗ ನಿಮ್ಮ ಮನಸಿನ ತಕ್ಕ ಅಯ್ಯೂಬ ಶರಣರ ಕೌತೂಕ || ೯ ||

* * *

## ೩. ಯಾವ ಪೈಗಂಬರ ಸತಿಯು ಮೊದಲು ಜಡಿಯ ಹಾಕ್ಯಾರೋ?

ಮೆತ್ತಾನ ಕಳ್ಳಾ ಹತ್ತಿರ ಬಂದಾನೋ ಹೊಡಿಯಲಿಕ್ಕೆ ನೋಟಾ
ಏರು || ರಿವಾಯತ ಸಲುವಾಗಿ ಶಾಹೀರ ಇವನು ಬಾಳೇಬದುಕ ಬಿಟ್ಟಾ
ಕಡಿಯಾಕ ಹೋಗಪ್ಪಾ ನಟ್ಟಾ | ಎಲ್ಲಾದ್ರು ಆಗತೈತಿ ಪುರಾಟಾ || ೧ ||

ಬಾಳೇವದ ಮಾತ ಬಾಳ ಹೇಳಿದರ ಬರುವತೈತಿ ಸಿಟ್ಟಾ
ಮಂದಿ ಕಣ್ಣಿಗೆ ಹಾಕತಾರಿ ಇವರು ಟೆರಿಕೋಟ ಶರ್ಟಾ
ಏರು || ಕಿಸೇದಾಗ ಸೇದಾಕ ಇಲ್ರಿ ಚುಟ್ಟಾ
ಹಾಂ ಹಾಂ ಡೌಲು ಮಾಡತಾರ ಇವರೆಷ್ಟಾ || ೨ ||

ಮಾತು ಕೇಳಿದರ ದೊಡ್ಡ ದೊಡ್ಡ ಮಾತು ಕಟ್ಟತಾನ ಗೋಲಗುಮ್ಮಟಾ
ಗೆಳೆಯರ ಕೈಯಾಗ ರೂಪಾಯಿ ಕೊಟ್ಟು ಹಾಕ್ಕೊಂತಾರ ನೋಟಾ

ಏರು || ಗೊತ್ತಪ್ಪ ಇವರದು ಬೈಲಾಟಾ
ಹಾಂ ಹಾಂ ಇನ್ನಮ್ಯಾಲೆ ಬಡಿತೇನಿ ಗೂಟಾ || ೩ ||

ಶಾಸ್ತ್ರರ ಹಿಡಿದು ಸವಾಲು ಕೇಳತೇನಿ ಒಡಿಯಪ್ಪ ನನ್ನ ಒಗಟಾ
ಅಕ್ಕ ತಂಗಿಯರು ಜಡಿಯ ಹಾಕತಾರೋ ಮಕ್ಕಳಿಗೆ ನೀಟಾ
ಏರು || ಜಗತ್ಯಕ್ಕೆ ಜಾಹೀರ ಆದ ಆಟ
ಮೊದಲು ಯಾರಿಂದ ಬಂತು ಹೇಳೋ ಬಂಟಾ || ೪ ||

ಯಾವ ಪೈಗಂಬರ ಸತಿಯು ಮೊದಲು ಜಡಿಯ ಹಾಕ್ಯಾರೋ ನೀಟಾ
ಶಾಸ್ತ್ರರ ಹಿಡಿದು ಸವಾಲು ಒಡಿಯೋ ಕಟ್ಟಿ ಇಟ್ಟಂಗಿ ಗಂಟಾ
ಏರು || ಒಡೆದು ಒಯ್ಯೋ ಇಲ್ಲಿ ನೋಟಾ ಇಲ್ಲಂದರ ಬೀಳತಾವೋ ಏಟಾ
ಸಣ್ಣ ಸವಾಲು ಒಡಿದರ ಕೊಡತೇನಿ ತಿನ್ನಾಕ ಬಿಸ್ಕೀಟಾ || ೫ ||

ದೇಶದೊಳಗ ಖಾಸಾ ನಮ್ಮ ಮುಂಡರಗಿ ಪೇಠಾ
ಕವಿಗಳು ರಿಕಾರ್ಡಿನ ಪ್ಲೇಟಾ ಜಂದಿಪೀರಾ ಬಡಿಯತಾನೋ ಗೂಟಾ
ಮೆತ್ತಾನ ಕಳ್ಳಾ ಹತ್ತಿರ ಬಂದಾನೋ ಹೊಡಿಯಲಿಕ್ಕೆ ನೋಟಾ
ರಿವಾಯತ ಸಲುವಾಗಿ ಶಾಹೀರ ಇವನು ಬಾಳೇ ಬದುಕ ಬಿಟ್ಟಾ
ಕಡಿಯಾಕ ಹೋಗಪ್ಪಾ ನಟ್ಟಾ ಎಲ್ಲಾದ್ರು ಆಗತೈತಿ ಪುರಾಟಾ || ೬ ||

* * *

## ೪. ಶಬ್ಬಾದ ಅರಸನ ಸ್ವರ್ಗದ ಲೆಕ್ಕ ಹೇಳುವ ಜವಾಬು ಪದಾ

ಹಗಲೆಲ್ಲಾ ಇದೆ ನಿನ್ನರಗಳಿ ಬ್ಯಾಸತ್ತಾರ ಜನರೆಲ್ಲಾ ಕೇಳಿ
ಯಲ್ಲಿಂದ ಕಳಸತಾರ ಮಾರಿಮ್ಯಾಲೆ ನಿನಗವುಗುಳಿ ಕಡಿಗೆ ಥೀ ಮಾಡಿ
ಏರು || ಯೆತ್ತೆತ್ತರ ಮಾಡಿ ಕವಿ ಪಡಿಬೇಕಂತಿಯೋ ಸವಿ
ನಿನಗ ಹ್ಯಾಂಗ ದೊರಕೀತ ಪದವಿ ಕೇಳ್ಳೋಗ ಯಾಂವ ಕವಿಗಾರ
ಅನಿಸಿಕೊಳ್ಳೂನು ಮಹಾ ಹಾಡುಸೂರ ಏನಬಲ್ಲಿ ಹುಚ್ಚಪ್ಯಾಲಿ
ಕಲಿಹೋಗಯಿನ್ನ ಸಾಲಿ ಗೊತ್ತೈತಿ ನನಗ ನಿನ್ನ ಎಳಿ
ಸಂಗತೀಲೆ ಬಾ ನಿನ್ನ ಮನಸಿಗೆ ಬಂದಂತಾ ಇಡಿಸುವೆ ಕೈಯಾಗ ಚಿಕ್ಕಬಳಿ
ತಿರಗಂತ ಮೂರ ಮುರಕೊಂತ ಕೈಮಾಡಿ || ೧ ||

ಕೇಳ ನಡಾ ಕಟ್ಟಿದ ಮನಕನಟ್ಟಿ ಕವಿ ಮಾಡೂದು ಬಿದ್ದಿಲ್ಲ ಪುಗಸ್ಯಾಟಿ
ಅಂತ ಬೊಗಳತಿ ಬಸರ ಹೆಂಗಸಿನ್ಯಾಂಗ ಮಾಡಿಕೊಂಡ ಹೊಟ್ಟಿ
ರಾಮನ ಸರಿಜೋಡಿ
ಏರು || ಹುಡುಕಿ ತಗದೀನಿ ಮಾತೊಂದ ಶ್ರೇಷ್ಟಯಿದ್ದಾ ಅರಸ
ಶದೀದನ ತಮ್ಮನಾದ ಶಬ್ಬಾದ ಅರಸಕಿ ಮಾಡುವಾ ಮಿಕ್ಕಿ

ನಾನೇ ಶಿವನಂತ ಅಂತಿದ್ದಾ ಕಡಿಕಾಲಕ ತಿಂದಾನ ದಕ್ಕಿ
ಶಬ್ದಾದನ ಸವಾಲ ಝುಂಡೇದಾಗ ಮಾಡಿದರ ದಾಖಲೆ ಕೀತಾಬದಾಗ ಇಲ್ಲ ಅಂದಿ
ಕೇಳಿದವರೆಲ್ಲರು ಜನರೆಲ್ಲರು ಇದ್ದಾರ ಇಲ್ಲೇ ಈ ಸಭಾದೊಳಗ ಅನೇಕ ಮಂದಿ
ತಿಳಿಸ್ಯಾಯಿರಾ ಕಳಿಸುವೆ ಪೋಣಿಸಿ ಮಾಗನ್ಯಾಗ ಕವಡಿ || ೧ ||

ಶಬ್ದಾದ ನಾನೇ ಶಿವನಂತ ಸಾರತಿದ್ದಾಯಿಟ್ಟ ಪಂತ
ಉಪದೇಶ ಅರಸನಿಗೆ ಮಾಡುವರೋ ಬಂದ ಬುದ್ದಿವಂತ ಪಂಡಿತರು ಕೂಡಿ
ಏರು || ಭಜಿಸೋ ಭಜಿನಿ ಮಾಡೋ ಶಿವಂದು ಅಂತಾರ ಕೈಮುಗುದು
ಕಂಡಿ ಸ್ವರಗ ನೋಡೋ ತಿಳಿದು ತಿಳಿಮನಕ ಹಿಡ ತರಕ
ಇಲ್ಲಂದರ ಸುಟ್ಟಹ್ವಾದಿ ನರಕೀನ ಬೆಂಕಿಯೊಳಗ ಬೇಶಕ್
ಸಿಟ್ಟಾಗಿ ಶಬ್ದಾದ ಅಂತಾನ ನನ್ನಗ ಧನ್ನದೌಲತ್ತಯೇನ ಕಡಿಮಯಿಲ್ಲಾ
ಶಿವನಿಗೆ ಯಾತಕ ನೆನಸಲಿ ತಯ್ಯಾರ ಮಾಡುವೆ ಸೊರಗ ಈ ಭೂಮಿಮ್ಯಾಲಾ
ಹೋಗಿ ನೋಡುವೆ ಸೊರಗ ತಯ್ಯಾರ ಮಾಡಿ || ೩ ||

ಭೂಮಿವೊಳಯಿದ್ದಾಂತ ಬದುಕ ಸಿಕ್ಕಿದಲ್ಲೇ ಅರಸ ಮನ ತಕ್ಕ
ತಗತಗದ ಬೈಲಿಗೆ ಇಟ್ಟಂಗಿ ಮಾಡಸ್ಯಾನ ಒಳೇ ಚೊಕ್ಕ ನಕ್ಷತ್ತರ ನೋಡಿ
ಏರು || ಸೊರಗದ ಥರಾ ಹಮ್ಮ ಚೌಕ ಸವನಾಗಿ ನಾಲ್ಕು ದಿಕ್ಕ
ಕಡಸ್ಯಾನ ನೀರು ಹತ್ತು ತನಕ ಯೇನು ಹೇಳಲಿ ಸಭಾದಲ್ಲಿ
ಥರಾ ಕಡಸುವಲ್ಲೇ ಬಂದೋ ಬಸ್ತಯಿಟ್ಟಿದ್ದಾ ಕಾವಲಿ ದುಡಿತಿದ್ರೋ ಜನರೆಲ್ಲಾ
ಯೇಕಂದ್ರ ಒಂದು ಲಕ್ಷ ಶಾಯಿರ ಚಿತ್ತಯಿಟ್ಟ ಕೇಳೋ ನೀನು
ಸಂಗ ಸುಲೇಮಾನಿ ಕಲ್ಲಿಂದ ಥರಾ ತುಂಬಿ ಭೂಮಿಯ ಸವನಾಗಿ
ಮಾಡಿಸಿದನು ಲೆಕ್ಕಾ ಹೇಳೇನಿ ಒಟ್ಟಿಗೆ ತರಕ ಹಿಡಿ || ೪ ||

ಬೆಳ್ಳಿ ಬಂಗಾರ ಇಟ್ಟಂಗಿಲಿಂದ ಕಟ್ಯಾರಗ್ವಾಡಿ ಬಹುಚಂದ
ಎತ್ತರ ಐನೂರ ಗಜಾಯಿತ್ತ ಗ್ವಾಡಿ ಒಳೇ ಸುದ್ದಾ ಕೇಳೋ ಕಿಮ್ಮತ್ತಗೇಡಿ
ಏರು || ಸೂರ್ಯ ಮೂಡುವ ಕಾಲಕ ಗ್ವಾಡಿ ಮಿಂಚೂದು ಲಕಲಕ
ಥಳಾಥಳ ಹೊಳುತಿತ್ತು ಬೆಳಕ ಮಿತಿಮೀರಿ ಹೇಳುವೆ ಸಾರಿ
ಸೊರಗದ ಉದ್ದಗಲಾ ನಾಲ್ವತ್ತ ಹರದಾರಿತ್ತ ಬರಾಬರಿ
ಅರಸನ ಮನಪೂರ ಸ್ವರಗಾತ ತಯ್ಯಾರ ಭೂಮಿಮ್ಯಾಗ ಹನ್ನೆರಡು ವರ್ಷದಲ್ಲಿ
ಮುತ್ತು ಮಾಣಿಕ ಹೊನ್ನದಲ್ಲಿ ಬೆರಸಿ ರಂಗಮ್ಹಾಲ ಕಟ್ಟಿಶ್ಯಾನ ಸ್ವರಗದಲ್ಲಿ
ಹಾಲುಮತ್ತು ನೀರಿನ ಶೆಲಿ ಹರುತಿದ್ವೊ ಕೂಡಿ || ೫ ||

ಶೆಲಿ ಹರುತಿತ್ತ ಶರೆದ ಸಾಗಿ ಜೇನು ತುಪ್ಪದ ಶಲಿಗೆ ಸರಿಯಾಗಿ
ಹರುತಿತ್ತ ಸವಳ ನೀರಿ ಸವಿನೀರ ಮನಪೂರಾಗಿ ಎಲ್ಲಾ ಸರಜೋಡಿ
ಏರು || ಏನು ಹೇಳಲಿ ಮ್ಹಾಲಿನ ವರ್ಣಾ ಹೌಜ ನೀರಿಲೆ ಸಂಪೂರಣಾ
ಪುಟುತಿದ್ವೊ ಕಾರಂಜಿ ಸವನಾ ಪಾರೇದ ಜನಾ ಕೇಳೊ ಹೈವಾನ
ಒಂದೊಂದ ಮಾಲಿಗೆ ಒಬ್ಬೊಬ್ಬ ಕುಂತಿದ್ದಾ ತಿಳಿಸುವೆ ನಾ

ದರವಂದ ಮ್ಹಾಲಿನ ಮುಂದಾ ಗಿಡಾ ಒಂದೊಂದ ಹಚ್ಚಿಸಿದ್ದಾ ಬಂಗಾರದಾ
ಇದ್ದುವೋ ಬೇರ ಜಮರೂತಿ ತಪ್ಪಲಾ ಮಾಗಿ ಹಣ್ಣು ಹಂಪಲಾ
ಮುತ್ತಿನ ಗೊಂಚಲಾ ಇದ್ವೊ ಸದರ ಅನೇಕ ಥರದ ಪಕ್ಷಿ ಇಟ್ಟಾರ ಮಾಡಿ || ೬ ||

ನೆರೆದಿರುವ ಕುಂತ ಸಭಾದಲ್ಲಿ ಎಷ್ಟಂತ ಹೀಂಗ ವರಣಿಸಲಿ
ಒಂದ ಸಾವಿರ ಸರಿಯಾಗಿ ಮ್ಹಾಲಯಿದ್ವೊ ಸ್ವರಗದಲಿ ತಿಳಿಶಾಯಿರ ಹೇಡಿ
ಏರು || ಇದರಂತೆ ಕಟ್ಟಿ ತಯ್ಯಾರ ಆತರಿ ಇಲ್ಲದಾಂಗ ಕಸರ
ಮಾಡ್ಯಾರ ಒಳೇ ಶ್ರಿಂಗಾರ ಏನು ಸದರ ಒಂದ ಸಾವಿರ
ಬೆಳ್ಳಿ ಬಂಗಾರದ ಸುತ್ತಮುತ್ತ ಹಚ್ಯಾರ ಮಿನಾರ
ದರವೊಂದ ಮ್ಹಾಲಿನವೊಳಗ ಒಂದ ಸಾವಿರ ಕಂಬ ಇದ್ವೋ
ಕೇಳೋ ನೀ ಹುಚ್ಚಪ್ಯಾಲಿ ಸುತ್ತೆಲ್ಲಾ ಕಂಬಕ ಮುತ್ತ ಮಾಣಿಕ ಹೊನ್ನ
ಜರದ ಜರುತಿದ್ವೊ ಏನುಹೇಳಲಿ ಸುಳ್ಳಂತ ತಿಳಿದರ ಮತ್ತ ಮುರದೇನೋ ದವಡಿ || ೭ ||

ತಯ್ಯಾರ ಆಗಿದ್ದ ಸೊರಗದ ಸುದ್ದಿ ಹೋಗಿ ತಿಳಿಸ್ಯಾರ ಅರಸಗ ತಿದ್ದಿ
ಕೇಳಿ ಆನಂದ ಆಗಿ ಶಬ್ದಾದ ಹಿಡದಾನ ಹಾದಿ ಹಾಕಿ ಕುದುರಿಗೆ ಥಡಿ
ಏರು || ಕುಂತಿದ್ದಾ ಕುದುರಿಯ ಮ್ಯಾಲೆ ಅನೇಕ ದಂಡ ಸಂಗತೀಲೆ
ಮತ್ತ ಹೊಂಟಾನ ರವುಸೀಲೆ ಹೋಗುವಾಗ ದಾರಿವೊಳಗ
ಕಂಡ ಪಂಡಿತರಿಗೆ ಹುಡುಗಾಟ ಮಾಡುವ ಮನ ಬಲ್ಲಾಂಗಾ
ಕೇಳರಿ ಹರುಷಾಗಿ ಉಪದೇಶ ನನಗ ಮಾಡತಿದ್ರಿ
ಶಿವನಿಗೆ ನೆನಸಬೇಕಂತ ನೋಡರಿ ನಡಿಯಿರಿ ಮಾಡೇನಿ ತಯ್ಯಾರ
ಸೊರಗ ಭೂಮಿಮ್ಯಾಗ ನಾನೇಸೊಂತ
ಯಾತಕ ನೆನಸಲಿ ಶಿವನಿಗೆ ಕೈಜೊಡಿ || ೮ ||

ಶಾಣ್ಯಾ ಶಾಯಿರಾ ನಾನೇ ಒಬ್ಬ ಅಂತ ವಾದ ಹಾಕತಾನ ಕುರುಬ
ಓದಿ ನೋಡೋ ದಬಶ್ಯಾನ ತಪಸೀರ ತಂದಕೀರಾಬ ನೀಕೇಳೋ ಮಾನಗೇಡಿ
ಏರು || ಕುಂತ ಮಾಡರಿ ಚೌಕಾಗಿ ಹೇಳುವೆ ಪುರಮಾಸಿ ಅಕ್ಷರ ನುಡಿ ಸೋಸಿ
ತಿಳಿಸುವೆ ನಾ ಸಂಪೂರಣಾ ಕುಂತೀರಿ ಬುದ್ಧಿವಂತ ಕೇಳಿಶಾಂತ ಪಡಿರಿ ವಿದ್ಯಾನಾ
ತಪ್ಪ ಆದರ ನನ್ನ ಮಾಫ ಮಾಡರಿ ಬೇಡಿಕೊಂಬುವೆ ಇದ್ದೀನಿ ಅಲ್ಪಕಂದಾ
ಸ್ವಲ್ಪ ಮಾತ ನಾನು ಕೇಳಿದರ ಸಬ್ರಾದಲ್ಲೇ ಶಾಯಿರ ನಿಂತಾನ ಆಗಿಸುಂದಾ
ತಿಳಿದಾಂಗ ಆತ ನಿನ್ನ ಬಂಡೋಲ ಕೇಳ ಲವಡಿ || ೯ ||

ಸ್ವರಗದ ಸಮೀಪದಲ್ಲೇ ಹ್ವಾದು ಒಳಗಿಂದ ಮಂದಿ ಬಂದ ಬಂದಾ
ಶಬ್ದಾದಗ ಬೆಟ್ಟಿ ಆಗಿ ಹಿಡುರೋ ಪಾದಾ ಮುತ್ತುಮಾಣಿಕ ಹಾರಶ್ಯಾಡಿ
ಏರು || ಆನಂದ ಆಗಿ ಶಬ್ದಾದ ಬಾಕಲತನ ಹೋಗಿ ಖುದ್ಧ
ಒಳಗಯಿಟ್ಟಿದ್ದಾ ಕಾಲವೊಂದ ಮೊದಲ ತತ್ಕಾಲಾ
ಶಿವನ ಅಪ್ಪಣೆಲಿಂದ ಇಳದ ಬಂದಾರ ಇಜರಾಯಲಾ
ನಿಂತಾರ ಇದರಿಗೆ ಗಾಬಾಗಿ ಶಬ್ದಾದು ಕೇಳ್ಯಾನ ಬೆದರಿಸಿ ಯಾರ ನೀನು

ನಿಂತಾರ ನಗತಾರ ಯಿಜರಾಯಿಲ ಅಂತಾರ ನಿನ್ನ ಜೀಂವಾ
ತಗಿಲಿಕ್ಕೆ ಬಂದೇನಿ ನಾನು ಕೇಳಿ ಬೇಡಿಕೊಂತಾನ ಅರಸ ನಾಚಿಗೇಡಿ || ೧೦ ||

ನೋಡಿ ಸೊರಗ ಕಣ್ಣೀಲೆ ಕಂಡಿಲ್ಲಾ ತುಸು ನೋಡುವೆ ಒಳಗ ಹೋಗಿ ಮೊದಲಾ
ಅಂತ ಹೇಳೂತನಕ ಇಜರಾಯಿಲಾ ಜೀಂವಾ ತಗದಾರಲ್ಲಾ ಸತ್ತ ಬಿದ್ದಾನ ಖೋಡಿ
ಏರು || ಶಿವನ ಅಪ್ಪಣಿಲಿಂದ ಐಕಾತ ಸ್ವರಗ ಅಂದ
ಕವಿ ಮಾಡಿ ಹಾಡುವೆ ಛಂದ ಸಂಪೂರಣಾ ತಿಳಿಸ ನೀನಾ
ಸುತ್ತದೇಶಕ ವಾಹಿನಿ ಬಾಗಲಕೋಟಿ ಪಟ್ಟಣಾ
ಜಾಹೀರ ಮಡ್ಡಿಪೀರ ಗಂಭೀರ ಹುಸೇನ ಮಿಯ್ಯಾ ಕಂಡಲ್ಲೇ
ವೈರಿಗೆ ಆಗಿ ಮೂಲಾ, ನಿನ್ನ ಸವಾಲ ಒಡದ ತಿಳಸಿನಿ ತಿಳಿಯದಕ
ಶಾಹೀರಗೆ ಖುಲ್ಲಾ ಖುಲ್ಲಾ ಅಲ್ಲಂದರ ಅಂದೇನೋ ನಿನಗ ಖರೇ ಸುಗಡಿ || ೧೧ ||

* * *

## ೫. ಶಬ್ದಾದ ಅರಸನ ಸ್ವರ್ಗ ನೋಡಿದವ ಉಮರ ಬಿನ್ ಕತ್ತಾಬ

ಶಾಹೀರ ಸಭಾದಾಗ ಬಂದ  ಸವಾಲು ಮಾಡಿದಿ ನನಗೊಂದ
ಜವಾಬ ಕೊಡತೇನಿ ನಿನ್ನ ಮಾರಿಮ್ಯಾಗ ಹೊಡದ ಹಾರಸತೇನಿ ಚಿಂದಿ
ಏರು || ಪಂಡಿತರು ಪುರಮಾಸಿ | ಕುಸುಮ ಕಾಮಿಲ ತರಿಸಿ
ಮಾಡಿರಿ ಚವುಕಾಸಿ | ಶಬ್ದಾದನು ಗರ್ವಿಷ್ಟನು ಸ್ವರ್ಗ ಕಟ್ಟಿಸಿ
ಭೂಮಿಮ್ಯಾಗ ಕಾಣದೆ ಮಡದ್ಹೋದನು | ಸ್ವರ್ಗ ಅದೃಶಾ ಮಾಡಿದ ಜಗದೀಶಾ
ಹಗಲ್ಹೊತ್ತ ಜನರಿಗೆ ಕಾಣದಾಂಗ | ಹೊತ್ತಮುಳಗಿ ತುಸುಕತ್ತಲ ಆದಿಂದ
ಮಿಂಚೂದು ಕೋಲ್ಮಿಂಚು ಮಿಂಚಿದಾಂಗ | ಅದು ಕಂಡವನ ಹೆಸರು ಕೇಳುತ್ತೀದಿ || ೧ ||

ಉಮರ ಬಿನ್ ಕತ್ತಾಬಾ | ಹೌದಲ್ಲೋ ನೋಡೋ ಕಿತಾಬಾ
ಅಲ್ಲಂದರ ನಿನಗ ದನಗರ ಅಂದಾರ ಕುರುಬಾ ಈ ಕುಂತಿರು ಮಂದಿ
ಏರು || ಅಬ್ದುಲ್ ಬಿನ್ ಕತ್ತಾಬಾ | ಒಂಟಿ ಕಳಕೊಂಡ ತೋಬಾ
ಆಗಿದ್ದನು ಗಾಬಾ | ಹುಡುಕುದಕ ಆದೇಶಕ | ಹೋಗು ಹಾದ್ಯಾಗ
ಹೊತ್ತ ಮುಣಗಿ ಸ್ವರ್ಗ ಹತ್ತಿತು ಮಿಂಚುದಕ | ಧೈರ್ಯದ ಅನುಕೂಲಾ
ಸಿಕ್ಕಿತ ಬಾಕಲಾ | ಹಣಕಿ ನೋಡ್ಯಾಗ ಯಾರು ಇದ್ದಿದ್ದಿಲ್ಲಾ
ಮುತ್ತು ಮಾಣಿಕ ರತ್ನ ವಜ್ರ ಕೆಚ್ಚಿದ ಕಂಬದ ಮ್ಯಾಗಿದ್ದ ಎಷ್ಟೋ ಮಹಾಲಾ
ಬಳಕೊಂಡ ಮುತ್ತು ಮಾಣಿಕ ಹಿಡಿದಾನೋ ಹಾದಿ || ೨ ||

ಹೊತ್ತಗೊಂಡ ಮುತ್ತು ಮಾಣಿಕ | ಹಾದಿ ಹಿಡಿದ ಮುಂದ ಹೋಗುತನಕ
ಅಲ್ಲೇ ಸರಸಾ ಆಳುತ್ತಿದ್ದ ಅರಸಾ | ಮೌಲಾನಂತೇಕ ಹೇಳತಾನ ಹೊಸಾ ಸುದ್ಧಿ
ಏರು || ಹೇಳ್ತಾನ ಪೌರುಷ ತೀಡಿ | ದಂಗಾದೆ ನೋಡಿ
| ಬೆಳ್ಳಿ ಬಂಗಾರದ ಗ್ವಾಡಿ ಕಟ್ಟಿದ್ದವು ಹೊಳಾತ್ತಿದ್ದವು |

ಹುಚ್ಚಾದೆ ಮಿಂಚನೋಡಿ ನನ್ನ ಕಣ್ಣ ಮಿಂಚುತ್ತಿದ್ದವು ಕೇಳಕೊಂಡ ಅನವಾಯಾ |
ಅಂತಾನ ಮಾವಯ್ಯಾ ನಿವ್ಯಾಗದಿ ಏನ ಎಚ್ಚರದಿ ಸುಳ್ಳು ಹೇಳಾಕ
ನನಗ ಕಳ್ಳತನ ಬಂದಿಲ್ಲಾ ನಿಚ್ಚಳ ಹೇಳುವೆ ನೋಡಿದ ಸುದ್ದಿ |
ಬಿಚ್ಚಿ ತೋರಸ್ತಾನ | ಮುತ್ತು ಮಾಣಿಕ ನಗದಿ || ೩ ||

ಮಾವಯ್ಯ ಪಂಡಿತರಿಗೆ ಕರೆಸಿ | ಅಂತಾನ ನೋಡರಿ ತಳಸೋಸಿ
ಇವಾ ಹೇಳುವ ಮಾತ ಹೌದಲ್ಲ ಹೇಳಬೇಕ ತಿಳಿಸಿ ಹೆಚ್ಚಿನ ತಗಾದಿ
ಪಂಡಿತರು ಹೇಳ್ಯಾರಲ್ಲಾ | ಇವನ ಮಾತು ಸುಳ್ಳಲ್ಲಾ | ನಮ್ಮ ಹಜರತ ರಸೂಲಿಲ್ಲಾ
ಹೇಳಿದರು ನಮ್ಮ ಒಳಗಿನವರು ಒಬ್ಬರು | ಒಂಟಿ ಹುಡುಕೂತ ಹೋಗಿ
ಶಬ್ದಾದನ ಸ್ವರ್ಗ ನೋಡಿ ಬರತಾರು ನೋಡಿದ ಮನುಷ್ಯಾನ | ಇರತಾವ ಹಿಂತಾ ಚಿನ್ಹಾ
ಗಿಡ್ಡ ಇರತಾನ | ಅವನ ಕೆಂಪ ಬಣ್ಣಾ | ಕಣ್ಣ ಹುಬ್ಬಕುತ್ತಗಿ ಮ್ಯಾಗವನ
ಇರತೈತಿ | ಅಂಬು ತಿಳಿರಿ ಮುಖ ಖೂನಾ |
ನೋಡತಾರ ಆ ಮನುಷ್ಯಾಗ ಕರೆದು ಎಲ್ಲಾ ಮಂದಿ || ೪ ||

ಹೇಳಿದಂತೆ ನೋಡಿ ಸರೂ ಚಿನ್ಹಾ | ಮಾವಯ್ಯಾ ಆದ ಸಮಾಧಾನಾ
ನಬಿಸಾಬರ ಮಾತ ಅಲ್ಲಂತಾನ ಯಾಂವ ಹೈವಾನಾ | ಛೀ ಅಲ್ಲ ನಿನ್ನ ಬುದ್ಧಿ
ಏರು || ದೇಶದಾಗ ಬಾಗಲಕೋಟಿ | ಭರತಿ ಬಾಜಾರ ಪ್ಯಾಟಿ
ನಡುವೆ ಐತಿ ಪೀರನ ಕಟ್ಟಿ | ಗುರುಮುನಿ ದಸ್ತಗೀರ ಧನಿ
ವರ್ಷಕ್ಕೊಮ್ಮೆ ಚಂದ | ಮಕರಂಧ ಗಲ್ಲೀಪ ಹಚ್ಚಿ ನಿಶಾನಿ
ಕೇಸುಪೀರನ ಸತ್ತೆ | ನಾಗೂ-ಗೌಸೂಗ ನಿತ್ಯೆ | ಬೇಡಿದ ವರಗಳ ಕೊಡುತಿಹರು
ಅರಸ ಶಬ್ದಾದನ ಹಡದ ತಾಯಿ ಹೆಸರ ಒಡದ ಹೇಳಿ ಶಾಹೀರ
ಅನಸು ಗಬರು | ಇಲ್ಲಂದರ ಮುಕುಳಿವೊಳಗ ಹಾದೀತ ಗೂದಿ || ೫ ||

* * *

## ೬. ಕರ್ಬಲಾ ಅಡವಿ ಹಮ್ಮಚೌಕ ಎಷ್ಟಿತ್ತೊ?

ಸಭಾ ಕೂಡಿರಿ ರಂಗಲಾಲ | ಬಾಯಿ ಮಾಡಬೇಡರಿ ಕಲಲಾ
ಏರು | ಬೀಸಿ ಒಗೆದಾಂಗ ಕಲ್ಲಾ | ಮುರದೇನೋ ಬಾಯಾನ ಹಲ್ಲಾ
ಮಾನಪಾನ ಸಿಗುವುದಿಲ್ಲಾ | ಬಂದ ಹಿಡಿಯೋ ದೈವದ ಕಾಲಾ || ೧ ||

ಕರ್ಬಲ ಕದನ ನಡೆದ ಅಮಲಾ | ತಿಳಿಸುವೆ ಶಾಹೀರಗೆಲ್ಲಾ
ಏರು || ನಿನ್ನ ಉತ್ತರ ತಗೋ ಮಳ್ಳಾ | ಬಂದೀತೋ ನಿನಗ ಗೋಳಾ
ಸುಳ್ಳ ಅಂದರ ಮುರದೇನೋ ಹಲ್ಲಾ | ಮಾನಾಪಾನ ಸಿಗುವುದಿಲ್ಲಾ || ೨ ||

ಶುಮರಲೈನಾ ಕೆಟ್ಟಕುಲಾ | ಪತ್ರ ಕಳಿಸಿದ ತತ್ಕಾಲಾ
ಏರು || ರಣಗಂಬ ನಡೆಸಿದನಲ್ಲಾ | ಕರಕರ ತಿನ್ನೂತ ಹಲ್ಲಾ
ಆಕಾಶವಾಣಿ ಕೂಗಿತಲ್ಲಾ | ಹುಸೇನಸಾಬರಿಗೆ ಬಿದ್ದಿತೋ ದಿಗಿಲಾ || ೩ ||

ಕುದುರಿಗೆ ಜೀನ ಬಿಗಿದಾರಲ್ಲಾ | ರಭಸೀಲೆ ಹತ್ಯಾರಲ್ಲಾ
ಏರು || ಕರ್ಬಲಕ ಬಂದಾರಲ್ಲಾ | ಐವರು ಹಿಂಬಾಲಾ
ಅಬ್ಬಾಸ ಅಸ್ಗರ ಹಸನ ಕಮಲಾ | ಅಕಬರ ಸಣ್ಣಬಾಲಾ || ೪ ||

ಕದನ ನಡೆದೀತೋ ಒಳ್ಳೆ ಜುಮಲಾ | ನೇತ್ತರ ಕಾವಲಿ ಹರಿದಾವಲ್ಲಾ
ಏರು | | ಕುದುರಿಗೆ ತೀರ ಹಾಕಿದನಲ್ಲಾ | ಶುಮ್ರುಲೈನಾ ಕೆಟ್ಟಕುಲಾ
ಬಿದ್ದಾರೋ ಭೂಮಿಯ ಮೇಲಾ | ಬಿದ್ದೀತೋ ಕತ್ತಲಾ || ೫ ||

ನಾಲ್ವರು ಹೊಂಟಾರಲ್ಲಾ | ದುಃಖದಿಂದ ತತ್ಕಾಲಾ |
ಏರು || ತಮ್ಮ ಸ್ಥಾನಕ ಹೊಂಟಾರಲ್ಲಾ | ಹುಸೇನಸಾಹೇಬ ಮಡಿದಾನಲ್ಲಾ
ಅಂದಿನಿಂದ ಆಶೂರ ಆದೀತಲ್ಲಾ | ನಿನಗೊಂದ ಸವಾಲಮಲಾ
ಕೇಳುವೆ ಇನ್ನಮೇಲಾ | ಕರ್ಬಲಾ ಆಡುವೆಯಲ್ಲಾ || ೬ ||

ಎಷ್ಟು ದಾರಿ ಹಮ್ಮಚೌಕಾ ಇತ್ತೋ ಹೇಳೋ ಮೊದಲಾ
ಮಣ್ಣ ಯಾವ ವರ್ಣದ್ದು ಹೇಳಬೇಕೋಖುಲ್ಲಾ | ಮುಗಸೇನಿ ಸ್ವಲ್ಪಕ ಅಮಲಾ
ಶಾಹೀರನ ಬಿಡುವುದಿಲ್ಲಾ | ಕೊಣ್ಣೂರು ರಾಜ್ಯದ ಮೇಲಾ || ೭ ||

ವಾಹೀನ ಇರುವುದಲ್ಲಾ | ನಬಿಯಾ ಮಾದೇವ ವೈರಿಗೆಲ್ಲಾ
ತರಬಿ ಕೇಳ್ಯಾರಲ್ಲಾ ಧೀನ್ ಧೀನ್ ಎಂದು ಅಲಾಯಿ ಆಡ್ಯಾರಲ್ಲಾ || ೮ ||

* * *

## ೭. ನಬಿಸಾಬರು ಹುಟ್ಟಿದ ನಂತರ ಸೃಷ್ಟಿಗೊಂಡ ಬಾಳಿವನದ ಎತ್ತರ ಎಷ್ಟಿತ್ತು?

ಸದಾ ಸದಾ ಗುರುವಿಗೆ ಶರಣಾ | ಮಾಡುವೆ ಮೊದಲಗೆ ನಾನಾ
ನವಖಂಡ ಭೂಮಿ ಮಂಡಲನಾ | ಹುಟ್ಟಿಸಿದಂತವನಾ
ಏರು || ಮುಂಚೆ ಮೊದಲ ಮೂಲರಂಭಾ | ಆಪೇ ಆಪ ಇದ್ದಾನು ಸಂಬಾ
ಚ್ಯಾಲ || ನಬಿಸಾಹೇಬ ಹುಟ್ಟಿಸುದಸಿಂದ ತನ್ನೊಳಗಿನ ಜ್ಯಾತಿ ತಗದಾ
ಕಂದೀಲದೊಳಗ ಇಟ್ಟಿದ್ದಾ ಮುಂದಿನ ಉತ್ಪನ್ನಾ
ಎಪ್ಪತ್ತಸಾವಿರ ವರುಷದಿನಾ | ಮಾಡಿದ್ದ ಜ್ಞಾಪಾನಾ || ೧ ||

ಇ || ಮುತ್ತ ಮುಂದ ಇಟ್ಟ ಇಟ್ಟ ಭಗವಾನಾ | ದಿಟ್ಟಿಸಿ ಅದಕ ನೋಡುವನಾ
ಕರಗಿ ನೀರಾತೋ ಆಕ್ಷಣಾ ಇದು ಸಾಂಬನ ಕರುಣಾ
ಏರು || ಮೊಸರ ಕಡೆದಾಂಗ ನಿಂತು ನಾಲ್ಕು ಮಂದಿ ದೂತರು ಸೊಂತು

ಕಡದಿಂದ ಬುರುಗ ಹೊರಟಿತೊ | ಬರುಗದಿಂದ ಹೊಗಿಯು ಹೊಂಟೀತು
ಹೊಗಿಯಲಿಂದ ಹೆಪ್ಪುಗಟ್ಟಿತೋ | ಆದೀತೋ ಮಂಡಲಾ
ಸುಳ್ಳ ಅಂದರ ಶಾಹೀರಾ | ಕಿತ್ತೇನಿ ನಿನ್ನ ಕಣ್ಣಾ || ೧ ||

ಕಂದಿಲದಾನ ಅರ್ಧಾ ಕಿರಣ | ತಗದಿಟ್ಟ ಆ ಜಗಜರಣಾ
ದೂತರು ಮಾಡಿದ್ದು ನಿರ್ಮಾಣಾ | ಅವರಿಗೆ ನನ್ನ ಶರಣಾ
ಏರು || ಜುಬರಾಹಿಲ ಮಿಕಾಯಿಲ | ಇಸರಾಫಿಲ | ಇಜರಾಯಿಲ
ಚ್ಯಾಲ || ಹುಟ್ಯಾರೋ ನಾಲ್ಕು ಮಂದಿ ಜತ್ತಾ | ಅದರೊಳಗಿನ ಅರ್ಧಮುತ್ತಾ
ತಗದ ಮಾಡಿದಾರ ಒಂದ ಮುತ್ತ | ಬೆಲಿ ಇಲ್ಲದ ರತನಾ
ಎಪ್ಪತ್ತ ಸಾವಿರ ವರುಷದಿನಾ | ಮಾಡ್ಯಾರ ಜೋಪಾನಾ || ೩ ||

ಮುತ್ತ ಮುಂದ ಇಟ್ಟ ಭಗವಾನಾ | ದಿಟ್ಟಿಸಿ ಅದಕ ನೋಡುವನಾ
ಕರಗಿ ನೀರಾತೋ ಆ ಕ್ಷಣಾ | ಇದು ಸಾಂಬನ ಕರುಣಾ
ಏರು || ಗಿಡಾ ಒಂದು ಕಣ್ಣಿಲಿಂದಾ | ಕಂಡೇನಿ ನಾ ಒಂದ
ಪ್ರೀತಿಲಿಂದ ಹುಟಶ್ಯಾನೋ ಧೀರಾ | ತುದಿ ತೆಳಗ ಮ್ಯಾಲೆ ಇತ್ತೋ ಬೇರಾ
ಯಾವತ್ತು ಮೂಡತಿತ್ತೊ ಹಸರಾ | ಕಸರಿಲ್ಲದ ಏನಾ
ಹೂವುಕಾಯಿಲಿಂದ ಬಾಳಿವನಾ | ಕಾಣುವದು ಬಹುಚ್ಛೈನಾ || ೪ ||

ಯಾವ ತಾರೀಖ ದಿನಾ | ಆಗೈತಿ ಉತ್ಪನ್ನಾ
ನೆಪ್ಪೀಲೆ ಹೇಳೋ ಲೆಕ್ಕದ ಪರಿಮಾಣಾ | ತೋರಿಸಬೇಕೋ ಕೂನಾ
ಏರು || ಎತ್ತರ ಎಷ್ಟಿತ್ತೋ ಸತ್ತರ ಹತ್ತುದಿಲ್ಲೋ ಗೊತ್ತೋ
ತರಕ ಹಿಡಿಯಬೇಕು ಅಡಬಂಗಿ | ಹೂವುಕಾಯಿ ಏಸಿದ್ದವು ಟೊಂಗಿ
ನೀ ತೊಟಗೊಂಡಿ ಪುಗಶೆಟ್ಟಿ ಅಂಗಿ | ನಿನ್ನ ಕಿಮ್ಮತ್ತೇನಾ ||
ಬಗಲಾಗ ಹಿಡಿದೀದಿ ಕುರಾನಾ | ಹೇಳಬೇಕೋ ನೀನಾ || ೫ ||

ಗುರು ನಮ್ಮ ದಸ್ತಗೀರಪೀರಗ ಶರಣಾ | ಖುಷಿಲಿಂದ ಮಾಡುವೆ ನಾನಾ
ಏರು || ದಯಾ ಅವರ ಇರೂತನಾ | ಮಾಡರಿ ಕರುಣಾ
ಉಸ್ತಾದ ಲಚಮನಸಿಂಗ | ಹಸ್ತಇಟ್ರೋ ತಲಿಮ್ಯಾಲೆ ಹೀಂಗ
ಸುತ್ತ ದೇಶಕ ಬಾಗಲಕೋಟಿ | ನಡು ಊರಾಗ ಪೀರಾನ ಕಟ್ಟಿ
ಕವಿ ಮಾಡತಿದ್ರೋ ಹೊಸದಾಟಿ | ವರ್ಷಕ ಒಂದಿನಾ
ಗಂಧ ಗಲ್ಲೀಫ ಮಕರಂದ ನಿಶಾನಾ | ಲಬಿಲಾಖುರ ಮಹಿನಾ || ೬ ||

* * *

## ೮. ಏಳು ಮಂದಿ ಶರಣರು ಯಾರು ಯಾರು?

ಕೇಳರಿ ಕುಂತಾ ಇಟ್ಟ ನಿಮ್ಮ ಚಿತ್ತಾ | ತಿಳಿಸಿ ಹೇಳುವೆ ಶಾಸ್ತರ ಧುರೀಣಾ
ಮಾಡಬ್ಯಾಡರಿ ಗುಲ್ಲಾ ಸಣ್ಣದೊಡ್ಡವರೆಲ್ಲಾ | ಕೂಡಿ ಕುಂತಿರಿ ಸರೂ ಸಂಪೂರಣಾ
ಏರು || ಒಬ್ಬ ಶರಣರು | ಶಿವನ ಗೆಳೆಯರು | ನಿತ್ಯಕಾಲದಲ್ಲಿ ಸ್ಮರಣೀಯ ಒಳಗೆ
ಚೈನಿಲ್ಲದಾಂಗ ಕುಂತ್ರೋ ರಾತ್ರಿಹಗಲಾ | ಮಾಡಿ ನಮಾಜ ತಿರುಗಿ ಮನಿಗೆ ಹೋಗುವಾಗ
ಇಬಲೀಸ ಬಂದ ದಾರಿವೊಳಗ | ಮನಸ ಒಡಿಸ್ಯಾನ | ಇದ್ದಿಲ್ರಿ ಅವರಿಗೆ ಸಮಾಧಾನ
ಬಿಟ್ಟ ಮನೆದಾರಿ ತಿರುಗೂತ ಪೇರಿ | ಹೋದಾರೋ ಪಾತರದಾಕಿ ಮನೆತನ || ೧ ||

ಇ || ತಗದ ಬೈತಾಲಿ | ಕುಂತಾಳೋ ಬಾಲಿ | ಲಕಲಕ ಹೊಳೆಯತಿತ್ತೊ ಮಾರಿಯ ಚೆನ್ನಾ
ಹರೆಯದ ಭಾರ ಆಗಿ ಶೃಂಗಾರ | ಕೈಹಿಡಿದು ಕರದು ಒಯ್ದಾಳೋ ಶರಣರನಾ
ಏರು || ಕುಂತಾರೋ ಆಗ ಮಂಚದ ಮ್ಯಾಗ | ಆಗಿ ಬಹಳ ಕುಶಲಾ
ತಬಕ ತಂದು ಇಟ್ಟಾಳೋ ಮುಂದ | ಎಲೆ ಅಡಕಿ ಮೊದಲಾ
ವೀಳೆಯ ಮಡಚಿ ಕೊಟ್ಟಾಳೋ ನಾರಿ ಸರೂ ಸಾಮಾನ ಹಾಕಿ
ಜಾಜಿಕಾಯಿ ಪತ್ರಿ ಯಾಲಕ್ಕಿ | ಕೇಳ್ಯಾರ ದರ ಏನ ಇಟ್ಟೇದಿ ಚೌಕ ನೀನಾ || ೨ ||

ಅಂತಾಳ ಬಾಲಿ ಕುಂತ ಹಂತೇಲಿ | ತಿಳಿದವರಿಗೆ ಒಡದ ಹೇಳಲೇನ ನಾನ
ಕೊಟ್ಟಾರ ಕೈಮುಚ್ಚಿ ಹಸ್ತಕ ಹಸ್ತಹಚ್ಚಿ | ಕುಸಿಯಾಗಿ ಗಾದಿಮ್ಯಾಗ ಹೋದ್ರೋ ಬ್ಯಾಗನಾ
ಏರು || ಸಾಂಬನ ಮಾತ ನೆನಪಾತೋ ತುರತಾ | ಆಗ ಶರಣರದು ಜರದೀತೋ ಮನಾ
ಇಲ್ಲಿಗೆ ಬಂದದ್ದು ತಪ್ಪಾಯಿತು ನಂದು | ಅಂದ್ರೋ ಸ್ವಾಮಿ ಸೇಲಾ
ಮಂಚ ಇಳಿದು ಮನಸಿಗೆ ತಿಳಿದು ಬಡಕೊಂಡ ತನ್ನಗಲ್ಲಾ
ಥರ ಥರ ನಡಗೂತ ಅತಗೊಂತ ನಿಂತಾರೋ ಮನಿಯಾಗ || ೩ ||

ಇ || ಅಳುಕ ಕಾರಣ ಹೇಳರಿ ನನಗ | ತಾಯಿ ಕೆಟ್ಟಕೆಲಸ ಮಾಡುವದಿಲ್ಲವ್ವ ನಾನ
ಪರಹಣ್ಣಿನ ಮ್ಯಾಲೆ ಆಗಬಾರದು ಮೋಹ | ಮನದಲಿ ಹಳಹಳಿಸಿ
ಏರು || ಬಿಡತಾರೋ ಸರಸದಿ ಗಾದಿ | ಹೋದಾರೋ ಹೊಂಟ ಆಕಿ ಮನಿಬಿಟ್ಟ
ಮಾಡಿ ನಮಾಜ ಬೇಡಿಕೊಂಡ್ರೋ ಶಿವನ | ಬಂದದ್ದು ಘೋರ ಆದೀತು ದೂರ
ಪಾರ ಮಾಡರಿ ಉಳಿಸಿ ನನ್ನ ಮಾನ ಪಾತರದಾಕಿ ಕುಂತ ಉಸರ್ಹಾಕಿ
ತಿಳಿದರೋ ಮನಕ ಮಹಾಕೆಟ್ಟ ಕೆಲಸ ಮಾಡೇನಿ ದೋಷ ಚೈನಿಲ್ಲೊ ಜೀವಕ || ೪ ||

ದಾತರಿ ಹಗಲಿ ನಾನು ಕೆಟ್ಟ ಕೆಲಸದಾಗ ದ್ರವ್ಯಗಳಿಸಿನಿ ಬಲ್ಲಾಂಗ
ಮುಂದ ಆಗೂದು ತಿಳಿದಿಲ್ಲೊ ನನಗ | ತಾಯಿ ತಂದಿನಾ ಕರಸಿ ಎಲ್ಲರನ
ಏರು || ಬದುಕು ಬಾಳುವೆ ಮಾಡತೇನಿ ದಾನ | ತಾಯಿ ತಂದಿ ಆಗ ಅಂತಾರ ಹೀಂಗ
ಬಂದದ್ದ ಹೇಳ ಸಂಕಟವನ | ಮಾಡಿದ ಕರ್ಮಾ ಆದೀತ್ಯಾಂಗ ಕರ್ಮಾ
ಬರದಾನೋ ಬ್ರಹ್ಮಾ ಎಂತಾ ದೈವಾನಾ | ಒಬ್ಬ ಶರಣರು ಸತ್ಯವಂತರು
ನನ್ನ ಮನಿಗೆ ಬಂದ | ಪಾಪ ಪುಣ್ಯ ಎರಡು ಬೇಧಗಳು ಹೇಳಿದ ಒಡದ || ೫ ||

ಈ ಮಾತು ಕೇಳಿದಸುಟ್ಟು ಜೀವಕ್ಕಿಲ್ಲ ಸೊಗಸ | ಬಿಟ್ಟೇನಿ ಕೆಟ್ಟ ಕೆಂಸದ ಧ್ಯಾಸಾ
ಮಾಡಿ ಪಾಪಕ್ಕೆ ಗುರಿಯಾದೆ ಇಷ್ಟು ದಿನ

ಏರು || ನನ್ನ ಮನದಾಗ ತಿಳಿದಿನಿ ಹೀಂಗ | ಆಗುವೆ ನಿಕಾಹ ಶರಣರನ ನಾನಾ
ಖುಷಿಯಾಗಿ ಮನಕ ಕರೆಸಿ ಬಡಜನಕ | ರೊಕ್ಕ ರೂಪಾಯಿ ಮಾಡ್ಯಾಳೋ ದಾನಾ
ಬಿಳಿ ಪೋಷಾಕ ಉಟಗೊಂಡ ಬೆಳಕ | ಹುಡುಕೂತ ಹೊಂಟಾಳೋ ಶರಣರನಾ
ಓಣಿಓಣ್ಯಾಗ ತಿರುಗೂತ ಹೀಂಗ ಕೇಳೂತ ಅವರ ಹೆಸರಾ || ೬ ||

ಇ || ಮಾಡಿ ನಮಾಜ ಕುಂತಿದ್ರೋ ಶರಣರು ಹೋಗಿ ಆಕಿ ನಿಂತಾಳೋ ಇದಿರ
ಕರದಾರೊ ಶರಣರು ಹೆಸರ ತಗೊಂಡು ಆ ನಾರಿ ತಿರುಗಿ ನೋಡ್ಯಾರೋ
ಆಕಿ ಮಾರಿ | ಅಂತಾರೋ ಮನದಾಗ ಉಳಿದಿಲ್ಲೋ ನನ್ನ ಮಾನ
ಶಿವಸಾಂಬನ ಆಟ ಉಸಲು ಹೋತೋ ಹೊಂಟ
ಕಂಡಾಳೋ ಕಣಮುಟ್ಟ ಆದೀತೋಮರಣಾ
ಊರಾನ ಮಂದಿ ಕೇಳಿ ಈ ಸುದ್ಧಿ | ಬಂದು ಕೂಡ್ಯಾರೊ ಸರ್ವ ಎಲ್ಲ ಜನಾ || ೭ ||

ಇಂಥಾ ಶರಣರಿಗೆ ಮರಣೆದುಹ್ಯಾಂಗ | ಬಂದದ್ದು ತಿಳಿದಿಲ್ಲೋ ಧುರಿಣಾ
ಪಾತರದಾಕಿ ನಿಂತು ಉಸುರುಹಾಕಿ ಅಂತಾಳೋ ದೈವಕ
ಏರು || ಕೆಟ್ಟಕ್ರಮಗಳು ಅಳದ ಬಂದೀನಿ ನಾನು ಇವರದುಸಕ
ಮನಿಯಾನ ಧನ ದೌಲತ್ತ ಮಾಡಿಬಂದೆ ಲೂಟಿ
ನಿಕಾಹ ಅಗಬೇಕು ಈತಗ | ನನ್ನ ಕಂಡಾ ಕ್ಷಣಕೆ ಬಿಟ್ಟೆರೋ ಪ್ರಾಣ
ಕೂಡಿ ದೈವದವರು ನನ್ನ ವಿಚಾರ ಮಾಡುತ ಹ್ಯಾಂಗ ಕೊಡತೀರಿ ಮಣ್ಣಾ || ೮ ||

ದೈವದವರು ಸೋಸಿ ಮಾಡ್ಯಾರ ಚೌಕಾಸಿ | ಕರಸ್ಯಾರೋ ಶರಣರ ಸಣ್ಣ ತಮ್ಮನ್ನಾ
ಬಂತೋ ಮನದಾಗ ಈಕಿಗೆ ನಿನಗ ನಿಕಾಹ ಮಾಡತೇವಿ ಆದಿಂದ ಮಣ್ಣಾ
ಏರು || ಕೇಳಿ ಶರಣರ ತಮ್ಮಾ ಅಂತಾನ ಬಂದ್ರ ನಿಮ್ಮ ಮನಕ
ನಿಕಾಹ ನನಗ ಮಾಡ್ರಿ ಅಂತಾನ | ನೀವು ಮಣ್ಣ ಕೊಟ್ಟ ಬಳಿಕ
ತಂದಾರೋ ಎತ್ತಿ ಹೆಣಕ | ತೊಳಿಯಲಾಕ ಹೊರಗ
ಹಸನ ಮಾಡಿ ಇಟ್ಟಾರೋ ಡೋಲ್ಯಾಗ | ಕರ್ಪೂರ ಗಂಧೆಣ್ಣೆ ನಾತ ಸುವಾಸನ || ೯ ||

ಎತ್ತಿ ಗೋರಿತನಕ ಒಯ್ದಾರೋ ಸ್ರವಕ ಹಿಂದಿಂದ ಹೊಂಟಾರೋ ಸರೂಜನಾ
ಕೂಡಿ ದೈವೆಲ್ಲಾ ಮಾಡಿ ಮಣ್ಣಪಾಲಾ | ತಿರುಗಿ ಬಂದಾರೋ ಅವರು ಮನಿತನಾ
ಏರು || ಪಾತರದಾಕಿಗೆ ನಿಕಾಹ ಮಾಡಿದರಾಗ | ತೆರದೀತೋ ಮುಂದೆ ಆಕಿಯ ದೈವಾನ
ಏಳು ಮಂದಿ ಶರಣರು ಹುಟ್ಯಾರೋ ಆಕಿಯ ಹೊಟ್ಟೆಯಲಿಂದಾ |
ಯಾವ ತಾರೀಖದಾಗ ಯಾವ ಹುಟ್ಯಾನ ಒಡದ ಹೇಳ ಬೇಧಾ
ಒಬ್ಬೊಬ್ಬರ ಹೆಸರ ಬೇರೆ ಮಾಡಿ ಖುಲ್ಲಾ ಹೇಳೂತನಾ || ೧೦ ||

ನಿನಗ ಬಿಡೂದಿಲ್ಲ ಇದರಾಗ | ತಿಳೂತೈತಿ ನಿಂದೂ ಎಲ್ಲಾ ಶಾಣೇತನಾ
ಯಾವ ಎಲ್ಲಿ ಮಡಿದ ಹೇಳೋ ನೀನ ಒಡದು ಯಾವ ಶರಣರದು ಎಲ್ಲಿ ಠಿಕಾಣಾ
ಏರು || ಇಡಬ್ಯಾಡರಿ ಕಸರು ಪಾತರದಾಕಿಯ ಹೆಸರ ತಿಳೂತೈತಿ ನಿನ್ನ ಬುದ್ದಿ ಜ್ಞಾನಾ
ಎಷ್ಟು ವಯದಾಗ ನಿಕಾಹ ಆದಳು ಆವಾಗ ತಾರೀಖ ಯಾವದಿತ್ತು ಯಾವದಿನಾ

ಬಾಳ ಬುದ್ಧಿವಂತ ಆದಿರಂತ ಕೇಳಿ ಬಂದೀನಿ ಹೆಸರಾ
ಸವಾಲ ತಲಿಮ್ಯಾಲೆ ಬಂತ ಅಂತ ನಿಂತ ಹಾಕಬ್ಯಾಡ ಉಸರಾ || ೧೧ ||

ಇ || ನಿಕಾಹ ಆದ ಶರಣರ ಹೆಸರು ಹೇಳೋ ಒಡದು ಜನಕ ಬರೂಹಾಂಗ
ಸರ್ವದೈವದ ಮನಕ ಪಂಟ ಹಚ್ಚಿ ಹೋದರ ಬಿಡೂದಿಲ್ಲ ನಾನ
ಏರು || ಬೆನಕದ ಸರ ನಿನಗ ಹಾಕೇನಿ ಕೊರಳಾಗ ಸಿಕ್ಕಿಲ್ಲ ಶಾಣ್ಯಾ ಗುರು ನಿನಗ
ಗುರು ದಸ್ತಗೀರವಲಿ ಸತ್ತುಳ್ಳ ಕೇಸುಪೀರ ಕೊಟ್ಟ ಬುದ್ಧಿ ಜ್ಞಾನ
ನಾಗೂ-ಗೌಸುಗ ಹಸ್ತ ತಲಿಮ್ಯಾಲ ಮಾಡಿ ಬಿಟ್ಟಾರ ದಯದ ಕರುಣಾ
ಒಲ್ಲೆ ಒಲ್ಲೆನಂದರ ಜ್ವಾಕಿ ಕೊಟ್ಟ  ಹೋಗತೀರಿ ಹೊಂಟಾ
ಹೋಗಗೊಡುವುದಿಲ್ಲಾ ದೈವದವರು ಹಾಡಾಕ ಬಂದರ ಉಣಿಸುವರೋ ಊಟಾ || ೧೨ ||

* * *

## ೯. ಅಬೂಬಕರ ಗುರು ಹ್ಯಾಂಗಾದ?

ಕುಂತಿರು ದೈವೆಲ್ಲಾ ಬಯ್ಯಾನೊಂದ ಸಭೇದಾಗ
ಚಂದದಿಂದ ತಗದೇನಿ ಅಕಲಾ || ಪಲ್ಲವಿ ||

ಏರು || ನಬಿಸಾಹೇಬ ಶರಣನಾ | ನಮಾಜ ಮಾಡಾಕ ಒಂದಿನಾ
ಸಂಗತಿಲೆ ಜುಬರಾಹಿಲನಾ ಬಂದರಿನ್ನಾ
ಯಾವದಿನ ನಮಾಜ ಮಾಡ್ಯಾರಿನ್ನಾ ||
ಚ್ಯಾಲ || ಅವರ ಮಿತ್ರರು ಇದ್ದಾರೋ ನಾಲ್ವರು
ಇಜರಾಹಿಲ ಇಸ್ರಾಪೀಲ ಹಜರತಲಿಯನಾ ಬಂದಾರೋ ಆದಿನಾ
ಅಬೂಬಕರ ಸಿದ್ದೀಕನಾ | ಬಂದಾರೋ ಒಂದ ದಿನಾ
ಜುಬರಾಹಿಲ ಎದ್ದು ಮಾಡ್ಯಾರವರಿಗೆ ಶರಣಾ || ೧ ||

ಜುಬರಾಹಿಲಗ ಮೊದಲಾ | ನಬಿಸಾಹೇಬರು ಕೇಳಿದರಾಗ ತಗದ ಅಕಲಾ
ಏರು || ಅಬೂಬಕರಗ ಶರಣ ಮಾಡಿದೇನ ಕಾರಣಾ ?
ಹೇಳಬೇಕೋ ತೀವ್ರದಿ ನೀನಾ | ಜುಬ್ರಾಹಿಲನಾ | ಹೇಳ್ಯಾರಿನ್ನಾ
ನನ್ನ ಗುರುವು ಇವರು ಇನ್ನಾ | ನಬಿಸಾಹೇಬರಾಗ
ಚ್ಯಾಲ || ಅಂದಾರೋ ಬೇಗ | ದೂತ ಪೈಲಾ ನೀನಾ | ಗುರು ಹ್ಯಾಂಗ ಅವನಾ
ಇಲ್ಲಿಗೆ ತಂದ ಮುಗಸೇನಿ ಸಂದ ಕೇಳರಿ ಇನ್ನಾ
ಕುಂತಿರು ಸರ್ವಜನಾ ಶಾಹೀರಗಿನ್ನಾ | ತಂದೇನಿ ಮುಸಗಿಯನಾ
ಕುಂಡಿ ಸುಟ್ಟ ಬೆಕ್ಕಿನಾಂಗ ಓಡ್ಯಾಡ ಬ್ಯಾಡೋ ನೀನಾ || ೨ ||

ಜುಬರಾಹಿಲನಾ ಅಬೂಬಕರ ಗುರು ಹ್ಯಾಂಗ ಆದ ಅವನಾ
ಏರು || ಹೇಳಬೇಕೋ ಶಾಹೀರ ನೀನಾ | ನಿಂದು ಐತಿ ವಾಹಿನಾ

ತೀರಲಿ ಇಂದಿನದಿನಾ | ಗುರು ದ್ರೋಹಿ ನೀನಾ | ಆದವನಾ
ಶಾಸ್ತ್ರದ ರೀತಿ ಇಷ್ಟ ಐತಿ ಗೊತ್ತಾ | ಮಾಡತೀದಿ ಕವಿತಾ
ಕೇಳೋ ಹೈವಾನ ನಿನಗಿಲ್ಲೇಳೋ ಗ್ನ್ಯಾನ
ನುಚ್ಚ ಇಟ್ಟವರ ಮನಿಯ ಎತ್ತಕಾಯಾಂವ ನೀನಾ
ನೀನಾದೋ ಬೇಮಾನಾ | ಗುರು ಹುಸೇನ ಸಾಹೇಬನಾ
ಕಣದಿಯ ಕವಿತವನಾ | ಮಾಬುಸುಬಹಾನಿಯವರ ಕರುಣ ಪೂರ್ಣಾ || ೩ ||

* * *

## ೧೦. ಕಲ್ಮಾ ಎಷ್ಟು ಒಟ್ಟಿಗೆ ಹೇಳೋ ಕುರಾನ್ ನೋಡಿ

ತಂದೆ ತಾಯಿಗೆ ಶರಣು ಮಾಡಿ | ಬಯ್ಯಾನ ಹೇಳತೇವಿ ಕುರಾನ ನೋಡಿ
ಏರು || ವಿದ್ಯಾಬುದ್ಧಿಗೆ ಹದ್ದು ಇಲ್ಲಾ ವಿಚಾರ ಮಾಡಿ
ನಾನು ಮೇಲು ಎಂದು ಶಾಹೀರ ಬರತಾನ ಓಡಿ
ಇ || ಗರುವು ಮಾಡಿ ಆಗತಾನ್ರಿ ನಮಗೆ ಆಡಿ
ಕಲ್ಮಾ ಓದತೇವಿ ಇವನಿಗೆ ಪ್ರೀತಿ ಮಾಡಿ || ೧ ||

ಮಹಾ ಮಕ್ಕಾ ಮದೀನಾ ಅನ್ನುವ ರೂಢಿ | ಸ್ವರ್ಗ ಐತರಿ ತಂದೆತಾಯಿ ಪಾದದಡಿ
ಏರು || ಮದೀನಾದಲ್ಲಿ ತಾಯಿ ಮಗಾ ಇದ್ದಾರೋ ಜೋಡಿ
ತಾಯಿ ಬೆಳಸ್ಯಾಳೋ ಮಗನಿಗೆ ಜೋಪಾನ ಮಾಡಿ
ಇ || ಮಾಕಿ ಮೊಹಬ್ಬತ್ ಬಹುತ್ ಬಡಿ
ಮುಂದೆ ಹೇಳುವೆ ಕೇಳರಿ ದೈವಾ ನೋಡಿ || ೨ ||

ಜಿಲಾನಿ ಎಂದು ನಮಗೆ ಕರುಣ ಮಾಡಿ | ಜೋಪಾನ ಮಾಡ್ಯಾಳೋ ತಾಯಿ ಜೋಗುಳ ಹಾಡಿ
ಪ್ರಾಯಕ್ಕೆ ಬಂದ ಮೇಲೆ ಮಗ ಹುಡಿಕ್ಯಾಡಿ
ಒಂದು ಹೆಣ್ಣಿಗೆ ಕಣ್ಣು ಇಟ್ಟಾಳ ಚೆಲುವಿಕಿ ನೋಡಿ
ಇ || ಸೂರ್ಯ ಚಂದ್ರ ನಾಚುವರೋ ಹೆಣ್ಣಿಗೆ ನೋಡಿ
ಥಳ ಥಳ ಹೊಳಿಯುವಳೋ ಬಹಳ ಮಾಡಿ || ೩ ||

ಜಿಲಾನಿಗೆ ಕರದಾಳಾಕಿ ಸನ್ನೆ ಮಾಡಿ
ಅವಳ ಹತ್ತಿರ ಹೋದಾನವನು ಮನಸು ಮಾಡಿ
ಏರು || ಜಿಲಾನಿ ಕೇಳತಾನೋ ಹೆಣ್ಣಿಗೆ ಜೋರುಮಾಡಿ
ಶಾದಿ ಕರಲೇತಾ ಹೂಂಜೀ ಆಪ್ ಹೈಬಡಿ
ಇ || ನಿನಗ ಲಗ್ನ ಆಗಬೇಕಾದರ ಜಿಲಾನಿ ನೋಡಿ
ಒಂದು ಕೆಲಸ ಐತಿ ಅದು ನಡೆಸಿಕೊಡಿ || ೪ ||

ಜಿಲಾನಿ ಕೇಳತಾನು ಜಲ್ದಿ ಮಾಡಿ ಯಾವ ಕೆಲಸ ಇರುವದು ಬೇಗನೆ ನುಡಿ
ಏರು || ನನ್ನ ಮೇಲೆ ಮನಸು ಇದ್ದರ ನೀವು ದಯಮಾಡಿ
ನಿಮ್ಮ ತಾಯಿ ಮಾಂಸ ನನಗ ತಂದು ಕೊಡಿ
ಇ || ಮಾಂಸ ತಂದು ಕೊಟ್ಟರ ಲಗ್ನವ ಹೂಡಿ
ಬೇಗ ತಂದುಕೊಡಬೇಕರಿ ಲಗುಮಾಡಿ || ೫ ||

ಆಗಲಿ ಅಂತಾ ಮನಿಗೆ ಹೋದಾನು ಜಿಲಾನಿ ಓಡಿ
ಕೊಡ್ಲಿ ಹಿಡಿದಾನು ತಾಯಿ ಮಲಗಿದ್ದು ನೋಡಿ ||
ಏರು || ತಾಯಿಗೆ ಕೊಂದು ಮಾಂಸ ಒಯ್ದ ಲಗು ಮಾಡಿ
ಹೋಗುವಾಗ ಕಲ್ಲಿಗೆ ಎಡವಿ ಬಿದ್ದಾನೋ ಖೋಡಿ
ಇ || ಮಾಂಸ ಹೇಳತೈತರಿ ಬಿದ್ದ ಮಗನಿಗೆ ನೋಡಿ
ಅಯ್ಯೋ ಮಗನೆ ಬಿದ್ದಿಯೇನೋ ಮೆಲ್ಲಕ ನಡಿ || ೬ ||

ತಾಯಿ ಮಾಂಸ ಹೇಳುವುದು ಮರಗುತ ಬೋರ್‍ಯಾಡಿ
ಪೆಟ್ಟು ಎಲ್ಲಿ ಬಡದೀತೋ ಮಗನೆ ಹೇಳೋ ಲಗುಮಾಡಿ
ಏರು || ತಾಯಿ ಪ್ರೇಮಾ ಹೆಚ್ಚಿಂದೈತಿ ದೈವಾ ನೋಡಿ
ಅನ್ಯಾಯ ಮಾಡಬಾರದೋ ತಾಯ್ತುಂದಿ ಕಡಿ
ಇ || ಸೇವಾ ಮಾಡಬೇಕರಿ ಶಿವನ ಸರಿಮಾಡಿ
ಮಾರೆ ಪಾಂವಮೆ ಶಾನ್ ಹೈಜಿ ದುನಿಯಾಮೆ ಬಡಿ || ೭ ||

ಹೆಣ್ಣಿನ ಹತ್ತಿರ ಹಿಡಕೊಂಡು ಒಯ್ದ ಮಾಂಸದ ತುಕಡಿ
ಮಾಂಸ ನೋಡಿ ಹೆಣ್ಣು ಅಂತಾಳೋ ದೈವಾ ನೋಡಿ
ಏರು || ಜಲ್ಮಾ ಕೊಟ್ಟ ತಾಯಿಗೆ ಕೊಂದಿ ನೀನು ಕುಲಗೇಡಿ
ಮುಂದೆ ನನಗೂ ಕೊಂದಿ ನೀನು ಮೋಸಮಾಡಿ
ಇ || ಲಗ್ನ ಆಗೂದಿಲ್ಲ ನಿನಗೆ ನಾನು ದಯಮಾಡಿ
ತಾಯಿ ಸೇವೆಗೆ ಮಾಡುವವನಿಗೆ ಆಗತೇನಿ ಜೋಡಿ || ೮ ||

ಶಾಹೀರಗ ಕೇಳತೇನಿ ಪ್ರಶ್ನೆ ಮಾಡಿ
ಕಲ್ಮಾ ಎಷ್ಟು ಒಟ್ಟಿಗೆ ಹೇಳೋ ಕುರಾನ್ ನೋಡಿ
ಏರು || ಕವಲೂರು ಇರುವದು ಮುಂಡರಗೀ ಕಡಿ
ಅಲ್ಲೇ ಇರತಾರೋ ಗೌಸು ಜಂದಿಪೀರಾ ಜೋಡಿ
ಇ || ಹಾಡುವರೊ ಕುರಾನ್‌ದೊಳಗಿನ ಮಾಹಿತಿ ನೋಡಿ
ಕುಂತ ನಿಂತ ಜನರಿಗೆ ಶರಣು ಮಾಡಿ
ಬಯ್ಯಾನ ಹೇಳತೇವಿ ಕುರಾನ್ ನೋಡಿ || ೯ ||

* * *

## ೧೧. ಆ ಪುರುಷ ಎಷ್ಟು ವರುಷ ಸಮುದ್ರದಲ್ಲಿ ಇದ್ದ ಖಾಸ?

ಸಭಾಸುಂದ್ರ ದೇವಿಂದ್ರ | ಕುಂತೀರಿ ಏಕಂದ್ರ
ಗಿರಿವಾಸ ಶ್ಯಾಮಂದರ ಚಂದ್ರಸೇಲಾ || ಪಲ್ಲವಿ ||

ಏರು || ಇದ್ದ ಸುದ್ದ ನುಡಿಯೆ ನಾನು | ಬುದ್ದಿವಂತ ಗೆದ್ದ ಕಾಂಬುವೆನು
ಶ್ರೀ ಶ್ರಿಂಗಾರ ಸರಸುವೆನೊ | ಮಂದರ ಗಿರಿಧರನು | ವಿದ್ವಾಂಸ ಇತಿಹಾಸ
ಸರಸ ಹೇಳುವೆ ಹರುಷಾದ ವದನೆ | ಉಲ್ಲಾಸ ಸಾಗರನೆ
ಎಷ್ಟಂತ ನಾ ದೃಷ್ಟಾಂತ ನೋಡಲಿ ಕಷ್ಟ ಪಡುವನೆ
ನೀ ಸೃಷ್ಟಿಕರ್ತನೆ ಕಾಮಸ್ರೆಗಳಂಬು ಪ್ರೇಮ ಭಜಿಸುವೆ ನಾಮಧರನೆ
ನೀ ನಂದಿ ವಾಹನನೆ ಶ್ರೀಧರ ಅವತಾರ ಕರತಾರ ||
ನಿರಂಕಾರ ನಿರ್ಗುಣ ನಿರಾಧಾರ | ಸಂಬರಗುಣ ಅಂಬುರ ಭರಿತಾರ ಸಂಬಲೀಲಾ || ೧ ||

ಶ್ರೀವಾನ ಬಯ್ಯಾನ ಕೇಳರಿ ಇಟ್ಟಧ್ಯಾನಾ
ಶರಣ ಸುಲೇಮಾನರು ಶ್ರೀ ಸಕಲಾ ||
ಏರು || ಸುಂದ್ರಸದರ ಸಿಂಹಾಸನಾ | ಹೊಳುತಿತ್ತು ಚಂದ್ರನ ಕಿರಣಾ
ಸುತ್ತಮುತ್ತ ಮಾಣಿಕ ಹೊನ್ನಾ | ತುಂಬಿ ಜಡದಾಂಗ ಜರಬೀಲೆ ಹರುಣಾ
ಭೂ ಪ್ರಾಂತ ಸೊಂತ ಕುಂತ ತಿರುಗುವರೊ ಸಿಂಹಾಸನದ ಮ್ಯಾಲೆ
ಸುಲೇಮಾನ ಭಕ್ತೀಲೆ ರಂಬೇರ ನಾಗನ್ಯರ ನಿಂತಾರ ಇದರಿಗೆ
ಚವುರಿ ಹಾರಸುತಲೆ ಶ್ರಿಂಗಾರ ಪ್ರೀತೀಲೆ
ಸರಸ ಸಿಂಹವಾಸ | ಹರುಷ ಕೊಡೋ ಜಗದೀಶ ಜರಬೀಲೆ
ಜ್ಯೋತಿ ಜನ್ಮಯಾನಲ್ಲೆ ಶ್ರೀ ಗ್ನ್ಯಾನ ಸುಲೇಮಾನ ಶರಣಾ
ಒಂದಾನ ಒಂದಿನಾ ಮಾಡುತ್ತ ಶಿವನ ಧ್ಯಾನಾ ಕುಂತಾರಲ್ಲಾ || ೨ ||

ಶಿವನ ಅಪ್ಪಣೆಯಲಿಂದಾ ಜಿಬರಾಯಿಲ ಇಳಿದು ಬಂದ ತತ್ಕಾಲಾ
ಶರಣರ ಮುಂದ ತಿಳಿಸ್ಯಾರಲ್ಲಾ ||
ಏರು || ಹೋಗಬೇಕರಿ ಸಮುದ್ರ ಸವಾರಿ | ಚಮತ್ಕಾರ ಪೃಥ್ವಿಮೀರಿ
ಸುಲೇಮಾನನ ನೀವು ಕಂಡೀರಿ | ಕಂಡ ಭೂಪ ಹೈಪ ಆದಿರಿ
ಇಷ್ಟು ಕೇಳಿ ಶ್ರೇಷ್ಟ ಪಟ್ಟ ಸಿಂಹಾಸನ ಹೊಂಟಿತ ಅದಾಗ
ಸುತ್ತ ಮುತ್ತ ರಂಬೇರು | ಸಿಂಹಾಸನ ಮೇಲೆ ಪಕ್ಷಿ ನೆರಳು ಬಿದ್ದೀತ ಸದರಾ
ದೆವ್ವ ಬೂತ ನಾಗನ್ಯಾರು | ನಾ ಮಿಕ್ಕಿ ಕೇಳುವೆ ಲೆಕ್ಕ ಹೇಳೋ ದಿಕ್ಕ ದಿಗಂಬರಾ
ಒಡದ ಹೇಳೋ ಶಾಯಿರಾ | ಹಂಜಿ ಪುಟ್ಟಿ ಮಾಡಿಕೊಂಡ ಹೊಟ್ಟೆ
ಸೃಷ್ಟಿಯೊಳಗ ಬಂದಿಯೋ ಹುಟ್ಟಿ | ಕಡಿಗೆ ನೀ ಹೊರಾಂವಾ ಬಿಟ್ಟಿ ಪಲಿಹುಲ್ಲಾ || ೩ ||

ಸಮುದ್ರಕ ಮುಟ್ಯಾರೋ ಹೋಗಿ ನೋಡ್ಯಾರ ಸುತ್ತಮುತ್ತ ತಿರಗಿ
ಚಮತ್ಕಾರ ಪೃಥ್ವಿಬೇಗಿ ಕಾಣಲಿಲ್ಲಾ ||
ಏರು || ಬಹಳ ಚಿಂತಿ ಬ್ರಾಂತಿಗೆಟ್ಟಾ ಸುಲೇಮಾನ ಕುಂತ ಅಂತಾರಶ್ರೇಷ್ಠಾ

ಶ್ರೀಸಾಂಬ ನೀಲಕಂಠಾ | ಎಲ್ಲೆ ಕಾಣವಲ್ಲದು ಭೂಮಿ ಆಟಾ
ಶ್ರೀ ಸಂಬಾ ನುಡದ ತುಂಬಿ ಅಂಬುರನೆ ಬೋನಿ ಭಗತಾ
ಸುಲೇಮಾನ ಶ್ರೀಮಂತಾ | ಸಮುದ್ರತಳಾ ಮುಟ್ಟಿ ಪಾತಾಳ ನೋಡಿದರಾ ಅಂತಾ
ನಿಮಗ ಆಗೂದು ಗೊತ್ತಾ | ಸುಲೇಮಾನ ಶರಣರು ಕರದಾರ
ಒತ್ತರಲೆ ಬಂದಾವ ದೆವ್ವಭೂತಾ | ಈಗ ಹೋಗಿ ನೀವು ತುರ್ತಾ
ಸಮುದ್ರದೊಳಗ ಮುಣುಗಿ ತಡ ಮಾಡದೆ ಬರಬೇಕ ತಿರುಗಿ
ಏನಾರ ತರಬೇಕ ಹೋಗಿ ತತ್ಕಾಲಾ || ೪ ||

ದೆವ್ವಜಾತ ಸಮುದ್ದರದಲ್ಲಿ | ಮುಣಗ್ಯಾರೋ ಆ ಕ್ಷಣದಲ್ಲಿ
ಹತ್ತಿಲ್ಲ ನೆಲಿ ಖಾಲಿಕೈಲೆ | ಬಂದಾರೋ ಮ್ಯಾಲಾ
ಏರು || ಕಂಡ ಸುಲೇಮಾನ ಶರಣಾ | ಸುಂದಾಗಿ ನಿಂತಾಕ್ಷಣಾ
ಚಿಂತಿಯೊಳು ಕುಂತ ಕರುಣಾ ಬ್ರಾಂತಿಗೆಟ್ಟೇತ್ರಿ ಹರಣಾ
ಎಷ್ಟನೆಂಬಲಿನಾ ಸಂಬಾ ನಿನಗ | ಅಂಬುಜವದನೆ
ನೀ ನಂದಿವಾಹನನೆ | ನಿನ್ನ ಆಟಾ ನೀನೇ ಬಲ್ಲಿಯಲ್ಲ
ನೆಲಿ ನಿರ್ಗುಣನೆ | ಹತ್ತಿಲ್ಲೊ ಸಾಗರನೆ | ಮಂದರ ಗಿರಿಧರ ಸುಂದರ ನೀ
ಚಂದ್ರಶೇಖರನೆ | ನಾ ಇಂದ ಕಾಂಬುವನೆ
ಸಾಂಬನ ಕರುಣದಿಂದ | ಆಕಾಶವಾಣಿ ನುಡಿತ ಛಂದ
ಸಮುದ್ರ ಪಾತಾಳದಲಿಂದ | ನೋಡರಿ ಮೊದಲಾ || ೫ ||

ಉಲ್ಲಾಸ ಶರಣರು ಆಗಿ ತಿಳಿಸ್ಯಾರೋ ಪ್ರಧಾನಿಗೆ
ಸಮುದ್ರದಲ್ಲೇ ಮುಣಗೀ ತರಬೇಕ ಮ್ಯಾಲಾ
ಏರು || ಧೀರ ಗಂಭೀರ ಬೀರಬಲ್ಲಾ | ಪಾತಾಳಕ ಮುಟ್ಯಾರಲ್ಲಾ
ಕಪ್ಪರ ಗುಮಜ ಮಿಗಿಲಾ | ಎತ್ತಿಕೊಂಡ ತಂದಾರ ಮ್ಯಾಲಾ
ನಾಲ್ಕು ದಿಕ್ಕಿಗೆ ನಾಲ್ಕು ಬಾಗಿಲಾ | ಬೆಳಕು ಹೊಳೆವುದಾ
ಮುತ್ತು ಮಾಣಿಕ ಜಡದಾ | ಬೆಳ್ಳಿ ಬಂಗಾರ ಬೆಳ್ಳಿಕಟ್ಟಿ
ತಿಳಿವಾಳಿ ಜಗದಾ | ರತ್ನದಲ್ಲೇ ಬೆರಸಿದಾ
ಹಿರೇಕನ್ನಿ ಪಟ್ಟದರಾಣಿ | ತಾ ಉಣ್ಣು ಮನಿ ಅಳದಾ
ಸಲೇಮಾನ ನೋಡಿದಾ | ಒಂದ ಹನಿ ನೀರ ಇಲ್ಲಾ ||
ಗುಮಜಿನ್ಯಾಗ ಪುರುಷ ಇದ್ದಾ | ನಿಂತ ನಮಾಜ ಮಾಡತಿದ್ದಾ ಶಿವಲೀಲಾ || ೬ ||

ಸುಲೇಮಾನ ಶರಣರು ಭೂಪಾ | ಕಂಡ ಆಗ್ಯಾರ ಹೈಪಾ
ಆ ಪುರುಷಗ ಕೇಳ್ಯಾರ ಸೊಲ್ಪಾ | ಆಗಿ ಶಾಮೀಲಾ
ಏರು || ಖರೇಮಾತ ತಿಳಿಸಬೇಕ | ಇಡಬಾರದು ಏನೇನು ಫರಕ
ಚೈನ ಇಲ್ಲ ನನ್ನ ಮನಕ | ನಿನ್ನ ಕಂಡಿದಾಕ್ಷಣಕ
ಸಮುದ್ರ ಪಾತಾಳದಲ್ಲಿ ಇರುವುದು ಏನ ಕಾರಣಾ
ಒಡದ ಹೇಳೋ ನೀನನ್ನಾ | ಆ ಪುರುಷ ಕೈಯ ಮುಗದ ಅಂದಾಕೇಳರಿ ಶರಣಾ
ಪ್ರೀತಿಯಲಿಂದ ತಂದೆ ತಾಯಿಯದು ಸೇವಾ ಮಾಡಿದಕ ನಾ

ಮೆಚ್ಯಾನಾ ಭಗವಾನಾ | ನನ್ನ ಮ್ಯಾಲೆ ಅಂತಕರುಣಾ
ಇದ್ದಲ್ಲೆ ಸಂಪೂರ್ಣ ಇದ್ದೇನಿ ಇಲ್ಲೆನಾ ಖುಷಿಯಾಲಾ || ೭ ||

ಸುಲೇಮಾನ ಶರಣರು ಬೆರೆತ | ಕೇಳತಾರ ಮತ್ತಪರತ
ಗುರುತ ಹಿಡಿಯೋ ಶಾಹಿರಾ ತುರತಾ | ಕಲಿ ಅಕಲಾ
ಏರು || ಸಮುದ್ರದಲ್ಲೆ ಇದ್ದಿ | ಹಸುವು ಆದರ ಏನ ತಿಂತಿದ್ದಿ
ನಿದ್ದಿ ಹ್ಯಾಂಗ ಮಾಡತಿದ್ದಿ | ಇಷ್ಟೆಲ್ಲಾ ತಿಳಿಸೋ ಬುದ್ದಿ
ಆ ಪುರುಷ ಅಂದಾ | ಪಕ್ಷಿ ಒಂದ | ಪದಾರ್ಥ ಸುಮ್ಮಾ | ತಂದು ಕೊಡುವದು ನೇಮಾ
ದರದಿವಸ ಕಳಿಸಿಕೊಡುವಾ ಹೀಂಗ ಆ ಹರಿಬ್ರಹ್ಮಾ | ಏನ ಇದ್ದಿಲ್ಲಾ ಕಮ್ಮಾ
ನಾ ಆ ಪದಾರ್ಥ ತಿಂದ ಸುಖಾ | ಪಡತಿದ್ದೆ ಜಲ್ಮಾ | ಕೇಳಿ ಬಿತ್ತರಿ ಗುಮ್ಮಾ
ಇರತಿದ್ದೆ ನೋಡರಿ ಗುಮಜಾ | ಇದರೊಳಗೆ ಮಾಡತಿದ್ದೆ ರಮಜಾ
ಯಾರ್ಯಾರದು ಇದ್ದಿಲ್ಲಾ ದರಜಾ | ತಿಳಿಸ್ಯಾನ ಖುಲ್ಲಾ || ೮ ||

ಇದರಂತೆ ತಿಳಿ ಶಾಹೀರಾ ಒಡದ ಹೇಳೋ ಪಕ್ಷಿಯ ಹೆಸರಾ
ಹಾಕಬ್ಯಾಡೋ ಕುಂತ ಉಸರಾ | ಮುರದೇನೋ ಹಲ್ಲಾ
ಏರು || ಆ ಪುರುಷ ಎಷ್ಟು ವರುಷ ಸಮುದ್ರದಲ್ಲೆ ಇದ್ದ ಖಾಸ
ಎಷ್ಟಿತ್ತು ಅವನ ವಯಸ್ಸ ಹೇಳೋ ಆಗ ಬ್ಯಾಡೊ ನಪಾಸ
ಈ ಸವಾಲ ನಿನಮ್ಯಾಲೆ ಹಾಕಿ ವರುಷ ಆದ್ವು ನಾಲಕ
ತಿಳಿಸವಲ್ಲಿ ಇನ್ನೂ ತನಕ | ಶ್ಯಾರ ಬಾಗಲಕೋಟ್ಯಾಗ | ಮ್ಯಾಗಿನ ಓಣ್ಯಾಗ
ಮೋಜ ಬಹುಲಕ್ಕ | ಆಗೂದು ದರವರುಷಕ್ಕ
ಮಲ್ಲೇಕಲ್ಲ ಹುಸೇನ ಪೀರ ಜಾಹೀರಾ | ಆಗ್ಯಾರ ಮರತೇಕ
ಸುತ್ತೆಲ್ಲಾ ದೇಶಕ ಹುಸೇನಮಿಯ್ಯಾ ಇದ್ದಾರ ಮಿಕ್ಕಿ
ವೈರಿ ಮುಕಳಾಗ ತುರಕ್ಯಾರ ಗಣಕಿ
ಬಿಡತಾನ ಕಣ್ಣ ಪಿಕಿವಿಕಿ | ಸಿಕ್ಕಿ ಉಸಲಾ || ೯ ||

* * *

## ೯೯. ಬೀಜ ಮೊದಲೋ ಗಿಡಾ ಮೊದಲೋ ?

ಸರ್ವ ಜನರೆಲ್ಲಾ ಭಕ್ತಿಲಿಂದ ಕೂಡ್ಯೆತಿ ಹೆಜ್ಜಿ ಮಜಲಾ
ಒಂದ ಗಿಡಾ ಬಂದೀತಲ್ಲಾ ಆಕಾಸದಿಂದ ಧರಣಿಮೇಲಾ
ಎಂಬತ್ನಾಲ್ಕು ಲಕ್ಷ ಜೀವರಾಶಿಗಳೆಲ್ಲಾ ಜನಕಿದು ಸುಳ್ಳೇನಲ್ಲಾ
ಗಿಡಾ ಮೊದಲು ಹುಟ್ಟೇ ಇಲ್ಲಾ ಬೀಜಿಲ್ಲದ ಗಿಡಾ ಹ್ಯಾಂಗ ಬಂತರಿ ಮೊದಲಾ
ಕೋಳಿ ಮೊದಲೋ ತತ್ತಿ ಮೊದಲೋ ಬೀಜ ಮೊದಲೋ ಗಿಡಾ ಮೊದಲೋ
ಇದು ನಿನಗ ಗೊತ್ತ ಇಲ್ಲಾ ಜನಕಿದು ಸುಳ್ಳೇನಲ್ಲಾ
ಮಿಂಚು ಗುಡುಗು ಮೋಡ ಎಲ್ಲಾ ಮಿಂಚು ಮೊದಲು ಸದ್ದ ಆಗ್ಯೆತಿ ನೀರ ಎಲ್ಲಾ
ಮೇಘರಾಜ ಹೆಣ್ಣುಗಂಡು ಹೇಳ ಮೊದಲಾ ಹೆಣ್ಣಿಗಿಂತ ಗಂಡು ಮೇಲೆ

ಗಂಡು ಅಂತ ಕರಿತಾರಲ್ಲಾ ಆಕಾಶ ಅಂತಾರಿ ಮೊದಲಾ
ಮೋಡಿಲ್ಲದ ಆಕಾಶ ನಿಂತೇ ಇಲ್ಲಾ ಸೂರ್ಯಚಂದ್ರ ಜೋಡಿ ಮೊದಲಾ
ತಿರಗತಾರ್ರಿ ರಾತ್ರಿ ಹಗಲಾ ಜನಕಿದು ಸುಳ್ಳೇನಲ್ಲಾ
ಇದು ನಿನಗ ಗೊತ್ತ ಇಲ್ಲಾ ಉತ್ತರ ಹೇಳದೆ ಬಿಡೂದಿಲ್ಲಾ
ತಾಯಿ ತಂದಿ ಹೆಸರ ಇಲ್ಲಾ ಹಣ್ಣು ಕಾಯಿ ಹೂಕಾ ಆಗೈತಿ  ಮೊದಲಾ
ಚಿತ್ತಗೊಟ್ಟು ಕೇಳೋ ಮೊದಲಾ ಹೇಳಿದಂತೆ ಮಾಡು ಮೊದಲಾ
ಮುದ್ದತ್ತು ಕೊಡತೇನಿ ಮೂರು ವರ್ಷ ಮೂರು ದಿವಸದ ಮೇಲಾ ||

## ೧೦೦. ಸವಾಲು ಬಂತೊ ನಿನ್ನ ಮ್ಯಾಲಾ

ಬಾ ಬಾರೋ ನನ್ನ ಗೆಳೆಯಾ ಸವಾಲು ಬಂತೋ ನಿನ್ನ ಮ್ಯಾಲಾ
ಹಲ್ಲಿಯ ಶಕುನ ಕೇಳಿ ಬಾರೋ ಧೈರ್ಯ ಇದ್ದರ ನಿನ್ನಲ್ಲಿ
ಬಡ್ಡಿ ನೋಡು ತೇಗಿಂದಾ ಎಲಿಯ ನೋಡ ಮಾವಿಂದಾ
ಹೂವು ಮಲ್ಲಿಗಿ ಕಾಯಿ ಪ್ಯಾರಲ ಒಡದ ಹೇಳ ಒಂದ ಒಂದಾ
ಬಗ್ಗಿ ಬಗ್ಗಿ ನೋಡತಾಳೋ ಲಮಾಣಿ ಕೊರಳಾಗ ಕಟ್ಯಾಳೋ ಕರಿಮಣಿ
ಉಡಿಯಾಗ ಇಟ್ಟಾಳೋ ಉತ್ತರಾಣಿ ಬಗಲಿಗೆ ಹಾಕ್ಯಾಳೋ ತತ್ತರಾಣಿ
ಕಾಗಿ ಮುಟ್ಟSದ ಕಂಡಿSದು ನಾಯಿ ಮುಟ್ಟದ ಎಲುಬಿSದು
ಕೆಲಸಕ್ಕೆ ಬಾರದ ಚರಮಿದು ಒಡದ ಹೇಳೋ ಒಂದ ಒಂದಾ
ಊರ ಮುಂದಿನ ತೋಟಿದು ನೋಡಾಕ ಬಲು ಚಂದಾ
ಸಾವಿರಾರು ಪಕ್ಷಿಗಳು ಮನಿಮಾಡ್ಯಾವ ಬಂದ ಬಂದಾ ||

## ೧೦೧. ದೃಷ್ಟದುಮ್ಮಗ ಟಗರಿನ ತಲಿಯಾಕ

ಯಾಕೋ ತಮ್ಮಾ ಯಾವೂರಾಂವ ಬಾರೋ ಮುಂದಕ
ಬಾರೋ ಮುಂದಕ ನನಗ ನಿನಗ ಬಿದ್ದೈತಿ ಬೆಳತನಕ
ದೃಷ್ಟದುಮ್ಮಗ ಟಗರಿನ ತಲಿಯಾಕ ಹೇಳಿ ಹೋಗಬೇಕ
ಹೇಳಿ ಹೋಗಬೇಕ ಇಲ್ಲದಿದ್ದರೆ ಬಿಡಾಕ ಇಲ್ಲ ನಾವು ಕೆಡಕ

## ೧೦೨. ಶಾಸ್ತ್ರ ಸುಳ್ಳೇನಲ್ಲಾ

ಪಹೆಲೆ ಪ್ರಥಮ ಕದನ ಇದ್ದಿದ್ದಿಲ್ಲಾ
ನಿನ್ನೆ ಮೊನ್ನಿನ ಸುದ್ದಿ ನನಮುಂದ ಹೇಳಬ್ಯಾಡ ನಿಂತು ಹಗಲೆಲ್ಲಾ
ಸಮುದ್ರದ ದಂಡೀಲೆ ಬಂತೋ ಒಂದು ಕಲ್ಲಾ
ಕಲ್ಲು ಒಡೆದು ಆವಾಗ ನೋಡ್ಯಾರಲ್ಲಾ ಹುಲಿಯು ಸೇರೇತಲ್ಲಾ
ಕಲ್ಲಿನ ಮ್ಯಾಲೆ ಬೇವಿನ ಮರ ಹುಟ್ಟೇತಲ್ಲಾ
ಎಲಿಮ್ಯಾಲೆ ಕಿಲೇವೊಂದು ಕಟ್ಟೇತಲ್ಲಾ ಶಾಸ್ತ್ರ ಸುಳ್ಳೇನಲ್ಲಾ

ಕೀಲಿ ಹಾಕಿ ಬಿಗದೇವಿ ತಮ್ಮಾ ತಗ್ಯಾಂಗಿಲ್ಲಾ
ತಗಿಯದಿದ್ದರ ಗೆಳೆಯ ನಿನ್ನ ಬಿಡೂದಿಲ್ಲಾ ಉತ್ತರ ಕೊಡಬೇಕಲ್ಲಾ
ಶಾಣ್ಯಾನಂತಾರ ತಮ್ಮಾ ನಿನಗ ಓಣ್ಯಾಗೆಲ್ಲಾ
ಮಂದಿಮುಂದ ಮಾಡತೀದಿ ಒಣಡೌಲಾ ನಿನ್ನ ಕೇಳಾವರಿಲ್ಲಾ
ಬಂಡಿವಾಡ ಊರ ನೋಡ ರಂಗಿಲಾಲಾ
ಗುಡಿ ಓಣಿ ಹುಡುಗರು ಹಾಡ್ಯಾರಲ್ಲಾ ಕೇಳರಿ ಜನರೆಲ್ಲಾ ||

## ೧೦೩. ಒಡದ ಹೇಳರಿ

ಸತ್ಯದೊಂದ ಮಾತ ನಿನಗ ಹೇಳತೇನಿ ಕುಂತ ಸಭಾದೊಳಗ
ಚಂಡವಿಲ್ಲದ ಮುಂಡ ತಿರಗತೈತಿ ಹುಬ್ಬಳ್ಳಿ ಪ್ಯಾಟ್ಯಾಗ
ಜೀವ ಅದಕ ಇಲ್ಲ ಬಾಲ ಅದಕ ಇಲ್ಲ ಕೊಂಬೆರಡು ಕೊರಳಾಗ
ಕಣ್ಣುಗುಡ್ಡಿ ಕಾಣಸತಾವ ಮೂರು ಎದಿಯಮ್ಯಾಗ
ಆಸತ್ತ ಬ್ಯಾಸತ್ತ ಜಳಕ ಮಾಡತೈತಿ ದೊಡ್ಡ ಮಡವಿನೊಳಗ
ಜಳಕ ಮಾಡಿ ಅದು ಹೋಗಿ ಮುಲಗತೈತಿ ರಣರಂಗ ಬೈಲಾಗ
ಇದನ ಒಡದು ನೀವು ಹೇಳದಿದ್ದರ ಹಲಗಿ ಇಡರಿ ಕೆಳಗ
ಬಳಿಯ  ಇಡಿಸಿ ಸೀರಿ ಉಡಿಸಿ ಕಳಸತೇವಿ ನಿಮಗ ||

## ೧೦೪. ಒಂಟಿ ಕೊಳ್ಳಾಗ ಗಂಟಿ ಕಟ್ಟಿದವನಾರು ?

ಸವಾಲ ಹಾಕತೀದಿ ಹಾಳರಟಿ ನಿಮಗೇನ ತಿಳುವತೈತಿ ಮುಳಬುಟ್ಟಿ
ಮಾತನಾಡತಿದಿ ಉಪರಾಟಿ ನಮ್ಮ ಜಪಟ್ಯಾಗ ಸಿಕ್ಕು ನೀ ಬಾಯಿ ಬಿಟ್ಟೆ
ಶಿವಾತಂದ ಬೆಟ್ಟಿ ನಿಮ್ಮ ಬೆಟ್ಟಿ ಮುಂದಿನ ಎಚ್ಚರ ನೀ ಬಿಟ್ಟಿ
ನಮ್ಮ ಬಲಿಯೊಳಗ ಹೋಗಲೇ ದಾಟಿ ನಿಮ್ಮ ಮನಿಯ ಮುಂದ ಗಿಡಹುಟ್ಟಿ
ಗಿಡದ ಮೇಲೆ ನಿಂತಿತೋ ಒಂಟಿ ಒಂಟಿಯ ತಲಿಮೇಲೆ ಗಿಡಹುಟ್ಟಿ
ಆ ಗಿಡದ ಮೇಲೆ ಹುಲಿ ಮನಿಕಟ್ಟಿ ಹನ್ನೆರಡು ಗಾವಿಲ ಕಿಲೆಕಟ್ಟಿ
ಆ ಕಿಲ್ಲೇದವೊಳಗ ಹೊಂಟಿತೋ ಬ್ಯಾಟಿ ಬ್ಯಾಟಿಯ ಹೊಟ್ಟೀಲೆ ಮರಿಹುಟ್ಟಿ
ಅರವತ್ತು ಲಕ್ಷ ಆಗ್ಯಾವ ಒಂಟಿ ಆ ಒಂಟಿಯ ಕೊರಳಾಗ ಒಂದೊಂದು ಗಂಟಿ
ಯಾವ ಕಟ್ಟಿ ಬಿಟ್ಟಾನೋ ನೀ ಹೇಳೋ ಘಟ್ಟಿ ಬಂದಾರೋ ಮೂರು ಲೋಕವ ದಾಟಿ
ಆಕಾಶಕ ಕೇಳೀತು ಸಪ್ಪಳ ಹುಟ್ಟಿ ಹಾರಿಹೋತೋ ನಿನ್ನ ಗುಳಬುಟ್ಟಿ
ನಮ್ಮ ಜಪಾಟ್ಯಾಗ ಸಿಕ್ಕು ಬಾಯ್ಬಿಟ್ಟಿ ಸವದತ್ತಿ ಊರ ಕಿಲೇ ಕಟ್ಟಿ
ಗುರು ಹುಸೇನಿ ನಮ್ಮ ಭೆಟ್ಟಿ ಹಾರಿಹೋತೋ ನಿನ್ನ ಗುಳಬುಟ್ಟಿ ||

## ೧೦೫. ಏಳೋ ಗೆಳಿಯಾ ಎಷ್ಟೊತ್ತ ಮಲಗಿದಿ

ಏಳೋ ಗೆಳಿಯಾ ಎಷ್ಟೊತ್ತ ಮಲಗಿದಿ ಬಳ್ಳಿಗಿಡಾ ಬಂದು ಹೊತ್ತಾತ
ಬಳ್ಳಿ ಗಿಡಾ ಬಂದು ಹೊತ್ತಾತ ಹುಡುಗರು ಬಂದು ಬಾಳ ಹೊತ್ತಾತ
ಮನಿಗಿ ಹೋಗಿ ತಾಯಿ ಕೇಳತಾನ ಗೆಜ್ಜಿಸರಾ ನಂದೆಲ್ಲೈತೆ
ಗೆಜ್ಜಿಸರಾ ನಂದೆಲ್ಲೈತೆ ದೇವರ ಕೂಲಿ ಮೂಲ್ಯಾಗೈತೆ
ದೇವರ ಕೋಲಿ ಮೂಲ್ಯಾಗ ಹುಡುಕುದರಾಗ ಗೆಜ್ಜಿಸರದ ಮ್ಯಾಲ ಸರಪಿತ್ತ
ಗೆಜ್ಜಿಸರದ ಮ್ಯಾಲ ಸರಪಿತ್ತ ಹುಡುಗನ ಕಿರಬಳ್ಳ ಕಚ್ಚಿತ್ತS
ಕತ್ತಲರಾತ್ರಿ ಮರುದಿನ ಮುಂಜಾನೆ ಮಣ್ಣಿಗೆ ತಯ್ಯಾರ ಆಗಿತ್ತS
ಮಣ್ಣಿಗೆ ತಯ್ಯಾರ ಆಗಿತ್ತ ಮಂದಿ ಬಳಗ ಬಹಳ ಕೂಡಿತ್ತS ||

## ೧೦೬. ಉತ್ತರ ಹೇಳಬಾರೋ

ಮೂರು ಕಾಲಿನ ಕುದುರಿಗೊಂದು ಜೀನವ ಬಿಗಿದೈತೋ
ತೊಡಿಮ್ಯಾಲ ಕಸೂತಿ ಆಲದ ಮರವೊಂದು ಬೆಳದೈತೋ
ಆಲದ ಮರದಾಗ ಪಕ್ಷಿ ಗೂಡವ ಕಟ್ಟೈತೋ
ಗೂಡಿನೊಳಗ ಪಕ್ಷಿಯು ಮರಿಯ ಮಾಡೈತಿ
ಪಕ್ಷಿಗೊಂದು ಸರ್ಪವ ಕಚ್ಚೈತೋ
ಪಕ್ಷಿಯ ಕಣ್ಣೀರಾ ಸಾತ ಸಮುದ್ರಾಗಿ ಹರದೈತೋ
ಸಮುದ್ರದೊಳಗ ಹೆಣ್ಣುಗಂಡು ಮೀನೈತೋ
ಮೀನದ ಡುಬ್ಬದ ಮ್ಯಾಗ ನೀರಿನ ಹಂಸವ ಗಟ್ಟೈತೋ
ಹಂಸಿನೊಳಗ ಹುಲ್ಲುಕಡ್ಡಿ ಬೆಳದೈತೋ
ಹುಲ್ಲುಕಡ್ಯಾಗ ದಂಡು ಬಂದು ಇಳದೈತೋ
ದಂಡಿನೊಳಗ ಒಂದು ಆನಿ ನಿಂತೈತೋ
ಆನಿಯ ಹೊಟ್ಯಾಗ ಬುವಿಕಲ್ಲು ಬೆಳದೈತೋ
ಇದರ ಉತ್ತರ ಹೇಳಬಾರೋ ಶಾಹೀರಾ
ಹೇಳದಿದ್ದರ ಗೆಜ್ಜಿಯ ಬಿಚ್ಚೂದು ಕರಾರಾ ||

## ೧೦೭. ಟೊಂಗಿಗೆಷ್ಟು ಕಾಯಿ ಆಗತೈತಿ

ಪಹೆಲಿ ಪ್ರಥಮ ಬಳ್ಳಿ ಹೆಸರು ಹೇಳಬೇಕಲ್ಲಾ
ಹೇಳಬೇಕೋ ತಮ್ಮಾ ನಿನಗ ನಿರ್ವಾಯಿಲ್ಲಾ
ಐದು ಹೂವು ಅದು ಆಗತಿತ್ತಲ್ಲಾ
ಕಾಯಿ ಅದು ಎರಡು ಕೊಡತಿತ್ತಲ್ಲಾ ಬಳ್ಳಿ ಇದ್ದಿದಿಲ್ಲಾ
ಭೂಮಿ ಮ್ಯಾಲೆ ಗಿಡ ಒಂದು ಹುಟ್ಟೇತಲ್ಲಾ

ಹನ್ನೆರಡು ಟೊಂಗಿ ಅದು ಬಿಟ್ಟೇತಲ್ಲಾ ಶಾಸ್ತ್ರ ಸುಳ್ಳೇನಲ್ಲಾ
ಟೊಂಗಿಗೆಷ್ಟು ಕಾಯಿ ಆಗತೈತಿ ಹೇಳಬೇಕಲ್ಲಾ
ಎಲಿ ಎಷ್ಟು ಆಗತಾವ ಹೇಳಬೇಕಲ್ಲಾ ನಿಮ್ಮನ್ನು ಬಿಟ್ಟಾವರಲ್ಲಾ
ಮೂಗಿನ್ಯಾಗ ಬುಲಾಕ ಇಡತೇವಲ್ಲಾ ಇಟಗೊಂಡು ಹೋಗಬೇಕಲ್ಲಾ ||

## ೧೦೮. ಜವಾಬು ಪದಾ

ದಿನಾ ಲೆಕ್ಕಾ ಹಾಕಿ ಲೆಕ್ಕಿಲ್ಲದ ಬ್ಯಾನಿ ತಿಂದು
ಮುಪ್ಪಾನ ಮುದಿಕೊಂದ ಹಡದಿತ್ತ
ಗರಗುಡಿಸಿ ನೆಲಕುರುಳಿ ಬಿದ್ದಿತ್ತ
ಇದನೆಲ್ಲ ನೋಡಿ ನೆರೆಮನಿ ಮುದುಕ
ಓಡಿ ಬಂದು ನಾಡಾ ಹಿಡಿದಿತ್ತ
ಹೆಣ್ಣಲ್ಲ ಗಂಡಲ್ಲ ಅಂತಿತ್ತ
ಹುಟ್ಟಿದ ಕೂಡಲೆ ಕಿವಿಯಲಿ ಊದುವಾಗ
ಜೋಗುಳ ನಾದ ತುಂಬಿತ್ತ ಶಿವಾ ಶಿವಾ ಅಂತ ನುಡಿದಿತ್ತ ||

## ೧೦೯. ಸವಾಲು ಹಿಡಿಯೋ ಗಿಳಿ

ಗೋರಖನಾಥನ ಬಲಿ ಕಟ್ಟಾನ ಹುಚ್ಚ ಪ್ಯಾಲಿ
ತಿಳಿದಿಲ್ಲ ಇದರ ನೆಲಿ ನಡುವಿನ ಮನಿ ಖಾಲಿ
ತಿಪ್ಪಿ ಕೆದರು ಕೋಳಿ ಸವಾಲು ಹಿಡಿಯೋ ಗಿಳಿ
ಪ್ಯಾಟ್ಯಾಗ ಸಿಕ್ಕಲೇ ಮಳ್ಳಿ ಬಿದ್ದಾವ ಹಗಲಿ ಹುಳ್ಳಿ
ಉಂಡ ಪತ್ರೋಳಿ ಎಲಿ ಕೊಳ್ಳಾಗ ಕಟ್ಟೇವಿ ತಾಳಿ
ಬಿಡವಲ್ಲಿ ನಿನ್ನ ಚಾಳಿ ಅಗಸ್ಯಾಗ ಹಿಡಿಸೇವಿ ಕಾಳಿ ||

## ೧೧೦. ನಾ ಅಂಬುವ ಅಕ್ಷರ ನಿನ್ನಲ್ಲಿ ನರಕ

ಸಲಾಮ ಬಂದಿತ್ರಿ ಸರ್ವ ದೈವಕ | ಗುಲ್ಲ ಮಾಡಬ್ಯಾಡ್ರಿ ಗುಲಗಂಜಿ ತೂಕ
ನಾ ಅಂಬುವ ಅಕ್ಷರ ನಿನ್ನಲ್ಲಿ ನರಕ | ಕೇಳೋ ಶಾಹೀರಾ ಮಾಡಬ್ಯಾಡೋ ತರಕ
ಜವಾಬು ತಗೋ ಹೀಂಗ ಕಡಿತನಕ ಶರಣರನ ನೆನಿಸಬೇಕೋ ಬೆಳತನಕ

## ೧೧೧. ಹುಡುಗನ ಹೆಸರು ಹೇಳೋ

ತಂಗಿ ನಾವು ತರೂನು ನಡಿ ಭಾವಿ ನೀರಾ ನೀರು ಬಾಳ ದೂರಾ
ಭುವಿಯ ಮ್ಯಾಲೆ ಕುಂತಾರೋ ಶರಣರಾ
ಅವರ ಮ್ಯಾಲೆ ಹೋತೋ ಬಾಲ್ಯಾರ ನೆದರಾ

ಬಾಲ್ಯಾರ ನೆದರಾ ಮನಸು ಒಡೆದು ಆದೀತೋ ಅವರು ಬಸರಾ
ಆ ಹುಡುಗನ ಹೆಸರು ಒಡದ ಹೇಳೋ ಚತುರಾ

## ೧೧೨. ಆರು ಗುಣಗಳೆಲ್ಲ ಗುರಿ ಹೂಡ

ಹೋಳಗಿ ಮಾಡ ತಂಗಿ ಹೋಳಗಿ ಮಾಡ ನಿನ್ನ ಬಾಳೇವ ಸುಡ
ಆರು ಗುಣಗಳೆಲ್ಲ ಗುರಿ ಹೂಡ ನಿಜದೊಳಗ ಆಡ
ಹೋಳಿಗಿ ಮಣಿ ಲತ್ತಿಗುಣಿ ಎತ್ತಿಹಾಕ ವಾಲಿ ಮಂದಕ ನೂಕ
ಚಪ್ಪರ ಪಲ್ಲಂಗ ಮೇಲೆ ಹಂಚಿಕಿ ಹಾಕ ಮಲ್ಲಿಗಿ ಹೂವಿನ ತೂಕ

# ಕರ್ಬಾಲಾ ಪದಗಳು

## ೧. ಮುಸ್ಲೀಮರು ಹುತಾತ್ಮರಾದ ಪದಾ

ದೈವ ಕೇಳರಿ ಸಣ್ಣ ದೊಡ್ಡವರು ಪುರಮಾಸಿ
ಇದು ಸಾಹಸ ಹೇಳುವೆ ಕಣ್ಣೀರ ಸುರಿಸಿ || ಪಲ್ಲವಿ ||

ಮಹಾ ಮುಸ್ಲೀಮನ ದುಃಖಾ ಕಂಡ ತ್ರಿತಯೋಗದಲಿತ್ತರಿ ಲೋಕ
ಚಿಂತಿಸುವರೋ ಮಾಡಿ ತಮ್ಮ ಮನಸಿನಂತೆ ಅತೀ ಶೋಕ
ನವಖಂಡ ಪಾತಾಳ ಸರ್ವ ಜಗತ್ತಕ್ಕೆಲ್ಲಾ ಇದ್ದಿಲ್ಲರಿ ಸುಖಾ
ಏರು || ಎಷ್ಟಂತ ಜನಕ ವರ್ಣಿಸಲಿ ದುಃಖಸಾಗರ ಮ್ಯಾಲಿಂದ ಮ್ಯಾಲೆ
ಮಾಯಾವಲ್ಲದೊ ಕೊರದಂತ ಕಲಿ | ಮುಂದ ತಿಳಿಸುವ ಜನಕ್ಕೆ ಅನುಸರಿಸಿ
ಮಗ ಮುಆವಿಯಾಂದ ತನ್ನ ಮನಕ ಸೋಸಿ | ಕಪಟದಕಿಲಿಂದ ಪತ್ತರ ಬರಿಸಿ || ೧ ||

ಹೊಂಟಾನೋ ಜಾಸೂದ ತಗೊಂಡ ಹಾರಿಸಿ
ಬರದ ಕೊಟ್ಟ ಕಾಗದ ಬಂದ ಮದೀನ ಶಾರಪಟ್ಟಣಕ ಮುಟ್ಟಿದಾ
ತಂದ ಮುಜರಿ ಮಾಡಿ ಹುಸೇನ ಸಾಹೇಬನ ಮುಂದ ಇಟ್ಟಿದ್ದ
ಅರಜ ಕಾಗದ ಹುಸೇನಸಾಹೇಬ ಓದಿ ಕರದ ಮುಸ್ಲೀಮಗ
ಕೊಟ್ಟಾರೊ ವರದಿ ತುರ್ತ ಕೂಫೇಕ ಹೋಗಬೇಕೋ ಜಲ್ದಿ
ಅಂದ ಮುಸ್ಲಿಂ ಶಿರಬಾಗಿಸಿ || ೨ ||

ಕಟ್ಯಾರೊ ಹತಿಯಾರಾ ನಡುವಿಗೇರಿಸಿ
ಕೊಟ್ಯಾರೋ ಹುಸೇನ ಸಾಹೇಬ ಚಲೋ ತೇಜಿ ತರಿಸಿ
ಮುಸ್ಲಿಂ ಸಾಹೇಬರು ಬಹಳ ಧೈರ್ಯವಾನಾ |
ಬಂದ ಮುಸ್ಲಿಂ ಸಾಹೇಬರ ಕೂಫೇದ ಜನ ಕಂಡರು

ಬಾಳ ಅಕ್ಕರತೀಲೆ ಮುಸ್ಲೀಮನಾ
ಅಂತಾರ ಮುಸ್ಲೀಮಗ ಕೈ ಜೋಡಿಸಿ || ೩ ||

ಮುಸ್ಲಿಂ ಸಾಹೇಬರು ಮಹಾ ಇಸ್ವಾಸಾ
ನಂಬಿದ ಕೂಪೇದ ಜನಕ ತರಲಿಲ್ಲ ಸಂಶೆ |
ನಮಾಜಿಗೆ ಶರಣರು ನಿಂತಾರೋ
ಸಂಗತೀಲೆ ಕರಕೊಂಡ ಎಲ್ಲ ಶಿಷ್ಯರಾ ||
ಒಟ್ಟ ಹಿಂಬಾಲಾ ಇದ್ದಾರೋ ಐನೂರಾ ||
ವ್ಯಾಳ್ಯಾ ಆಗಿತ್ತೋ ಸೂರ್ಯ ಮುಣುಗುಕ ಉಳಿದಿತ್ತೊ ಒಂದು ಮಾರಾ
ಅಂತ ಸಮಯಕ್ಕೆ ಬಂದಾನೋ ವೈರಿ
ಮುಸ್ಲಿಂ ಸಾಹೇಬರ ಕೊಲ್ಲಾಕ ಹತ್ಯಾರರಿ
ಖೋಡಿ ಶರಣರು ಆಗ್ಯಾರೋ ಗಾಬರಿ
ಓಡಿ ಹೋಗ್ಯಾರೋ ಶಿಷ್ಯರು ಮಾಡಿ ಘಾಸಿ || ೪ ||

ಮುಸ್ಲಿಂ ಸಾಹೇಬರು ಮಾದೇವನ ನೆನಸಿ
ಅಂತಾರ ಮರಣ ಒದಗೀತ ಬಿಟ್ಟಾರ ಜೀವ ಆಶಿ
ಬಂದ ಯಜೀದ ಅಡರಾಶಿ ಶರಣರಿಗೆ ಒಗಿದ ಕವಣಿಗಲ್ಲಾ ||
ಪೆಟ್ಟಹತ್ತಿತೋ ಮುಸ್ಲಿಂ ಸಾಹೇಬನ ಹಣೆಯ ಮೇಲಾ ||
ಮೂರೂ ತಾಸಿನ್ಯಾಗ ಆತೋ ಅವರ ಜಲ್ಮಗಾಲಮೇಲಾ
ಬಾಳ ದುಃಖಾ ಸೋಸಿ ಮಸ್ಲಿಂ ಶರಣಾ
ಬ್ಯಾನಿ ಸೋಸದೆ ಮುಚ್ಯಾರೋ ಕಣ್ಣಾ
ಕಂಡಾರೋ ಮುಕ್ತಿಮಾರ್ಗ ಹೋತೋ ಪ್ರಾಣಾ
ಕುಂತಾರಾ ವೈಕುಂಠದಾಗ ಮುತ್ತಿನ ಮಂಚಹಾಸಿ || ೫ ||

ಮಾಡ್ಯಾರ ಘಾತಕತನ ಮುಸ್ಲಿಂ ಸಾಹೇಬನ ಕರಿಸಿ
ಕಡದ ತುಣಕ ಮಾಡ್ಯಾರ ಹೊಡೆದ ಜಲ್ಮದರಿಸಿ
ಸೂರ್ಯ ಚಂದ್ರನಕ್ಕಿಂತ ಹೆಚ್ಚಿನ ಮುಸ್ಲಿಂ ಸಾಹೇಬನ ಪುತ್ತರಾ
ತಪ್ಪಿ ಹುಟ್ಟಿದ್ರೋ ಮುಸ್ಲಿಂ ಸಾಹೇಬನ ಹೊಟ್ಟೇಲಿ ಇಬ್ಬರಾ
ದಿಕ್ಕಿಲ್ಲದಾಂಗ ಆತೋ ಅವರ ಬೆನ್ನ ಹಿಂದೆ ಯಾರ್ಯಾರ
ಮಹ್ಮದ ಇಬ್ರಾಹಿಮ ಸಾಹೇಬ | ತಂದಿ ಕಾಣುದಿಲ್ಲಂತ ಆಗ್ಯಾರೋ ಗಾಬಾ |
ತಮ್ಮಗ ಅಂತಾನೋ ಅಣ್ಣಾ ಹುಡಿಕ್ಯಾಡಿ ಬಾ
ನನ್ನ ಜೀವಕ ಇಲ್ಲರಿ ಬರೋಸಿ || ೬ ||

ಬಂತ ಕಾಸೀಮ ಸಾಹೇಬರ ಬಾಳ ಸಂಶಿ
ಇಟ್ಟಿದ್ದ ಮಕ್ಕಳ ತಂದ ಮನಿಯಾಗ ಅಡಗಿಸಿ
ಶಾರ ಕೂಫೇದ ಅರಸ ಮಹಾ ಚದಾಮಯಿದ್ದ
ಮುಆವಿಯ್ಯಾನ ಮಗಾ ಹಾರೀಸ ಅಂತಾನ ಹಲ್ಲ ತಿಂತಾನ

ಮುಸ್ಲೀಮ ಸಾಹೇಬನ ಎರಡು ಕೂಸಾ
ಅಡಗಿಸಿ ಯಾರ ಇಟ್ಟಿದಾರ ಜಲ್ಮದಿಂದ ಥಾರ
ಹೊಡದ ಹುರದ ಬಿಡತೇನಿ ಅವರ ವಂಶಾ
ಯಾರ ಮನ ಮುಕ್ಕಾಶಿರಾ ತಂದ ಕೊಟ್ಟಮಗ ಹಾಕಿ ಜಾಹಿರಾ |
ಕೊಡತೇನಿ ಸಂತೋಷದಿಂದ ಮನಪೂರಾ
ಬಿಟ್ಟಾನ ಊರೆಲ್ಲಾ ಡಂಗೂರ ಹೊಡಿಸಿ || ೭ ||

ಡಂಗೂರ ಸುದ್ದಿಕೇಳಿ ಆಗಿ ಉದಾಸಿ | ಕಾಸೀಮಸಾಹೇಬ ತನ್ನ ಮಗನಿಗೆ ರಂಬಿಸಿ
ಮುಸ್ಲೀಮನ ಮಕ್ಕಳಾ ಆರೇಳು ವರ್ಷದ ಸಣ್ಣ ಬಾಲಾ
ಇಂದ ಏನ ಕಾರಣ ಸುದ್ದಿ ಆತರಿ ಮುಖಮುಂದ ಹೂಳುವುದು |
ಥಳಾ ಥಳಾ ಸಲ್ಲದೆ ಯಜೀದ ಕೊಲ್ಲುವನೋ
ಮುಸ್ಲೀಮನು ಕೂಸುಗಳಿಗೆ ಆಗ್ಯಾನೋ ಕಾಳಾ
ತನ್ನ ಮಗನಿಗೆ ಹೇಳ್ಯಾನೋ ಎಲ್ಲಾ ಬಿಚ್ಚಿ
ಕರಕೊಂಡ ಹೋಗ್ಯಾರ ಇಬ್ಬರನ ಮುಚ್ಚಿ
ತಿರುಗಿ ಬಂದಾನ ಮದೀನಾ ದಾರಿ ಹಚ್ಚಿ |
ಕೂಫೇಕ ಬಂದಾರ ಮತ್ತೆ ದಾರಿ ತಪ್ಪಿಸಿ || ೮ ||

ಮುಸ್ಲೀಮನ ಮಕ್ಕಳು ರಾಜಹಂಸಿ
ತಂದಿಗೆ ಹುಡುಕ್ಯಾರೋ ಆಗಿ ಪರದೇಶಿ
ಕೂಫೇದ ಪಟ್ಟಣವೆಲ್ಲಾ ತಿರುಗಿ ಹುಡಿಕ್ಯಾರೋ ತಂದಿಕಾಣವಲ್ಲಾ
ಹೊತ್ತ ಮುಳುಗಿ ಕಾಣದಾಂಗ ಆಗಿತ್ತೋ ಕತ್ತಲಾ
ಕಂಡ ಇಬ್ಬರನ ಯೋಜಿಸಿ ಮನಗಂಡ ಅಬ್ದುಲ್ಲಾ
ಬಂದ ಇಬ್ಬರ ಕೂಸಿಗೆ ಹಿಡಿದ | ಮಾರಿ ಮಾರಿಗೆ ತಗದೊಂದು ಹೊಡಿದ
ಕೊಟ್ಟ ಪಾರೇದವನ ಕೈಯಾಗ ಹಿಡಿದಾ
ಅಂದಾನ ನಾಳಿಗೆ ಮಾಡೂನು ಚವಕಾಶಿ || ೯ ||

ಇದ್ದ ಮುಸ್ಲೀಮರ ಪಾರೇದವ ಮೀರಾಶಿ
ಅಂತಾನ ಕೂಸಿನ ಕೊರಳಿಗೆ ಬಿದ್ದು ದುಃಖಿಸಿ
ಬಾಳ ವಿದ್ಯೆಯೋದಿ ಹೇಳಿ ಕೊಟ್ಟನೋ
ಕೂನ ತನ್ನ ಕೈಯಾನ ಉಂಗುರಾ
ತೀವ್ರದಿಂದ ಊರಬಿಟ್ಟ ನೀವು ಹೋಗಬೇಕರಿ ದೂರ
ನಮ್ಮ ಅಣ್ಣ ಒಬ್ಬ ಇರತಾನ ನೇಮಿ ಅಲಿ ದಾರಿಕಾರ
ಬ್ಯಾಗ ಉಂಗುರ ತಗದ ತೋರಿಸಿರಿ
ಅಂವ ತೋರಿ ತೋರಿಸ್ತಾನ ಮದೀನಾದ ದಾರಿ
ತಿರುಗಿ ಬರಬ್ಯಾಡ ಹೋಗರಿ ಪರಬರಿ
ಬಿಟ್ಟಾನ ಪಾರೇದವ ದಾರಿ ತೋರಿಸಿ || ೧೦ ||

ಸಣ್ಣ ಬಾಲಕರಿಗೆ ಸಾವು ಜಪ್ಪಿಸಿ | ಬೆನ್ನ ಹತ್ತಿತೋ ಮತ್ತೆ ದಾರಿ ತಪ್ಪಿಸಿ
ಕೂಫೇದ ಸೀಮಿ ತಿರುಗಿ ಬಂದ ಕುಂತಾರ ಭಾಂವಿಗಿ
ಹಂತೇಲಿ ಪಳ್ಳಗಿಡದಾಗ ಅಡಗಿ |
ಮಾತಾಡುತ ಕುಳಿತಾರೋ ಬಾಳ ನಿತ್ರಾಣ ಆಗಿ
ದಾರಿ ಮೇಲೆ ಹೋಗುವ ಜನರಿಗೆ ಕಾಣದಾಂಗ ಮರಿಯಾಗಿ
ಅಂತ ಸಮಯದಲ್ಲಿ ಅರಸನ ದಾಸಿ | ಬಾವಿ ನೀರಿಗೆ ಬಂದಾಳ ಪುರಮಾಸಿ
ಕಂಡಾಳ ಕಂದನ ಅಡರಾಶಿ | ಕರಕೊಂಡ ಬಂದಾಳ ಮನಿಗೆ ರಂಬಿಸಿ || ೧೧ ||

ಬಾಳ ಕುಸಿಲಿಂದ ಅರಸನ ದಾಸಿ
ಕರತಂದ ಇಟ್ವಾಳ ದೇವರ ಕೋಲ್ಯಾಗ ಅಡಗಿಸಿ
ತೂಗುವ ಮಂಚದ ಮ್ಯಾಲೆ
ಮಲಗಿಕೊಂಡರು ಅಣ್ಣ ತಮ್ಮ ಇಬ್ಬರು ಜೋಡಿಲಿ
ಅಣ್ಣ ಕಂಡಾನ ತಂದಿ ಕೂನ ಮಂಚದ ಮ್ಯಾಲೆ ಸ್ವರ್ಗದಲಿ
ಏಕಾಯೇಕಿ ಅಣ್ಣ ನಿದ್ದೀಲಿ ಎದ್ದು |
ಅಳತಾನ ತಮ್ಮನ ಕೊರಳಿಗೆ ಬಿದ್ದು
ಅಣ್ಣನ ದುಃಖ ನೋಡಿ ತಮ್ಮಗಾಬಾದಾ
ಇಬ್ಬರು ಅಳತಾರೋ ದುಃಖ ದುಃಖಿಸಿ || ೧೨ ||

ಅತಿ ಶೋಕ ಮಾಡ್ಯಾರೋ ತಂದಿಗೆ ನೆನಸಿ
ಸ್ವರಕೇಳಿ ಹಾರೀಸ ಎದ್ದ ಅಡರಾಶಿ ಹೋಗಿ ಇಬ್ಬರನ ಕಂಡ
ಮುಸ್ಲೀಮನ ಮಕ್ಕಳ ಮಾರಿ ನೋಡಿ ಆಗ್ಯಾನೋ ಬೆಂಕಿ ಕೆಂಡ
ಹತಿಯಾರಿಲೆ ಸಂಹಾರ ಮಾಡಿದಾನೋ ಇಬ್ಬರನ ಚಂಡ
ಪಾಪಿಷ್ಟ ಮನಸಿನ್ಯಾಗ ಕೋಪಯಿಟ್ಟಿದ್ದಾ ತೀರಿಸಿಕೊಂಡ
ಹಾರೀಸ ಯಜೀದಗ ಬರಲಿಲ್ಲ ಅಕ್ಕರತಿ
ಮುಸ್ಲೀಮನ ಮಕ್ಕಳು  ಪಡಿದಾರೋ ಮುಕ್ತಿ
ಇಬ್ಬರು ಕೊಡ್ಯಾರೋ ಮಡ್ಡಿ ಪೀರಾನಂತೆ
ಹುಸೇನಮಿಯ್ಯಾನ ಕವಿ ಚ್ಯಾಪಿಸಿ
ಇದರ ಸಾರಾಂಶ ಹೇಳುವೆ ಕಣ್ಣೀಗೆ ನೀರ ಸುರಿಸಿ || ೧೩ ||

* * *

## ೨. ವೀರ ಕಾಸೀಮನ ಲಢಾಯಿ

ಅಡಿಪ್ರಾಸ ಅಂಬುದು ನುಡಿ ಗೊತ್ತೇನಿಲ್ಲಾ
ಸೂಳಿಯಾಂಗ ಕುಣಿದಾಡಿ ವಾಳಿ ಹೋಗತಾನಲ್ಲಾ | ಸಿಂಗಲ್ ಚಾಕ ಮೂಲಾ || ಪಲ್ಲವಿ ||

ಏರು || ಹೇಡಿ ಓಡಿ ಖೋಡಿ ಲೌಡಿ |
ಒಂಟ ಅಕ್ಷರ ತೊಂಟ ಈ ಪಡಶೆಂಟ ತರತಾನ ಶಾಹೀರಾ
ಜೋಡಿ ಪದಗಳ ಮಾಡಿ ತಂದು ಹಾಡಿ ಹೋಗೋ ಗಂಭೀರಾ
ವಾದ ಹಾಕಬ್ಯಾಡ ಗುದ್ದ ಹೊಗಸೇನ ಸುದ್ದ ಹಾಡೋ ಅಕ್ಷರಾ
ಇ || ಮಾನಾ ಪಾನಕ ಶ್ವಾನಾಯಿಂವಾ ಆಗಿಮೂಲಾ | ಬಂದ ಕಿಸ್ತಾಹ್ಲಲಾ || ೧ ||

ಶರಣ ಕಾಸೀಮಸಾಬ ಇವರು  ಸಣ್ಣಬಾಲಾ
ಹದಿನಾಲ್ಕು ವರ್ಷದ ಕಂದಾ ಎಳೆಕಮಲಾ | ಹೀಂಗ ಅಂತಾರಲ್ಲಾ
ಏರು || ಮಾತಾ ಪಿತಾ ತುರ್ತಾ ಶರತಾ
ಖುದ್ದ ಹೋಗಿ ಯುದ್ಧಮಾಡಿ ಗೆದ್ದ ಬರತೇನಿ ಕಣದಲ್ಲಿ
ಬಂಟನಾ ಬಲಿಷ್ಟ ನನಗ  ಎಳ್ಳಷ್ಟ ಭಯಾಯಿಲ್ಲಾ ಮನದಲ್ಲಿ
ಕೆಟ್ಟ ಮರವಾನ ದ್ರುಷ್ಟ ಆ ಬ್ರಷ್ಟಗ ಹೊಡುತೇನಿ ಕ್ಷಣದಲ್ಲಿ
ಇ|| ಹಟ ಹಿಡಿದ ಕುಂತಾರ ಘಟ್ಟಿ ಬಿಡಲಿಲ್ಲಾ | ತಾಯಿದು ಹಿಡಿದಾರಾ ಕಾಲಾ || ೨ ||

ಕೇಳಿ ತಾಯಿ ಅಳತಾಳ ಹೊರಳಿ ಅಳತೆಯಿಲ್ಲಾ
ಸುಳಕ ಕಣಕ ಹೋಗಬ್ಯಾಡೋ ನಿನಗ ಕಳಸುದಿಲ್ಲಾ | ನನಗ ನೋಡವರಿಲ್ಲಾ
ಏರು || ಕುದುರಿ ಏರಿ ದೊರಿ ಪೇರಿ
ಬಂದ ಮಡದಿ ಮುಂದ ನಿಂತಾರ ಚಂದದಿಂದ ಅತಿ ಸುಂದರಾ
ಬಿದ್ದ ಪಾದಕ ಎದ್ದು ಹೇಳತಾಳ ಗೆದ್ದು ಬರುವುದು ದುಸ್ತಾರಾ
ಕಷ್ಟ ನಂದು ನಷ್ಟ ಮಾಡಿ ಹೊಂಟಿ ಹೋಗರಿ ಸರದಾರಾ
ಇ || ಶಿವನ ಧ್ಯಾನಾ ಮಾಡೂತ ವರಣ ಹೇಳ್ಯಾರಲ್ಲ | ಅವನ ಹೊರತ್ಯಾರಿಲ್ಲಾ || ೩ ||

ಮಹಾಗಂಭೀರ ಧೀರ ಹೇಳಿ ನಡೆದಾರಲ್ಲಾ
ಹತಿಯಾರ ಕೈಯಾಗ ಸೂರ ಹಿಡಿದ ಡಾಲಾ ರಣಕ ಮುಟ್ಯಾರಲ್ಲಾ
ಏರು || ಬಿರದಾ ಹಿರದಾ ಮರದಾ ಕರದಾ
ಹಿಂಡ ವೈರಿಯ ಗಂಡ ನಾನು ಪುಂಡ ಅನಿಸೇನಿ ಬಹಾದ್ದೂರ
ಹಿಡಿದ ವೈರಿಗೆ ಹೊಡೆದ ಬಿಡತೇನಿ ಕಡದ ಮಾಡಿ ಚೂರಚೂರ
ಕಂಡ ಅವರಿಗೆ ಭಂಡ ಮರವಾನ ದಂಡ ತಂದಾನ ಗಂವಾರಾ
ಇ| ಆಗಿ ಹೋಗಲಿ ಕೂಗಿ ಅಂತಾರಲ್ಲಾ ಯಜೀದರೆಲ್ಲಾ | ತಿಂದ ಕರಕರಾಹಲ್ಲಾ || ೪ ||

ಹಿರದ ಹತಿಯಾರ ಮರದ ಜಿಗದ ಹೊಡುತಾನಲ್ಲಾ
ರುಂಡ ಸಿಡದ ಕಡಕೊಂಡ ತೆಳಗ ಬಿದ್ದಾವಲ್ಲಾ | ಜೀವದ ಕಬರಿಲ್ಲಾ
ಏರು || ಶೂರಾ ಧೀರಾ ಸೀರಾ ಥಾರಾ.
ಎತ್ತ ನೋಡಿದರ ಸುತ್ತ ಹೆಣಗಳು ಸತ್ತು ಬಿದ್ದಾವ ರಣದಲ್ಲಿ
ಅಚಿತ್ರ ಕೇಳರಿ ವತ್ರದಿಂದಲಿ ನೇತ್ರದ ಹರುತಿತ್ತು ಕಾವಲಿ
ಜಂಗ ಮಾಡ್ಯಾರ ಹಿಂಗ ಜೀವದ ಹಂಗ ಇಟ್ಟಿದಿಲ್ಲ ಹುಲಿ
ಇ|| ಆರು ದಿವಸ ಅಸನ ನೀರು ಏನೇನಿಲ್ಲಾ | ಸೋತ ಕೈಯ ಕಾಲಾ  || ೫ ||

ಬಂದ ರಣದಿಂದ ತಾಯಿ ಮುಂದ ಹೇಳ್ಯಾರಲ್ಲಾ
ಹಡದವ್ವಾ ಕುಡಸವ್ವಾ ನೀರ ನಿರ್ವಾಯಿಲ್ಲಾ | ಗಂಟಲ ಒಣಗೈತಲ್ಲಾ
ಏರು || ಬ್ಯಾಗ ಮಗ್ಗ ಆಗ ಈಗ
ಮಾರಿ ನೋಡಿ ತಾಯಿ ಚೇರಿ ದುಃಖ ಭಾರಿ ಮಾಡ್ಯಾಳು
ಹೆಂತಾ ಹೊತ್ತ ಮಗನ ಸುತ್ತ ಒದಗಿ ಬಂತ ಅಂದಾಳು
ಶಂಕರಾ ಭವಸಾಗರಾ ನೀರಿನ ಬರಾ ತಂದೆಂತಾಳು
ಇ|| ಇಷ್ಟ ಕೇಳಿ ಶರಣರು ಹೊಂಟ ಹ್ವಾದಾರಲ್ಲಾ | ನೀರ ಸಿಗಲಿಲ್ಲಾ || ೬ ||

ಹರಿ ಬರಿದಂತ ಬರಿ ಇದು ತಪ್ಪುದಿಲ್ಲಾ
ಒಂಬತ್ತು ದಿನಾ ಉಪವಾಸಾ ಶರಣ ಇದ್ದಾರಲ್ಲಾ | ಒದಗಿ ಬಂದೀತು ಕಾಲಾ
ಏರು || ಕಂಡಾ ಪುಂಡಾ ಭಂಡಾ ದಂಡಾ
ಸುತ್ತ ಮುತ್ತ ಆತ ಸೈನ್ಯ ಹುಕುಮ ಕೊಟ್ಟಾನ ಮರವಾನಾ
ಹಿಡಿದ ಕಾಸೀಮರ ಹೊಡೆದ ಯಜೀದ ಕರಣಯಿಲ್ಲದೆ ಬೇಮಾನಾ
ಮಡದ ಸುದ್ದಿ ಕೇಳಿ ಹಡದ ತಾಯಿ ಮಡದಿ ಬಂದ ಆ ದಿನಾ
ಇ || ದುಃಖ ಮಾಡುರೋ ಶೋಕ ಇವರು ಅಳತಿಯಿಲ್ಲಾ
ಬಿದ್ದ ಹೆಣದ ಮ್ಯಾಲಾ || ೭ ||

ಹುಸ್ನೆ ಇಬ್ನೆ ಶರಣರು ಅಲಿ ನೋಡಿದಿಲ್ಲಾ
ಸುತ್ತ ಅರಬಿಯ ಡೋಲಿ ಎತ್ತಿ ದೈವಾಯೆಲ್ಲಾ ಮಣ್ಣ ಮಾಡ್ಯಾರಲ್ಲಾ
ಏರು || ಶಕ್ತಿ ಭಕ್ತಿ ಕೀರ್ತಿ ಮುಕ್ತಿ
ಮಡದ ಶರಣರು ಪಡದ ದಾರಿ ಹಿಡಿದ ಸ್ವರ್ಗ ಕಂಡಾರು
ಅಕ್ಕರತಿ ಬಾಳಿ ಪ್ರೀತಿಯಿಂದ ಮುತ್ತಿನ ತೊಟ್ಟಿಲ ಕಟ್ಯಾರು
ಶರಣರಿಗೆ ಶಿರಬಾಗಿ ರಂಭೇರು ತೂಗಿ ಸೇವಾ ಮಾಡವರು
ಹೀಂಗ ಮನಸಿಟ್ಟ ನಡದಂವಗ ಸ್ವರ್ಗ ಸೇಲಾ | ಸಾಂಬಾಯಿಟ್ಟಾನಲ್ಲಾ || ೮ ||

ಶಾರ ಬಾಗಲಕೋಟಿ ಊರ ರಂಗಲಾಲಾ
ದಸ್ತಗೀರ ಕೇಸುಪೀರ ನಮ್ಮ ಮ್ಯಾಲಾ ಹಸ್ತ ಇಟ್ಟಾರಲ್ಲಾ ||
ಏರು || ಜೋಡಿ ಕೂಡಿ ಮಾಡಿ ಹಾಡಿ
ತೊಡಕ ಅಕ್ಷರ ಮಾಡಾಕವಲ್ಲಿ ಹೆಡಕ ಮುರದೇನ ಕುಂಬಾರ
ರಂಗ ಲಚಮನ ಸಿಂಗ ಉಸ್ತಾದನ್ಹಾಂಗ ಕವಿ ಮಾಡೋ ಪಾಮರಾ
ಸುಳ್ಳ ಶಾಹೀರ, ಮಳ್ಳನೀನು ಕಳ್ಳಹಿಡಿ ತುಣುತುಣುಸುರಾ
ಲಾಲಡೋಂಗ್ರಿ ಖ್ಯಾಲ ಮಾಡ್ಯಾರ ಮೋಲಯಿಲ್ಲಾ | ಕಟ್ರೋ ಕುಂಡಿಗೆ ಗುಲ್ಲಾ || ೯ ||

* * *

# ೩. ಕಾಸೀಮನ ಜಂಗಿನ ಪದಾ

ಮಾತಕೇಳರಿ ಚಿತ್ತಕೊಟ್ಟು ನೀವು | ಮುತ್ತಿನಂತ ನುಡಿ ಮುಂದ ಇನ್ನಾ
ಸುತ್ತ ಮುತ್ತ ನೆರದಿರೋ ಜನಾ | ಬೋಲ | ಹತ್ತು ದೈವಕ್ಕ ಪುತ್ರ ನಾನಾ || ೧ ||

ಕರ್ಬಲದಾಗ ಕಾಸೀಮ ಸಾಹೇಬನ ಲಗ್ನ ಮಾಡಬೇಕಂದರಣ್ಣಾ
*

[1]ಎಲ್ಲೆಲ್ಲಿ ಸಿಗಲಿಲ್ಲೊ ಮದುವಿ ಹೆಣ್ಣಾ | ಬೋಲ | ಮಗಳಕೊಟ್ಟು ಲಗ್ನ ಮಾಡ್ಯಾರಣ್ಣಾ || ೨ ||
ಯಜೀದ ಕೋಪಿಸಿ ಲಡಾಯಿಕೆ ಬಾರೆಂದು | ಮೇಲೆ ಮೇಲೆ ಪತ್ರ ಬರದಾರಣ್ಣಾ
ಕಾಸೀಮ ಸಾಯ್ಬಾಗ ತಿಳಿಸ್ಯಾರಣ್ಣಾ | ಬೋಲ | ತಯಾರಾಗಿ ನಿಂತಾನ ರಾತೊ ದಿನಾ || ೩ ||

ಮದುವಿಯಾಗಿ ಮೂರು ದಿವಸ ಆಗಿದ್ದಿಲ್ಲೊ | ತೊಳದಿಲ್ಲೊ ಮೈಯ್ಯಾನ ಅರಸೀಣಾ
ಬಿಚ್ಚಿಲ್ಲೊ ಕಟ್ಟಿದ ಕಂಕಣಾ | ಬೋಲಾ | ಶಿರದ ಬಾಸಿಂಗವರು ಬಿಚ್ಚಿಲ್ಲಣ್ಣಾ || ೪ ||

ಮುಹ್ಮದ ಕಾಸೀಮ ಕರೆದು ತನ್ನ ಮಡದೀನಾ | ಎಲ್ಲ ವರ್ತಮಾನಾ ತಿಳಿಸ್ಯಾನಾ
ರಣಕೆ ಹೋಗತೀನಿ ಇಂದಿನ ದಿನಾ | ಬೋಲ | ಕೊಂದ ಬರತೇನಿ ಯಜೀದನಾ || ೫ ||

ಕಾಸೀಮನ ಮಡದಿ ಕೈಮುಗಿದು ಹೇಳತಾಳೊ | ಹೋಗಬ್ಯಾಡ್ರಿ ಕೇಳ್ರಿ ಎನ್ನ ವಚನಾ
ನಿಮ್ಮನ್ನಗಲಿ ಹ್ಯಾಂಗ ಇರಲಿ ನಾನಾ | ಬೋಲ | ನಿಮ್ಮ ಸಂಗಡ ಬರತೇನಿ ನಾನಾ || ೬ ||

ಕಾಸೀಮ ಸಾಹೇಬ ಮಡದಿಗೆ ಹೇಳತಾನೊ | ಹಿಂಬಾಲಹತ್ತಿ ಬರಬ್ಯಾಡೆ ನೀನಾ |
ನನ್ನ ಸಂಗಡ ಬರುವುದು ಮರಿಯೇ ನೀನಾ | ಬೋಲ | ಸತಿಪತಿ ಎಂತ ತಿಳಿಯೆ ನೀನಾ || ೭ ||

ಕಾಸೀಮ ಸಾಹೇಬ ಹೇಳಿದ ನೇಮಾ | ನಾಳೆ ಸ್ವರ್ಗದಾಗ ಬಾರೆ ನೀನಾ
ಅಂಗಿ ತೋಳಿಂದ ಹಿಡಿಯೇ ಕೂನಾ | ಬೋಲ | ಹೋಗಿ ಹಿಡಿಬೇಕು ಕಾಸೀಮನ ಚರಣಾ || ೮ ||

ಇಷ್ಟೆಲ್ಲಾ ಹೇಳಿ ಹೊಂಟಾನೋ ರಣಕ | ಮದಿಮಗ ಕಾಸೀಮ ಸ್ವಾಮಿ ಶರಣಾ
ಏಳು ವರ್ಷದ ವಾಯ ಇತ್ತೋ ಅವನಾ | ಬೋಲ | ಕರ್ಬಲದ  ಕದನ ಮಾಡ್ಯಾರಣ್ಣಾ || ೯ ||

ದಂಡು ಸಂಹಾರ ಮಾಡುತ್ತ ಹೊಂಟಾನೋ |
ಧೂಲ ಧೂಲ ಮೌಲಾ ಅಂದಾರಣ್ಣಾ
ದಂಡು ಕಡದುಗುಂಪು ಹಾಕಾರಣ್ಣಾ | ಬೋಲ ||
ಕರ್ಬಲದಾಗ ಕದನವು ನಡಸ್ಯಾರಣ್ಣಾ || ೧೦ ||

ಕಾಸೀಮನ ನೋಡಿ ಕಟ್ಟಿಕೊಂಡ ದವಡಿ |
ಓಡಿ ಬಂದ ಒಬ್ಬ ಪೈಲಾವಾನಾ||
ಹಿಂದಾ ಬಂದು ಹೊಡುತಾ ಮಾಡ್ಯಾರಣ್ಣಾ | ಬೋಲ |
ಕಡಕೊಂಡು ಬಿದ್ದಾನ ಕಾಸೀಮ ಶರಣಾ || || ೧೧ ||

ಕಾಸೀಮ ಸಾಹೇಬ ಸ್ವಾಮಿ ಶಿರಣರು |
ಕೈಲಾಸವಾಸಿಯಾದರಣ್ಣಾ ||
ನೀರನೀರಂತೆ ಕೊಟ್ಟಾರೋ ಪ್ರಾಣಾ || ಬೋಲ ||
ಮಡದಿಗೆ ಸುದ್ದಿ ಮುಟ್ಟಿತೊ ಇನ್ನಾ || ೧೨ ||

ಕಾಸೀಮನ ಮಡದಿ ದುಃಖ ಮಾಡುವದು ನೋಡಿ |
ಅಳತಾರೊ ಕರ್ಬಲದೊಳಗಿನ ಜನಾ ||
ರೋನೇ ಲಗಿ ಜಮೀನ ಆಸಮಾನ | ಬೋಲ |
ಇದಿಮಾಯಿ ಬೆನ್ನ ಹತ್ತಿತ್ತೇಸೊ ದಿನಾ || ೧೩ ||

ಅಯ್ಯಯ್ಯೋ ಶಿವನೆ ನಾ ಸಾಯಲಿಲ್ಲೊ |
ಎಷ್ಟಂತ ಧ್ಯಾನಿಸುತ್ತಿರಲಿ ನಾನಾ ||
ಮಡದ ಹೋದ ಪುರುಷನ ಹೆಂಗ ಮರಿಯಲಿ ನಾನಾ |
ಅವರ ಮುಂದಾಗಲಿಲ್ಲೊ ನಮ್ಮ ಮರಣಾ || ೧೪ ||

ಭೂಮಿ ಮ್ಯಾಲೆ ಬಿದ್ದು ಅಳತಾಳೊ ಸಕೀನಾ |
ನನಮ್ಯಾಲೆ ಮುನದಾನೊ || ಸ್ವಾಮಿ ಭಗವಾನಾ ||
ಕಳದಿಟ್ಯೊ ನನ್ನ ಮುತ್ತೈದಿತನಾ | ಬೋಲ ||
ಅಡವಿ ಆರ್ಯಾಣದಾಗ ಕೊಯ್ದೊ ಗೋಣ || || ೧೫ ||

ಬೇವನೂರ ಊರ ಸುತ್ತವಾಯಿನಾ |
ವಾರಿಗಿ ಹುಡುಗರು ಒಂದೇ ಸವನಾ ||
ಹೆಜ್ಜೆ ಹಾಕುತ್ತಾರೋ ತಾಳಗತ್ತಿನ್ನಾ || ಬೋಲ ||
ಝುಂಡಾ ಹಿಡಿದು ಹೊಡಿತಾರೊ ಧೀನಾ || ೧೬ ||

*** * ***

## ೪. ಅಬ್ದುಲ್ಲಾನ ಜಂಗಿನ ಪದಾ

ಏನ ಚಂದಾ ಸಬಾ ಪಸಂದ ಕೂಡಿರಿ
ದೇವೇಂದ್ರನಕ್ಕಿಂತ ಮಿಗಿಲಾ || ಪಲ್ಲವಿ ||

ಏರು || ಕುಂತ ದೈವದೊಳಗಾಗಲಿ ಚೌಕಾಸಿ
ಬಂದೀನಿ ಪುರಮಾಸಿ ಅಕ್ಷರಗಳ ಸೋಸಿ
ಇ|| ಹಚ್ಚಿ ನೋಡೋ ವರಿ ಬಂತೋ ಬಿರಿ ಇದರ ಸರಿ
ಶಾಣ್ಯಾತನ ನೋಡೂನ ಜಾಣ ಒದರಾಡಿಯೇನು ಫಲ || ೧ ||

ಶರಣ ಹುಸೇನ ಸಾಹೇಬನ ಚರಣಕ ಬಿದ್ದು
ರಣಕ ಹೋಗ್ತಾನಂತಾನಬ್ದುಲ್ಲಾ ||
ಏರು || ಕೊಡರಿ ಹೋಗಲಾಕ ಅಪ್ಪಣಿ ನನಗ
ಅನುಮಾನ ಯಾಕೀಗ ಹೋಗುವುದು ರಣದಾಗ
ಇ|| ಕಡದಾಡಿ ಕೊಲಿ ಹಾರಿಸ ತಲಿ ಭೂಮಿಮ್ಯಾಲೆ
ಹಿಡಿದು-ಹೊಡೆದು-ಕಡದು ಹಾಕುವೆ ನನಗೇನು ಥರ ಜಲ್ಲಾ || ೧ ||

ಹೀಂಗೆಂದ ಹುಸೇನ ಸಾಹೇಬ ಕಂದನ ಮುಂದ ನಿಂದೇನು ವಯಸಲ್ಲಾ
ಏರು || ಕದನ ಮಾಡುವಾಂಗಿಲ್ಲೋ ನಿನ್ನ ವಯ
ಮನಸಿನ್ಯಾಗ ಭಯ ಇನ್ನು ಎಳೇ ಪ್ರಾಯಾ
ಇ|| ಹೋಗಬ್ಯಾಡೋ ನೀನು ಹೇಳತೇನೋ ನಾನು
ಮರತ ಬಿಡೋ ನಿನ್ನ ಶರಥ ನಿನ್ನಿಂದೇನಾಗಾಕಿಲ್ಲಾ || ೩ ||

ಶರಣ ಕರುಣ ಮಾಡಂತ ಚರಣ
ಹಿಡಿದಾನೋ ಆಗ ಅಬ್ದುಲ್ಲಾ
ಏರು || ಹುಸೇನಸಾಹೇಬ ಅಂತಾನೋ ಮಗನೇ
ನಿನಗ ಬಿಟ್ಟೇನಿ ಶಿವನ ಮ್ಯಾಗ | ಈ ನಿನ್ನ ಅದೃಷ್ಟದಾಗ
ಇ|| ಬರೆದಂತ ಬರಿ ಶ್ರೀಹರಿ ತಪ್ಪದಲಿ
ನಾನೇನ ಮಾಡಲಿಯಿನ್ನಾ ದೈವೇನು ನೋಡಿ ಬಂದಿಲ್ಲ || ೪ ||

ಹುಕುಮ ರಕಮ ಕೊಟ್ಟ ಕುಶಿಯಾದ ಮನದಾಗ ಅಬ್ದುಲ್ಲಾ
ಏರು|| ಹಾಂ ಕುಂತಾರೋ ತಮ್ಮ ಕುದುರಿಮ್ಯಾಗ
ಅಂಜಿಕಿಲ್ಲದಾಂಗ ತಿರುವೂತ ಪೇರಿ ಹೀಂಗ
ಅಂತಾರೋ ದೊರಿ ಬಾ ವೈರಿ ನನ್ನ ಸರಿ
ಉಳದ ಬೆಳದ ಹೋಗಂತ ತುಳದ ಬಿಡತೇನಿ | ಅಂತಾನಬ್ದುಲ್ಲಾ || ೫ ||

ಮುಂದ ಜಿಗಿದ ಹತಿಯಾರ ಹಿರದಾ
ಹೋಗಿ ಬಿದ್ದಾನ ವೈರಿ ಮ್ಯಾಲೆ | ಆಡಿನೊಳಗ ಬಿದ್ದಂಗಾತು ಹುಲಿ
ಹಾರಡಾವೊ ಮಾಲೆ ತಲಿ | ಧಡ ಧಡನೆ ಭೂಮಿ ಮ್ಯಾಲೆ
ಅನೇಕ ಜೀಂವಾ ವೈದಾನು ಶಿವಾ ಮಾದೇವಾ
ಇ|| ಜಂಗರಂಗ ಆದೀತೋ ಹೀಂಗ ಶರಣರಿಗೇನು ಅರವಿಲ್ಲಾ || ೬ ||

ಸೈನಾ-ಜೈನಾ-ಶುಮರಲೈನಾ ತಂದ ಶರಣರ ಸುತ್ತಯೆಲ್ಲಾ
ಏರು || ಹೊರಳಿ ಹೋದೇನಂದದ ದಾರಿಯಿಲ್ಲಾ
ಬಂದಿತೋ ಬಾಳ ಬಿರಿ ಮುನದಾನೋ ಶ್ರೀ ಹರಿ
ಇ|| ಯಜೀದರಾ ಕೊಯ್ದಾರೋ ಶಿರಾ ಮುಡದಾರಾ
ಕರಣ ವರುಣ ಇದ್ದಿಲ್ಲಂವಗ ಪಾಪಿಷ್ಟರೈದಾನ ಖುಲ್ಲಾ || ೭ ||

ಮಗನ ಮಥನ ಆದ ಸುದ್ದೀನ ಹುಸನ್ನೈನ ಕೇಳ್ಯಾರಲ್ಲಾ
ಏರು || ಇಂದು ಕರ್ಬಲಕೆ ಆದೆಲ್ಲೋ ಮಗನೆ ಮಣ್ಣಾ
ಇಷ್ಟು ನಿನ್ನ ದೈವಾನ ಬರಿದಾನೊ ಭಗವಾನಾ
ಇ || ಹೋದ ಸ್ವರ್ಗದಲಿ ಶಿವನ ಹುಲಿ
ತೊಟ್ಟಿಲಲಿ ಬಂದ ಚಂದ ಅಮೃತ ತಂದ
ಕುಡಿಸ್ಯಾರೋ ರಸೊಲಿಲ್ಲಾ || ೮ ||

ಸುತ್ತ ದೇಶದೊಳು ಸತ್ತುಳ್ಳಗುರುಗಳು
ಹಸ್ತ ಇಟ್ಟಿರೋ ತಲಿಮ್ಯಾಲೆ
ಏರು || ಬಾಗಲಕೋಟೆಯೊಳಗ ದಸ್ತಗೀರ ಪೀರ
ನಾಗೂ-ಗೌಸು ನುಡಿ ಕೇಳಿ ವೈರಿ ಹೋದ ಓಡಿ
ಹವ್ವಳ ನಿವ್ವಳ-ಕೆಚ್ಚಿದಕ್ಕಿಂತ ಅಕ್ಷರ ಭಿನ್ನಮೌಲಾ || ೯ ||

* * *

## ೫. ಅಬ್ಬಾಸ ಅಲಿ ಜಂಗಿನ ಪದಾ

ಜಾಣಾಗ್ನಾನಾಲಿಂದ ಬಯಾನಾ ತಗದೇನಿ ಒಂದಾ | ತೋಡಿ ಪದಾ ನಿಂದಾ
ಕುಂತೀರಿ ದೈವದವರಾ ಸಣ್ಣ ದೊಡ್ಡ ಹಿರಿಯರು | ಮಾಡಿರಿ ವಿಚಿಯಾರಾ
ಆಡಿಪ್ರಾಸ ಅಕ್ಷರ ಆದರ ತಪ್ಪಾ
ಬಿಟ್ಟು ಮನದಾನ ಕೋಪಾ ನನಗ ಮಾಡರಿ ಮಾಪಾ
ಏರು || ಕೇಳಿ ವಾಳಿ ಸೂಳಿಹಾಂಗ ಕುಣೀತಿದಿ ಮುಂದಾ
ತೋಡಿ ಪದಾ ನಿಂದಾ || ೧ ||

ರಂಗ ಅಬ್ಬಾಸನ ಜಂಗಕೇಳರಿ
ಪರಸಂಗ ಹೇಳತೀನಿ ಒಂದಾ | ಮನಸೀಗೆ ತಂದಾ
ಮಕ್ಕಾ ಮದೀನಾ ಬಿಟ್ರೋ ಹುಸನ್ನೈನಾ
ತಮ್ಮ ಸರೂ ಸೈನಾ ತಗೊಂಡಾರೊ ಬ್ಯಾಗನಾ
ಅಬ್ಬಾಸ ಅಲಿ ಇದ್ದಾಂಗ ಶಿವನ ಹುಲಿ | ಜಂಗ ಮಾಡೂದಕ ಕೊಲಿ
ಏರು || ಪುಂಡ ಹಿಂಡ ವೈರಿಗಂಡ ಶರಣ ಅನಿಸಿದ್ದಾ
ತೋಡಿ ಪದಾ ನಿಂದಾ || ೨ ||

ಸಣ್ಣ ಕೂಸಿನ ಬಣ್ಣಾ ಸುಟ್ಟ ಹೌಸಾನ ಹಾರಿತೋ ಕಂದಾ
ಪೂರ್ಣಮಿ ಚಂದ್ರಾ | ಅಲಿ ಅಸ್ಗರಾ | ಅಂದ ನೀರ ನೀರಾ
ಹಾರಿತೋ ಖಬರಾ | ಸಣ್ಣ ಸುಕುಮಾರಾ
ಹತ್ತಿತ್ತೋ ಬಿಕ್ಕಿ ಎರಡು ಕೈಕಾಲ ತಿಕ್ಕಿ ದುಃಖಿಸಿ ಆಕಿ

ಬಾನೂ ಬೀಬಿ ಶೋಕ ಮಾಡುವಳೋ |
ಮಗಾ ಯಾಕ ಆಗಿದ್ದಾನೆ ಸುಂದಾ | ತೋಡಿ ಪದಾ ನಿಂದಾ || ೩ ||

ಕರುಣ ಅಬ್ಬಾಸ ಅಲಿ ಶರಣ ತಗೊಂಡ | ಮಸಕಿನ ಕೈಯಾಗ ಹಿಡದಾ
ಭಯಾಯಿಲ್ಲದ ನಡದಾ | ಹತ್ತಿ ತನ್ನ ಕುದುರಿ
ಹಿಡಿದಾರೋ ದಾರಿ | ನಡದಾರೋ ಬಿರಿಬಿರಿ | ತಿರುವೂತ ಪೇರಿ
ಅಂತಾರ ಧೀನ್ ಧೀನ್ | ಇಂದಿಗೆ ಹೋಗಲಿ ಪ್ರಾಣಾ
ನೀರ ಬಿಡೂದಿಲ್ಲಾ ನಾನಾ | ಕುದುರಿ ನಡಿತ ಕಾಲ ಕೆದರಿ
ಏರು | ಜೀಂವಕ ಚೂರ ಹೆದರಿಕಿಯಿಲ್ಲದಾ | ತೋಡಿ ಪದಾ ನಿಂದಾ || ೪ ||

ಕೆಟ್ಟ ಮರವಾನಾ ದೃಷ್ಟ ಹೇಳಿದಾನ
ಬೃಷ್ಟ ಯಜೀದನ ಮುಂದಾ | ಅಟ್ಟಾಸಲಿ ಬಂದಾ
ನೀರಿನ ಮ್ಯಾಲಾ ಇಟ್ಟಿದ್ದ ಕಾವಲಾ |
ಯಜೀದ ಖುಲ್ಲಾ ನಡೆಸಿದ ಅಮಲಾ
ಬಂದೋಬಸ್ತ ಅಂವ ಇಟಿದ್ದ ಮಸ್ತಾ | ಹಂತ ಯಾವ ಶಮರಂತಾ
ಏರು || ಬಂದ ಇಂದಕೊಂದ ನಮ್ಮನ್ನ
ಹ್ಯಾದಾನೋ ಜೀವಲಿಂದಾ | ತೋಡಿ ಪದಾ ನಿಂದಾ || ೫ ||

ಸೂರಾಧೀರಾ ತಗೊಂಡ ಹತಿಯಾರಾ
ಕೈಯಾಗ ಹಿಡದಾ | ಅಂತಾನೋ ಭರ್‍ರಂದಾ
ಅಬ್ಬಾಸಲಿ ಶರಣರ ಜಂಗ ನಡೆದೀತೋ ಆವಾಗ
ಇಟ್ಟಿದಿಲ್ಲೋ ಜೀವನ ಹಂಗ | ನಬಿಸಾಬರ ಕರುಣ ನಮಗ
ಐತಿ ನಮ್ಮ ಮ್ಯಾಲೆ ಅಂತಾರೋ ಅಬ್ಬಾಸ ಅಲಿ | ಶಿವನ ಮನಿ ಹುಲಿ
ಏರು || ಕಡದಾ – ಹೊಡದಾ – ನಡದಾ
ಅಬ್ಬಾಸಲಿ ನೀರ್ಥಿನಂತೇಲಿ ಹ್ಯಾದಾ | ತೋಡಿ ಪದಾ ನಿಂದಾ || ೬ ||

ಪುಂಡ ಗಂಡಾ ನೀರ ತುಂಬಿಕೊಂಡ ತಿರುಗಿ ಅಂವಾ ಬಂದಾ
ಮರವಾನಾ ಅಂದಾ | ಹಿಡಿದ ನಿರ್ತಿಟ್ಟ ಬಾಣಾ
ಹೊಡದಾನೊ ದುಷ್ಟನ್ನಾ | ಹರಿದೀತೊ ಮಸಿಕಿ ನಾ
ನೀರ ಉಳಿಲಿಲ್ಲನ್ನುನಾ | ಆದಾಗ ನೆನೆದಾರೊ ಶಿವನಾ
ನಿನಗ ಬರಲಿಲ್ಲ ಕರುಣಾ | ಮಕ್ಕಳದು ಹೋಗತೈತಿ ಪ್ರಾಣಾ ||
ಏರು || ಭಂಡ ಮರವಾನಾ ಕಂಡ ಅಂದಾ
ಮನಗಂಡು ಬಾಣ ಹೊಡೆದಾ || ತೋಡಿ ಪದಾ ನಿಂದಾ || ೭ ||

ಶರಣಾ ಮರಣಾ ಹೊಂದ್ಯಾರಾದಿನಾ
ಬರದಿದ್ದ ಪ್ರಾರಬ್ದಾ ತಪ್ಪೊದಿಲ್ಲಾ ಅಂದಾ
ಹುಸ್ನೆ ಇಬ್ನೆ ಅಲಿ ಶರಣಾ | ಎತ್ತಿವೋದ್ರೋ ಅಬ್ಬಾಸಲಿನಾ

ಅಂತಾರ್ಧಿಂಗ ಹುಸನ್ನೈನಾ | ಬರಲಿಲ್ಲ ಶಿವಗ ಕರುಣಾ
ಮಾಡ್ಯಾರೋ ಮಣ್ಣಾ | ತಂದ ಸರೂ ಸ್ವಾಮಾನಾ | ಸ್ವರ್ಗಕ ಹ್ವಾದರಣ್ಣಾ
ಏರು || ದುಃಖ ಶೋಕ ಮಾಡೀತ ತ್ರಿಲೋಕ
ಹೆಂತಾ ಹುಲಿ ಹ್ವಾದಾ || ತೋಡಿ ಪದಾ ನಿಂದಾ || ೮ ||

ಗುರು ದಸ್ತಗೀರ ಹೀಂಗ ವರವ ಕೊಟ್ವಾರೋ
ಸುರು ಹಿಡಿತೇನಿ ಅವರ ಪಾದಾ ಕೊಟ್ವಾ ಸರೂ ಬೇದಾ
ಕರುಣುಳ್ಳ ಕೇಸು ಪೀರಾ | ಆದಾನೋ ಸಹಕಾರಾ
ನಾಗೂ-ಗೌಸೂರ ಪೂರಾ | ವಿದ್ಯೆ ಕೊಟ್ಟ ಎದಿಗಾರಾ
ತಗೋ ನಿನ್ನ ತೋಡಿ | ಕಂತ್ರಿ ಪದಾ ಏನ ಹಾಡಿ
ಮಾರಿ ತಪ್ಪಿಸಿ ಓಡಿ | ಜೋಡಿ ಗೆಳೆಯರು ಕೂಡಿ
ಏರು || ಲಾಲ ಡೋಂಗ್ರಿ ಹಾಡಿ ಹೇಳ್ಯಾರೋ ಚಂದಾ
ತೋಡಿ ಪದಾ ನಿಂದಾ || ಪಲ್ಲವಿ || || ೯ ||

* * *

## ೬. ಕರ್ಬಲಾದಡವಿಯಲ್ಲಿ ಇಮಾಮ ಹುಸೇನಾ

ನೆರೆದ ಸಭಾಕ ಕರ ಮುಗಿದು ಹೇಳತೇನಿ
ವಿನಂತಿ ವಿಘ್ನಾಪಾನ ಆಲಿಸರಿ ಇನ್ನಾ ||
ಪ್ರಾರಂಭ ಮಾಡುವೆ ಹೊಂದಿವಸ ನಾನು ಪಂಚಾತನರನಾ
ಇಮಾಮ ಹುಸೇನ ಕರ್ಬಲದೊಳಗೆ ಮಾಡಿದಾರ್ರಿ ಕದನಾ
ಹಾ ಹಾ ಹೇಳುವೆ ಬಯಾನಾ || ೧ ||

ಪತ್ರ ಬರೆದ ಯಜಿದ ಮುಡದಾರ ತಿಳಿಸಿ ವರ್ತಮಾನಾ
ಸ್ವಾಮಿ ಶರಣರ ನಾಮವನ್ನ ಸರಿಸಮಾನ ತಿಳಿದು ಬೈಯಾತ ಮಾಡೋ ನೀನಾ
ಒಲ್ಲೆನೆಂದರೆ ಸಾಹಸಾ ಇದ್ದರೆ ಮಾಡು ಎನ್ನೊಳು ಕದನಾ
ಹಾ ಹಾ | ಸಿದ್ದಮಾಡೋ ಸೈನ್ಯಾ || ೨ ||

ಪತ್ತರ ಓದಿ ಮತಲಬ ತಿಳಿದಾರೋ
ಇಮಾಮ ಹುಸೇನ ಸೈನ್ಯಾ ತಯಾರ ಆಗ್ಯಾನಾ
ಮಕ್ಕೆಶರೀಫಕ ಹೋಗಬೇಕೆಂದು ಮನದೊಳಗೆ ಯೋಚನಾ
ಸತಿ ಸುತ ಹಿತರು ಬಂಧು ಆಪ್ತಜನ ಕರಕೊಂಡು ನಡದಾನ
ಹಾ ಹಾ ಬಿಟ್ವಾರೋ ಮದೀನಾ || ೩ ||

ಕರ್ಬಲದಡಿವಾಗ ಎದುರಿಗೆ ಬಂದು ನಿಂತ ಶುಮ್ರಲಹಿನಾ ||
ತಗೊಂಡು ತನ್ನ ಸೈನ್ಯಾ ಪರಹತ್ ಎಂಬೊ ನದಿ ನೀರಿಗೆ ಪೈರ್ಯಾ ಇಡಿಶ್ಯಾನ

ನೀರು ಕುಡಿಯಲಾಕ ಕೊಡಬ್ಯಾಡರಿ ಇಮಾಮ ಹುಸೇನಾ
ಹಾ ಹಾ ಅಂತಾ ಮಾಡ್ಯಾನೋ ಆಜ್ಞಾ || ೪ ||

ಕರ್ಬಲ ಅಂಬೋದು ನೋಡರಿ ಘೋರ ಕಾನನಾ ಪಕ್ಷಿಗಳೇ ಶೂನ್ಯಾ
ಉಸುಗು ರೇತಿಮಣ್ಣು ಕಲ್ಲುಗಳು ಇವೇ ಇರುವವು ಘನಾ
ನೆರಳಿಗೆ ಹೋಗಿ ಕುಂತೇನಂದರ ಇಲ್ಲರಿ ಗಿಡಗಳ ಕೂನಾ |
ಹಾ ಹಾ ಎಂತಾ ಕಾನನಾ || ೫ ||

ನೀರು ಕಾಣದೆ ಲಡಾಯಿ ಮಾಡಿ ಮಡಿದು ಹೋಯಿತೊ ಜನಾ
ಇಮಾಮ ಹುಸನ್ಯೆನಾ ಚಿಕ್ಕಮಗಾ ಅಸ್ಗರ ಅಲಿ ಇದ್ದಾ ಮೋಹದ ರತ್ನಾ
ನೀರು ಕಾಣದೆ ತುಟಿಯು ಒಣಗಿ ಆದರೋ ನಿತ್ರಾಣಾ
ಹಾ ಹಾ ಆರು ತಿಂಗಳದವನಾ || ೬ ||

ಮಗಾ ಮರಗುವದು ನೋಡಿ ತಾಳಲಾರದೆ ಇಮಾಮ ಹುಸನ್ಯೆನಾ
ತಗೊಂಡಾ ಕೂಸಿನಾ ನದಿಗೆ ಹೋಗಿ ನೀರು ಕೇಳಿದರೆ ಪಾಪಿ ಯಜೀದನಾ
ಸಣ್ಣ ಶಿಶುವು ನೀರು ಕಾಣದೆ ಹೋಗತಾದೆ ಪ್ರಾಣಾ
ಹಾ ಹಾ ಮಾಡರಿ ರಕ್ಷಣಾ || ೭ ||

ಎಷ್ಟು ಕೇಳಿದರ ಬರಲಿಲ್ಲ ಅಂತಕರಣ ಬಿಟ್ಟಾರೋ ಬಾಣಾ
ಕೂಸಿನ ಕುತ್ತಿಗೆಗೆ ಗುರಿಯಿಟ್ಟು ಹೊಡೆದಾನೋ ಶುಮರಲ್ಯೆನಾ
ಕುತ್ತಿಗೆ ಹೋಗಿ ಮುಂಡಿಗಿ ತಗಲೀತು ಇಮಾಮ ಹುಸನ್ಯೆನಾ
ಹಾಹಾ ಹೋಯಿತು ಕೂಸಿನ ಪ್ರಾಣಾ || ೮ ||

ದುಃಖ ಮಾಡೂತ ಇಮಾಮ ಹುಸೇನ ಮನಿಗೆ ಬಂದ ತಾನಾ |
ಕರೆದು ಕಾಂತಿಗೆ ಕೂಸಿನ ಬೀಬಿಬಾನು ಕೈಯಲ್ಲಿ ಕೊಟ್ಟ ಶರಣಾ
ಶಿವನ ಹೆಸರ ಮೇಲೆ ಬಿಟ್ಟ ಹೊಂಟರೊ ಹೆಂಡರು ಮಕ್ಕಳನಾ
ಹಾ ಹಾ ಮಾಡಲಿಕ್ಕೆ ಕದನಾ || ೯ ||

ಮೈಯೊಳು ಚಿಲಕಾ ಕಪನಿ ಅಂಗಿ ಕುದುರಿ ಪಂಚವರಣಾ ಏರಿದ್ದಾರೋ ಶರಣಾ
ಘರ ಘರ ಘರ ತಿರುವುತ ಪೇರಿಹೊಕ್ಕ ಯಜೀದನ ಸೈನ್ಯಾ
ಖಡ ಖಡ ಖಡ ತೋಮ ಎಂಬಂತ ಸಿಡಿಲಿನ ಗರ್ಜನಾ
ಹಾ ಹಾ ಮಾಡುತ್ತಾ ಹೊಕ್ಕಾ ಸೈನ್ಯಾ || ೧೦ ||

ಚರ ಚರ ಚರ ಕೊಯ್ಯುತ ನಡಿದಾನೋ ಯಜೀದನ ಸೈನ್ಯಾ ಕೈಲಾಸಕ ಜನಾ
ತರ್ ತರ್ ತರ್ ನಡಗಲಿಕ್ಕೆ ಹತ್ತಿದ್ದ ಶುಮರಲ್ಯೆನಾ
ತಲ್ ಮಲ್ ತಲ್ ಮಲ್ ಆಗಿ ಹೋಯಿತೋ ಯಜೀದನ ಸೈನ್ಯಾ
ಹಾ ಹಾ ಆದರ ಫಲವೇನಾ || ೧೧ ||

ಕುದುರಿ ಕಾಲಿನ ಧೂಳಿನಿಂದ ಮುಚ್ಚಿಹೋಯಿತೋ ರಣಾ | ಅಡಗಿದಾವೋ ಕಿರಣಾ
ನೆತ್ತರದೊಳಗ ಹರಿದು ಹೋದವು ಕೈಲಾಸಕ ಹೆಣಾ
ಕಾಲ ಬಂದು ಒದಗಿತೋ ಸ್ವಾಮಿ ಶರಣರನಾ
ಹಾ ಹಾ ಚಿತ್ತೈಸರಿ ಇನ್ನಾ || ೧೨ ||

ಜನಾ ಮಡಿವದು ನೋಡಿ ಸೈರಿಸಲಾರದೆ ಸಾಕ್ಷಾತ್ ಭಗವಾನಾ ಇಮಾಮ ಹುಸನ್ಯೆನಾ
ಚಿಕ್ಕಂದಿನಲ್ಲಿ ಕರ್ಬಲದಡಿವ್ಯಾಗ ಕೊಡತೇನಂತ ಪ್ರಾಣಾ
ಜನಾ ಕೊಲ್ಲತೀರಿ ವ್ಯರ್ಥವಾಗಿ ಮೊದಲ ಕೊಟ್ಟ ವಚನಾ
ಹಾ ಹಾ ಇದು ಏನ ಕಾರಣಾ || ೧೩ ||

ಶಿವನ ವಾಕ್ಯ ಕೇಳಿಸಿ ಜಿದ್ದಾ ಮಾಡಿದಾರೋ ಶರಣಾ | ಶುಮರಲಹಿನಾ |
ತಕ್ಷಣದಲ್ಲಿ ತೆಲಿಯ ಕೊದಾನೊ ಇಮಾಮ ಹುಸನ್ಯೆನಾ
ಮುಹ್ಮದ ಹನಿಫಶ್ಯಾನ ಕೈಯಲ್ಲಿ ಕಡಿಗೆ ಸಾಯತಾನೋ ಶುಮ್ರಲಹಿನಾ
ಹಾ ಹಾ ಮುಗಿದಿತೊ ಬಯ್ಯಾನಾ || ೧೪ ||

ಸುತ್ತ ದೇಶದೊಳು ಮುತ್ತ ಬಾಗಲಕೋಟಿ ಜಾಗಿಹುದೋ ಚೈನಾ
ಮಡ್ಡಿಪೀರಾನ | ಹುಸೇನಮಿಯ್ಯಾನ ಶಿಷ್ಯನ ಹಾಡಿಕಿ ಸುರದಂಗ ರತನಾ
ಸಭಾದೊಳಗ ನಿಂತ ಹಾಡತಾನೋ ಗರೀಬ ಹುಸೇನಾ
ಹಾ ಹಾ ಬಡಿದಂಗೆ ಬಾಣಾ || ೧೫ ||

* * *

---

[1] * ಎಲ್ಲೆಲ್ಲಿ ಸಿಗಲಿಲ್ಲೊ ಮದುವಿ ಹೆಣ್ಣಾ – ಮೂಲ ಕಥೆಗೆ ವಿರುದ್ಧವಾದ ಅಭಿಪ್ರಾಯ.

## ೭. ಇಮಾಮ ಹುಸೇನ ಮತ್ತು ಅಸ್ಗರ ಅಲಿ ಪದಾ

ಇಮಾಮ ಹುಸೇನಿ ತನ್ನ ಮಗನೀಗಾ
ತಗೊಂಡು ಹೋದನು ನೀರ ಹೋಳಿಮ್ಯಾಗಾ || ಪಲ್ಲವಿ ||

ಹೋಗಿ ಕೇಳತಾನಯಜೀದಗಾ
ಮೂರು ದಿವಸಾತು ನೀರಿಲ್ಲೋ ಇವಗಾ
ನೀರ ಕೊಡರಿ ತುಸು ಕೂಸಿಗಾ
ಜೀವ ಹೋಗತದರಿ ಈ ಚಣಚಾಗ || ೧ ||

ಸಣ್ಣ ಕೂಸ ಇದು ಎಲ್ಲರಿಗಾ
ತಿಳಿಯಿರಿ ನಿಮ್ಮ ಹೊಟ್ಟಿಲಿ ಹುಟ್ಟಿದಂಗಾ

ಬೇಕಾದಷ್ಟು ಮಾಡರಿ ನಮಗಾ
ಉಳಿಸಿ ಕೊಳ್ಳರಿ ಈ ಕೂಸಿಗಾ
ಕುಡಸೇನಂದರ ತಾಯಿ ಎದಿಯಾಗ
ಹಾಲಿಲ್ದೆ ಹೆಂತಾಹೊತ್ಬಂತೊ ನಮಗಾ || ೧ ||

ಕರುಣಾ ಬರಲಿಲ್ಲೊ ಯಜೀದಗಾ
ಹುಕಂ ಕೊಟ್ಟಾನೊ ತನ್ನ ದಂಡಿಗಾ
ವೈರಿ ಬಂದ ನಿಂತಾ ಎದುರಿಗಾ
ನೀರ ಕೊಡಬ್ಯಾಡ ಅಂತಾನೊ ಇವಗಾ
ಇಂಥ ಶಬ್ದಾ ಕೇಳಿ ಆ ಸ್ವಾಮೀಗಾ
ಗುಂಡು ಬಡಿದಂಗಾಯಿತ್ರಿ ಅವನ ಎದಿಯಾಗಾ || ೩ ||

ನೀರು ತಂದಿದಾನೊ ಕಣ್ಣೀರಾ
ನೋಡಿ ಅಂತಾನೊ ಸ್ವಾಮಿ ಮುಗಿಲಿಗಾ
ಹೆಂತ ಹೊತ್ತು ಬಂತರಿ ನಮಗಾ
ನೋಡಿ ಮಿಡುಕಿದೆವೋ ನೀರಿಗಾ
ಮುದ್ದತ್ತ ಆಗೊ ಈ ಹೊತ್ತಿಗಾ
ತ್ವಾಡೆ ನೀರ ಚೆಲ್ಲೊ ಕರ್ಬಲದಾಗಾ || ೪ ||

ಮುಗುಲ ಹೇಳತಾದೊ ಸ್ವಾಮಿಗಾ
ಮೀರುದಿಲ್ಲೋ ನಿಮ್ಮ ವಚನ ಈಗಾ
ಕರಕೊಂಡು ಒಯ್ದಾ ಶಿವನ ಎದುರಿಗಾ
ಮೋಹರಂ ಚಾಂದ ನೋಡಿದ ಮ್ಯಾಗಾ
ನೀರಚಲ್ಲೊ ಕರ್ಬಲದಾಗಾ
ಲಾಚೇರ ಆಗಿನಿ ಮಾಡಲಿ ಹ್ಯಾಂಗಾ || ೫ ||

ಇಮಾಮ ಹುಸೇನಿ ತನ್ನ ಬೆರಳಿಗಾ
ಕೊಟ್ಟಾನೊ ಅಸ್ಗರಗ ಬಾಯಾಗಾ
ಯಜೀದ ಬಾಣಾ ಹೊಡಿವಾಗಾ
ಹತ್ತಿತೋ ಕೂಸಿನ ಕೊರಳಿಗಾ
ಒಂದೇ ಗಟಗದಲ್ಲಿ ಆವಾಗ
ಜೀವಬಿಟ್ಟ ತಂದಿ ಸ್ವಾಮಿ ಬಗಲಾಗಾ || ೬ ||

ಇಮಾಮ ಹುಸೇನಿ ಸತ್ತ ಕೂಸೀಗ
ಒಯ್ದು ಕೊಟ್ಟಾನೊ ತನ್ನ ತಂಗೀಗಾ
ನೇತ್ತರ ಹತ್ತಿತೊ ಅವನ ಅಂಗಿಗಾ
ನೋಡಿ ಬವಳಿ ಬಂತೊ ಬೀಬಿಗಾ

ಎದಿ ಬಡದು ಕೇಳತಾಳೊ ಅಣ್ಣಗಾ
ಏನಾಗಿತ್ತೊ ಕೂಸಿನ ಕೊರಳಿಗಾ || ೭ ||

ಸುದ್ದಿ ಮುಟ್ಟಿತೊ ಹೋಗಿ ತಾಯಿಗಾ
ಓಡಿ ಬಂದಾಳೋ ಅರುವಿಲ್ಲದಾಂಗಾ
ನೋಡತಾಳ ಮಗನ ಮಾರಿಗಾ
ಉಸರ ಇಲ್ಲೊ ಕೈಕಾಲಾಗಾ
ಎದಿ ಒಡದು ಕೇಳತಾಳೋ ಗಂಡಗಾ
ಬಹಳ ಜ್ಯಾಕಿಲಿಂದೆ ಹೇಳಿದ್ದೆ ನಿಮ್ಮಗಾ || ೮ ||

ಯಾವ ಹೊಡದಾನೊ ಎನ್ನ ಬಾಲಕಗಾ
ಮಮತೆ ಇಲ್ಲೇನೊ ಅವನ ಹೊಟ್ಯಾಗಾ |
ನಾಳೆ ಶಿವನಲ್ಲಿ ಹೋದಾಗಾ
ಇದರ ಜವಾಬ ಕೊಡತಾನೊ ಹ್ಯಾಗಾ |
ಹೋಗಿ ಕೇಳತೇನಿ ಶಿವನೀಗಾ
ಹೊಡದಾರೊ ನನ್ನ ಸಣ್ಣ ಶಿಶಿವಿಗಾ || ೯ ||

ಆರು ತಿಂಗಳ ನನ್ನ ಅಸ್ಗರಗಾ
ತೂಗುತ್ತಿದ್ದೆ ತೊಟ್ಟಿಲದಾಗಾ
ರಾತ್ರಿ ಹಗಲು ನಾ ಇವನೀಗಾ
ಎತಗೊಂಡು ತಿರುಗಿದೆ ಬಗಲಾಗಾ
ತೆಲಿ ಬಡಿದು ಸಾಯ್ತೇನಿನಾಗುಡಿಗಾ
ಬಹಳ ಬೆಂಕಿ ಬಿದ್ದಾದ ನನ್ನ ಹೊಟ್ಯಾಗಾ || ೧೦ ||

ಹಾಲ ಬಂದಾವ ನನ್ನ ಎದಿಯಾಗಾ
ಹೋಗಿ ಕುಡಿಸಲಿ ಇನ್ಯಾರಿಗಾ
ಮುತ್ತಿನಂತ ಈ ಬಾಲಾಗಾ
ಹ್ಯಾಂಗ ಇಡಬೇಕೋ ಮಣ್ಣಾಗಾ
ಮುದ್ದ ಕೊಡುತ್ತಿದ್ದೆನೊ ಶಿಶುವಿಗಾ
ಕೂಸಿಲ್ಲದೆ ಯಾಳೆಗಳಿಯಲಿ ಹ್ಯಾಂಗಾ || ೧೧ ||

ಕೇಳರಿ ಮಾಗಾಂವ ತಾಲೂಕದಾಗ
ಬೇವನೂರ ಹೆಸರು ದೇಶದ ಮ್ಯಾಗಾ
ಮೌಲಾಲಿ ಸಾಹೇಬ ಮತಿ ಕೊಟ್ಟ ನಮಗಾ
ಕುಂತ ಕುತಬಿ ಕಟ್ಟಿಯ ಮ್ಯಾಗಾ
ಕಾಕಿ ಗುರುವು ಹೇಳಿದ ಹೀಂಗಾ
ಬಾಳ ಜುಲ್ಮಿ ಮಾಡ್ಯಾರ ಶರಣರ ಮ್ಯಾಗಾ || ೧೨ ||

* * *

## ೮. ಅಕಬರ ಅಲಿ ಜಂಗಿನ ಪದಾ

ಅಕಬರ ಅಲಿ ಸಣ್ಣ ಕೂಸಿನ ಜಂಗ ಕೇಳರಿ ನಿರ್ಮಲಾ
ಹಾ ಹಾ ಒಂಬತ್ತು ವರ್ಷದವ ಜಂಗಿಗೆ ಹೋದೇನಂತಾನಾ ಕೇಳವಲ್ಲಾ |
ಹಟಮಾಡಿ ನಿಂತಾನಾ ಸಣ್ಣ ಬಾಲಾ ತಾಯಿ ಮಾತ ಕೇಳವಲ್ಲಾ || ೧ ||

ತಾಯಿ ಅಂತಾಳೋ ನನ್ನ ಮಾತು ಮೀರಿದರ ಏನು ಫಲವಿಲ್ಲಾ |
ತಾಯಿಯ ಪಾದದ ಮೇಲಾ ಇಟ್ಟಾನೊ ಹಣೆಯ ರಣಕಮಲಾ ||
ಕೈಯವೊಳಗ ಹಿಡಿದಾನೊ ಬಾಣಬಿಲ್ಲಾ | ಬೆನ್ನ ಮೇಲೆ ಹಚ್ಚಿದ ತ್ರಿಶೂಲಾ || ೨ ||

ಯಜೀದ ಮರವಾನಾ ಮದದಾಗ ಅಂತಾನ ವಹಾವಾರೆ ಇವನ ಡೌಲಾ ||
ಯಜೀದ ಬಂದು ಎದುರಿಗೆ ನಿಂತಾರ ಮಾಡಿ ಎದಿಯ ಕಲ್ಲಾ ||
ಅಕಬರ ಹಿಡಿದಾನೋ ಡೌಲಾ | ಏಟಿಗೊಂದು ಮಾಡಿದ ಮಣ್ಣು ಪಾಲಾ || ೩ ||

ಹುಸೇನ ಸಾಹೇಬಾ ತನ್ನ ಮಗನಿಗೆ ಹೇಳತಾನೋ ಬ್ಯಾಡೋ ಕರ್ಬಲಾ |
ಜೈನುಲ್ಲಾಬೇದೀನ ಅಂದರೋ ಅಕಬರ ಆದ ಅಡವಿ  ಪಾಲಾ |
ಕುಡಿಯಲಿಕ್ಕ ನೀರ ಸಿಗೋಣಿಲ್ಲಾ | ಕುಂದರಲಾಕ ನೆರಳೆ ಇರಲಿಲ್ಲಾ  || ೪ ||

ಆಕಾಶ ಭೂಮಿ ತರತರ ನಡಗಿ ಎರಗಿದಂಗ ಸಿಡಿಲಾ ||
ಎಷ್ಟಂತ ತಾಳಿತೋ ಕೂಸಿನ ಜನ್ಮ ಶಿವ ಮುನಿದನಲ್ಲಾ |
ಅದೇ ಕ್ಷಣಕ ಬಿದ್ದಿತ್ತೊ ಕತ್ತಲಾ | ಮುಣಗಿದಂಗ ಆದಿತ್ತೊ ಹರಗೋಲಾ || ೫ ||

ಶುಮರಲೈನಾ ತರಿಸಿದಲೈನಾ ಲೆಕ್ಕವಿದ್ದಿದ್ದಿಲ್ಲಾ |
ಹಾ ಹಾ | ಬಾಗಲಕೋಟೆ ಮದ್ದಿಪೀರಾನ ದಾರಿ ತಿಳಿದಿತ್ತೊ ಅಸಲಾ
ಕುಂತ ಜನ ಕೇಳತಾರೋ ಕುಸಿಯಾಲಾ | ಹುಸೇನಮಿಯ್ಯಾ ತಗದಿದ್ದ ಈ ಅಕಲಾ || ೬ ||

ಯಾವ ನಿನಗ ಸರ್ವಸಾಕ್ಷಾತ್ ಗುರುವು ಸಿಕ್ಕಿಲ್ಲಾ ಅರುವು ಹೇಳುದಕ
ಪಾದಹಿಡಿ ಗುರುಬೇದ ಹೇಳತೀನಿ ಆದ ಕೌತೂಕ
ಜಿದ್ದ ಹಾಕಬೇಡ ಉದ್ದ ನೀರಿಗೆ ಬಿದ್ದ ಸಾಯುದಕ || ೭ ||

* * *

## ೯. ಅಸ್ಗರಲಿ ತಾಯಿಯ ದುಃಖದ ಪದಾ

ದೈವಾ ಕೇಳರಿ ಇದು ಕತಿ ಒಂದಾ |
ಹೇಳತೀನಿ ದುಃಖಾ ಹೆಚ್ಚಿಂದಾ || ಪಲ್ಲವಿ ||

ಬಡಿತೋ ಬಾಣಾ ಹೋಯಿತೋ ಪ್ರಾಣಾ ಅಸ್ಗರಂದಾ
ತಾಯಿ ಓಡಿ ಓಡಿ ಓಡಿ ಓಡಿ ಓಡಿ ಬಂದಾ
ಮಣ್ಣ ತೂರಿ ಕಬರಾ ಹಾರಿ ಮ್ಯಾಲ ಬಿದ್ದಾ
ದುಃಖ ಮಾಡಿ ಅಳತಾಳೊ ಹಾಯ್ ಹಾಯ್ ಕಂದಾ || ೧ ||

ನಾನಾ ಪರಿಲಿಂದ ಸಲುವಿದ ಕಂದಾ
ನ್ಯಾಯವೇನು ಅಗಲಿ ಹೋಗುವದಾ ||
ತಿಳಿಯಲಿಲ್ಲೊ ಮುಂದಿನಗತಿ ಆಗುವದಾ |
ಬಂತೊ ಮಾಯಾ ಮಾಯಾ ಮಾಯಾ ಮಾಯಾ ಮಾಯಾ ಲಿಂದಾ ||
ಹೊತ್ತು ಹೆಂಗ ಕಳಿಯಲಿ ಕೂಸಿಲ್ಲದಾ
ವ್ಯರ್ಥ ಸಾಯತೇನಿ ಮಗ ಎದಿ ಬಡದಾ || ೨ ||

ನೋಡೋ ಅಸ್ಗರ ತುಸು ಕಣ್ಣ ತೆರಿದಾ |
ನಾ ಏನ ಅಂದಿಲ್ಲೊ ಮಲಗಿದಿ ಮುನಿದಾ ||
ಬಹಳ ಹೊತ್ತಾಯಿತು ಮಲಿ ಕುಡಿವಲ್ಲದಾ |
ಲಗು ಏಳೋ ಏಳೋ ಏಳೋ ಏಳೋ ಏಳೋ ಕಂದಾ ||
ಕಣ್ಮುಚ್ಚಿ ಮಲಗಿದಿ ಕುದ್ಯಾವಿಲ್ಲದಾ |
ಇದು ಎನ್ನ ಜೀವಕೆ ಅತಿಯಾದುದಾ || ೩ ||

ಅಂಗಿ ಟೊಪ್ಪಿಗಿ ತಂದೇನಿ ಕಂದಾ ಮಕಮಲ್ಲದಾ
ಇದು ಯಾರಿಗಿ ಒಯ್ದು ತೊಡಿಸಲಿ ಒಗದಾ ||
ಹಾಲ್ಗಡಗಾ ಒಪ್ಪುತ್ತಾವೊ ಬಹಳ ಚಂದಾ |
ಬಿಟ್ಟು ಹ್ವಾದೆ, ಹ್ವಾದೆ ಹ್ವಾದೆ ಹ್ವಾದೆ ಹ್ವಾದೆ ಹ್ವಾದೆ ಗೆದ್ದಾ
ಸಾರ್ಥಕ ಆಗಲಿಲ್ಲ ಹುಟ್ಟಿ ಬಂದಾ
ಇಷ್ಟೇ ಬಂದಿದ್ದೇನು ಶಿವನಲ್ಲಿ ಪಡದಾ || ೪ ||

ಆರು ತಿಂಗಳ ಉಮರ ನಿಂದಾ |
ರೂಪ ನೋಡಿದಾರದೊ ಏನ ಚಂದಾ
ಹಲಬುತ್ತಾರೊ ನಿಂತು ಎಲ್ಲರೂ ಬಂದಾ
ಮಾತು ಆಡೋ ಆಡೋ ಆಡೋ ಆಡೋ ಆಡೋ ಕಂದಾ
ಬಾಯಿಮುಚ್ಚಿ ಮಲಗಿದಿ ಮುಂದ ಗಫ್ಲೊಡದಾ |
ನನಗ್ಯಾಕೋ ಬರಲಿಲ್ಲೊ ನಿನ್ನ ಪಾಲಿಂದಾ || ೫ ||

ಎಲ್ಲಿ ಬೀಸಾಕಲಿ ತೊಟ್ಟಿಲ ಒಯ್ದು |
ಮಲಿಹಾಲ ಯಾರ ಕುಡಿದಾರೊ ಬಂದಾ ||
ಯಾರಿಗೆ ಕರಿಯಲಿ ಅಸ್ಗರ ಎಂದಾ
ಲಗು ಬಾರೋ ಬಾರೋ ಬಾರೋ ಬಾರೋ ಬಾರೋ ಕಂದಾ

ಮರ್ತ್ಯದೊಳಗ ನೀನು ಹುಟ್ಟಿ ಬಂದಾ
ಬಿಟ್ಟು ಹೋಗಿ ಕುತಿದ್ದೋ ನಿನ್ನ ಮುತ್ಯಾನ ಮುಂದಾ || || ೬ ||

ದೇವನೂರ ಊರ ಮರ್ತ್ಯಕ ಬೆಳದಾ | ಕುಂತಾರಿ ಮೌಲಾಲಿ ದಯದಿಂದಾ
ಆಗುತ್ತದೋ ಮೊಹರಂ ಇಲ್ಲಿ ಬಾಳ ಚಂದಾ ||
ಒಳ್ಳೆ ದುಂದಾ ದುಂದಾ ದುಂದಾ ದುಂದಾ ದುಂದಾ ಲಿಂದಾ |
ಮುತ್ತು ಪೋಣಿಸಿದಂಗೆ ಅಕ್ಷರ ಸುದ್ದಾ || ೭ ||

* * *

## ೧೦. ಬಾನುಬೀಯ ದುಃಖದ ಪದಾ

ಬಾನುಬೀ ಅಳತಾಳೊ ಅಲಿ ಅಸ್ಗರ
ಹ್ಯಾಂಗೆ ಮರಿಯಾಲೆ ಮಗನೆ ನಿನ್ನ ಹೆಸರ
ಹೆಂತ ಹೊತ್ತು ಬಂದಿತೋ ಮಗನೆ ಕೆಟ್ಟ ಗ್ರಾಚಾರ
ಏನು ಮಾಡಲಿ ನಾನು  ಚಲುವ ಸುಂದರ || ೧ ||

ಮದೀನಾದಲ್ಲಿ ಹುಟ್ಟಿದಿ ಮಗನೆ ರೂಪದಲ್ಲಿ ಸುಂದರ
ಆರು ತಿಂಗಳು ಆಗಲಿಲ್ಲೊ ಮಗನೆ ಬಂದಿತ್ತೊ ಅತಂತರ
ಯಜೀದ ಖೋಡಿ  ಅಬ್ದುಲ್ಲಾನು ಬರೆದಿದ್ದಾ ಪತ್ತರ
ನೆಂಬಿಗಿಟ್ಟು ದಂಡು ದರಬಾರ ಮಡದ್ಹೋಯ್ತು ಸಿಂತರ || ೨ ||

ಕರ್ಬಲಂಬುದು ಆಗೇದ ಅಡವಿ ಕೆಟ್ಟ ಕಾಂತರ
ಎಪ್ಪತ್ತಗಾವುದ ಸೂತರಿಲ್ಲದೆ ಹುಸನ್ಯೆನಾ ಮಂತರ
ಒಂಟಿ ಕುದರಿ ದಂಡು ದರಬಾರ ಹಾರಿತ್ತೊ ಎಚ್ಚರ
ಕಟಗಿ ಕಡಿದು ಡೇರ್ಯಾ ಹೊಡದಾರೊ ಗಿಡದಲ್ಲಿ ನೆತ್ತರ || ೩ ||

ಹತ್ತು ದಿನಾ ನೀರು ಇಲ್ಲದೆ ಆಗಿತ್ತೊ ಕತಂತರ
ಬಾಲನ ಸಲುವಾಗಿ ನೀರು ಬೇಡಿದರೆ ಕೊಡಲಿಲ್ಲೊ ಕಾಫೀರ
ಬಾಣಾ ಬಡದು ಗಂಟಲು ಒಡಿದು ಆಯಿತೋ ಚದುರ ಚದುರ
ನೀರ ಇಲ್ಲದೆ ನೆರೆದ ದಂಡು ಮಡಿದು ಹೋಯ್ತು ಜುಮ್ಮರ || ೪ ||

ನೀರ ಇಲ್ಲದೆ ನೆರೆದ ದಂಡು ಮಡಿದು ಹೋಯ್ತು ಜುಮ್ಮರ
ನನ್ನ ಕೊರಳಲ್ಲಿ ಕಟ್ಟಿದ ಮಂತರ ಹಾರಿಹೋಯ್ತು ಅತಂತರ
ಗಾಳಿಗೆ ಹಾರಿಹೋಯ್ತು ನನ್ನ ಜೀವದ ಮಂತರ
ಹೆಂತ ವನದೇಶಾ ಬಂದಿತ್ತೊ ಮಗನೆ ಹರಿಹರ ಶಂಕರಾ || ೫ ||

ಎತ್ತ ಹೋಗಿ ಹುಡಕಾಲಿ ಮಗನೆ ಬೆಳದಿಂಗಳ ಪುತ್ತರ
ದೈವದಲ್ಲಿ ಬಂದು ಮಡದಾ ಬಾಲಾ ಅಸ್ಗರಾ
ದಯಾಮಾಡಿ ಕಳವಿ ಕೊಡರಿ ಒಡ್ಡೇನೀ ಪದರಾ
ನನ್ನ ಪಂಜರದೊಳಗಿನ ಗಿಳಿಯಿ ಹಾರಿಹೋಯ್ತು ಬೆದರ || ೬ ||

ನನ್ನ ಪಾಲಿಗೆ ಮುಣುಗಿಹೋಯ್ತು ಬಿದಿಗಿಯಾ ಚಂದರ
ಮುತ್ತು ಹವಳಾ ಹರದು ಹೋಯ್ತು ನಿಂತೇವು ಅತಂತರ
ಎಲ್ಲಿ ಹೋಗಿ ಸಾಯಲಿ ಮಗನೆ ನಾನು ನಿರಂತರ
ಹುಲ್ಲಿನ ಹಾಸಿಗಿ ಮ್ಯಾಲೆ ಮಲಗುವನು ಬರೆದಿತ್ತೊಗಾರಂತರ || ೭ ||

ಕರ್ಬಲದೊಳಗ ಮದುವಿ ಆಗುವುದು ಬರೆದಿತ್ತೊ ನಕ್ಷತ್ತರ
ಮೊಹರಂ ತಿಂಗಳ ಗಮ್ಮ ಮಾಡುವುದು ಕೇಳರಿ ಕಾತಂತರ
ಸಿಣ್ಣೂರ ಒಳಗೆ ದಾಸಾ ಹುಸೇನಿ ಸಾಹೇಬ ಇರತಾನೋ ಕಿಂಕರ
ಕಾಕಿ ಗುರುವಿನ ಸೇವಾ ಮಾಡತೀವರಿ ನಾವು ವರ್ಷಾಂತರ || ೮ ||

* * *

## ೧೧. ಇಮಾಮ ಹುಸೇನರ ಆತ್ಮಾರ್ಪಣೆ

ಕೂಡಿರಿ ಬಂದ ಆನಂದಾ | ದಯಾ ಇರಲಿ ದೈವಾ ನಿಮ್ಮದಾ ||
ಏರು || ಬಂದೇನಿ ದೂರದಿಂದಾ | ಹಾಡುವೆ ಪ್ರೇಮದಿಂದಾ
ಸಂತೋಷದಿಂದಾ ಇಂದಾ | ಕುಂತ ಕೇಳರಿ ನೀವು ಚಂದಾ |
ಕರಜೋಡಿಸಿ ಬೇಡುವೆ ನಾ ಇಂದಾ | ಪ್ರೇಮ ಇರಲಿ ಅಣ್ಣಾ ನಿಮ್ಮದಾ || ೧ ||

ಇ|| ಹೇಳುವೆ ಬಯಾನ ನಾ ಒಂದಾ | ಚಿತ್ತವಿಟ್ಟು ಕೇಳರಿ ದೈವಾ ಮುಂದಾ
ದುಷ್ಟ ಯಜೀದ ವೃದ್ಧಾ | ಹುಸೇನಗ ಮೋಸ ಮಾಡಿದಾ ||
ಶರಣರಿಗೆ ಪತ್ರ ಬರದಾ | ಕಲ್ಮಾ ಓದುವೆ ನಾನು ಇಂದ |
ದಯಮಾಡಿ ಬರಬೇಕರಿ ಇಂದಾ | ಉದ್ಧಾರ ಆಗುವೆ ನಾನು ಇಂದಾ || ೨ ||

ಇ|| ಕುಶಿಲಿಂದಾ ಪತ್ರ ಓದಿದಾ | ಹುಸೇನ ಹೊಂಟ ಆಗಿ ಆನಂದ
ಕುದುರಿಗೆ ಜೀನ ಬಿಗಿದಾ | ಡಾಲ ಪಟ್ಟೆ ಕೈಯಲ್ಲಿ ಹಿಡಿದಾ |
ಹಸರ ನಿಶಾನಿ ಮುಂದಾ | ಹಚ್ಚಿದೊ ಕುದುರಿಗೆ ಚಂದಾ
ನಗಾರಿ ನೌಬತ್ತ ಆನಂದಾ | ದಂಡ ಹೊಂಟಿತ್ತೊ ವೇಗದಿಂದ || ೩ ||

ಇ|| ಬಿಲ್ಲುಬಾಣಾ ಹೆಗಲಿಗೆ ಏನು ಚಂದಾ | ಬಿಟ್ಟಿದ್ರೋ ಕುದುರಿಗೆ ರೌಸದಿಂದಾ
ಏ || ದಂಡ ಹೋಗಿ ಕೂಫೇದ ಮುಂದಾ | ನಿಂತಿತೋ ಆನಂದದಿಂದಾ |
ಕೂಫೇದ ಊರ ಮುಂದಾ | ಡೇರೆ ಹೊಡದಾರೋ ಚಂದಾ |
ಯಜೀದ ಮಸಲತ ಮಾಡಿದಾ | ನೀರಿಗೆ ಕಾವಲಾ ಇಟ್ಟಿದ್ದಾ || ೪ ||

ಇ|| ಸುತ್ತೆಲ್ಲಾ ದಂಡ ಇಟ್ಟಿದ್ದಾ | ಹುಸೇನ ನೋಡಿ ಗಾಬವಾದಾ |
ಏರು || ದಂಡಿಗೆ ನೀರವಿಲ್ಲಾ | ನೀರಡಸಿ ಆರಿತೊ ಗಂಟಲಾ
ರಣಗಂಬ ಹೂಡ್ಯಾರಲ್ಲಾ | ಲಡಾಯಿಕ ನಿಂತಾರಲ್ಲಾ
ಹುಸೇನ ತಲವಾರ ಹಿರಿದಾ | ವೈರಿಯ ಮೇಲೆ ಕೂಗ ಹೊಡದಾ || ೫ ||

ಇ|| ಮೋಸಮಾಡಿ ಪತ್ರ ಬರೆದಾ || ಕರೆಸಿದ್ದೆಲ್ಲೋ ಬಾರೊ ನನ್ನ ಮುಂದಾ
ಏರು || ವೈರಿಯ ದಂಡು ಪೂರಾ | ಹುಸೇನಗ ಹಾಕಿತೊ ಗೇರಾ
ಲಢಾಯಿ ನಡೆದಿತೊ ಜೋರಾ || ಹರಿಸಿತ್ತೋ ರಣದಾಗ ನೆತ್ತರಾ
ಹುಸೇನ ತಲವಾರದಿಂದಾ | ಕೆಡವತಿದ್ದಾ ವೈರಿಯ ದಂಡ ಕಡಿದಾ || ೬ ||

ಇ|| ವೈರಿಯ ದಂಡ ಸಾಗಿತೋ ಮುಂದಾ | ಗಾಬವಾಗಿ ಯಜೀದಾ ಕಾಲತಗಾದಾ |
ಏರು | ನಡಗತಿತ್ತೋ ಭೂಮಿ ಗಗನಾ | ಕಾಣಸಿತೊ ರಕ್ತದ ವರಣಾ |
ಇತ್ತರಿ ಶುಕ್ರವಾರ ದಿನಾ | ವೈರಿಗೆ ಕೇಳ್ಯಾರೊ ಶರಣಾ |
ಲಗುಮಾಡಿ ವೈರಿ ಹೇಳಿದಾ | ಶುಕ್ರವಾರ ದಿನಾ ಐತ್ರಿ ಇಂದಾ || ೭ ||

ಇ|| ಹುಸೇನ ಕುದರಿ ಇಳಿದಾ | ನಮಾಜ ಮಾಡುವೆ ನಾನು ಇಂದಾ |
ಏರು || ಯಜೀದಗ ಅಂತಾರೊ ಶರಣಾ | ಶಿವಧ್ಯಾನಾ ಮಾಡುವೆ ನಾನಾ |
ನಮಾಜ ಮುಗಿದ ಬಳಿಕ | ಲಡಾಯಿ ಮಾಡುನೊ ಖಡಕ
ಅಲ್ಲಾ ಹೊ ಅಕ್ಬರ ಅಂದಾ | ರಖಾತ ಕಟ್ಟಿನಿಂತ್ರೊ ಮುಂದಾ || ೮ ||

ಇ|| ದುಷ್ಟಯಜೀದ ಅಂದಾ || ಸಿಕ್ಕೆಲ್ಲೊ ವೈರಿ ಇನ್ನ ಮುಂದಾ |
ಏರು|| ದಂಡ ಹಾಕಿತೊ ಗೇರಾ | ನಡಗತಿತ್ತೊ ಶಿವನ ಸದರಾ |
ನಿಜದೆದೊಳಗ ಹುಸೇನ ಹೋದಾ | ಯಜೀದ ತಲವಾರ ಹಿರಿದಾ |
ಕರುಣವಿಲ್ಲದೆ ಯಜೀದಾ | ಶರಣರ ರುಂಡ ಕೊಯ್ದು ಒಗದಾ || ೯ ||

ಇ|| ಮೋಸ ಮಾಡಿದಾ ಯಜಿದಾ | ಹೇಡಿಯ ಕೆಲಸ ಮಾಡಿ ಹ್ವಾದಾ ||
ಏರು|| ದೇವಗನ್ನಿ ಜಕ್ಕನಿಯರೆಲ್ಲಾ | ಅಳತಿದ್ರೊ ಅಳತೆಯಿಲ್ಲಾ ||
ಧರ್ಮದ ಸಲುವಾಗಿ ಪ್ರಾಣ | ಕೊಟ್ಟಾರೊ ಇಮಾಮ ಹುಸೇನ |
ಕೇಳಿದರ ಹುಸೇನರ ಸಂದಾ | ಕಣ್ಣೀರ ಬರತಾವರಿ ದೈವಾ ಇಂದಾ || ೧೦ ||

ಇ || ದುಡಿಯೊ ನೀ ಧರ್ಮದಸಿಂದಾ | ಸಿಗತೈತಿ ನಿನಗ ಪುಣ್ಯ ಮುಂದಾ
ಏರು || ಎಷ್ಟು ಕಷ್ಟ ಬಂದರು ಸಹಿತಾ | ಕುಂಡರಬ್ಯಾಡ್ರಿ ಸಾಂಬನ ಮರತಾ
ನಮಾಜ ಐದ ಹೊತ್ತ | ತಿಂಗಳ ರೋಜಾ ಮಾಡರಿ ಮೂವತ್ತ
ದಾನಧರ್ಮ ಮಾಡು ನೀನು ಇಂದಾ || ಸಿಗತೈತಿ ಸ್ವರ್ಗ ನೋಡೊ ಮುಂದಾ || ೧೧ ||

ಇ|| ನಾನೆ ಎಂಬುದು ನರಕಾ ಮುಂದಾ | ಅಹಂಕಾರ ಮಾಡಬ್ಯಾಡೊ ಇಂದಾ
ಏರು || ಬಟಕುರ್ಕಿ ನನ್ನ ಊರ | ಇರುವದು ನೋಡೊ ಜಾಹೀರಾ

ದಾವಲ ಮಲಿಕ ಪೀರಾ | ಅವರಿಗೆ ಮಲ್ಲಿಗೆ ಹಾರಾ |
ಬಂದಗಿ ಸಾಹೇಬರು ವಸ್ತಾದೊ | ಬರದಾರೊ ಕವಿ ಬಹಳ ಚಂದಾ || ೧೨ ||

* * *

## ೧೨. ಕರ್ಬಾಲಾ ರಕ್ತದ ಮಹತ್ವ

ಮನಸಿಟ್ಟ ಕೇಳರಿ ದೈವೆಲ್ಲಾ
ಏರು || ತ್ರಿಲೋಕ ಚಂದ್ರ ನಾಚುವ ಇಂದ್ರ ಸ್ವಾಮಿ ಹುಸೇನಾ
ಮಡಿದ ಬಳಿಕ ಅಳುವುದು ಭೂಮಂಡಲಾ || ೧ ||

ಜಗದಲ್ಲಿ ಬಿದ್ದಿತೋ ಕಲ್ಬಲಾ
ಏರು || ಕೇಳಿ ವರ್ತಮಾನಾ ಪಕ್ಷಿಗಳ ಮಾನಾ
ಆಗಲೆ ಅವೆಲ್ಲಾ ಕರ್ಬಲದ ಹಾದಿ ಹಿಡಿದಾವ ಮೊದಲಾ || ೨ ||

ಮರ್ತ್ಯವಾಗಿದ್ದು ಹುಸೇನ ಹಾ ಸೇಲಾ
ಏರು|| ಶರಣರನ್ನು ನೋಡಿ ಕಣ್ಣೀರು ಸುರಸ್ಯಾವರಿ
ಪಕ್ಷಿಗಳೆಲ್ಲ ಅವರ ಮೇಲೆ ಬಿದ್ದು ಮಾಡುವವು ಗುಲ್ಲಾ || ೩ ||

ರಕ್ತಾ ಮುಳುಗಿ ಕೆಂಪಗೆ ಮೈಕೈ ಎಲ್ಲಾ
ಏರು || ಆಗ ದುಃಖಾತೋ ಅತಿ ಬಿಟ್ಟಾವು ಅನ್ನ ನೀರಾ
ಆಗಲೆ ಅವು ಸಕಲಾ ಎದಿವೊಡಿದು ಆದಾವು ಅಡವಿ ಪಾಲಾ || ೪ ||

ಯಹೂದಿ ತೋಟ ಇತ್ತೋ ಸೇಲಾ
ಏರು || ಒಂದು ಪಕ್ಷಿ ಬಂದು ಅಲ್ಲಿ ಕೂಡತಿತ್ತೊ ಟೊಂಗಿ ಹಿಡಿದು ಮೇಲಾ
ತನ್ನ ರೆಕ್ಕಿ ಜಾಡಿಸಲು ರಕ್ತಾ ಬೀಳುವುದು ಮಳೆಹನಿ ಬಿಸಿಲಾ || ೫ ||

ಯಹೂದಿ ಮುಗಳು ತೋಟದಲ್ಲಿ ಇದ್ದಾಳೋ ಬಹುಕಾಲಾ
ಏರು || ಕಣ್ಣು ಕುರುಡಾಗಿ ರೋಗದಿಂದ ಇದ್ದಾಳೋ ಬಹುಕಾಲಾ || ೬ ||

ಮೆಲ್ಲಕ ನೋಡ್ಯಾಳು ಸೋಜಿಗ ಕೇಲಾ
ಏರು || ಕಣ್ಣುಗಳಲ್ಲಿ ರಕ್ತದ ಹನಿ ಬಿತ್ತು ತುರ್ತಾ
ಕಣ್ಣು ಕೈ ಕಮಲಾ ಆಗಿತ್ತು ರಕ್ತಾ ಮಾಣಿಕದ ಹೋಲಾ || ೭ ||

ತಿಕ್ಕಿ ಕೊಂಡಾಳು ರಕ್ತ ಮೈಮೇಲಾ
ಏರು || ಸುಂದರ ಚೆನ್ನಾ ಸೂರ್ಯನ ಕಿರಣಾ
ಮೊದಲಿನಕ್ಕಿಂತ ಮಿಗಿಲಾ ಆದಾಳೋ ಆಗ ಮನಕ್ಕೆ ಮಿಗಿಲಾ || ೮ ||

ತೋಟಕ್ಕೆ ಬಂದಾನೋ ಯಹೂದಿ ಕಂಗಾಲಾ
ಏರು || ಹಿಡಿಲಿಲ್ಲೋ ಗುರುತಾ ಆಗಿ ಸಂಶೆಯ ಚಿತ್ತಾ
ಆಗಿ ಚಂಚಲಾ ಕೇಳ್ಯಾನೋ ಸರ್ವ ಆದ ಮೂಲಾ || ೯ ||

ಒಡದ ಹೇಳ್ಯಾಳೋ ಸರ್ವ ಸಂಗತಿ
ಏರು || ಯಹೂದಿ ಮನಸ್ಸು ಆಗಿ ಸಂತೋಷ ಬಹಳ ಹರುಷ
ಆದ ಕಬೂಲಾ ಕಣ್ಮುಟ್ಟ ನೋಡಿ ಪಕ್ಷಿಯ ಕೇಲಾ || ೧೦ ||

ಕಲ್ಮಾ ಓದ್ಯಾನೋ ಲಾ ಇಲಾಹಾ ಇಲ್ಲಿಲ್ಲಾಹು
ಏರು|| ಮುಹ್ಮದುರ್ರಸೂಲಿಲ್ಲಾ ಪೃಥ್ವಿಪಾಲಾ |
ಜಗತೇಕ ಸೇಲಾ ಸಂದೇಹವಿಲ್ಲಾ ನೆನೆಯುವೆ ಹಗಲೆಲ್ಲಾ || ೧೧ ||

ಬಾಗಲಕೋಟೆ ಪ್ರಬೂಲಾ ದಸ್ತಗೀರ ಕರುಣ ನಮ್ಮ ಮೇಲಾ
ಏರು|| ಇರುವುದು ಸಂತಾ ಸಂಪೂಣಾ | ಕೇಳಿವೈರಿ ಹೋದಾನೋ
ಸುಮ್ಮನೆ ತಿರುಗಿ ನೋಡದೆ ಮನಿತಾನಾ || ೧೨ ||

***